ಸಾರ್ವಕಾಲಿಕ

70. ನದೀಸ್ತೋತ್ರಗಳು

ಗಂಗಾ ಗಂಗೇತಿ ಯೋ ಬ್ರೂಯಾತ್ (ಪ್ರಾತಃ ಶ್ಲೋಕ)

ಗಂಗಾ ಗಂಗೇತಿ ಯೋ ಬ್ರೂಯಾತ್ ಯೋಜನಾನಾಂ ಶತೈರಪಿ। ಮುಚ್ಯತೇ ಸರ್ವ ಪಾಪೇ ಭ್ಯೋ ವಿಷ್ಣುಲೋಕಂ ಸಗಚ್ಛತಿ।। ಪರ್ವತೇಂದ್ರಸುತಾಂ ಪೂಜ್ಯಾಂ ಪಾವನೀ ವಿಷ್ಣುಪಾದಜಾಂ। ಮಹಾದೇವ ಜಟಾರುದ್ಧಾಂ ಭಗೀರಥ ರಥಾನುಗಾಂ।। ಜನ್ಹುಪುತ್ರೀಂ ನದೀ ಶೇಷಾ ಶುಭ್ರಾಂಮಕರವಾಹನಾಂ। ದ್ವಿಭುಜಾಂ ಪದ್ಮ ಕುಂಭಾಢ್ಯಾಂ ಗಂಗಾದೇವೀ ಭಜಾಮ್ಯಹಂ।।

ಗಂಗೇಚ ಯಮುನೇ ಚೈವ

ಗಂಗೇಚ ಯಮುನೇ ಚೈವ ಗೋದಾವರಿ ಸರಸ್ವತೀ। ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು।।

ಕೃಷ್ಣೆ ಗೋದಾವರೀ ನಂದಿನೀ ನಳಿನೀ

ಕೃಷ್ಣೆ ಗೋದಾವರೀ ನಂದಿನೀ ನಳಿನೀ ಹೇಮಾವತಿ। ಹರಿದ್ವತೀ ಕಾವೇರೀ ಕಪಿಲಾ ತ್ರಿಜಗತ್ಪಾವನೀ ವಿಷ್ಣು। ಪಾದೋದ್ಭವೆ ದೇವಿ ಕೃಷ್ಣವೇಣಿ ಅಗನಾಶಿನೀ। ಗಂಗಾ ಯಮುನಾ ತ್ರಿವೇಣೀ ದಕ್ಷಿಣ ಪಿನಾಕಿನೀ। ನರ್ಮದಾ ಸಾವಿತ್ರೀ ಗಾಯತ್ರೀ ಸರಸ್ವತೀ ಸೀತಾ। ಮಾಲತೀ ಪಂಚಗಂಗೀ ವಾರಾಹೀ ವೈಷ್ಣವೀ ಸುಜ್ಯೋತಿ। ಶಿವಗಂಗಾ ಪಂಚಗಂಗೀ ತ್ರಿಪದಗಾಮಿನೀ ಬ್ರಹ್ಮಪುತ್ರಾ। ತುಂಗಭದ್ರಾ ಭೀಮರಥೀ ಗೋಮತೀ ಶರಾವತೀ। ಸ್ವಾಮಿ ಪುಷ್ಕರಿಣೀ ವರಹ ಪುಷ್ಕರಿಣಿ। ಪಾಂಡುತೀರ್ಥ। ಪಾಪನಾಶಿನೀ ಆಕಾಶಗಂಗಾ ಧವಳಗಂಗಾ ಶಾಲ್ಮಲೀ। ನಾರಾಯಣತೀರ್ಥ ಕೌಮೋದಕೀ ಕಪಿಲತೀರ್ಥ। ಅಲಕನಂದ ವರದಾ ಪಶ್ಚಿಮವಾಹಿನೀ ಸಿಂಧು। ನದಿ ಶೋಣನದಿ ಚಂದ್ರಭಾಗ। ಅರ್ಕಾವತೀ ಸುವರ್ಣ। ಮುಖರೀ ಗೋಗರ್ಭಶಿಂಶಾ। ಕಾಗಿನೀ ಮಂದಾಕಿನೀ।। ಪ್ರಾತಃಕಾಲೇ ಪಠೇನಿತ್ಯಂ ದುಃಖದಾರಿದ್ರನಾಶನಂ। ಸ್ಮರಾಮಿ ನಿತ್ಯಂ ಭವದುಃಖ ದೂರಾ। ಶ್ರೀಕಮಲನಾಭ ವಿಠ್ಠಲೋ ವಿಜಯತೇ ಶುಭಂ।।

ನದೀ ಸ್ತೋತ್ರಂ ಪ್ರವಕ್ಷ್ಯಾಮಿ ಸರ್ವಪಾಪ

ನದೀ ಸ್ತೋತ್ರಂ ಪ್ರವಕ್ಷ್ಯಾಮಿ ಸರ್ವಪಾಪ ಪ್ರಣಾಶಿನೀ। ಭಾಗೀರಥೀ ವಾರಣಾಸಿ ಯಮುನಾ ಚ ಸರಸ್ವತೀ। ತುಂಗಭದ್ರಾ ಮಲಾಪಹಾರೀ ವರದಾಯ ಕುಮುದ್ವತೀ। ನೇತ್ರಾವತಿ। ಹೇಮಾವತೀ ಹರಿದ್ವತೀ ಫಲಗುಣೀ। ಶ್ರೋಣ ಭದ್ರಾಚ ನರ್ಮದಾ ಗಂಡಕೀ ತಥಾ ಮಣಿಕರ್ಣಿಕಾ। ಗೋಮತೀ ಪ್ರಯಾಗೇಚಃ ಪುನಃ ಪುನೀ ಕಮಂಡಲ। ಧನುಷ್ಕೋಟಿ ಸೇತುರಾಮೇಶ್ವರ ತಥಾ। ಮಂಜರೀ ತಪಸೀ ಕಾಳೀ ಕಾಳಿಂದೀ ಗಣಪತೀರ್ ಭವೇತ್। ಕೌಮೋದಕೀ ಕುರುಕ್ಷೇತ್ರೇ ಗೋವಿಂದೇ ದ್ವಾರಕೇ ಭವೇತ್। ಮಾಹೇಶ್ವರೀ ಧರ್ಮಮಾತಾ ಇಂದ್ರಾಣಿ ಅತ್ರಿಣೀ ತಥಾ ಶಿಂಭೂತ್। ವೈಷ್ಣವೇ। ವೇಣಿ ತ್ರಿಪಥಾ ಭೋಗವತೀ ತಥಾ ಕ್ಷೀರನದ್ಯಾಂದೇವ ಪಂಪಾ ಪುಷ್ಕರಣೀಯಂ ಪ್ರಕೀರ್ತಿತ। ಪ್ರಾತಃಕಾಲೇ ಪಠೇನ್ ನಿತ್ಯಂ ಸ್ನಾನ ಕಾಲೇ ವಿಶೇಷತಃ। ಕೋಟಿ ಜನ್ಮಾದ್ಯುತಂ ಪಾಪಂ ಸ್ಮರಣೇನ ನಿವಶ್ಯತಿ। ಮುಚ್ಯತೇ ಸರ್ವ ಪಾಪೇಭ್ಯೋ ವಿಷ್ಣು ಲೋಕೋನ ಗಚ್ಛತಿ। ಇತಿ ಶ್ರೀ ಸ್ಕಾಂದ ಪುರಾಣೇ ನಾರದ ಪ್ರೋಕ್ತೇ ನದೀ ಸ್ತೋತ್ರಂ ಸಂಪೂರ್ಣಂ।।

❖ ❖ ❖

ಏಳು ಗಂಗಾದೇವಿ ಏಳು ಮಂಗಳದೇವಿ — ರಾಗ: ಭೌಳಿ

ಏಳು ಗಂಗಾದೇವಿ ಏಳು ಮಂಗಳದೇವಿ। ಏಳು ಭವಾನಿ ಭಾಗೀರಥಿ ಮಣಿಕರ್ಣಿಕೇ। ಏಳು ಕಾವೇರಿ ಏಳು ಹೇಮಾವತೀ। ಏಳು ಉತ್ತರ ವಾಹಿನಿ ತಾಯೇ ಏಳಮ್ಮ ಬೆಳಗಾಯಿತು।।ಪ।। ದೇಶದೇಶದ ಜನರು ಅನೇಕ

ಹರುಷದಲೆದ್ದು। ದೇಶ ಪಾವನ ಗಂಗೆ ನದಿಯೊಳಗೆ ವಾಲಾಡಿ। ಮಾತಾ ಪಿತರು ಮನದಿ ಹರುಷದಲೆದ್ದು। ಆಂತರ್ಯದಿ ನಲಿಯುತಾ ಕಾಯೆ॥1॥ ಪಂಚಾಕ್ಷರೀಮಂತ್ರ ಜಪಮಾಡಿ। ಪಂಚಗಂಗೆಯಲಿ ಸ್ನಾನವನುಮಾಡಿ। ಪಂಚಮುಖನಾಗಿರ್ಪೋ ಕಾಶಿ ವಿಶ್ವೇಶ್ವರನಾ। ಅನಂತ ಸನ್ನಿಧಾನಕ್ಕೆ ಬಂದರೂ ಕಾಯ್ವೆ। ಏಳಮ್ಮ ಬೆಳಗಾಯಿತು॥7॥

ಕೈಲಾಸವಾಸಿ ಘನ ಪುಣ್ಯರಾಶಿ ರಾಗ: ಆನಂದಭೈರವಿ

ಕೈಲಾಸವಾಸಿ ಘನ ಪುಣ್ಯರಾಶಿ। ಶ್ರೀರಾಮ ಕಾಶೀ। ಸರ್ವೇಭವಾನೀ। ಬೆಳಗಾಯಿತೇಳಮ್ಮ ಭಾಗೀರಥಿ॥ಪ॥ ಕೋಟಿಭಾಸ್ಕರ ಕಾಶಿ। ಲೋಕ ಪಾವನೆ ಕಾಶಿ। ಅನೇಕ ಬಂಧುಗಳಿಗೆ ಅಭಿಮುಕ್ತಿ ಕಾಶಿ। ಯೋಗಿ ಜನಗಳ ಜ್ಞಾನ ಮಾರ್ಗದ ಕಾಶಿ। ಈರೇಳು ಕುಲವನುದ್ಧರಿಸಿದೆ। ಆನಂದ ಭೈರವಿಕಾಶಿ॥1॥ ಸ್ಥಳದೊಳಗೆ ಮುನ್ನೂರು ಮುಕ್ಕೋಟಿ। ತೀರ್ಥಸ್ನಾನವ ಮಾಡಿ। ಮೂರು ಪುರದೊಳಗೆ। ಮುನ್ನೂರು ಮುಕ್ಕೋಟಿ ಲಿಂಗಯಾತ್ರೆಮಾಡಿ। ದುಂಡಿರಾಯನ ಕಾಶಿ। ದಂಡಪಾಣಿ ದುರ್ಗಿ ಭೈರವಿ ಕಾಶಿ॥2॥ ಬಿಂದು ಮಾಧವನ ಅನ್ನಪೂರ್ಣೆ। ದರುಶನವ ಮಾಡಿ ಧನ್ಯನಾದೆನೋ ಕೃಷ್ಣಾ॥3॥

ಭಕ್ತಿಯಲಿ ಅಜನು ವಿಷ್ಣು (ಗಂಗಾವತರಣ)

ಭಕ್ತಿಯಲಿ ಅಜನು ವಿಷ್ಣು ಪಾದವ ತೊಳೆಯೆ। ತೃಪ್ತಿಯಲಿ ಹರಸಿದನು ವಿಷ್ಣು ಅಜನ। ಹರಿಪಾದವನು ತೊಳೆದ ಗಂಗಾಮೃತವು ಹರಿಯೆ। ದೇವಗಂಗೆಯು ಎಂದು ಕರೆದರದನ॥1॥ ದೇವಲೋಕದಿ ಹರಿವ ಈ ನದಿಯು ಪುಣ್ಯನದಿ। ಪಾಪಿಗಳು ಮಿಂದರೆ ಪಾಪ ಪರಿಹಾರ। ಸುರರು ನದಿಯಲಿ ಮಿಂದು ಇದ್ದರಾನಂದದಿ। ಅಮರವಾಯಿತು ಮುಂದೆ ಅವರ ಪರಿವಾರ॥2॥ ರಭಸದಲಿ ಹರಿದು ಬೋರ್ಗರೆಯಿತು ನದಿಯು। ರುದ್ರಭೀಕರ ದೃಶ್ಯ ಆ ನದಿಯ ಹರಿತ। ಸಪ್ತ ಸಾಗರಕಿಂತ ಅಧಿಕವಾಯಿತು ಹೊಳೆಯು। ಕಿವಿಯು ಕೊರೆಯುವ ಹಾಗೆ ಅದರ ಮೊರೆತ॥3॥ ದೇವಗಂಗೆಯ ಮಹಿಮೆ ಜಗಕೆಲ್ಲ ಹರಡಿತು। ಪಾಪಿಗಳ ನೋಡಿದರು ಆಕಾಶದೆಡೆಗೆ। ದೇವಗಂಗೆಯ ಮೇಲೆ ಭಕ್ತಿಯು ಬೆಳೆಯಿತು। ಬರಬಾರದೇ ಅವಳು ಈ ಭುವಿಯ ಕಡೆಗೆ॥4॥ ಆಕಾಶಗಂಗೆಯನು ಭುವಿಗೆ ತರಬೇಕೆಂದು। ಭಗೀರಥನು ಯೋಚಿಸಿದ ತನ್ನ ಮನದಲ್ಲಿ। ಪಾಪಿಗಳ ಬದುಕನ್ನು ಗಂಗೆ ತೊಳೆಯಲಿ ಎಂದು। ಆಶಿಸಿದ ಭಗೀರಥನು ತನ್ನ ಮನದಲ್ಲಿ॥5॥ ಹಿಮಗಿರಿಯ ಚಳಿಯಲ್ಲಿ ಪದ್ಮಾಸನವ ಹಾಕಿ। ಘೋರ ತಪವನು ಗೈದ ಗಂಗೆಗಾಗಿ। ಅನ್ನ ನೀರನು ಬಿಟ್ಟು ನಿಷ್ಠೆಯಲಿ ದಿನ ನೂಕಿ। ತನ್ನ ತಾನೇ ಮರೆತ ಜನತೆಗಾಗಿ॥6॥ ಹೀಗಿರಲು ಒಂದು ದಿನ ಗಂಗೆಯೊಲಿದಳು ಅವಗೆ। ಭೋರ್ಗರೆಯುವ ಉಗ್ರ ರೂಪದಿಂದ। ಕೈ ಮುಗಿದು ನಿಂತನು ಭಗೀರಥನು ಗಂಗೆಗೆ। 'ಬರಬೇಕು ನೀ ತಾಯೆ ಈ ಭುವಿಗೆ' ಎಂದ॥7॥ ನನ್ನ ರಭಸಕೆ ಭುವಿಯು ಉಳಿಯುವುದೇ ಭಗೀರಥ?। ಅನರ್ಥಕೆ ನಾನು ಹೊಣೆಯಾಗಬೇಕೆ? ಪಾಪಿಗಳ ಲೋಕಕ್ಕೆ ಬರಲಾರೆ ಭಗೀರಥ। ಬೇರಾವುದಾದರೂ ವರವು ಬೇಕೇ?॥8॥ ನಿನ್ನ ರಭಸವ ತಡೆಯೆ ಶಿವನನ್ನು ಬೇಡುವೆ। ಬರಬೇಕು ತಾಯೆ ನೀನು ಭುವಿಗೆ। ಪಾಪಿಗಳ ಜೀವನವ ಪಾವನವಗೊಳಿಸಲು। ಬರಬೇಕು ತಾಯೇ ನೀನು ಭುವಿಗೆ॥9॥ ಶಿವನ ಮೆಚ್ಚಿಸಿ ನೀನು ನನ್ನ ಕರೆದರೆ ಬರುವೆ। ಎಂದಳು ಗಂಗೆ ಭಗೀರಥನ ನೋಡಿ। ಮನುಜ ಯತ್ನವ ಮಾಡಿ ಶಿವನನ್ನು ನಾ ಕರೆವೆ। ನೀನು ಬರಬೇಕು ದಯವ ಮಾಡಿ॥10॥ ಶಿವ ಶಿವ ಶಿವ ಶಿವ ಎನ್ನುತಲಿ ಭಗೀರಥನು। ಶಿವ ಧ್ಯಾನದಲಿ ಇಹವ ಮರೆತು ಬಿಟ್ಟ। ಕೈಲಾಸದಲಿ ಕುಳಿತು ನೋಡುತ್ತಿದ್ದನು ಶಿವನು। ಭಕ್ತನೊಲುಮೆಯ ಕರೆಗೆ ಕರಗಿ ಬಿಟ್ಟ॥11॥ ಭಕ್ತವತ್ಸಲ ಶಿವನು ತನ್ನೆದುರು ನಿಂತಿರಲು। ಸಾಷ್ಟಾಂಗವೆರಗಿದನು ಅವಗೆ ಭಗೀರಥನು। ಪರಿಪರಿಯಲಿ ಅವನು ಶಿವಸ್ತೋತ್ರಮಾಡಲು। ಗಂಗೆಯನು ಧರಿಸಲು ಒಪ್ಪಿದನು ಶಿವನು॥12॥ ಬಾ ತಾಯಿ ಸುರಗಂಗೆ ಧರೆಯೆಡೆಗೆ ಬಾರೆ। ಶಿವ ಬಂದು ನಿಂದಿಹನು ಕರುಣೆಯನ್ನು ತೋರೆ। ಆಕಾಶದೊಡಲಿಂದ ನೀ ಧುಮುಕು ಭುವಿಗೆ। ಸ್ಥಿರವಾಗಿ ನಿಂತಿಹನು ಶಿವನಿಲ್ಲಿ ಕೆಳಗೆ॥13॥ ಬೋರ್ಗರೆಯುತ ಗಂಗೆ ಮೇಲಿಂದ ಧುಮುಕೆ। ಭಯದಿಂದ ನೋಡಿದರು ನರರು ಕೆಳಗೆ। ಶಿವನು ಧರಿಸಿದ ಅವಳ ತನ್ನ ಶಿರಕೆ। ನಾಚಿಕೊಂಡಳು ಗಂಗೆ ತನ್ನ ಬಗೆಗೆ॥14॥ ಭಗೀರಥನ ಪ್ರಾರ್ಥನೆಗೆ ಒಲಿದಳು ಗಂಗೆ। ಶಿವನು ಶಿರದಿಂದಿಳಿದು ಬಂದಳು ಗಂಗೆ। ಭೂಮಿಯಲಿ ಹರಿದಳು ಜೀವನದಿಯಾಗಿ। ಪಾಪವನು ತೊಳೆದಳು ದೇವನದಿಯಾಗಿ॥15॥

ಬಾರವ್ವ ಭಾಗೀರಥಿ ತೋರವ್ವ **ರಾಗ: ಕಾಂಬೋಧಿ-ಆದಿತಾಳ**

ಬಾರವ್ವ ಭಾಗೀರಥಿ ತೋರವ್ವ ಜನರಿಗೆ॥ಪ॥ ನಾಸ್ನಾನ ಮಾಡುವುದು ತೋರವ್ವ ಜನರಿಗೆ॥ಅ.ಪ॥ ವ್ಯಾಸ ಮುನಿರಾಯರು ಬಂದು ಭೋಜನಕೆ ಕರೆಯಲು। ತ್ವರಿತದಿಂದಲಿ ಬಂದು ಪಾತ್ರದಲಿ ಕುಳಿತೆ॥1॥ ದಾಸರಾ ನುಡಿ ಕೇಳಿ ಲೇಸಾಗಿ ತಾ ಬಂದು। ಗ್ರಾಸಗೊಂಬುವ ಜನರ ಪಾತ್ರದಲ್ಲಿ ಪರಿಯಲು॥2॥ ಈ ಮಹಿಮೆಯ ನೋಡಿ ಗುರುವ್ಯಾಸರಾಯರು। ಶ್ರೀಪತಿ ಪುರಂದರ ವಿಠಲನ ಕಂಡಂಥ॥3॥

ಇಳಿದು ಬಂದಳಮ್ಮ ಗಂಗೆ ಇಳಿದು **ರಾಗ: ಮೋಹನ**

ಇಳಿದು ಬಂದಳಮ್ಮ ಗಂಗೆ ಇಳಿದು ಬಂದಳಮ್ಮ। ಒಲಿದು ಬಂದಳಮ್ಮ ಗಂಗೆ ಭಗೀರಥಗೊಲಿದು ಬಂದಳಮ್ಮ॥ಪ॥ ಜಟಾಧರ ಶಿವನ। ಮುಡಿಯೊಳಡಗಿಹ। ಗಂಗೆ ಬಂದಳಮ್ಮ। ಚಿಮ್ಮಿ ಬಂದಳಮ್ಮ॥ ಘೋರ ಪಾಪಿಗಳ ಪಾಪವ ತೊಳೆಯಲು। ಇಳಿದು ಬಂದಳಮ್ಮ ಗಂಗೆ ಹರಿದು ಬಂದಳಮ್ಮ। ಪ್ರಕೃತಿ ದೇವಿಯ ಪ್ರಗತಿ ಹೆಚ್ಚಿಸಲು ನಲಿದು ಬಂದಳಮ್ಮ॥1॥ ಕಾಡುಮೇಡುಗಳ ಸುತ್ತಿ ಬಳಸುತ್ತಾ। ಬೆಟ್ಟಗುಡ್ಡಗಳನೇರಿ ಧುಮುಕುತಾ। ಹಾವ ಭಾವಗಳು ನುಗ್ಗಿ ಹರಿಯುತಾ। ಬಳುಕಿ ಬಂದಳಮ್ಮ ಇಳಿದು ಬಂದಳಮ್ಮ॥ ಕಾಶಿಹರಿದ್ವಾರ ಗಯಾ ಪ್ರಯಾಗದೊಳು। ನಲಿದು ಬಂದಳಮ್ಮ ಗಂಗೆ ಹರಿದು ಬಂದಳಮ್ಮ॥2॥ ಕಾಶಿ ವಿಶ್ವೇಶ್ವರನ ಚರಣದಡಿಯಲ್ಲಿ ಚಿಮ್ಮಿ ಬಂದಳಮ್ಮ॥। ಯಮುನೆ ಸರಸತಿಯ ಕೂಡಿ ಗಂಗೆ ತಾ ಭರದಿ ಹರಿವಳಮ್ಮ। ಜಗವನುದ್ಧರಿಸೆ ಜಗಜೋತಿ ತಾನಾಗಿ ಬಂದಳಮ್ಮ। ದೇವಿ ಶಾರದದಾಸಿ ವಂದಿತ ಹರನವಲ್ಲಭೆ। ಪರಶಿವಗಂಗೆ॥3॥

ಜಗದೋದ್ಧಾರಳೆ ಧರೆಗಿಳಿದು **ರಾಗ: ವಲಚಿ**

ಜಗದೋದ್ಧಾರಳೆ ಧರೆಗಿಳಿದು ಬಂದೆ ಧಾವಿಸಿ ಭಾಗೀರಥಿ॥1॥ ನಿನ್ನ ರಭಸವನು ಜಟೆಯಲಿ ತಡೆದು ಹಿಡಿದಿಹ ಗಂಗಾಧರ॥2॥ ಹಿಮಾಲಯದೊಳು ಧಬಧಬ ಎಂದು ಹರಿಯುತ ನೀ ಬಂದೆ॥3॥ ಕೋಟಿ ಕೋಟಿ ಗಿಡ ಮರಗಳಿಗೆ ನೀರನು ಉಣಿಸುತಿಹೇ ನೀ॥4॥ ಕೋಟಿ ಕೋಟಿ ಜನ ಪ್ರಾಣಿ ಜೀವಿಗಳಿಗೆ ದಾಹವ ನೀ ನೀಗಿದೆ॥5॥ ಹಲವು ಜನ್ಮದ ಪಾಪವನೆಲ್ಲಾ ಕ್ಷಣದಿ ನೀ ಕಳೆದೆ॥6॥

ಒಲಿದು ಬಂದಳು ಗಂಗೆ **ರಾಗ: ಕಲ್ಯಾಣವಸಂತ**

ಒಲಿದು ಬಂದಳು ಗಂಗೆ ಇಳಿದು ಬಂದಳು ಶರಾವತಿ। ನದಿಯಾಗಿ ಹರಿದು ಬಂದಳು॥ಪ॥ ರಾಜ ರಾಣಿ ರೋರರ್ ರಾಕೆಟ್ ಮೋಜಿನಿಂದ ಧುಮುಕುವಾಗ। ಸೋಜಿಗಾವ ನೋಡಲಿಂದು ಶಿವನು ಬಂದನು ಬೆಡಗ ಕಂಡನು॥1॥ ಯಂತ್ರಗಳ ನಡುವೆ ತೂರಿ ಬೆಟ್ಟಗಳ ನಡುವೆ ಜಾರಿ। ಕಡಲ ತಳದ ಬಳಿಗೆ ಸಾರಿ ಭರದಿ ಹರಿದಳು ಗಂಗೆ ನಡೆದಳು॥2॥ ಬಾಗುತ ಬಳುಕುತ ಧುಮುಕುತ ಸುರಿಯುತ ವಿದ್ಯುತ್ತನ್ನು ನೀಡುವಳು। ಮಲೆನಾಡ ಮಗಳು ಶರಾವತಿ ಕನ್ನಡ ನಾಡಿನ ಭಾಗೀರಥಿ॥3॥

ಗಂಗಾದೇವಿ ನಮೋ ನಮೋ **ರಾಗ: ತಿಲಂಗ್**

ಗಂಗಾದೇವಿ ನಮೋ ನಮೋ ಗಂಗಾದೇವಿ ತರಂಗಿಣಿ। ನೀ ಮುದ್ದು ಮಂಗಳಾಂಗನೆ ಮುಖ ತೋರಿಸೆ॥ಪ॥ ವಾಮನಖದಿಂದ ಒಡೆದು ಬ್ರಹ್ಮಾಂಡ ಬಹಿರಾವರಣದಿಂದಿಳಿದೆಯೆ। ಬಹಿರಾವರಣದಿ ಇಳಿದು ನಿರಂಜನ ಆಲಯದೊಳು ಬಂದೆ ಭರದಿಂದ॥1॥ ಹರಿಪಾದೋದಕವಾಗಿ ಹರಿದು ಬಂದೆಯೆ ನೀನು। ಹರನ ಜಟೆಯಲ್ವಾಸವ ಮಾಡಿ ಹರನ ಜಟೆಯಲ್ವಾಸವ ಮಾಡಿ। ನೀ ಮೇರುಗಿರಿಯಲ್ಲಿ ನಾಲ್ಕು ಸೀಳಾದೆಯೆ॥2॥ ಜಕ್ಷು ಭದ್ರಾ ಸೀತಾ ಎಂಬ ಮೂವರ ಬಿಟ್ಟು। ಭರತಖಂಡಕೆ ಬಂದೆ ಬಹುದೂರ। ಭರತ ಖಂಡಕೆ ಬಂದೆ ಬಹುದೂರ ಭಾಗಮ್ಮ। ಪ್ರತ್ಯಕ್ಷ ಅಳಕನಂದನ ತಾಯಿ॥3॥ ಸಾಗರನರಸಿ ಪ್ರಯಾಗದಿ। ಮರದ ಬಾಗಿಣವನು ಕೊಂಬೆ। ವೇಣಿಯ ದಾನ ಕೊಂಬೆ

ವೇಣಿಯದಾನ। ಮುತ್ತೈದೇರಾಗಿರೆಂದ್ಹರಸಿ ಪೂಜೆಯಗೊಂಬೆ॥4॥ ಸಗರನ ಮಕ್ಕಳ ಅಗಿವೆ ಕಡಿವೆನೆಂದು। ಭಗೀರಥನ್ಹಿಂದೆ ಬಂದೆಯೆ ನೀನು। ಭಗೀರಥನ್ಹಿಂದೆ ಬಂದೆಯೆ ಹಿಮಾಲಯ ದಾಟಿ। ಜಗವನುದ್ಧರಿಸುವ ಜಾಹ್ನವಿ॥5॥ ಯಮುನಾ ಸರಸ್ವತಿ ಕೂಡಿ ಗಮನ ಮಾಡುವ। ಗಂಗಾ ಸಮನಾಗಿ ಹರಿದೆ ಸಂಗಮಳಾಗಿ। ಸಮನಾಗಿ ಹರಿದೆ ಸಂಗಮಳಾಗಿ ತ್ರಿವೇಣಿಯುಗಳ ಪಾದಗಳಾರು ತೋರಿಸೆ॥6॥ ಭೀಷ್ಮನ ಜನನಿ ಭೀಮೇಶ ಕೃಷ್ಣನ ಪುತ್ರಿ। ನೀ ದೋಷವ ಕಳೆದು ಸಂತೋಷದಿ। ದೋಷವ ಕಳೆದು ಸಂತೋಷದಿ ಸಾಯುಜ್ಯ। ಬ್ಯಾಸರಿಸದಲೆ ಕೊಟ್ಟು ಸಲಹಮ್ಮ॥7॥

ದೇವಿ ಸುರೇಶ್ವರಿ ಭಗವತಿ ಗಂಗೇ **ರಾಗ: ಚಂದ್ರಕೌನ್ಸ-ಏಕತಾಳ**

ದೇವಿ ಸುರೇಶ್ವರಿ ಭಗವತಿ ಗಂಗೇ ತ್ರಿಭುವನತಾರಿಣಿ ತರುಲತರಂಗೇ। ಶಂಕರ ಮೌಲಿ ವಿಹಾರಿಣಿ ವಿಮಲೇ ಮಮ ಮತಿ ರಾಸ್ತಾಂತವಪದಕಮಲೇ॥1॥ ಭಾಗೀರಥಿ ಸುಖದಾಯಿನಿ ಮಾತಃ ತವ ಜಲ ಮಹಿಮಾ ನಿಗಮೇ ಖ್ಯಾತಃ। ನಾಹಂ ಜಾನೇ ತವಮಹಿಮಾನಂ ಪಾಹಿ ಕೃಪಾಮಯಿ ಮಾಮಜ್ಞಾನಂ॥2॥ ಹರಿಪದ ಪಾದ್ಯ ತರಂಗಿಣಿ ಗಂಗೇ ಹಿಮವಿಧು ಮುಕ್ತಾಧವಲ ತರಂಗೇ। ದೂರೀ ಕುರು ಮಮದುಷ್ಕೃತಿ ಭಾರಂ ಕುರು ಕೃಪಯಾ ಭವಸಾಗರ ಪಾರಂ॥3॥ ತವಜಲ ಮಮಲಂ ಯೇನ ನಿಪೀತಂ ಪರಮ ಪದಂ ಖಲುತೇನ ಗೃಹೀತಂ। ಮಾತರ್ಗಂಗೇ ತ್ವಯೀಯೋ ಭಕ್ತಃ ಕಿಲತಂ ದ್ರಷ್ಟುಂ ನಯಮಃ ಶಕ್ತಃ॥4॥ ಪತಿತೋದ್ಧಾರಿಣಿ ಜಾಹ್ನವಿಗಂಗೇ ಖಂಡಿತ ಗಿರಿವರ ಮಂಡಿತ ಭಂಗೇ। ಭೀಷ್ಮ ಜನನಿ ಹೇ ಮುನಿವರ ಕನ್ಯೇ ಪತಿತ ನಿವಾರಿಣಿ ತ್ರಿಭುವನ ಧನ್ಯೇ॥5॥ ಕಲ್ಪಲತಾಮಿವ ಫಲದಾಂ ಲೋಕೇ ಪ್ರಣಮತಿ ಯಸ್ತ್ವಾಂ ನಪತತಿ ಶೋಕೇ ಪಾರಾವಾರ ವಿಹಾರಿಣಿ ಗಂಗೇ ವಿಮುಖ ಯುವತಿಕೃತ ತರಲಾ ಪಾಂಗೇ॥6॥ ತವಚೇನ್ಮಾತಃ ಸ್ರೋತಃ ಸ್ನಾತಃ ಪುನರಪಿ ಜಠರೇ ಸೋಪಿನ ಜಾತಃ। ನರಕ ನಿವಾರಿಣಿ ಜಾಹ್ನವಿ ಗಂಗೇ ಕಲುಷ ವಿನಾಶಿನಿ ಮಹಿಮೋತ್ತುಂಗೇ॥7॥ ಪುನರಸದಂಗೇ ಪುಣ್ಯ ತರಂಗೇ ಜಯ ಜಯ ಜಾಹ್ನವಿ ಕರುಣಾಪಾಂಗೇ। ಇಂದ್ರ ಮುಕುಟಮಣಿ ರಾಜಿತ ಚರಣೇ ಸುಖದೇ ಶುಭದೇ ಭೃತ್ಯ ಶರಣ್ಯೇ॥8॥ ರೋಗಂ ಶೋಕಂ ತಾಪಂ ಪಾಪಂ ಹರಮೇ ಭಗವತಿ ಕುಮತಿ ಕಲಾಪಂ। ತ್ರಿಭುವನ ಸಾರೇ ವಸುಧಾಹಾರೇ ತ್ವಮಸಿಗತಿರ್ಮಮ ಖಲು ಸಂಸಾರೇ॥9॥ ಅಲಕಾನಂದೇ ಪರಮಾನಂದೇ ಕುರುಕರುಣಾಮಯಿಕಾತರ ವಂದ್ಯೇ। ತವ ತಟ ನಿಕಟೇ ಯಸ್ಯ ನಿವಾಸಃ ಖಲು ವೈಕುಂಠೇ ತಸ್ಯ ನಿವಾಸಃ॥10॥ ವರಮಿಹ ನೀರೇ ಕಮಠೋ ಮೀನಃ ಕಿಂವಾ ತೀರೇ ಶರಟಃ ಕ್ಷೀಣ। ಅಥವಾ ಶ್ವಪಚೋ ಮಲಿನೋ ದೀನಃ ತವನಹಿದೂರೇ ನೃಪತಿಕುಲೀನಃ॥11॥ ಭೋ ಭುವನೇಶ್ವರಿ ಪುಣ್ಯೇ ಧನ್ಯೇ ದೇವಿ ದ್ರವಮಯಿ ಮುನಿವರ ಕನ್ಯೇ। ಗಂಗಾಸ್ತವಮಿವಮಮಲಂ ನಿತ್ಯಂ ಪಠತಿ ನರೋಯಃ ಸಜಯತಿ ಸತ್ಯಮ್॥12॥ ಯೇಷಾಂ ಹೃದಯೇ ಗಂಗಾ ಭಕ್ತಿಃ ತೇಷಾಂ ಭವತಿ ಸದಾ ಸುಖ ಮುಕ್ತಿಃ। ಮಧುರಾ ಕಾಂತಾ ಪಜ್ಝಟಿಕಾಭಿಃ ಪರಮಾನಂದ ಕಲಿತಲಲಿ ತಾಭಿಃ॥13॥ ಗಂಗಾಸ್ತೋತ್ರಮಿದಂ ಭವಸಾರಂ ವಾಂಛಿತ ಫಲದಂ ವಿಮಲಂ ಸಾರಂ। ಶಂಕರ ಸೇವಕ ಶಂಕರ ರಚಿತಂ ಪಠತಿ ಸುಖೀಸ್ತವ ಇತಿ ಚಮಾಪ್ತ॥14॥ ಜಯಜಯ ಗಂಗೇ ಜಯ ಹರ ಗಂಗೇ॥4ಸಾರಿ॥

ಭಾಗೀರಥಿ ದೇವಿ ಭಯನಿವಾರಣ ಗಂಗೆ **ರಾಗ: ಕಲ್ಯಾಣಿ**

ಭಾಗೀರಥಿ ದೇವಿ ಭಯನಿವಾರಣ ಗಂಗೆ। ಸಾಗರನ ನಿಜರಾಣಿ ಸಕಲಕಲ್ಯಾಣಿ॥ಪ॥ ಒಮ್ಮೆ ಶ್ರೀಹರಿ ಪಾದಕಮಲ ಸಿಂಧು। ಸರಯು ನೇತ್ರಾವತಿ ಕುಮುದ್ವತಿ। ಭಾಗೀರಥೀ ಭೋಗವತಿ ಜಾಹ್ನವಿ॥ಅ.ಪ.॥ ಜಯಮಂಗಲಿಂದುದ್ಭವಿಸಿ ಬ್ರಹ್ಮಕರಪಾತ್ರಿಯಲಿ ನಿಂದು। ಬಂದೆ ಶ್ರೀಮನ್ನಾರಾಯಣನ ಪಾದ ತೀರ್ಥವಾಗಿ। ಬ್ರಹ್ಮಾಂಡವನು ಪಾವನ ಮಾಡಬಂದೆ॥1॥ ದೇವಿ ನೀ ವಿಷ್ಣು ಪಾದೋದಕವೆಂದೆನಿಸಿ। ದೇವತೆಗಳಿಗೆಲ್ಲ ಅಧಿಕವಾದೆ। ದೇವರೆಲ್ಲರು ನೆರೆದು ತಲೆವಾಗಿದರು। ಮಹ ದೇವನ ಶಿರದಿಂದ ಧರೆಗಿಳಿದು ಬಂದೆ॥2॥ ಜಹ್ನುವಿನ ಉದರದಲಿ ಪೊಕ್ಕ ಕಾರಣದಿಂದ। ಜಾಹ್ನವೀಯೆಂದು ನೀ ಎನಿಸಿಕೊಂಡು। ಮುನ್ನೆ ನರಕಕ್ಕಿಳಿದ ಸಗರರಾಯನ ವಂಶವನ್ನು ಪಾವನವನು ನೀ ಮಾಡಬಂದೆ॥3॥ ದಿಟ್ಟಿಸಲು ಮುನ್ನೂರು ಜನ್ಮದ ಪಾತಕವು। ನಿಟ್ಟಿಸಲು ಮೂರು ಜನ್ಮದ ಮುಕುತಿಯು। ಮುಟ್ಟಿ

ಮಾಡಿದರೊಂದು ಸ್ನಾನ ಮಾತ್ರದಲಿ। ಸುಟ್ಟು ಹೋಹುದು ಸಾಹಸ್ರ ಜನ್ಮದ ಪಾಪ।।4।। ಹಲವು ಪರಿಯಲ್ಲಿ ಹರಿಸ್ಮರಣೆಯಿಲ್ಲದೆ। ಭವದೊಳಗೆ ಶಿಲ್ಕಿ ಕಡುನೊಂದೆ ನಾನು। ಹಲವು ಮಾತ್ಯಾಕೆ ಶ್ರೀಪುರಂದರವಿಠಲನ। ಚಲುವ ಪದ ನಖದಿಂದಿಳಿದೆ ವೊಲಿದು ದಯಮಾಡೆ।।5।।

ಭಾಗ್ಯವಕೊಡೆಗಾರುತಿ ಭಾಗೀರಥಿ **ರಾಗ: ಕಾಮಾಚ್-ಆದಿತಾಳ**

ಭಾಗ್ಯವಕೊಡೆಗಾರುತಿ ಭಾಗೀರಥಿ ಭಾಗ್ಯವಕೊಡೆಗಾರುತಿ।।ಪ।। ಹರಿಪಾದ ನಖದಿಂದ ಹರಿದು ಬಂದಳೀ ಗಂಗಾ। ಪರಭಕ್ತರ ಸಂಗಾ ವರವನೆ ಕೊಡೆ ತುಂಗಾ।।1।। ಕಾಶಿಪಟ್ಟಣದಲ್ಲಿ ವಾಸವಾಗಿರುತಿ। ಈಶಾದ್ಯರಿಗೆ ಮಹಾ ವರವನ್ನೆ ಕೊಡುತಿ।।2।। ಕಮಲೇಶ ವಿಠಲನ ಮಮತೆಯ ಮಗಳೆ। ಉತ್ತಮ ಗುರುತೆಂದು ಭ್ರಮಿಸಿ ಬಂದೆನು ತಾಯೆ।।3।।

ಜನನೀ ಜಾಹ್ನವೀ ಜಗತ್ರಯ ಪಾವನೀ

ಜನನೀ ಜಾಹ್ನವೀ ಜಗತ್ರಯ ಪಾವನೀ।।ಪ।। ಪ್ರಣತ ಕೌಮುದ ಪದ್ಮ ಜಾಂಡ ಸಂಭೂತೇ।।ಅ.ಪ.।। ವಿಷ್ಣುಪದ ಸಂಜಾತೆ ವಿಶ್ವಮಂಗಳೆ। ಮಹೋತ್ಕೃಷ್ಟತೀರ್ಥಗಳೊಳು ಉತ್ತಮಳೆನಿಸುವೆ।ಕಷ್ಟವರ್ಜಿಪೆ ತ್ರಿಪಥಗಾಮಿನಿದಯಾ। ದೃಷ್ಟಿಯಿಂದಲಿ ನೋಡು ಪ್ರತಿದಿನದಿ ಎನ್ನ।।1।। ಕರ್ಕರಾಶಿಗೆ ಕರ್ಮಸಾಕ್ಷಿ ಎಂದೆನಿಸುತಿಹ। ಅರ್ಕದೇವನು ಬಂದ ಸಮಯದಲ್ಲಿ। ಶರ್ಕರಾಹ್ವರು ಸ್ನಾನಗೈಯ್ಯೆ ದುರಿತಗಳು ಸಂ।ಪರ್ಕವಾಗದ ತೆರದಿ ಸಂತೈಪೆ ದಯದಿ।।2।। ಕಾರುಣಿಕೆ ಬಹಿರಾವರಣದಿಂದ ನೀಪೊರಟು। ವಾರಾಹಿ ಒಡಗೂಡಿ ಭಕ್ತ ಜನರ। ಪ್ರಾರಬ್ಧ ಕರ್ಮಗಳನುಣಿಸಿ ಮುಕ್ತರ ಮಾಳ್ಪೆ। ದೂರಗೈಸುವಿ ಸಂಚಿತಾಗಾಮಿಗಳನು।।3।। ನಂದಿನೀ ನಳಿನೀ ಸುಸೀತಾ ಮಾಲತಿ। ದೂಲಾಪಹರಳೆಂದ ಮಾತ್ರದಿ ಪುನೀತರನು ಮಾಳ್ಪೆ। ಸಂದರುಶನ ಸ್ಪರ್ಶನ ಸ್ನಾನಗಳ ಫಲ। ಪುರಂಧರಾರ್ಯರೆಬಲ್ಲರು। ಅಲ್ಪರು ಅರಿಯರವ್ವಾ।।4।। ಮಾತೆ ವಿಜ್ಞಾಪಿಸುವೆ ಬಿನ್ನಪವ ಕೇಳು ಸಂ। ಪ್ರೀತಿಯಿಂದಲಿ ಕರುಣಿಸು ಎನಗೆ ಇದನೆ। ಶ್ರೋತವ್ಯ ವಕ್ತವ್ಯ ಮಂತವ್ಯಸ್ತವ್ಯ। ಜಗನ್ನಾಥವಿಠಲ ನೊಬ್ಬನೆಂದ। ತಿಳಿವಂತೆ ಕರುಣಿಸಮ್ಮಾ।।5।।

ಗಂಗೇ ಮಾಂ ಪಾಹಿ (ಕೀರ್ತನೆ) **ರಾಗ: ಜುಂಜೂಟಿ-ಏಕತಾಳ**

ಗಂಗೇ ಮಾಂ ಪಾಹಿ ಗಿರೀಶ ಶಿರಸ್ಥಿತೇ। ಗಂಭೀರ ಗಾಯೇ ಗೀತವಾದ್ಯಪ್ರಿಯೇ।।ಪ।। ಅಂಗಜತಾತ ಮುದೇ ಅಸಿವರುಣಾಮಧ್ಯೇ ಅಕ್ರೂರ ಪೂಜಿತೇ ಅಖಿಲ ಜನಾನಂದೇ। ಸಕಲ ತೀರ್ಥ ಮೂಲೇ ಸದ್ಗುರುಗುಹ ಲೀಲೇ। ವರಜುಹ್ನು ಬಾಲೇ ವ್ಯಾಸಾದಿ ಕೃಪಾಲೇ।।ಚ।।

ಗಂಗಾತೀರದ ಮನೆ ನಮ್ಮದು **ರಾಗ: ಕಾಂಬೋದಿ**

ಗಂಗಾತೀರದ ಮನೆ ನಮ್ಮದು ಕಾಶಿ ಬಿಂಧುಮಾಧವನಲ್ಲಿ ಇರುವುದು ಮನೆ ಪಂಚ-।।ಪ।। ಆವಾವ ಕಾಲದ ಆನಂದ ಅರಮನೆ ತಾವರೆ ತಳಿತದ ನದಿಯ ಮನೆ। ಆವಾಗ ಕಮಲಜ ಅವತರಿಸಿದ ಮನೆ। ಆ ವೇದಂಗಳಿಗೆಲ್ಲ ತವರುಮನೆ ಪಂಚ-।।1।। ಚಿತ್ರವಳಿದಲ್ಲಿಯ ಮನೆ ಚಿನ್ಮಯರೂಪದ ಮನೆ। ನಿತ್ಯಲೋಕಗಳ ರಕ್ಷಿಸುವ ಮನೆ। ಭಕ್ತ ಜನರನ್ನೆಲ್ಲಾ ಉದ್ಧರಿಸಿದ ಮನೆ। ಮುಕ್ತಿ ಸಾಯುಜ್ಯಕ್ಕೆ ಕಡೆಯಿಲ್ಲದಾ ಮನೆ ಪಂಚ-।।2।। ಹಂಗಿಲ್ಲದ ಮನೆ ಹಾದಿಯ ಬಿಡದೆ। ಹಾಲು ಗಂಗೆಯವಧು ರಕ್ಷಿಸುವ ಮನೆ। ಮೂರಂಗನೆಯರುಳ್ಳ ಮುಕ್ತಿ ಸಾಧನಕಿನ್ನು। ಇಂಥ ಕಂಗಳ ಪುಣ್ಯಕಿನ್ನು ಕಡೆಯಿಲ್ಲದ ಮನೆ ಪಂಚ-।।3।। ಧ್ವಜವಜ್ರಾಂಕಿತರೇಖಾ ಶಂಖಚಕ್ರದ ಮನೆ। ನಿಜಸುವರ್ಣರೇಖೆಯ ತೋರುವ ಮನೆ। ಗಜರಾಜಗೊಲಿದಂಥ ಗರುಡವಾಹನನಾದ। ಇಂಥ ಮೂಜಗ ತ್ರೈಲೋಕ್ಯ ಮಾಡಿದ ಮನೆ ಪಂಚ-।।4।। ಪರಮಪವಿತ್ರ ಚರಿತ್ರತೀರ್ಥರ ಮನೆ। ಪರಬ್ರಹ್ಮ ರಥಕೆ ಸಾಧನದ ಮನೆ। ಪರಮಾತ್ಮನಾಗಿ ಇಷ್ಟಾರ್ಥವನೀವ। ಶ್ರೀ ವರದನಾದ ಪುರಂದರವಿಠಲನ ಮನೆ ಪಂಚ।।5।।

ಗಂಗೆ ಮಂಗಲ ತರಂಗೇ

ಗಂಗೆ ಮಂಗಲ ತರಂಗೇ ಪಾಹಿ। ಪಾಪಭಂಗೆ ಹರಿಪಾದಸಂಗೆ॥ಪ॥ ಗಂಗೆ ಹರಿಪಾದದಿಂದ ಉದ್ಭವಿಸಿದೆ। ಪರಮೇಷ್ಠಿಯ ಪಾತ್ರೆಯೊಳಗೆ ನಿಂತೆ। ಹರಿಶಿರದೊಳು ನಿತ್ಯ ನೆಲಸಿದೆ। ಮತ್ತೆ ಸ್ಮರಿಪರ ಚಿತ್ತದೊಳ್ ವಾಸಿಸಿದೆ॥1॥ ಸಗರಪುತ್ರರ ಪವಿತ್ರಿಸಿದೆ। ಗಗನದೊಳ್ ಹರಿಯುವ ನದಿಯಾದೆ। ನಗವರ ಕೈಲಾಸಕ್ಕಿಳಿದೆ। ಜಗವರಿಯೆ ಜಹ್ನುತನಯೆಯಾದೆ॥ಶ್ರ॥ ರಾಜೇಶ ಹಯಮುಖ ತನಯೆ। ರಾಜಧರ್ಮವನು ನಿನ್ನ ತುಟದಲ್ಲಿ। ಮೂಡಗವು ತಾ ಪೊಗಳುವಂದದಿ। ವಾಜಿಮೇಧನ ಗೈದನಾದರದಿ॥3॥

ಗಂಗೇ ನಾನಭಿವಂದಿಪೇ — **ರಾಗ: ಜುಂಜೋಟಿ**

ಗಂಗೇ ನಾನಭಿವಂದಿಪೇ। ಮಂಗಳೇ ದೇವೀ॥ಪ॥ ಶ್ವೇತ ರೂಪೇಶುಭತರಂಗೇ। ಭೂತನಾಥಾ। ಮೌಳಿ ಸಂಗೇ॥ ಕ್ಪೌತೆಚರಿತೇ॥ ಹಿಮ ತುಂಗೇ। ಜಾತೆ ಕಲುಷೇ। ದುರಿತ ಭಂಗೇ॥1॥ ಸಗರಭೂಪತನುಭವರ್ಗೇ। ಸುದತಿಧೀ ನಾಯೋಗಿವರ್ಗೇ। ಮುಗಿದು ಕರವೇ। ಬೇಡುವರ್ಗೇ॥ ಭಗವತಿ ಮೀ ತಾಪವರ್ಗೇ॥2॥ ಪಾವನಾತ್ಮ ನಾ ವಿದೇಹಾ। ದೇವಲೋಕಾ। ಮಾನುನಿಯೇ। ಸೇವಕೀಷ್ಟಾ ಫಲವೆ ತಾ ಕಾವುದೌಪಾಯೋಗಿಜಾಯೇ॥3॥

ಹಿಮಗಿರಿಯ ಮೇಲೆ ಚೆಲವೆ — **ರಾಗ: ರೇವತಿ**

ಹಿಮಗಿರಿಯ ಮೇಲೆ ಚೆಲುವೆ ಗಂಗೆ। ಆನಂದದಿ ತಾನು ಹರಿಯುತಿರುವಳು। ಹಿಮಗಿರಿಯ ಸುತ್ತ ಎಲ್ಲೆಲ್ಲಿ ನೋಡಿದರು। ಹಾಲು ಹರಿದಂತೆ ಹರಿಯುವಳು ಗಂಗೆ। ಏನು ಹೇಳಲಿ ನಾನು ಅದರ ಸೊಬಗನ್ನು ॥1॥ ಬೆಳ್ಳಿಯ ಮೋಡದಂತೆ ಬಳುಕುತ ಬರುವಳು। ಅಲ್ಲಲ್ಲಿ ಮಲ್ಲಿಗೆ ಚೆಲ್ಲಿದಂತೆ ಕಾಣುವಳು। ಬಿಳಿಯ ಸೀರೆಯನುಟ್ಟು ನೆರಿಗೆ ಚಿಮ್ಮಿದಂತೆ। ಬೆಳದಿಂಗಳಲಿ ತಾನು ನಡೆವಂತೆ ಕಾಣುವಳು॥2॥ ಹೆಜ್ಜೆ ಹೆಜ್ಜೆಗೆ ಗಂಗೆ ಹರಿಯುತಿರುವಾಗ। ಬೆಟ್ಟ ಹತ್ತುವ ಮನುಜರ ದಾಹವನೆ ತಣಿಸುವಳು। ಕಲ್ಲು ಮುಳ್ಳೆನ್ನದೆ ಗಂಗೆ ತಾ ಹರಿಯುತ। ಮೌನದಲಿ ಕೂಗಿದಳು ನೀನು ಬಾ ಎಂದು॥3॥ ನೋಡು ನೋಡುತಿರಲು ಗಂಗೆ ಹರಿವಲ್ಲಿ। ಜುಳುಜುಳು ಮಧುರನಾದ ಕೇಳುತಿರಲು। ಎಲ್ಲೆಲ್ಲೂ ನೋಡಿದರು ಝರಿಗಳಾಗಿ ಗಂಗೆ। ಬೆಟ್ಟದಲಿ ತಾನಾಗಿ ಧುಮುಕುತಿರುವಳು ॥4॥

ಗಂಗೇ ಜನನಿ ಮಂಗಳ — **ರಾಗ: ಸಿಂಧೂಭೈರವಿ-ಆದಿತಾಳ**

ಗಂಗೇ ಜನನಿ ಮಂಗಳ ರೂಪಿಣೀ। ತುಂಗ ಮಹಿಮನ ಪಾದಾಂಗುಳಿ ಜಾತೆ॥ಪ॥ ಸಂಗತಿಯರುಹಲು ಬಂದಿರುವೆವು ಕೃಪಾಪಾಂಗವ ತೋರೆಲೆ ಇಂಗಿತವರಿತು॥ಅ.ಪ॥ ನಾಲ್ಕು ಮೊಗನು ಹರಿಕಾಲಿಗೆ ಕೆಡುಹಲು। ಶೂಲಧರನ ಶಿರ ಆಲಯ ಮಾಡಿದೆ। ಶೈಲದಂತಿಹ ಪಾಪ ಜಾಲಿಸಿ ಕಳೆಯುವೆ। ಪೇಳಲಳವೆ ನಿನ್ನ ಶೀಲವ ಸುಲಭದಿ॥1॥ ಚಾರುನದಿಗಳು ಹೇರಳವಿದ್ದರು। ಭಾರತ ದೇಶದ ಭಾಗ್ಯ ದೇವತೆ ನೀ॥ ದೂರದೂರ ದೇಶಗಳಲ್ಲಿ ನೆಲೆಸಿಹ। ಧೀರರು ನಿನ್ನನು ಕೋರುತಲಿಹರು॥2॥ ಅಂಗಳದಲಿ ಬಿದ್ದು ಹರಿವ ಜಲವು ನಿನ್ನ। ಸಂಗದಿ ಪರಮ ಮಂಗಲ್ಯವ ಪಡೆವುದು। ಶೃಂಗಾರದ ನಿಧಿ ರಂಗನ ಸೇವೆಗೆ। ಗಂಗೇ ಎನ್ನಂತರಂಗವ ಶೋಧಿಸೆ॥3॥ ಭೂಮಿಯ ಭೇದಿಸಿ ಸುಂದರ ರೂಪದಿ। ಸ್ವಾಮಿ ಶ್ರೀ ಮದ್ವರ ಚರಣಕೆ ನಮಿಸಿ। ಆ ಮಹಾತ್ಮರ ದರುಶನದಿ ಪ್ರಸನ್ನಳೇ। ಕಾಮಿತ ಕರುಣಿಸೆ ತ್ರಿಕರಣ ಶುದ್ಧಿಯ॥4॥

ಗಂಗಾ ಭವಾನೀ ಮಂದಾಕಿನೀ — **ರಾಗ: ಶ್ರೀರಂಜನಿ-ಆದಿತಾಳ**

ಗಂಗಾ ಭವಾನೀ ಮಂದಾಕಿನೀ ಪರಮ ಪಾವನಿ ಪಾಪನಾಶಿನಿ॥ಪ॥ ಆದಿದೇವನಾ ಪ್ರೇಮ ಪುತ್ಥಳಿಯೇ। ಮೇದಿನಿಗೆ ಬಂದು। ಮೋದವಿತ್ತದೇವಿ॥1॥ ಶಿವಶಂಕರ ನಾ। ಶಿರದೊಳು ನೆಲೆಸಿ। ಭವಭಯಗಳ ಪರಿಹರಿಸುನೀ ದೇವಿ ನೆಲಸಿ ಪಾವನೆ॥2॥ ಜಗದೋದ್ಧಾರೆ ಜನ್ಯಪಾವನ ಮಾತೆ॥ ಮತ್ಸ್ಯವಾಹನೆ ಭಕ್ತಮಂದಾರೇ॥3॥

ಚಲೋ ಮನ ಗಂಗಾ ಯುಮುನಾತೀರ (ಹಿಂದಿ) — **ರಾಗ: ಕುರಂಜಿ-ಆದಿತಾಳ**

ಚಲೋ ಮನ ಗಂಗಾ ಯಮುನಾತೀರ। ಗಂಗಾ ಯಮುನಾ ನಿರ್ಮಲ ಪಾನೀ ಸೀತಲ ಹೋತ ಶರೀರ॥1॥ ಬನಸೀ ಬಜಾವತ ಗಾವತ ಕಾನ್ಹಾ ಸಂಗ ಲಿಯಾ ಬಲ ಭೀರ॥2॥ ಮೋರ ಮುಕುಟ ಪೀತಾಂಬರ ಸೋಹೈ ಕುಂಡಲ ಝಲಕತ ಹೀರ॥3॥ ಮೀರಾ ಕೇ ಪ್ರಭು ಗಿರಿಧರ ನಾಗರ ಚರಣಕಮಲ ಪರ್ ಸಿರ॥4॥

ಗಂಗೇ ನಿನಗೋಸ್ಕರ ನಾನು

ಗಂಗೇ ನಿನಗೋಸ್ಕರ ನಾನು ನಮೋ ಎಂಬೆ। ತುಂಗೆ ಎನ್ನ ಪಂಥವ ಕೇಳಿ ಗೆಲಿಸೆಂಬೆ॥ಪ॥ ಅಚ್ಯುತನ ನಖತಾಕಿ ಬಿಚ್ಚಿ ಬ್ರಹ್ಮಾಂಡವು। ಸ್ವಚ್ಛ ಜಲವಾಗ ಸುರಿದಾವು। ಸ್ವಚ್ಛ ಜಲವಾಗಸುರಿದಾವು। ಅಜನೋಡಿ ಉತ್ಸಾಹದಿ ನುತಿಸಿದ॥1॥ ತಂದೆಯ ನಖದಿಂದ ಬಂದ ಜಲಕಂಡು ಮಂದಜಾಸನು ಸ್ತುತಿಸಿದ। ಮಂದಜಾಸನು ಸ್ತುತಿಸಿದ ಸರಸ್ವತಿ। ಬಂದು ಆರುತಿಯ ಬೆಳಗೋಳು॥2॥ ಕಂಡ ಜಲವ ಕಮಂಡಲದಿ ತುಂಬಿ। ಭೂಮಂಡಲ ಪತಿಯ ಚರಣವ ತೊಳೆಯಲು। ಕೊಂಡಾಡಿ ಹರನು ಧರಿಸಿದ॥3॥ ಸುರನಾರಿಯರೆಲ್ಲಾ ಪರಿಪರಿಸ್ತುತಿಸಲು। ಹರಿಪಾದದರೇಣು ಹರಿದಿಲ್ಲಿ। ಹರಿಪಾದದ ರೇಣು ಹರಿದಿಲ್ಲಿ ಬಂತೆಂದು। ಸುರರು ಸಂತೋಷಪಡುತಲಿ॥4॥ ವಿಷ್ಣುಪದಿಯೆಂದು ಇಟ್ಟರು ನಾಮವ। ದಿಟ್ಟ ರಾಮೇಶನ ಮಗಳಿಗೆ ದಿಟ್ಟ ರಾಮೇಶರ ಮಗಳಿಗೆ ಧೃವರಾಯ। ಎಷ್ಟು ಭಕ್ತಿಂದ ಸ್ತುತಿಸಿದ॥5॥

ಗಂಗೆಗೆ ಸ್ವರ್ಗತರಂಗಿಗೆ **ರಾಗ: ಖರಹರಪ್ರಿಯ**

ಗಂಗೆಗೆ ಸ್ವರ್ಗತರಂಗಿಗೆ ರನ್ನದ ಕೋಲ ಕೋಲೆನ್ನಿರಿ। ವಿಮಲ ತರಂಗಿಣಿ ಹರಿಪಾದಸಂಗಿಗೆ ಕೋಲ ಕೋಲೆನ್ನಿರಿ॥ಪ॥ ಗೋದಾ ನಿನ್ನಯ ಪಾದಾ ಆದರದಿ ಬಲಗೊಂಬೆ ಸಾಧು ಸಜ್ಜನರ ಸಲಹುವಿ। ಸಾಧು ಸಜ್ಜನರ ಸಲಹುವಿ ನಿಮಗಿನ್ನು ಮೋದದಿ ಮುಯ್ಯುವ ಗೆಲಿಸೆಂಬೆ॥1॥ ಕೃಷ್ಣ ನಿನ್ನಯ ಪಾದ ಮುಟ್ಟಿ ಭಜಿಸುವೆನು ಇಷ್ಟವ। ಕೊಟ್ಟ ಕಾಲಕಾಲಕ್ಕೆ ಇಷ್ಟವ ಕೊಟ್ಟು ಕಾಲಕಾಲಕ್ಕೆ ಸಲಹುವಿ ಶ್ರೀ ಕೃಷ್ಣನ ಮಗಳ ಬಲಗೊಂಬೆ॥2॥ ಕವೇರ ರಾಜನ ಪುತ್ರಿ ಕಾವೇರಿಯ ಬಲಗೊಂಬೆ ಶ್ರೀಶನ ಮಗಳ ಬಲಗೊಂಬೆ। ಶ್ರೀಶ ರಾಮೇಶನ ಮಗಳು ತುಂಗಭದ್ರೆಯ ಚಾರು ಚರಣವ ಬಲಗೊಂಬೆ॥3॥

ಮಂಗಳ ಬೆಳಗುವೆ ಭಾಗೀರಥಿಯೆ **ರಾಗ: ಬಾಗೇಶ್ರೀ**

ಮಂಗಳ ಬೆಳಗುವೆ ಭಾಗೀರಥಿಯೆ। ಅಹಜ ಹರನ ಪ್ರೇಮದ ರಾಣಿಯೇ॥ಪ॥ ಜಟೆ ಮಂಡಿತಳೆಕಟಿ ದಾಕ್ಷಿಯಳೇ। ನಿಟಿನಯನಾಯಕ। ಪ್ರೀತಿಸುವಳೇ॥1॥ ಪರಮಪವಿತ್ರಳೆ। ಸುರಮುನಿ ವಂದ್ಯಳೇ॥ ನರರ ಪಾಪವ ಪರಿಹರಿಸುವಳೆ॥2॥ ಕರಪಿಡಿದು ಕರುಣೆಸು ಮಾತೆ। ಜನತೆಯ ಪ್ರೀತೆ। ಕರಗಳ ಮುಗಿವೆನು ಜಲದೇವತೆಯೇ॥3॥

ಓಂ ಜಯ ಗಂಗೇ ಮಾತಾ (ಆರತಿ-ಹಿಂದಿ) **ರಾಗ: ಕುರಂಜಿ**

ಓಂ ಜಯ ಗಂಗೇ ಮಾತಾ। ಮೈಯಾ ಜಯಗಂಗೇ ಮಾತಾ। ಜೋ ನರ ತುಮಕೋ ಧ್ಯಾತಾ। ಮನವಾಂಛಿತ ಫಲ ಪಾತಾ॥1॥ ಚಂದ್ರ ಸೀ ಜ್ಯೋತಿ ತುಮ್ಹಾರೀ। ಜಲ ನಿರ್ಮಲ ಆತಾ। ಶರಣ ಪಡೇ ಜೋ ತೇರೀ। ಸೋ ನರ ತರ ಜಾತಾ॥2॥ ಪುತ್ರ ಸಗರ ಕೇ ತಾರೇ ಸಬ ಜಗ ಕೋ ಜ್ಞಾತಾ। ಕೃಪಾ ದೃಷ್ಟಿ ಹೋ ತುಮ್ಹಾರೀ। ತ್ರಿಭುವನ ಸುಖದಾತಾ॥3॥ ಏಕ ಬಾರ ಜೋ ಪ್ರಾಣೀ। ಶರಣ ತೆರೀ ಆತಾ। ಯಮ ಕೀ ತ್ರಾಸ ಮಿಟಾಕರ। ಪರಮಗತಿ ಪಾತಾ॥4॥ ಆರತಿ ಮಾ ತುಮ್ಹಾರೀ। ಜೋ ನರ ನಿತಗಾತಾ। ಸೇವಕ ವಹೀ ಸಹಜ ಮೇಂ। ಮುಕ್ತಿ ಕೋ ಪಾತಾ॥5॥

ಜಯಮಂಗಳಂ ನಿತ್ಯ ಶುಭಮಂಗಳಂ ಹರಿಪಾದ (ಮಂಗಳ) **ರಾಗ: ಮಧ್ಯಮಾವತಿ**

ಜಯಮಂಗಳಂ ನಿತ್ಯ ಶುಭಮಂಗಳಂ॥ಪ॥ ಹರಿಪಾದ ಕಮಲದಿಂ ಹರಿದು ಬಂದವಳಿಗೆ। ಹರನ ಜಟೆಯಿಂದಲಿ ಧರೆಗಿಳಿದವಳಿಗೆ। ಹರಿದು ಬರುವ ಭಕುತರಘರಾಶಿಗಳೆಲ್ಲ। ಹರೆದೊಗೆಯುತಿರುವಂಥ ವರುಣಾನರ್ಧಾಂಗಿಗೆ॥1॥ ಗಂಗೆ ಗೋದಾವರಿ ತುಂಗಭದ್ರೆ ಕಾವೇರಿ। ಮಂಗಳಾನಾಮದಿಂ ಕಂಗೊಳಿಸುತಾ। ಹಿಂಗದೆ ಭಜಿಸಿ ಸೇವಿಸುವ ಭಕುತರಿಗೆ।

ಆಲಿಂಗನ ಸುಖನೀಡಿ ಹಸಿವು ತೃಷೆಕಳೆವಳಿಗೆ।।2।। ಸಿರಿಮುದ್ದು ವಿಠಲನ ವರಕಾರುಣ್ಯದಲಿ। ಸರ್ವಚೇತನರಿಗಾನಂದ ನೀಡುವಳಿಗೆ। ಮರೆಯದೆ ನಿತ್ಯ ಸಂಸ್ಮರಣೆ ಮಾಡುವರಿಗೆ। ಸಿರಿಸಂಪದವನಿತ್ತು ಪೊರೆಯುವಳಿಗೆ ।।3।।

ಸಗರನಾ ಸುತರರುವತ್ತು ಸಾವಿರ ಮಂದಿ — ರಾಗ: ನೀಲಾಂಬರಿ

ಸಗರನಾ ಸುತರರುವತ್ತು ಸಾವಿರ ಮಂದಿ। ಜಗವರಿತು ಕಪಿಲ ಮಹ ಋಷಿಯ ಶಾಪದಿಂ। ಉರಿದು ಭಸ್ಮವಾಗಿ ನರಕದೊಳಗೋಲ್ಯಾಡೇ। ಭಗೀರಥನಿಗೊಲಿದ ಗಂಗಾದೇವಿಗೇ। ಜಯ।।1।। ಬರುವ ಮಾರ್ಗದ ಒಳಗೆ ಪಂಚಮುಖನು ಕಂಡು। ಶಿರವನೊಡ್ಡಿ ಅಡಗಿಸಲು ಬೇಗ। ಧೃಢ ತಪವ ಮಾಡಲಾ ಭಗೀರಥನು। ಈಶ್ವರನ ಜಡೆಯಿಂದ ಬಂದ ಗಂಗಾದೇವಿಗೆ-ಜಯ।।2।। ಜಹ್ನು ಋಷಿಗಳು ಮಹಿಮೆ ಬಾಹ ಶಬ್ದವ ಕೇಳಿ। ಕರ್ಣವನು ಒಡ್ಡಿ ಅಡಗಿಸಲು ಬೇಗ। ಉನ್ನಂಥ ಕ್ರೂರ ಲಿಪಿಲಿ ತೊಡೆಯ ಸೀಳಿ ಬಿಡೆ। ಜಾಹ್ನವೀ ಎನಿಸಿದ ಗಂಗಾ ದೇವಿಗೇ ಜಯ।।3।। ಗಿರಿಗುಡ್ಡ ಗಹ್ವರವ ಕೊರೆದು ಝೇಂಕರಿಸುತ। ಹರಿದ್ವಾರ ಗಂಗೋತ್ರಿಗಳನು ಸುತ್ತಿ। ಹರುಷದಲಿ ಸಹಸ್ರ ಭಾಗದೊಳಗೊಂದು ಮುಖವಾಗಿ ತೆರಳಿ ನಡೆತಂದ ಗಂಗಾದೇವಿಗೇ ಜಯ।।4।। ಮಂಗಳಂ ಗಂಗೆ ಸರಸ್ವತಿ ಯಮುನೆಗೆ। ತುಂಗಭದ್ರೆ ಕಪಿಲೆ ಕಾವೇರಿಗೆ। ಅಂಗನೇ ತ್ರಿವೇಣಿ ಗೋದಾವರಿ ಕಾಶೀಲೀ। ಸಂಗಮಾವಾಗಿರುವೊ ಗಂಗಾದೇವಿಗೇ ಜಯ।।5।।

❖ ❖ ❖

ಗೋದೆ ಸಮಸ್ತ ಫಲದೆ

ಗೋದೆ ಸಮಸ್ತ ಫಲದೆ ಸ್ನಾನ ಒದಗಿಮಾ। ಡಿದರೊಮ್ಮೆ। ವೈಕುಂಠಪದವೀವೆ।।ಪ।। ಬ್ರಹ್ಮಾದಿ ಶಿಖರದಿಂ ಪುಟ್ಟಿ ನೀನು ಬಲು। ಬ್ರಹ್ಮ ಋಷಿಯಾದ ಗೌತಮ ಮುನಿಯ। ಬ್ರಾಹ್ಮರಿಂದಲಿ ಬಂದ ಗೋಹತ್ಯ ಪರಿಹರಿಸಿ। ಅಮ್ಮಮ್ಮ ಸಪ್ತಮುಖದಿಂದ ಸಾಗರವ ಬೆರೆದೆ। ಆದಿಯಲಿ ತ್ರಿಯಂಬಕನ ಜಟೆಯಲುದಿಸಿದೆ ನೀನು। ಮುದದಿಂದ ಪಶ್ಚಿಮಕಾಗಿ ನಡೆಯೆ ಕಂಡು। ಒದಗಿ ಗೌತಮನು ಕುಶದಿಂದ ತಿರುಗಿಸಲು ನೀ। ಸದಮಲ ಕುಶಾವರ್ತಕೆಂದೆನಿಸಿಕೊಂಡೆ। ಔದುಂಬರ ವೃಕ್ಷಮೂಲ ದಿಂದುದ್ಭವಿಸಿ। ಉದಧಿಯನು ಕೂಡಬೇಕೆಂದು ಬೇಗ। ಮೇದಿನಿಯಿಂದಿಳಿದು ತಿರುಗುತಲಿ ನೀ ಮುದದಿಂದ। ಆದರದಿ ಪೂರ್ವಾಬ್ಧಿಯನು ಕೂಡಿದೆ ವಿನಯದಲಿ ಸ್ನಾನಪಾನವನು ಮಾಡುವವರಿಗೆ। ವನಜಾಕ್ಷ ಹಯವದನ ಹರಿಯ। ವನಜನಾಭನ ಲೋಕಸಾಧನವಾದ। ಘನ ಭಕುತಿಯನಿತ್ತು ರಕ್ಷಿಸುದೇವಿ।।

ಗೋದಾ ಎನ್ನೊಳ್ವಿನೋದದಿಂದ

ಗೋದಾ ಎನ್ನೊಳ್ವಿನೋದದಿಂದ। ಮಾತಾಡಿ ತೋರಿಸೆ ನಿನ್ನ ಪಾದ।।ಪ।। ಸಾಧು ಸಜ್ಜನರಿಗೆ ಸ್ನಾನದ ಫಲ ಕೊಟ್ಟು। ಬೋಧಿಸಿ ಹರಿದಯ ಸಾಧಿಸಿ ಕೊಡಿಸುವಿ।।1।।ತಂಗೇರು ಕೂಡಿ ಉಕ್ಕೋ ಉಲ್ಲಾಸದೆ। ಲಕ್ಕುಮೀಶನ ಮುದ್ದು ಮಕ್ಕಳ ಮನೆಗೊಯ್ವೆ।।2।। ದೂರದಿ ಬಂದೆ ನಾ ಗೋದಾವರಿಯೆ ನೀನು। ತೋರೆ ಭೀಮೇಶಕೃಷ್ಣನ್ನೂರ ದಾರಿಗಳು।.3।।

ಗೋದಾವರಿ ಎನಗೆ ಶ್ರೀಧರನ ತೋರೆ — ರಾಗ: ಜುಂಜೋಟಿ

ಗೋದಾವರಿ ಎನಗೆ ಶ್ರೀಧರನ ತೋರೆ।।ಪ।। ನೀ ದಯದಿ ಸಲಹೆನ್ನ ಮಾಧವಗೆ ಪ್ರಿಯೆ।।ಅ.ಪ।। ಸ್ವಚ್ಛ ವರ್ಣಳೆ ಬಹು ಹೆಚ್ಚಾಗಿ ಪರಿಯವಳೆ ಮುಚ್ಚಿರುವ ಮಲಗಳನ್ನು ದೂರಮಾಡೇ। ಅಚ್ಯುತನ ಪದವೀವ ಹೆಚ್ಚಿನಾ ಜ್ಞಾನವನು ಸ್ವಚ್ಛತನದಲಿ ಕೊಟ್ಟು ಮೆಚ್ಚಿ ಎನ್ನನು ಸಲಹೆ।।1।। ಧರೆಯ ಜನರು ನಿನ್ನೊಳ್ ಬರುತ ಮಲಗಳ ತೊಳೆಯೆ ಅರಿತು ಅದನು ಮನದಿ ಪರಿಹರಿಸಿಕೊಳಲು। ಪರಮ ಭಾಗವತರ ವರ ಮಂದಿರಕೆ ಪೋಗಿ ವರಹ ವೆಂಕಟಗಿರಿಯೊಳ್ ಸ್ಥಿರವಾಗಿ ನಿಂತೆ।।2।। ಬರುತ ದಾರಿಯೊಳೆನಗೆ ಸ್ವಪ್ನದಲಿ ತೋರಿದೆ ವರ ದಿವ್ಯ ರೂಪವನು ನಾರಿಮಣಿಯೆ। ಸರಿಗೆ ಕಂಕಣ ಮುತ್ತಿನ ಬುಗುಡಿಯನೆ ಧರಿಸಿ ವರಮುತ್ತೈದೆಯರಿಬ್ಬರಂದದಲಿ ತೋರಿದೆ।।3।। ಮುಕ್ಕೋಟಿ ಗಂಧರ್ವ ದೇವರ್ಕಳೂ

ಬರುತಿರಲು ಅಕ್ಕರದಿ ತಂಗಿಯನೆ ಒಡಗೂಡುತ। ಲಕ್ಕುಮಿ ಸ್ವಾಮಿ ಶ್ರೀ ಪುಷ್ಕರಣಿ ಸಾರಿರಲು ಉಕ್ಕುವೋ ಉಲ್ಲಾಸದಿಂದ ತೆರಳಿದೆಯೆ॥4॥ ಜಿಷ್ಣು ಸಖನ ದಿವ್ಯ ಪಟ್ಟಣವ ಸೇರಲು ಕೃಷ್ಣವೇಣಿಯ ಒಡಗೂಡಿ। ವಿಷ್ಣುಪಾದೋದ್ಭವೆಗೆ ಸರಿಯೆನಿಸಿ ಗೋಪಾಲ ಕೃಷ್ಣ ವಿಠಲನ ಬಹುನಿಷ್ಠೆಯಿಂ ಧ್ಯಾನಿಸುವೆ॥5॥

❖ ❖ ❖

ಮುಂಜಾನೆದ್ದು ಕಾವೇರಿಯಲಿ ಮಿಂದು — ರಾಗ: ಚಾರುಕೇಶಿ

ಮುಂಜಾನೆದ್ದು ಕಾವೇರಿಯಲಿ ಮಿಂದು ಶ್ರೀರಂಗನಾಥನ ಆಲಯದೊಳುನಿಂದು। ಏಕಚಿತ್ತದಿ ವಂದನೆಯ ಅರ್ಪಿಸುವ ಸನ್ನಿಧಿ ದಿವ್ಯ ಕಾವೇರಿ ಸನ್ನಿಧಿ॥1॥ ಪಚ್ಚೆ ತೆನೆಗಳಾ ಅಚ್ಚ ಹಸಿರು ತೋಟಗಳ ನೆಚ್ಚಿನ ತಾಯಿ ಭವ್ಯ ಕಾವೇರಿ ಸನ್ನಿಧಿ। ಭೋರ್ ಭೋರ್ ಎಂದು ಪಾಡುತಿಹಳು ಸುಂಯ್ ಸುಂಯ್ ಎಂದು ತಂಗಾಳಿ ಬೀಸುತಿಹಳು॥2॥ ಕೆಚ್ಚೆದೆಯ ವೀರರ ಅಚ್ಚ ಕನ್ನಡಿಗರ ನೆಚ್ಚಿನ ತಾಯಿ ಸನ್ನಿಧಿ॥ ಮಂಗಳ ಶ್ರೀರಂಗನ ಕಂಗಳಲ್ಲಿ ನೋಡಿ ತನ್ಮಯವ ಹೊಂದುವ ಕಸ್ತೂರಿರಂಗನ ಸನ್ನಿಧಿ॥3॥

ಸಖ್ಯ ಪಾದೋದ್ಭವೇ ದೇವಿ ಶ್ರೀರಂಗೋತ್ಸಂಗ — ರಾಗ: ಧನ್ಯಾಸಿ

ಸಖ್ಯ ಪಾದೋದ್ಭವೇ ದೇವಿ ಶ್ರೀರಂಗೋತ್ಸಂಗ ಗಾಮಿನಿ ಶ್ರೀಕಾವೇರಿ ನಮಸ್ತುಭ್ಯಂ ನಮೋ ಪಾಪಂ ವ್ಯಪೋಮ್ಯಯಂ॥1॥ ಮಾತೆಯ ಹರಿಪಾದ ಜಾತೆಯ ಪರಮ ಪುನೀತೆಯ ಭುವನವಿಖ್ಯಾತೆಯನು ಜಾತೆಯ ಮಾತೆಯ ಹರಿಪಾದಜಾತೆಯ ಪರಮಪುನೀತೆಯ ಜನಮನೋಪ್ರೀತೆಯ ಉನ್ನತಿ ಜಗನ್ಮಾತೆಯ ನೋಡುವಬನ್ನಿರೈಯ್ಯಾ॥2॥ ಕಾವೇರಿಯ ಭವಹಾರಿಯ ಲೋಕುಪಕಾರಿಯ ಮೋಕ್ಷಕಾರಿಯ ದುರಿತಾರಿಯ ನೋಡುವ ಬನ್ನಿರೈಯ್ಯಾ॥3॥ ಕಾಕಾರ ಕ್ಲೇಶನಾಶಿಯ ಮೇಣರೋ ವಾಂಛಿತಪ್ರದಂ ರೀಂಕಾರಂ ಮೋಕ್ಷದ ಪ್ರಾಪ್ತಂ ಕಾವೇರೀ ರೇವರೇವತಿ॥4॥ ನಾರಿಯ ನರರ ಸಂಹಾರಿಯ ಜನಮನೋಹಾರಿಯ ನಿಜಸಾಕಾರಿಯ ವಾರಿಯ ವರವಿಶ್ವಧಾರಿಯ ಮನ ನಿರ್ವಿಕಾರಿಯ ನೋಡುವ ಬನ್ನಿರೈಯ್ಯ॥5॥ ಮುದ್ಯಂತಿ ಮುನಿಯ ತ್ಸರ್ವೇ ಭವಾನಿ ಕೋಣಮಧ್ಯತೇ ಅಂಬತದ್ದರುಶನಾನ್ಮುಕ್ತಿ ನಜಾನೇ ಸ್ನಾನ ಜಂಫಲಾ॥6॥ ಬಂದು ಸಕಲ ಜನವೃಂದ ನೆರೆದು ಮೀಯಲಂದು ನಾರದಮುನಿ ಪೊಗಳುತಿರೆ ಸಂದೇಹವಿಲ್ಲ ನೋಡಿದರೆ ಆ ಕ್ಷಣ ಮುಕ್ತಿ ಇಂತಿಲ್ಲದೆ ಮುಳುಗುವದ್ಯಾತಕಯ್ಯಾ॥7॥ ತ್ರಿರಾತ್ರಂ ಜಾಹ್ನವೀ ತೀರೆ ಪಂಚರಾತ್ರಯ ಯಮುನೇ ಸದ್ಯಾಪುನಾತು ಕಾವೇರಿ ಪಾಪಮಾಂ ಮರಣಾಂತಿಕಂ॥8॥ ಗಂಗೆಗೆ ಹೋಗಿ ಮಿಂದರೆ ಮೂರೈದು ದಿನಂಗಳಿಗಹುದು ಸುಕೃತವೆಂಬೋರು। ಹಿಂಗದೆ ಕಾವೇರಿಯ ನೋಡಿದಾಕ್ಷಣ ಪಾಪಂಗಳೆಲ್ಲ ಸಂಗತ ಇರಲು ಅಂಜಿಪೋಗುವು ದಯ್ಯಾ॥9॥ ದುಷ್ಟರೋಗೋಪ ಶಮನಂ ಕುಷ್ಟವ್ಯಾಧಿ ನಿವಾರಣಂ ಕಾವೇರಿ ವಂದಿತಂ ಪುಣ್ಯ ಕೈವಲ್ಯಂ ತದ್ಯ ನಿಪೇತ್॥10॥ ಕಂಡರೆ ಸಕಲ ಪಾತಕ ಪರಿಹಾರವು ಪೊಡವಂಟಿರೆ ದುರಿತ ದುಷ್ಕೃತ್ಯ ದೂರವು ಕೊಂಡಾಡಿದವರಿಗೆ ಅನಂತ ಮೋಕ್ಷವು ನೀರುಂಡರೆ ಭವರೋಗ ಹರೆವುದಯ್ಯಾ॥11॥ ಕಾವೇರಿ ತೋಯ ಮಾತೃತ್ವ ವಾತೋಯತ್ರ್ ಪ್ರವರ್ತತೇ ತದ್ದೇಶ ವಾಸಿಣಾಂ ಮುಕ್ತಿ ಕಿಮಿತತ್ ತೀರವಾಸಿನಾಂ॥12॥ ಕಾವೇರಿಯ ಗಾಳಿ ಬೀಸಿದ ದೇಶದಿ ಆವಾವ ಜನರು ಸುಕೃತವಾಗ್ವರೆಯ್ಯಾ ಕಾವೇರಿಯ ತೀರವಾಸಿಗಳಿಗೆ ಮುಕ್ತಿ ಅಹುದು ಕೊನೆಮೊದಲಿಲ್ಲವಯ್ಯಾ॥13॥ ಕಾವೇರಿ ಗಿರಿಜಾತೋಯಂ ವೈಕುಂಠೋರಂಗಮಂದಿರಂ ವರವಾಸದೇವ ರಂಗೇಶಂ ಪ್ರತ್ಯಕ್ಷಂ ಪರಮ ಪದಂ॥14॥ ಯಾವ್ಯಾವ ಜನ್ಮ ಕರ್ಮಂಗಳ ಕಳೆಯಲು ಕಾವೇರಿಯಲು ಮಿಂದು ಸುಖಿಯಾಗ್ವರು ಶ್ರೀವಿಷ್ಣು ಸ್ವಾಮಿ ಪುರಂದರವಿಠಲನಂಪ್ರಿಯ ಭಾವದಿಂದಲೇ ಭಜಿಸಿ ಪಡೆವಿರಯ್ಯಾ ಮುಕ್ತಿ॥15॥

ಕಾವೇರಿ ಕಲುಷಾಪಹಾರಿ ಪಾವನ

ಕಾವೇರಿ ಕಲುಷಾಪಹಾರಿ ಪಾವನ। ಶರೀರೆ ಶುಭತೋಷಕಾರಿ॥ಪ॥ ಶ್ರೀವಾಸುದೇವ ರಂಗೇಶನಾಲಯಕೆ ನೀ।

ನಾವರಣಳಾಗಿಪ್ಪೆ ವಿರಜೆಯಂತೇ। ದೇವ ಋಷಿ ಗಂಧರ್ವ ಪತ್ಯಪ ನರವರರದಿಂದ। ಸೇವನೀಯಳಾಗಿ ಸರ್ವಾರ್ಥ ಪೂರೈಪೆ॥1॥ ಜಲಚರಾನ್ವೇಷಣ ಲುಬ್ಧಸಾಲಿಗ್ರಾಮ। ತುಲಸಿ ವೃಕ್ಷವನೆ ಕೊಡಿಸಿದ ಮಾತ್ರದೀ। ಕಲುಷರಾಶಿಗಳೆಲ್ಲಾ ಕಳೆದು ಮುಕ್ತಿಯನಿತ್ತೆ! ಸಲಿಲಮಂದಿರೆ ನಿನ್ನ ಕರುಣಕೇನೆಂಬೆ॥2॥ ರವಿ ತುಲಾರಾಶಿಗೈದಿದ ಸಮಯದೊಳಗೊಂದು। ದಿವಸ ಮಜ್ಜನ ಗೈವ ಮಾನವರಿಗೆ। ಪವನಾಂತರಾತ್ಮಕನ ಪಾದಕಮಲವ ತೋರಿ। ಭವಜ ರೋಗವ ಕಳೆದು ಭಾಗ್ಯವಂತರ ಮಾಳ್ಪೆ॥3॥ ಶ್ರೀಪವನ ಶಿವರಿಂದ ತಾ ಪೂಜೆಗೊಳುತ ಬಹು ರೂಪಗಳ ಧರಿಸಿಕೊಂಡಾ ಪರ ಮನೂ। ವ್ಯಾಪಿಸಿಹ ನಿನ್ನೊಳದ್ಯಾಪಿ ಸ್ವರ್ಗಸ್ಥ ಜನ। ರೀ ಪೊಡವಿಯೊಳು ತವ ಸಮೀಪದಲಿ ಜನಿಸುವರು॥4॥ ಮೂಢಮತಿ ನಾನು ಕೊಂಡಾಡ ಬಲ್ಲೆನೆ ನಿನ್ನ। ಬೇಡಿಕೊಂಡೆನು ಹೃದಯ ನೀಡದೊಳಗೇ। ಗೂಢ ಪದ ಶಯನ ಜಗನ್ನಾಥ ವಿಠ್ಠಲನಂಘ್ರಿ। ನೋಡುವ ಸೌಭಾಗ್ಯ ದಯಮಾಡು ಪ್ರತಿದಿನದಲ್ಲಿ॥5॥

ಬೆಳ್ಳಾನೆ ಕಾವೇರಿ **ರಾಗ: ಅಭೇರಿ**

ಬೆಳ್ಳಾನೆ ಕಾವೇರಿ ಬಳುಕುತ್ತ ಬಾರವ್ವ । ಇಲ್ಲೆಲ್ಲ ಬೆಳಗಿದೆ ಬೆಳದಿಂಗಳು। ಇಲ್ಲೆಲ್ಲ ಬೆಳಗಿರುವ ಬೆಳದಿಂಗಳ್ ಬೆಳಕಲ್ಲಿ। ಹಳ್ಳಿಯ ಬಯಲಿಂದ ಬಿರಬಿರನೆ ಇಳಿದು॥ಪ॥ ಬಿಳಿಯ ಸೀರೆಯನುಟ್ಟು ಬಿಳಿಯ ರವಿಕೆಯತೊಟ್ಟು। ಬೆಳೆದಿರುವ ಪೈರಿಗೆ ನೀರನ್ನು ಕೊಟ್ಟು। ಬೆಳೆದಿರುವ ಪೈರಿಗೆ ನೀರನ್ನು ತಾರವ್ವ। ಮಳೆಗಿಂತ ಮುಂದಾಗಿ ಬಾರೇ ಕಾವೇರೀ॥1॥ ನಿನ್ನಯ ನಡೆಯುಚೆಂದ ನಿನ್ನ ವೈಯ್ಯಾರ ಚೆಂದ। ನೀಬಂದರೆ ನಮ್ಮ ಹಳ್ಳಿಗೆ ಆನಂದ। ನೀಬಂದರೆ ನಮ್ಮ ಹಳ್ಳಿಗೆ ಆನಂದ। ನೀ ಬಾರೆ ನಾ ಕರೆವೆ ಕಾವೇರಕ್ಕಾ॥॥2॥ ಕೊಡಗು ಸೀಮೆಯಿಂದ ಹುಟ್ಟಿ ನೀ ಬಾರವ್ವ। ಮೈಸೂರು ನೆಲದಾಗೆ ಹರಿದು ನೀ ಬಾರವ್ವ॥3॥ ನೀ ಬರುವ ರಭಸಕ್ಕೆ ಕಿವಿಗಳು ಮೊಳಗ್ಯಾವು। ನೀ ಬರುವ ರಭಸಕ್ಕೆ ದನಗಳು ಬೆದರ್‍ಯಾವು। ನೀ ಬರುವ ರಭಸಕ್ಕೆ ಎಲೆಗಳು ಉದುರ್‍ಯಾವು। ನೀ ಬಾರೇ ತೌರೀಗೆ ಮಗಳು ಬರುವಂತೆ॥ ಮೈಸೂರು ನೆಲದಾಗೆ ಹರಿದು ನೀ ಬರುವಾಗ। ಕನ್ನಂಬಾಡಿಯಲ್ಲೊಮ್ಮೆ ತಡೆದು ನೀ ಬಾರಮ್ಮ॥4॥ ಶಿವನ ತಲೆಮೇಲಿಂದ ಇಳಿದು ನೀ ಬರುವಾಗ। ಶ್ರೀರಂಗನ ಗುಡಿಯ ಸುತ್ತಿ ನೀ ಬರುವಾಗ। ಶ್ರೀರಂಗನ ಗುಡಿಯ ಬಳಸೀ ನೀ ಬರುವಾಗ। ಸಿರಿಯ ತಾರವ್ವಾ ಬೆಳೆಯ ತಾರವ್ವ॥5॥

ಕಾವೇರಿ ಅಂಚಿನಲಿ **ರಾಗ: ಬಾಗೇಶ್ರೀ**

ಕಾವೇರಿ ಅಂಚಿನಲಿ ಕಲ್ಲು ದೇವರು ಮಲಗಿ। ಕನಸು ಕಾಂಬುದ ಕಂಡೆ ಕನಸು ಕಾಂಬುದ ಕಂಡೆ॥1॥ ಶ್ರೀರಂಗನಾಥನೋ ಶ್ರೀ ಶ್ರೀನಿವಾಸನೋ ಶೇಷಶಯನ ನಮ್ಮ ಶ್ರೀ ಮಹಾವಿಷ್ಣುವೋ॥2॥ ಏಳು ಎದ್ದೇಳು ನೀ ಕನಸು ಕಾಂಬುದು ಸಾಕು ಜನರಿಂದು ನಿನಗಾಗಿ ಪರಿತಪಿಸುತಿಹರು॥3॥ ಶ್ರೀರಂಗಪಟ್ಟಣಕೆ ಶ್ರೀದೇವಿ ಬಂದಂತೆ ಪೊರೆದು ಜನರನು ಕಾಯೋ ಶ್ರೀರಂಗನಾಥ॥4॥ ಶೇಷಶಯನ ನೀನು ಹಾಯಾಗಿ ತೇಲುತಿಹೆ ದಡ ಸೇರಿಸೋ ನಮ್ಮ ಜೀವ ಜಂಜಡದಿಂದ॥5॥ ನಿನ್ನ ನೋಡುತಲಿಂದು ಧನ್ಯನಾದೆನೋ ಸ್ವಾಮಿ ಕರುಣೆ ತೋರೋ ಎಂದು ದಚ್ಚಣ್ಣ ನಮಿಪೆನೋ॥6॥

ಬ್ರಹ್ಮಗಿರಿಯ ಮುದ್ದು ಮಗಳು **ರಾಗ: ಶಹನ**

ಬ್ರಹ್ಮಗಿರಿಯ ಮುದ್ದು ಮಗಳು ಕಾವೇರಿ ಇವಳು। ಬೆಟ್ಟಗುಡ್ಡದಿ ನಾಟ್ಯವಾಡುತ ಹರಿಹರಿದು ಬರುತಿಹಳು॥ಪ॥ ಹಸಿರು ಸೀರೆ ಭುವಿಗೆ ಉಡಿಸಿ ತಾನೆ ನಗಿಸಿ ನಲಿಯುತಿಹಳು। ಮುಗಿಲ ಮುಟ್ಟುವ ವನದ ಸಿರಿಯ ತಾನೆ ಬೆಳೆಸಿ ಮೆರೆವಳು। ಮುಂದೆ ಹರಿದು ರೈತ ಮಕ್ಕಳ ತಾನೆ ಪೊರೆದು ನಗುತಿಹಳು। ಕಲೆಯ ತವರ ಕನ್ನಡಮ್ಮನ ಹಿರಿಯ ಮಗಳು ಇವಳು॥1॥ ಹಾಲ ಕಡಲು ಇವಳ ಒಡಲು ಝುಳುನಿನಾದ ಮಧುರ ಹೊನಲು। ಮಲ್ಲೆಹೂವ ಸಿರಿಯ ಸುರಿಸಿ ರಂಗನ ಪಾದ ತೊಳೆವಳು। ಮಲೆನಾಡಿನ ಚೆಲುವೆ ಇವಳು ಕರುನಾಡ ಗಂಗೆಯು ಎಂಥ ಸೊಬಗು ಇವಳ ನೋಡಲು ನಾಡಿದಾಯ್ತು ತಪೋಬಯಲು॥2॥

ಬಂದಳಮ್ಮ ಬಂದಳಮ್ಮ **ರಾಗ: ಮಧ್ಯಮಾವತಿ**

ಬಂದಳಮ್ಮ ಬಂದಳಮ್ಮ ಬಂದಳಮ್ಮ ನಮ್ಮ ಕಾವೇರಮ್ಮ ಬಂದಳಮ್ಮ। ತಲಕಾವೇರಿಯಲ್ಲಿ ಹುಟ್ಟಿ ಬಂದಳಮ್ಮ ಕೊಡಗಿನಿಂದ ನಲಿಯುತಲಿ ಬಂದಳಮ್ಮ।।ಪ।। ಝುಳುಝುಳು ನಿನಾದದಲ್ಲಿ ಹರಿದಳಮ್ಮ। ಕಟ್ಟೇ ಪುರದಿ ಕೊಂಚ ನಿಂತಳಮ್ಮ। ರಾಮನಾಥಪುರದಿ ಕುಮಾರ ಧಾರೆಯಾಗಿ। ಗೋಗರ್ಭದಲಿ ನುಸುಳಿ ಬಂದಳಮ್ಮ।।1।। ಚುಂಚನ ಕಟ್ಟೆಯಲ್ಲಿ ಬಂದು ನಿಂತಳಮ್ಮ। ಕನ್ನಂಬಾಡಿ ಕಟ್ಟೆಗೆ ಬಂದಳಮ್ಮ। ಲಕ್ಷ ಲಕ್ಷ ಜನರ ಮನ ಸೆಳೆದಳಮ್ಮ । ಮಹಾ ತಾಯಿ ಕಾವೇರಿ ಬಂದಳಮ್ಮ।।2।। ಕೋಟಿ ಕೋಟಿ ಜನರ ದಾಹ ತೀರಿತಮ್ಮ। ಮತ್ತೆ ಕೋಟಿಗಾಹಾರ ಸಿಕ್ಕಿತಮ್ಮ । ನಮ್ಮ ಜನಕೆ ನೀನೇ ತಾಯಿಯಮ್ಮ । ಎಷ್ಟು ಹೊಗಳಲಿ ನಿನ್ನ ಕಾವೇರಮ್ಮ।।3।। ಶ್ರೀರಂಗಪಟ್ಟಣಕೆ ಬಂದಾಳಮ್ಮ। ರಂಗನಾಥನನ್ನು ಸುತ್ತಿ ಬಂದಳಮ್ಮ। ಪಶ್ಚಿಮವಾಹಿನಿಯಾಗಿ ಹರಿದಳಮ್ಮ। ನಮಗೆ ಬಹಳ ಪುಣ್ಯವನ್ನು ಕೊಟ್ಟಳಮ್ಮ।।4।। ಜಯ ಜಯ ಕಾವೇರಮ್ಮ ಎನ್ನಿರೆಲ್ಲಾ। ಕೊಡಗಿನ ಕಾವೇರಿಗೆ ನಮಿಸಿರೆಲ್ಲ। ನಮ್ಮ ನಾಡಿಗೆ ತಂಪನೆರೆದೆ ಅಮ್ಮ। ಎಷ್ಟು ಪೊಗಳಿದರೂ ಬಹಳ ಕಮ್ಮಿಯಮ್ಮ।।5।। ದಚ್ಚಣ್ಣ ಕೊಂಡಾಡಿ ಕುಣಿವನಮ್ಮ। ಕಾವೇರಿ ಬಂದಳೆಂಬ ಹಿಗ್ಗಿನಿಂದ। ನಮ್ಮ ನಾಡ ತಾಯಿ ಕಾವೇರಿಯಮ್ಮ। ನಿನ್ನ ಬರುವಿನಿಂದ ನಾವು ಧನ್ಯರಮ್ಮ।।6।।

ಕಾವೇರಿ ಕೊಡಗಿನ ಕಾವೇರಿ

ಕಾವೇರಿ.... ಕೊಡಗಿನ ಕಾವೇರಿ... ಕಾವೇರಿ ನೀ ಬೆಡಗಿನ ವೈಯ್ಯಾರಿ। ಕನ್ನಡ ಕುಲನಾರಿ ಕಾವೇರಿ ನೀ ಒಲವಿನ ಸಿಂಗಾರಿ।।ಪ।। ಋಷಿಜನ ಜೀವನ ತಪೋನಿಧಿ। ಕಾವೇರಿ ನೀನೇ ಜೇನಿನ ಜೀವನದಿ। ರೈತರ ಬಾಳಿನ ಭಾಗ್ಯನಿಧಿ। ಕಾವೇರಿ ನೀ ನಡೆಯುವ ನೆಲವೆಲ್ಲಾ ಪುಣ್ಯದ ಸನ್ನಿಧಿ।।1।। ಹಾಲಿನ ಅಲೆಯಾಗಿ ಹಾಡೋಳೆ। ಕಾವೇರಿ ನೀ ಬಾಳಿನ ಸುವ್ವಾಲೆ ಹಾಡೋಳೆ। ಚಿನ್ನದ ನಾಡಿನ ಹೊನ್ನಾಲೆ ಕಾವೇರಿ ನೀ ನವರಸ ವಾಹಿನಿ ಗಿರಿಬಾಲೆ। ಗಂಧದ ಸೀಮೆಯ ಸೌಂದರ್ಯ ಲಹರಿ।।2।। ಕಾವೇರಿ ನೀ ಗಂಧರ್ವಗಾನದ ಆನಂದ ಲಹರಿ। ಪತಿತ ಪಾವನೆ ಅಮೃತ ಲಹರಿ ಕಾವೇರಿ ನೀ ಲಲಿತಲತಾವನಿ ಶೃಂಗಾರ ಲಹರಿ। ಕೊಡಗಿನ ಕಾವೇರಿ।।3।।

ನಮ್ಮ ತಾಯಿ ಕಾವೇರಿ ಹರಿಯುತ — ರಾಗ: ತೋಡಿ

ನಮ್ಮ ತಾಯಿ ಕಾವೇರಿ ಹರಿಯುತ ಉಕ್ಕಿ ಉಕ್ಕಿ। ಮೇಲಿಂದ ಧುಮುಕಿ ನೀನು। ಹೋಗುತಿರುವೆ ಎಲ್ಲಿ?।।1।। ಘೋರ ರಭಸದಿಂದ। ಹರಿಯುತ ಬಂದು। ಭಯವನು ತೋರಿ। ಹೋಗುತಿರುವೆ ಎಲ್ಲಿಗೆ?।।2।। ಸೆಳವು ನೀರಿನಲ್ಲಿ ದಂಡೆಯ ಮುಳುಗಿಸಿ। ಸಸ್ಯಗಳನು ತೇಲಿಸಿ। ಹೋಗುತಿರುವೆ ಎಲ್ಲಿಗೆ?।।3।। ನಿನ್ನ ಬೇಡುತಿಹೆವು ಶಾಂತಳಾಗಿ ನೀನು। ಮೆಲ್ಲ ಮೆಲ್ಲ ಹರಿದು ಶ್ರೀ ಹರುಷ ತೋರು।।4।।

ಗಂಗೆಯ ತುಂಗೆಯ ಪ್ರೀತಿಯ — ರಾಗ: ರೇವತಿ

ಗಂಗೆಯ ತುಂಗೆಯ ಪ್ರೀತಿಯ ಸೋದರಿ ಪಾವನಿ ಪುಣ್ಯನದಿ। ಬಳುಕುತ ಕುಲುಕುತ ಹರುಷವ ಚೆಲ್ಲುತ ಸಾಗುವ ಪುಣ್ಯನದಿ। ತಾ ಇಟ್ಟ ಹೆಜ್ಜೆಗೆ ಅಮೃತ ಹರಿಸಿ.... ಕಾಯುವ ಭಾಗ್ಯನಿಧಿ।।ಪ।। ಕನ್ನಡ ನಾಡಿನ ಜೀವನದಿ ಕಾವೇರಿ.... ಜೀವನದಿ ಈ ಕಾವೇರಿ.... ಅನ್ನವ ನೀಡುವ ದೇವನದಿ ಕಾವೇರಿ ಈ ವೈಯಾರಿ.... ಜೀವನದಿ ಈ ಕಾವೇರಿ.... ಈ ತಾಯಿಯು ನಕ್ಕರೆ ಸಂತೋಷದಾಸಕ್ಕರೆ ಮಮತೆಯಾ ಮಾಯೆಗೆ.... ಭಾಗ್ಯದಾತೆಗೆ ಮಾಡುವೆ.... ಭಕ್ತಿಯ ವಂದನೆ।।ಅ.ಪ।। ಕೊಡಗಲಿ ನೀ ಹುಟ್ಟಿ ಹರಿಯುವೆ ನಲಿವಿಂದ। ತರುತಲಿ ಎಲ್ಲೆಲ್ಲೂ ಆನಂದ। ಹಸಿರಿನ ಬೆಳೆ ತಂದೆ.... ಕುಡಿಯುವ ಜಲ ತಂದು। ಚೆಲ್ಲುವೆ ನಗು ಎಂಬ ಶ್ರೀಗಂಧ। ಧುಮುಕುತ ವೇಗದ ಜಲಪಾತದಲಿ ವಿದ್ಯುತ್ ನೀಡುವೆ। ಬಯಲಲಿ... ಕಾಡಲಿ... ಕಲಕಲ ಹರಿಯುತ ನಾಟ್ಯವ ಮಾಡುವೆ। ಮಂದಗಾಮಿನಿ ಶಾಂತಿವಾಹಿನಿ... ಚಿರನೂತನ ಚೇತನದಾತೆಯು ನೀನೆ.... ದಕ್ಷಿಣ ಮಂದಾಕಿನಿ।।1।। ಹುಟ್ಟುವ ಕಡೆಯೊಂದು - ಫಲ ಕೊಡೋ ಕಡೆಯೊಂದು। ಸಾಗರದಲಿ ನದಿಗೆಂದೂ ಸಂಗಮವು। ತೌರಿನ ಮನೆಯೊಂದು... ಗಂಡನ ಮನೆಯೊಂದು। ಹೆಣ್ಣಿಗೇ ಇದೇ ಎಂದೂ ಜೀವನವು। ತಂದೆಯು ತಾಯಿಯು ಅಣ್ಣನು ತಂಗಿಯು ಎಲ್ಲಾ ದೂರವು। ಹೊಸಮನೆ ಹೊಸಜನ

ಹೊಸಬಂಧವು ಅಲ್ಲೇ ಸಂತೋಷವು। ದೀಪವು ಬಾಳ ಸಂಗೀತವು। ಮನಮೆಚ್ಚಿದ ಮಡದಿಯು ಸಿಕ್ಕಿದ ಮೇಲೆ ಸ್ವರ್ಗ ಸಂಸಾರವು॥2॥

ಕಾವೇರಿ ಕಪಿಲಾ ಸಹೋದರಿ **ರಾಗ: ಶ್ರೀ**

ಕಾವೇರಿ ಕಪಿಲಾ ಸಹೋದರಿ ಕಾವೇರಿ। ಶರಧಿ ಸಮಾನೆ ಶರಣವಿತಾನೆ ನಿರತಸುಮ್ಮಾನೆ ಪೊರೆ ಎನ್ನ ನೀನೆ॥ಪ॥ ಜಲನಿಧಿಗಾಮಿನಿ ಸುಲಲಿತವಾಹಿನಿ ಜಲಜನಾಭ ಮೋಹಿನಿ ಸಲಹೋ ಜನನಿ॥1॥ ದಕ್ಷಿಣ ಗಂಗೆ ಪಕ್ಷಿವಾಹನಸಂಗೆ ಅಕ್ಷಿಜಿತ ಸಾರಂಗೆ ರಕ್ಷಿಸು ಭವಗಂಗೆ॥2॥ ದಹಿಸುತೆ ಪಾಪವ ಮಹೋಜನ ಜಾಲವ ನಿರುತದಿ ಸಲಹುವ ಮಹಿಮಾಮನ॥3॥

ರಂಗನಾಥ್ ಕೋ ಗಲಬಾಹಿ ದೇ (ಹಿಂದಿ) **ರಾಗ: ಸಾವೇರಿ**

ರಂಗನಾಥ್ ಕೋ ಗಲಬಾಹಿ ದೇ। ಜಾತಿ ಪೂರಬ್ ಕೋ ಬಲಖಾತಿ। ಹೈ ದಕ್ಷಿಣ್ ಕೀ ಗಂಗೆ ತೂತೋ। ನಿಶಿ-ದಿನ್ ಮಧು ಕೀ ಧಾರ್ ಬಹಾತಿ॥1॥ ತೇರೇ ತಟ್ ಕೀ ಭೂಮಿ ಉಗಲ್‌ತಿ। ಸೋನಾ ಔ ಮೇವೋಂ ಕಾ ಢೇರ್। ತಂಜಾಊರ್ ಖಲಿಹಾನ್ ದೇಶ್ ಕೇ। ಲಗತೇ ನಿತ್ ಸಸ್ಯೋಂ ಕಾ ಢೇರ್॥2॥ ಕಹಾಂ ಕಹಾಂ ಸೇ ಆತೀ ಹೋ ತುಮ್। ಔರ್ ಕಹಾಂ ತಕ್ ಜಾತೀ ಹೋ ತುಮ್?। ಪತ್ಥರ್ ಸೇ ಟಕರಾತೀ ಹೋ ತುಮ್। ಕ್ಯೋಂ ಇತನಾ ದುಃಖ್ ಪಾತೀ ಹೋ ತುಮ್?॥3॥ ಹೈ ಪಹಾಡ್ ಹೀ ಪಿತಾ ತುಮ್ಹಾರಾ। ವಹೀಂ ಹುಆ ಹೈ ಜನ್ಮ ತುಮ್ಹಾರಾ। ಬಹನಾ ಹೀ ಹೈ ಕಾಮ್ ತುಮ್ಹಾರಾ। ಚಲನಾ ಹೀ ಆರಾಮ್ ತುಮ್ಹಾರಾ॥4॥ ತುಮ್ ಕೋ ಸೀಧೀ ಚಾಲ್ ನ ಭಾತೀ। ಚಲತೀ ಜಾತೀ ಹೋ ಬಲ್‌ಖಾತೀ। ಚಲ್‌ನೇ ಮೇ ಭೀ ಮೋದ್ ಮನಾತೀ। ಸಮಯ್ ಬಿತಾತೀ ಹಂಸ್‌ತೀ ಗಾತೀ॥5॥ ತುಮ್ ಉಪಕಾರ್ ಸದಾ ಕರತೀ ಹೋ। ದುನಿಯಾ ಕೋ ಸುಖ್ ಸೇ ಭರತೀ ಹೋ। ಹಿಮ್ಮತ್ ಹಾರ್ ನಹೀಂ ಸಕತೀ ಹೋ। ಅಪನೀ ಹೀ ಧುನ್ ಮೇ ರಹತೀ ಹೋ॥6॥

ಎಲ್ಲೋ ಹುಟ್ಟಿ ಎಲ್ಲೋ ಬೆಳೆದು

ಎಲ್ಲೋ ಹುಟ್ಟಿ ಎಲ್ಲೋ ಬೆಳೆದು ಎಲ್ಲೋ ಸೇರುವಾ ಕನ್ಯೆ। ಜೀವಿತದಾ ಧನ್ಯತೆಯಾ ಕಂಡುಕೊಳ್ಳುವಾ ಮಾನ್ಯೆ। ಕಾವೇರಿಯ ಹುಟ್ಟು ಕೊಡಗನಾಡ ಬ್ರಹ್ಮಗಿರಿ। ಪೌರಾಣಿಕ ಇತಿಹಾಸದಿ ಪುಟವಿಟ್ಟ ನವಿಲುಗರಿ॥ ಕೊಡಗನಾಡ ಪ್ರಕೃತಿಯಾ ಸುಂದರ ಸೋಪಾನದಲ್ಲಿ। ಬ್ರಹ್ಮಗಿರಿಯ ಕುಂಡಿಕೆಯ ಅತಿ ಚೆಲುವಿನ ತಾಣದಲ್ಲಿ। ಹುಟ್ಟಿ ಹರಿದ ಕಾವೇರಿ ಮರೆಯಾದಳು ಎಲ್ಲೋ ಅಲ್ಲಿ। ಅವಳ ಹರಿವ ನಡೆವ ಜಾಡ ಕಾವೇರಿಯ ದಾರಿಯು। ದಕ್ಷಿಣದ ಪ್ರಯಾಗವದು ಕ್ಷೇತ್ರ ಭಾಗಮಂಡಲ। ಕನ್ನಿಕ ಸುಜ್ಯೋತಿಯರು ಸೇರಿ ಹರಿಯೆ ಮಂಗಳ। ರಘುವಂಶದ ಹರಿಶ್ಚಂದ್ರ ಯಾಗ ಮಾಡಿದಾ ಸ್ಥಳವು। ಶಿವಾಲಯದಿ ಕಂಗೊಳಿಪ ಕಾವೇರಿಯ ಹರವು॥ ಸಾಗಿ ಸಾಗಿ ಧುಮುಕಿ ಹರಿದು ಬಂದಳದೋ ಕಾವೇರಿ। ಹಲವು ಬಗೆಯ ಹಕ್ಕಿಗಳಿಗೆ ಧಾಮ ಸ್ವರ್ಗದೈಸಿರಿ। ಪಶ್ಚಿಮಕೆ ತಿರುಗಿ ಸಾಗಿ ಪಟ್ಟಣಕೇ ಧಾವಿಸಿ। ಆದಿ ರಂಗನ ಪಾದಪದ್ಮ ತೊಳೆದಳದೋ ಸೇವಿಸಿ। ಕರಿಘಟ್ಟದ ತಪ್ಪಲಲ್ಲಿ ಶ್ರೀಲೋಕಪಾವನಿ। ಸಂಗಮಿಸಿ ನಡೆದರದೋ ತಿರುಮಹಾಕೂಡಲಿಗೆ। ಕಾವೇರಿಯು ಕಪಿಲೆಯು ಸ್ಪಟಿಕ ಸರೋವರವೂ। ಸೇರಿ ಕೈ ಹಿಡಿದುದೇ ತ್ರಿವೇಣಿ ಸಂಗಮವು॥ ಆಡಿ ಹಾಡಿ ಹರಿದು ನಲಿದು ಬೆಳೆದವಳದೋ ಕಾವೇರಿ। ಯೌವನದಾ ಕಾವೇರಿ ಜವ್ವನಿಕೆಯ ಸೊಕ್ಕೇರಿ। ಹಾರಿ ಹಾರಿ ಧುಮುಕಿ ಧುಮುಕಿ ಶಿವನಾಸಮುದ್ರದಲ್ಲಿ। ಮಿಂಚಾದಳು ಕಣ್ಣಾದಳು ಕನ್ನಡಿಗರ ಮನದಲ್ಲಿ ಗಗನಚುಕ್ಕಿ ಭರಚುಕ್ಕಿ ಏನು ಹೆಸರು ಇವಳಿಗೆ॥ ಮಧ್ಯರಂಗನನ್ನು ಇವಳು ಬಿಡಲಾರಳು ಅರೆಗಳಿಗೆ। ಸಾಗಿಬಂದು ಸಂಗಮದಿ ಅರ್ಕಾವತಿ ಒಡಗೂಡಿ। ಇವಳ ಅಂದ ಚೆಂದ ಕಂಡುಬಂದುದಿಲ್ಲಿ ನೂರ್ಮಡಿ॥ ಮೇಕೆದಾಟುಎಂಬಲ್ಲಿ ಕಂಡಿರಾ ಇವಳ ಲಾಸ್ಯ। ಅಲ್ಲಲ್ಲಿ ಪ್ರಶಾಂತ ನಡುನಡುವೆ ಆರ್ಭಟ। ಸಿರಿ ಪ್ರಕೃತಿಯ ಶಿಲಾಗಾರ ಜಲಕಡೆದ ಕಮ್ಮಟ। ಬಂಡೆಕಲ್ಲಿನಲ್ಲಿ ಕೊರೆದ ಕರ್ನಾಟಕ ಬಾವುಟ॥ ಹೊರಟಳದೋ ಕಾವೇರಿ ನೆರೆರಾಜ್ಯದ ಭೂಮಿಗೆ। ನವವಧುವು ಹೊರಟಂತೆ ಅತ್ತೆಮಾವನ ಮನೆಗೆ। ಗೌಣ

ಗಂಭೀರವೆಲ್ಲಾಸ್ವಲ್ಪ ದೂರ ಅಷ್ಟೇ ಮೆಲ್ಲ। ಹಾರಿ ಜಿಗಿದು ಬಂದಳದೋ ತುಂಬಿ ಹೋಗೇನಕಲ್ಲ।। ಅಂತ್ಯರಂಗ ಶ್ರೀರಂಗಳು ದಿವ್ಯ ದೇಶಗಳಲ್ಲೊಂದು। ಕಾವೇರಿಯು ಬಿಡಲಾರಳು ರಂಗನಾಥನಾ ಎಂದೂ। ಮಣವಾಳರು ಆಚಾರ್ಯರು ಆಳ್ವಾರರು ಸ್ತುತಿಸಿದಾ। ಸಪ್ತಪ್ರಕಾರದಲ್ಲಿ ಶಯನೋತ್ಸವ ಸ್ವಾಮಿಯಾ।। ಧರ್ಮಾಪುರ ಛಾಯಾವನಂ ಎಲ್ಲಸುತ್ತಿ ಬಂದಳು। ಕರ್ಮಸವೆಸಲೆಂದು ಬಂದ ಜನುಮನದಿ ನಿಂದಳು। ಪ್ರತಿಯೊಂದಕು ಮಿತಿಯುಂಟು। ಮಿತಿಯಿಲ್ಲವೆ ಅವಳಿಗೆ। ಸುತ್ತಿ ಸುತ್ತಿ ದಣಿದು ನಿಂದು ಪೂಂಪುಹಾರ್ ಗೆ ಬಂದಳು।। ದಕ್ಷಿಣದಾ ಗಂಗೆಯೂ ಪೊನ್ನಿಯೂ ಅವಳಾದಳು। ತುರುಕರುವಿಗೂ ಜಲಚರಕೂ ಆಧಾರವೆ ತಾನಾದಳು। ತೆಂಕಣದ ಅಂಗಳಕೆ ರಂಗೋಲಿಯನೆಳೆದಂತೆ। ಹೊನ್ನಮಳೆ ಕರೆಯುತಲಿ ಪೈರು ಪಚ್ಚೆಯನಿತ್ತು। ಕರ್ಮಯೋಗಿಗಳಿಗೆ ದೈವ ನೀಡುವಂತೆ ಆಶ್ರಯ। ಶರಧಿ ನೀಡಿದಾಶ್ರಯ ಕಾವೇರಿಯು ಶರಣಾದಳು। ಕರುನಾಡಿನಾ ಮಾನ್ಯೆ ಕರ್ಮಜೀವಿ ಧನ್ಯೆ।।

❖ ❖ ❖

ಬಂದೆನು ಕರೆಯೇ ತ್ರಿವೇಣಿ — ರಾಗ: ಅಠಾಣ

ಬಂದೆನು ಕರೆಯೇ ತ್ರಿವೇಣಿ ದಯದಿಂದೆನ್ನ ನೋಡೆ ತ್ರಿವೇಣಿ।।ಪ।। ಪಡೆದವಳ್ ನೀನೆ ತ್ರಿವೇಣಿ ಎನ್ನ ಮನವ ನೋಡ್ವೇಳೆ ತ್ರಿವೇಣಿ। ನಡು ಗಂಗೆಯಲ್ಲಿ ಆಡಿ ಮುಳುಗುತಿರೆ ಕಡಹಾಯ್ದು ಎನ್ನನ್ನು ಕಾಯೆ ತ್ರಿವೇಣಿ।।1।। ಅಪ್ಪಣೆಯ ಕೊಡಿಸೆ ತ್ರಿವೇಣಿ ಎನ್ನ ಸ್ವಪ್ನದಲ್ವೇಳೆ ತ್ರಿವೇಣಿ। ಮುತ್ತೈದೆರಿಗೆ ಮೊರದ ಬಾಗಿಣಗಳ ಕೊಟ್ಟು ಸೇರುವೆನೆ ನ್ನಿನ್ನೊಳಗೆ ತ್ರಿವೇಣಿ।।2।। ದಾವಾಗ್ನಿ ನಗರದಿಂದ ನೀ ದಯದಿ ರಕ್ಷಿಸಿದೆಲ್ಲೆ ಬಂದು। ಆವತ್ತಿನಾರಭ್ಯ ಅನುಕೂಲವಾಗಿದೆ ಯಾವಾಗ ಕಾಂಬೆ ನಾನೆನುತ ನಾ ಬಂದೆ।।3।। ಅನುಮಾನವ್ಯಾಕೆ ತ್ರಿವೇಣಿ ಎನ್ನ ಮನವ ನೋಡ್ವೇಳೆ ತ್ರಿವೇಣಿ। ಅನುಮಾನ ತನುಮನ ಮನಸು ನಿನ್ನೊಳಗಿಟ್ಟು ಕಡೆಹಾಯ್ಸು ಎನ್ನನ್ನು ಕಾಯೆ ತ್ರಿವೇಣಿ।।4।। ಶ್ರೀಕೃಷ್ಣಗತಿಯೆ ತ್ರಿವೇಣಿ ಕೈಲಿ ಕಾಸಿಲ್ಲವಲ್ಲೆ ತ್ರಿವೇಣಿ। ವಾಸುದೇವರ ಧ್ಯಾನ ಅನುಕೂಲವಾಗಿ ಕೃಪೆಯಿಟ್ಟು ಪಾಲಿಸು ಕಾಯೆ ತ್ರಿವೇಣಿ।।5।। ಜಪತಪವಿಲ್ಲ ತ್ರಿವೇಣಿ ಮುಂದೆ ಗತಿಯೇನು ಹೇಳೆ ತ್ರಿವೇಣಿ। ಯತಿ ಸನ್ಯಾಸಿಯ ಪೂಜೆ ನಾ ಮಾಡಲಿಲ್ಲ ಲೇಸಾಗಿ ಜನಗಳ ನೋಡೆ ತ್ರಿವೇಣಿ।।6।।

ಕಾಣುವ ಭಕುತರ ಕರುಣದಿ — ರಾಗ: ಕಾಮವರ್ಧಿನಿ

ಕಾಣುವ ಭಕುತರ ಕರುಣದಿ ಸಲಹುವ ಜಾಣೆ ತ್ರಿವೇಣಿಯೇ। ಪರಮ ಕಲ್ಯಾಣಿ ವೇಣಿ ಮಾಧವನ ತೋರಿಸೆ। ಜಾಣೆ ತ್ರಿವೇಣಿಯೇ ಕಾಣದೆ ನಿಲ್ಲಲಾರೆ। ವೇಣಿ ಮಾಧವನ ತೋರಿಸೆ।।ಪ।। ಬಂದೇನೆ ಬಹಳ ದೂರದಿ ಭವಸಾಗರ ತಿರುಗಿ। ನಿಂದೇನೆ ನದಿಯ ತೀರದಿ........। ಒಂದು ಘಳಿಗೆ ನೀ ಹರಿಯ ಬಿಟ್ಟಿರಲಾರೆ। ಮಂದಗಮನೆ ಎನ್ನ। ಮಂದಗಮನೆಯನ್ನ ಮುಂದಕೆ ಕರೆಯೇ।।1।। ಶರಣಾಗತರ ಪೊರೆವುದು ಅದು ನಿನ್ನ ಬಿರುದು ಸ್ಮರಣೆ ಒಂದನ್ನೆ ಸಲಹುವುದು... ... ಸ್ಮರಣೆ ಮಾತ್ರದಿ ಭವ ತಾಪವ ಕಳೆದು ಸ್ಮರನ ಪಿತನ ಮೊರೆ। ಸ್ಮರನ ಪಿತನ ಮೊರೆ ಹರನ ಕರುಣದಿ।।2।। ಸುಜನಾರ ಸಂಘವ ತಾಳೆ ನೀ ಸುಶೀಲೆ। ಕೇಳೆ ಕುಜನಾರ ಸಂಘವ ದೂರಿಡೆ ನಿಜ ಪದವಿಯ ಕೊಟ್ಟು ಸಲಹುವ ನಮ್ಮ ವಿಜಯ ವಿಠ್ಠಲನ। ವಿಜಯವಿಠ್ಠಲನ ನಿಜಪಾದ ತೋರಿಸಿ।।3।।

ಬಟ್ಟೆಯ ನೆವದಿಂದ ಬಂದು

ಬಟ್ಟೆಯ ನೆವದಿಂದ ಬಂದು ತಟ್ಟ ಕವನೆ ಕಂಡು। ಕಣ್ಣ ತೆರೆದ ಕೃಷ್ಣವೇಣಿ ನಿಮ್ಮ ಕಂಡೆ। ದುಷ್ಟಮಾನವರ ಬಾಧೆಗೆ ಅಂಜಿ ಇತ್ತ ಬಂದೆ। ಕಷ್ಟ ದುರಿತಗಳ ಕಳೆಯೆ ತಾಯೆ।।ಪ।। ಬೋರಿಡುವ ಮಳೆಗೆ ಹಲ್ಲುಗಿಟಗರಿದು ಶೀತ ತಲೆಗೇರಿ। ಕಂಪಿಸಿ ನಡುಗುತ್ತ। ಜಾರಿ ಕೆಸರೊಳು ಬಿದ್ದು ಮತ್ತೇಳುತಲಿ। ದಾರಿಯನು ಕೇಳಿಕೊಳ್ಳುತ್ತ। ಕ್ರೂರವಾಗಿದ್ದ ಜಾಲಿಯ ಮುಳ್ಳನೆ ತುಳಿದು। ಹರಿನಾರಾಯಣ ಎನ್ನುತ। ಹಾರೈಸಿ ನಿಮ್ಮ ದರುಶನಕ್ಕೆ ನಾ ಬಂದೆ। ಘೋರ ದುರಿತವನು ಕಳೆಯೆ ತಾಯೆ।।1।। ನಿತ್ಯ ಕಲ್ಯಾಣಿ ನಿರ್ಜರಸ್ತೋತ್ರೆ ಶುಭಗಾತ್ರೆ। ಪ್ರತ್ಯಕ್ಷ ವಿಷ್ಣುಜಾತೆ ಮಾತೆ। ವಿಸ್ತರಿಸಲಾರೆ ಶ್ರೀ ವಿಷ್ಣುಸಂಪ್ರೀತೆ।

ಸತ್ಪಾತ್ರ ಸಂಪೂಜಿತೆ ಪ್ರೀತೆ। ಸತ್ತು ಹುಟ್ಟುವ ಜನ್ಮ ಕೋಟಲೆಯ ಖಂಡಿಸೆ ಪತಿತ ಪಾವನ ಚರಿತೆ। ವ್ಯರ್ಥವಾಯಿತು ಜನ್ಮ ಸಾರ್ಥಕವ ಮಾಡಮ್ಮ। ಮುಕ್ತಿಸಾಧನದಾತೆಮಾತೆ।।2।। ಸುರಗಂಗೆ ಕೃಷ್ಣಮಾಲಾಪಹಾರಿ ಮೂವರು ಕೂಡಿ ಬೆರೆದಿದ್ದಸಂಗಮದಲ್ಲಿ। ಅರಿಸಿಣ ಅಕ್ಷತೆ ಗಂಧ ಕುಂಕುಮ ತಾಂಬೂಲಗಳ ಹರುಷ ದಿಂದರ್ಪಿಸುತಲಿ। ಥರಥರದಿ ನೆರೆದ ಮುತ್ತೈದೆಯರೆಲ್ಲರು ಮರದ ಬಾಗಿನವ ಕೊಡುತಲಿ। ಹರುಷ ದಿಂದಪ್ಪುದನು ಕಂಡೆ ಹೆಳವನ ಕಟ್ಟೆ ಅರಸು ರಂಗನ ಕೃಪೆಯಲ್ಲಿ ತಾಯೆ।।3।।

ಗಂಗೆ ಯಮುನೆ ಸರಸ್ವತಿಗೆ (ಆರತಿ) — ರಾಗ: ಸುರುಟಿ

ಗಂಗೆ ಯಮುನೆ ಸರಸ್ವತಿಗೆ। ಚಲ್ವ ಮಂಗಳಾಂಗಿಯರಾರತಿ ಎತ್ತಿರೇ।।ಪ।। ಹರಿಪಾದ ಕಮಲದಿಂದ್ದರಿದು ಬಂದವಳಿಗೇ। ತಿರುಗುವೊ ಭಾಸ್ಕರ ತನಯಳಿಗೇ। ನಿರುತದಲಿ ಬಂದು ಪ್ರಯಾಗದಲಿ ನೆಲೆಸಿದ। ಸರಸ್ವತಿದೇವಿಗಾರುತಿ ಎತ್ತಿರೇ।।1।। ಭಗೀರಥರಾಯಗೆ ಒಲಿದು ಬಂದವಳೀಗೆ। ಸಾಗರಕುಲಗಳುದ್ದರಿಪೋಳಿಗೇ। ಜಗದ ಜನರನ್ನೆಲ್ಲ। ಪಾವನ ಮಾಡುವೊ। ಜಾಹ್ನವಿದೇವಿಗಾರುತಿ ಎತ್ತಿರೇ।।2।। ಸಪ್ತ ಸಮುದ್ರವ ಭೇದಿಸಿದ ಯಮುನೆಗೆ। ಗುಪ್ತಗಾಮಿನಿ ದೇವಿ ಸರಸ್ವತಿಗೇ। ಮುಕ್ತಿದಾಯಕಿಗೇ ಮೂಲವಾಟದಿ ನಿಂದ। ಪ್ರತ್ಯಕ್ಷ ಗಂಗೇಗಾರುತಿ ಎತ್ತಿರೇ।।3।। ಕಾಶಿಯ ದೇಶದಿ ವಾಸವಾಗಿರುವೋಳಿಗೆ। ದೇಶ ದೇಶಗಳೆಲ್ಲ। ತಿರುಗೋಳಿಗೇ। ಈಶನ ರಾಣಿ ವಿಶ್ವೇಶ್ವರನರ್ಧಾಂಗಿಗೇ। ವಾಸುಕಿ ವೇಣಿಗಾರುತಿ ಎತ್ತಿರೇ।।4।।

ಗಂಗೆ ಭಾಗೀರಥಿ ಯಮುನೆ ಸರಸ್ವತಿ ಸಂಗಮ (ಆರತಿ) — ರಾಗ: ಕುರಂಜಿ

ಗಂಗೆ ಭಾಗೀರಥಿ ಯಮುನೆ ಸರಸ್ವತಿ ಸಂಗಮಕೆತ್ತುವೆ ಆರುತಿ। ಮಂಗಳ ಮೂರುತಿ ಶೃಂಗಾರದ ಸತಿ। ಮಂಗಳ ಜಯ ಮಂಗಳಾರತಿ।।ಪ।। ಮನವೆಂಬುವ ಮಂಟಪವಲಂಕರಿಸಿ। ತನುವೆಂಬುವ ತವಕದಲಿರಿಸಿ। ಜನನ ಮರಣವೆಂಬೋ ಬಣ್ಣವ ಬೆರೆಸಿ। ಜನ್ಮವೆತ್ತದ ಜಲಗಳ ಬೆರಸಿ।।1।। ನಾನು ನನ್ನದು ಎಂಬೋ ಕಳೆಗಳ ಕೊಚ್ಚಿ। ಜ್ಞಾನಾಂಬರ ಮರೆ ಮುಚ್ಚಿ। ಅಜ್ಞಾನದ ಆಭರಣವ ಬಿಚ್ಚಿ। ಸುಜ್ಞಾನದ ಜ್ಯೋತಿಗಳಿರಿಸಿ।।2।। ಅರಿಶಡ್ವರ್ಗಗಳಕ್ಷತೆ ಕಲೆಸಿ। ಆನಂದದ ಸೊಡಲು ಗಳಿರಿಸಿ। ಅಷ್ಟಮದಗಳೆಂಬೋ ಆಜ್ಯವ ಕಲೆಸಿಥಟ್ಟನೆ ಮುಕ್ತಾಂಗನೆ ಬೆರೆಸಿ।।3।।

❖ ❖ ❖

ಬೆಟ್ಟ ಹತ್ತಿ ಬೆಟ್ಟ ಇಳಿದು — ರಾಗ: ಮಧ್ಯಮಾವತಿ

ಬೆಟ್ಟ ಹತ್ತಿ ಬೆಟ್ಟ ಇಳಿದು ಹರಿದು ಬಂದೆಯಾ। ತಿಟ್ಟ ತಿಳಿದು ಕಣಿವೆಸುತ್ತಿ ಜಾರುತಿರುವೆಯಾ। ಓ ಗಂಗೆ ನೀರಗಂಗೆ ಕ್ಷೀರ ತುಂಗೆ।। ಒಂದೆ ದಾರಿ ಬಂದ ದಾರಿ ಮತ್ತೆ ನೋಡದೆ। ಹರಿದು ಬಾರೆ ಗಂಗೆ ಗೌರಿ ಶಬ್ದ ಮಾಡದೆ। ಬಾರೆ ಬಾರೆ ನೀರ ತಾರೆ ಪುಟ್ಟ ಪುಟ್ಟ ಹೆಜ್ಜೆಯಿಂ। ಅಲ್ಲಿ ನಕ್ಕು ನಗೆಯ ಹೊಕ್ಕು ನೀರ ಗೆಜ್ಜೆಯಿಂ।।1।। ನೀನೆ ಮಾತೆ ಎಂದು ಎಲ್ಲ ಪೂಜಿಸುತಿಹರು। ನಿನ್ನ ತೀರ್ಥ ಶ್ರೇಷ್ಠವೆಂದು ಸೇವಿಸುತಿಹರು। ಶಿವನ ಜಟೆಯಿಂದ ನುಸುಳಿ ಅಂಕು ಡೊಂಕು। ತಿರುಗಿ ತಿರುಗಿ ಸಾಗರವನು ಸೇರುತಿರುವ। ಓ ಗಂಗೆಯೇ ನೀರ ಗಂಗೆಯೇ..... ಕ್ಷೀರ ತುಂಗೆ।।2।।

ತುಂಗೇ ಮಂಗಳ ತರಂಗೆ

ತುಂಗೇ ಮಂಗಳ ತರಂಗೆ।।ಪ।। ಹರಿಯ ಸರ್ವಾಂಗೆ ಜಯಜಯತು ಜಯ ಜಯ ತುಂಗೆ ಭದ್ರೆ।।ಅ.ಪ.।। ಆ ದಿಯ ಲೊಬ್ಬ ದೈತ್ಯ ಮೇದಿನಿಯ ಕದ್ದೊಯ್ಯು। ಸಾಧಿಸುತಲಿರಲವನ ಬೆನ್ನಟ್ಟಿ ಬಿಡದೆ।। ಛೇದಿಸುತಲವನ ಭೂಮಿಯನೆತ್ತಿಕಾಯ್ದಂಥ। ಆದಿ ವರಾಹನ ದಾಡೆಗಳಿಂದ ಬಂದೆ।।।। ಜಲವೆಲ್ಲ ಹರಿಮಯ ಶಿಲೆ ಎಲ್ಲ ಶಿವಮಯ। ಮಳಲು ಮಿಟ್ಟೆಗಳೆಲ್ಲ ಮಣಿಯ ಮಯವು। ಬೆಳೆದಿಪ್ಪ ದರ್ಭೆಗಳು ಸಾಕ್ಷಾತ್ತು ಬ್ರಹ್ಮಮಯ। ನಳಿನನಾಳವು ಸರ್ವವಿಷ್ಣು ಮಯವು।।2।। ಇದೇ ಬೃಂದಾವನ ಇದೇ ಕ್ಷೀರಾಂಬುಧಿ। ಇದೇ ವೈಕುಂಠಕೆ ಸರಿಯೆಂದೆನಿಸಿದೆ। ಇದೇ ಬದರಿಕಾಶ್ರಮ ಇದೇ ವಾರಣಾಸಿಗೆ। ಅಧಿಕ ಫಲವನ್ನು ಈವದೇವಿ।।3।। ಧರೆಗೆ ದಕ್ಷಿಣ ವಾರಣಾಸಿ ಯೆಂದೆನಿನಿಸಿದೆ। ಪರಮ ಪವಿತ್ರೆ

ಪಾನ ಚರಿತೆ ನಿನ್ನ। ಸ್ಮರಣೆ ಮಾತ್ರದಿ ಕೋಟಿ ಜನ್ಮದಘವನು ಕಳೆವ। ಪರಿದು ಸಾಯುಜ್ಯ ಫಲವೀವ ದೇವಿ॥4॥ ಪರಮಭಕ್ತ ಪ್ರಹ್ಲಾದಗೊಲಿದು ಬಂದು। ನರಸಿಂಹ ಕ್ಷೇತ್ರವೆಂದೆನಿಸಿ ಮೆರೆದೆ। ಧರೆಯೊಳಧಿಕ ವರ ಕೂಡಲಿ ಪುರದಲ್ಲಿ। ವರದ ಪುರಂದರವಿಠಲ ನಿರಲುಬಂದೆ॥5॥

❖ ❖ ❖

71. ಶ್ರೀ ಸತ್ಯನಾರಾಯಣ ವ್ರತ

ನಾರಾಯಣಾ ಬಾರೋ **ರಾಗ: ಶುದ್ಧಸಾವೇರಿ-ಆದಿತಾಳ**

ನಾರಾಯಣಾ ಬಾರೋ ಸತ್ಯನಾರಾಯಣ ಬಾರೋ। ಶ್ರೀ ಸತ್ಯ ನಾರಾಯಣ ನೀ ಬಾರೋ॥ಪ॥ ನಿತ್ಯ ಬಾರೋ ಎನ್ನ ಸತ್ಯ ಬಾರೋ। ಸತ್ಯ ಸ್ವರೂಪನೆ ನೀ ಬಾರೋ॥ಅ.ಪ.॥ ಕ್ಷೀರಾಬ್ಧಿಶಯನ ಬಾರೋ, ಶ್ರೀ ಲಕ್ಷ್ಮೀರಮಣಾ ಬಾರೋ। ಅಭಿಷೇಕ, ಅರ್ಚನೆ ಪೂಜೆ ಸ್ವೀಕರಿಸೋ ಬಾರೋ। ಬದರಿನಾರಾಯಣ ಬಾರೋ ನರಹರಿ ಬಾರೋ। ವೈಕುಂಠವಾಸ ಬಾರೋ ವೈದೇಹಿ ರಮಣ ಬಾರೋ॥1॥ ಶ್ರೀಮನ್ನಾರಾಯಣ ಬಾರೋ, ಹುಣ್ಣಿಮೆ ಚಂದ್ರ ಬಾರೋ। ಸರ್ವರ ಅಜ್ಞಾನ ತೊಡೆದು ಜ್ಞಾನ ನೀಡಲು ಬಾರೋ। ಸಪಾದ ಭಕ್ಷವನ್ನು, ಸ್ವೀಕರಿಸು ಬಾರೋ। ಕುಕ್ಕೆ ಸ್ವಾಮಿ ನಿನ್ನನ್ನು ಸರ್ವರು ಬೇಡುವರು॥2॥

ಪೂಜಿಪೆ ಶ್ರೀ ಸತ್ಯದೇವನ **ರಾಗ: ಶುದ್ಧಧನ್ಯಾಸಿ**

ಪೂಜಿಪೆ ಶ್ರೀ ಸತ್ಯದೇವನ ನಾರಾಯಣನ॥ಪ॥ ಪಂಚಾಮೃತದಮೃತಾಭಿಷೇಕವ ಪಂಚ ಶರಪಿತಗೇ ಮುಂಚೆಗೈದು ಪ್ರಪಂಚ ರೀತಿಯೋಳ್। ಅಂಚಿನಮಿಂಚಿನ ಪಂಚೆಯನುಡಿಸುತ। ಇಂದಿರೇಶಗೆ ಪೀತವಸ್ತ್ರವ ತಂದು ಪೂಜಿಸುವಾ। ಗಂಧ ಕುಸುಮಗಳನು ಅರ್ಪಿಸಿ। ಚಂದವನಿಂದು ಆನಂದವ ನೋಡುತ॥1॥ ಧೂಪದೀಪಗಳ ಅರ್ಪಿಸಿ ಆ ಪರಾತ್ಪರಗೆ। ಧೂಪ ದಶಮಿದು ದಂಪದ ವೀಳ್ಯವ ಬಾಲಗೋಪಾಲಗೆ ಶ್ರೀಪಾಲಗರ್ಪಿಸಿ॥ ಮಂಗಳಾರತಿ ಗೈದು ಸುರವೀ ರಂಗನಾಥನಿಗೇ। ಮಂಗಳಾಂಗ ಕೃಪಾಂಗಹಿತಪುರಿ। ಅಂಗಜಗಂಗಗೆ ಅಂಗನೆ ಮಣಿಯುತ॥2॥

ಸತ್ಯನಾರಾಯಣ ನಿತ್ಯಪಾರಾಯಣ **ರಾಗ: ಕಲಾವತಿ-ಆದಿತಾಳ**

ಸತ್ಯನಾರಾಯಣ ನಿತ್ಯಪಾರಾಯಣ। ಇತ್ತ ಬಾರೈ ಸ್ವಾಮಿ ಎನ್ನ ಮನೆಗೆ। ಚಿತ್ತೈಸು ಎನ್ನ ಪ್ರಾರ್ಥನೆಯೆಲ್ಲವ। ವಿಸ್ತರಿಸುವೆ ನಿನ್ನ ಇದಿರೊಳಗೆ॥ಪ॥ ಶೃತಿಯೊಳು ಯಾಮ ಯಾಮದಿ ನಿನ್ನ। ಕಥೆಗಳ ಕೇಳಿಹೆನದ್ಭುತ ಚರಿತೆಗಳಾ। ವ್ರತವನು ಮಾಡುವೆ ಶಕ್ತ್ಯಾಸಾರದಿ। ಪರಿಹರಿಸು ಎನ್ನ ದುರಿತಗಳ॥1॥ ಧೂಪ ದೀಪ ಪುಷ್ಪ ನೈವೇದ್ಯದೊಳಗೆಲ್ಲಾ। ಅಪಾರ ಮಹಿಮನೆ ಅಡಗಿರುವೆ। ತಾಪಿ ತಾಪಸೋತ್ತಮ ನಿನ್ನ ಪೂಜೆಯನರಿಯೆನು ಶ್ರೀಪತಿ ನಿನಗೊಮ್ಮೆ ಕರಮುಗಿವೆ॥2॥ ನಾನಾವ ಬಗೆಯೊಳು ಪೂಜೆಯಮಾಡಲಿ । ಏನೇನ ಕಾಣಿಕೆ ಅರ್ಪಿಸಲಿ ..। ನೀನಿಲ್ಲದೊಸ್ತುವ ಕಾಣೆನುಧರೆಯೊಳು। ತುಂಬಿರುವೆ ಅಣು ಅಣುಗಳಲೀ...॥3॥ ಸಾತ್ವಿಕ ಗುಣಗಳು ಚಲಿಸದ ಶಾಂತಿಯು। ನಿತ್ಯನಿರ್ಮಲ ಮನಶುದ್ಧಿಗಳು। ಭಕ್ತಿಯು ನಿನ್ನೊಳು ಸಮಾನತೆ ಜನದೊಳು। ಪುಟ್ಟಿಸು ಜನಕಜೆ ಹೃದಯದೊಳು॥4॥

ಹೇಗೆ ಮೆಚ್ಚಿಸಲಿ ಅರ್ಚಿಸಲಿ **ರಾಗ: ರೇವತಿ-ಛಾಪುತಾಳ**

ಹೇಗೆ ಮೆಚ್ಚಿಸಲಿ ಅರ್ಚಿಸಲಿ ನಿನ್ನನ್ನು। ನಾನು ನಾಗಶಯನ ನಾರದ ವಂದಿತನೆ॥ಪ॥ ಮಂಗಳಭೀಷೇಕಕೆ ಉದಕತರುವೆನೆನೆ। ಗಂಗೆಯುಂಗುಷ್ಠದಲಿ ಪಡೆದಿರುವೆ। ಸಂಗೀತ ಕೀರ್ತನೆ ಪಾಡುವೆನೆಂದರೆ। ತುಂಬುರು ನಾರದರು ಪಾಡುತಲಿಹರೋ॥1॥ ಪುಷ್ಪವ ತಂದು ನಿನಗರ್ಪಿಸು ವೆನೆಂದರೆ। ಪುಷ್ಪ ಪಲ್ಲವಿಸಿದೆ ಹೊಕ್ಕುಳಲಿ। ಮೂವತ್ತು ಮೂರು ಕೋಟಿ ದೇವತೆಗಳೆಲ್ಲರೂ। ಸೂಕ್ಷ್ಮ ನೇವೈದ್ಯವಿಡಲು ತೃಪ್ತನಾಗುವೆ ॥2॥ ಹಾಸಿಗೆಯನು ತಂದು ಹಾಸುವೆನೆಂದರೆ। ಶೇಷನ ಮೇಲೆ ನೀ ಪವಡಿಸಿರ್ಪೆ। ಬೀಸಣಿಗೆಯ ತಂದು ಬೀಸುವೆನೆಂದರೆ। ಬೀಸುತಿಹನು ಖಗ ತನ್ನ ರೆಕ್ಕೆಯಲಿ॥3॥

ಕೋಟಿ ಸೂರ್ಯರ ಪ್ರಭೆ ಮಿಗಿಲಾದಯೆಡೆಗೊಂದು ದೀಪ। ಹಚ್ಚಿದರೆ ಬೆಳಕಾಗುವುದೆ। ಸಾಟಿಯಿಲ್ಲದ ಲಕ್ಷ್ಮೀ ಉರಸ್ಥಳದಲಿರೆ। ದಾಷ್ಟಿಕತನವೆಂತು ಹೇಗೆ ಕಾಣಿಕೆ ಇಡುವೆ॥4॥ ನಿತ್ಯ ನಿರ್ಗುಣ ವರ್ಣ ನಿಗಮ ಗೋಚರ ನಿತ್ಯ। ಸಚ್ಚಿದಾನಂದ ಸನಕಾದಿ ವಂದ್ಯ। ಮುಕ್ತಿದಾಯಕನಮ್ಮ ಪುರಂದರಾವಿಠಲನೆ ಮುಕ್ತಿಯ ಕೊಡು ಎಂದು ಸ್ತುತಿಸಿ ಕೊಂಡಾಡುವೆ॥5॥

ಸತ್ಯಪ್ರಭು ಒಲಿದರೇ ಸಾವಿರ ವರವು **ರಾಗ: ಮೋಹನ-ಆದಿತಾಳ**

ಸತ್ಯಪ್ರಭು ಒಲಿದರೇ ಸಾವಿರ ವರವು। ಸತ್ಯಪ್ರಭು ಒಲಿದರೇ ಸಾವಿರವರವು-ಸ್ವಾಮಿ ಪ್ರೀತಿ ತೋರಿ ನಕ್ಕರೆ, ನಿತ್ಯವು ಸಂತೋಷವು॥ಪ॥ ಹಾಲ ಕಡಲ ಮೇಲೆ ಮಲಗಿ ನಿದ್ರಿಸಿಹ ಸ್ವಾಮಿಗೆ। ಹಾಲಿನ ಅಭಿಷೇಕವ ಮಾಡುವ ಬನ್ನೀ। ವೇದಗಳ ಉಳಿಸಿದ ಮತ್ಸ್ಯರೂಪಗೆ। ಮೊಸರಿನಿಂದ ಅಭಿಷೇಕ ಮಾಡುವ ಬನ್ನಿ ॥1॥ ಹಾಲ ಕಡಲ ಕಡೆವವೇಳೆ ಕೂರ್ಮರೂಪದೇ। ಬಂದವಗೇ ಜೇನಿನಿಂದ ಮೈಯ್ಯ ತೊಳೆಯಿರಿ। ಭೂಮಿಯನ್ನು ಅಸುರನಿಂದಕಾಪಾಡಿದವಗೆ। ಸಕ್ಕರೆಯ ಅಭಿಷೇಕ ಮಾಡುವ ಬನ್ನಿ॥2॥ ಪ್ರಹ್ಲಾದಗೆ ಕೃಪೆ ತೋರಿದ ನಾರಸಿಂಹಗೆ। ತುಪ್ಪದಿಂದ ಅಭಿಷೇಕ ಮಾಡುವ ಬನ್ನಿ। ಬಲಿರಾಜಗೆ ಮುಕ್ತಿಯನ್ನು ನೀಡಿದವನಿಗೆ। ಎಳೆನೀರ ಅಭಿಷೇಕ ನೀಡಲು ಬನ್ನಿ। ಗಂಗೋದಕ ಅಭಿಷೇಕ ಮಾಡುತ ಇಂದು ಸತ್ಯನಾರಾಯಣ ಪೂಜೆ ಮಾಡಿರೀ॥3॥ ಜಾನಕಿಯ ಕೈ ಹಿಡಿದ ರಾಮಚಂದ್ರನಿಗೆ। ಶ್ರೀಗಂಧದ ಲೇಪನ ತೀಡಲು ಬನ್ನಿ। ಗೀತೆಯನ್ನು ಬೋಧಿಸಿದ ಕೃಷ್ಣಮೂರ್ತಿಗೆ ಆಭರಣದ ಅಲಂಕಾರ ಮಾಡಲು ಬನ್ನಿ। ಸತ್ಯನಾರಾಯಣನಿಗೆ ಹೂವನೇರಿಸಿ ಕರ್ಪೂರದಾರತಿಯ ಮಾಡಲು ಬನ್ನಿ॥4॥

ಶ್ರೀ ಸತ್ಯನಾರಾಯಣ ಶರಣೆಂಬೆ **ರಾಗ: ಶುಭಪಂತುವರಾಳಿ**

ಶ್ರೀ ಸತ್ಯನಾರಾಯಣ। ಶರಣೆಂಬೆ॥ಪ॥ ಕಾರಕ ನೀನೇ। ಕಾರಣ ನೀನೆ। ಕಾಮಿತವೀಯುವ ಸ್ವಾಮಿಯು ನೀನೇ॥ಅ.ಪ॥ ಕರಿದೃವ ಬಲಿ ಪಾಂಚಾಲೆಯ ಪೊರೆದೆ। ಮರಣ ಸಮಯದಿ ಅಜಮಿಳ ಗೊಲಿದೆ। ದುರದೊಳು ಪಾರ್ಥನ। ಭಕುತಿಗೆ ಒಲಿದೆ। ನಿರುತವು ಭಕುತರ ಸಲಹಯ್ಯ ತಂದೆ॥1॥ ಹಿಂದಿನ ಪಾಪ ನೆನಪಿಗೆ ಬಾರದು। ಮುಂದಿನ ದಾರಿಯು ಕಾಣಲು ಸಿಗದು। ಇಂದಿರ ರಮಣ ಬಂದಿಹ ಭವದಾ। ಬಂಧನ ಬಿಡಿಸಯ್ಯ ಶ್ರೀ ಗೋವಿಂದ॥2॥

ಸತ್ಯನಾರಾಯಣ ಭಕ್ತ ಪಾರಾಯಣ **ರಾಗ: ಶುಭಪಂತುವರಾಳಿ**

ಸತ್ಯನಾರಾಯಣ ಭಕ್ತ ಪಾರಾಯಣ। ನಿತ್ಯ ಕಲ್ಯಾಣ ವಂದಿತ ಚರಣ॥ಪ॥ ನಿತ್ಯವು ನಿನ್ನ ಪಾದ ಭಜನೆಯ ಮಾಡುವ॥2ಸಾರಿ॥ ಉತ್ತಮ ಭಾಗ್ಯವ ಕರುಣಿಸು ದೇವ॥ಅ.ಪ.॥ ಶಂಖ ಚಕ್ರ ಗಧಾ ಅಭಯ ಹಸ್ತನೆ। ಪಂಕಜನೇತ್ರನೇ ಶಂಕರ ಮಿತ್ರನೆ। ಸಂಕಟ ಹರಣನೆ ಸರಸಿಜ ನಾಭನೆ। ಸಂಕರ್ಷಣನೇ ಪಂಕಜಪಾದನೆ॥1॥ ಸುಂದರ ಬದರಿಧಾಮ ವಿಹಾರನೆ। ಬಂಧುರ ಶ್ರೀಕಂಠ ಗಾನಪ್ರಿಯನೆ। ಮಂದರ ಗಿರಿಧರ ಮುರಹರ ಶ್ರೀಧರ। ವಂದಿಪೆ ನಿನ್ನಯ ಸುಂದರ ಚರಣಕೆ॥2॥ ಪೂರ್ಣಿಮೆ ದಿನದಂದು ಪೂಜಿಪ ಭಕ್ತರ। ಪೂರ್ಣಕಾಮನೆಗಳ ಕರುಣಿಪ ಹರಿಯೆ। ನಾರದ ವಂದಿತ ಚಾರು ಚರಿತನೆ। ತೋರು ಎನ್ನೊಳು ಪ್ರೇಮ ಶ್ರೀಕರ ಶ್ರೀಧಾಮ॥3॥

ಓಂ ಜಯ್ ಲಕ್ಷ್ಮೀರಮಣ (ಹಿಂದಿ) **ರಾಗ: ಕುರಂಜಿ**

ಓಂ ಜಯ್ ಲಕ್ಷ್ಮೀರಮಣಾ। ಪ್ರಭು ಶ್ರೀ ಲಕ್ಷ್ಮೀರಮಣಾ। ಶ್ರೀ ಸತ್ಯನಾರಾಯಣ್ ಸ್ವಾಮೀ। ಜನ್ ಪಾತಕ್ ಹರಣಾ॥1॥ ರತ್ನ ಜಡಿತ್ ಸಿಂಹಾಸನ್। ಅದುಭುತ್ ಛವಿ ರಾಜೇ। ನಾರದ್ ಕರತ್ ನೀರಾಜನ್। ಘಂಟಾ ಧ್ವನಿ ಭಾಜೇ॥2॥ ಪ್ರಗಟ್ ಭಯೇ ಕಲಿ ಕಾರಣ್। ದ್ವಿಜ್ ಕೋ ದರಶ್ ದಿಯೋ। ಬೂಢೋ ಬ್ರಾಹ್ಮಣ್ ಬನ್ ಕೇ। ಕಂಚನ್ ಮಹಲ್ ಕಿಯೋ॥3॥ ದುರ್ಬಲ್ ಭೀಲ್ ಕಠಾರೋ। ಜಿನ್ ಪರ್ ಕೃಪಾ ಕರೀ। ಚಂದ್ರಚೂಡ್ ಏಕ್ ರಾಜಾ। ಜಿನಕೀ ವಿಪತಿ ಹರೀ॥4॥ ವೈಶ್ಯ್ ಮನೋರಥ್ ಪಾಯೋ। ಶ್ರದ್ಧಾ ತಜ್ ದೀನೀ। ಸೋ ಫಲ್ ಭೋಗ್ಯೋ। ಪ್ರಭುಜೀ ಫಿರಿ ಸ್ತುತಿ ಕೀನೀ॥5॥ ಭಾವ್ ಭಕ್ತಿ ಕೇ ಕಾರಣ್। ಛಿನ್-ಛಿನ್ ರೂಪ್ ಧರ್‍ಯೋ। ಶ್ರದ್ಧಾ ಧಾರಣ್ ಕೀನೀ।

ಜಿನ್‌ಕೋ ಕಾಜ್ ಸರ್‍ಯೋ।।6।। ಗ್ವಾಲ್ ಬಾಲ್ ಸಂಗ್ ರಾಜಾ। ವನ್ ಮೇ ಭಕ್ತಿ ಕರೀ। ಮನ್ ಛಾಂಛಿತ್ ಫಲ್ ದೀನ್ಹೋ। ದೀನ್ ದಯಾಲ್ ಹರೀ।।7।। ಚಢತ್ ಪ್ರಸಾದ್ ಸವಾಯೋ। ಕದಲೀ ಫಲ್ ಮೇವಾ। ಧೂಪ್ ದೀಪ್ ತುಲಸೀ ಸೇ। ರಾಜೀ ಸತ್ಯದೇವಾ।।8।। ಶ್ರೀ ಸತ್ಯನಾರಾಯಣ್ ಸ್ವಾಮೀ ಕೀ। ಆರತೀ ಜೋ ಕೋಯೀ ನರ್ ಗಾವೇ। ಭಗತ್ ದಾಸ್ ಶಿವ್ ಸ್ವಾಮೀ। ಸುಖ್ ಸಂಪತಿ ಪಾವೈ।।9।।

ಶ್ರೀ ಸತ್ಯನಾರಾಯಣಮುಪಾಸ್ಮಹೇ (ಕೀರ್ತನೆ) ರಾಗ: ಶುಭಪಂತುವರಾಳಿ-ರೂಪಕತಾಳ

ಶ್ರೀ ಸತ್ಯನಾರಾಯಣಮುಪಾಸ್ಮಹೇ ನಿತ್ಯಂ। ಸತ್ಯ ಜ್ಞಾನಾನಂದಮಯಂ ಸರ್ವಂ ವಿಷ್ಣುಮಯಂ।।ಪ।। ವಾಸವಾದಿ ಪೂಜಿತಂ, ವರಮುನಿಗಣ ಭಾವಿತಂ। ದಾಸಜನ ಪರಿಪಾಲಿತಂ। ಭಾಸಮಾನ ಬದರೀಸ್ಥಿತಂ।।ಅ।। ವೈಶ್ಯಜಾತಿ ಕಾರಣಂ ವಟುವೇಷಧಾರಿಣಂ। ಕಲಿಯುಗಪ್ರಸನ್ನಂ ವಸುಪ್ರದಾನ ನಿಪುಣಂ। ಮತ್ಸ್ಯಕೂರ್ಮ ವರಾಹಾದಿ ದಶಾವತಾರ ಪ್ರಭಾವಂ। ಶಂಖಚಕ್ರಾಬ್ಜಹಸ್ತಂ ಗುರುಗುಹನುತ ಪ್ರಸಿದ್ಧಂ।।ಚರಣ।।

ಜಯ ಜಯ ಶ್ರೀ ಸತ್ಯನಾರಾಯಣ (ಕಥೆ)

ಜಯ ಜಯ ಶ್ರೀ ಸತ್ಯನಾರಾಯಣ। ಜಯ ಜಯ ಶ್ರೀ ಲಕುಮಿರಮಣ।।ಪ।। ಶ್ರದ್ಧೆಯಿಂ ಪೀಡಿಸಲ್ ಕಾಶಿಭೂಸುರನಿಗೆ ಬಗೆಬಗೆ ಸುಖಗಳನಿತ್ತೆ! ನಾರಾಯಣ ಬಡವನೆಂದು ಕಥೆ ಶ್ರೀಮಂತನ ನೋಡದೆ ಎಡಬಿಡದಲೇ ಕಾಯ್ದೆ ಕಾರ್ಯ ಘನ ।।1।। ಭಕ್ತ ಶ್ರೇಷ್ಠ ನೃಪ ಉಲ್ಕಮುಖನು ನಿನ್ನ ಭಕ್ತಿಯಿಂದ ಪೂಜಿಸುತ್ತಿರಲು। ನಾರಾಯಣ ಭಕ್ತಿಯಿಂದ ಸೇವಿಸುತಿರಲು। ಪತ್ನಿಯೊಂದಿಗೆ ನಿಂದು ಆಗ ನಿನ್ನ ಪೂಜಿಸಲು ಪುತ್ರಿ ಕಲಾವತಿಯನಿತ್ತೆ।।2।। ಧನ ಮದದಿ ಸಾಧು ನಿನ್ನ ವ್ರತ ಮರೆಯಲು ಘನ ತಾಪದಿ ಬಳಲಿದನು ನಾರಾಯಣ। ದೀನನಾಗಿ ಅತಿ ಆಗನಿನ್ನ ಪೂಜಿಸಲು ಕ್ಷಮಿಸಿ ಧನವನಿತ್ತೆ।।3।। ಪತಿ ಬಂದ ವಾರ್ತೆಕೇಳಿ ಕಲಾವತಿಯು ನಿನ್ನ ಪ್ರಸಾದವ ಸೇವಿಸದೆ ಬರಲು ನಾರಾಯಣ ಪ್ರಸಾದವ ಸೇವಿಸದೆ ಅಗಲಿದ ಪತಿಗಳ ವಾರ್ತೆಕೇಳಿ ಅತಿ ದುಃಖದಿಂದ ಹೋಗಲವರಕಾಯ್ದೆ ದಯಾಘನ।।4।। ಗೋಪಾಲರಾ ತಂದ ಪ್ರಸಾದವನ್ನು ಸೇವಿಸದೆ ಭೂಪತಿ ಅಂಗಧ್ವಜ ಬರಲು ನಾರಾಯಣ ಅಪಾರ ದುಃಖಿಯಾಗಿ ಪ್ರಸಾದವ ಸೇವಿಸಲು ಭೂಪಾಲನು ಸುಖಿಸಿದನು ದಯಾ ಘನಾ।।5।। ಸತ್ಯ ದೇವ ನಿನ್ನ ಪ್ರಸಾದವ ಸೇವಿಸಲು ಭಕ್ತಿಯಿಂದ ಪೂಜಿಸುತಿರಲು ನಾರಾಯಣ ನಿತ್ಯದಿ ಸಕಲ ಸೌಭಾಗ್ಯವನಿತ್ತು ಚಿತ್ತದಿ ವಾಸಿಸು ನೀ ದಯಾಘನಾ।।6।। ಜಗದೋದ್ಧಾರಕ ಜಾನಕಿ ರಮಣನೇ ವಿನಯದಿ ಬೇಡಿಕೊಂಬೆ ನಿನ್ನ ನಾರಾಯಣ ಜನನ ಮರಣದಿಂ ಬಿಡಿಸಿ ನಿನ್ನ ಚರಣದೊಳಗೆ ಇರಿಸೆನ್ನ ದಯಾಘನ।।7।।

ಸತ್ಯದೇವನು ನೀನು ನಿತ್ಯ (ಕಥೆ) ರಾಗ: ಕಾಪಿ

ಸತ್ಯದೇವನು ನೀನು ನಿತ್ಯ ಪಾಪಿಯು ನಾನು। ಸತ್ಯ ನಾರಾಯಣನೇ ನನಗೆ ದಾರಿ ತೋರೋ। ಬ್ರಹ್ಮ ಮಾನಸಪುತ್ರ ನಾರದಗೆ ಒಲಿದವನು। ಸತ್ಯ ಹಸ್ತನೆ ನೀನು ಬೇಗ ಬಾರೋ।।1।। ಸಂಕಟದ ಸಮಯದಲಿ ವಿಪ್ರನೆದುರಿಗೆ ಬಂದು। ವಿಪ್ರನಾರಾಯಣ ನೀನು ಪ್ರತ್ಯಕ್ಷನಾದೆ। ಸತ್ಯ ನಾರಾಯಣ ಕಥೆಯ ವ್ರತದ ಮಹಿಮೆಯ ಹೇಳಿ। ಬಳಲುತಿಹೆ ಬ್ರಾಹ್ಮಣನ ಕಷ್ಟ ಕಳೆದೆ।।2।। ಕಾಷ್ಠ ವಿಕ್ರಯಿಯಂದು ನಿನ್ನ ಪೂಜೆಯ ಮಾಡಿ ಕಷ್ಟ ಕಾರ್ಪಣ್ಯಗಳ ನೀಗಿಕೊಂಡ। ರಾಜನುಲ್ಕಾಮುಖನು ಸಂತತಿಯ ತಾ ಬೇಡಿ। ನಿನ್ನನುಗ್ರಹದಿ ಅದನು ಪಡೆದುಕೊಂಡ।।3।। ಮಕ್ಕಳಿಲ್ಲದ ಶೆಟ್ಟಿ ನಿನ್ನ ಮಹಿಮೆಯ ಕೇಳಿ। ವ್ರತವ ಮಾಡುವುದಾಗಿ ಹರಸಿಕೊಂಡ। ಸತಿಯು ಲೀಲಾವತಿಯು ಗರ್ಭವತಿಯಾದಳು। ಸತ್ಯದೇವನೆ ನಿನ್ನ ಕರುಣೆಯಿಂದ।।4।। ಒಂದು ಶುಭದಿನದಲ್ಲಿ ಹೆಣ್ಣು ಮಗು ಹುಟ್ಟಿತು। ಪೂರ್ಣ ಚಂದ್ರನ ಹಾಗೆ ಹೊಳೆ ಹೊಳೆಯುತ। ತಂದೆ ತಾಯಿಯ ಬದುಕು ಸಾರ್ಥಕವು ಆಯಿತು। ಮಕ್ಕಳಿಲ್ಲದ ಕೊರಗ ತಾನೀಗುತ।।5।। ಹುಣ್ಣಿಮೆಯ ಶಶಿಯಂತೆ ಶಿಶುವು ಬೆಳೆಯುತ್ತಿರಲು। ಆಟ ಪಾಠದಿ ಎಲ್ಲ ಮರೆತ ಶೆಟ್ಟಿ ಬೆಳೆದ ಆ ಪುತ್ರಿಯ ಮದುವೆಯ ಸಮಯದಲು। ಹರಕೆ ಒಪ್ಪಿಸಲಿಲ್ಲ ಜಿಪುಣ ಶೆಟ್ಟಿ।।6।। ಕೊಟ್ಟ ಮಾತಿಗೆ ತಪ್ಪಿ ನಡೆದ ಆ ಶೆಟ್ಟಿಯು। ಕಳೆದುಕೊಂಡನು ಎಲ್ಲ ಸಿರಿಯ ಸುಖವ। ಸತಿಯ ಪೂಜೆಯ ಫಲದಿ ಮರಳಿ ಪಡೆದನು ಎಲ್ಲ! ಧನಕನಕ ಐಶ್ವರ್ಯ ಸಕಲ ಸುಖವ।।7।। ರಾಜನಂಗಧ್ವಜನು ಬೇಟೆಗೆ

ಹೊರಟಿರಲು। ದಾರಿಯಲಿ ನಿನ್ನಯ ವ್ರತವ ಕಂಡ। ಗರ್ವದಲಿ ನಿನ್ನನ್ನು ಧಿಕ್ಕರಿಸಿ ನಡೆದಿರಲು। ಸರ್ವಸ್ವವನು ಮುಂದೆ ಕಳೆದುಕೊಂಡ॥8॥ ತಪ್ಪಿನರಿವಾಗಲು ಓಡಿ ಬಂದನು ರಾಜ। ಗೊಲ್ಲರೊಡನೊಂದಾಗಿ ವ್ರತವ ಮಾಡಿ। ಸತ್ಯದೇವನೆ ನಿನ್ನ ಭಕ್ತಿಯಲಿ ಪೂಜಿಸಲು। ಒಲಿದೆ ನೀನವನಿಗೆ ಎಲ್ಲ ನೀಡಿ॥9॥ ನಿಷ್ಠೆಯಲಿ ಪೂಜಿಸಲು ಒಲಿವ ನಾರಾಯಣನೆ। ನಿನ್ನ ನಂಬಿದ ಜನಕೆ ಇಲ್ಲ ಭಯವು। ಸತ್ಯ ಸಾಗರ ನೀನು ಸತ್ಯ ನಾರಾಯಣನೆ। ನಿನ್ನ ನಂಬಿದ ಜನಕೆ ಎಲ್ಲೆಲ್ಲು ಜಯವು॥10॥

ಸತ್ಯಾತ್ಮಕ ಲಕ್ಷ್ಮೀಕಾಂತ (ಕಥೆ) ರಾಗ: ಶ್ರೀರಾಗ

ಸತ್ಯಾತ್ಮಕ ಲಕ್ಷ್ಮೀಕಾಂತ ಮುಕುಂದ ಪಾಲಿಸು ಗೋವಿಂದ॥ಪ॥ ಭೃತ್ಯರು ಮರ್ತ್ಯರು ಕಾಮಧೇನು ಮಹದೈತ್ಯ ಕುಲಾಂತಕ ಶ್ರೀನಾರಾಯಣ॥ಅ.ಪ॥ ಆ ನಾರದ ವಚನದಿ ಕಷ್ಟವ ತಿಳಿದು ನರಕಸ್ಥಿತಿ ಜನರ। ಶ್ರೀನಾಥನು ಪೇಳಲು ನೋಹಿಯನೊಂದು। ದೀನಜನಾವನ ದಕ್ಷ ದೀಕ್ಷ ಬುಧ ಗಾನಲೋಲ ಪುರುಷೋತ್ತಮ ಸರ್ವದಾ ವಾರಾಣಸಿಯಲ್ಲಿಹ ವಿಪ್ರನು ಬಡವ ಕರುಣಾಕರ ದೇವಾ॥1॥ ಸಾರೀವ್ರತ ಪೇಳಲು ಅವನದ ಮಾಡೆ ಘೋರ ದರಿದ್ರನ ಬವಣೆಯು ಹಿಂಗಿತು। ಭೂರಿ ಸರ್ವಸುಖ ಆತನಿಗೊದಗಿತು॥2॥ ಕಾಷ್ಠವ ಮಾರುತ ಶೂದ್ರನು ಬರಲು ಈ ವ್ರತವನು ಮನದಲಿ ಶ್ರೇಷ್ಠವೆಂದೆನಿಸಿ ಮಾಡಿದ ತಾನು ಕಷ್ಟ ಪರಂಪರೆ ಬಿಟ್ಟಿತು ಅವಗೆ ಉತ್ಕೃಷ್ಟ ಸರ್ವಸುಖ ಕೈ ಸೇರಿತು ಆಹಾ॥3॥ ಸಾಧುತಾ ಈ ವ್ರತವನು ಮಾಡುವೆನೆಂದು ಮಾಡದೆ ಇರಲಾಗಿ। ಭಾಧೆಗಳು ಬಂದವು ಬಹುವಿಧವಾಗಿ। ಮಾಧವ ಪೂಜೆಯ ಮಾಡಲು ಕಡೆಗವ ಖೇದವ ಕಳೆದತಿ ಮೋದವ ಪೊಂದಿದ॥4॥ ಶ್ರೀರಾಘವ ಹೊಂದಿದ ಪೂಜಾ ಫಲದಿ ಸಿರಿಕಾಂತೆಯಾನಾಗ ಆ ರಾಜಗೆ ಸಂತತಿಯಾಗದೆ ಇರಲು ಈರ್ವರು ಮಾಡಿದ ಪೂಜಾ ಫಲದಿ ಮಾರನ ಪಿತ ಸಂತಾನವನಿತ್ತನು॥5॥ ಗೋಪಾಲಕ ಮಂಡಳಿ ವ್ರತ ಮಾಡುತ್ತಿರಲು ಕಾನನದೊಳಗಲ್ಲಿಗೆ ಭೂಪಾಲಕ ಬಂದನು ಬೇಟೆಗೆ ಅಲ್ಲಿ। ಅಪರಾಧದಿ ಬಹು ಖೇದವ ಪೊಂದಿದ ಕೃಪೆಯಿಂದೀಶನ ಮೋದವ ಪೊಂದಿದ॥6॥ ಮಂಗಳಂ ಸತ್ಯಸ್ವಾಮಿ ಪರೇಶ ದುರಿತ ಕುಲವಾಸ ಸಂಗೀತಪ್ರಿಯ ಮುನಿಜನ ಪೋಷ ಗಂಗಾ ಜನಕ ಪದಾಂಬುಜ ಭವಭವ ಹಿಂಗದೆ ಪೊರೆಯುವ ಶೃತ ಶೈಲನಿವಾಸ॥7॥

ಮಹಿಮೇ ಪೇಳುವೆ ಕೇಳಿರಿ (ಕಥೆ)

ಮಹಿಮೇ ಪೇಳುವೆ ಕೇಳಿರಿ। ತ್ರಿಜಗದೊಡೆಯನ॥ಪ॥ ಮಹಿಮೇ ಪೇಳುವೆ ಕೇಳಿ ಮಹನೀಯರೆಲ್ಲರು। ಮಹಿಯೋಳು ಭರಿತಮಾದ ಸತ್ಯಾದೇವರ ಪೂಜೆ॥ಅ.ಪ.॥ ನೈಮಿಷಾರಣ್ಯದೊಳಗಿನ। ಮಮಕಾರ ತೊರೆದ ಋಷಿಗಳೆಂಬುವರೆಲ್ಲರು। ಪಾಮರರು ನಾವು ಪ್ರೇಮವಿಟ್ಟೆಮ್ಮೊಳು। ಪ್ರೇಮಾಕಾರನ ಚರಿತೆ। ನೇಮದಿಂ ಪೇಳ್ವುದು। ಅಂದು ಸೂತಋಷಿ ಚಂದದಿಂದಲಿ। ಇಂದಿರೇಶನ ಚರಿತೆಗಳೆಲ್ಲವ। ಹಿಂದೆ ನಾರದಗೆ ಹರಿಪೊರೆದಾಪರಿಯಿಂದ ನುಡಿದರಾನಂದದಿ ಹರಿಯಾ॥1॥ ಸತ್ಯೇಶನೊಂದು ದಿನದಲಿ। ಸತ್ಯವ ತೋರೆ ವೃದ್ಧ ವಿಪ್ರನ ವೇಷದಿ। ಮರ್ತ್ಯಲೋಕದ ಕಾಶಿ ಪುರಿಯೋಳು ನೆಲಸಿಹ। ನಿತ್ಯವೃತ್ತಿಯ ವಿಪ್ರಗೆ। ವೃತ್ತಾಂತವೆಲ್ಲ ಪೇಳಿ। ಸತ್ಯದೇವನ ಪೂಜೆಯನೆಸಗಿ। ನಿತ್ಯವು ಧರೆಯೊಳು ಸುಖದಿಂ ಬಾಳಿ। ಉತ್ತಮ ಕಾಷ್ಠಗ್ರಾಹಿಗೆ ಪೇಳಿ। ಚಿತ್ತವ ಶ್ರೀಹರಿ ಪಟ್ಟದೊಳಗಿಟ್ಟ॥2॥ ಇಂತೀ ಪೂಜೆಯ ನರಿತನು। ಕಾಂತೆಯೊಡನೆ ಉಲ್ಕಾಮುಖರಾಜನು। ಸಂತೋಷದಿಂದಲಿ ಶಾಂತ ಮೂರ್ತಿ ಯನ್ನು ದಾಂತಾ ಪೂಜಿಸುತಿರೆ। ಪಾಂಥಾವರ್ತಕ ಬರಲು।ಸಾರ್ಥಕವಾಯಿತು ಜನ್ಮ ವಿದೆಂದು। ಕಾಂತೆಗೆ ಪೇಳಲು ಹರಿ ಕರುಣೆಸಿದಾ। ಸಂತಸವೀಯಲು ಸುತೆತಾ ಜನಿಸಲು। ಅಂತೂ ಮರೆತರಾ ಸಿರಿಕಾಂತನನು॥3॥ ಕನ್ಯೆಯ ಧಾರೆ ಎರೆದನು। ಮುನ್ನಿನ ವ್ರತವನು ತಾ ಮಾಡದಾದನು। ಬನ್ನ ಬಡಿಸಿ ಇವರ। ಬೆನ್ನ ಹತ್ತಲು ಹರಿ। ಕನ್ನೆ ತಾ ಪೂಜೆಯರಿತು। ರನ್ನೆ ಪೂಜೆಯನೆಸಗೆ। ಸನ್ನುತ ಮಹಿಮನು ಸಂಕಟ ಹರಿಸುತ। ಮನ್ನಿಸಿ ಇವರಿಗೆ ಮಂಗಳವಿತ್ತನು। ತನ್ನಯ ಪುರಕಾಂ ಗಮಿಸುತಲಿರಲು ಸತ್ಯಪ್ರಭು ತಾ ಕೇಳಿದನಿವರ॥4॥ ಸಾಧೂ ನಾವೆಯಲ್ಲೇ ನದು। ಸನ್ಯಾಸಿಯಾಗಿ ಒಯ್ಯುವುದೇನು ನಾವೆ। ಲತೆಕಪರ್ನವಿರುವುದು ಹೋಗೋ ಎಂದೆನ್ನಲು। ಅಂತೇ ಅಪ್ಪುದು ಎಂದು ಸನ್ಯಾಸಿ ಕುಳಿತಿರೆ। ಅತಿ ತ್ವರ್ಯದೊಳು

ಹಡಗನ್ನೇರಲು। ಧನವಿಲ್ಲದುದಾ ನೋಡಿ ಹೆದರುತಾ। ಮತಿಗೆಟ್ಟವನಾಗಿ ಸನ್ಯಾಸಿಯೊಳು। ಹಿತದಿಂ ಬೇಡಲು ಧನವಿತ್ತನು ಹರಿ॥5॥ ಪುರಕೆ ಬಂದುದಾ ತಿಳಿಸಲು। ಅರಸಿಯರು ಪತಿಯ ನೋಡಲಿ ಬೇಕೆಂದು ಕುವರೀ ಪೂಜೆಯ ಮುಗಿಸಿ। ಪ್ರಸಾದ ತ್ಯಜಿಸಲು। ಅರಿಯದೆ ಪತಿಯನು। ಮರುಗುತಿರಲು ಪಿತನು। ಕಂಬುಕಂಧರನೆ ಕಾಪಾಡೆನ್ನಲು। ಅಂಬರವಾಣಿಯ ಪಠಿಸುತೆ ನುಡಿಯಲು। ತುಂಬಿ ಮೋದದಲಿ ಪತಿಯನು ನೋಡಿ ಪ್ರಭುವಿನ ಪೂಜೆಯನೆಸಗುತ ಸುಖದೀ॥6॥ ಅಂಗಧ್ವಜಾ ಬೇಟೆಯೊಳ್ ಭಂಗವ ಪಟ್ಟು ತಂಗುತ ಮರದಡಿಯಲಿ ಮಂಗಳಮಹಿಮನ ನೈವೇದ್ಯ ಬಿಡಲಾಗ। ಭಂಗಾವ ಪಟ್ಟು ನೃಪತಿಂದು ನೈವೇದ್ಯವ ಸುತಸಿರಿಗಳನು ಹಿತದಿಂ ನೋಡಿ। ಮತಿವಂತನು ನೃಪಪೂಜೆಯ ಮಾಡಿ। ಹಿತದೀ ಕಥೆಯನು ಹೇಳಿ ಕೇಳಿದಗೆ ನಿತ್ಯಾನಂದ ವಿಠಲನು ಸುಖವೀವ॥7॥

ಜಯ ಸತ್ಯನಾರಾಯಣ (ಕಥೆ) **ರಾಗ: ಆನಂದಭೈರವಿ-ಖಂಡಛಾಪುತಾಳ**

ಜಯ ಸತ್ಯನಾರಾಯಣ ಜಯ ಸತ್ಯಭಾಮೇಶ ಜಯ ಸತ್ಯಗಣಪತಿಯೆ ಜಯತು ಜಯತು॥ಪ॥ ನೈಮಿಷಾರಣ್ಯದಲಿ ಶೌನಕಾದಿಗಳೊಮ್ಮೆ। ಪ್ರೇಮದಿಂ ಸೂತರನು ಕೇಳಲಾಗ॥ ಭೂಮಿಯಲಿ ಬಳಲುತಿಹ ಕಲಿಯುಗದ ಜನಗಳಿಗೆ। ಕಾಮಿತವ ನೀವೊಂದು ವ್ರತವ ಪೇಳಿದರು॥1॥ ವ್ರತವಿಹುದು ಸತ್ಯನಾರಾಯಣನ ಪೂಜೆಯದು। ಸತತ ಕಷ್ಟವನೆಲ್ಲ ಪರಿಹರಿಸುವುದದು॥ ಕಂತುಪಿತ ನಾರದನು ಪೇಳಿದನು ಮೊದಲಿದನು। ಚಿಂತಿಸಿದ ಫಲಗಳನು ಕೊಡುವುದಿದುವೆ ॥2॥ ಭಕ್ತಿಯಿಂದರ್ಚಿಸುತೆ ಸತ್ಯನಾರಾಯಣನ। ಉತ್ತಮ ವಿಧಿಯಂ ಬಿಡದೆ ವರುಷ ನಾಲ್ಕರೊಳು॥ ಭಕ್ತಿಯಿಂದಾಚರಿಸಿ, ನಿಯಮದುದ್ಯಾಪನೆಯ। ಮುಕ್ತಿಯನು ಸುಲಭದಲಿ ಪಡೆಯಬಹುದು॥3॥ ವಿಪ್ರನೋರ್ವನು ತಾನು ಭಿಕ್ಷೆಯಿಂ ಜೀವಿಸುತಿರಲು। ವಿಪ್ರವೇಷದಿ ಬಂದು ಕಾರುಣ್ಯ ಸಿಂಧು॥ ಅಪ್ರಮೇಯನು ಕೇಳಲೀ ವ್ರತವನಾಚರಿಸಿ। ಕ್ಷಿಪ್ರದಲಿ ಸಂಪದವ ಪಡೆದನಂದು॥4॥ ವಿಪ್ರನೀಪರಿಯಲ್ಲಿ ವ್ರತವನಾಚರಿಸುತಿರೆ। ಕಾಷ್ಠ ವಿಕ್ರಯಿಯೋರ್ವ ನೀರಡಿಸಿ ಬಂದು। ಹೊತ್ತ ಸೌದೆಯ ಹೊರೆಯನಿಳುಹಿ ಪೂಜೆಯ ಕಂಡು। ವಿಧಿಯನೆಲ್ಲವ ಕೇಳ್ದ ತಾ ಮಾಡಲೆಂದು॥5॥ ಸಂಕಲ್ಪವಂ ಮಾಡಿ ಕಟ್ಟಿಗೆಯ ಮಾರುತಲಿ। ದ್ವಿಗುಣ ಧನವನು ಪಡೆದ ಭಕ್ತಿಯಿಂದ॥ ಸತ್ಯನಾರಾಯಣನ ಪೂಜಿಸುತಲಿಹಪರದ। ಸಕಲ ಸೌಖ್ಯಗಳನ್ನು ಪಡೆದನಾಗ॥6॥ ರಾಜನುಲ್ಕಾ ಮುಖನು ಸಂತತಿಯ ಬಯಸುತಲಿ। ವ್ರತವನಾಚರಿಸುತಿರೆ ವರ್ತಕನು ಕಂಡು॥ ಮಕ್ಕಳಾದರೆ ತಾನು ವ್ರತವ ಮಾಡುವೆನೆಂದು। ಹರಕೆಯನು ಹೊತ್ತನಾ ಶೆಟ್ಟಿ ಮನದೊಳಗೆ॥7॥ ಸತಿಯು ಲೀಲಾವತಿಯು ಗರ್ಭವನು ತಳೆದಳ್ಳೆ। ಸತ್ಯನಾರಾಯಣನ ಕರುಣೆಯಿಂದ॥ ಕನ್ಯೆಯನು ಪಡೆದಳಾ ಶಿಶು ಕಲಾವತಿಯೆಂದು। ಶುಕ್ಲ ಶಶಿಯಂದದಲಿ ಬೆಳೆದಳಾಗ॥8॥ ವರ್ಷತುಂಬಲಿಯೆಂದು ಮದುವೆ ಸಮಯದೊಳೆಂದು। ವ್ರತವ ಮುಂದೂಡುತಲಿ ಮರೆತನಾಗ॥ ಸತ್ಯದೇವನು ತಾನು ಧನಮದವನಿಳಿಸಲ್ಕೆ। ಶಪಿಸಿದನು ದಾರುಣದ ಕಷ್ಟಬರಲೆಂದು॥9॥ ವಾಣಿಜ್ಯ ವೃತ್ತಿಯಿಂ ರತ್ನಸಾರಾ ಪುರಕೆ। ಅಳಿಯನೊಂದಿಗೆ ತೆರಳಿ ದುಡಿಯುತಿರಲು॥ ನೃಪಚಂದ್ರಕೇತುವಿನ ಧನವ ಚೋರರು ಕದ್ದು। ತಂದಿವರ ಬಳಿಯಿರಿಸಿ ಕಾಣದಾದಾಗ॥10॥ ರಾಜದೂತರು ಬಂದು ಬಂಧಿಸಿದರೀರ್ವರನು। ದೇವಮಾಯೆಯೊಳವರ ಮಾತನಾಲಿಸದೆ॥ ಸೆರೆಯೊಳಿಟ್ಟರು ಸಕಲ ಧನಕನಕ ವಸ್ತುಗಳ। ಬೊಕ್ಕಸಕ್ಕೆ ಸುರಿದರು ಲೆಕ್ಕವಿಲ್ಲದೆಲೆ॥11॥ ಇತ್ತ ಲೀಲಾವತಿಯ ಮನೆಗೆ ಕಳ್ಳರು ಹೊಕ್ಕು। ವಿತ್ತವನ್ನಪಹರಿಸೆ ತಿರಿದು ತಿನ್ನುತಲಿ॥ ಬಳಲುತಿರೆ ಮಗಳೊಮ್ಮೆ ತಾ ಕಂಡ ಪೂಜೆಯನು। ವಿವರಿಸಲು ನೆನೆದಳ್ಳೆ ವ್ರತವ ಬಿಟ್ಟಿರುವುದನು॥12॥ ತಾಯಿಮಗಳಿಬ್ಬರೂ ಭಕ್ತಿಯಿಂ ಪೂಜಿಸುತೆ। ತಮ್ಮಯಪರಾಧಗಳ ಮನ್ನಿಪುದುಯೆಂದು॥ ತಮ್ಮ ಪತಿಗಳು ಬರಲು ವ್ರತವ ಮಾಡುವೆವೆಂದು ಬೇಡೆ। ದಯದೋರಿದನು ಕಾರುಣ್ಯಸಿಂಧು॥13॥ ಅತ್ತ ಸೆರೆಯೊಳಗಿಟ್ಟ ಬಂಧಿಗಳನೀರ್ವರನು । ಬಿಡುತವರ ಧನವ ಕೊಡುಯೆಂದು ಕನಸಿನಲಿ॥ ಪ್ರಭುಪೇಳೆ ನೃಪ ಬೆದರಿ ಲೆಕ್ಕವಿಲ್ಲದಿರಲ್ಕೆ। ಒಂದಕ್ಕೆ ಹತ್ತಾಗಿ ಕೊಟ್ಟು ಕಳುಹಿದನು॥14॥ ದಂಡಿವೇಷದಿ ಬಂದು ಪರಿಕಿಸಲು ನಾವೆಯೊಳು। ಸೊಪ್ಪು ಸದೆಯಿಹುದೆಂದುದದೆ ಸತ್ಯವಾಯ್ತು। ಕ್ಷಮೆಯ ಬೇಡಲು ಬಳಿಕ ಕೊಟ್ಟನೆಲ್ಲವ ತಿರುಗಿ ಊರುಕಾಣಲು ಮನೆಗೆ ಹೇಳಿಕಳುಹಿದರು॥15॥ ಪತಿಗಳೈತಂದರೆಂದುದ ಕೇಳಿ ಸಂಭ್ರಮದಿ। ತಾಯಿಹೊರಡಲು ಮಗಳು ಪೂಜೆಯ

ಮುಗಿಸಿ।। ದೇವಪ್ರಸಾದವನು ಮರೆಯುತೋಡುತ ಬರಲು। ಪತಿಯು ನಾವೆಯ ಸಹಿತ ಕಾಣದಾದನು।।16।। ಹೋ ಎಂದು ಗೋಳಿಟ್ಟು ದೇವನನು ಮೊರೆಹೋಗಲು। ಬಾನ್ನುಡಿಯ ಕೇಳಿ ಪ್ರಸಾದವನು ಭುಜಿಸಿ ಬರಲು।। ತೇಲಿತಾ ನಾವೆಯದು ಪತಿಯೊಡನೆ ಭಕ್ತಿಯಲಿ। ಆಚರಿಸಿ ವ್ರತವನು ಸಕಲ ಸುಖವ ಹೊಂದಿದರು।।17।। ರಾಜನಂಗಧ್ವಜನು ಬೇಟೆಯಾಡುತ ಬಂದು। ಗೊಲ್ಲರಾಚರಿಸುತಿಹ ವ್ರತವ ಕಂಡು।। ಗರ್ವದಿಂ ತ್ಯಜಿಸುತ್ತೆ ದೇವಪ್ರಸಾದವನು। ಕಳೆದುಕೊಂಡನು ಸಕಲ ಸಿರಿಯ ಸುತರೊಡನೆ ।।18।। ಮದವಿಳಿಯೆ ಗೊಲ್ಲರೆಡೆಗೈತಂದು ಭಕ್ತಿಯಲೀ। ವ್ರತವ ಮಾಡುತೆ ಗೋಪಬಾಲರೊಡನೆ। ಸುತರೊಡನೆ ಸಿರಿಯ ತಾ ತಿರುಗಿ ಪಡೆದನು ಜಗದಿ। ಸತ್ಯದೇವನ ಎ ೧ಹಿಮೆ ಪೇಳಲಸದಳವು।।19।। ಸತ್ಯನಾರಾಯಣನೆ ಸತ್ಯ ಬಾ ಮಾಧವನೆ। ಸತ್ಯಗಣಪತಿರೂಪ ಸತ್ಯನಾಥ।। ಸತ್ಯ ಮಂಗಳ ನಿತ್ಯ ನೀ ಚಿದಂಬರ ರೂಪ। ಸತ್ಯನಿಧಿ ಸತ್ಯೇಶ ಶುಭಮಂಗಳಂ।।

ಶ್ರೀ ಸತ್ಯನಾರಾಯಣನಿಗೆ ಸತ್ಯ (ಕಥೆ) ರಾಗ: ಭೈರವಿ-ಖಂಡಛಾಪು

ಶ್ರೀ ಸತ್ಯನಾರಾಯಣನಿಗೆ ಸತ್ಯ ಸಂಕಲ್ಪಗೇ। ನಿತ್ಯ ನಿರ್ಮಲ ಸುಗುಣ ಸತ್ಯೇಂದ್ರಗೇ।। ಮೃತ್ಯುವರ ಕಪಿರಾಜ ವಿಪ್ರವಾಂತಕ ಸತ್ಯ। ಲೋಕೇಶನುತ ಶ್ರೀಕಾಂತಗೇ।।1।। ಜಯಮಂಗಳಂ ನಿತ್ಯ ಶುಭಮಂಗಳಂ।।ಪ।। ಶ್ರೀರಮಣ ನಿಜಪುರದಿ ನಾರದಗೆ ಪೇಳಿದ। ವಾರಣಾಸಿಯೊಳಿಪ್ಪ ವಿಪ್ರಗೆಂದೂ। ಭೂರಿ ಕರುಣದಿ ದಿವ್ಯ ನೋಹಿಯನು ಮಾಡಿದರೆ। ಘೋರಕಷ್ಟವು ನೀಗಿ ಸುಖಿಯಾದೆನೋ।।ಜಯ।।2।। ವಿಪ್ರಮಾಡಿದ ವ್ರತ ಸಮಯದಲ್ಲಿ। ಅಲ್ಲಿಪ್ಪ ತಪ್ಪದೆ ಸರ್ವರನು ತಿಳಿದು। ಸರ್ಪಶಯನನ ಭಕ್ತ ಶೂದ್ರತನದಿ ಮಾಡೇ। ಅಪ್ರಮೇಯ ಶ್ರೀಶ ಆತಗೊಲಿದಾ ।।ಜಯ।।3।। ದೇವದೇವನ ಪೂಜೆಯೊಳಗಿದ್ದ ಬಹುಭಕ್ತಿ। ಭಾವದಿಂದಲೆ ನದಿಯ ತೀರದಲ್ಲೀ। ಯಾವ ಜನ್ಮದ ಸುಕೃತ ಫಲದಿಂದಲೋ। ರಾಜ। ನಾವಿಕನು ಬಂದು ಬೆಸಗೊಂಡ।।ಜಯ।।4।। ಏನಿದರ ಫಲವೆಂದು ಭಕ್ತಿ ಮನದೊಳಗೇ। ತಾನೇನ ಬೇಡುವೆನು ಅದ ಹರಿ ಕೊಡುವನು। ನಾನು ಬೇಡುವೆನು ಎನಗೆ ಸಂತಾನವನು। ದೇವ ಶ್ರೀನಿಧಿ ಕೊಡಲದನ ಮಾಳ್ಪೆ।।ಜಯ।।5।। ಏನೆಂಬೆ ಹೊಂದಿದನು ಸಂತಾನ ಪುತ್ರಿಯನು। ತಾನೊಬ್ಬ ವೈಶ್ಯ ಪುತ್ರಗೆ ಕುವರಿಯಂ। ದಾನವನು ಕೊಟ್ಟ ಅಳಿಯನಿಂದ ಕೂಡಿ। ರತ್ನ ಸಾನುಪುರದಲಿ ಮಾಡಿದ ವ್ಯಾಪಾರವಾ।।ಜಯ।।6।। ಮುತ್ತು ನವರತ್ನ ಮತ್ತೆ ಆ ನಗರಪತಿ। ಸೊತ್ತು ಚೋರರು ಇವನ ಬಳಿಯಲಿಡಲೂ। ಮತ್ತೆ ರಾಯನ ಭಟರು। ಮುತ್ತಿ ಸೆಳೆತಂದಿವರ ಮಿತ್ರ ಹರಿವರೆಂದು ಸೆರೆಯೊಳಿಡಲೂ।।ಜಯ।।7।। ಅನ್ನಸತ್ರಗಳಿರದ ಉಣವು ದೊರೆಯದಂದದಿ। ಅನ್ಯರನು ಸೇವಿಸುವ ದಾಸಿಯರಂತೆ। ಕನ್ಯೆಯಿಂದಲಿ ಕೂಡಿ ಮಡದಿ ತಾ ಪ್ರತಿದಿನವು ಕಣ್ಣೀರು ಸುರಿಸುತ ಕಾಲವನು ಕಳೆಯೇ ।।ಜಯ ।।8।। ಸತ್ಯ ಪೂಜೆಯೊಳಿದ್ದ ವಿಪ್ರವರ ಮಂದಿರದಿ। ಪುತ್ರಿ ನೋಡುತ ಕುಳಿತಳೊಂದು ರಾತ್ರಿ। ಉತ್ತಮೋತ್ತಮವಾದ ಸತ್ಯ ಪ್ರಸಾದವನು। ಅತ್ಯಂತ ಭಕ್ತಿಯಲಿ ಕೈಗೊಂಡಳು।।ಜಯ।।9।। ಕೋಪಿಸಿದಳಾಮಾತೆ ಮಗಳ ಚರ್ಯವ ಕಂಡು। ತಾಪದಿಂದಲೆ ಬಹಳ ನೋಡಿದಳಾಕೆ। ಓ ಪುತ್ರಿ ಈ ರಾತ್ರಿ ಎನ್ನಗಲಿ ಬಹಳ। ಅಪರಾಧವನು ಮಾಡಬಹುದೇ।।ಜಯ।।10।। ತಾಯೆ ಪೇಳುವೆ ಸರ್ವವ ಕೇಳೊಂದು ನಿಜವನ್ನು। ಕಾಯಜನ ಪಿತನ ಪೂಜೆಯನ್ನೆ ಪೇಳೆ। ನಾಯಕನು ನಮ್ಮಿಂದ ಮಾಡದೆ ಬಿಡಲಾಗಿ। ಆಯಿತೀ ಭವಣೆ ನಮಗೆಂದು ತಿಳಿದೂ।।ಜಯ।।11।। ಮಾಡಿದಳು ಜನನೀ ಸಹಿತ ಸತ್ಯಪೂಜೆ ವ್ರತವ। ಬೇಡಿದಳು ಕಾಪಾಡು ನಮ್ಮನೆಂದು। ರೂಢೀಶ ಎನ್ನಪತಿ ಬರಲಿ ಬೇಗದಲಿ। ಕೂಡಿ ಪರಿವಾರ ಜಾಮಾತೃ ಸಹಿತಾ।।ಜಯ।।12।। ಆ ವನಿತೆ ಮಾಡಿದ ಸೇವೆಗೊಲಿದು ಸತ್ಯ। ಸ್ವಪ್ನದಿ ಪೇಳಿದಾ ರಾಯನಿಗೆ। ಅವರಿಬ್ಬರನು ಸತ್ಕರಿಸಿ ಬಹು ಧನವ। ನ್ಯಾವಪರಿ ಕೇಳಿದರು ಕೊಟ್ಟು ಕಳುಹು।।ಜಯ।।13।। ರಾಯನ ಪರಿವಾರದೊಡನೆ ನಾವಿಕರು ಬರುತಿರಲು। ತಾ ಯತಿ ರೂಪದಿಂ ಸತ್ಯ ದೇವನೂ। ನ್ಯಾಯಮಾರ್ಗವ ಮೀರಿ ನಡೆದರೆಂತೆಂಬುದು। ಕಾಯಜಪಿತನ ನೋಡಿ ಬೆಸಗೊಂಡ ।।ಜಯ।।14।। ನಿಮ್ಮ ನಾವೆಯೊಳೇನು ತುಂಬಿಹುದೆನಲು। ನಮ್ಮ ನಾವೆಯ ಸುದ್ದಿ ನಿಮಗೇತಕೇ। ಸುಮ್ಮನೇ ಹೋಗೆಲವೊ ಇದರೊಳಗೇ ಸಾಮಾನ್ಯದಾ ಲತೆಯು ಪತ್ರೆಗಳಿವೆ ಎಂದನೂ।।ಜಯ।।15।। ಆಗಲೀಪರಿ ಎಂದನು ಪೋಗುತ್ತ ನಾವೆ। ಆದುದವರು ಮುನ್ನ

ಪೇಳಿದಂತೆ। ಸಾಧಕರು ಕಂಡು ಮನದೊಳು ಶೋಕಗೊಂಡು। ಮೇದಿನಿಯೊಳ್ ಒರಗಿದನು ಮೂರ್ಛೆಯಿಂದಾ।।ಜಯ।।16।। ಎಚ್ಚರಿತು ತಾ ಅಳಿಯ ಪೇಳಿದನು ಮಾವಗೆ। ಮೆಚ್ಚುವಂದದಿ ಮಾಡೆಯೋಗಿ ವರನಾ। ಇಚ್ಛೆಯನು ಕೊಡಲಾರೆ ಎನುತ ಕೆರಳಿದನು। ಅಚ್ಚುತನಿಗೊಂದಿಸಲು ಆತ ಪೇಳ್ದಾ।।ಜಯ।।17।। ಕಷ್ಟಬಂತೆಲೋ ನಿನಗೆ ಎನ್ನ ಮರೆಯಲು ನೀನು। ಅಷ್ಟ ಭವಣೆಗಳೆನ್ನ ಕೋಪದ ಫಲವೋ। ಸಾಷ್ಟಾಂಗವೆರಗಿ ಕೈಮುಗಿದು ಬೇಡಿದನು। ದುಷ್ಟರಾಂತಕ ನೀನು ದೇವದೇವ ಕಾಯೋ।।ಜಯ।।18।। ಬುದ್ಧಿ ಬಂದಿತು ಎನಗೆ ನಿನ್ನ ಪೂಜೆಯ ಮಾಡ್ವೆ। ಬದ್ಧನಾಗಿರುತಿಹೆನೂ ಎನ್ನ ನಾವೆ। ಇದ್ದರೀತಿಯೊಳಿಟ್ಟು ಎನ್ನ ಹರಿ ಕಾಯೋ। ಉದ್ಧರಿಸೋ ನೀ ಎನ್ನ ಹರಿ ಬೇಡಿಕೊಂಬೇ।।ಜಯ।।19।। ಆಗ ವರವನು ಕೊಟ್ಟು ಅದೃಶ್ಯನಾಗಲು ಹರಿಯು। ಬೇಗ ಮಾಡಿದ ಸಾಧುವಾ ವ್ರತವನೂ। ಹೋಗಿ ಸುದ್ದಿಯ ಪೇಳಿ ತನ್ನ ಮಡದಿಯ ಬಳಿಗೇ। ಯೋಗ್ಯ ಭೃತ್ಯರನು ಕಂಡು ಮುದದೀ।।20।। ಕೇಳಿ ಸಕಲವ ತಿಳಿದು ಸತ್ಯ ಪೂಜೆಯನೆ ಮಾಡಿ। ಕಾಲ ಮೀರದೆ ಸತ್ಯ ಪ್ರಸಾದವ ಕೊಂಡುಬಾರೆಂದು। ಹೇಳಿ ಮಗಳೆ ನಾ ಪೋಗುವೆನು ಮುಂದಾಗಿ। ಬಾಲೆ ನೀ ಪ್ರಸಾದವನು ಕೊಂಡುಬಾರೆಂದೂ ।।ಜಯ।।21।। ಹಿಂದೆ ಬಂದಳು ಮಗಳು ಬಿಟ್ಟು ಪ್ರಸಾದವನು ತಂದೆ ಇದ್ದಲ್ಲಿಗೆ ಶೀಘ್ರದಿಂದಾ। ಚಂದದಿಂ ನಾವೆಯ ಮೇಲೆ ಕಂಡಳು ಪತಿಯ। ಹೊಂದಿದಳು ಮೋಹವ ಮನದಿ ಬಹಳಾ।।ಯಜ।।22।। ನಾವೆ ಮುಳುಗಿತು ಒಡನೆ ಪತಿಯ ಕಾಣದೆ ತನ್ನ। ಆ ವನಿತೆ ಶೋಕಪಡಲು ಕಂಡು। ದೇವ ಸತ್ಯನ ಮಹಿಮೆ ಎಂದು ಚಿತ್ತದಿ ಸಾಧು। ನಾವಿಕನು ಹರಿಯ ಧ್ಯಾನಿಸಿದನೂ।।ಜಯ।।23।। ಆಗಸದಲಶರೀರವಾಣಿ ಕೇಳಿತು ಪುತ್ರಿ। ತಾ ಗರ್ವದಿಂದುಪೇಕ್ಷಿಸೀ ಬಂದಳೂ। ಯೋಗಿ ಮಾನಸ ಹಂಸ ಸತ್ಯಪ್ರಸಾದವನು। ಬೇಗ ಭುಂಜಿಸಿ ಬರಲು ಪತಿಯ ಕಾಂಬೆನೆನುತಾ।।ಜಯ।।24।। ಆಗ ಬಂದಿತು ಬವಣೆ ಮರಳಿ ಮನೆ ಸೇರಿ । ನಾಗಾರಿ ವಾಹನ ಸತ್ಯೇಶನಾ ದೇವನಾ। ಯೋಗಿ ಗಮ್ಯನ ಹರಿಯ ಪರಮ ಪ್ರಸಾದವನು ಬೇಗ ಭುಂಜಿಸಿ ಬಂದು ಪತಿಯ ಕಂಡಳೂ।।ಜಯ।।25।। ಅಂದಂತೆ ಮಾಡಿ ತೀರಕೆ ಬಂದಳು ಮರಳೀ। ಇಂದಿರೇಶನ ಕರುಣ ಬಂದಿತಾಗ। ಮಂದಿ ಸಂದಣಿ ಸಹಿತ ಪತಿಯ ಕಂಡಳು ಬಾಲೆ। ಸಿಂಧೂ ತೀರದಿ ಧನವ ದ್ವಿಜರಿಗಿತ್ತೂ।।ಜಯ।।26।। ಬಂದು ಪಟ್ಟಣವಾ ಸೇರಿ ಸತ್ಯಾನ ಪೂಜೆಯಿಂದ ಸಕಲಾಭೀಷ್ಟವಹದೂ ಎಂದು ಲೋಕ ಪ್ರಖ್ಯಾತವಾಗುವಂದದಿ ಮಾಡಿ। ಮುಂದೆ ಶ್ರೀನಿಧಿ ಕರುಣವನು ಪಡೆದರು।।ಜಯ।।27।। ಗೋಪರು ಈ ವ್ರತವ ಮಾಡುತಿದ್ದಲ್ಲಿಗೆ ಭೂಪ ಬರಲು ಆಭೂಪನಿಗೆ ಪ್ರಸಾದ ಕೊಡಲೂ। ತಾಪಸದಿಂದಲೆ ಬಹಳ ಅವನದನು ತ್ಯಜಿಸಿ। ಶ್ರೀಪತಿ ಮಹಿಮೆಯ ಪೊಗಳಲ್ ಅಳವೇ।।ಜಯ।।28।। ಕಷ್ಟವಾಗಲು ರಾಯ ಸ್ವಾಂತದಿಂ ಮರಳಿ ಬಂದನು। ಕೃಷ್ಣಗೋಪರ ಬಳಿಗೆ ಎಳೆದು ತಂದೂ। ಶ್ರೇಷ್ಠ ಸತ್ಯ ಪ್ರಸಾದವನು ಕೊಡಲೂ। ಕಷ್ಟವೆಲ್ಲವೂ ಹೋಗಿ ಸುಖಿಯಾದನೂ।।ಜಯ।।29।। ಒಂದು ಪಟ್ಟಣದ ಅರಸಿಗಾಗದಿರೆ ಸಂತಾನ। ಮಂದಿ ಈ ವ್ರತ ಮಾಡಿ ಫಲ ಕೊಡಲು। ಅಂದು ಪ್ರಾಪ್ತವಾಗಲು ಸಂತಾನ। ಬಂಧುಬುಧರೀ ವ್ರತವ ಪೊಗಳುತಿಹರೂ ।।ಜಯ।।30।। ಭಾನುಕುಲ ಸಂಭೂತ। ರಾಮರಾವಣನರಿಯೆ। ಜಾನಕೀ ಈ ವ್ರತವನ್ನು ಮಾಡೆ। ದಾನವೇಂದ್ರನ ಕೊಂದು ಹೊಂದಿದನು ನಿಜಕಾಂತೆಯನು ಕ್ಷೋಣಿಯನು ಆಳಿದನು ಚಿರಕಾಲ ।। ಜಯ।।31।।

ಕಾಶಿ ದೇಶದಲೊಬ್ಬ ವಿಪ್ರನಿರಲು (ಕಥೆ)

ಕಾಶಿ ದೇಶದಲೊಬ್ಬ ವಿಪ್ರನಿರಲು। ಬಹಳ ದಾರಿದ್ರ್ಯದಿ ಚಿಂತಿಸುತ। ನಿತ್ಯ ನಿತ್ಯದಲ್ಲಿ ಮನೆಮನೆ ತಿರುಗುತ ನಿತ್ಯ ಭಿಕ್ಷದಿ ಕಾಲ ಕಳೆಯುತಿದ್ದ।।1।। ಹರಿಯ ಧ್ಯಾನದಿ ಕಾಲ ಕಳೆಯುತಿರೆ। ವಿಪ್ರವೇಷದಿ ಬಂದು ಹರಿ ನುಡಿದ ಸತ್ಯದೇವರ ವ್ರತವ ಭಕ್ತಿಯಿಂದಲಿ ಮಾಡೆ ಅಷ್ಟೈಶ್ವರ್ಯವನು ಕೊಡುವೆನೆಂದ।।2।। ಸತ್ಯ ದೇವರ ವ್ರತವನು ವಿಪ್ರ ಭಕ್ತಿಯಿಂದಲೆ ಮಾಡುವೆನೆಂದು। ನಿಶ್ಚೈಸಿ ಮನದಲಿ ಭಿಕ್ಷಕೆ ಪೋಗಲು ನಿತ್ಯಕ್ಕಿಂತಲು ಹೆಚ್ಚಿಗೆ ಇತ್ತರು।।2।। ತರಿಸಿದ ಸಕಲ ಪದಾರ್ಥಗಳ ಕರೆಸಿದ ಬಂಧುಬಾಂಧವರನೆಲ್ಲ ಭಕ್ತಿಯಿಂ ವ್ರತಮಾಡಿ ಕಥೆಯನು ಕೇಳಿ ಅರ್ತಿಯಿಂದಲೆ ಇರುತ್ತಿದ್ದನಾಗ।।4।। ಹನ್ನೆರಡು ಮಾಸ ವ್ರತವ ಮಾಡಿ ಮುಕ್ತಿಯ ಪಡೆದು ದಾರಿದ್ರ್ಯದಿಂದ ನಿತ್ಯನಿತ್ಯಾದಲ್ಲಿ ಹರಿಧ್ಯಾನವ ಮಾಡುತ್ತ ನಿತ್ಯೋತ್ಸವ

ರಂಗಧಾಮನಿಗೆ॥5॥ ಭಕ್ತಿಯಿಂದಲೆ ವಿಪ್ರ ವ್ರತವನೆ ಮಾಡುತಿರಲು ಕಟ್ಟಿಗೆ ತರುವವನೊಬ್ಬ ಅಲ್ಲಿಗೆ ಬರಲು। ಕಟ್ಟಿಗೆಯನು ಮಾರಿ ಭಕ್ತಿಯಿಂದಲಿ ವ್ರತವ ಮಾಡಿ ಅರ್ಥಿಯಿಂದವನಿಗೆ ಒಲಿದಂಥ ಸ್ವಾಮಿಗೆ ಮುತ್ತಿನಾರತಿಯ ಬೆಳಗಿರೇ॥6॥ ನದಿಯ ತೀರದಿ ದೊರೆ ಮಡದಿ ಸಹಿತವ್ರತವ ಮಾಡುತಲಿರೆ ವೈಶ್ಯನು ಕಂಡು ಮಕ್ಕಳಾದರೆ ನಾನು ಮಾಡುವೆನೆಂದು ನೇಮವನೇ ಕೊಂಡು ಪ್ರೇಮದಿ ಪಟ್ಟಣಕೆ ತೆರಳಿದ ಸ್ವಾಮಿಗೆ ಹುವ್ವೀನಾರತಿಯ ಬೆಳಗಿರೇ॥7॥ ಚಂದದಿಂದಲೇ ವೈಶ್ಯ ಬಂದು ತನ್ನರಮನೆಗೆ ಚಿಂತೆಯ ತೊರೆದು ಮುದದಿಂದಲಿರುತಿರೆ ಸಂತೋಷದಲವನಾ ಸತಿ ಗರ್ಭವಾ ಧರಿಸಲು ನಂಬಿದ ಭಕ್ತರಿಗೆ ವರವಿತ್ತ ದೇವನಿಗೆ ಕುಂದಣದಾರತಿಯ ಬೆಳಗಿರೇ॥8॥ ಆಗ ವೈಶ್ಯನ ಮಡದಿ ಪಡೆದಳೆ ಮಗಳನ್ನು ದಿನದಿನಕೆ ಬಾಲೆ ಶೋಭಿಸುತ ಇರಲು। ವ್ರತವನು ಮದುವೆ ವ್ಯಾಳ್ಯದಿ ಗೈವೆನೆಂದೆನುತ ಹೇಳಲು ಮರೆತ ಜನರ ಶಿಕ್ಷಿಸುವಂಥ ಸ್ವಾಮಿಗೆ ಮರಕತದಾರತಿಯ ಬೆಳಗಿರೇ॥9॥ ಬೇಗ ಮದುವೆಯ ಮಾಡಿ ಅಳಿಯನನೊಡಗೊಂಡು ಪರರ ಊರಿಗೆ ಹೋಗಲು ಆ ಕಾಲದೊಳು ಚೋರರವರೆಂದು ಬಂಧಿಸಲು ಕಪಟ ನಾಟಕವ ತೋರಿಸಿದಾ ಸರ್ವೇಶ್ವರ ಮುರಹರಗೆ ಸ್ಫಟಿಕದಾರತಿಯ ಬೆಳಗಿರೆ॥10॥ ಇತ್ತ ವೈಶ್ಯನ ಮಡದಿ ಮಗಳು ಸಹಿತ ಅತ್ಯಂತ ದುಃಖದಿಂದ ಇರುತಿರಲು ಸತ್ಯದೇವರ ವ್ರತವ ನಿಷ್ಠೆಲಿ ಮಾಡಲು ಅರ್ಥಿಯಿಂದಲಿ ಒಲಿದಂಥ ಸ್ವಾಮಿಗೆ ಮುತ್ತಿನಾರತಿಯ ಬೆಳಗಿರೇ॥11॥ ಆಗ ಸ್ವಪ್ನದಿ ದೊರೆಗೆ ಹರಿ ನುಡಿಯೇ ಬಂಧನ ಬಿಡಿಸಿ ಬಹಳ ದ್ರವ್ಯವನಿತ್ತು ಅವರ ಮನ್ನಿಸಿ ಕಳುಹಲು ಪರಮ ಸಂತೋಷದಿ ನಾವೆಯನೇರಿಸಿ ಕಳುಹಿದ ಸ್ವಾಮಿಗೆ ಭಾಮೆಯರಾರತಿಯ ಬೆಳಗಿರೇ॥12॥ ಮೊರೆವೊ ಸಾಗರದೊಳಗವರು ಬರುತಿಲು ಯತಿಯ ವೇಷವ ಧರಿಸಿ ಹರಿಬಂದು ಕೇಳಲು ಹಡಗಿನೊಳಿರುವುದು ಎಲೆ ಬಳ್ಳಿಗಳೆನಲು ಅಂತಾಗಲಿ ಎಂದು ಮಾಯವ ತೋರಿದ ಅನಂತನಿಗಾರುತಿಯ ಬೆಳಗಿರೇ॥13॥ ಮಾಡಿದ ತಪ್ಪನು ಮನ್ನಿಸಬೇಕೆನುತ ವೈಶ್ಯನು ಯತಿಗೆ ಶರಣಾಗತನಾಗಲು। ಪೂರ್ವದ ಐಶ್ವರ್ಯವನೆರೆ ಕರುಣಿಸಿ ಊರಿಗೆ ಕಳುಹಿದ ಪುರುಷೋತ್ತಮನಿಗೆ ನಾರಿಯರಾರತಿಯ ಬೆಳಗಿರೇ॥14॥ ಅಳಿಯನೊಡನೆ ವೈಶ್ಯ ಊರಿಗೆ ಬರಲು ಸುದ್ದಿಯ ಕೇಳಿ ಹರುಷದಿ ವೈಶ್ಯ ಪುತ್ರಿಯು ಸತ್ಯದೇವನ ಪ್ರಸಾದವ ತ್ಯಜಿಸುತ ಪೋಗೆ ಅವಳ ಪತಿಯ ಮಾಯ ಮಾಡಿದ ಸ್ವಾಮಿಗೆ ಹವಳದಾರತಿಯ ಬೆಳಗಿರೇ॥15॥ ಪತಿಯ ಕಾಣದೆ ಬಾಲೆ ಕಡುದುಃಖದಿಂದ ಅಸುವ ತೊರೆಯಬೇಕೆಂದು ಚಿಂತಿಸಲು ತ್ಯಜಿಸಿದ ಪ್ರಸಾದವ ಭಕ್ಷಿಸಿ ಬರಲು ಬೇಗ ಪತಿಯ ಕಾಣಿಸಿದಂಥ ಲೋಕನಾಯಕನಿಗೆ ಮುತ್ತಿನಾರತಿಯ ಬೆಳಗಿರೇ॥16॥ ಹುವ್ವಾ ಕೊಡಯ್ಯಾ ಸತ್ಯನಾರಾಯಣನೇ ಒಲಿದು ಭಾವಭಕ್ತಿಗಳಿಂದ ಸೆರೆಗೊಡ್ಡಿ ಬೇಡುವೆ ಕೋಮಲವಾಗಿದ್ದ ತಾವರೆ ಕುಸುಮವ ಹುವ್ವಾ ಕೊಡಯ್ಯಾ ಮಹಾದೇವ॥17॥ ಗೋವು ಕಾಯ್ವ ಗೊಲ್ಲರು ನೇಮದಿಂದಲೆ ನೆರೆದು ಭಾವಭಕ್ತಿಗಳಿಂದ ವ್ರತವನು ಮಾಡಿ ಪ್ರಸಾದವ ದೊರೆಗಿತ್ತ ಗೋಪಾಲರೀಗೇ ಹುವ್ವ ಕೊಡಯ್ಯಾ ಮಹದೇವ॥18॥ ಕೊಟ್ಟ ಪ್ರಸಾದವ ದೊರೆ ಮುಟ್ಟದೆ ಬರಲು ನಷ್ಟವಾಯಿತು ಧನಧಾನ್ಯ ಮಕ್ಕಳು ಮರಿ ಬಹಳ ಚಿಂತೆಯಿಂದಿರುತಿದ್ದ ಭೂಪಾಲಗೆ ಹುವ್ವಾ ಕೊಡಯ್ಯಾ ಮಹಾದೇವ॥19॥ ನೇಮದಿಂದಲೆ ದೊರೆ ಗೊಲ್ಲರೊಳ್ ಬೆಸಗೊಂಡು ಭಾವಭಕ್ತಿಗಳಿಂದ ವ್ರತವನು ಮಾಡಲು ಅಷ್ಟೈಶ್ವರ್ಯವನಿತ್ತಂಥ ದೇವನೇ ಹುವ್ವಾಕೊಡಯ್ಯ ಮಹದೇವ॥20॥ ಭೂಲೋಕದೊಳೀ ವ್ರತವ ಮಾಡಿದ ಜನರಿಗೆ ಇಹಕೆ ಸುಖವನು ಕೊಟ್ಟು ಪರಕೆ ಮೋಕ್ಷವ ಕೊಟ್ಟು ಸುಲಭದಿ ಒಲಿವಂಥ ಸತ್ಯನಾರಾಯಣನೇ ಹುವ್ವಾ ಕೊಡಯ್ಯಾ ಮಹಾದೇವ॥21॥

ಶ್ರೀಗಣಪತಿಯ ಪಾದಾಂಬುಜಕೆರಗುವೆ (ಕಥೆ)

ಶ್ರೀಗಣಪತಿಯ ಪಾದಾಂಬುಜಕೆರಗುವೆ ಭೋಗಿ ಭೂಷಣನನ್ನು ಸಂಸ್ತುತಿಸೀ। ನಾಗಶಯನ ಸತ್ಯದೇವನ ಕತೆಯ ನಾನೀಗಳೆ ಪೇಳ್ವೆ ಸಂಕ್ಷೇಪದಲಿ॥1॥ ಮಂಗಲಂ ಸತ್ಯ ನಾರಾಯಣ ದೇವಗೆ ಮಂಗಲಂ ನಿತ್ಯ ನಿರಂಜನಗೆ। ಮಂಗಲಂ ಪ್ರತ್ಯಕ್ಷ ಪರಮ ಪಾವನಗೆ ಮಂಗಲಂ ಭೃತ್ಯವರ್ಗೋದ್ಧಾರನಿಗೆ॥2॥ ಲೋಕೋಪಕಾರದಿ ನಾರದನೀ ವ್ರತ। ವೈಕುಂಠ ಪತಿಯೊಳು ಕೇಳುತಲೇ। ತಾ ಕರುಣದಿ ಸೂತನಿಗೆ ಅರುಹಲು ಶೌನಕರೀ ಕಥೆ ಪೇಳಿದರು॥3॥ ಕಾಶಿದೇಶದಿ ಸತ್ಯಸಂಧ ಬ್ರಾಹ್ಮಣನೊಬ್ಬ। ದೋಷ ದಾರಿದ್ರ್ಯದ ತಿರುಗುತಿರೆ। ಕೇಶವ ವೃದ್ಧ ಬ್ರಾಹ್ಮಣನಾಗಿ ಬಂದುಪದೇಶಿಸಿದನು

ಸತ್ಯವ್ರತಗಳನು।।4।। ಎಂದ ನುಡಿಗೆ ಸತ್ಯಸಂಧ ಬ್ರಾಹ್ಮಣನಾಗ। ಮಿಂದು ಮಡಿಯನುಟ್ಟು ನಿಶೆಯೊಳಗೆ। ಒಂದೂಗೂಡಿಸಿ ವಿಪ್ರಬಂದು ವರ್ಗವನೆಲ್ಲ। ತಂದನು ಪೂಜಾ ದ್ರವ್ಯಗಳ।।5।। ಗೋಧೂಮ ಪಿಷ್ಟವು ಘೃತವು ಶರ್ಕರವು। ಹಣ್ಣಾದ ಕದಳಿ ಗೋಕ್ಷಿರಗಳಾ। ಶೋಧಿಸಿ ಚೂರ್ಣವ ಗೈಯ್ದು ಮಾಧವಗೆ। ಸಪಾದ ಭಕ್ಷ್ಯವ ನಿವೇದಿಸಿದ।।6।। ಆಜ್ಯವ ಯೋತಿಸಿ ನಾಲ್ಕು ವರ್ತಿಗಳ ನೀರಾಜನವನ್ನು ಬೆಳಗುತಲೆ। ಪೂಜೆ ಸಮರ್ಪಣೆ ಗೈಯ್ದು ಪ್ರಸಾದವ। ಭೋಜನಗೆಯ್ದನು ಭಕ್ತಿಯಲಿ।।7।। ಕಷ್ಟದಾರಿದ್ರ್ಯವು ಛೇದಿಸಿ ದಿನದಿನ ಇಷ್ಟ ಸಂಪದವನ್ನು ಪಡೆಯುತಲೆ। ಸೃಷ್ಟಿಗೀಶನ ಸತ್ಯದೇವನ ವ್ರತವ ತಾನಿಷ್ಟೆಯಿಂದ ಗೆಯ್ದನು ಪ್ರತಿಮಾಸದಿ ।।8।।ಕಾಷ್ಠ ವಿಕ್ರಯ ಗೆಯ್ದು ಜೀವಿಪನೊಬ್ಬನು ಕಾಷ್ಟ ಕ್ರೇತನು ಹೊರೆಯಿಳು ಹುತಲೆ। ಓಷ್ಠವೊಣಗಿ ತೃಷೆಯ ಕುಡಿಯ ಲೆನ್ನುತಲೆ। ಶ್ರೇಷ್ಠ ವಿಪ್ರನ ಮನೆಗೈಯ್ದಿದನು ।।9।। ಅಲ್ಲಿ ವಿಪ್ರರು ಕೂಡಿ ಪೂರ್ವೋಕ್ತ ದಿಂದಲಿ ಫುಲ್ಲನಾಭನ ವ್ರತ ಮಾಡುತಿರೆ। ಮೆಲ್ಲನೆ ಬದಿಯೊಳು ಕುಳಿತು ತಾನದನೆಲ್ಲ ಉಲ್ಲಾಸದಿಂದಲೆ ಕೇಳಿದನು ।।10।। ಹರಿಯ ಪ್ರಸಾದವ ತಿಂದು ನೀರ್ಕುಡಿಯುತ ಕರವನ್ನು ಮುಗಿಯುತ ಭಕ್ತಿಯಲಿ। ಭರದಿಂದಲೀ ವ್ರತನಡೆಸುವೆ ತಾನೆಂದು। ಹೊರೆಯನು ಹೊತ್ತಾಗ ನಡೆತಂದನು ।।11।। ನಿತ್ಯದಂದದಿ ಕಾಷ್ಟ ಕ್ರೇತನು ಕ್ರಯಗೆಯ್ಯೆ। ಅತ್ಯಂತ ದ್ರವ್ಯವು ದೊರಕಿದುದು। ಸತ್ಯನಾರಾಯಣನ ಮಹಿಮೆಯಿದೆನುತಲೆ। ಉತ್ತಮ ವ್ರತವ ಮಾಡಿದನು ।।12।। ವ್ರತವ ಮಾಡಿಯೆ ಕಾಷ್ಠಕ್ರೇತನು ತಾನಾಗ। ಲತಿಶಯ ಸಂಪತ್ತು ಪಡೆಯುತಲೆ। ಮತಿಯುತ ನೆನೆಸಿ ತಾನಂತ್ಯ ಕಾಲದಿ ಲೂರ್ಧ್ವ। ಗತಿಗೆ ಸಾಗಿದನು ಹರುಷದಲಿ ।।13।। ಕನ್ಯಾಮಣಿ ಸತಿ ಸಹಿತ ಉಲ್ಕಾ ಮುಖ। ಪುಣ್ಯ ಭದ್ರಾ ಶೀಲ ನದೀ ತಟದೀ। ಎನ್ನ ಇಷ್ಟಾರ್ಥವ ಕೊಡುತಿಹ ಶ್ರೀಮಹಾ। ವಿಷ್ಣುವ್ರತ ವ ತಾ ಮಾಡುತಿರೆ ।।14।। ಆ ಸಮಯದಿ ಸಾಧು ವೈಶ್ಯ ನೆಂಬುವನೊಬ್ಬ। ಭಾಸುರಾಂಬರ ರತ್ನ ಸರಗಳನು। ತೋಷದಿ ನಾವೆಯ ತುಂಬಿಯೆ ಬಂದಲ್ಲಿ। ವಾಸುದೇವನ ವ್ರತ ನೋಡಿದನು ।।15।। ಭೂಪತಿಯೊಳು ವ್ರತ ಮಹಿಮೆಯ ಕೇಳೆ। ಸಲ್ಲಾಪದಿಂದೆಲ್ಲವ ನರುಹಿದನು। ಶ್ರೀಪತಿ ವ್ರತವನು ಮಾಡಿದ ಜನರು ನಿ। ಷ್ಪಾಪದಿಂದಲಿ ಭಾಗ್ಯ ಪಡೆವರೆಂದು ।।16।। ತನಯರಿಲ್ಲವು ತನಗೀ ವ್ರತ ಆಚರಿಸುವೆ। ಎನುತಲ ಪ್ಪಣೆಗೊಂಡು ಬಂದಾಗ ತನ್ನಯ। ವನಿತೆ ಲೀಲಾವತಿಗದನೆಲ್ಲ ವರುಹುತ। ವಿನಯ ಭಕ್ತಿಯೊಳಾಗಳಿರುತಿರ್ದನು ।।17।। ಮಿತ್ರೆ ಲೀಲಾವತಿ ಕೇಳುತ ಮನದೊಳಗತ್ಯಂತ ಹರುಷವ ತಾಳಿದಳು। ಪುತ್ರರಾದರೆ ಕಲ್ಪೋಕ್ತ ವಿಧಾನದಿ ಸತ್ಯ ವ್ರತವ ತಾ ಮಾಡಿಸುವೆ ।।18।। ಎಂದು ಸಂಕಲ್ಪಿಸೆ ಗರ್ಭಿಣಿ ಯಾದಳು। ಸುಂದರ ಪುತ್ರಿಯು ಜನಿಸಿದಳು। ಚಂದದಿಂ ನಾಮಕರಣಂಗಳ ಮಾಡಿದ। ರಂದು ಕಲಾವತಿ ಎಂದೆನುತಾ ।।19।। ಮೊದಲು ಸಂಕಲ್ಪವ ಮಾಡಿದ ಪರಿಯೊಳು। ಪದುಮನಾಭನ ವ್ರತ ನಡೆಸೆನುತ। ಸುದತಿ ಲೀಲಾವತಿ ಪೇಳಲು ವೈಶ್ಯನು। ಮದುವೆ ಲಗ್ನದಿ ವ್ರತವ ಮಾಡುವೆನು ।।20।। ಎನುತ ಸಾಧುವು ತನ್ನ ವಾಣಿಜ್ಯ ವೃತ್ತಿಯ। ದಿನದಿನ ನಡೆಸುತಲಿರಲಾಗ। ತನುಜೆಗೆ ಮದುವೆಯ ಪ್ರಾಯ ಬಂದುದ ಕಂಡು। ವಿನಯದಿ ದೂತನ ಕರೆದೆಂದನು ।।21।। ಮಗಳಿಗೆ ಯೋಗ್ಯನಾಗಿರುತಿಹ ವರನನ್ನು। ಜಗದೊಳಗರಸಿಯೆ ತಾರೆನಲು। ಸೊಗಸಿಂದ ದೇಶವ ತಿರುಗಿಯೆ ಕಾಂಚನ। ನಗರದೊಳಿರ್ದ ವಣಿಜನ ।।22।। ಸುಂದರ ವರನನ್ನು ಕರೆತಂದು ವೈಶ್ಯನ। ಮುಂದೆ ತೋರಲು ನೋಡಿ ಸಂತಸದಿ। ಬಂಧು ಬಾಂಧವರನ್ನುಕೂಡಿಯೆ ವಿಧಿಯುಕ್ತ। ದಿಂದ ಕಲ್ಯಾಣವ ಮಾಡಿದನು ।।23।। ಮದುವೆ ವೈಭವದಲ್ಲಿ ಮರೆತನು ವ್ರತವನು। ಒದಗಿ ನಾವೆಯ ತುಂಬಿ ವಸ್ತುಗಳ। ಚದುರ ಜಾಮಾತೃ ಸಹಿತ ಸಿಂಧುವಿನಲ್ಲಿ। ಬದಲು ದೇಶಕೆ ತಾ ನಡೆ ತಂದನಾಗ ।।24।। ಪೋತ ವಿಳಿದು ರತ್ನ ಸಾರಪುರದಿ ಜಾ। ಮಾತೃ ಸಹಿತವಲ್ಲಿ ನಡೆ ತಂದು। ಧ್ರಾತ್ರೀಶನಾ ಚಂದ್ರಕೇತನ ನಗರದಿ। ರಾತ್ರಿಯೊಳು ಶಿಬಿರದಿ ಇರುತಿರಲು ।।25।। ದುಷ್ಟವೈಶ್ಯನು ವ್ರತ ಮಾಡಲು ಮರೆತನು। ಭ್ರಷ್ಟ ಪ್ರತಿಜ್ಞೆಯ ಮಾಡಿದನು। ಕಷ್ಟ ಬಂಧನ ದುಃಖವೊದಗಲೆಂದೆ ನುತಲೆ। ಸಿಟ್ಟಿನಿಂ ದೇವನು ಶಪಿಸಿದನು ।।26।। ಚೋರರಾ ದಿವಸದಿ ರಾಜ ಭಂಡಾರವ। ಸೂರೆಯ ಮಾಡಿಯೆ ಬರುತಿರಲು। ಚಾರರು ಬೆನ್ನಟ್ಟಿ ಬರಲು ವೈಶ್ಯನ ಬೀ। ಡಾರದೊಳಿಸಿ ತಾವಡಗಿದರು ।।27।। ಬಂದಾಗ ದೂತರು ಕಂಡು ವಣಿಜರನ್ನು। ಬಂಧನ ಗೈಯುತ್ತ ದೊರೆಯೆಡೆಗೆ। ತಂದೆವು ಚೋರರನೆನಲು ಕಾರಾಗೃಹ। ಕಂದು ತಾನವರನ್ನು ನೂಕಿಸಿದ ।।28।। ಇತ್ತ ತಸ್ಕರರಾಗ ಸಾಧು ಮಂದಿರ ಪೊಕ್ಕು। ಮುತ್ತು

ರತ್ನವನೆಲ್ಲ ಕದ್ದೊಯ್ದರು। ಮಿತ್ರೆ ಲೀಲಾವತಿ ಕನ್ಯೆ ಕಲಾವತಿ। ಸುತ್ತಲೂ ಮನೆಮನೆ ತಿರಿದುಂಡರು ।।29।। ವಿಪ್ರರ ಕೇರಿಯೊಳ್ ಭಿಕ್ಷೆ ಗೋಸುಗವಾಗಿ। ಕ್ಷಿಪ್ರದಿಂದೆಯ್ದೆ ಕಲಾವತಿಯು। ಸುಪ್ರಸಾದವ ಭಕ್ಷಿಸಿ ತಾಯೆಡೆ। ಗತ್ಯಂತ ಹರುಷದಿ ನಡೆತರಲು। ರಾತ್ರಿಯೊಳೆಲ್ಲಿ ತಡೆದೆಯೆಂದು ಗರ್ಜಿಸಿ। ಪುತ್ರಿಯ ಕೇಳೆಲೀಲಾವತಿಯು ।।30।। ತಾಯೆ ಕೇಳ್ ದ್ವಿಜರ ಮಂದಿರದೊಳು ಸತ್ಯನಾ। ರಾಯಣ ವ್ರತವನ್ನು ಮಾಡಿದರು। ಆಯಾಸ ದಾರಿದ್ರ್ಯ ದುಃಖಪರಿಹರವಪ್ಪ। ಶ್ರೀಯರಸನ ಕಥೆ ಕೇಳಿದೆನು ।।31।। ಸುತೆಯ ಮಾತನು ಕೇಳುತಾಗ ಲೀಲಾವತಿ।ವ್ರತವ ಮಾಡಿದಳತಿ ಭಕ್ತಿಯಲಿ। ಪತಿಯ ಜಾಮಾತೃಗಳಪರಾಧ ಕ್ಷಮಿಸಿಲ್ಲಿ। ಗತಿ ಬೇಗ ಕರೆಯಿಸಿ ಕೂಡಿರೆಂದಳು ।।32।। ಸತ್ಯನಾರಾಯಣ ಸಂತುಷ್ಟನಾಗಿಯೆ। ಇತ್ತ ವೈಶ್ಯನ ಸೆರೆ ಬಿಡಿಸಲಿಕೆ। ರತ್ನಸಾರಾಪುರದರಸಗೆ ನಿಶಿಯೊಳು। ಮತ್ತೆ ದೃಷ್ಟಾಂತವನ ರುಹಿದನು ।।33।। ಕನಸ ಕಂಡನು ಚಂದ್ರಕೇತನಾ ದಿವಸದಿ। ವಣಿಜರ ಸೆರೆಯಿಂದ ಬಿಡಿದಿರಲು। ಧನಧಾನ್ಯ ಸತಿಸುತ ಸಕಲ ವೈಭವವೆಲ್ಲ। ಕ್ಷಣದೊಳು ನಾಶವೆ ಅಹುದೆನುತ ।।34।। ದಿನಪನುದಿಸೆ ಚಂದ್ರಕೇತನೊಲಗವಿತ್ತು। ವಣಿಜರ ಸೆರೆಯಿಂದ ಕರಿಸಿದನು। ಮನದೊಳು ಬೆದರಿ ಕೈ ಮುಗಿದು ನಿಂದಿರಲಾಗ ಜನಪನಭಯವಿತ್ತು ಮನ್ನಿಸಿದ ।।35।। ನಿಗಳ ಬಂಧನ ಪ್ರಾಯಶ್ಚಿತ್ತಾಂಗವಪನವ। ಸೊಗಸಿನಿಂ ಮಾಡಿಸಿ ವಣಿಜರಿಗೆ। ದ್ವಿಗುಣ ಧನವು ರತ್ನ ಭೂಷಣಗಳ ಕೊಟ್ಟು। ನಗರ ಕಯ್ದುವು ದೆಂದು ಕಳುಹಿಸಿದನು ।।36।। ತೀರ್ಥಯಾತ್ರೆಯ ಮಾಡಿ ಮಂಗಲಾಯನ ಸುಮುಹೂರ್ತವ ನೆಸಗಿದ ದ್ವಿಜಜನಕೆ। ನಿಸ್ವಾರ್ಥದಿಂ ದಾನ ಧರ್ಮಂಗಳ ಮಾಡಿಯೆ। ಪ್ರಾರ್ಥನೆಗೆಯ್ದರು ವಣಿಜರಂದು ।।36।। ಮೊದಲಿನಂದದಿ ತಮ್ಮ ನಾವೆಯ ತುಂಬಿಯೆ। ಉದಧಿ ಪಥದೊಳು ಬರುತಿರಲು। ಪದುಮನಾಭನು ದಂಡಿ ವೇಷದಿ ಬಂದಾಗ। ಇದರೊಳು ತಂಬಿಹುದೇನೆಂದನು ।।38।। ಒಣಗಿದ ತೃಣಲತೆ ಪತ್ರೆಗಳಿಹುದೆಂದು। ವಣಿಜರು ಹುಸಿಮಾತನಾಡಿದರು। ಮನಸಿನಿಂ ದಂಡಿ ಹಾಗಾಗಲೆಂದೆನುತಲೆ। ಮುನಿದು ಶಪಿಸಿ ನಡೆದನಾಗ ।।39।। ನಿತ್ಯಕರ್ಮವ ಮಾಡಿ ಇಳಿದು ನಾವೆಯ ಮತ್ತೆ। ಹತ್ತಬೇಕೆನುತಲೆ ನೋಡುತಿರೆ। ವಿತ್ತಗಳೆಲ್ಲವು ಪತ್ರಲತೆಗಳಾದ। ಕೃತ್ಯವ ಕಾಣುತ ಮೂರ್ಛಿಸಿದ ।।40।। ಬಹಳ ವಿಸ್ಮಯದಿಂದ ಸಾಧು ದುಃಖಿಸುತಿರೆ। ದುಹಿತ ಕಾಂತನು ತಾ ತಿಳಿದೆಂದನು। ಮಹಿಮನಾಗಿಹ ದಂಡಿ ಶಾಪವೆಂದನೆ ಕೇಳಿ। ಗ್ರಹಿಸಿ ದಂಡಿಯ ಕಾಣುತೆರಗಿದನು।।41।। ಕ್ಷಮಿಸಬೇಕಪರಾಧ ವೆನುತಡಿಗಡಿಗೆತಾ। ನಮಿಸಿದ ವೈಶ್ಯ ನಿಗರುಹಿದನು। ವಿಮುಖನಾಗಲೆನ್ನ ಪೂಜೆ ಮರೆತುದರಿಂದ। ಅಮಿತ ದುಃಖವು ಬಂದುದೆನೆ ಕೇಳಿ।।42।। ಕಮಲನಾಭನೆ ನಿನ್ನಪಾರ ಮಹಿಮೆಯನ್ನು। ಕಮಲಜ ಸುರರು ತಾ ತಿಳಿಯಲಿಲ್ಲ। ಭ್ರಮಿತ ಮೂಢನಿಗೆಂತು ತಿಳಿವುದೀ ಮಾಯೆಯು। ರಮೆಯರಸನೆ ನಿನ್ನ ವ್ರತಗಳನು।।43।। ಶಕ್ತ್ಯಾನುಸಾರ ವಿಸ್ತರಮಾಡುವೆನೆಂದು। ಭಕ್ತಿಯಿಂದೆರಗಲು ಪರಿತೋಷದಿ। ಯುಕ್ತವಾಗಲಿ ದ್ರವ್ಯ ಮೊದಲಿನಂದದಲೆಂದು। ಭಕ್ತವತ್ಸಲ ತಾನಡಗಿದನು।।44।। ಭರಿತ ನೌಕೆಯ ಕಾಣುತೇರಿಯೆ ವ್ರತವನಾ। ಚರಿಸಿ ನಾವೆಯನೊಂದುಗೂಡಿಸುತ। ಹರುಷದಿಂದಯ್ತುಂದು ರತ್ನಪುರಿಯ ಕಂಡು। ಚರನಿಗೊರೆದ ಸತಿಗರುಹೆನುತ ।।45।।ಬಂಧುವರ್ಗವ ಕೂಡಿ ಬಂದ ವಾರ್ತೆಯ ದೂತ। ನಂದು ಲೀಲಾವತಿಗರುಹಲಾಗ। ಇಂದಿರೇಶನ ಪೂಜೆ ಮಾಡೆಂದು ಮಗಳಿಗೆ। ಬಂದಳು ತಾ ಪತಿ ದರುಶನಕೆ ।।46।। ಪೂಜೆ ಸಮರ್ಪಣೆ ಮಾಡಿ ಪ್ರಸಾದವ। ಭೋಜಿಸದಂದು ಕಲಾವತಿಯು। ರಾಜಿಸುತಯ್ತೆರೆ ದೋಣಿ ಮುಳುಗಿತು। ಸೋಜಿಗವಾದುದುದಿನ್ನೇನೆಂಬೆನು ।।47।। ಏನಿದದ್ಭುತವೆಂದು ಸರ್ವರು ದುಃಖಿಸೆ। ಕಾಣದೆ ಪತಿಯನು ಹಾಯೆನುತ। ಮಾನಿನಿ ಪಾದುಕೆಯನು ಕಂಡು ಜಲಧಿಯೊಳ್। ತಾನು ಬೀಳುವೆನೆನುತನು ವಾದಳು।।48।। ಸತಿಯ ಚರಿತ್ರವ ಮಾತಾಪಿತರು ಕಂಡು। ವ್ಯಥೆಯೊಳು ಶ್ರೀಪತಿಗೆರಗುತಲೆ। ವ್ರತವ ಸಂಕಲ್ಪಿಸೆ ಸಂತುಷ್ಟನಾಗುತ। ಪತಿತ ಪಾವನನೆಂದನಂಬರದಿ ।।49।।ನಿನ್ನ ಮಗಳು ಪ್ರಸಾದ ಬಿಟ್ಟುದರಿಂದ। ಉನ್ನತ ದುಃಖ ಬಂದುದೀಗ। ಇನ್ನಾದರೆಯ್ದಿಯೆ ಭುಂಜಿಸಬಂದರೆ। ಕನ್ಯಾಮಣಿಗೆ ವರ ದೊರಕುವನು ।।50।। ಎನುತಲಂಬರ ವಾಣಿ ನುಡಿಯೆ ಕಲಾವತಿ। ವಿನಯದಿ ಭಕ್ಷಣ ಮಾಡುತಲೆ। ಘನ ಬೇಗ ನಡೆತಂದು ಪತಿಯನಿರೀಕ್ಷಿಸಿ। ಜನಕಂಗೆಂದಳು ಗೃಹಕಯ್ದೆನುತ।।51।। ತಡಮಾಡದೆಲ್ಲರು ಸಹಿತ ಮನೆಗೆ ಬಂದು ಒಡೆಯ ಲಕ್ಷ್ಮೀಶನ ವ್ರತಗಳನು। ನಡೆಸುತಲಿಹಪರ ಸುಖವನು ಪಡೆದವ। ನಡೆದನಂತ್ಯದಿ ಸತ್ಯ ಪುರವನು।।52।। ಗೋಪಣಗಲು ವಟಮೂಲದ ಲೊಂದಿನ। ಶ್ರೀಪುರುಷನ ವ್ರತ ನಡೆಸುತಿರೆ।

ಭೂಪ ತಂಗಧ್ವಜ ದರ್ಪದಿಂದಲೆ ನಾನಾ। ರೂಪಿನ ಮೃಗಗಳ ಕೊಲ್ಲುತಲೆ॥53॥ ಬಂದು ಕುಳಿತು ಭೂಪನಿದಿರು ಪ್ರಸಾದವ। ತಂದಿಟ್ಟು ಗೋಪರು ಕೈ ಮುಗಿಯೆ। ಅಂದು ಭಕ್ಷಿಸದಿರೆ ನೂರು ಸುತರು ದ್ರವ್ಯ। ವೊಂದರೆಕ್ಷಣದಿ ನಾಶವಾದರು॥54॥ ಸತ್ಯದೇವನ ಮಹಿಮೆಯೆಂದು ಚಿತ್ತದಿ ತಿಳಿ। ಯುತ್ತ ಗೋಪರ ಕೂಡಿ ಪೂಜಿಸಲು। ವಿತ್ತ ಪುತ್ರನ್ವಿತನಾಗಿ ಸಂಪದವಾಳಿ। ಸತ್ಯಪುರವ ಸಾರ್ದನಂತ್ಯದಲಿ॥55॥ ಧರಣಿಯೊಳೀ ವ್ರತವ ನಡೆಸಿದ ಜನರಿಗೆ। ಪರಮ ವಾಂಚಿತಗಳು ದೊರಕುವುವು। ತರುಣಿಯರಿಗೆ ಸೌಭಾಗ್ಯ ಸಂಪದವನ್ನು। ಪರಲೋಕ ಪಿತನ ನೆನೆದೀ ಸತ್ಯಕಥೆಯನು॥56॥ ಸಂತ ಗೋಪಾಲ ಕೃಷ್ಣ ವಿರಚಿಸಿದ ಚಿಂತಿತ ಸತ್ಫಲದಾಯಕವಿದರನು ಸಂತತ ನೆನೆವರ ಸಲಹುವನು ॥57॥ ಮಂಗಲಂ ಸತ್ಯನಾರಾಯಣ ದೇವಗೆ ಮಂಗಲಂ ನಿತ್ಯ ನಿರಂಜನಗೆ ಮಂಗಲಂ ಪ್ರತ್ಯಕ್ಷ ಪರಮ ಪಾವನನಿಗೆ ಮಂಗಲಂ ದೇವಿಕುಮಾರನಿಗೆ ಮಂಗಲಂ॥58॥

ವಾರಣ್ಯಾಶನ ಪಾದ ವಾರಿಜಕೆರಗುತ (ಕಥೆ)

ವಾರಣ್ಯಾಶನ ಪಾದ ವಾರಿಜಕೆರಗುತ। ನೀರಜ ಮುಖಿ ಸರಸ್ವತಿಯ॥ ಸಾರಭಕ್ತಿಲಿ ಸ್ತುತಿಸಿ ಪೇಳುವೆ ಶ್ರೀಸತ್ಯ ನಾರಾಯಣ ಚಾರು ಕಥೆಯ॥ಪಲ್ಲ॥ ಸುರಮುನಿವಂದಿತ ಸರಸಿಜ ಭವಪಿತ। ಕರುಣಾಶರಧಿ ಕರಿವರದ॥ ಹರುಷದಿಂದಲಿ ನಿನ್ನ ಚರಿತೆ ಕೊಂಡಾಡಲು। ವರವ ಪಾಲಿಸು ದಯದಿಂದ॥1॥ ಶರನಿಧಿ ಸಂಭೂತೆ ಸುರಜ್ಯೇಷ್ಠ ಸ್ಮರಮಾತೆ। ಪುರಹರ ವಂದಿತೆ ಖ್ಯಾತೆ॥ ಸ್ಮರಿಸಿ ಬೇಡುವೆ ನಿನ್ನ ದೊರೆಯ ವರ್ಣಿಸಲೀಗ। ಗರಿಯೇ ವರವ ಸುಖದಾತೆ॥2॥ ಹರಿಕುಲೋತ್ತಮ ನಿನ್ನ ಸರಿಸಿಜ ಪದಯುಗ। ನೆರೆನಂಬಿದೆನು ಮುದದಿಂದ॥ ಹರಿಸು ಚರಿತ್ರೆ ಅರುಹಲು ಎನಗೆ। ಸ್ಥಿರಬುದ್ಧಿ ಕೊಡು ವಾಯುಕಂದ॥3॥ ಗಿರಿಜೇಶ ಶಚಿಪತಿ ಸುರತತಿಗೆರಗುವೆ। ಪರಮ ಸುಭಕ್ತಿ ಪೂರ್ವಕದಿ॥ ಹರಿದಾಸ ವರ್ಗಕೆ ಶುಭನೀಡಲೆನಗೆಂದು। ಶಿರಬಾಗಿ ಬೇಡುವೆ ಮುದದಿ॥4॥ ಘನತರ ನೈಮಿಷ ವನದೊಳು ವಾಸಿಪ। ಮುನಿಸೂತನಲ್ಲಿಗೆ ಬಂದು॥ ವಿನಯದಿ ವಿಜ್ಞಾಪನ ಪಾಡಿಕೊಂಡರು। ಶೌನಕಾದಿಗಳೆಲ್ಲಾ ನಿಂದು॥5॥ ಕ್ಷಿತಿಯೊಳು ಮನದಾಸೆ ಹಿತದಿಂದ ನೀಡುವ। ವ್ರತ ದಾವದೆಂದ್ವೇಳಿರೆನುತ ॥ ಅತಿ ಭಕ್ತಿಯಿಂದ ಕೇಳುವ ಮುನಿಗಳ ಕಂಡು । ಕಥಿಸಿದಾನಾಗ್ಯತಿ ಸೂತ॥6॥ ಛಂದದಿ ಕೇಳಿರಿ ಒಂದೇ ಮನದಿ ಈ ಗಾ- । ನಂದದಿ ನಾರದ ತಾನು ॥ ಹಿಂದಕೆ ಈ ತೆರ ನಂದನಂದನ ಗೋ - । ವಿಂದನ ಪ್ರಶ್ನೆ ಮಾಡಿದನು ॥7॥ ಕಾರುಣ್ಯದಿಂದಲಿ ಸಾರಸೋದ್ಭವ ಕು - । ಮಾರ ನಾರದ ಮುನಿವರಗೆ॥ ವಾರಿಜಾಂಬಕನಾದ ಶೌರಿ ಪೇಳಿದ ಕಥೆ । ಸಾರುವೆ ಮೋದದಿ ನಿಮಗೆ ॥8॥ ವರಸುರ ಲೋಕದಿ ಚರಿಸುತ್ತ ನಾರದ । ಹರುಷದಿ ಭೂಮಿಗೆ ಬರಲು ॥ ನರರತಿ ಕಷ್ಟದಿ ಮರುಗುವದಂ ನೋಡಿ । ಪೊರಟರು ಹರಿಗ್ವೇಳಿಕೊಳಲು ॥9॥ ಪದುಮಜ ಸುತ ನಾರದಮುನಿ ವೇಗದಿ । ವಿಧುಧರ ವಂದಿತನಾದ ॥ ಯದುಪನಲ್ಲಿಗೆ ಬಂದು ಮುದಮನದಿಂದಲಿ । ವಿಧವಿಧದಲಿ ಸ್ತುತಿಗೈದ ॥10॥ ನಿಗಮಕೆ ನಿಲುಕದ ಅಗಣಿತ ಮಹಿಮನೆ । ತ್ರಿಗುಣ ವರ್ಜಿತ ತ್ರಿವಿಕ್ರಮನೆ ॥ ಪೊಗಳುವೆ ತವಪಾದ ಯುಗಕೆರಗುತ ನಾನು । ಜಗದುತ್ಪತ್ತಿ ಕಾರಣನೆ ॥11॥ ಮಗಳಲಿ ಪುಟ್ಟಿದಿ ಮಗನನ್ನು ಕುಟ್ಟಿದಿ । ಮಗಳ ಮಗಳ ಮದಿವ್ಯಾದಿ ॥ ಮಗನ ಮಗನ ವರ ಪಡೆದಾತನ ಜೈಸಿ । ಮಗನ ಮಗನ ನೀನು ತಂದೀ ॥12॥ ಸಿಂಧೂಜ ರಿಪು ಸಖ ನಂದನ ಕೊಂದನ । ತಂದೆಯ ತಂದೆಯ ಸುತೆಯಾ ॥ ನಂದಿನಿಯಳಿಗಾಗಿ ನೊಂದಿದಿ ನೀ ನರ- । ರಂದದಿ ಕವಿಗಣಗೇಯಾ ॥13॥ ಘನ್ನ ಮಹಿಮ ನಿನ್ನನಂತ ಚರಿಯವನ್ನು । ಬಣ್ಣಿಸಬಲ್ಲೆನೆ ದೇವಾ ॥ ಪನ್ನಗರಾಜಗಗಣ್ಯವಾಗಿಪ್ಪುದು । ಮನ್ನಿಸು ಎನ್ನ ಬಿನ್ನಪವ ॥14॥ ಬಾ ಮುದ್ದು ನಾರದನೆ ಬಾ ಮುನಿವರ್ಯನೆ । ಬಾ ಮೂರು ಭುವನ ಸಂಚಾರಿ ॥ ನೇಮದಿಂದಲಿ ನಿನ್ನ ಕಾಮಿತ ಪೇಳೀಗ । ಪ್ರೇಮದಿಂದಲಿ ವೀಣಾಧಾರಿ ॥15॥ ಮುರಹರ ನಿನಗೆ ಅರಿಯದ ವಾರ್ತೆಯು । ಧರಣಿ ತ್ರಯದಿ ಉಂಟೇನು ? ॥ ನರರತಿ ಕಷ್ಟದಿ ಮರುಗುತಲಿಪ್ಪರು । ಹರಿ ಪೇಳಿದಕುಪಾಯವನು ॥16॥ ಸತ್ಯ ಲೋಕೇಶನ ಪುತ್ರನೆ ನಿನ್ನಯ । ಉತ್ತಮ ಪ್ರಶ್ನೆಗೆ ನಾನು ॥ ಅತ್ಯಾನಂದದಿ ಉತ್ತರ ಪೇಳುವೆ । ಚಿತ್ತೈಸು ಮುನಿವರ ನೀನು ॥17॥ ನಾರದ ಶ್ರೀ ಸತ್ಯನಾರಾಯಣ ವ್ರತ । ಧಾರುಣಿಯೊಳಗಿನ ಜನರು ॥ ಆರು ತಮ್ಮ ಯ ಪರಿವಾರದಿಂದಲಿ ಗೈಯೆ । ಭೂರೀ ಸೌಖ್ಯದಿ

ಮೆರೆಯುವರು ॥18॥ ದೇವನೆ ಈ ನಿನ್ನ ಸೇವಕನಿಗೆ ಸತ್ಯ । ದೇವನ ವ್ರತದ ವಿಧಾನ ॥ ಸಾವಧಾನದಿ ಪೇಳು ಭಾವಜವತ ಏಕೋ - । ಭಾವದಿ ಕೇಳುವೆ ಮುನ್ನ ॥19॥ ಬುಧನುತ ನಾರದ ಘೃತಕ್ಷೀರ ಶರ್ಕರ । ಕದಳೀ ಗೋಧೂಮಾದಿಗಳನು ॥ ಹದುಳದಿಂದಲಿ ಸುಪಾಕಗೈದು ಮೇಲ್ । ವಿಧ ವಿಧ ಪಕ್ವಾದಿಗಳನು ॥20॥ ಪರಮ ಭಕ್ತಿಯಿಂದ ಪರಿವಾರ ಸಹಿತದಿ । ಧರಣೀಸುರನ ಪರಿಮುಖದಿ ॥ ತುರಧೂಳಿಕಾಲದಲಿ ಪರಿಪರಿಪೂಜಿಸಿ । ಹರಿಗರ್ಪಿಸಲಿಬೇಕು ಮುದದಿ ॥21॥ ಈ ರೀತಿ ಗೈವರ ಕೋರಿಕೆಯನು ದಯ । ವಾರಿಧಿ ಶಾಮಸುಂದರನು ॥ ಪೂರೈಸಿ ಪ್ರತಿನಿತ್ಯ ವಾರಿಜ ಸಹಿತದಿ । ಸೇರಿತಾ ನಲಿದಾಡುತಿಹನು ॥22॥

॥ ಇತಿ ಶ್ರೀಸತ್ಯನಾರಾಯಣ ವ್ರತ ಕಥಾಯಾಂ ಪ್ರಥಮೋಧ್ಯಾಯ ಸಂಪೂರ್ಣ ॥

ದ್ವಿತೀಯೋಧ್ಯಾಯಃ

ಅತಿಮುದದಿಂದಲಿ ಮತಿಯುವತರೆ ಈಗ । ಪೃಥ್ವಿಯೊಳಗೆ ಪೂರ್ವದಲ್ಲಿ ॥ ವ್ರತಗೈದ ಸುಗುಣರ ಇತಿಹಾಸ ನಿಮಗೆ । ಕಥಿಸುವೆ ಹಿತದಿಂದ ಕೇಳಿ ॥1॥ ಕಾಶಿಯೊಳಗೆ ಒಬ್ಬ ಭೂಸುರ ಬಡತನ । ಕ್ಲೇಶದಿ ವಾಸಿಸುವುದನ್ನು ॥ ಶ್ರೀಶ ಅವನನು ನೋಡಿ ಪೋಷಿಸಲು ವೃದ್ಧ । ವೇಷದಿ ಮಾತಾಡಿಸಿದನು ॥2॥ ಬಾ ತವಕದಿ ವಿಪ್ರನಾಥನೆ ತವಮುಖ । ಪಾಥೋಜ ಬಾಡಿದ ಬಗೆಯ ॥ ಈ ತೆರ ದುಃಖದಿ ನೀ ತಿರುಗುವಂತಹ ಮಾತು । ಪ್ರೀತಿಲಿ ಪೇಳಯ್ಯ ॥3॥ ಕಥಿಸುವೆ ಹೇ ವಿಪ್ರ ಹಿತದಿಂದ ನೀ ಎನ್ನ । ಸ್ಥಿತಿಯ ಲಾಲಿಸು ಮನದಿಂದ ॥ ಗತಿಗೆಟ್ಟು ಚರಿಸುವೆ ಪೃಥ್ವಿಯೊಳಗೆ ಈಗ । ಅತಿ ಬಡತನ ದೆಸೆಯಿಂದ ॥4॥ ಶ್ರೇಷ್ಠನೆ ದಾರಿದ್ರ್ಯ ಕಷ್ಟ ತೊಲಗುವಂಥ । ಥಟ್ಟನೆ ನೀ ಪೇಳುಪಾಯ ॥ ಘಟ್ಯಾಗಿ ನಿನ್ನ ಉತ್ಕೃಷ್ಟ ಪದಾಂಬುಜ । ಮುಟ್ಟಿ ಸೇವಿಪೆ ಮಹಾರಾಯ ॥5॥ ಮಿಡುಕುತ್ತ ವಿಪ್ರನು ನುಡಿದ ಮಾತನು ಕೇಳಿ । ಕಡಲಜೆ ಪತಿಕವಿಗೇಯ ॥ ಕಟುದಯದಲಿ ಪೇಳ್ದ ಬಡತನ ಕಳೆಯುವ । ಪೊಡವಿಯೊಳಿದ್ದ ಉಪಾಯ ॥6॥ ಸಾರುವೆ ಕೇಳಯ್ಯ ಮಾರಜನಕ ನಿಜ । ನಾರಾಯಣನ ಸುವ್ರತವ ॥ ಆರು ಜಗದಿ ಭಕ್ತಿ ಪೂರ್ವಕ ಮಾಳ್ಪರು । ದಾರಿದ್ರ್ಯ ಹರಿದೂರಗೈವ ॥7॥ ಮುದುಕನ ನುಡಿ ಕೇಳಿ ಮುದಮನದಿಂದಲಿ । ಸದನಕೆ ದ್ವಿಜ ಬಂದು ತಾನು ॥ ಸುದತಿಸಹಿತನಾಗಿ ಸತ್ಯನಾಥನ ಪೂಜೆ । ವಿಧವಿಧದಲಿ ಮಾಡಿದನು ॥8॥ ಹಹುಷದಿ ಈ ರೀತಿ ಧರಣಿ ದೇವನು ಮಾಡೆ । ಸಿರಿಸತಿಸುತರಿಂದ ತಾನು ॥ ಧರೆಯೊಳು ಸುಖಪಟ್ಟು ಪರಮದುರ್ಲಭವಾದ । ಹರಿಪುರ ಪಥಡಿತದನು ॥9॥ ಸೂತರೇ ಅತ್ಯಂತ ಕೌತುಕವಾಗಿಹ । ಧಾತ ಪಿತನ ಈ ವ್ರತವು ॥ ಭೂತಳದೊಳಗೆಂತು ಖ್ಯಾತಿಯ ಪೊಂದಿತು। ಪ್ರೀತಿಲಿ ಪೇಳಿರಿ ನೀವು ॥10॥ ಪ್ರತಿಮಾಸದಲಿ ಆ ಪೃಥ್ವಿದೇವನು ತನ್ನ । ಸತಿಸುತ ಪರಿವಾರ ಸಹಿತ ॥ ಅತಿಹಿತದಲಿ ಮನೋರಥ ಪೂರೈಸುವ ಈ । ವ್ರತ ಮಾಡುತಿರಲಾಗ ತ್ವರಿತ ॥11॥ ಚರಣನೋರ್ವನು ಶಿರದಿ ಕಾಷ್ಠ್ಯಭಾರವಧರಿಸಿ । ಮಾರಲು ಬೀದಿಗಳಲ್ಲಿ॥ ಬರುತಿರೆ ಮಾರ್ಗದಿ ಧರಣಿದೇವನ ಮಂದಿರ ಕಂಡ । ಪರಮ ಮೋದದಲಿ ॥12॥ ಶ್ರೀನಿವಾಸನ ಘನಧ್ಯಾನದಿಂದರ್ಚಿಪ। ಕ್ಷೋಣಿಸುರನ ನೋಡಿ ಜವದಿ॥ ಆನಂದದಿಂದಲಿ ಶೂದ್ರಮಾನವ ಕೇಳ್ದ । ಏನಿದೆಂದೆನುತಲಾಕ್ಷಣದಿ ॥13॥ ಶೂದ್ರನ ನುಡಿಕೇಳಿ ಆ ದ್ವಿಜ ಪೇಳ್ದನು । ಭದ್ರದ ವ್ರತದ ವಿವರವ ॥ ಶುದ್ಧ ಮನದಿ ಚರಣೋದ್ಭವಗೈದನಿ - । ರುದ್ಧನ ಪಾದಾರ್ಚನವ ॥14॥ ಹರುಷದಿಂದಲಿ ಸತ್ಯ ಹರಿಯ ಪೂಜಿಸಿ ಶೂದ್ರ। ಪರಮ ಸೌಖ್ಯದಿ ಇದ್ದು ಕೊನೆಗೆ ॥ ಪರಿವಾರಯುತನಾಗಿ ತೆರಳಿದ ಸ್ಥಿರವುಳ್ಳ। ಸಿರಿ ಶಾಮಸುಂದರನ ಪುರಿಗೆ ॥19॥ ॥ ಇಂತಿ ಶ್ರೀಸತ್ಯನಾರಾಯಣ ವ್ರತ ಕಥಾಯಾಂ ದ್ವಿತೀಯೋಧ್ಯಾಯ ಸಂಪೂರ್ಣಂ ॥

ತೃತೀಯೋಧ್ಯಾಯಃ

ಋಷಿ ಜನಗಳೇ ಕೇಳಿ ವಸುಧಿ ತ್ರಯದಿ ಘನ । ಪೆಸರಾದ ಇನ್ನೊಂದು ಕಥೆಯ ॥ ಉಸುರುವೆ ಕೇಳ್ವರ ವ್ಯಸನವು ಪರಿಹಾರ । ಪುಸಿಯೆಲ್ಲ ಈ ನುಡಿ ಖರೆಯ ॥1॥ ವರ ಉಲ್ಕ ಮುಖನೆಂಬ ಧರಣೀಶನೋರ್ವನು । ಹರುಷದಿಂದಲಿ ತನ್ನ ಹಿತದ ॥ ತರುಣಿಯಿಂದೊಡಗೂಡಿ ಶರಧಿ ತೀರದಿ ನಿಜ । ಹರಿಯನ್ನು ಪೂಜಿಸುತಿರ್ದ ॥2॥ ಕ್ಷೋಣಿಪಾಲಕನಿದ್ದ ಆ ನದಿ ತೀರದಿ । ವಾಣಿಜ್ಯ ಮಧು ನಾಮಕನು ॥ ಸಾನುರಾಗದಿ ಬಂದು ಶ್ರೀನಿಧಿ ವ್ರತದ ವಿ-। ಧಾನವೇನೆಂದು ಕೇಳಿದನು ॥3॥ ಭೂಮಿಪಾಲಕ ಮಧು ನಾಮಕ ವೈಶ್ಯನ । ಆ ಮೃದು ನುಡಿಕೇಳಿ ಜವದಿ ॥ ಕಾಮಿತದಾ ಸತ್ಯ

ಸ್ವಾಮಿಯ ವ್ರತದಾ । ನೇಮವ ಪೇಳ್ದ ಸನ್ಮುದದಿ ॥4॥ ರಕ್ಕಸಾರಿಯ ಕತೆ ಭಕ್ತಿಲಿ ಕೇಳುತ । ಲಕ್ಕುಮಿಯುತ ಮುದದಿಂದ ॥ ಮಕ್ಕಳೆನಗಾಗಲು ಚಕ್ರಿಯ ಸುವ್ರತ। ಅಕ್ಕರದಲಿ ಮಾಳ್ಪೆನೆಂದ ॥5॥ ಈ ರೀತಿ ದೃಢ ವ್ಯಾಪಾರಿಯು ತಾಗೈದು । ಶೌರಿ ಪ್ರಸಾದ ಸ್ವೀಕರಿಸಿ॥ ಸಾರಿ ಪೇಳಿದ ತನ್ನಾಗಾರಕೆ ಬಂದು ತಾ । ನಾರಿಯ ಮುಂದೆ ವಿಸ್ತರಿಸಿ ॥6॥ ಪತಿಯ ವಚನ ಕೇಳಿ ಸತಿ ಶಿರೋಮಣಿ ಲೀಲಾ । ವತಿಯು ತನ್ನ ಮಂದಿರದಿ॥ ಹಿತದಿರುತಿರೆ ಸಿರಿಪತಿ ಕರುಣದಿ ಗರ್ಭ-। ವತಿ ತಾನಾದಳಾಕ್ಷಣದಿ ॥7॥ ಹತ್ತನೇ ಮಾಸದಿ ಉತ್ತಮ ಪುತ್ರಿಯ । ಪೆತ್ತಳು ಆ ನಾರಿ ತಾನು ॥ ಅತ್ಯಂತ ಸನ್ಮುದ ಚಿತ್ತನಾಗಿ ಸಾಧು। ಮರ್ತನು ಹರಿ ವ್ರತವನ್ನು ॥8॥ ಸುತೆಯು ಪುಟ್ಟಿದ ಮೇಲೆ ಸತಿ ಲೀಲಾ। ವತಿ ತನ್ನ ಪತಿಗಭಿವಂದಿಸಿ ನಿಂದು॥ ಅತಿಭಕ್ತಿಯಿಂದಲಿ ಕಥಿಸಿಕೊಂಡಳು ಯದು। ಪತಿ ವ್ರತ ಮಾಡಬೇಕೆಂದು ॥9॥ ಸುದತಿಯ ನುಡಿಕೇಳಿ ಮಧುನಾಮಕ ಸಾಧು। ವಿಧಿಸಿದ ಸುತೆ ಕಲಾವತಿಯ॥ ಮದುವೆಯ ಕಾಲದಲಿ ಯದುಪನರ್ಚಿಪೆನೆಂದು। ಮುದದಿ ಪೇಳ್ದನುಪಾಯ ॥10॥ ಪರಿಪರಿ ಸೌಖ್ಯದಿಂದಿರುತಿರೆ ವೈಶ್ಯನ । ತರಳೆಗೆ ಪೂರ್ಣ ಯೌವನವು ॥ ಬರಲು ಮಾಡಿದ ತಕ್ಕ ವರತಂದು ಲಗ್ನವ ಮರೆತು ಬಿಟ್ಟನು ಹರಿ ವ್ರತವ ॥11॥ ಶ್ರೀಮಂತ ವೈಶ್ಯನು ಪ್ರೇಮದಿಂದಲಿ ತನ್ನ । ಜಾಮಾತನೊಡನೆ ವ್ಯಾಪಾರ॥ ನೇಮದಿಗೈಯಲು ಗ್ರಾಮ ತ್ಯಜಿಸಿ ಪೋದ। ಆ ಮಹಾಪುರ ರತ್ನಸಾರ ॥12॥ ಈ ನಗರಕೆ ಬಂದು ವಾಣಿಜ್ಯ ವ್ಯಾಪಾರ । ಮಾಣದೆ ತಾ ಮಾಡುತಿರಲು ॥ ಶ್ರೀನಿವಾಸನು ಕೋಪ ಮಾನಸದಲಿ ಸುಖ। ಹೀನನಾಗೆಂದು ಶಪಿಸಲು ॥13॥ ಕುಪಿತದಿಂದಲಿ ಶ್ರೀಪ ಶಪಿಸಲು ಆ ಪುರ । ನೃಪನ ಮಂದಿರದಿ ತಸ್ಕರರು ॥ ಗುಪಿತದಿಂದಲಿ ಪೋಗಿ ವಿಪುಲದ್ರವ್ಯವನ್ನೆಲ್ಲ। ಕಪಟದಿಂದಪಹರಿಸಿದರು ॥14॥ ವಿತ್ತಾಪಹರಿಸಿದ ಮತ್ತೆ ಚೋರರು ತಾವು। ಜತ್ಯಾಗಿ ಓಡುತಲಿರಲು ॥ ಮತ್ತೆ ಮರಳಿ ನೋಡೇ ಅತ್ಯವಸರದಿಂದ । ಭೃತ್ಯ ಜನರು ಬರುತಿರಲು ॥15॥ ವಸುಧಿ ಪಾಲಕನ ಕೈವಶವಾದೆವೆಂಬಂಥ । ವ್ಯಸನದಿಂದಲೀ ಆ ಖಳರು॥ ನಿಶೆಯೊಳು ತಂಗಿದ್ದ ವಸು ವೈಶ್ಯ ಜನರಲ್ಲಿ । ಬಿಸುಟಿ ನಿಂದಿರದೆ ಓಡಿದರು ॥16 ॥ ಅರಸನ ದೂತರು ಅರಸುತ್ತ ಚೋರರ । ಬರಲು ಉಭಯ ವೈಶ್ಯರಲ್ಲಿ ॥ ಇರುವ ದ್ರವ್ಯವ ಕಂಡು ದುರುಳರು ಇವರೆಂದು । ಅರಿತು ತಮ್ಮಯ ಚಿತ್ತದಲ್ಲಿ ॥17॥ ಬಿಡದೆ ಆ ವೈಶ್ಯರ ಪಿಡಿದೆಳೆ ತಂದರು। ಉಡುಪ ಧ್ವಜಾದಿಪನಲ್ಲಿ ॥ ನುಡಿದರು ತಮ್ಮಯ ಒಡವೆಯ ಕದ್ದಂಥ । ಕಡು ದುಷ್ಟರಿವರೆನ್ನುತ್ತ ॥18॥ ದೂತರು ಪೇಳಿದ ಮಾತನು ಕೇಳಿ ಭೂ। ನಾಥನು ನುಡಿದನು ಜವದಿ ॥ ಯಾತಕೆ ತಡವು ನಿರ್ಭೀತಿಲಿ ಹಾಕಿರಿ। ಪಾತಕಿಗಳ ಸೆರೆ ಗೃಹದಿ ॥19॥ ಅಂದ ವಚನವ ಕೇಳಿ ಛಂದದಿ ದೂತರು । ಬಂಧಿಸಿ ಸಂಕೋಲೆಯಿಂದ ॥ ತಂದು ಹಾಕಲು ಸೆರೆಮಂದಿರದಿದ್ದರು । ಮಂದ ಭಾಗ್ಯರು ಶ್ರಮದಿಂದ ॥20॥ ಇತ್ತ ಆ ವೈಶ್ಯನ ಪುತ್ರಿ ಪತ್ನಿಯರೀ । ಗತ್ಯಂತ ಬಡತನ ಬರಲು ॥ ತುತ್ತನ್ನ ಕಾಣದೆ ನಿತ್ಯ ನಿತ್ಯ ತಿರು । ಗುತ್ತ ಭಿಕ್ಷೆ ಬೇಡುತಿರಲು ॥21॥ ಒಂದು ದಿನದಿ ಸಾಧುನಂದಿನಿ ಭಿಕ್ಷಕ್ಕೆ । ಬಂದಳು ವಿಪ್ರನ ಮನೆಗೆ ॥ ಛಂದದಿ ಆ ದ್ವಿಜ ಮಂದಿರದೊಳು ನಿಜ । ಇಂದಿರೇಶನ ಚೆನ್ನಾಗಿ ॥22॥ ವಿಧದಿ ಪೂಜಿಸಿ ಭೂಬುಧರಿಂದ ಕಥೆಯನು ಮುದದಿ ಕೇಳುತಲಿರಲು ॥ ಸುದತಿ ಕಲಾವತಿ ಅದನು ಲಾಲಿಸಿ ತನ್ನ । ಸದನಕೆ ಮರಳಿ ಬಂದಳು ॥ ಬಂದು ತನ್ನಯ ತಾಯ ಮುಂದೆ ಪೇಳ್ದಳು ಸತ್ಯ । ನಂದ ನಂದನ ಚರಿತೆಯನ್ನು ॥ ನಂದಿನಿಯಳಮಾತು ಛಂದದಿ ಕೇಳುತ । ಅಂದು ಗೈದಳು ದೃಢವನ್ನು ॥24॥ ಪತಿಯು ಜಾಮಾತನ ಯುತನಾಗಿ ಬರಲೆಂದು । ಅತಿಭಕ್ತಿಯಲಿ ಶೌರಿ ವ್ರತವ ॥ ಸುತೆ ಸಹಿತದಿಗೈದು ಕ್ಷಿತಿಸುರುಪರಿಮುಖ । ಹಿತದಿ ಕೇಳ್ದಳು ಹರಿಕಥೆಯ ॥25॥ ಸತ್ಯ ದೇವೇಶಗೆ ಅತ್ಯಂತ ದಯಪುಟ್ಟಿ। ಪೃಥ್ವಿಪಾಲನ ಸ್ವಪ್ನದಲ್ಲಿ ॥ ವಿತ್ತಾಪಹರಿಸಿದ ಮತ್ತರಲ್ಲವೋ ಇವ । ರುತ್ತಮರೆಂದು ಪೇಳುತಲಿ ॥26 ॥ ಪೊಡವಿಪ ಅವರನ್ನು ಬಿಡದಿರೆ ನಾ ನಿನ್ನ । ಕಡು ಸಂಪದ ಸಾಮ್ರಾಜ್ಯ ॥ ಒಡವೆ ವಸ್ತುಗಳೆಲ್ಲ ಬಿಡದೀಗ ಸೆಳೆಯುವೇ । ದೃಢವೆಂದು ಭಾವಿಸು ರಾಜ ॥27॥ ಪರಮಚಿತ್ತದಿಂದ ಧರಣಿಪ ತಾನೆದ್ದು । ಕರೆಸುತ್ತ ಸೆರೆಯೊಳಿದ್ದವರ ॥ ಅರುಹಿದ ಅವರಿಗೆ ತೆರಳಿರಿ ನಿಮಗಿನ್ನು । ಹರಿದಯವಾಯಿತು ಪೂರಾ ॥28॥ ತೆಗೆದಿದ್ದ ದ್ರವ್ಯಕೆ ದ್ವಿಗುಣಕೊಟ್ಟವರಿಗೆ । ಮಿಗೆ ಮಾಡುತ ಬಹುಮಾನ ॥ ಸುಗುಣ ಭೂಪಾಲನು ಪೊಗಳಿದ ಮನದೊಳು । ಖಗಧ್ವಜ ಶಾಮಸುಂದರನ ॥29॥ ಇತಿ ಶ್ರೀ ಸತ್ಯನಾರಾಯಣ ವ್ರತಕಥಾಯಾಂ ತೃತೀಯೋಧ್ಯಾಯಃ ಸಂಪೂರ್ಣಂ॥

ಚತುರ್ಥೋಽಧ್ಯಾಯಃ

ಕಥಿಸುವೆ ಕೇಳಿರಿ ಹಿತದಿ ಮುಂದಾಗುವ । ರತಿಪತಿ ಜನಕನ ಚರಿತಾ ॥ ಕ್ಷಿತಿಪನಾಜ್ಞದಿ ಸಾಧು ಅತಿಜವ ತವ ಪುರ । ಪಥ ಹಿಡಿದನು ಸ ಜಾಮಾತಾ ॥1॥ ಬರುವ ವೈಶ್ಯನಗುಣ ಪರಿಕಿಸಲೋಸುಗ । ಹರುಷದಿಂದಲಿ ಯತಿರೂಪ ॥ ಧರಿಸಿ ಬಂದನು ಆರು ಅರಿಯರಂದದಿ ಖರ । ಮುರವೈರಿ ದುರಿತ ನಿರ್ಲೇಪ ॥2॥ ಕಡುಜವದಿಂದಲಿ ಜಲಧಿ ತೀರಕೆ ಬಂದು । ಮೃಢವಂದಿತ ಮಹಾರಾಯ ॥ ಹಡಗದೊಳಿರುವಂಥಾ ಒಡವೆ ಕೇಳಲು ಸಾಧು । ಪುಡುಕಿದ ಪೇಳಲುಪಾಯ ॥3॥ ಚೀರವಲ್ಕಲವುಟ್ಟ ಚಾರುಮೂರ್ತಿಯು ವಿ- । ಚಾರ ಮಾಡದೆ ಈ ಕೃಪಣ । ಚೋರನು ಇವನೆಂದು ಸಾರಿದ ಇದರೊಳ್ - । ಸೇರಿಸಿರುವೆ ಲತಾಪರ್ಣ ॥4॥ ಗೂಢ ಕಪಟದಿ ಸಾಧು ನುಡಿದ ಭಾಷೆಯ ಕೇಳಿ । ಪೊಡವೀಶ ಪನ್ನಗ ಶಯನ ॥ ತಡೆಯದೆ ಮನದೊಳು ಕಡುಕೋಪದೊಳು ಪೇಳ್ದ । ದೃಢವಾಗಲಿ ನಿನ್ನ ವಚನ ॥5॥ ನಿಟ್ಟಿನಿಂದಲಿ ಪರಮೇಷ್ಠಿಪಿತನು ಶಾಪ । ಕೊಟ್ಟು ತಾ ಪೋಗಲು ಇತ್ತ ॥ ಭ್ರಷ್ಟ ವೈಶ್ಯನು ತಾ ಥಟ್ಟನೆ ನೋಡಿದ । ಪೆಟ್ಟಿಗೆಯೊಳಗಿದ್ದ ವಿತ್ತ ॥6॥ ವ್ರತತಿ ಪರ್ಣಗಳಿಂದ ಯುತವಾದುದ ಕಂಡು । ಪತಿತ ವಿಶ್ವಾಸಘಾತುಕನು ॥ ವ್ಯಥೆ ಪೂರಿತನಾಗಿ ಸ್ಮೃತಿ ತಪ್ಪಿ ದೇಹದೊಳ್ । ಪೃಥ್ವಿಗೆ ತಾನುರುಳಿದನು ॥7॥ ವಸುವ್ಯಾಕುಲದಿಂದ ವಸುಧೆಯೊಳ್ ಮಲಗಿದ । ಶ್ವಶುರಗೆ ನುಡಿದ ಜಾಮಾತಾ ॥ ಋಷಿವರನಿಗೆ ನೀನು ಪುಸಿಯಾಡಿದರಿಂದ । ವ್ಯಸನವಾಯಿತು ತಿಳಿ ತ್ವರಿತ ॥8॥ ಸುಗುಣ ರಹಿತ ಸಾಧುಮಗಳಗಂಡನ ಮಾತು । ಸೊಗಸಿನಿಂದ ಕೇಳುತ್ತಾ ॥ ಮುಗಿದ ಯತಿಗೆ ಕರಯುಗದಿ ತನ್ನಪರಾ- । ಧಗಳ ಕ್ಷಮಿಸಬೇಕೆನುತ ॥9॥ ಪರಿಪರಿ ಪ್ರಾರ್ಥಿಸಿ ಮೊರೆಯಿಡಲಾಕ್ಷಣ । ಶರಣವತ್ಸಲ ಜಿತಕೋಪ ॥ ಕರುಣದಿಂದಲಿ ಶಾಪ ಪರಿಹರಿಸಿ ತಾನು । ತೆರಳಿದ ಸುರನುತ ಶ್ರೀಪ ॥10॥ ಮದನಪಿತನ ದಯ ಒದಗಲು ಘನತರ । ಮಧುನಾಮಕ ವ್ಯಾಪಾರಿ ॥ ಉದಧಿ ತೀರದಿ ನಿಜ ಪದುಮೇಶನ ಪೂಜೆ । ಮುದದಿ ಗೈದನು ಪರಿಪರಿ ॥11॥ ಶಿರಿವರನರ್ಚಿಸಿ ತರುವಾಯದಲಿ ಸಾಧು। ಭರದಿನಾವಿ ರೂಢನಾಗಿ ॥ ತೆರಳಿ ಬಂದನು ರತ್ನಪುರನಿಕಟಕೆ ತನ್ನ । ತರಳೇಶನ ಸಹಿತಾಗಿ ॥12॥ ಭೂರಿ ಮುದದಿ ಅಬ್ಧಿ ತೀರಕೆ ಬಂದಂಥ ಪತಿರಾಯನು ಅತಿಬೇಗ ॥ ಬಾರದಿರುವ ತನ್ನ ನಾರಿಗೆ ಪೇಳಲು । ಚಾರನ್ನ ಕಳುಹಿದನಾಗ ॥13॥ ಸತಿ ಲೀಲಾವತಿ ತಾನು ಪತಿ ಬಂದ ಸಂಗತಿ । ಅತಿ ಜವದಲಿ ಕೇಳುತ್ತ ॥ ಮಿತಿ ಮೀರಿದ ಸುಖಪೂರಿತಳಾಗಿ ಹರಿವ್ರತ । ಸುತೆಗರುಹಿದಳು ಮಾಡೆನುತ ॥14॥ ಹರುಷದಿಂದಲಿ ಪೇಳಿ ಭರದಿ ಬಂದಳು ಪತಿ । ದರುಶನ ಮಾಡಿಕೊಳ್ಳಲು ॥ ತರಳೆ ಕಲಾವತಿ ಶೌರಿ ಪ್ರಸಾದ ಸ್ವೀಕರಿಸದೆ । ಶರಧಿಗೆ ಬರಲು ॥15॥ ಮುರಾರಿ ಪ್ರಸಾದ ಲಲನೆಯು ಮರೆಯಲು। ಜಲಜಾಕ್ಷ ತಾಳುತ್ತ ಕೋಪ ॥ ಘಳಿಲನೆ ಘನನಾವೆಯೊಳಗಿರುವಾಕೆಯ । ಚೆಲುವ ಪತಿಯ ಮುಳುಗಿಸಿದ ॥16॥ ಶರಧಿಯೊಳ್ ಮುಳುಗಿಹ ಹರಣ ಪತಿಯ ನೋಡಿ । ತರುಣಿ ಕಲಾವತಿ ಧರೆಗೆ ॥ ಮರುಗಿ ಒರಗಿ ಮೈಮರೆದು ಬೀಳಲು । ಸರುವರು ಸೋಜಿಗವೆಂದರಾಗ ॥17॥ ತನುಜೆಯ ಶೋಕವ ಜನನಿಪಿತರು ನೋಡಿ । ಮನದೊಳು ಬಹು ದುಃಖಿಸಿದರು ॥ ಘನತರ ಭಕ್ತಿಲಿ ಮನಸಿಜ ರಿಪುನುತ । ವನಧಿಶಾಯಿಯ ಭಜಿಸಿದರು ॥18॥ ವನಚರ ಕೂರ್ಮನೆ ವನಧಿ ವಸನಪತಿ । ಮನುಜ ಕಂಠೀರವ ಬಾಲ ॥ ಜನನಿಯ ಕೊಂದಂಥ ಜನಕಜೆ ಪತಿರಂಗ । ಅನಲಾಕ್ಷ ಸಖ ಖಲಕಾಲ ॥19॥ ಚಿತ್ತದಿಂದಲಿ ಸಾಧು ಸತ್ಯ ದೇವೇಶನ । ಹತ್ತು ನಾಮವ ಭಜಿಸಲು ॥ ಪೃಥ್ವಿಗಧಿಪತಿ - ಪುರುಷೋತ್ತಮಗೆ ಆಗ । ಅತ್ಯಂತ ಕರುಣ ಪುಟ್ಟಲು ॥20॥ ಹರಿಪದದಲಿನಿಂತು ಹರಿವಂದಿತನಾದ । ಹರಿನುಡಿದನು ಪ್ರಸಾದ ॥ ಹರಿಣಾಕ್ಷಿ ಹೋಗಿ ಸ್ವೀಕರಿಸಿ ಬಂದರೆ । ಪರಿಹರಿಸುವುದು ಈ ಖೇದ ॥21॥ ತಕ್ಷಣದಲಿ ಅಂತರಿಕ್ಷವಾಣಿಯ ಕೇಳಿ । ಲಕ್ಷಣವಂತೆ ಪ್ರಸಾದ ॥ ಭಕ್ಷಿಸಿ ಬರಲಾಗ ಲಕ್ಷ್ಮೀಶನ ದಯ ಕ-। ಟಾಕ್ಷದಿ ಆಯಿತು ಮೋದ ॥22॥ ಛಂದದಿಂದೆಲ್ಲರೂ ಬಂದು ಪ್ರತಿಮಾಸದಿ । ಮಂದಿರದೊಳ್ ಗೈದು ವ್ರತವಾ । ನಂದ ಈ ಜಗದೊಳ್ ಪೊಂದಿಸೇರ್ದರು ಶಾಮ । ಸುಂದರ ವಿಠಲನ ಪುರವ ॥23॥ ॥ ಇತಿ ಶ್ರೀಸತ್ಯನಾರಾಯಣ ವ್ರತಕಥಾಯಂ ಚತುರ್ಥೋಽಧ್ಯಾಯಂ ಸಂಪೂರ್ಣ ॥

ಅಥಃ ಪಂಚಮೋದ್ಯಾಯಃ

ಸಾಧು ಜನಗಳೆ ಕೇಳಿ ವೇದಪಿತನ ಪ್ರ- । ಸಾದ ಮಹಿಮೆ ಘನವಾದ॥ ಗಾಥ ಚರಿತೆಯನ್ನು ಬೋಧಿಪೆ ನಿಮಗೀಗ ।

ಶ್ರೀಧರಗೆರೆವ ಸನ್ಮೋದ॥1॥ ಭೂತಳದೊಳು ತುಂಗಕೇತು ನಾಮಕ ನೃಪ। ಖ್ಯಾತಿ ಪೊಂದಿರಲೊಂದು ದಿನದಿ॥ ಪ್ರೀತಿಯಿಂದಲಿ ಮೃಗವ್ರಾತ ತರಿಯಲು ಪೋದ । ಭೀತಿಯಿಲ್ಲದೆ ಕಾನನದಿ ॥2॥ ಶರಧನುವಿಗೆ ಪೂಡಿ ಹರಿಪುಲಿಗಳ ಸಂಹರಿಸಿ । ಚರಿಸಿ ಬ್ಯಾಸರದಿ ॥ ಪುರದಿ ಸಾಮಿಪ್ಯದಿ ಇರುವ ಪರ್ಬುದ ವಟ । ತರುನೆರಳಿಗೆ ಬಂದ ಜವದಿ ॥3॥ ದೊರೆಯೂ ವಿಶ್ರಮಿಸಿದ ತರು ಸನ್ನಿಧಿಯಲ್ಲಿ । ತುರುಪಾಲಕರೆಲ್ಲನೆರೆದು ॥ ಹರಿಪೂಜೆಯನುಗೈದು ವರಸುಪ್ರಸಾದವ । ಧರಣಿಪನಲ್ಲಿಗೆ ಒಯ್ದು ॥4॥ ವಂದಿಸಿ ಮುಂದಿಡೆ ನಿಂದಿಸಿ ತನ್ನಯ । ಮಂದಿರಕೆ ಬರಲವನಾ ॥ ನಂದವು ಕುಂದಿತು ಇಂದಿರೆಪೋದಳು । ನಂದನರಳಿದರು ಮುನ್ನ ॥5॥ ಹರಿಯ ಪ್ರಸಾದ ಧಿಕ್ಕರಿಸಿದ ಕಾರಣ । ಸರಿಯಿತೆನಗೆ ಸಾಮ್ರಾಜ್ಯ॥ ತ್ವರಿತದಿ ಮನದೊಳು ಅರಿತು ತಾ ಮರುಗಿದ। ಪರಮಭಕ್ತಿಲಿ ಆ ರಾಜ ॥6॥ ಗೋಪಾಲರಿರುವಲ್ಲಿ ತಾ ಪೋಗಿ ಶ್ರೀಸತ್ಯ ಶ್ರೀಪನ್ನ ಪೂಜಿಸಲಾಗ ॥ ತಾ ಪರಹಿತನಾಗಿ ತಾ ಪಡೆದನು ಸಿರಿ ಸುಪುತ್ರ। ಧರೆಯ ವೈಭೋಗ ॥7॥ ಯತಿಗಳೆ ನಿಮಗೀಗ ರತಿಪತಿ ಜನಕನ । ವ್ರತದ ಮಹಿಮೆ ಕಥಿಸಿದೆನು ॥ ಕ್ಷಿತಿಯೊಳು ಇದನಾರು ಪ್ರತಿಮಾಸಮಾಳ್ಪರು । ಪತಿತ ಪಾವನ ರಾಘವನು ॥8॥ ಕಡುಕುರುಡಗೆ ಕಣ್ಣು ಜಡಬಧಿರಗೆ ಕರ್ಣ । ದೃಢಬಂಜೆಗೆ ಸಂತಾನ ॥ ಬಡವಗೆ ಭಾಗ್ಯವ ಸಡಗರದಲಿ ಕೊಟ್ಟು । ಬಿಡದೆ ರಕ್ಷಿಪನನುದಿನ ॥9॥ ಈ ಮಹಾಚರಿತೆಯ ಯಾಮಯಾಮಕೆ ನಿತ್ಯ । ನೇಮದಿ ಪಠಿಸುವವರನು ॥ ಕಾಮಿತಫಲವಿತ್ತು ಪ್ರೇಮದಿ ಸಲಹುವ। ಶಾಮಸುಂದರಸ್ವಾಮಿ ತಾನು॥10॥ ಜಯ ಸತ್ಯದೇವಗೆ ಜಯಸತ್ಯ ಶೀಲಗೆ । ಜಯ ಸತ್ಯ ಲೋಕೇಶ ಪಿತಗೆ ॥ ಜಯ ಶ್ರುತಿವೇದ್ಯಗೆ ಜಯ ಶ್ರೀನಿವಾಸಗೆ । ಜಯ ಶಾಮಸುಂದರ ದೊರೆಗೆ ॥11॥ ಗುರುವರ ಶಾಮಸುಂದರ ದಾಸರಿಂದಲಿ ವಿರಚಿತ ಈ ಸತ್ಯಕಥೆಯ। ಅರಿತು ಮನದಲಿ ಬಿಡದೆ ನಿರುತ ಬರೆದೋದಲು। ವರದ ವಿಠಲ ಪೊರೆವ ಸತತಾ॥ ॥ ಶ್ರೀ ಗುರುಮದ್ವೇಶಾರ್ಪಣಮಸ್ತು ॥

ಕಾಪಾಡು ಶ್ರೀಸತ್ಯನಾರಾಯಣ — ರಾಗ: ಮೋಹನ-ಆದಿತಾಳ

ಕಾಪಾಡು ಶ್ರೀಸತ್ಯನಾರಾಯಣ ಪನ್ನಗಶಯನಾ ಪಾವನ ಚರಣಾ ನಂಬಿದೆ ನಿನ್ನಾ॥ಪ॥ ಮನವೆಂಬ ಮಂಟಪ ಬೆಳಕಾಗಿದೆ। ಹರಿನಾಮದ ಮಂತ್ರವೇ ತುಂಬಿದೆ। ಎಂದೆಂದು ಸ್ಥಿರವಾಗಿ ನೀನಿಲ್ಲಿರೂ। ನನ್ನಲ್ಲಿ ಒಂದಾಗಿ ಉಸಿರಾಗಿರು॥1॥ ನನಗಾಗಿ ಏನನ್ನು ನಾ ಬೇಡೆನು। ಧನಕನಕ ಬೇಕೆಂದು ನಾ ಕೇಳೆನು॥ ಈ ಮನೆಯು ನೀನಿರುವ ಗುಡಿಯಾಗಲಿ। ಸುಖ ಶಾಂತಿ ನೆಮ್ಮದಿಯ ನೆಲೆಯಾಗಲಿ॥2॥ ಕಣ್ಣೀರ ಅಭಿಷೇಕ ನಾ ಮಾಡಿದೆ। ಕರುಣಾಳು ನೀ ನನ್ನ ಕಾಪಾಡಿದೆ। ಬರಿದಾದ ಮಡಿಲನ್ನು ನೀ ತುಂಬಿದೆ। ನಾ ಕಾಣದಾನಂದ ನೀ ನೀಡಿದೆ॥3॥

ಕರುಣಿಸೋ ದೇವ — ರಾಗ: ಶುಭಪಂತುವರಾಳಿ

ಕರುಣಿಸೋ ದೇವ ನೀ ಭರದಿಂದ ಸುರಗಿಯ ಹೂವಾ॥ಪ॥ ಬಗೆ ಬಗೆಯಿಂದಲಿ ಮುಗಿವೆ ನಿನಗೆ ಕೈಯ್ಯ। ಸುದತಿಯಾರಿಗೇ ಬೇಗ। ಸೊಗಸಾದ ಕುಸುಮವಾ॥1॥ ಇಂದುಧರೇಶ ಸದಾನಂದ ಇಂದಿರೇ ಅರಸ। ಬಂದದ್ದಾಗದು ಎಂದು ನಾ ಬೇಡುವೆ ಕಂದರ್ಪ ಪಿತನಾದ ತಂದೆ ನಾರಾಯಣ॥2॥ ದಕ್ಷಕನೇ ಸದಾನಂದ ಮೋಕ್ಷದಾಯಕನೇ। ಪಕ್ಷಿ ಬಂದೆರಗಿಸಿ ರಕ್ಷಿಸು ಮನುಜರಾ। ಮುಕ್ತಿದಾಯಕ ಬೇಗ ಮೋಕ್ಷ ಸ್ಥಾನದ ಹೂವ॥3॥ ಅಗಜೇಯ ರಮಣಾ। ಸದಾನಂದ ಜಗವ ಮೋಹಿಪನಾ। ಬಗೆ ಬಗೆಯಲಿ ಮುಗಿವೆ ನಿನಗೇ ಕೈಯ್ಯ। ಸುದತಿಯರಿಗೇ ಬೇಗ ಸೊಗಸಾದ ಕುಸುಮವಾ॥4॥

ಸಲಹೋ ಸಲಹೋ ಸತ್ಯನಾರಾಯಣ — ರಾಗ: ಶ್ರೀ

ಸಲಹೋ ಸಲಹೋ ಸತ್ಯನಾರಾಯಣ। ಬೇಡಿಕೊಂಬೆನು ನಿನ್ನ॥ಪ॥ ಬಡವರನ್ನು ಬಿಡದೆ ಸಲಹೋ। ಪೊಡವೀಶಪತಿ ನಿನ್ನ ದೃಢವಾಗಿ ನಂಬಿದೇ॥ಅ.ಪ॥ ಹರಿಹರಿ ಹರಿ ಎಂದು ಕರಿರಾಜ ಪರಿಪರಿ। ಹರಿ ಎಂದು ಬೇಗದಿ ಸ್ಮರಿಸುತಲಿರಲು। ಹರಿ ನೀನು ತ್ವರಿತದಿ ಚಕ್ರದಿಂದಕ್ರನ। ಸೀಳಿ ಕರಿಯನ್ನೇ ಕಾಯ್ದೆ ಪರಮ ದಯಾನಿಧೇ॥1॥ ದೀನ

ವತ್ಸಲ ಹರಿ ಪರಿಪಾಲಿಸೆನ್ನನು। ಕೈ ಬಿಡಬೇಡವೋ ಮುರಹರನೇ। ಪ್ರಾಣೇಶ ವಿಠಲನೆ ನಿನ್ನ ಹೊರತು ಎನ್ನ। ಪೊರೆವರ ಕಾಣೆನೋ ಪುರಂದರ ವಿಠಲ॥2॥

ಪಾಲಿಸು ಸುಪ್ರಸಾದವ ಸತ್ಯದೇವ (ಪ್ರಸಾದ ಬೇಡುವುದು)

ಪಾಲಿಸು ಸುಪ್ರಸಾದವ ಸತ್ಯದೇವ। ಲೀಲೆಯಿಂದಲಿ ಮಾಧವ॥ಪ॥ ಕಾಲಕಾಲದಿ ನಿಮ್ಮ ಕಾಲಿಗೆರಗಿ ಬೇಡುವೆ। ನಾಲಿಗೆಯೊಳು ನಿಮ್ಮ ಪಾಲಿಸುವಂದದಿ॥ಅ.ಪ.॥ ಕಲ್ಲಾಗಿದ್ದ ಹಲ್ಯೆಯ। ಶಿರದಿ ನಿಮ್ಮ। ಪಾದಾಬ್ಜವು ತಾಗಲಾಗ। ಚಲ್ವರೂಪದಿ ಬಂದು ಎಲ್ಲ ಪೂಜೆಯ ಗೈದ। ಆಲ್ಲಿಯೆ ಕಂಡಿರ್ದ ಪದ ಅರವಿಂದ ಸುಮವನು॥1॥ ಇಂದೆ ನಿಮ್ಮನು ನಂಬಿದ। ಜನಕೆ ಪ್ರೇಮ। ಎಂದಿನಂದದಿ ತೋರುತ। ಅಂದಂದು ಬರುವಂಥ ಮುಂದೆಂದು ಇರುವಕಷ್ಟ। ವೃಂದವ ಕುಂದಿಸೆ ಮಂದಾರ ಸುಮವನು॥2॥ ಪೀತಾಂಬರದಲಂಕೃತಾಲೋಕ ಜನನೀ। ನಾಥ ಕೌಸ್ತುಭ ಶೋಭಿತ। ಖ್ಯಾತ ಭಕುತ ಜನ ಪ್ರೀತ ಮಾನಸ ಲೋಕ। ನಾಥ ಶಿರದೊಳಿರ್ಪ ಕೇತಕಿ ಸುಮವನು॥3॥

ಸತ್ಯದೇವ ಕೊಡು ಪ್ರಸಾದವ (ಪ್ರಸಾದಬೇಡುವುದು)

ಸತ್ಯದೇವ ಕೊಡು ಪ್ರಸಾದವ। ಶಿರದಿ ಮರೆವ। ಪತ್ರ ಪುಷ್ಪಭರಿತ ದ್ರವ್ಯದ॥ಪ॥ ಭುವನವಂದ್ಯ ನಿಮ್ಮ ಪಾದವ। ಅಜಸ್ರದೊಳಗೆ। ಕವಲು ಮನವ ಬಿಟ್ಟು ಭಜಿಸುವ। ಭುವನ ಜನರಿಗೊಲಿದು ದಯದಿ। ಭುವನ ಸಿಂಧುವನ್ನೆ ಜಗದಿ। ತವಕದಿಂದ ಸ್ಥಿರವಿರಾಜ ಭುವನಧೀಶ ಸತ್ಯದೇವ॥1॥ ಆದಿಭೂತ ವಿಶ್ವವಂದನೇ। ಸುಪರ್ಣಧ್ವಜನೇ। ವೇದವೇದ್ಯ ದೇವ ದೇವನೆ॥ ಮೇದಿನೀಶ ಧ್ರುವನಿಗೊಲಿದು। ಆದಿಮೂರ್ತಿ ವಿಶ್ವವಂದ್ಯ। ಪಾದನೆನೆವ ಭಕ್ತರಿಗೆ ಸಪಾದ ಭಕ್ಷ್ಯದಯದಿ ಕೊಡುವ॥2॥ ಕಡುದರಿದ್ರನಾದ ವಿಪ್ರಗೆ। ಕಟಾಕ್ಷ ತೋರಿ। ನುಡಿಯ ಸತ್ಯವ್ರತವನಾತನಗೆ। ಒಡನೆ ಭಕ್ತಿಯಿಂದ ಮಾಡೆ। ಅಡಗಿಸುತಾ ಕಷ್ಟವೆಲ್ಲ। ಕೂಡಿಸಿ ಸಿರಿ ಸಂಪನ್ನಾನಾಗೆ ಕಡೆಗೆ ಮುಕ್ತಿ ಕರುಣಿಸಿರ್ದ॥3॥ ಕರದಿ ಶಂಖ ಚಕ್ರ ಪದ್ಮವು। ಗದೆಯಸಹಿತ।ಧರಿಸಿ ನೆನೆವ ಭಕ್ತರಿಷ್ಟವು। ಕರುಣಿಸುವ ಮುರಾರಿ ನಿನ್ನ। ಚರಣ ನಿಂದ್ಯ ಕುಲಕುಠಾರ। ಕೊರಳ ವೈಜಯಂತಿ ಮಾಲೆ ಧರಿಸಿ ಮೆರೆವ ಹರಿಯೆ ದಯದಿ॥4॥ ಗೋಪಗಣರ ಸತ್ಯವ್ರತವನು ಮನ್ನಿಸಿರದೆ। ಭೂಪ ಪೋಗಲವನ ಸಿರಿಯನು। ಕೋಪದಿಂದ ನಾಶಿಸಲ್ಕೆ। ಭೂಪ ಮನದಿ ನೆನೆಯುತಾಗ। ಶ್ರೀಪತಿಯು। ವ್ರತವನೆಸಗೆ ಶ್ರೀ ಪಿನಾಕಿ ಸಖನೆ ದಯದಿ॥5॥ ವೈದೇಹಿ ವಂದ್ಯ ರಾಮನೆ। ಕಂಸಾರಿಯಾದ। ಮಧುವಿನಾಶ ಕೃಷ್ಣ ದೇವನೆ। ಚದುರ ಬೌದ್ಧ ಕಲ್ಕಿ ಮೂರ್ತಿ। ಯದುಕುಲಾಬ್ಧಿ ತುಹಿನ ಲಕ್ಷ್ಮಿ। ಮುದದಿ ರಕ್ಷಿಸಯ್ಯ ದೇವ ಯದುಪತಿಯೆ ನಿರತ ದಯದಿ॥6॥

ಎತ್ತುವೆ ವರ ಮಂಗಳಾರತಿಯ (ಆರತಿ) ರಾಗ: ಭೌಳಿ

ಎತ್ತುವೆ ವರ ಮಂಗಳಾರತಿಯ। ಶ್ರೀಸತ್ಯಮೂರ್ತಿಗೆ। ಎತ್ತುವೆ ವರ ಮಂಗಳಾರುತಿಯ॥ಪ॥ ಚಿತ್ತಜನಪಿತ ಸತ್ಯವಂತಗೆ ಸತ್ಯರೂಪನಿಗೆ। ಭಾನುಕೋಟಿ ವಿಭಾಸನಿಗೆ ರಿಪು। ದಾನವ ದ್ವಿವಿತಗೆ। ಗಾನಲೋಲಗೆ। ಮುನಿವಂದ್ಯಗೆ। ಮಾನಿನಿ ದ್ರೌಪದಿ ಮಾನ ಕಾಯ್ದಗೆ॥1॥ ದೇವಕಿಸುತ ಕೃಷ್ಣಮೂರ್ತಿಗೇ ದೇವ ಬೌದ್ದನಿಗೆ। ದೇವಕಲ್ಕಿಗೆ। ದೇವನಾರದಿ ರಕ್ಷಿಸುವ ದೇವೇಂದ್ರವಂದ್ಯಗೆ॥2॥ ಮತ್ಸ್ಯ ಕೂರ್ಮ ವರಾಹ ನರಹರಿ ಸ್ವಚ್ಛವಾಮನನಿಗೆ। ಅಚ್ಯುತನಿಗೆ ಪ್ರಭುರಾಮ ದಶರಥ ಅಚ್ಯುತಾತ್ಮಜ ರಾಮಚಂದ್ರಗೆ॥3॥ ಶಂಖು ಚಕ್ರದ ಮೂರ್ತಿಗೆ ಪಂಕಜಾಲಯಗೆ। ವೆಂಕಟಾದ್ರಿ ನಿವಾಸ ಸಹಿತಗೆ ಸಂಕುಲಾರ್ಚಿತ ವೇಂಕಟೇಶಗೆ॥4॥

ಶತಕೋಟಿ ತೇಜನಿಗೆ ಮುತ್ತಿನಾರತೀ (ಆರತಿ) ರಾಗ: ಅಭೋಗಿ

ಶತಕೋಟಿ ತೇಜನಿಗೆ ಮುತ್ತಿನಾರತೀ। ನವ ಶೋಭಾ ನಿಲಯನಿಗೆ ಕೆಂಪಿನಾರತೀ। ಜ್ಯೋತಿ ಸ್ವರೂಪಗೇ ಕರ್ಪೂರದಾರತಿ। ಸತ್ಯನಾರಾಯಣನಿಗೆ ದಿವ್ಯ ಆರತೀ॥ಶತ॥ ಸತ್ಯ ನಿಕೇತನ ಸದ್ಗತಿ ಸಾಧನಾ। ಸಕಲ ದೇವತಾ ಸ್ವರೂಪಗೇ। ನಿಖಿಲ ಚೈತನ್ಯ ಇಷ್ಟಾರ್ಥದಾಯಕಾ ಶ್ರಿತಜನಪಾಲಗೆ ಮಂಗಳಾರತೀ॥ಶತ॥ ಮಧುಸೂಧನನಿಗೆ ಮಾಧವ

ಮೂರ್ತಿಗೆ। ಮಂಗಳರೂಪಗೆ ಧರ್ಮಾವತಾರಗೇ। ಮೂಜಗದೊಡೆಯಗೆ ನಾರಾಯಣಗೇ। ಎತ್ತುವಾ ಬನ್ನಿರಿ ಭಕ್ತಿಯಾರತೀ ।।ಶತ।। ಆದ್ಯಂತರಹಿತನಿಗೆ ಆರಾಧನಾ। ನಿಗಮ ಸಂಚಾರಿಗೆ ನೀರಾಜನಾ। ಪರಮಾತ್ಮರೂಪಗೇ ಪಂಚಾರತೀ। ಸತ್ಯನಾರಾಯಣಗೆ ನಿತ್ಯ ಆರತೀ।।ಶತ।।

ಅಷ್ಟದಳದ ಮಂಟಪದಿ (ಆರತಿ)

ಅಷ್ಟದಳದ ಮಂಟಪದಿ। ಸೃಷ್ಟೀಶ ದೇವನಿರಿಸಿ। ನಿಷ್ಠೆಯಿಂದಲಿ ದ್ವಿಜರೆಲ್ಲರೂ ಕೂಡಿ ವಿಶಿಷ್ಟ। ಮಂತ್ರಗಳಿಂದ ಪೂಜೆಯಮಾಡಿ। ತಮ್ಮಿಷ್ಟವರ ದಯಮಾಡಬೇಕುತಲೆ। ಪುಷ್ಪದಾರತಿಯ ಬೆಳಗೀರೆ ।।1।। ಶ್ರೀಪತಿ ಪರಿವಾರಗಳು। ದೀಪ ಪ್ರಕಾಶದಂತಿರಲು। ದೀಪ ಧೂಪ ದೀಪಾರತಿಗಳನ್ನೆಲ್ಲ ಮಾಡಿ। ಸಪಾದ ಭಕ್ಷ್ಯವನಿಟ್ಟು। ಪಾಪ ರಹಿತ ಚಿದ್ರೂಪನಾದವಗೆ। ಸೊಂಪಿನಾರತಿಯಾ ಬೇಳಾಗೀರೆ।।2।। ಸಾಗರ ತನುಜೆಯ ಸಹಿತ। ನಾಗಶಯನ ಕುಳ್ಳಿರಲು। ನಾಗಯೋಗಾನಂದನು ದ್ವಿಜರು ತಮ್ಮಿಚ್ಛಾ ಭೋಗವ ಕರುಣಿಸ ಬೇಕೆಂದೆನುತ ಪೂಗ ಪುನ್ನಾಗ ತಾಂಬೂಲ ಸಮರ್ಪಿಸಿ। ಕರ್ಪೂರದಾರತಿಯ ಬೇಳಾಗೀರೆ।।3।। ಮಂಗಳಂ ಭಕ್ತರಾಧ್ಯನಿಗೆ। ಮಂಗಲಂ ನಿರ್ವಿಕಲ್ಪನಿಗೆ। ಮಂಗಲಂ ಮಂಗಲಂ ಮಂಗಲಂ ಭವ ಭಯ ನಾಶಗೆ। ಮಂಗಲಂ ಪರಮ ಪ್ರಕಾಶನಿಗೆ। ಮಂಗಲಂ ಕಮಲಾ ರಮಣನಿಗೆ। ಮಂಗಲಾರತಿಯ ಬೇಳಾಗೀರೆ।।4।।

ಬೆಳಗುವೆನಾರತಿ ಶ್ರೀ ಸತ್ಯನಾರಾಯಣಗೆ (ಆರತಿ) ರಾಗ: ಜಯಂತಸೇನ-ಆದಿತಾಳ

ಬೆಳಗುವೆನಾರತಿ ಶ್ರೀ ಸತ್ಯನಾರಾಯಣಗೆ।।ಪ।। ಪೊಳೆವ ಪೀತಾಂಬರ ಧರಿಸಿಹ ದೇವಗೆ ।।ಅ.ಪ.।। ಶಂಖ ಚಕ್ರಧರ ಭಕ್ತ ಬಂಧುವಿಗೆ। ಪಂಕಜಾಕ್ಷ ಹರಿ ಪದ್ಮನಾಭನಿಗೆ। ಹತ್ತಾವತಾರ ವೆತ್ತಿದ ವೆಂಕಟಾಚಲ ನಿಲಯಗೆ। ವೈಕುಂಠಪುರವಾಸ ಶ್ರೀ ಭೂದೇವಿ ರಮಣಗೆ।।1।। ಸರ್ವಾಂತ ರ್ಯಾಮಿ ಲಕ್ಷ್ಮಿಕಾಂತಗೇ। ಸರ್ವರಕ್ಷಾಕರ ಭಕ್ತಪ್ರೇಮಿಗೆ। ಥಳಥಳಿಪ ಕುಂಡಲ ಕೌಸ್ತುಭಾ ಭರಣಗೆ ಕಿಂಕರರ ಪೊರೆವ ಮಂಗಳ ಮೂರುತಿಗೆ।।2।। ಪರಿಪೂರ್ಣ ಕಾಮ ನಿಸ್ಸೀಮಗೆ। ಪರಮ ದಯಾಕರ ಜ್ಞಾನಗಮ್ಯನಿಗೆ। ಪರಮ ಪಾವನಕರ ಗರುಡಾಚಲವಾಸಗೆ। ಶಾರದೆ ಸನ್ನುತ ಉಡುಪಿಯ ಕೃಷ್ಣನಿಗೆ।।3।।

ಮತ್ತಕಾಶಿನಿಯರು ಮುತ್ತಿನಾರತಿಗಳ (ಆರತಿ) ರಾಗ: ಮೋಹನ

ಮತ್ತಕಾಶಿನಿಯರು ಮುತ್ತಿನಾರತಿಗಳ ಚಿತ್ತಜಪಿತ ವರ ಸತ್ಯನಾರಾಯಣಗೆ।। ನಾದರೂಪನಿಗೆ ನಾದದೂರನಿಗೆ ನಾದವಿಶಾರದಗೊಲಿದವಗೆ।।ಪ।। ಭೂದೇವನು ಬಲು ಬಡತನದೊಳಗಿರೆ ಬೋಧಿಸಿ ಕರುಣದಿ ವ್ರತವನರುಹುತಲೇ। ಮೋದದಿ ಭಾಗ್ಯವನೀಯುತಲಾತನ ಖೇದವ ಬಿಡಿಸಿದ ಕರುಣಾಕರಗೆ।।1।। ಕಾಷ್ಠಕ್ಷೇತ್ರನಿಗೆ ಕಷ್ಟವ ಹರಿಸಿ ಇಷ್ಟವ ಪಾಲಿಸಿ ಪೊರೆದವಗೆ। ಅಷ್ಟೈಶ್ವರ್ಯದ ಧನಪಾಲನ ಬಲು ನಿಷ್ಠೆಗೆ ಮೆಚ್ಚುತ ಸುತೆಯನು ಕರುಣಿಸಿ। ಭ್ರಷ್ಟರು ವ್ರತವನು ಮರೆತಿರಲು ಕಷ್ಟದ ಬಂಧನವಿತ್ತವಗೆ।।2।। ಸತಿಯು ಪೂಜಿಸಲು ಅತಿಶಯದಯದಿ। ಪತಿಯ ಜಾಮಾತರ ಪೊರೆದವಗೆ। ಅತಿಶಯದಿಂದಲೆ ಪೂಜಿಸಲಾತಗೆ ಹಿತವನೆಗೈದ ಶ್ರೀಪತಿಗೆ।।3।।

ಆರತಿ ಬೆಳಗಿದರು ಸತ್ಯೇಶನಿಗೆ (ಆರತಿ)

ಆರತಿ ಬೆಳಗಿದರು ಸತ್ಯೇಶನಿಗೆ ಆರತಿ ಬೆಳಗಿದರು।।ಪ।। ನೀರಜಾಕ್ಷಿಗೆ ಮಾರತಾತಗೆ ಘೋರ ಭವ ಸಂಹಾರ ದೇವಗೆ।।ಅ.ಪ.।। ಕರುಣ ಮೂರುತಿ ದೇವಗೆ।। ಸತ್ಯೇಶಗೆ। ಕೊರಳ ಕುಂದರ ದೇವಗೆ। ತಿರುಕ ವಿಬುಧನು ಮರುಗಲಾತನನು ಪರಿಕಿಸುತ ಭೂಸುರನ ರೂಪಿನಿಂದ। ಸರಸದಿನ್ನೆತಂದೊರೆದು ವ್ರತವನೂ ಸಿರಿಯ ಕರುಣಿಸಿ ಪೊರೆದ ದೇವಗೆ।।1।। ಧರಣಿಪ ನೋರುವನೂ ಗೈವ ವ್ರತವ ಪರೀಕ್ಷಿಸುತಲೆ ವೈಶ್ಯನು। ಪರಮ ವ್ರತವ ನಿಶ್ಚೈಸಿದಾತನಿಗೆ ಸುತೆಯಳ ಕರುಣಿಸಿ ವ್ರತವ ಚರಿಸದಿರೆ ಪರಿ ಪರಿ ಕಷ್ಟ ನೀಡುತ ಭವದಲಿ ಮಹಿಮಗೆ ಮರೆದಗೆ।।2।। ಧರೆಯ ಗೋವಳರಿತ್ತಿಹ ಪ್ರಸಾದವ ಧರಣಿಪ ಬಿಟ್ಟಿರಲು। ಪರಿಯನರಿತು ಬಲು ಭಂಗವ ನೀಡಲು ಮರಳಿ ಪೂಜಿಸ ಬಂದ।

ಅರಸನ ಪುನರಪಿ ಕರುಣವ ತೋರುತ ಅಭಯವನಿತ್ತಗೆ॥3॥

ಸತ್ಯದೇವ ಸ್ತುತಿಗೈವ ಭೃತ್ಯರಾಪತಿ (ಆರತಿ)

ಸತ್ಯದೇವ ಸ್ತುತಿಗೈವ ಭೃತ್ಯರಾಪತಿ। ನಿತ್ ಅವಗೆ ಎತ್ತಿ ಬೆಳಗಿ ಮುತ್ತಿನಾರತಿ॥ಪ॥ ಗುರುಹಿರಯರನು ಸ್ಮರಿಸಿ ಪೊರೆವನವನಿಗೆ। ಹರಿಗೆ ಎತ್ತಿ ಬೆಳಗಿರಿಂದು ಕುರುಜಿನಾರತಿ॥1॥ ರಂಗ ನಿನ್ನ ತಂಗಿ ನೋಡು ಗೌರಿ ಪಾರ್ವತಿ। ಇಂಗಿತಗಳ ಇಂಗಿಸುವಗೆ ಮಂಗಳಾರತಿ॥2॥ ನಿನ್ನ ನೆನೆವ ಸನ್ನುತರಿಗೆ ಮುನ್ನ ಸದ್ಗತಿ। ಯನ್ನು ಯೀವ ಚೆನ್ನಗೆತ್ತಿ ರನ್ನದಾರತಿ॥3॥ ಧೀರ ಪಾಂಡು ಪುತ್ರರೈವರಾ ಮಹಾಸತಿ। ಕ್ರೂರ ಕಷ್ಟ ಹರಿಸಿದವಗೆ ಮೇಲ್ವೆಯಾರತಿ॥4॥ ನಂದಿಕೇಶ ಬಾಂಧವನ ನೆನೆಪ ಈ ಕೃತಿ। ತಂದೆ ಹರಿ ಗೋವಿಂದಗೆ ಕುಂದಣದಾರತಿ॥5॥

ಅರುಣೋದಯಲ್ಲೆದ್ದು ನದಿಯ (ಮಂಗಳ) ರಾಗ: ಭೌಳಿ

ಅರುಣೋದಯದಲ್ಲೆದ್ದು ನದಿಯ ತೀರಕೆ ಪೋಗಿ ಮೃತ್ತಿಕೆಗಳನು ಹಾಕಿ ಪರಮಾತ್ಮ ಆತ್ಮಶುದ್ಧಿಯನೆ ಮಾಡಿ। ನದಿಯೊಳ್ ನಿಂತು ವೇದಶಾಸ್ತ್ರ ಪಾಠಗಳ ಹೇಳಿ ಸ್ನಾನ ಸಂಧ್ಯಾವನೆ ಜಪತಪಗಳಿಂದ। ಸತ್ಯನಾರಾಯಣ ನಿನಗೆ ನಮೋ ಎಂಬೆ। ಮಂಗಳಂ ಶ್ರೀಕೃಷ್ಣಗೆ, ಗೋಪಾಲಗೆ ಮಂಗಳಂ ಜಯ ರಾಮಗೇ॥1॥ ಆಕಳ ಸಗಣೀಲಿ, ಭಾಗೀರಥಿ ಉದಕದಲಿ ದೇವರ ಮನೆಗಳನು ಸಾರಿಸಿ। ನಾವು ಕಾರಣೆಗಳ ತೆಗೆದು। ಶಂಖು-ಚಕ್ರ, ಸ್ವಸ್ತಿಕ ಪದುಮಗಳು ಈ ಪರಿಯಿಂದಲಿ ಬೃಂದಾವನಕೀಗ ರಂಗವಲ್ಲಿಯನಿಟ್ಟು, ಸತ್ಯನಾರಾಯಣ ನಿನಗೆ ನಮೋ ಎಂಬೆ ಮಂಗಳಂ ಶ್ರೀ ಗೋವಿಂದಗೆ॥2॥ಸುವರ್ಣದಿ ಕೆತ್ತಿಸಿದ, ಮಂಪಟ। ಗಾಜೂ ಬರೆದ ಮಂಟಪ ಬಂಗಾರದ ಬೆಳ್ಳಿ ಸಾಲಿನ ಮಂಟಪ। ಕಂಬಾವ ನಿಲ್ಲಿಸಿ ಸಂದು ಸಂದುಗೊಂದುಗೆ ದುಂಡುಮುತ್ತಿನ ಕುಚ್ಚು। ಇಳಿಯ ಬೀಳುತಲಿದೆ. ಸತ್ಯನಾರಾಯಣ ನಿಮಗೆ ನಮೋ ಎಂಬೆ ಮಂಗಳಂ ಶ್ರೀ ಗೋವಿಂದಗೆ॥3॥ ಕಂಚು ಹಿತ್ತಾಳೆಯು ಬಂಗಾರದ ಸವಿಯಲಿ ಚಿನ್ನದ ಹಣತೆಗಳು। ಹೊಂದಿಸಿದಂತಾ ಬೆಳ್ಳಿಯ ಬತ್ತಿಗಳು ಪಟ್ಟೆಪೀತಾಂಬರ ನೆರಿಹಿಡಿದುಡಿಸುತ್ತಾ। ಸತ್ಯನಾರಾಯಣ ನಿನಗೆ ನಮೋ ಎಂಬೆ ಮಂಗಳಂ ಶ್ರೀಗೋವಿಂದಗೆ॥4॥ ಅರಿಶಿನ ಕುಂಕುಮ ಜಾಜಿಯು ಮಲ್ಲಿಗೆ ಲಕ್ಷ್ಮಿಯು ತೊಡೆಯ ಮೇಲೆ ಎಳೆ ತುಳಸಿಯ ಮಾಲೆ। ಹರಿ ಕೊರಳಿಗೆ ಹಾಕಿ, ಸತ್ಯನಾರಾಯಣ ನಿಮಗೆ ನಮೋ ಎಂಬೆ ಮಂಗಳಂ ಶ್ರೀಗೋವಿಂದಗೆ॥5॥ ಅಗರು ಚಂದನ ಗಂಧ ಗುಗ್ಗುಳ ಸಾಮ್ರಾಣಿ ಪರಿಪರಿ ಕೇಸರಿಯು। ಬೆರಸಿದಂಥ ಪರಿಮಳ ಗಂಧಗಳು ಧೂಪ ದೀಪಾರತಿ ಎರಡು ಕೈಯಲಿ ಪಿಡಿದು ಸತ್ಯನಾರಾಯಣ ನಿನಗೆ ನಮೋ ಎಂಬೆ ಮಂಗಳಂ ಶ್ರೀಗೋವಿಂದಗೆ॥6॥ ಅರವತ್ತು ದಿನಸಿನ ಬಗೆಬಗೆ ಶಾಖವ ಸೇರಿಸಿ ಕಾಯಿಸಿದ ತುಪ್ಪದಲಿ ತೇಲಿಸಿ ಮುಳುಗಿಸಿದೆ. ಕರಿಯ ಆಕಳ ಹಾಲು ಜೇನು ಸಕ್ಕರೆ ಸಹಿತ ಗೋದಿಯ ಸಜ್ಜಿಗೆ ಬಾಳೆಯ ಫಲಗಳ ನಿವೇದಿಸಿ ಸತ್ಯನಾರಾಯಣ ನಿನಗೆ ನಮೋ ಎಂಬೆ ಮಂಗಳಂ ಶ್ರೀಗೋವಿಂದಗೆ ॥7॥ ಮಂಡಲಗಳ ಮಾಡಿ ತಂದು ನೈವೇದ್ಯಕ್ಕೆ ಹಂಡೆ ಹಂಡೆಯಲಿರಿಸಿ ತಾಂಬೂಲವನಿರಿಸಿ ಪುಂಡರೀಕಾಕ್ಷನೆ ನಿನಗೆ ಅರ್ಪಿತವೆಂದು। ಕರ್ಪೂರದಾರತಿ ಎರಡು ಕೈಯಲಿ ಪಿಡಿದು ಸತ್ಯನಾರಾಯಣ ನಿನಗೆ ನಮೋ ಎಂಬೆ ಮಂಗಳಂ ಶ್ರೀ ಗೋವಿಂದಗೆ॥8॥ ಪ್ರದಕ್ಷಿಣೆ ನಮಸ್ಕಾರ ಸಾಷ್ಟಾಂಗವ ಮಾಡಿ ಭಕ್ತಿಯಿಂದಲಿ ನಾವೀಗ ಮುಕ್ತಿಯ ಕೊಡು ಎಂದು ಸ್ತುತಿಸಿ ಕೊಂಡಾಡುತ್ತ ಸತ್ಯನಾರಾಯಣ ನಿನಗೆ ನಮೋ ಎಂಬೆ ಮಂಗಳ ಶ್ರೀ ಗೋಪಾಲಗೆ॥9॥

❖ ❖ ❖

72. ಅಕ್ಷರಮಾಲೆ ಸ್ತುತಿಗಳು

ಅನುಪಮ ಮಹಿಮಾ (ಗಣೇಶ)

ಅನುಪಮ ಮಹಿಮಾ ಸಾರಗಣೇಶ। ಆದಿಪೂಜ್ಯನುತದೇವ ಗಣೇಶ। ಇಷ್ಟ ಫಲಪ್ರದ ಸುಮುಖ ಗಣೇಶ। ಈಶ ತನಯ

ಮಹನೀಯ ಗಣೇಶ। ಉರಗ ವಿಭೂಷಣ ವಿಭವ ಗಣೇಶ। ಊರ್ಜಿತ ತನುತನು ಪಾಶ ಗಣೇಶ। ಋಷಿಗಣ ವಂದಿತ ವರದ ಗಣೇಶ। ಋೂಕಾರಪ್ರಿಯ ಪೊರೆವ ಗಣೇಶ। ಎಡರುಗಳನು ತಡೆದಿಡುವ ಗಣೇಶ। ಏಕದಂತ ನಿತ್ಯಾತ್ಮ ಗಣೇಶ। ಐಕ್ಯಮತ್ಯ ನಿಕ್ಷೇಪ ಗಣೇಶ। ಒಲಿಯುತ ಭಕ್ತರ ಪೊರೆವ ಗಣೇಶ। ಓಂಕಾರ ಪ್ರಿಯ ವರದ ಗಣೇಶ। ಔಪಾಸಕರಭಿಮಾನಿ ಗಣೇಶ। ಅಂಬಾಪ್ರಿಯ ತನುಜಾತ ಗಣೇಶ। ಅಃ ವ ಶತೃವಿನಾಶ ಗಣೇಶ। ಕರುಣಾಕರ ಕಮನೀಯ ಗಣೇಶ। ಖೇಚರಗಾನಾನಂದ ಗಣೇಶ। ಗಜಮುಖ ನಾಮದಿ ಮೆರೆವ ಗಣೇಶ। ಘಾತುಕ ದುರ್ಜನ ಭಂಗ ಗಣೇಶ। ಙಟೋದ್ಭವ ಲಿಂಗೈಕ್ಯ ಗಣೇಶ। ಚಂದ್ರಗರ್ವ ವಿಧ್ವಂಸ ಗಣೇಶ। ಛತ್ರಾಲಂಕೃತ ಚೆಲುವ ಗಣೇಶ। ಜನನ ಮರಣ ಭಯರಹಿತ ಗಣೇಶ। ಝೇಂಕೃತಿ ಕಿಂಕಿಣಿಯಾಂತ ಗಣೇಶ। ಜ್ಞಾನಗಮ್ಯ ಸರ್ವಜ್ಞ ಗಣೇಶ। ಟಂಕಾಪಾಶಧರ ಜಠರ ಗಣೇಶ। ಠಂಕಾರೋಪಮ ವಿಕಟ ಗಣೇಶ। ಡಮರುಗ ಹಸ್ತ ಸುಪುತ್ರ ಗಣೇಶ। ಢಕ್ಕಾ ನಾದದ ಲೋಲ ಗಣೇಶ। ಣತಪರಿಪಾಲನ ನಿಪುಣ ಗಣೇಶ। ತತ್ವಜ್ಞಾನಾನಂದ ಗಣೇಶ। ಥಳಥಳಿಪಾ ಮಣಿ ಮುಕುಟಗಣೇಶ। ದ್ವೈಮಾತುರ ವಿಘ್ನೇಶ ಗಣೇಶ। ಧುಂಡಿ ವಿನಾಯಕ ವಿನುತ ಗಣೇಶ। ನಾಗಸೂತ್ರಧರ ಶಾಂತಿಗಣೇಶ। ಪರಮ ಪುರುಷನವತಾರ ಗಣೇಶ। ಫಾಲಚಂದ್ರಧರ ಲೋಲ ಗಣೇಶ। ಬ್ರಹ್ಮ ಚರ್ಯವ್ರತ ನಿಷ್ಠಗಣೇಶ। ಭಾರತಲೇಖನ ಧೀರ ಗಣೇಶ। ಮೂಷಕವಾಹನ ಧೀರ ಗಣೇಶ। ಯದುಕುಲ ನಂದನ ನಮಿತ ಗಣೇಶ। ರಾಮಚಂದ್ರ ಸಂಪೂಜ್ಯಗಣೇಶ। ಲಂಬೋದರ ಹೇರಂಭ ಗಣೇಶ। ವಕ್ರತುಂಡ ರಿಪುಗಂಡ ಗಣೇಶ। ಶೂರ್ಪಕರ್ಣ ಸುಕುಮಾರಗಣೇಶ। ಷಣ್ಮುಖ ಸೋದರ ಸಿದ್ಧಿ ಗಣೇಶ। ಸಕಲಾಗಮ ಪರಿಪೂರ್ಣ ಗಣೇಶ। ಹರಿಹರ ವಿಧಿಸುರ ವಿನುತ ಗಣೇಶ। ಲಕ್ಷಲಕ್ಷಣ ಗುಣ ಸಂಪೂಜ್ಯ ಗಣೇಶ। ಕ್ಷೇತ್ರಪಾಲ ಸುಪ್ರೀತ ಗಣೇಶ।। ಸಂಪೂರ್ಣಂ।।

ಅಕ್ಷರ ಪುರುಷನೆ ಅಗಣಿತ (ಗಣೇಶ) ರಾಗ: ಮಾಂಡ್

ಅಕ್ಷರ ಪುರುಷನೆ ಅಗಣಿತ ಮಹಿಮನೆ ಆದಿಪೂಜಿತನೆ ವಿನಾಯಕ। ಆನಂದಾಮೃತ ದರ್ಶಕ ಗಣಪನೆ ಆಗಮವಂದ್ಯನೆ ವಿನಾಯಕ।।ಇಷ್ಟಸಿದ್ಧಿಗಳನೀಯುವ ಬೆನಕನೆ ಇಹಪರದಾಯಕ ವಿನಾಯಕ। ಈಶ್ವರ ಪುತ್ರನೆ ಈಪ್ಸಿತದಾತನೆ ಈರ್ಷ್ಯಾರಹಿತನೆ ವಿನಾಯಕ। ಉತ್ತಮೋತ್ತಮನೆ ಉರಗ ಭೂಷಣನೆ ಉನ್ನತ ಮೂರ್ತಿಯೆ ವಿನಾಯಕ। ಋಗ್ವೇದಪ್ರಿಯ ಋಷಿಗಣವಂದಿತ ಋಗಾದಿಮೂಲನೆ ವಿನಾಯಕ। ಎಲ್ಲಾ ಜೀವಿಗಳ ಕರುಣೆಪ ದೇವನೆ ದೈತ್ಯಕುಲಾಂತಕ ವಿನಾಯಕ। ಏಕಮೇವಾದ್ವಿತೀಯ ಪೂರ್ಣನೆ ಅತುಲೈಶ್ವರ್ಯನೆ ವಿನಾಯಕ। ಐಕ್ಯಮತ್ಯದಲಿ ನಡೆಯುವ ನರರಿಗೆ ನೆಮ್ಮದಿ ನೀಡುವ ವಿನಾಯಕ। ಒಂದೇ ಮನದಲಿ ಭಜಿಸುವ ಭಜಕರ ಭವಭಯ ಕಳೆಯುವ ವಿನಾಯಕ। ಓಂಕಾರ ರೂಪನೇ ಓಂ ಶಕ್ತಿ ಗಣಪನೆ ಓಂ ಹರಸುತನೇ ವಿನಾಯಕ। ಔದಾರಾಶ್ರಯ ಔಷ್ಸಿತದಾತನೆ ಔಪಾಸ್ಯಮೂರ್ತಿಯೆ ವಿನಾಯಕ। ಅಂಬಾತನಯನೆ ಅಂಜಿಕೆ ಕಳೆವನೆ ಅಂತರ್ಯಾಮಿಯೆ ವಿನಾಯಕ। ಅಃ ನಿನ್ನ ಮಹಿಮೆಯು ಅದ್ಭುತವಹುದಯ್ಯ ಅಮಿತಾನಂದಕೊಡು ವಿನಾಯಕ।

ಅಯಿಗಿರಿ ನಂದಿನಿ ಕುವರ ಗಣೇಶ (ಗಣೇಶ) ರಾಗ: ಹಿಂದೋಳ

ಅಯಿಗಿರಿ ನಂದಿನಿ ಕುವರ ಗಣೇಶ। ಆರಾಧಿಸುವೆನು ಪ್ರಥಮ ಗಣೇಶ।। ಇನಕುಲ ವಲ್ಲಭ ಪೂಜ್ಯ ಗಣೇಶ। ಈಶ್ವರ ಪ್ರಿಯ ಪುತ್ರದೇವ ಗಣೇಶ।। ಉರಗಾಭರಣನೆ ನಮೋ ಗಣೇಶ। ಊದುವೆ ಶಂಖವ ಪೂಜೆಗೆ ಗಣೇಶ।। ಋಷಿಮುನಿ ಸೇವಿತ ಪಾವನ ಗಣೇಶ।। ಎಂದೆಂದೂ ನೀನೆ ಕಾಯೋಗಣೇಶ। ಏಕದಂತನೆ ಅರ್ಚಿಪೆ ಗಣೇಶ।। ಐಶ್ವರ್ಯಪ್ರದ ದೇವ ಗಣೇಶ।। ಒಡಲ ಬೇಗೆಯ ಕಳೆಯೋ ಗಣೇಶ। ಓಡೋಡಿ ಬರುವೆನು ಕಾಯೋ ಗಣೇಶ। ಔದಾರ್ಯವ ತೋರು ಗಜಮುಖ ಗಣೇಶ। ಅಂಬಿಕಪುತ್ರನೆ ಬಾರೋ ಗಣೇಶ। ಅಹಂಕಾರ ದೂರನೆ ದೇವ ಗಣೇಶ।। ಕಂಗಳಿಗೆ ಅತಿಶಯ ಮೋಹ ಗಣೇಶ। ಖಗಪತಿ ವಾಹನ ಪ್ರೀತ ಗಣೇಶ।। ಗಜವದನ ಬೇಡುವೆ ಶ್ರೀಶಗಣೇಶ। ಘನಕಾರ್ಯಕೆ ನೀ ಪೂಜ್ಯ ಗಣೇಶ।। ಜ್ಞಾನಪ್ರದಾಯಕ ವಿಘ್ನವಿನಾಶ।। ಚಾರುಗಾತ್ರನೆ ವಿಚಿತ್ರ ಗಣೇಶ। ಛತ್ರಧರ ಚಾಮರಕರ್ಣ ಗಣೇಶ।। ಜಗಕೆ ವಿಖ್ಯಾತ ವೀರ ಗಣೇಶ। ಝುಣಝುಣ ಧಿಮಿಕೆಂದು ಕುಣಿಯೋ ಗಣೇಶ।। ಟಣಟಣ ಗಂಟಾನಾದ ಪ್ರಿಯ ಗಣೇಶ। ಡಮಡಮ ವಾದ್ಯಕೆ ನಲಿವೆ ಗಣೇಶ।। ಢಮರುಗ ವಾದ್ಯ ಪ್ರಿಯನೇ ಗಣೇಶ। ತಪ್ಪಿದ ಭಕ್ತರುದ್ಧರಿಸು ಗಣೇಶ।

ಥಳಥಳಿಸುವಾಭರಣ ಧರಿಸು ಗಣೇಶ।। ದರ್ಶನ ಮಾತ್ರದಿ ಸಿದ್ಧಿ ಗಣೇಶ। ಧರ್ಮಕೆ ಎಂದೂ ಜಯವು ಗಣೇಶ।। ನಮಿಸುವೆನಯ್ಯ ಮನದಿ ಗಣೇಶ।। ಪರಮ ಪವಿತ್ರ ಪೂಜ್ಯ ಗಣೇಶ। ಫಲಪ್ರದಾಯಕನೆ ಪಾವನ ಗಣೇಶ।। ಬಲವಂದು ಕೈಯ ಮುಗಿವೆ ಗಣೇಶ। ಭಗವತಿ ಕುಮಾರ ಬಾರೋ ಗಣೇಶ।। ಮಂಗಳ ಮಹಿಮನೆ ಮಹಾಗಣೇಶ।। ಯತಿಗಳಿಗಾಧಾರ ನೀನೆ ಗಣೇಶ। ರತಿಪತಿ ಪಿತಪ್ರಿಯ ಪುತ್ರ ಗಣೇಶ। ಲಕ್ಷ್ಮಿ ಸರಸ್ವತಿ ಪ್ರೀತ ಗಣೇಶ। ವಂದನೆ ಮಾಡುವೆ ಸತ್ಯ ಗಣೇಶ। ಶಂಕರ ಪ್ರಿಯನೆ ಶೇಷ ಮಹಾಗಣೇಶ। ಷಡ್ರಸಾನ್ನವ ಕೊಡುವೆ ಗಣೇಶ।। ಸಾಂಬಸದಾಶಿವ ಪುತ್ರ ಗಣೇಶ। ಹರಹರ ಶಂಕರ ಎನ್ನುವೆ ಗಣೇಶ। ಬಾಲಹನುಮನ ಪೂಜ್ಯ ಗಣೇಶ। ಭಾರತ ಬರೆದ ವಿಖ್ಯಾತ ಗಣೇಶ। ಜಯಮಂಗಳ ಪಾಡಿ ನಮಿಪೆ ಗಣೇಶ। ಶುಭಮಂಗಳ ಕೋರಿ ಭಜಿಪೆ ಗಣೇಶ।।

ಅದ್ಭುತ ಗುಣಗಣ (ಗಣೇಶ)

ಅದ್ಭುತ ಗುಣಗಣ ಶ್ರೀ ಗಣೇಶಾ। ಆದಿ ಪೂಜಿತಾ ಶ್ರೀ ಗಣೇಶಾ। ಇಹಪರಗತಿ ಶ್ರೀ ಗಣೇಶಾ। ಈಶ್ವರ ಪುತ್ರ ಶ್ರೀ ಗಣೇಶಾ। ಉರಗ ಭೂಷಣ ಶ್ರೀ ಗಣೇಶಾ। ಊರ್ಜಿತ ಫಲಪ್ರದ ಶ್ರೀ ಗಣೇಶಾ। ಋಷಿಮುನಿ ವಂದಿತ ಶ್ರೀ ಗಣೇಶಾ। ೠೂಕಾರಾಪ್ರಿಯ ಶ್ರೀ ಗಣೇಶಾ। ಎರಗುವೆ ಪಾದಕೆ ಶ್ರೀ ಗಣೇಶಾ। ಏಕದಂತವರ ಶ್ರೀ ಗಣೇಶಾ। ಐಶ್ವರ್ಯ ನಿಧಿ ಶ್ರೀ ಗಣೇಶಾ। ಒಲಿದು ರಕ್ಷಿಪ ಶ್ರೀ ಗಣೇಶಾ। ಓಲೈಸಿ ಮೆರೆವ ಶ್ರೀಗಣೇಶಾ। ಔಪಾಸನೋತ್ತಮ ಶ್ರೀ ಗಣೇಶಾ। ಅಂಬಾ ಪ್ರಿಯಸುತ ಶ್ರೀ ಗಣೇಶಾ। ಅಃ ಲಂಬೋದರ ಶ್ರೀ ಗಣೇಶಾ।

ಅಕ್ಷರ ಬರೆಯುವ ಗಣಪತಿ (ಗಣೇಶ) — ರಾಗ: ಮೋಹನ-ಏಕತಾಳ

ಅಕ್ಷರ ಬರೆಯುವ ಗಣಪತಿ ನಿನ್ನ। ಆನಂದದಿಂದಲಿ ಪೂಜಿಸುತ। ಇಷ್ಟಾರ್ಥಗಳನೆ ನೀಡೆನುತಾ। ಈಶ್ವರ ಪುತ್ರ ನಿನ್ನ ಧ್ಯಾನಿಸುತಾ।। ಉರಗನ ಉದರದಿ ಧರಿಸಿದ ದೇವನೆ। ಊರಿನ ಕ್ಷೇಮವ ನೋಡೆನುತಾ। ಋಷಿಗಳು ತಿರುಗುವ ಕ್ಷೇತ್ರದ। ಎಲ್ಲಾ ಕಡೆಯಲು ಪ್ರಥಮ ನೀನಿರುವೆ।। ಏರುತ ಇಲಿಯನು ಓಡಿಸುವೆ। ಐರಾವತ ಮುಖ ಧರಿಸಿರುವೆ। ಒಂದು ವರುಷಕೆ ಒಂದುದಿನ ಬಂದು। ಓದುವ ಹುಡುಗರ ಗಮನಿಸುವೆ।। ಔದಾರ್ಯದ ಹಾದಿ ತೋರುವೆ। ಅಂತರಂಗದ ಭಕ್ತರ ಗಣಕೆ। ಕಡಲೆ ಸಕ್ಕರೆ ತರಲೆಂದೂ। ಖರ್ಜೂರಾಫಲ ಬರಲೆಂದೂ।। ಗಂಧವ ಧರಿಸುವ ಸುಂದರನೇ। ಘನಕೀರ್ತಿಯ ಪಡೆದ ವಿನಾಯಕನೇ।ಚಂದ್ರನು ಚೌತಿಯ ದಿನ ನಗುತಿರಲು। ಛಲದಿಂದ ಕೊಂಬನು ಎಸೆದವನೇ।। ಜಗದಾಪೂಜೆಯ ನೀ ಪಡೆದವನೇ। ಝುಣಝುಣ ನಾದಕೆ ಮಣಿದವನೆ। ಜ್ಞಾನಮಾರ್ಗಕಭಿಮಾನವ ನೀಡುವೆ।। ಟಗರನು ಏರುವ ಶನಿಮಹದೇವನ।ಠಕ್ಕನಂತೆ ತಲೆ ತಪ್ಪಿಸಿದೆ। ಡಣನಾಯಕ ಶನಿ ಒಡಿಸಿದೆ। ಢಮರುಗ ಪಿಡಿಯಲು ನಾಚಿರುವೆ।। ತಂದೆಗೆ ಪೂರ್ವ ಪೂಜೆಯ ಪಡೆದ। ಥಳಥಳ ಹೊಳೆವ ಮಕುಟುವ ಧರಿಸಿದೆ। ದಯೆ ತುಂಬಿರಲಿ ವಿದ್ಯಾಬಾಲರಲಿ। ಧನ ಭಾಗ್ಯಾದಿ ಆರೋಗ್ಯದಲಿ। ನವವಿಧ ಪೂಜೆಯ ಅನುದಿನ ಪಡೆಯುವ।। ಪರಶಿವನಾಪ್ರಿಯ ಪುತ್ರರು ತಾವು। ಫಲಗಳ ಬೇಡಲು ನೀಡುವನು। ಬಡವರಿಗಾಪದ್ಬಾಂದವನೂ। ಭಕ್ತಿಗೆ ಸುಲಭದಿ ಮೆಚ್ಚುವನು।। ಮನದಲಿ ನೆನೆದರೆ ವರಗಳ ಕರುಣಿಸಿ।। ಯಮಧರ್ಮನು ನಿನ್ನ ಪ್ರಥಮದಿ। ರಕ್ಷಣೆ ಮಾಡು ಗಣಪನೆನ್ನುತಲಿ। ಲಂಬೋಧರ ನಿನ್ನ ಧ್ಯಾನಿಪೆನು। ವಕ್ರದಂತ ನಿನ್ನಪೂಜಿಪೆನು। ಶರಣರ ಭಕ್ತಿ ಸಮುದ್ರದಿ ಮುಳುಗುವ। ಷಣ್ಮುಖ ದೇವನ ಸೋದರನೆ।।। ಸರ್ವ ಮತಗಳ ಸಮ ದೃಷ್ಟಿಯಲ್ಲಿ ಹರಕೆಯ ಬೇಡುವರು ಭಕ್ತಿಯಲಿ।।

ಓಂ ಪರಬ್ರಹ್ಮಸ್ವರೂಪಿಣೇ (ಲಲಿತ)

ಓಂ ಪರಬ್ರಹ್ಮ ಸ್ವರೂಪಿಣೇ। ಪರಮೇಶ್ವರೀ। ಪ್ರಣವ ಸ್ವರೂಪಿಣೀ। ಪರಮಾನಂದದಾಯಿನೀ। ಮೋಕ್ಷಪ್ರದಾಯಿನೀ। ಮಾತೇ ಭವಾನೀ। ದೇವಿ ಜಗನ್ಮಾತೇ। ವಲ್ಲಿ ಕಾರ್ತಿಕೇಯಾ। ಸಂಪ್ರೀತೆ। ಮಾಂಪಾಹಿ। ಪಾಹಿಮಾಂ।। ಅಗಣಿತ ಮಹಿಮಳೆ। ಅರವಿಂದಾಕ್ಷಳೆ। ಅಮರೇಶ್ವರಿಯೇ। ಮಾಂಪಾಹಿ।।1।। ಆದಿಮಧ್ಯಾಂತಳೇ। ಆಶ್ರಿತದಾಯಕಿ। ಆನಂದರೂಪಿಣಿ। ಮಾಂಪಾಹಿ।।2।। ಇಂದಿರ ವದನೆ। ಇಂದೀವರ ನಯನೆ। ಇಂದ್ರೇಶ್ವರಿಯೇ। ಮಾಂಪಾಹಿ।।3।।

ಈಶಮಹೇಷೆ। ಈಶ ಸಂಪ್ರೀತೇ। ಈಶ್ವರರ್ಧಾಂಗಿಯೇ। ಮಾಂಪಾಹಿ॥4॥ ಉರಗಭೂಷಿಣಿ। ಉದಾರ ಹೃದಯೆ। ಉಮಾ ಮಹೇಶ್ವರೀ। ಮಾಂಪಾಹಿ॥5॥ ಊರ್ಮಿಲಾಮಾಲಿನಿ। ಊರ್ಧ್ವಗತಿ ಪ್ರದಾಯಿನಿ। ಊರ್ಮಿಲಾಯೇ। ಮಾಂಪಾಹಿ॥6॥ ಋಷಿ ಜನವಂದ್ಯಳೇ। ಋಗ್ವೇದ ಪ್ರಿಯೆ। ಋಣತ್ರಯ ವಿನಾಶಿನಿ। ಮಾಂಪಾಹಿ॥7॥ ೠಕಾರಸ್ವರ ಪ್ರಪೂಜಿತೆ। ೠಕಾರ ವಿಭವೆ। ೠಕಾರನಂದಮಯಿ। ಮಾಂಪಾಹಿ॥8॥ ಎಕಾರ ರೂಪಿಣಿ। ಎಕಾರ ಭಾಷಿಣಿ। ಎಕಾರ ನಂದಿನಿ। ಮಾಂಪಾಹಿ॥9॥ ಏಕಾಂತಪ್ರಿಯೆ। ಏಣೇಲೋಚನೆ। ಏಕಾಮೃತದಾಯಿನಿ। ಮಾಂಪಾಹಿ॥10॥ ಐಶ್ವರ್ಯದಾಯಿನಿ। ಐಂಕಿಲಾ ಮಾಲಿನಿ। ಐಂದ್ರಾಧೀಶ್ವರಿ ಮಾಂಪಾಹಿ ॥11॥ ಒಲವನು ತೋರುತ। ಒಳಿತನು ಬಯಸುತ। ಒಲವಿಂ ಸಲಹುವ ತಾಯೇ। ಮಾಂಪಾಹಿ ॥12॥ ಓಂಕಾರ ಸ್ವರೂಪಿಣಿ। ಓಂಕಾರ ನಾದಮಯಿ। ಓಂಕಾರೇಶ್ವರೀ ಮಾಂಪಾಹಿ ॥13॥ ಔದಾರ್ಯದಾಯಿನಿ। ಔಷಧ ರೂಪಿಣಿ। ಔಷೇಂದ್ರಿಯೇ। ಮಾಂಪಾಹಿ ॥14॥ ಅಂಕುಶವಾಣೀ। ಅಂಕುಶ ಮಾಲಿನೀ। ಅಂಬಿಕಾದೇವಿಯೇ। ಮಾಂಪಾಹಿ॥15॥ ಅಃ ಪರಮೇಶ್ವರಿ। ಅಃ ಮಾಹೇಶ್ವರೀ। ಅಃ ಕರುಣಾಕರೀ। ಮಾಂಪಾಹಿ॥16॥ ಕರುಣಾಮಯಿಯೇ। ಕಾತ್ಯಾಯನಿಯೇ। ಕಂಬುಕಂಠಿಯೇ। ಮಾಂಪಾಹಿ॥17॥ ಖಗವತಿ ವಂದ್ಯಳೇ। ಖಡ್ಗಾಯುಧಳೇ। ಖೇಚರಾನಂದಳೇ। ಮಾಂಪಾಹಿ॥18॥ ಗಿರಿಜಾ ಮಾತೆಯೇ। ಗಣನಾಥ ವಂದ್ಯಳೇ। ಗಾನವತ್ಸಲೆಯೇ। ಮಾಂಪಾಹಿ॥19॥ ಘನಾಭರಣಳೇ। ಘನಮಹಿಮಳೇ। ಘನಶ್ಯಾಮಳೇ। ಮಾಂಪಾಹಿ॥20॥ ಙಕಾರ ರೂಪಿಣೀ। ಙಕಾರ ವಾಚ್ಯನಿ। ಙಕಾರಕಾರ ಮಯೀ। ಮಾಂಪಾಹಿ॥21॥ ಚಿದ್ರೂಪಿಣಿಯೇ। ಚಂದ್ರ ಸಹೋದರಿ। ಚಾಮುಂಡೇಶ್ವರಿಯೇ। ಮಾಂಪಾಹಿ॥22॥ ಛಾಯಾಪ್ರಿಯಳೇ। ಛಲದಂಕ ಮಲ್ಲೆ। ಛದಹಾರಿಣಿಯೇ। ಮಾಂಪಾಹಿ॥23॥ ಜಗದೀಶ್ವರಿಯೇ। ಜಗದ್ವಿಖ್ಯಾತಳೇ। ಜಂಬುಕೇಶ್ವರಿಯೇ। ಮಾಂಪಾಹಿ॥24॥ ಝಣಝಣ ಝಣಝಣ ನಾದ ಪ್ರಿಯಳೇ। ಝೇಂಕಾರ ರೂಪಳೇ। ಮಾಂಪಾಹಿ॥25॥ ಜ್ಞಾನಸ್ವರೂಪಿಣಿ। ಜ್ಞಾನನಂದಿನೀ। ಜ್ಞಾನೇಶ್ವರಿಯೇ। ಮಾಂಪಾಹಿ॥26॥ ಟಕ್ಕ ವಿನೋದಿನಿ। ಟಂಕಿತಾಖಿಲ ಲೋಕಮಾತೇ। ಟಂಕಾರ ನೃತ್ಯ ನಿಭವೇ। ಮಾಂಪಾಹಿ॥27॥ ಠೇಂಕಾರ ನಾದಪ್ರಿಯೇ। ಠೇಂಕಾರ ಹೃದಯೇ। ಠೇಂಕಾರೇಶ್ವರೀ। ಮಾಂಪಾಹಿ॥28॥ಡಮರುಗ ಪಾಣಿಯ। ಪ್ರಿಯ ಪುತ್ಥಳಿಯೇ। ಡಮರುಗ ಲೋಲೇ। ಮಾಂಪಾಹಿ॥29॥ ಢಂಭಾಚಾರರ। ಢಂಭವನಳಿಸುವ। ಢಂಭ ವಿಮೋಚಿನಿ। ಮಾಂಪಾಹಿ॥30॥ ಣತನ ಸಿರಿಯೇ। ಣತನ ನಿಧಿಯೇ। ಣತನ ಹೃದಯೀ। ಮಾಂಪಾಹಿ॥31॥ ತ್ರಿಭುವನ ಜನನಿಯೇ। ತ್ರಿಪುರ ಸುಂದರಿಯೇ। ತಪೋರೂಪಳೇ। ಮಾಂಪಾಹಿ॥32॥ ಥರ ಥರ ಹೊಳೆಯುವ। ಪೀತಾಂಬರಳೇ। ಥಳ ಥಳಿಸುವ ಮಾನುನಿ। ಮಾಂಪಾಹಿ॥33॥ ದಾನಶೀಲಳೆ। ದಯಾಸಾಗರೀ। ದಾಕ್ಷಾಯಣಿಯೇ। ಮಾಂಪಾಹಿ॥34॥ ಧರ್ಮಸ್ವರೂಪಿಣಿ। ಧನಧಾನ್ಯ ಕಾರಿಣಿ। ಧರ್ಮಾಂಬುಧಿಯೇ। ಮಾಂಪಾಹಿ॥35॥ ನಿತ್ಯ ನಿರಂಜನಿ। ನಾದಸ್ವರೂಪಿಣಿ। ನಮ್ರ ಸ್ವರೂಪಳೆ। ಮಾಂಪಾಹಿ॥30॥ ಪದ್ಮಾಸನಳೇ। ಪಂಕಜ ನೇತ್ರಿಯೇ। ಪರ್ಯಂಕಶಯನಳೇ। ಮಾಂಪಾಹಿ॥36॥ ಫಾಲವಿಲೋಚಿನಿ। ಫಣಿಸಮವೇಣಿ। ಫಣಿರಾಜ ವಂದ್ಯಳೇ। ಮಾಂಪಾಹಿ॥37॥ ಬದರೀವನವಾಸಿನಿ। ಬಂಧ ವಿಮೋಚಿನಿ। ಬಕುತರ ಪ್ರೀತೇ। ಮಾಂಪಾಹಿ॥38॥ ಭವಭಯ ಮೋಚಿನಿ। ಭಾಗ್ಯಪ್ರದಾಯಿನೀ। ಭುವನೇಶ್ವರಿಯೇ। ಮಾಂಪಾಹಿ॥39॥ ಮಂಜುಳವೇಣೀ। ಮರಕತವಲ್ಲಿ। ಮೀನಾಕ್ಷಮ್ಮನೇ। ಮಾಂಪಾಹಿ॥40॥ ಯಮಪಾಶ ವಿಮೋಚಿನಿ। ಯೋಗಾನಂದಿನಿ। ಯಜುರ್ವೇದ ಪ್ರಿಯಳೇ। ಮಾಂಪಾಹಿ॥41॥ ರಾಜೀವ ಲೋಚನೆ। ರಾಕೇಂದುವದನೆ। ರಾಜರಾಜೇಶ್ವರಿಯೇ। ಮಾಂಪಾಹಿ ॥42॥ ಲಕ್ಷ್ಮೀ ಪ್ರಿಯಳೇ। ಲೋಕವಿಖ್ಯಾತೇ। ಲಲಿತಾಂಬಿಕೆಯೇ। ಮಾಂಪಾಹಿ ॥43॥ ವರದ ಹಸ್ತಳೇ। ವಿಶ್ವೇಶ್ವರಿಯೇ। ವಾಗೀಶ್ವರಿಯೇ। ಮಾಂಪಾಹಿ॥44॥ ಶಾಪವಿಮೋಚಿನಿ। ಶಾಂತ ಸ್ವರೂಪಿಣಿ। ಶಿವಶಂಕರಿಯೇ। ಮಾಂಪಾಹಿ॥45॥ ಷಡಾನನಯೇ। ಷೋಡಷ ರೂಪಿಣಿ। ಷಣ್ಮುಖ ಪ್ರಿಯಳೇ। ಮಾಂಪಾಹಿ॥46॥ ಸುರನರವಂದ್ಯಳೇ। ಸುಜನಮನೋಹರೀ। ಸುಂದರೇಶ್ವರಿಯೇ। ಮಾಂಪಾಹಿ॥47॥ ಹಂಸವಿಲೋಚನೆ। ಹರನರ್ಧಾಂಗಿಯೇ। ಹಿಮಗಿರಿ ತನಯೇ। ಮಾಂಪಾಹಿ॥48॥ ಳಾಳಿತ ಹೃದಯೇ। ಳಾಳಿತ ಫಲಪ್ರದೆ। ಳಾಳಿತಾ

ಕಾಂಕ್ಷಿಯೇ। ಮಾಂಪಾಹಿ।।49।। ಕ್ಷಮಾಶೀಲಳೆ। ಕ್ಷಾತ್ರ ಸ್ವರೂಪಿಣಿ। ಕ್ಷಿತಿಪತಿ ವಂದ್ಯಳೇ। ಮಾಂಪಾಹಿ ।।50।।ಇತಿ ಶ್ರೀ ಗಾಯತ್ರಿ ಕಟಾಕ್ಷಿತ ಕಾರ್ತಿಕೇಯಾ ವಿರಚಿತ ಲಲಿತ ಅಕ್ಷರ ಮಾಲಾಸ್ತೋತ್ರ ಸಂಪೂರ್ಣಂ।।

ಜಯಮಂಗಳಂ ದೇವಿ (ಜಗದಂಬಾ) ರಾಗ: ರೇವತಿ

ಜಯಮಂಗಳಂ ದೇವಿ ಜಗದಂಬಾ। ಶುಭಮಂಗಳ ದೇವಿ ಜಗದಂಬಾ।।ಪ।। ಅಖಿಲಾಂಡ ಜನನೀ ಜಗದಂಬಾ। ಆಶ್ರಿತ ರಕ್ಷಕಿ ಜಗದಂಬಾ। ಇಕ್ಷುಚಾಪಯುತೆ ಜಗದಂಬಾ। ಈಶಾದಿದೇವತೆ ಜಗದಂಬಾ। ಉಡುರಾಜನನೆ ಜಗದಂಬಾ। ಊಹಾತೀತಳೇ ಜಗದಂಬಾ। ಋಷಿಗಣ ಸೇವಿತೇ ಜಗದಂಬಾ। ೠ ಸ್ವರ ಸೇವಿತೆ ಜಗದಂಬಾ। ಎಡರನು ಕಳೆಯೌ ಜಗದಂಬಾ। ಏಕಾಂತ ಪ್ರಿಯಳೆ ಜಗದಂಬಾ। ಐಶ್ವರ್ಯ ಪ್ರದೆ ಜಗದಂಬಾ। ಒಡ್ಯಾಣ ಶೋಭಿತೆ ಜಗದಂಬಾ। ಓಂಕಾರ ರೂಪಿಣಿ ಜಗದಂಬಾ। ಔದಾರ್ಯ ವಿರಾಜಿತೆ ಜಗದಂಬಾ। ಅಂಬ ನಾಮಳೆ ಜಗದಂಬಾ। ಕಾತ್ಯಾಯಿನೀ ದೇವಿ ಜಗದಂಬಾ। ಖಡ್ಗಧಾರಿಣಿ ಜಗದಂಬಾ। ಗಜಮುಖ ಜನನೀ ಜಗದಂಬಾ। ಘೋರಸ್ವರೂಪಿಣಿ ಜಗದಂಬಾ। ಜ್ಞಾನಪ್ರದಾಯಿನಿ ಜಗದಂಬಾ। ಚಂಡಮರ್ದಿನಿ ಜಗದಂಬಾ। ಛತ್ರ ವಿರಾಜಿತೆ ಜಗದಂಬಾ। ಜಗದಾ ದೇವಿಯೇ ಜಗದಂಬಾ। ಝಂಕೃತಿ ನಾದದ ಜಗದಂಬಾ। ಟಕಾರ ಪೂರಿತೆ ಜಗದಂಬಾ। ಠಂಕಾರ ವೇದ್ಯಳೆ ಜಗದಂಬಾ। ಡಮರುಗ ಶೋಭಿತೆ ಜಗದಂಬಾ। ಢಕ್ಕಾನಾದಪ್ರಿಯೆ ಜಗದಂಬಾ। ಣಪನ್ನತ ನಿರುಪಮೆ ಜಗದಂಬಾ। ತತ್ವ ಸ್ವರೂಪಳೆ ಜಗದಂಬಾ। ಥಳಥಳ ಶೋಬಿತೆ ಜಗದಂಬಾ। ದನುಜ ಸಂಹಾರಿಣಿ ಜಗದಂಬಾ। ಧೂಮ್ರ ಧ್ವಂಸಿನಿ ಜಗದಂಬಾ। ನಿಗಮ ಸ್ವರೂಪಿಣಿ ಜಗದಂಬಾ। ಪರ್ವತ ಕುವರಿ ಜಗದಂಬಾ। ಫಲಪ್ರದಾಯಕಿ ಜಗದಂಬಾ। ಬಕುಳ ನಾಮಕೆ ಜಗದಂಬಾ। ಭಕ್ತಾಭೀಷ್ಟಪ್ರದೆ ಜಗದಂಬಾ। ಮುಕ್ತಿಪ್ರದಾಯಕಿ ಜಗದಂಬಾ। ಯಶಃ ಪ್ರದಾಯಕಿ ಜಗದಂಬಾ। ರಾಜರಾಜೇಶ್ವರಿ ಜಗದಂಬಾ। ಲಲಿತಾಂಬಿಕೆಯೇ ಜಗದಂಬಾ। ವೃಂದದೇವಿಯೆ ಜಗದಂಬಾ। ಶಾಂಭವಿ ಮಾತ ಜಗದಂಬಾ। ಷಣ್ಮುಖ ಜನನಿ ಜಗದಂಬಾ। ಸಂಗೀತ ಪ್ರಿಯೆ ಜಗದಂಬಾ। ಹ್ರೀಂಕಾರಾರ್ಚಿತೆ ಜಗದಂಬಾ। ಕಾಳಿಕಾಂಬಿಕೆಯೇ ಜಗದಂಬಾ। ಕ್ಷೇತ್ರಸ್ವರೂಪಿಣಿ ಜಗದಂಬಾ। ತ್ರಿಗುಣಾತ್ಮಿಕೆಯೇ ಜಗದಂಬಾ। ಜಯಜಯ ಲಕ್ಷ್ಮೀಯೆ ಜಗದಂಬಾ। ಶುಭಗುಣದಾಯಕಿ ಜಗದಂಬಾ।।

ಆಯಿಗಿರಿ ನಂದಿನಿ ಆನಂದದಾಯಿನಿ(ಬನಶಂಕರಿ) ರಾಗ: ಆರಭಿ

ಅಯಿಗಿರಿ ನಂದಿನಿ ಆನಂದದಾಯಿನಿ। ಆರಾಧಿಸುವೆನು ಬನಶಂಕರಿಯೇ। ಇನಕುಲ ವಲ್ಲಭೆ ರಾಮ ಸಹೋದರಿ। ಈಶ್ವರ ಪ್ರಿಯಳೇ ಬನಶಂಕರಿಯೇ।। ಉತ್ಸವಾನಂದಿನಿ ಜಗನ್ಮೋಹಿನಿ। ಋತುವತ್ಸರ ಪ್ರಿಯೆ ಬನಶಂಕರಿಯೆ। ಎಂದೆಂದೂ ನಿನ್ನ ನಂಬಿ ಬಂದಿಹೆನು। ಏಳಮ್ಮ ತಾಯೆ ಬನಶಂಕರಿಯೇ।। ಐದೇ ಭಾಗ್ಯವ ಕರುಣಿಸು ದೇವಿ। ಒಪ್ಪಿಸಿಕೊ ಎನ್ನ ಬನಶಂಕರಿಯೇ। ಓ ಎನ್ನಬಾರದೆ ವಂದಿಸಿ ನಿಂದಿಹೆ। ಔದಾರ್ಯವ ತೋರು ಬನಶಂಕರಿಯೇ।। ಅಂಬಿಕೆ ಅಭಯವ ನೀಡಮ್ಮ ತಾಯೇ। ಅಃ ಪರಮೇಶ್ವರಿ ಬನಶಂಕರಿಯೇ।। ಕರುಣಾಕರಿನೀ ಕಾಮಿತ ದಾಯಕಿ। ಖಡ್ಗಧಾರಿಣಿ ಬನಶಂಕರಿಯೇ।। ಗಂಗಾಧರ ಪ್ರಿಯೆ ವಿದ್ಯಾಧಿದೇವತೆ। ಘಂಟಾನಾದ ಪ್ರಿಯೇ ಬನಶಂಕರಿಯೇ।। ಚಂಡಿ ಚಾಮುಂಡಿ ಅಸುರ ಸಂಹಾರಿಣಿ। ಛತ್ರಧರೇಶ್ವರಿ ಬನಶಂಕರಿಯೇ।। ಜಗದೋದ್ಧಾರಿಣಿ ಜಾನಕಿ ಪ್ರಿಯಸಖಿ। ಝುಗಝುಗಿಸುವ ನೀ ಬನಶಂಕರಿಯೇ।। ಢಮರುಗ ಶಂಖ ನಿನಾದ ಪ್ರಿಯಳೇ। ತಪಸ್ವಿನಿ ನೀನೇ ಬನಶಂಕರಿಯೇ।। ಥೈ ಥೈ ತದಿಕಿಟ ಕುಣಿಯುತ ಬಾರೆ। ಧರ್ಮಕೆ ಜಯವೀವ ಬನಶಂಕರಿಯೇ।। ನಮಿಸುವೆ ತಾಯೆ ನಾರಾಯಣಿಯೇ।

ಅದ್ಭುತ ವಿಗ್ರಹ ಅಮರಾಧೀಶ್ವರ (ಶಿವ)

ಅದ್ಭುತ ವಿಗ್ರಹ ಅಮರಾಧೀಶ್ವರ ಅಗಣಿತ ಗುಣಗಣ ಅಮೃತ ಶಿವ।।ಸಾಂಬಸದಾಶಿವ ಸಾಂಬಶಿವ। ಸಾಂಬಸದಾಶಿವ ಸಾಂಬಶಿವ।।1।। ಆನಂದಾಮೃತ ಆಶ್ರಿತರಕ್ಷಕ। ಆತ್ಮಾನಂದ ಮಹೇಶ ಶಿವ।। ಸಾಂಬಸದಾಶಿವ ಸಾಂಬಶಿವ।।2।। ಇಂದು ಕಳಾಧರ ಇಂದ್ರಾದಿಪ್ರಿಯ। ಸುಂದರ ರೂಪ ಸುರೇಶ ಶಿವ।।ಸಾಂಬಸದಾಶಿವ ಸಾಂಬಶಿವ।।3।। ಈಶ ಸುರೇಶ ಮಹೇಶ

ಜನಪ್ರಿಯ। ಕೇಶವ ಸೇವಿತ ಪಾದ ಶಿವ॥ ಸಾಂಬಸದಾಶಿವ ಸಾಂಬಶಿವ॥4॥ ಉರಗಾದಿ ಪ್ರಿಯ ಭೂಷಣ ಶಂಕರ। ನರಕ ವಿನಾಶ ನಟೇಶ ಶಿವ॥ ಸಾಂಬಸದಾಶಿವ ಸಾಂಬಶಿವ॥5॥ ಊರ್ಜಿತದಾನವನಾಶ ಪರಾತ್ಪರ। ಆರ್ಜಿತ ಪಾಪ ವಿನಾಶ ಶಿವ॥ ಸಾಂಬಸದಾಶಿವ ಸಾಂಬಶಿವ॥6॥ ಋಗ್ವೇದ ಶ್ರುತಿ ಮೌಳಿವಿಭೂಷಣ। ರವಿಚಂದ್ರಾಗ್ನಿ ತ್ರಿನೇತ್ರ ಶಿವ॥ಸಾಂಬಸದಾಶಿವ ಸಾಂಬಶಿವ॥7॥ ಋೂಪಮನಾದಿ ಪ್ರಪಂಚವಿಲಕ್ಷಣ। ತಾಪನಿವಾರಣ ತತ್ವ ಶಿವ॥ಸಾಂಬಸದಾಶಿವ ಸಾಂಬಶಿವ॥8॥ ಏಕಾನೇಕ ಸ್ವರೂಪ ವಿಶ್ವೇಶ್ವರ। ಯೋಗಿ ಹೃದಯ ಪ್ರಿಯ ವಾಸಶಿವ॥ ಸಾಂಬಸದಾಶಿವ ಸಾಂಬಶಿವ॥9॥ ಐಶ್ವರಾಶ್ರಯ ಚಿನ್ಮಯ ಚಿದ್ಘನ। ಅಚ್ಯುತಾನಂತ ಮಹೇಶಶಿವ॥ಸಾಂಬಸದಾಶಿವ ಸಾಂಬಶಿವ॥10॥ ಓಂಕಾರ ಪ್ರಿಯ ಉರಗ ವಿಭೂಷಣ ಹ್ರೀಂಕಾರಾದಿ ಮಹೇಶ ಶಿವ॥ಸಾಂಬಸದಾಶಿವ ಸಾಂಬಶಿವ॥11॥ ಔರಸಲಾಲಿತ ಅಂತಕನಾಶನ। ಗೌರಿ ಸಮೇತ ಮಹೇಶಶಿವ। ಸಾಂಬಸದಾಶಿವ ಸಾಂಬಶಿವ॥12॥ ಅಂಬರವಾಸ ಚಿದಂಬರ ನಾಯಕ। ತುಂಬುರು ನಾರದ ಸೇವ್ಯಶಿವ॥ ಸಾಂಬಸದಾಶಿವ ಸಾಂಬಶಿವ॥13॥ ಆ ಹರಪ್ರಿಯ ಆದಿಗಿರೀಶ್ವರ। ಭೋಗಾದಿಪ್ರಿಯ ಪೂರ್ಣಶಿವ॥14॥ ಕಮಲೇಶಾರ್ಚಿತ ಕೈಲಾಸ ಪ್ರಿಯ। ಕರುಣಾಸಾಗರ ಕಾಂತಿ ಶಿವ॥ ಸಾಂಬಸದಾಶಿವ ಸಾಂಬಶಿವ॥15॥ ಖಡ್ಗ ಶೂಲಮೃಗ ಢಕ್ಕಾದ್ಯಾಯುಧ। ವಿಕ್ರಮ ರೂಪ ವಿಶ್ವೇಶ ಶಿವ॥ಸಾಂಬಸದಾಶಿವ ಸಾಂಬಶಿವ॥16॥ ಗಂಗಾಗಿರಿಸುತ ವಲ್ಲಭ ಗುಣಹಿತ। ಶಂಕರ ಸರ್ವಜನೇಶಶಿವ॥ ಸಾಂಬಸದಾಶಿವ ಸಾಂಬಶಿವ॥17॥ ಘಾತಕ ಭಂಜನ ಪಾತಕ ನಾಶನ। ಗೌರೀಸಮೇತ ಗಿರೀಶ ಶಿವ। ಸಾಂಬಸದಾಶಿವ ಸಾಂಬಶಿವ॥18॥ ಙ್ಞಾಶ್ರಿಶ್ರುತಮೌಳಿ ವಿಭೂಷಣ। ವೇದಸ್ವರೂಪ ವಿಶ್ವೇಶ ಶಿವ॥ಸಾಂಬಸದಾಶಿವ ಸಾಂಬಶಿವ॥19॥ ಚಂಡ ವಿನಾಶನ ಸಕಲ ಜನಪ್ರಿಯ ಮಂಡಲಾಧೀಶ ಮಹೇಶ ಶಿವ॥ಸಾಂಬಸದಾಶಿವ ಸಾಂಬಶಿವ॥20॥ ಛತ್ರ ಕಿರೀಟ ಸಕುಂಡಲ ಶೋಭಿತ। ಪುತ್ರ ಪ್ರಿಯ ಭುವನೇಶ ಶಿವ॥ಸಾಂಬಸದಾಶಿವ ಸಾಂಬಶಿವ॥21॥ ಜನ್ಮ ಜರಾಮೃತಿ ನಾಶನಕಲ್ಮಶ। ರಹಿತಾತಾಪ ವಿನಾಶ ಶಿವ॥ಸಾಂಬಸದಾಶಿವ ಸಾಂಬಶಿವ॥22॥ ಝುಂಕಾರಾಶ್ರಿಯ ಭೃಂಗಿರಿಟಿ ಪ್ರಿಯ। ಓಂಕಾರೇಶ ಮಹೇಶ ಶಿವ॥ಸಾಂಬಸದಾಶಿವ ಸಾಂಬಶಿವ॥23॥ ಜ್ಞಾನಾಜ್ಞಾನಾ ವಿನಾಶಕ ನಿರ್ಮಲ। ದೀನಜನಪ್ರಿಯ ದೀಪ್ತ ಶಿವ॥ಸಾಂಬಸದಾಶಿವ ಸಾಂಬಶಿವ॥24॥ ಟಂಕಾದ್ಯಾಯುಧ ಧಾರಣಸತ್ವರ। ಹ್ರೀಂಕಾರಾದಿ ಸುರೇಶ ಶಿವ॥ ಸಾಂಬಸದಾಶಿವ ಸಾಂಬಶಿವ॥25॥ ಠಂಕ ಸ್ವರೂಪ ಸಹಕಾರೋತ್ತಮ। ವಾಗೀಶ್ವರ ವರದೇವ ಶಿವ॥ ಸಾಂಬಸದಾಶಿವ ಸಾಂಬಶಿವ॥26॥ ಡಂಬವಿನಾಶನ ಡಿಂಡಿಮ ಭೂಷಣ। ಅಂಬರವಾಸ ಚಿದೇಶ ಶಿವ॥ ಸಾಂಬಸದಾಶಿವ ಸಾಂಬಶಿವ ॥27॥ ಢಂಢಂ ಡಮರುಗ ಧರಣೀ ನಿಶ್ಚಲ। ಢುಂಡಿ ವಿನಾಯಕ ಸೇವ್ಯ ಶಿವ॥ ಸಾಂಬಸದಾಶಿವ ಸಾಂಬಶಿವ॥28॥ ನಳಿನ ವಿಲೋಚನ ನಟನ ಮನೋಹರ। ಅಳಿಕುಲ ಭೂಷಣ ಅಮೃತ ಶಿವ॥ ಸಾಂಬಸದಾಶಿವ ಸಾಂಬಶಿವ॥29॥ ತತ್ವಮಸೀತ್ಯಾದಿ ವಾಕ್ಯ ಸ್ವರೂಪ। ನಿತ್ಯಾನಂದ ಮಹೇಶ ಶಿವ॥ ಸಾಂಬಸದಾಶಿವ ಸಾಂಬಶಿವ॥30॥ ಸ್ಥಾವರ ಜಂಗಮ ಭುವನ ವಿಲಕ್ಷಣ। ಭಾವಕ ಮುನಿವರ ಸೇವ್ಯ ಶಿವ॥ ಸಾಂಬಸದಾಶಿವ ಸಾಂಬಶಿವ॥31॥ ದುಃಖವಿನಾಶನ ದಳಿತ ಮನೋನ್ಮನ। ಚಂದನ ಲೇಪಿತ ಚರಣ ಶಿವ॥ ಸಾಂಬಸದಾಶಿವ ಸಾಂಬಶಿವ॥32॥ ಧರಣೀಧರ ಶುಭ ಧವಳವಿಭಾಸ್ಕರ। ಧನದಾದಿಪ್ರಿಯ ದಾನ ಶಿವ॥ ಸಾಂಬಸದಾಶಿವ ಸಾಂಬಶಿವ॥33॥ ನಾನಾಮಣಿಗಣ ಭೂಷಣ ನಿರ್ಗುಣ। ನಟನ ಜನಪ್ರಿಯ ನಾಟ್ಯ ಶಿವ॥ ಸಾಂಬಸದಾಶಿವ ಸಾಂಬಶಿವ॥34॥ ಪನ್ನಗ ಭೂಷಣ ಪಾರ್ವತಿ ನಾಯಕ। ಪರಮಾನಂದ ಪರೇಶ ಶಿವ॥ ಸಾಂಬಸದಾಶಿವ ಸಾಂಬಶಿವ॥35॥ ಫಾಲವಿಮೋಚನ ಭಾನು ಕೋಟಿಪ್ರಭ। ಹಾಲಾಹಲಧರ ಅಮೃತ ಶಿವ॥ ಸಾಂಬಸದಾಶಿವ ಸಾಂಬಶಿವ॥36॥ ಬಂಧವಿನಾಶನ ಬೃಹದೀಶಾಮರ। ಸ್ಕಂದಾಪ್ರಿಯ ಕನಕ ಶಿವ॥ ಸಾಂಬಸದಾಶಿವ ಸಾಂಬಶಿವ॥37॥ ಭಸ್ಮ ವಿಲೇಪನ ಭವಭಯನಾಶನ। ವಿಸ್ಮಯ ರೂಪ ವಿಶೇಷ ಶಿವ॥ ಸಾಂಬಸದಾಶಿವ ಸಾಂಬಶಿವ॥38॥ ಮನ್ಮಥ ನಾಶನ ಮಧು ಪಾನಪ್ರಿಯ। ಮಂದರ ಪರ್ವತ ವಾಸ ಶಿವ॥ ಸಾಂಬಸದಾಶಿವ ಸಾಂಬಶಿವ॥39॥ ಯತಿಜನ ಹೃದಯ ನಿವಾಸಿತ ಈಶ್ವರ। ವಿಧಿ ವಿಶ್ವಾದಿ ಸುರೇಶ ಶಿವ॥ ಸಾಂಬಸದಾಶಿವ ಸಾಂಬಶಿವ॥40॥ ರಾಮೇಶ್ವರ ರಮಣೀಯ ಮುಖಾಂಬುಜ। ಸೋಮೇಶ್ವರ ಸುಕೃತಿ ಶಿವ॥ ಸಾಂಬಸದಾಶಿವ ಸಾಂಬಶಿವ॥41॥ ಲಂಕಾಧೀಶ್ವರ ಸುರಗಣ ಸೇವಿತ। ಲಾವಣ್ಯಾಮೃತ ಲಸಿತ ಶಿವ॥ ಸಾಂಬಸದಾಶಿವ

ಸಾಂಬಶಿವ।।42।। ವರದಾ ಭಯಕರ ವಾಸುಕಿ ಭೂಷಣ। ವನಮಾಲಾದಿ ವಿಭೂಷ ಶಿವ।। ಸಾಂಬಸದಾಶಿವ ಸಾಂಬಶಿವ।।43।। ಶಾಂತಿ ಸ್ವರೂಪ ಜಗತ್ರಯ ಚಿನ್ಮಯ। ಕಾಂತಿಮತಿ ಪ್ರಿಯ ಕನಕ ಶಿವ।। ಸಾಂಬಸದಾಶಿವ ಸಾಂಬಶಿವ।।44।। ಷಣ್ಮುಖ ಜನಕ ಸುರೇಂದ್ರ ಮುನಿಪ್ರಿಯ। ಷಾಡ್ಗುಣ್ಯಾದಿ ಸಮೇತ ಶಿವ।। ಸಾಂಬಸದಾಶಿವ ಸಾಂಬಶಿವ।।45।। ಸಂಸಾರಾರ್ಣವ ನಾಶನ ಶಾಶ್ವತ। ಸಾಧು ಹೃದಿಪ್ರಿಯ ವಾಸ ಶಿವ।। ಸಾಂಬಸದಾಶಿವ ಸಾಂಬಶಿವ।।46।। ಹರಪುರುಷೋತ್ತಮ ಅದ್ವೈತಾಮೃತ। ಪೂರ್ಣಮುರಾರಿ ಸುಸೇವ್ಯ ಶಿವ।। ಸಾಂಬಸದಾಶಿವ ಸಾಂಬಶಿವ।।47।। ಳಾಳಿತ ಭಕ್ತ ಜನೇಶ ನಿಜೇಶ್ವರ। ಕಾಳಿ ನಟೇಶ್ವರ ಕಾಮ ಶಿವ।। ಸಾಂಬಸದಾಶಿವ ಸಾಂಬಶಿವ।।48।। ಕ್ಷರ ರೂಪಾದಿಪ್ರಿಯಾನ್ವಿತ ಸುಂದರ। ಸಾಕ್ಷಿಷಾ ಜಗತ್ಪ್ರಿಯ ಸ್ವಾಮಿ ಶಿವ।। ಸಾಂಬಸದಾಶಿವ ಸಾಂಬಶಿವ।।49।।

ಅಜಮುಖ ಸುರನುತ (ಶಿವ) — ರಾಗ: ನಾದನಾಮಕ್ರಿಯೆ

ಅಜಮುಖ ಸುರನುತ ಪಾದಶಿವ। ಆ ಖಂಡಲಮದಹಾರ ಶಿವ। ಇಭ ಚರ್ಮಾಂಬರ ಸೋಮ ಶಿವ। ಈಶ ಭಿಲೇಶಯ ಭೂಪಶಿವ। ಉಮಯಾಧೃತ ವಾಮಾಂಗ ಶಿವ। ಊರ್ಧ್ವೀಕೃತ ವಿಷಪಾನ ಶಿವ। ಋಷಿಜನ ಮಾನಸ ಹಂಸ ಶಿವ। ೠಕ್ಷಾಧೀಶ ಕೀರಿಟ ಶಿವ। ಲುಬ್ಧತಯಾನರ ವಿದ್ಧಶಿವ। ಏಕದ್ವಯ ಪರಬ್ರಹ್ಮ ಶಿವ। ಐಕ್ಯಪ್ರದನಿಗೆ ಮೇಧ್ಯಶಿವ। ಓಂಕಾರಾತ್ಮಕ ದೇವ ಶಿವ। ಔದಾಸ್ಯಾತ್ಮ ಸುವೇಶ ಶಿವ। ಅಂಬುಜನಾಥ ಕೃತಾರ್ಥಶಿವ। ಅಃ ಸ್ವಾಧೃತ ಸನ್ನಾಟ್ಯ ಶಿವ। ಕರುಣಾಕರ ಕಮನೀಯ ಶಿವ। ಫಲಕರ್ವಾ ಪಹ ಶೂರ ಶಿವ। ಗಂಗಾಧರ ಶೃಂಗಾರ ಶಿವ। ಘನಸಾರೋಜ್ವಲ ಕಾಯಶಿವ। ಜ್ಞಾಪ್ತಿರೂಪ ಸರ್ವಜ್ಞಶಿವ। ಚರೋಣೋತ್ತಾಡಿತ ಕಾಲ ಶಿವ। ಛಿನ್ನ ಮಹಾಭವ ಪಾಶಶಿವ। ಜಗದಾಧಾರ ಗಿರೀಶ ಶಿವ। ಝಣಝತಕ ಶರ್ಭೈರ್ನಟನ ಶಿವ। ಜ್ಞಾನ ಪ್ರದ ಸುಜ್ಞಾನ ಶಿವ। ಟಂಕಾರಾಂಚಿತ ಚಾಪಶಿವ। ಠಾಕೃತಿ ಮಾಯಾ ಯುಕ್ತ ಶಿವ। ಡಿಂಭಗಜಾಸ್ಯ ನಂದ ಶಿವ। ಢಕ್ಕಾ ಢಮರುಗ ಶೂಲಿ ಶಿವ। ತುಂಗ ಮಹೋಕ್ಷಾರೂಢ ಶಿವ। ಸ್ಥಾವರ ಜಂಗಮ ರೂಪ ಶಿವ। ದಕ್ಷಾಧ್ವರ ಹರ ಸೋಮಶಿವ। ನಮಿತ ಜನೇಷ್ಟನ ನೋಮಿ ಶಿವ। ಪಶುಪತಿ ಪಾವನ ಮೂರ್ತಿ ಶಿವ। ಫಾಲಾಂಬಕ ಖಲ ವೈರಿ ಶಿವ। ಬಾಲಕ ಭಕ್ತಿಪ್ರೀತ ಶಿವ। ಭಕ್ತ ಜನಾವನ ದಕ್ಷ ಶಿವ। ಮಹಿಮಾಕರ ಮದನಾರಿಶಿವ। ಯಮಪರಿಭೀತ ತ್ರಾತಶಿವ। ರಜತಗಿರೀಂದ್ರ ನಿವಾಸಶಿವ। ಲೀಲಾತೋಷಿತ ಲೋಕಶಿವ। ವೈಶ್ರವಣಪ್ರಿಯ ವೀರಶಿವ। ಶಶಿಧರ ಶಂಕರ ಶಾಂತ ಶಿವ। ಷಣ್ಮುಖ ಹೃದಯಾನಂದ ಶಿವ। ಸತ್ಯಜ್ಞಾನಾನಂದ ಶಿವ। ಹಾ ಸ್ಯೋತ್ಫುಲ್ಲಮುಖಾಬ್ಜಶಿವ। ಳಾಂಸುಮಂಗಳ ಮಸ್ತು ಶಿವ। ಕ್ಷೇಮಾಂಕರ ವರ ನಾಮ ಶಿವ। ಜಯಜಯಜಯಜಯ ಸಾಂಬಶಿವ। ಭವಹರ ಭವಹರ ಸಾಂಬಶಿವ।।

ಅನಂತ ರೂಪಾ ಚಿದಂಬರಾ (ಚಿದಂಬರಾ)

ಅನಂತ ರೂಪಾ ಚಿದಂಬರಾ। ಆತ್ಮಸ್ವರೂಪ ಚಿದಂಬರಾ।। ಇಂದು ಕಳಾಧರ ಚಿದಂಬರಾ। ಈಶ್ವರ ರೂಪಾ ಚಿದಂಬರಾ।। ಉಮಾ ಮಹೇಶ್ವರ ಚಿದಂಬರಾ। ಊರ್ಜಿತ ದಾನವ ಚಿದಂಬರ। ಋಷಾಧೀಶ್ವರ ಚಿದಂಬರಾ। ೠಕಾರಾರ್ಥ ಚಿದಂಬರಾ।। ಏಕಾಂತ ವಾಸ ಚಿದಂಬರಾ। ಐರಾವತ ಪ್ರಿಯ ಚಿದಂಬರಾ।। ಓಂಕಾರೇಶ್ವರ ಚಿದಂಬರಾ। ಔದುಂಬರ ವಾಸಾ ಚಿದಂಬರಾ।। ಅಂತಕಮರ್ಧನ ಚಿದಂಬರ। ಅಃಹ ಪರಮೇಶ್ವರ ಚಿದಂಬರ। ಕಮಲನಯನಾ ಚಿದಂಬರಾ। ಖಡ್ಗಾಯುಧಧರಾ ಚಿದಂಬರಾ।। ಗಂಗಾಧರೇಶ್ವರ ಚಿದಂಬರಾ। ಘಂಟಾರವ ಪ್ರಿಯ ಚಿದಂಬರಾ।। ಚರಾಚರ ರೂಪಾ ಚಿದಂಬರಾ। ಛತ್ರಾಲಂಕೃತ ಚಿದಂಬರಾ।। ಜಗನ್ನಾಥ ಪ್ರಭು ಚಿದಂಬರಾ। ಝುಂಕಾರ ಪ್ರಿಯ ಚಿದಂಬರಾ।। ಜ್ಞಾನಾಜ್ಞಾನಾ ಚಿದಂಬರಾ। ಟಂಕಾರಯುಧಧರ ಚಿದಂಬರಾ।। ಠಾಧಿವಿಭೂಷಣ ಚಿದಂಬರಾ। ಡಂಬವಿನಾಶನ ಚಿದಂಬರಾ।। ಢಮರುಗಧಾರೀ ಚಿದಂಬರಾ। ಣತ್ವಾತ್ಮಕ ಶಿವ ಚಿದಂಬರಾ।। ತಪೋನಿಷ್ಠ ಚಿದಂಬರಾ। ದಕ್ಷಸುಪರಿಪಾಲಕ ಚಿದಂಬರಾ।। ಧರಣೀ ವಲ್ಲಭ ಚಿದಂಬರಾ। ನಮಶ್ಶಿವಾಯ ಚಿದಂಬರಾ।। ಪತಿತಪಾವನ

ಚಿದಂಬರಾ। ಫಾಲವಿಮೋಚನ ಚಿದಂಬರಾ।। ಬಹುಜನ ಪೂಜಿತ ಚಿದಂಬರಾ। ಭಕ್ತಜನ ಪ್ರಿಯ ಚಿದಂಬರಾ।। ಮನ್ಮಥ ನಾಶನ ಚಿದಂಬರಾ। ಯತಿಜನ ಹೃದಯ ಚಿದಂಬರಾ।। ರಜತಗಿರಿವರಾ ಚಿದಂಬರಾ। ಲಂಕಾಧೀಶ್ವರ ಚಿದಂಬರಾ।। ವರಪ್ರದಾಯಕ ಚಿದಂಬರಾ। ಶಂಕರ ಅವತಾರಾ ಚಿದಂಬರಾ।। ಷಡಾನನ ಪ್ರಿಯ ಚಿದಂಬರಾ। ಸದ್ಗುಣ ಭರಿತಾ ಚಿದಂಬರಾ।। ಹರಿಹರೇಶ್ವರಾ ಚಿದಂಬರಾ। ಲೀಲಾಮಾನುಷ ಚಿದಂಬರಾ।।

ಅದ್ರಿಶಾಜಾಧೀಶಾ ವಿದ್ರಾವಿತಾ (ಮೃತ್ಯುಂಜಯ)

ಅದ್ರಿಶಾಜಾಧೀಶಾ ವಿದ್ರಾವಿತಾ ಘಾ ಘು ಭದ್ರಾಕೃತೇ ಪಾಹಿ ಮೃತ್ಯುಂಜಯ। ಆಕಾಶಕೇಶ ಮರಾಧೀಶವಂದ್ಯ ತ್ರಿಲೋಕೇಶ್ವರಾ ಪಾಹಿ ಮೃತ್ಯುಂಜಯ। ಇಂದೂ ಫಲೇಂದು ಪ್ರಭೋತ್ಫುಲ್ಲ ಕುಂದಾರ ನಿಂವಾಕೃತೇ ಪಾಹಿ ಮೃತ್ಯುಂಜಯ। ಈಕ್ಷಾಹತಾನಂಗ ದಾಕ್ಷಾಯಣೆನಾಥ ಮೋಕ್ಷಾಕೃತೇ ಪಾಹಿ ಮೃತ್ಯುಂಜಯ। ಉಕ್ಷೇಶಸಂಚಾರ ಯಕ್ಷೇಶ ಸನ್ಮಿತ್ರ ದಕ್ಷಾರ್ಚ್ಚಿತಾ ಪಾಹಿ ಮೃತ್ಯುಂಜಯ। ಊಹಾಪಥಾತೀತ ಮಹಾತ್ಮ್ಯ ಸಂಯುಕ್ತ ಮೋಹಾಂತಕಾ ಪಾಹಿ ಮೃತ್ಯುಂಜಯ। ಋದ್ಧಿ ಪ್ರದಾಶೇಷ ಬುದ್ಧಿ ಪ್ರತಾರಜ್ಞ ಸಿದ್ಧೇಶ್ವರಾ ಪಾಹಿ ಮೃತ್ಯುಂಜಯ। ೠೂಪರ್ವತೋತ್ತುಂಗ ಶೃಂಗಾಗ್ರ ಸಂಗಾಂಗ ಹೇತೋ ಸದಾ ಪಾಹಿ ಮೃತ್ಯುಂಜಯ। ಲುಪ್ತಾತ್ಮ ಭಕ್ತೌಗ ಸಂಘಾತಿ ಸಂಘಾತು ಕಾರಿಪ್ರಹಂ ಪಾಹಿ ಮೃತ್ಯುಂಜಯ। ಲೂತೀಕೃತಾನೇಕ ಪಾರಾದಿ ಕೃತ್ಯಂತನಿಯಾದುನಾ ಪಾಹಿ ಮೃತ್ಯುಂಜಯ। ಏಕಾರ ಶಾಕಾರ ರಾಕೇಂದು ಸಂಕಾಶ ಶೋಕಾಂತಕಾ ಪಾಹಿ ಮೃತ್ಯುಂಜಯ। ಐಶ್ವರ್ಯ ಧಾಮಾರ್ಕ ವೈಶ್ವಾನರಾ ಭಾಸ ವಿಶಾಧಿಕಾ ಪಾಹಿ ಮೃತ್ಯಂಜಯ। ಔಷದ್ಯಧೀಶಾಂಶು ಭೂಪಾಧೀಪಾಪಾಘ ಮೋಕ್ಷಪ್ರದಾ ಪಾಹಿ ಮೃತ್ಯುಂಜಯ। ಔಧತ್ಯಹೀನ ಪ್ರಬುದ್ಧ ಪ್ರಭಾವ ಪ್ರಬುದ್ಧಾಖಿಲ ಪಾಹಿ ಮೃತ್ಯುಂಜಯ। ಅಂಬಾಸಮಾಶ್ಲಿಷ್ಟ ಲಂಭೋಧರಾಪತ್ಯ ಬಿಂಬಾಧರಾ ಪಾಹಿ ಮೃತ್ಯಂಜಯ। ಅಃಸ್ತೋಕಕಾರುಣ್ಯ ದುಸ್ತಾರ ಸಂಸಾರ ವಿಸ್ತರಣಾ ಪಾಹಿ ಮೃತ್ಯುಂಜಯ। ಕರ್ಪೂರ ಗೋರೋಗ್ರ ಸರ್ವಾಢ್ಯ ಕಂದರ್ಪ ದರ್ಪಾಪಹಾ ಪಾಹಿ ಮೃತ್ಯುಂಜಯ। ಖಧ್ಯೋತ ನೇತ್ರಾಗ್ನಿ ವಿದ್ಯುದ್ಗ್ರಹಕ್ಷಾದಿ ವಿದ್ಯೋತಿತಾ ಪಾಹಿ ಮೃತ್ಯಂಜಯ। ಗಂಧೇಭ ಚರ್ಮಾಂಗ ಸಕ್ತಾಂಗ ಸಂಸಾರ ಸಿಂಧುಪ್ಲವಾ ಪಾಹಿ ಮೃತ್ಯಂಜಯ। ಘರ್ಮಾಂಶು ಸಂಕಾಶ ಧರ್ಮೈಕ ಸಂಪ್ರಾಪ್ಯ ಶರ್ಮಪ್ರದಾ ಪಾಹಿ ಮೃತ್ಯಂಜಯ। ಙ್ಞೋತ್ಪತ್ತಿ ಬೀಜಾಬಿಲೋತ್ಪತ್ತಿ ಬೀಜಾಮರಾಧೀಶ ಮಾ ಪಾಹಿ ಮೃತ್ಯುಂಜಯ। ಚಂದ್ರಾರ್ಧ ಚೂಡ ಮರುನೇತ್ರಕಾಂಚೀ ನಗೇಂದ್ರಾಲಯಾ ಪಾಹಿ ಮೃತ್ಯುಂಜಯ। ಛಂದಶ್ಶಿರೋರತ್ನೆ ಸಂದೋಹ ಸಂವೇದ್ಯ ಮಂದಸ್ಮಿತಾ ಪಾಹಿ ಮೃತ್ಯುಂಜಯ। ಜನ್ಮಕ್ಷಯಾತೀತ ಬಿನ್ಮಾತ್ರಮೂರ್ತೇ ಭವೋನ್ಮೂಲನಾ ಪಾಹಿ ಮೃತ್ಯುಂಜಯ। ಝುಣಜ್ಝುರು ಘಂಟಾ ಮಣಿವ್ರಾತ ಕಾಂಚೀ ಗುಣಶ್ರೋಣಿ ಪಾಹಿ ಮೃತ್ಯುಂಜಯ। ಞಣಿತ್ಯಷ್ಟಚಿಂತಾ ತರಂಗ ಪ್ರಮೋದ ಟನಾನಂದಹೃತ್ಪಾಹಿ ಮೃತ್ಯುಂಜಯ। ಟಂಕಾತ್ಯುಟಂಕಾ ಮರುನ್ನೇತ್ರ ಭಂಗಾಂಗನಾ ಸಂಗತಾಪಾಹಿ ಮೃತ್ಯುಂಜಯ। ಠಾಳಿ ಮಹಾಪಾಳಿ ಕೇಳಿ ತಿರಸ್ಕಾರ ಕಾರಾಳನಾ ಪಾಹಿ ಮೃತ್ಯುಂಜಯ। ಡೋಲಾಯಮಾನಂತರಂಗೀ ಕೃತಾನೇಕಲಾಸ್ಯೇಶಮಾಂ ಪಾಹಿ ಮೃತ್ಯುಂಜಯ। ಢಕ್ಕಧ್ವನಿ ಧ್ವಾನ ದಾಹಧ್ವನಿ ಭ್ರಾಂತ ಶತೃತ್ವ ಮಾಂ ಪಾಹಿ ಮೃತ್ಯುಂಜಯ। ಣಾಕಾರ ನೇತ್ರಾಂತ ಸಂತೋಷಿತಾತ್ಮ ಶ್ರೀತಾನಂದಮಾಂ ಪಾಹಿ ಮೃತ್ಯುಂಜಯ। ತಾಪತ್ರಯಾ ತ್ಯುಗ್ರ ದಾವಾನಲಾ ಸಾಕ್ಷಿರೂಪಾ ವ್ಯಯಾ ಪಾಹಿ ಮೃತ್ಯುಂಜಯ। ಥಾಣೋ ಮುರಾರಾತಿ ಬಾಣೋಲ್ಲಸ ತ್ವಂಚ ಬಾಣಾಂತಕಾ ಪಾಹಿ ಮೃತ್ಯುಂಜಯ। ದೀನಾರಸಾದ್ಯಂತ ಹೀನಾಗಮಾಂತೈಕ ಮಾನೋದಿತಾ ಪಾಹಿ ಮೃತ್ಯುಂಜಯ। ಧಾತ್ರೀದರಾಧೀಶ ಪುತ್ರೀ ಪರಿಶ್ವಂಗ ಚಿತ್ರಾಕೃತೇ ಪಾಹಿ ಮೃತ್ಯುಂಜಯ। ನಂದೀಶಾವಾಹಾ ರಚಿಂದಾಸನಾರಾಧ್ಯ ವಿಂದಾಕೃತೇ ಪಾಹಿ ಮೃತ್ಯುಂಜಯ। ಪಾಪಾಂಧಕಾರ ಪ್ರದೀಪಾದ್ವಯಾ ನಂದಾರೂಪಾ ಪ್ರಭೋ ಪಾಹಿ ಮೃತ್ಯುಂಜಯ। ಫಾಲಾಂಬಕಾನಂತ ನಿಲೋಜ್ವಲನ್ನೇತ್ರ ಶೂಲಾಯುಧಾ ಪಾಹಿ ಮೃತ್ಯುಂ ಜಯ। ಬಾಲಾರ್ಕ ಬಿಂಬಾಂಶು ಭಾಸ್ವಜ್ಜಟಾಜೂಟಿ ಕಾಲಾಂಕೃತ ಪಾಹಿ ಮೃತ್ಯುಂಜಯ। ಭೋಗೀಶ್ವರಾ ಕಲ್ಪಯೋಗ ಪ್ರಿಯಾಭೀಷ್ಟ ಬೋಗಪ್ರದಾ ಪಾಹಿ ಮೃತ್ಯುಂಜಯ। ಮೌಳಿದ್ಯುನ ದ್ಯೂರ್ಮಿ ಮಾಲಾಜಟಾಜೂಟಿ ಕಾಳಿಪ್ರಿಯಾ ಪಾಹಿ ಮೃತ್ಯುಂಜಯ। ಯಜ್ಞೇಶ್ವರಾ ಖಂಡತದಾಜ್ಞಾನಿದೇ ದಕ್ಷಯಜ್ಞಾಂತಕಾ ಪಾಹಿ ಮೃತ್ಯುಂಜಯ। ರಾಕೇಂದು ಕೋಟಿ ಪ್ರತೀಕಾಶ ಲೋಕಾದಿ ಸೃದ್ವಂದಿತಾ ಪಾಹಿ

ಮೃತ್ಯುಂಜಯ। ಲಂಕೇಶವಂದ್ಯಾಂಘ್ರಿ ಪಂಕೇರುಹಾ ಶೇಷ ಶಂಕಾಪಹಾ ಪಾಹಿ ಮೃತ್ಯುಂಜಯ। ವಾರೀಶ ತುಣೀರ ವಂದಾರು ಮಂದಾರ ಶೌರೀಪ್ರಿಯಾ ಪಾಹಿ ಮೃತ್ಯುಂಜಯ। ಶರ್ವಾಖಿಲಾಧಾರಾ ಶರ್ವೇಶ ಗಿರಾಣ ಶರ್ವಾಪಹಾ ಪಾಹಿ ಮೃತ್ಯುಂಜಯ। ಷಡ್ವಕ್ತ್ರತಾತ ತ್ರಿಷಡ್ಗುಣ್ಯ ಲೋಕಾದಿಸ್ಯಂಡ್ವಂದಿತಾ ಪಾಹಿ ಮೃತ್ಯುಂಜಯ। ಸೋಮಾವತಂ ಸಾಂತಂ ಸಾಂತರಂಗೇ ಸ್ವಯಂಧಾಮ ಸೋಮಪ್ರಿಯಾ ಪಾಹಿ ಮೃತ್ಯುಂಜಯ। ಹೇಲಾನಿ ಗಿರ್ನಾಗ್ರ ಹಾಲಾಹಾಲಾ ಸಹ್ಯ ಕಾಲಾಂತಕಾ ಪಾಹಿ ಮೃತ್ಯುಂಜಯ। ಕ್ಷಾಣೇಧರಾಧೀಶ ಬಾಣಾಸನಾಹಸ್ತ ಶೋಣಾಕೃತೇ ಪಾಹಿ ಮೃತ್ಯುಂಜಯ। ಕ್ಷಿತ್ಯಂಬು ತೇಜೋ ಮರುತಾರ್ಕಸೋಮಾತ್ಮ ಸೇತ್ಯಾಕೃತೇ ಪಾಹಿ ಮೃತ್ಯುಂಜಯ।

ಗೋವಿಂದ ಹರಿ ಗೋವಿಂದ (ಶ್ರೀನಿವಾಸ)

ಗೋವಿಂದ ಹರಿ ಗೋವಿಂದ। ಗೋವಿಂದ ಹರಿ ಗೋವಿಂದ।।2ಸಾರಿ।।ಪಲ್ಲವಿ।। ಅಕ್ಷರ ಬ್ರಹ್ಮ ಗೋವಿಂದ। ಅಪ್ರಮೇಯನೆ ಗೋವಿಂದ। ಅಜಭವಸುರನುತ ಗೋವಿಂದ। ಅಘನಾಶನನೆ ಗೋವಿಂದ।। ಆನಂದ ನಿಲಯ ಗೋವಿಂದ। ಆದಿನಾರಾಯಣ ಗೋವಿಂದ। ಆಗಮ ಮೂಲ ಗೋವಿಂದ। ಆರ್ತೀ ವಿನಾಶನ ಗೋವಿಂದ।। ಇಂದಿರಾರಮಣ ಗೋವಿಂದ। ಇಂದೀವರಾಕ್ಷ ಗೋವಿಂದ। ಇಭರಾಜವರದ ಗೋವಿಂದ। ಇಹಪರದಾಯಕ ಗೋವಿಂದ।। ಈಶಪ್ರಕಾಶ ಗೋವಿಂದ। ಈತಿನಾಶ ಗೋವಿಂದ। ಈಶಚಾಪಹರ ಗೋವಿಂದ। ಈಶನು ನೀನೆ ಗೋವಿಂದ।। ಉರಗಾದ್ರಿವಾಸ ಗೋವಿಂದ। ಉಪೇಂದ್ರಮೂರುತಿ ಗೋವಿಂದ। ಉಡುಪಿ ಕೃಷ್ಣ ಗೋವಿಂದ। ಉಗಮಸ್ಥಾನ ಗೋವಿಂದ।। ಊರ್ವಶಿಜನಕ ಗೋವಿಂದ। ಊರ್ಜಸ್ವಿಹರಿ ಗೋವಿಂದ। ಊಚುಗಾತ್ರನೆ ಗೋವಿಂದ। ಊಳಿಗಮಾಳ್ಪೆ ಗೋವಿಂದ।। ಋಗ್ವೇದ ಪ್ರಿಯ ಗೋವಿಂದ। ಋಜುಗಣ ಪೂಜಿತ ಗೋವಿಂದ। ಋಷಿಗಣ ವಂದಿತ ಗೋವಿಂದ। ಋಣಮುಕ್ತಿದಾಯಕ ಗೋವಿಂದ।। ಋಢಿಯೊಳುತ್ತಮ ಗೋವಿಂದ। ಋತ್ವಿಜ ಪ್ರಿಯನೆ ಗೋವಿಂದ। ಋಕ್ಷಗಣ ಸೇವಿತ ಗೋವಿಂದ। ಋತುಗಳ ಸ್ವಾಮಿ ಗೋವಿಂದ।। ಎಡರು ನಿವಾರಣ ಗೋವಿಂದ। ಎಲ್ಲೆಡೆ ವ್ಯಾಪ್ತ ಗೋವಿಂದ। ಎಣಿಕೆಗೆ ದೂರ ಗೋವಿಂದ। ಎಣೆನಿನಗಿಲ್ಲ ಗೋವಿಂದ।। ಏಳುಗಿರಿ ಒಡೆಯ ಗೋವಿಂದ। ಏಕಧುರೀಣ ಗೋವಿಂದ। ಏಕವಾಕ್ಯಹರಿ ಗೋವಿಂದ। ಏಕಾಂತ ಕಾಂತ ಗೋವಿಂದ।। ಐಸಿರಿನಾಯಕ ಗೋವಿಂದ। ಐಹಿಕ ಫಲಹರಿ ಗೋವಿಂದ। ಐರಾವತಪ್ರಿಯ ಗೋವಿಂದ। ಐಂದ್ರಾದಿ ವಂದಿತ ಗೋವಿಂದ।। ಒಡೆಯನು ನೀನೆ ಗೋವಿಂದ। ಒಡಲ ಕಾಯ್ವನೆ ಗೋವಿಂದ। ಒದರುವೆ ನಿನ್ನಲಿ ಗೋವಿಂದ। ಒಲಿಸದೆ ಬಿಡೆನೋ ಗೋವಿಂದ।। ಔಷಧಿ ಮೂಲ ಗೋವಿಂದ। ಓಕಳಿ ಪ್ರಿಯನೆ ಗೋವಿಂದ। ಓನಾಮ ನಿನ್ನಿಂದ ಗೋವಿಂದ। ಓಲೈಸುವೆ ನಿನ್ನ ಗೋವಿಂದ।। ಔದಾರ್ಯ ಮೂರ್ತಿ ಗೋವಿಂದ। ಔದುಂಬರ ಪ್ರಿಯ ಗೋವಿಂದ। ಔಚಿತ್ಯಪೂರ್ಣ ಗೋವಿಂದ। ಔಷಧನೀನೆ ಗೋವಿಂದ।। ಅಂಜನಾದ್ರಿ ನಿಲಯ ಗೋವಿಂದ। ಅಂಬರೀಷ ವರದ ಗೋವಿಂದ। ಅಂತಕಾಂತಕ ಗೋವಿಂದ। ಅಂತರಾತ್ಮನೇ ಗೋವಿಂದ।। ಅಹಲ್ಯೋದ್ಧಾರಕ ಗೋವಿಂದ। ಅಹಂಕಾರ ವರ್ಜಿತ ಗೋವಿಂದ। ಅಹಿಮದ ಮರ್ಧನ ಗೋವಿಂದ। ಅಹೋರಾತ್ರಿ ಭಜಿಸುವೆ ಗೋವಿಂದ।। ಕಪಿಲಾಚಾರ್ಯ ಗೋವಿಂದ। ಕಲ್ಕಿರೂಪ ಗೋವಿಂದ। ಕಸ್ತೂರಿ ತಿಲಕ ಗೋವಿಂದ। ಕಾಂಚಣ ಬ್ರಹ್ಮ ಗೋವಿಂದ।। ಖಗಪತಿವಾಹನ ಗೋವಿಂದ। ಖರಾಂತಕ ಹರಿ ಗೋವಿಂದ। ಖಡ್ಗ ನಂದಕಿ ಗೋವಿಂದ। ಖಂಡಪರಶುಹರಿ ಗೋವಿಂದ।। ಗರುಡಾದ್ರಿವಾಸ ಗೋವಿಂದ। ಗರುಡಧ್ವಜನೆ ಗೋವಿಂದ। ಗೀತಾಚಾರ್ಯ ಗೋವಿಂದ।। ಘನ್ನ ಮಹಿಮನೆ ಗೋವಿಂದ। ಘನಪಾಠ ಪ್ರಿಯ ಗೋವಿಂದ। ಘನಶ್ಯಾಮ ಸುಂದರ ಗೋವಿಂದ। ಘಟಿಕಾಚಲವಾಸ ಗೋವಿಂದ।। ಙಕಾರ ನೀನೆ ಗೋವಿಂದ। ವಾಙ್ಮಯ ನೀನೆ ಗೋವಿಂದ। ಸಂಜ್ಞೆಯು ನೀನೆ ಗೋವಿಂದ। ಶಾರ್ಙ್ಗಧನುರ್ಧರ ಗೋವಿಂದ।। ಚಕ್ರಪಾಣಿ ಹರಿ ಗೋವಿಂದ। ಚತುರ್ಭುಜ ರೂಪ ಗೋವಿಂದ। ಚಂದನ ಲೇಪಿತ ಗೋವಿಂದ। ಚೆಲುವ ಮೂರುತಿ ಗೋವಿಂದ। ಛತ್ರಶೋಭಿತ ಗೋವಿಂದ। ಛದ್ಮವೇಷಧರ ಗೋವಿಂದ। ಛಿನ್ನಸಂಶಯ ಗೋವಿಂದ। ಛೇದಿಸು ಭವವನು ಗೋವಿಂದ।। ಜನ್ಮರಹಿತಹರಿ ಗೋವಿಂದ। ಜಲಜನಾಭನೆ ಗೋವಿಂದ। ಜಾನಕಿ ಕಾಂತ ಗೋವಿಂದ। ಜನಾರ್ಧನ ಹರಿ ಗೋವಿಂದ।। ಝಣಝಣನಾದ ಗೋವಿಂದ।

ಝಷಾವತಾರ ಗೋವಿಂದ। ಝುಂಕಾರ ಧ್ವನಿ ಗೋವಿಂದ। ಝಳನಾಶನನೆ ಗೋವಿಂದ।। ಞಕಾರನೀನೆ ಗೋವಿಂದ। ಜ್ಞಾನಿಗಳರಸ ಗೋವಿಂದ। ಜ್ಞಾನಮೂಲಸಿರಿ ಗೋವಿಂದ। ಜ್ಞಾನಾನಂದ ಗೋವಿಂದ।। ಟಂಕಾರನಾದ ಗೋವಿಂದ। ಟುಮುಕುನಾದಪ್ರಿಯ ಗೋವಿಂದ। ಟೀಕಾವಿದೂರ ಗೋವಿಂದ। ಟೊಂಕಹಸ್ತನೆ ಗೋವಿಂದ।। ಠವಣೆಯು ನೀನೆ ಗೋವಿಂದ। ಠಾಣೆಯು ನಿನ್ನದೆ ಗೋವಿಂದ। ಠೇವಣಿ ನೀಡುವೆ ಗೋವಿಂದ। ಠಾವುಗಾಣಿಸು ಗೋವಿಂದ।। ಡಂಗುರ ಸಾರುವೆ ಗೋವಿಂದ। ಡಿಂಗರಿಗ ನಾನು ಗೋವಿಂದ। ಡಮರುನಿನಾದ ಗೋವಿಂದ। ಡಾಕಿಣಿನಾಶನೆ ಗೋವಿಂದ।। ಢಣಢಣ ನಾದ ಗೋವಿಂದ। ಢಕ್ಕೆಯ ನುಡಿಸುವೆ ಗೋವಿಂದ। ಢಕ್ಕಳಿ ರಹಿತನೆ ಗೋವಿಂದ। ಢಣಾಯಕನೀನೆ ಗೋವಿಂದ।। ಣಕಾರ ನೀನೆ ಗೋವಿಂದ। ತ್ರಾಣನು ನೀನೆ ಗೋವಿಂದ। ರಣಪ್ರಿಯ ನೀನೆ ಗೋವಿಂದ। ಅಣುಅಣು ನೀನೆ ಗೋವಿಂದ।। ತರಣಿ ತೇಜ ಗೋವಿಂದ। ತಾರಕ ಮಂತ್ರ ಗೋವಿಂದ। ತಿರುಮಲ ವಾಸ ಗೋವಿಂದ। ತ್ರಾಹಿ ಮುರಾರಿ ಗೋವಿಂದ।। ಥಳಥಳ ಗೋಪುರ ಗೋವಿಂದ। ಥಾಲಿಲಿ ನೈವೇದ್ಯ ಗೋವಿಂದ। ಥೈಲಿಯು ಹುಂಡಿಗೆ ಗೋವಿಂದ। ಥಳಿಸದಿರು ಎನ್ನ ಗೋವಿಂದ।। ದರುಶನ ನೀಡೋ ಗೋವಿಂದ। ದೇವದೇವೋತ್ತಮ ಗೋವಿಂದ। ದಾನವಾಂತಕಗೋವಿಂದ। ದ್ವಾರಕನಾಥ ಗೋವಿಂದ।। ಧರಣೀಧರನೆ ಗೋವಿಂದ। ಧ್ರುವರಾಜವರದ ಗೋವಿಂದ। ಧರ್ಮರಕ್ಷಕ ಗೋವಿಂದ। ಧನ್ಯನಾದೆನೋ ಗೋವಿಂದ।। ನಂದ ನಂದನ ಗೋವಿಂದ। ನಿತ್ಯ ಕಲ್ಯಾಣ ಗೋವಿಂದ। ನಾದಬ್ರಹ್ಮ ಗೋವಿಂದ। ನಾರದನುತಹರಿ ಗೋವಿಂದ।। ಪಂಡರಿನಾಥ ಗೋವಿಂದ। ಪದ್ಮಾವತಿ ಪ್ರಿಯ ಗೋವಿಂದ। ಪ್ರಹ್ಲಾದ ವರದ ಗೋವಿಂದ। ಪಾದವ ಬಿಡೆನೋ ಗೋವಿಂದ।। ಫಲದಾಯಕ ಹರಿ ಗೋವಿಂದ। ಫಲ್ಗುಣ ವಂದ್ಯ ಗೋವಿಂದ। ಫಣೀಂದ್ರ ಸೇವಿತ ಗೋವಿಂದ। ಫಾಲನೇತ್ರ ಪ್ರಿಯ ಗೋವಿಂದ।। ಬದರಿನಾಥ ಗೋವಿಂದ। ಬಾದರಾಯಣ ಗೋವಿಂದ। ಬೌದ್ಧಾವತಾರ ಗೋವಿಂದ। ಬ್ರಹ್ಮಾಂಡ ನಾಯಕ ಗೋವಿಂದ।। ಭವಭಯನಾಶ ಗೋವಿಂದ। ಭಾರ್ಗವ ರಾಮ ಗೋವಿಂದ। ಭಕ್ತವತ್ಸಲ ಗೋವಿಂದ। ಭಜನಾ ಲೋಲ ಗೋವಿಂದ।। ಮತ್ಸ್ಯಾವತಾರ ಗೋವಿಂದ। ಮಂದರಧರ ಹರಿ ಗೋವಿಂದ। ಮೂರು ನಾಮ ಧರ ಗೋವಿಂದ। ಮಾರಜನಯ್ಯ ಗೋವಿಂದ।। ಯದುಕುಲತಿಲಕ ಗೋವಿಂದ। ಯಜ್ಞಸಾಧನ ಗೋವಿಂದ। ಯೋಗೀಶ್ವರೇಶ್ವರ ಗೋವಿಂದ। ಯುಗಯುಗವಂದಿತ ಗೋವಿಂದ।। ರಮಾರಮಣನೆ ಗೋವಿಂದ। ರಘುಕುಲ ಭೂಷಣ ಗೋವಿಂದ। ರಾಮಭದ್ರಹರಿ ಗೋವಿಂದ। ರಾಜೀವಲೋಚನ ಗೋವಿಂದ।। ಲಕ್ಷ್ಮೀರಮಣ ಗೋವಿಂದ। ಲಕ್ಷ್ಮಣಾಗ್ರಜ ಗೋವಿಂದ। ಲಾವಣ್ಯ ಮೂರುತಿ ಗೋವಿಂದ। ಲೋಕಸಾಕ್ಷಿಣೆ ಗೋವಿಂದ।। ವಜ್ರಮಕುಟಧರ ಗೋವಿಂದ। ವರಾಹಾವತಾರ ಗೋವಿಂದ। ವ್ಯಾಸರಾಜಪೂಜಿತ ಗೋವಿಂದ। ವೇಂಕಟರಮಣ ಗೋವಿಂದ।। ಶಂಕಚಕ್ರಧರ ಗೋವಿಂದ। ಶ್ರೀವತ್ಸಾಂಕಿತ ಗೋವಿಂದ। ಶುಕಮುನಿವಂದಿತ ಗೋವಿಂದ। ಶೇಷಾದ್ರಿನಿಲಯ ಗೋವಿಂದ।। ಷಡಂಗವೇದ್ಯ ಗೋವಿಂದ। ಷಡ್ವೈರಿನಾಶಕ ಗೋವಿಂದ। ಷಣ್ಮುಖ ವಂದ್ಯ ಗೋವಿಂದ। ಷಡಕ್ಷರಿ ಪ್ರಿಯಹರಿ ಗೋವಿಂದ।। ಸಪ್ತಗಿರೀಶ ಗೋವಿಂದ। ಸರ್ವೋತ್ತಮನೆ ಗೋವಿಂದ। ಸಂಕರ್ಷಣಹರಿ ಗೋವಿಂದ। ಸ್ವಾಮಿತೀರ್ಥವಾಸ ಗೋವಿಂದ।। ಹರೇಶ್ರೀನಿವಾಸ ಗೋವಿಂದ। ಹನುಮದ್ ಸೇವಿತ ಗೋವಿಂದ। ಹಂಸನಾಮಕ ಗೋವಿಂದ। ಹಯಗ್ರೀವ ರೂಪ ಗೋವಿಂದ।। ಳಕಾರ ನೀನೇ ಗೋವಿಂದ। ವ್ಯಾಳ ಶಯನನೆ ಗೋವಿಂದ। ತಾಳವ ನುಡಿಸುವೆ ಗೋವಿಂದ। ಬಾಳನು ಬೆಳಗು ಗೋವಿಂದ।। ಕ್ಷಮಾ ಸಮುದ್ರ ಗೋವಿಂದ। ಕ್ಷಿತಿಜನ ಪಾಲ ಗೋವಿಂದ। ಕ್ಷೀರಾಬ್ಧಿಶಯನ ಗೋವಿಂದ। ಕ್ಷೇತ್ರಜ್ಞಹರಿ ಗೋವಿಂದ।। ದಾಸರ ಹೃದಯದಿ ಗೋವಿಂದ। ಶಾಶ್ವತ ವಾಸ ಗೋವಿಂದ। ಜಯಜಯ ಮಂಗಳ ಗೋವಿಂದ। ಜಯರಾಮವಿಠಲ ಗೋವಿಂದ।। ಇತಿ ಸರ್ವಾಕ್ಷರ ವಂದ್ಯ ಶ್ರೀ ಗೋವಿಂದ ನಾಮಂ ಸಂಪೂರ್ಣಂ

ಹೃದ್ಗತ ತಮನಾಶ ಗೋವಿಂದ (ಗೋವಿಂದ)

ಹೃದ್ಗತ ತಮನಾಶ ಗೋವಿಂದ। ಹೃದ್ಗುಹದೊಳು ತೋರೋ ಗೋವಿಂದ।।ಪ।।ಅಲವ ಮಹಿಮ ಹರಿ ಗೋವಿಂದ। ನಮ್ಮ ಅಲವ ಬೋಧರ ಪ್ರಿಯ ಗೋವಿಂದ। ಆಲಯದೊಳು ನಿಲ್ಲೋ ಗೋವಿಂದ। ಹೃದಾಲಯದೊಲು ತೋರೋ

ಗೋವಿಂದ॥1॥ ಇಕ್ಷುಚಾಪನ ಪಿತ ಗೋವಿಂದ। ನೀ ಇಕ್ಷು ಧನ್ವಾರಿನುತ ಗೋವಿಂದ॥ ಈಕ್ಷಿಸೋ ಕರುಣದಿ ಗೋವಿಂದ। ನೀ-ನೀಕ್ಷಿಸ ಲೋಶವೇನೋ ಗೋವಿಂದ॥2॥ ಉರಗ ಶಯನನೇ ಗೋವಿಂದ। ನಮ್ಮ ಉರಗಾಯ ವೈಕುಂಠ ಗೋವಿಂದ॥ ಊರೂರು ಚರಿಸಿದೆ ಗೋವಿಂದ। ನಿಮ್ಮೂರಿಗೆ ಕರೆದೊಯ್ಯೋ ಗೋವಿಂದ॥3॥ ಋಗಾದಿ ತ್ರಯಿಮಯಿ ಗೋವಿಂದ। ಹರಿ ಋೂಗ್ವಿನುತನೆ ಗುರು ಗೋವಿಂದ॥ ಋೂಕ್ಷು ಸದ್ವಿನುತನೇ ಗೋವಿಂದ। ಹರಿ ಋೂಕಾರ ಪ್ರತಿಪಾದ್ಯ ಗೋವಿಂದ॥4॥ ಏತತ್ತೆನಿಸಿಯು ಹೃದ್ಗ ಗೋವಿಂದ। ನೀ ನೇತಕೆ ಕಾಣೆಯಾಗಿಹೆ ಗೋವಿಂದ॥ ಐಕದಾತ್ಮಕ್ಯ ಸರ್ವ ಗೋವಿಂದ। ನೀ ಐ-ತರುವುದು ಮನಕೆ ಗೋವಿಂದ॥5॥ ಓತಪ್ರೋತನೆ ಜಗದಿ ಗೋವಿಂದ। ನಿನ್ನ ತತ್ವವನು ತಿಳಿಸೋ ಗೋವಿಂದ। ಔತನಿತ್ತಳೆ ಸತಿ ಗೋವಿಂದ। ನೀನೌತು ಕೊಂಡಿರುವು ದೇಕೋ ಗೋವಿಂದ॥6॥ ಅಂಗಾಂಗಿ ಭಾವದಿ ಗೋವಿಂದ। ನೀ ಸಂಗಾಂಗದಿಕ್ರೀಡಿಪೆ ಗೋವಿಂದ॥ ಅಡಹರ್ ಮನದಲಿ ಗೋವಿಂದ। ನೀ ಅಡಹರ್ ವಿಹರಿಸೋ ಗೋವಿಂದ॥7॥ ಕಪಿಲಾತ್ಮಕ ಶ್ರೀಹರಿ ಗೋವಿಂದ। ಕಿಪಿವರ ಪೂಜ್ಯನೇ ಗೋವಿಂದ॥ ಖಗಪತಿ ಗಮನ ಗುರು ಗೋವಿಂದ। ಜಗ ಕರ್ಪರ ಸೀಳಿದ ಗೋವಿಂದ॥8॥ ಗರುಡಧ್ವಜನೆ ಬಾರೋ ಗೋವಿಂದ। ಜಗಗರುವವ ಕಳೆಯೋ ಗೋವಿಂದ। ಘರ್ಮಾಸು ಮತಾಂತು ಗೋವಿಂದ। ಸೂಕ್ಷ್ಮ ಘರ್ಮಕೆ ವಿಷಯನೆ ಗೋವಿಂದ॥9॥ ಓಂಕಾರ ಪ್ರತಿಪಾದ್ಯ ಗೋವಿಂದ। ಪಾಂಜ್ಞವು ಜಗವೆಲ್ಲ ಗೋವಿಂದ॥ ಚರ್ಮದೋಳ್ ಉದ್ಗೀತ ಗೋವಿಂದ। ಹರಿ ಚರ್ಮಲಾವಣ್ಯದಿ ಗೋವಿಂದ॥10॥ ಛಂಧಸ್ಸಿನಿಚ್ಚನ್ನ ಗೋವಿಂದ। ನಾಗಿ। ಛಂದೋಭಿದನ ನೆನಿಪೆ ಗೋವಿಂದ॥ ಜಂಗಮ ಚರವ್ಯಾಪ್ತ ಗೋವಿಂದ। ನಮ್ಮ । ಜಂಗುಳಿಗಳ ಕಳೆಯೋ ಗೋವಿಂದ॥11॥ ಝಷ ರೂಪಿ ಕಮಠನೆ ಗೋವಿಂದ। ನಮ್ಮ। ಝಷಕೇತುಪಿತ ಕಾಯೋ ಗೋವಿಂದ॥ ಜ್ಞಾನ ಜ್ಞೇಯ ಜ್ಞಾತೃ ಗೋವಿಂದ। ಪ್ರಜ್ಞಾನ ಘನನೆನಿಪೆ ಗೋವಿಂದ॥12॥ ಟಂಕಿ ಎಂಬುವನೆ ಗೋವಿಂದ। ನಮ್ಮ । ಆತಂಕ ಕಳೆಯೋ ಗೋವಿಂದ॥ ಠಕ್ಕು ಠವಳಿಗಾರ ಗೋವಿಂದ। ನಮ್ಮನ್। ಠಕ್ಕಿಸಿ ಹಾಕದಿರು ಗೋವಿಂದ॥13॥ ಡರಕೊ ಡರ್ಯಾಭಿದ ಗೋವಿಂದ। ನಮ್ಮೆಡರನು ಪರಿಹರಿಸೋ ಗೋವಿಂದ। ಢಣಢಣ ನಾದದಿ ಗೋವಿಂದ। ಬಲು। ಢಣ ಶಿಂಚೋ ವಾದ್ಯದಿ ಗೋವಿಂದ॥14॥ "ಣ" ನಾಮ ವಾಚ್ಯನೆ ಗೋವಿಂದ। ಪ್ರಣಾಮವ ಮಾಡುವೆನು ಗೋವಿಂದ॥ ತರುಣಾರ್ಕ ಪ್ರಭೆಯು ಗೋವಿಂದ। ನೆಮ್ಮ ತರುಣಿ ದ್ರೌಪದಿವರದ ಗೋವಿಂದ॥15॥ ಥರಥರ ವರ್ಣನೆ ಗೋವಿಂದ। ಬಲು। ಪ್ರಥನ ಶೀಲನೆ ಗುರು ಗೋವಿಂದ।ದರಕಂಬುಧರನೆ ಗೋವಿಂದ। ತ್ರಿಶದರ ಪರಿಪಾಲ ಗೋವಿಂದ॥16॥ ಧರ್ಮಸು ಗೋಪ್ತನೆ ಗೋವಿಂದ। ಸದ್ಧರ್ಮ ನಾಮಕನೆ ಗೋವಿಂದ॥ ನರೆಯಣೌಭಿದ ಗುರು ಗೋವಿಂದ॥ ನಮ್ಮ। ನರಸಖನೆನಿಸಿಹ ಗೋವಿಂದ॥17॥ ಪರಮ ಪುರುಷ ಗುರು ಗೋವಿಂದ। ಕಾಯೋ ಪರಮಾನಂದಪ್ರದ ಗೋವಿಂದ॥ ಫಲರೂಪನೂ ನೀನೇ ಗೋವಿಂದ। ಇದೇ ಫಲಿತಾರ್ಥವೋ ಗೋವಿಂದ ॥18॥ ಬಗೆ ಬಗೆ ಕರ್ಮಗಳ್ ಗೋವಿಂದ। ಮಾಡಿ ಬಗೆಬಗೆ ಲೀಲೆಯ ಗೋವಿಂದ॥ ಭರ್ಗ ರೂಪಿಯೇ ಗೋವಿಂದ। ನಮ್ಮ। ಭರ್ಮ ಗರ್ಭನ ಪಿತ ಗೋವಿಂದ॥19॥ ಮದಜನಕ ಮಜ್ಜದಿ ಗೋವಿಂದ। ನಮ್ಮ। ಮದನ ಗೋಪಾಲನೆ ಗೋವಿಂದ॥ ಯಜ್ಞಭುಜ್ಞನೇ ಗೋವಿಂದ। ಮತ್ತೆ। ಯಜ್ಞಸಾಧನ ನೀನೇ ಗೋವಿಂದ॥20॥ ರಣದೊಳರ್ಜುನ ಪಾಲ ಗೋವಿಂದ। ಹಣೆರಣವ ಕಳೆಯೋ ಗೋವಿಂದ॥ ಲವಕುಶ ಪಿತನೆನಿಪೆ ಗೋವಿಂದ। ಕಾಯೋ ಲವಪೂರ್ಣಮಹಿಮಾ ಗೋವಿಂದ॥21॥ ವರ್ಣಗಳ್ ಧ್ವನಿಗಳು ಗೋವಿಂದ। ಸರ್ವ। ವರ್ಣಿಪುದು ನಿನ್ನ ಗೋವಿಂದ॥ ಶರೋ ಅಭಿದ ಜೀವನ್ನ ಗೋವಿಂದ। ಮೀಟಿ। ಶರೀರಾಖ್ಯ ನೆನಿಸುವೆ ಗೋವಿಂದ॥22॥ ಷಡ್ಗುಣ ಪರಿಪೂರ್ಣ ಗೋವಿಂದ। ನೀನೇ। ಷಾಡ್ವಾಜೀ ಸ್ವರವ್ಯಾಪಿ ಗೋವಿಂದ॥ ಸತ್ವಾದಿಪ್ರದರೂಪಿ ಗೋವಿಂದ। ನೀನೇ। ಸತ್ತತ್ವ ಪ್ರತಿಪಾದ್ಯ ಗೋವಿಂದ॥23॥ ಹರಿಹರ ಯೆಂದರೆ ಗೋವಿಂದ। ಸತ್ವದಿಪ್ರದರೂಪಿ ಗೋವಿಂದ। ಪಾಪ ಹರಿಸುವೆ ನೀನೇ ಗೋವಿಂದ॥ ಳಾಳೊಕ ಅಭಿದ ಗೋವಿಂದ। ಕಾಯೋ। ಳ ಕಾರ ಪ್ರತಿಪಾದ್ಯ ಗೋವಿಂದ॥24॥ ಕ್ಷಮಿಸೆನ್ನಪರಾಧ ಗೋವಿಂದ। ಬಲು। ಕ್ಷಮೆಯನಳೆದ ಗುರು ಗೋವಿಂದ॥ ಕ್ಷಮಕ್ಷಾಮಾಭಿದ ಗೋವಿಂದ । ನೀಲಕ್ಷ್ಮಿಮಿ ಸಹ ನೆನಿಸೋ ಗೋವಿಂದ॥25॥ ಜ್ಞಾನ ಗಮ್ಯನೇ ಗೋವಿಂದ। ತತ್ತ್ವ।

ಜ್ಞಾನವ ಪಾಲಿಸೋ ಗೋವಿಂದ।। ಜ್ಞಾನಿಗೆ ಪ್ರಿಯತಮ ಗೋವಿಂದ। ನಿನಗೆ ಜ್ಞಾನಿ ಜನರು ಪ್ರಿಯ ಗೋವಿಂದ।।26।। ಏಕ ಪಂಚಾಶತು ಗೋವಿಂದ। ವರ್ಣ। ಏಕಾತ್ಮ ಮಾಲೆಯಗೋವಿಂದ।। ಲೋಕೈಕನಾಥ ಗುರುಗೋವಿಂದ ವಿಠಲ। ಸ್ವೀಕರಿಸೆನ್ನ ಕಾಯೋ ಗೋವಿಂದ।।27।।

ಸತ್ಯಜ್ಞಾನ ಸುಖ ಸ್ವರೂಪಮಮಲಂ (ನರಸಿಂಹ)

ಸತ್ಯಜ್ಞಾನ ಸುಖ ಸ್ವರೂಪಮಮಲಂ ಕ್ಷೀರಾಬ್ದಿ ಮಧ್ಯಸ್ಥಿತಂ। ಯೋಗಾರೂಢಮತಿಪ್ರಸನ್ನ ವದನಂ ಭೂಷಾ ಸಹಸ್ರೋಜ್ವಲಂ।। ತ್ರ್ಯಕ್ಷಂ ಚಕ್ರ ಪಿನಾಕ ಸಾಭಯ ವರಾನ್ ಬಿಭ್ರಾಣ ಮರ್ಕ ಚ್ಛವಿಂ (ನಿಂ) ಛತ್ರೀ ಭೂತ ಫಣೀಂದ್ರ ಮಿಂದು ಧವಳಂ ಲಕ್ಷ್ಮೀ ನೃಸಿಂಹಂ ಭಜೇ।।

ನರಸಿಂಹ ಗೋವಿಂದ ನರಸಿಂಹ

ನರಸಿಂಹ ಗೋವಿಂದ ನರಸಿಂಹ ಗೋವಿಂದ ನರಸಿಂಹ ಗೋವಿಂದ ನಿತ್ಯಾನಂದ।।ಪ।। ಅಕ್ಷರ ಪುರುಷ ಅಧೋಕ್ಷಜ ಶ್ರೀವತ್ಸ ವಕ್ಷಸ ವಿಷ್ಣು ತ್ರ್ಯಕ್ಷ ನರಸಿಂಹ।।1।। ಆಗಮ ಸ್ತುತ ಭವರೋಗ ವೈದ್ಯ ಕಾಮರಾಗರಹಿತ ಸುಪ್ರಯೋಗನರಸಿಂಹ।।2।। ಇಂದು ಸಹಸ್ರಾರ ಬಂಧುರಕೌಸ್ತುಭಕಂಧರ ನಿರ್ಜಿತ ಬಂಧ ನರಸಿಂಹ।।3।।(ಚಿ) ಈಶದಿಶಾನನ ಪೋಷಿತ ಪರಬ್ರಹ್ಮ ಸುರೇಶ ಮಂಜೀಕೃತಶೇಷ ನರಸಿಂಹ ।।4।। ಉಗ್ರವಿಕಂಪಿತ ಭಗ್ರಹ ದಿತಿಜಾತನಿಗ್ರಹ ವಿಮಲಾ ಪವರ್ಗ ನರಸಿಂಹ।।5।। ಊರ್ವೀಧರ ಲೋಕಸಾರ್ವಭೌಮಾಚ್ಯುತ ಸರ್ವೇಶ ವಿನುತ ನರಸಿಂಹ।।6।। ಋಚದೂರ ಸುಕೃತಿ ವ್ರಜಪರಿಪಾಲಕ ಭಜಕಾಯ ಸಸ್ತಂ ಭಜನರಸಿಂಹ।।7।। ಋೂಚ ಚತುಷ್ಟಯ ಸಚರಾಚರಮಯ ವಾಚಾ ಗೋಚರ ಹರಿಸತ್ಯವಾಚ ನರಸಿಂಹ।।8।। ಲು ಪರಿಪಾಲ ಬಹುಸುಪವಿತ್ರ ಕಥಾನಾತಿ ಕೃಪಾಣಾಳಿ ರಕ್ಷಣ ನಿಪುಣ ನರಸಿಂಹ।।9।। ಲೂ ಕೇತನಾತ್ಮ ಜ ಪಾಕಾರಿ ವರದಾಗರ್ಭೀಕೃತ ಅಗಣಿತ ಲೋಕ ನರಸಿಂಹ।।10।। ಏಕೋಪಿ ಸರ್ವ ಹೃದಕಾತ ಭರಿತ ದಿವಾಕರ ಚ್ಛಿನ್ನಮಯೂಖ ನರಸಿಂಹ।।11।। ಐ ಸಹಸ್ರಾಯುತ ಆಸುರರ ಭಂಜನ ವಾಸುದೇವ ಶ್ರೀನಿವಾಸ ನರಸಿಂಹ।।12।। ಓ ತನುಜಾಂತಕ ಸೀತಾರಮಣ ಸಾಕೇತ ಪಟ್ಟಣಾದಿನಾಥ ನರಸಿಂಹ।।13।। ಔ ಜನಕಾಜ ಬಿಡೌಜಸನ್ನುತ ಜನ ಪೂಜಿತ ಪಾದಸರೋಜ ನರಸಿಂಹ।।14।। ಅಂಬುಜ ನಾಭ ವಿಶ್ವಂಭರ ಚಾಮೀಕರಾಂಬರ ಭಕ್ತ ಕುಟುಂಬಿ ನರಸಿಂಹ।।15।। ಆಃ ರಹಸ್ತ ವನಾಮ ಗೃಸಣ ಜನ ಕ್ಷೇಮಾವಹಃ ನಾಥರಸ್ವಾಮಿಸಹ ನರಸಿಂಹ।।16।। ಗುರುಶೇಷಾಚಲ ಭಾರ್ಗಪುರಧೀಶಾಂತಕ ಭಯ ಹರ ಮುಕುಂದಾಮರೋದ್ಧಾರ ನರಸಿಂಹ।।17।। ಕಮನೀಯ ಗುಣಗಣ ಸುಮನಸಪೋಷಣ ಪ್ರಮದಾರಿಮಥನ ವಿಕ್ರಮ ನರಸಿಂಹ।।18।। ಖರಮುರದೂಷಣ ನರಕಾದಿ ಭೀಷಣ ಪರಮ ಪಾವನ ತೀರ್ಥ ಚರಣ ನರಸಿಂಹ।।19।। ಗಜೇಂದ್ರಮುಕ್ತಿದ ತ್ರಿಜಗಸೇವಿತ ಗೋಪೀವ್ರಜಾಲಿಂಗಿತ ಚಾರುಭುಜ ನರಸಿಂಹ।।20।। ಘ ಹಾರ ಕೀರ್ತಿಅಂತರ ಬಹಿಃವ್ಯಾಪಕ ಮೋಹ ಗಹನದಾವ ಹವ್ಯ ನರಸಿಂಹ।।21।। ಙರ್ಥಾಯ ಮನ್ಯುತಿ ವರ್ಥಮಾಟದಿ ಚಿತ್ತ ಸ್ವಸ್ತಂತುರ್ಮೇವಕ್ಕರ್ತ ನರಸಿಂಹ।।22।। ಚಕಿತಮಾನಸ ದೂರ ಅಕುಟಿಲ ಸ್ವಾಂತಾಂಬುಜಕರ ದಿವ್ಯ ನಾಯಕ ನರಸಿಂಹ।।23।। ಛಂದಸ್ವ ಸೀತಾಸಕ್ಕಂಧರ ಸುರಸುತ ತಂದ್ರಿತ ವೃಂದಯಾನಂದ ನರಸಿಂಹ।।24।। ಜಲದೌನ್ಯಾಫ್ರಿದಳ ಮಧ್ಯಶಯನಾ ಪೇಶಲ ಬಾಲವೇಶ ಮಂಜುಳ ನರಸಿಂಹ।।25।। ಝುಳಂಝುಳಿತ ಮನಃವಿಲಸಿತ ಮಂಜೀರಕಾಲಿತಾಂ ಸ್ತವದ್ಧಯೋಗ ನರಸಿಂಹ।।26।। ಜ್ಞಾತೃಜ್ಞಾನಾದಿ ಪುಟತ್ರಯಕಾರಣ ಮಾತ್ರಾತೀಕ ಸನ್ಮಾತ್ರ ನಾರಸಿಂಹ।।27।। ಟಕೃತ ಮಾದನ ಮೂಲ ಪ್ರಕೃತಿ ನಿಧಾನಭೂಸುಕೃತಯ ಪಶ್ಚೀರಸುಕ್ರೂರ ನರಸಿಂಹ।।28।। ಠವಿವೇಕಿನಂ ದೃಷ್ಟ್ವಾ ಮವಿಹಿತಕರ್ಮಾಣ ಮವಂ ಕೃಷ್ಣ ಕೇಶವ ನಾರಸಿಂಹ।।29।। ಡಂಪದ ಅನುಭವ ಸ್ವಂಪದಂ ಮಮದೇಹೀತ್ವಾಂಪಾದವಿನುತಾನಿ ನೀಂಪ ನರಸಿಂಹ।।30।। ಢಶಾರ ಸಂಸಾರ ವ್ಯಸನ ಮನೋಹರಿ ಬಿಸಜಾಕ್ಷ ಕೋಟಿತೇಜಸ ನರಸಿಂಹ।।31।। ಣನ್ನಿಬಾಧನ ಮೂಲ ಸನ್ನಿಭ ದುರಿತಾಪನ್ನಿವಾರಣ ಶ್ರೀಮನ್ನರಸಿಂಹ।।32।। ತತ್ವ ಪ್ರತಿದ್ವಿ ಪತಕ್ವಮಸಿತ್ತೇಕರ್ತೋೀತ್ವಂ ಪರತತ್ರ ನರಸಿಂಹ।।33।। ದಾರಿದ್ರ್ಯಾ ಮುದ್ರಿತ ಮರಾತಿ ವಶಗಾ ಸ್ವಾಂವಾರಾಯ

ಮಾಪಾಹವೀರ ನರಸಿಂಹ॥34॥ ಧರ್ಮಸಂಸ್ಥಾಪನ ಕರ್ಮಧುರೀಣ ನಿಷ್ಕರ್ಮಮೂರುತಿ ಪರಬ್ರಹ್ಮ ನರಸಿಂಹ ॥35॥ ನವನೀತ ಚೋರ ಯಾದವಕುಲಾಂಬುಜಸೂರ ನವವನ ಮಾಲೀಮಾಧವ ನರಸಿಂಹ ॥36॥ ಪಂಚವಿಸೀಕೋಶ ಪಂಚಕಚೇತನ ನಿಷ್ಪ್ರಪಂಚವಧುನಾನಮುಂಚ ನರಸಿಂಹ ॥37॥ ಫಳಫಳಫಳ ಶಬ್ದ ದಳಿತಲೋಹ ಸ್ತಂಭಜ್ವಲಿತೇಜಸ ದೀಪ್ತಾನಲ ನರಸಿಂಹ॥38॥ ಬರ್ಹವತಂಸ ಬಂಬರಪೂದಕಕೇಶ ಬರಹೇಳಿತಾರಿ ನಿರ್ಭರ ನರಸಿಂಹ॥39॥ ಭಟಸಾಹಸ ಶೌರ್ಯ ಪಟುಹೇಮಕಶಿಪು ಜಠಾರಾದಿ ದಾತ ವೇಂಕಟ ನರಸಿಂಹ॥40॥ ಮತಶಾತಕಾದಿ ಬಾಧಕ ದೈತ್ಯ ಗರ್ಭಭೇದಿತ ಸುತೀಕ್ಷವಜ್ರನಖನಾರಸಿಂಹ॥41॥ ಯತಿಭನೇಭ್ಯ ವಾಂಛಿತ ದಾಯಕ ಶ್ರಿತಿಹಿತಶರಣ್ಯ ಜಗತ್ಪಿತ ನರಸಿಂಹ॥42॥ ರಾಜೀವ ಲೋಚನರಾಜವಾಹನ ಸಾಂಬ್ರಾಜ್ಯ ಜಾತಿಕೀರ್ತಿವಿರಾಜ ನರಸಿಂಹ॥43॥ ಲಲಿತಮೃತೈವ ಮಂಗಳನಾಮ ಭಕ್ತಿತೆ ನಿಶ್ಚಲ ಪ್ರಹ್ಲಾದ ವತ್ಸಲ ನಾರಸಿಂಹ॥44॥ ವನಚಾರ ನರಮೃಗವನಿಸೂರ ಬಾಹುಜ ದಿನಕಲ್ಕೀ ಶ್ರೀಜನಾರ್ಧನ ನರಸಿಂಹ ॥45॥ ಶಂಖಚಕ್ರಗದ ಪಂಕಜ ಪತವೀಹ ಸಂಕನಿರುದ್ಧ ನಿಶ್ಶಂಕ ನರಸಿಂಹ॥46॥ ಷಣ್ಣಾಳಿವಸ್ತ ಲಾವಣ್ಯಾಂಗ ನಿಸ್ತ್ರೈ ಗುಣ್ಯಾತ್ಮ ದೇವಾಗ್ರಗಣ್ಯ ನರಸಿಂಹ॥47॥ ಸನಕಸನಂದನ ಸನಾತನಾದಿ ಹೃದ್ವನಜಹಂಸ ನಾರಾಯಣ ನರಸಿಂಹ॥48॥ ಹಟಲಯಾದಿ ಯೋಗತ್ಕಟ ಮಾಗದ ಸರ್ಪತ ಕುಟಿಲತೇಜಸದುರ್ಘಟನಾರಸಿಂಹ॥49॥ ಕ್ಷರಾಕ್ಷರೋತ್ತಮ ಪುರುಷರ ಕೇಪಾರಪರ ಕಾರಣ ಪರೋಕ್ಷ ನರಸಿಂಹ॥50॥ ಗುರುಶೇಷಾಚಲ ಭಾರ್ಗಪುರಪತಿ ಮಮದೇಹಿ ಕರಾವಲಂಬನ ಲಕ್ಷ್ಮೀವರ ನರಸಿಂಹ॥51॥

ಜಯಜಯ ಲಕ್ಷ್ಮೀ ಜಯಲಕ್ಷ್ಮೀ ನರಸಿಂಹ (ನರಸಿಂಹ)

ಜಯಜಯ ಲಕ್ಷ್ಮೀ ಜಯಲಕ್ಷ್ಮೀ ನರಸಿಂಹ। ಜಯ ಹರಿ ಲಕ್ಷ್ಮೀ ನರಸಿಂಹ। ಅನಾಥ ರಕ್ಷಕ ನರಸಿಂಹ। ಆಪದ್ಬಾಂಧವ ನರಸಿಂಹ। ಇಷ್ಟಾರ್ಥಪ್ರದ ನರಸಿಂಹ। ಈಶ ಪರೇಶ ನರಸಿಂಹ। ಉಗ್ರಸ್ವರೂಪ ನರಸಿಂಹ। ಊರ್ಧ್ವ ಬಾಹು ನರಸಿಂಹ। ಎಲ್ಲ ರೂಪ ನರಸಿಂಹ। ಐಶ್ವರ್ಯ ಪ್ರದ ನರಸಿಂಹ। ಓಂಕಾರ ರೂಪ ನರಸಿಂಹ। ಔಷಧ ನಾಮ ನರಸಿಂಹ। ಅಂಬರ ವಾಸ ನರಸಿಂಹ। ಕಾಮಜನಕ ನರಸಿಂಹ। ಕಿರೀಟಧಾರಿ ನರಸಿಂಹ। ಖಗಪತಿ ವಾಹನ ನರಸಿಂಹ। ಗದಾಧರನೆ ನರಸಿಂಹ। ಗರ್ಭನಿರ್ಭೇದಿತ ನರಸಿಂಹ। ಗಿರಿಧರವಾಸ ನರಸಿಂಹ। ಗೌತಮ ಪೂಜಿತ ನರಸಿಂಹ। ಘಟಿಕಾ ಚಲಶ್ರೀ ನರಸಿಂಹ। ಚತುರ್ಭುಜನೆ ನರಸಿಂಹ। ಚತುರಾಯುಧಧರ ನರಸಿಂಹ। ಜ್ಯೋತಿ ಸ್ವರೂಪ ನರಸಿಂಹ। ತಂದೆ ತಾಯಿಯು ನರಸಿಂಹ। ತ್ರಿನೇತ್ರಧಾರಿ ನರಸಿಂಹ। ಧನುಜ ಮರ್ದನ ನರಸಿಂಹ। ದೀನನಾಥ ನರಸಿಂಹ। ದುಃಖ ನಿವಾರಕ ನರಸಿಂಹ। ದೇವಾದಿದೇವ ನರಸಿಂಹ। ಜ್ಞಾನಪ್ರದನೆ ನರಸಿಂಹ। ನರಹರಿರೂಪ ನರಸಿಂಹ। ನರನಾರಾಯಣ ನರಸಿಂಹ। ನಿತ್ಯಾನಂದ ನರಸಿಂಹ। ನರಮೃಗರೂಪ ನರಸಿಂಹ। ನಾಮಗಿರೀಶ ನರಸಿಂಹ। ಪಂಕಜಾನನ ನರಸಿಂಹ। ಪಾಂಡುರಂಗ ನರಸಿಂಹ। ಪ್ರಹ್ಲಾದ ವರದ ನರಸಿಂಹ। ಪಿನಾಕಧಾರಿ ನರಸಿಂಹ। ಪುರಾಣ ಪುರುಷ ನರಸಿಂಹ। ಭವಭಯ ಹರಣ ನರಸಿಂಹ। ಭಕ್ತಜನಪ್ರಿಯ ನರಸಿಂಹ। ಭಕ್ತೋದ್ಧಾರ ನರಸಿಂಹ। ಭಕ್ತಾನುಗ್ರಹ ನರಸಿಂಹ। ಭಕ್ತ ರಕ್ಷಕ ನರಸಿಂಹ। ಮುನಿಜನ ಸೇವಿತ ನರಸಿಂಹ। ಮೃಗರೂಪ ಧಾರಿ ನರಸಿಂಹ। ಯಜ್ಞಪುರುಷ ನರಸಿಂಹ। ರಂಗನಾಥ ನರಸಿಂಹ। ಲಕ್ಷ್ಮೀರಮಣ ನರಸಿಂಹ। ವಂಕಿಪುರುಷ ನರಸಿಂಹ। ಶಾಂತಮೂರ್ತಿ ನರಸಿಂಹ। ಷಡ್ವರ್ಗಾರಿ ನರಸಿಂಹ। ಸರ್ವಮಂಗಳ ನರಸಿಂಹ। ಸಿದ್ಧಿ ಪುರುಷ ನರಸಿಂಹ। ಸಂಕಟ ಹರಣ ನರಸಿಂಹ। ಸಾಲಿಗ್ರಾಮ ನರಸಿಂಹ। ಹರಿನಾರಾಯಣ ನರಸಿಂಹ। ಕ್ಷೇಮಕಾರಿ ನರಸಿಂಹ। ಜಯಜಯ ಲಕ್ಷ್ಮೀ ನರಸಿಂಹ। ಜಯಶುಭ ಮಂಗಳ ನರಸಿಂಹ॥(2 ಸಾರಿ)

ಅಜ್ಞಾನನಾಶಾಯ ವಿಜ್ಞಾನ ಪೂರ್ಣಾಯ (ಶ್ರೀ ರಾಘವೇಂದ್ರಸ್ವಾಮಿ)

ಅಜ್ಞಾನನಾಶಾಯ ವಿಜ್ಞಾನ ಪೂರ್ಣಾಯ ಸುಜ್ಞಾನದಾತ್ರೇ ನಮಸ್ತೇ ಗುರೋ॥ ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ ಶ್ರೀ ರಾಘವೇಂದ್ರಾರ್ಯ ಪಾಹಿ ಪ್ರಭೋ॥1॥ ಆನಂದರೂಪಾಯ ನಂದಾತ್ಮಜ ಶ್ರೀಪದಾಂಭೋಜಭಾಜೇ ನಮಸ್ತೇ ಗುರೋ ।ಶ್ರೀರಾಘ ॥2। ಇಷ್ಟಪ್ರದಾನೇನ ಕಷ್ಟಪ್ರಹಾನೇನ ಶಿಷ್ಟಸ್ತುತ ಶ್ರೀಪದಾಂಭೋಜಭೋ ।ಶ್ರೀರಾಘ॥3॥ ಈಡೇ ಭವತ್ಪಾದ ಪಾಥೋಜಮಾಧ್ಯಾಯ ಭಯೋಪಿ ಭೂಯೋ

ಭಾಯಾತ್ವಾಹಿಭೋ ।ಶ್ರೀರಾಘ॥4॥ ಉಗ್ರಂಪಿಶಾಚಾದಿಕಂ ದ್ರಾವಯಿತ್ವಾಶು ಸೌಖ್ಯಂಜನಾನಾಂ ಕರೋಷೀಶಭೋ
।ಶ್ರೀರಾಘ ॥5॥ ಊರ್ಜತ್ಕೃಪಾಪೂರ ಪಾಥೋನಿಧೇಮಂಕ್ಷುತುಷ್ಟೋನುಗೃಹ್ಣಾಸಿ ಭಕ್ತಾನ್ವಿಭೋ।ಶ್ರೀರಾಘ ॥6॥
ಋಜೂತ್ತಮಪ್ರಾಣ ಪಾದಾರ್ಚನಪ್ರಾಪ್ತ ಮಹಾತ್ಮ್ಯಸಂಪೂರ್ಣ ಸಿದ್ಧೇಶಭೋ ।ಶ್ರೀರಾಘ ॥7॥ ಋಭುಸ್ಥಭಾವಾಪ್ತ
ಭಕ್ತೇಷ್ಟಕಲ್ಪದ್ರು ರೂಪೇಶ ಭೂಪಾದಿ ವಂದ್ಯ ಪ್ರಭೋ ।ಶ್ರೀರಾಘ॥8॥ ೠದ್ಧಂಯಶಸ್ತೇವಿಭಾತಿ ಪ್ರಕೃಷ್ಟಂ
ಪ್ರಪನ್ನಾರ್ತಿಹಂತ ರ್ಮಹೋದಾರಭೋ ।ಶ್ರೀರಾಘ ॥9॥ ಕ್ಲೃಪ್ತಾತಿಭಕ್ತೌಘ ಕಾಮ್ಯಾರ್ಥದಾತ ರ್ಭವಾಂಭೋದಿ
ಪಾರಂಗತ ಪ್ರಾಜ್ಞಭೋ ॥ಶ್ರೀರಾಘ॥10॥ ಏಕಾಂತಭಕ್ತಾಯ ಮಾಕಾಂತ ಪಾದಾಬ್ಜ ಉಚ್ಚಾಯ ಲೋಕೇ ನಮಸ್ತೇ
ವಿಭೋ ।ಶ್ರೀರಾಘ ।11॥ ಐಶ್ವರ್ಯಭೂಮನ್ ಮಹಾಭಾಗ್ಯದಾಯಿನ್ ಪರೇಷಾಂಚಕೃತ್ಯಾದಿ ನಾಶಿನ್ ಪ್ರಭೋ
।ಶ್ರೀರಾಘ ।12॥ ಓಂಕಾರ ವಾಚ್ಯಾರ್ಥಭಾವೇನ ಭಾವೇನ ಲಭ್ಧೋದಯ ಶ್ರೀಕಯೋಗೀಶಭೋ ।ಶ್ರೀರಾಘ ॥13॥
ಔರ್ವಾನಲಪ್ರಖ್ಯ ದುರ್ವಾದಿದಾವಾನಲೈಃ ಸರ್ವತಂತ್ರಸ್ವತಂತ್ರೇಶಭೋ ।ಶ್ರೀರಾಘ॥14॥ ಅಂಭೋಜಸಂಭೂತ
ಮುಖ್ಯಾಮರಾರಾಧ್ಯ ಭೂನಾಥಭಕ್ತೇಶ ಭಾವಜ್ಞಭೋ ।ಶ್ರೀರಾಘ ।15॥ ಅಸ್ತಂಗತಾನೇಕ ಮಾಯಾದಿವಾದೀಶ
ವಿದ್ಯೋತಿತಾತೇಷ ವೇದಾಂತಭೋ ।ಶ್ರೀರಾಘ॥16॥ ಕಾಮ್ಯಾರ್ಥದಾನಾಯ ಬದ್ಧಾದರಾಶೇಷಲೋಕಾಯ
ಸೇವಾನುಸಕ್ತಾಯಭೋ ।ಶ್ರೀರಾಘ ॥17॥ ಖದ್ಯೋತಸಾರೇಷು ಪ್ರತ್ಯರ್ಥಿಸಾರ್ಥೇಷು ಮಾಧ್ಯಾಹ್ನಮಾರ್ತಾಂಡ
ಬಿಂಬಾಭಭೋ ।ಶ್ರೀ ರಾಘ ॥18॥ ಗರ್ವಿಷ್ಟಗರ್ವಾಂಬು ಶೋಷಾರ್ಯಮಾತೃಗ್ರ ನಮ್ರಾಂಬುಧೇರ್ಯಾ ಮಿನ್ನಿನಾಥ
ಭೋ॥ಶ್ರೀರಾಘ॥19॥ ಘೋರಾಮಯಧ್ವಾಂತ ವಿಧ್ವಂಸನೋದ್ಧಾಮದೇದೀಪ್ಯ ಮಾನಾರ್ಕ ಬಿಂಬಾಭಭೋ
।ಶ್ರೀರಾಘ ॥20॥ ಜಣತ್ಕಾರದಂಡಾಂಕ ವಸ್ತ್ರಾಂಕ ಕೌಪೀನಪೀನಾಂಕ ಹಂಸಾಂಕಭೋ।ಶ್ರೀರಾಘ॥21॥ ಚಂಡೀಶ
ಕಾಂಡೇಶ ಪಾಖಂಡವಾಕ್ಕಾಂಡ ತಾಮಿಶ್ರಮಾರ್ತಾಂಡ ಪಾಷಾಂಡಭೋ ।ಶ್ರೀರಾಘ ॥22॥ ಛದ್ಮಾಣುಭಾಗಂ
ನವಿದ್ಮಸ್ತ ವ್ವದಂತಃ ಸುಸದ್ಮೈವಪದ್ಮಾವಧಮ್ಯಾಸಿಭೋ ।ಶ್ರೀರಾಘ॥23॥ ಜಾಡ್ಯಂ ಹಿನಸ್ತಿ ಜ್ವರಾರ್ಶಃಕ್ಷಯದ್ಯಾಶು
ತೇಪಾದ ಪಾದ್ಮಂಬು ಲೇಶೋಽಪಿ ಭೋ। ಶ್ರೀ ರಾಘ॥24॥ ಝಷಧ್ವಜೀಯೇಷ್ವ ಲಭ್ಯೋರುಚೇತಃ
ಸಮಾರೂಢಮಾರೂಢ ವಕ್ಷೋಂಗಭೋ ।ಶ್ರೀರಾಘ ॥25॥ ಞಂಚಾವಿಹೀನಾಯ ಯಾದೃಚ್ಛಿಕಪ್ರಾಪ್ತತುಷ್ಟಾಯ
ಸದ್ಯಃ ಪ್ರಸನ್ನೋಽಸಿಭೋ ।ಶ್ರೀರಾಘ ॥26॥ ಟೀಕಾರಹಸ್ಯಾರ್ಥ ವಖ್ಯಾಪನಗ್ರಂಥ ವಿಸ್ತಾರಲೋಕೋಪಕರ್ತ ಪ್ರಭೋ
।ಶ್ರೀರಾಘ ॥27॥ ಠಂಕುರ್ವರೀಣಾಮಮೇಯ ಪ್ರಭಾವೋದ್ಧರಾಪಾದಸಂಸಾರ ತೋಮಾಂಪ್ರಭೋ। ಶ್ರೀರಾಘ
॥28॥ ಡಾಕಿನ್ಯಪಸ್ಮಾರಘೋರಾಧಿಕೋಗ್ರ ಗ್ರಹೋಚ್ಚಾಟ ನೋದಗ್ರವೀರಾಗ್ರ್ಯಭೋ ।ಶ್ರೀರಾಘ ॥29॥
ಢಕ್ಕಾಧಿಕಧ್ವಾನವಿದ್ರವಿತಾನೇಕ ದುರ್ವಾದಿ ಗೋಮಾಯು ಸಂಘಾತಭೋ। ಶ್ರೀರಾಘ ॥30॥
ಣಾತ್ಮಾದಿಮಾತ್ರರ್ಣಲಕ್ಷ್ಯಾರ್ಥಕ ಶ್ರೀಪತಿಧ್ಯಾನಸನ್ನದ್ಧ ಧೀಸಿದ್ಧಭೋ। ಶ್ರೀರಾಘ ॥31॥ ಣಾತ್ಮ (ಣಕಾರ) ತಾಪತ್ರಯ
ಪ್ರೌಢಬಾಧಾಬಿ ಭೂತಸ್ಯ ತಾಪತ್ರಯಂ ಹಂಸಿಭೋ।ಶ್ರೀರಾಘ॥32॥ ಸ್ಥಾನತ್ರಯ
ಪ್ರಾಪಕಜ್ಞಾನದಾತಸ್ತ್ರಿಧಾಮಾಂಘ್ರಿಭಕ್ತಿಂ ಪ್ರಯಚ್ಛಪ್ರಭೋ। ಶ್ರೀರಾಘ॥33॥ ದಾರಿದ್ರ್ಯ ದಾರಿದ್ರ್ಯ ಯೋಗೇನ
ಯೋಗೇನ ಸಂಪನ್ನ ಸಂಪತ್ತಿಮಾ ಧೇಹಿಭೋ। ಶ್ರೀರಾಘ ॥34॥ ಧಾವಂತಿತೋನಾಮಧೇಯಾಭಿ
ಸಂಕೀರ್ತನೇನ್ಯೈನಸಾಮಾಶು ವೃಂದಾನಿಭೋ ।ಶ್ರೀರಾಘ ॥35॥ ನಾನಾವಿಧಾನೇಕ ಜನ್ಮಾದಿದುಃಖೌಘತಃ ಸಾಧ್ವಸಂ
ಸಂಹರೋದಾರಭೋ ।ಶ್ರೀರಾಘ॥36॥ ಪಾತಾತ್ವಮೇವೇತಿ ಮಾತಾತ್ವಮೇವೇತಿ ಮಿತ್ರಂತ್ವಮೇವೇತ್ಯಹಂ
ವೇದ್ಮಿಭೋ। ಶ್ರೀರಾಘ ॥37॥ ಫಾಲಸ್ಥದುರ್ದೇವ ವರ್ಣಾವಳೀಕಾರ್ಯಲೋಪೇಽಪಿ ಭಕ್ತಸ್ಯಶಕ್ತೋಽಸಿಭೋ
।ಶ್ರೀರಾಘ॥38॥ ಬದ್ಧೋಽಸ್ಮಿಸಂಸಾರಪಾಶೇನ ತೇಽಂಘ್ರಿಂವಿನಾನ್ಯಾಗತಿರ್ನೇತ್ಯಮೇವಿ ಪ್ರಭೋ ।ಶ್ರೀರಾಘ॥39॥
ಭಾವೇಭಜಾಮೀಹ ವಾಚಾವದಾಮಿತ್ವ ದೀಯಂಪದಂ ದಂಡವಸ್ನಾಮಿಭೋ ।ಶ್ರೀರಾಘ ॥40॥
ಮಾನ್ಯೇಷುಮಾನ್ಯೋಽಸಿ ಮತ್ಯಾಚ ಮಾಮದ್ಯಮಾನ್ಯಂ ಕುರುದ್ರಾಗ್ವಿಭೋ ।ಶ್ರೀರಾಘ॥41॥ ಯಂಕಾಮ
ಮಾಕಾಮಯೇ ತನ್ನ ಜಾಪಂತತಸ್ತ್ವಂ ಶರಣ್ಯೋಽಭ ವೇತ್ಯೇಮಿಭೋ ।ಶ್ರೀರಾಘ ॥42॥
ರಾಜಾದಿವಶ್ಯಾದಿಕುಕ್ಷಿಂಭರಾನೇಕ ಚಾತುರ್ಯವಿದ್ಯಾ ಸುಮೂಢೋಽಸ್ಮಿಭೋ। ಶ್ರೀರಾಘ॥43॥ ಲಕ್ಷ್ಮೀಷುತೇ

ಭಕ್ತವರ್ಗೇಷು ಕುರ್ವೇಕಲಕ್ಷ್ಯಂ ಕೃಪಾಪಾಂಗಲೇಶಶ್ಯಮಾಂ। ಶ್ರೀರಾಘ॥44॥ ವಾರಾಂಗನಾದ್ಯೂತ ಚೌರ್ಯಾನ್ಯಡಾರಾತ ರತ್ವಾದ್ಯವದ್ಯತ್ವತೋಮಾಂಪ್ರಭೋ ।ಶ್ರೀರಾಘ॥45॥ ಶಕ್ತೋನಶಕ್ತಿಂ ತವಸ್ತೋತುಮಾಧ್ಯಾತು ಮೀದೃಕ್ತ್ವಹಂ ಕರೋಮೀಶಃ ಪ್ರಭೋ ।ಶ್ರೀರಾಘ ॥46॥ ಷಡ್ವೈರಿವರ್ಗಂ ಮಮಾರಾನ್ನೀರಾಕುರ್ವ ಮಂದೋಹರೀರಾಂಘ್ರಿ ರಾಗೋ ಸ್ತುಭೋ ಶ್ರೀರಾಘ ॥47॥ ಸನ್ಮಾರ್ಗ ಸಚ್ಛಾಸ್ತ್ರ ಸತ್ಸಂಗ ಸದ್ಭಕ್ತಿ ಸಜ್ಞಾನ, ಸಂಪತ್ತಿ, ಮಾಧೇಹಿಭೋ ।ಶ್ರೀರಾಘ॥48॥ ಹಾಸ್ಯಸ್ಪದೋಹಂ ಸಮಾನೇಷ್ವಕೀರ್ತ್ಯಾತವಾಂಘ್ರಿಂ ಪ್ರಪನ್ನೋಸ್ಮಿ ಸಂರಕ್ಷಭೋ ।ಶ್ರೀರಾಘ॥49॥ ಲಕ್ಷ್ಮೀವಿಹೀನತ್ವಹೇತೋಃ ಸ್ವಕೀಯೌಃ ಸುದೂರೀಕೃತೊಸ್ಮ್ಯದ್ಯ ವಾಚ್ಯೋಸ್ಮಿಭೋ ।ಶ್ರೀರಾಘ ॥50॥ ಕೃಷ್ಣಾವಧೂತೇನ ಗೀತೇನ ಮಾತ್ರಕ್ಷರಾದ್ಯೇನಗಾಥಾಸ್ತ ವೇನೇಡ್ಯಭೋ ಶ್ರೀರಾಘ॥51॥ ಕ್ಷೇಮಂಕರಸ್ತ್ವಂ ಭವಾಂಭೋದ ಮಜ್ಜಜ್ಜನಾನಾಮಿತಿಕ್ಯಾಂ ಪ್ರಪನೋಸ್ಮಿಭೋ। ಕೃಷ್ಣದಧುಂಕೇನ ಶ್ರೀರಾಘ॥52॥

ಅಗಣಿತಗುಣ ಪರಿಪೂರ್ಣ ನೀನು (ಅಯ್ಯಪ್ಪ)

ಅಗಣಿತಗುಣ ಪರಿಪೂರ್ಣ ನೀನು ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಆನಂದಾನುಭವ ನಿನ್ನ ಸ್ಮರಣೆಯು ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಇಹಪರದೊಳು ಸುಖ ನೀಡುವ ಮೂರುತಿ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಈತಿಭಾದೆಯ ಕ್ಷಣದೊಳು ಕಳೆಯುವೆ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಉದಯದಿ ಭಜಿಸುವೆ ನನ್ನ ಹೃದಯ ಸದನದಿ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಊರ್ಧ್ವ ಲೋಕಸುಖ ನೀಡುವ ಉತ್ತಮ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಋಣಿನಾನಿರುತವು ನೀ ತೋರಿದ ಕೃಪೆಗೆ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ೠ ಅಕ್ಷರದೊಳು ನಿನ್ನ ರೂಪವ ಕಂಡೆ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಎನ್ನೊಳಗಿರುವ ದೋಷದಹಿಸಿ ನೀ ಸಲಹೊ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಏತರ ಭಯ ನಿನ್ನೊಲುಮೆಯು ನಮಗಿರೆ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಐಸಿರಿ ಇರುಮುಡಿ ಸನ್ನಿಧಿಗೆ ಬರಲು ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಒಲಿದು ಭಕ್ತರಿಗೆ ವರವನು ಕೊಡುವ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಓಂ ಅಯ್ಯಪ್ಪ ಸ್ವಾಮಿನೇ ನಮಃ ನಮಃ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಔಪಾಸಿಸಲು ಉದ್ಧರಿಸುವ ಕರುಣೆಯೆ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಅಂಧಕಾರವ ಅಳಿಸುವ ಜ್ಯೋತಿಯೇ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಅಹರ್ನಿಶ ಅನುಪಮ ನಿನ್ನ ದಿವ್ಯ ಸ್ಮರಣೆಯು ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ। ಪರಿಮಳ ಪ್ರಿಯನ ಅಕ್ಷರ ಮಾಲೆ। ಒಪ್ಪಿಸಿಕೋ ನಿ ಅಯ್ಯಪ್ಪ॥ ಶರಣಂ ಶರಣಂ ಅಯ್ಯಪ್ಪ। ಸ್ವಾಮಿಯೇ ಶರಣಂ ಅಯ್ಯಪ್ಪ॥

ಅರುಣಾಚಲ ಶಿವ ಓಂಗುರು (ಗುರು)

ಅರುಣಾಚಲ ಶಿವ ಓಂ ಗುರು ರಮಣಾ। ಆಶ್ರೀತ ಫಲದಾತ ಶ್ರೀ ಗುರು ರಮಣಾ। ಇಹಪರ ಗತಿ ನೀನೇ ಓಂ ಗುರು ರಮಣಾ। ಈಶ ಸರ್ವೇಶ ಶ್ರೀ ಗುರು ರಮಣಾ। ಉನ್ನತ ಗುಣಧಾಮ ಓಂ ಗುರು ರಮಣಾ। ಊರ್ಧ್ವ ತಪಸ್ವಿ ಶ್ರೀ ಗುರು ರಮಣಾ। ಋಷಿವರ್ಯನೆ ಓಂ ಗುರು ರಮಣಾ। ೠಕಾರಪ್ರಿಯ ಓಂ ಗುರು ರಮಣಾ। ಎರಗುವೆ ಪಾದಕೆ ಓಂ ಗುರು ರಮಣಾ। ಏತಕೆ ತಾಮಸ ಶ್ರೀಗುರು ರಮಣಾ। ಐಶ್ವರ್ಯನಿಧಿ ಓಂ ಗುರು ರಮಣಾ। ಒಡನೆ ಕರುಣಿಸು ಶ್ರೀ ಗುರು ರಮಣಾ। ಔಪಾಸನೋತ್ತಮ ಓಂ ಗುರು ರಮಣಾ। ಅಂತರಾತ್ಮನೇ ಶ್ರೀಗುರು ರಮಣಾ। ಅಃ ಆನಂದ ದಾಯಕ ಓಂ ಗುರು ರಮಣಾ॥

ಅತ್ರಿ ಸುಪುತ್ರ ಸಾಯಿನಾಥ(ಸಾಯಿಬಾಬ) ರಾಗ: ಪುನ್ನಾಗವರಾಳಿ-ಆದಿತಾಳ

ಅತ್ರಿ ಸುಪುತ್ರ ಸಾಯಿನಾಥ। ಆಶ್ರಿತ ರಕ್ಷಕ ಸಾಯಿನಾಥ। ಇಂದೀವರಾಕ್ಷ ಸಾಯಿನಾಥ। ಈಶಿತವ್ಯ ಸಾಯಿನಾಥ॥1॥ ಉದಾತ್ತ ಹೃದಯ ಸಾಯಿನಾಥ। ಊರ್ಜಿತ ನಾಮ ಸಾಯಿನಾಥ। ಋಣ ವಿಮೋಚಕ ಸಾಯಿನಾಥ। ೠಕಾರ ಒಡೆಯ ಸಾಯಿನಾಥ॥2॥ ಎಡರು ನಿವಾರಕ ಸಾಯಿನಾಥ। ಏಕಧರ್ಮ ಬೋಧಿತ ಸಾಯಿನಾಥ। ಐಕ್ಯಮತ್ಯ ಪ್ರಿಯ ಸಾಯಿನಾಥ। ಒಮ್ಮತ ಬೋಧಿತ ಸಾಯಿನಾಥ॥3॥ ಓಂಕಾರ ರೂಪ ಸಾಯಿನಾಥ। ಔದುರಂಬವಾಸಿ ಸಾಯಿನಾಥ।

ಅಂಬರೀಶ ಶ್ರೀ ಸಾಯಿನಾಥ। ಅಃ ಶತ್ರು ವಿನಾಶಕ ಸಾಯಿನಾಥ।।4।। ಕರುಣಾಮೂರ್ತಿ ಸಾಯಿನಾಥ। ಖಂಡೋಬಾ ನಿಜ ಸಾಯಿನಾಥ। ಗಣಿತ ಪ್ರವೀಣ ಸಾಯಿನಾಥ। ಘನಶ್ಯಾಮ ಸುಂದರ ಸಾಯಿನಾಥ।।5।। ಜ್ಞಾನಗಮ್ಯ ಸಾಯಿನಾಥ। ಚತುರ್ಮುಖ ಬ್ರಹ್ಮ ಸಾಯಿನಾಥ। ಛಂದಸ್ಸು ಸ್ಫೂರ್ತಿ ಸಾಯಿನಾಥ। ಜಗತ್ರಯ ಒಡೆಯ ಸಾಯಿನಾಥ।।6।। ಝುಗಮಗ ಪ್ರಕಾಶ ಸಾಯಿನಾಥ। ಜ್ಞಾನ ಗಮ್ಯ ಶ್ರೀ ಸಾಯಿನಾಥ। ಠಂಕಾಕಾಹಿ ಸಾಯಿನಾಥ।।7।। ಡಂಬ ವಿರೋಧಿ ಸಾಯಿನಾಥ। ಢಕ್ಕಾನಾದ ಪ್ರಿಯ ಸಾಯಿನಾಥ। ಣತ ಪರಿಪಾಲಕ ಸಾಯಿನಾಥ। ತತ್ವಜ್ಞಾನಿ ಸಾಯಿನಾಥ।।8।। ಥಳಥಳಿಪ ಮಣಿ ಸಾಯಿನಾಥ। ದಕ್ಷಿಣಾಮೂರ್ತಿ ಸಾಯಿನಾಥ। ಧರ್ಮರಕ್ಷಕ ಸಾಯಿನಾಥ। ನಕ್ಷತ್ರ ವೇಮಿ ಸಾಯಿನಾಥ।।9।। ಪರಂಜ್ಯೋತಿ ಶ್ರೀ ಸಾಯಿನಾಥ। ಫಕೀರ ರೂಪ ಸಾಯಿನಾಥ। ಬಲರಾಮ ಸಹೋದರ ಸಾಯಿನಾಥ। ಭಕ್ತಿ ಪ್ರದಾಯಕ ಸಾಯಿನಾಥ।।10।। ಮಸೀಮ ವಾಸಿ ಸಾಯಿನಾಥ। ಯಜ್ಞಪುರುಷ ಸಾಯಿನಾಥ। ರಘುವಂಶಜ ಸಾಯಿನಾಥ। ಲಕ್ಷ್ಮಣಾಗ್ರಜ ಸಾಯಿನಾಥ।।11।। ವನವಿಹಾರಿ ಸಾಯಿನಾಥ। ಶಮಿ ವೃಕ್ಷಪ್ರಿಯ ಸಾಯಿನಾಥ। ಷಟ್ಕರಿ ನಿಜ ಸಾಯಿನಾಥ। ಸಚ್ಚಿದಾನಂದ ಸಾಯಿನಾಥ।।12।। ಹಠಯೋಗಿ ಸಾಯಿನಾಥ। ಳ ಬೀಜಾಕ್ಷರ ಸಾಯಿನಾಥ। ಕ್ಷಮಾಶೀಲಶ್ರೀ ಸಾಯಿನಾಥ। ಕ್ಷಮಾಶೀಲಶ್ರೀ ಸಾಯಿನಾಥ।।13।।

❖ ❖ ❖

73. ಸುಧಾಮ ಚರಿತ್ರೆ

ಶ್ರೀ ಹರಿಪ್ರಿಯ ಸಖನು

ಶ್ರೀ ಹರಿಪ್ರಿಯ ಸಖನು ಕುಚೇಲನು। ವರ ವಿಪ್ರೋತ್ತಮನವನು।।ಪ।। ಘೋರದಾರಿದ್ರ್ಯ ಬಾಧೆಯೊಳಿರುತಿರೆ। ಚಾರುಸಚ್ಚರಿತೆಯ ಆಗರ ನಾಗಿಹ।।ಅ.ಪ।। ಶೀಲ ಸದ್ಗುಣವತಿಯು ಸುಶೀಲೆಯು। ಸತಿಮಣಿ ಪತಿವ್ರತೆಯು। ಬಾಲರ ಸಲಹಲು ಬಲುಕಷ್ಟ ಪಡುತಲಿ। ಶ್ರೀಲೋಲನ ಧ್ಯಾನದಿ ಕಾಲಕಳೆಯುತಲಿಹಳು।।1।। ಮನದಲಿ ಯೋಚಿಸುತ ಅನುನಯದೊಳು। ಪತಿಗೆತಾ ನುಡಿದಳಂದೂ।। ಅನುಭವಿಸಲಾರೆ ಘನದಾರಿದ್ರ್ಯವನು ಸಂಬಂಧಿಗಳು ಸ್ನೇಹಿತರಿಲ್ಲವೇ ನಿಮಗೇ।।2।। ಅಂದ ಮಾತನು ಕೇಳುತ ಕುಚೇಲ ತಾ ಹಿಂದೆ ಗುರುಕುಲವಾಸದಿ। ನಂದಬಾಲನ ಕೂಡ ಹೊಂದಿದ ಸ್ನೇಹವ। ತಂದು ಸ್ಮರಣೆಗೆ ಶ್ರೀಕೃಷ್ಣಸಖನು ಎಂದಾ।।3।। ಕಡು ಹರುಷದಿ ಸತಿಯು ಒಡನೆ ತಂದು ಪ್ರಥುಕು ತಂಡುಲವನು ನೀಡಿ ಕಡಮೊಡೆಯ ಪಾದ ದರುಶನ ಕೊಂಡು ನೀವ। ಸಡಗರದಿಂದಲಿ ಬನ್ನಿರೆಂದು ಕಳುಹಿದಳು।।4।। ಭರತಮಾರ್ಗದಿ ಹರಿಯಾ। ಸ್ಮರಿಸುತಲೆ ಮನದೊಳು ಪೂಜಿಸುತ। ಸುರವೈಭವದಲಿ ಮೆರೆಯುವ ದ್ವಾರಕಾ ಪುರವನು ನೋಡುತ ಬೆರಗಾಗಿ ನಿಂದನು।।5।। ಚಾರರೊಡನೆ ಪೇಳಿದಾ ಶ್ರೀ ಕೃಷ್ಣ ಬಾಲ್ಯದ ಸಖತಾನೆಂದು ದೂರದಿ ಬಂದು ದ್ವಾರದಿ ನಿಂದಿಹುದನು ಅರುಹಿರಿ ಹರಿಗೆಂದು। ಕಳುಹಿದನವರನು।।6।। ವರ್ತೆಯನು ಕೇಳುತ್ತಾ। ಶ್ರೀಕೃಷ್ಣ ತಾ ವಿಪ್ರನೆಡೆಗೆ ಬರುತಾ। ಕರಪಿಡಿದವನ ಕರೆ ತಂದನರಮನೆಗೆ ತಾ। ವರಸಿಂಹಾಸನದಲ್ಲಿ ಕುಳ್ಳಿರಿಸಿದನಾಗ।।7।। ದೂರದ ದಾರಿಯನು ನಡೆದು ಬಂದಶ್ರಮ ಪರಿಹಾರಕೆಂದು। ನಾರಿ ರುಕ್ಮಿಣಿ ನೀರನೆರೆಯೆ ಪಾದವತೊಳೆದು। ಭಾರಿ ಉಪಚಾರವ ಮಾಡುತ್ತಿದ್ದನು ಕೃಷ್ಣಾ।।8।। ಮಡದಿ ಮಕ್ಕಳು ಕ್ಷೇಮವ ವಿಚಾರಿಸಿ ಕಡು ಸಂಭ್ರಮವ ತೋರುತ। ಷಡುರಸನನ್ನವ ಮಡದಿ ರುಕ್ಮಿಣಿ ಬಡಿಸೇ ಸಡಗರದಲಿ ಸುಭೋಜನವ ಮಾಡಿಸಿದನು।।9।। ಅಂದಿನಿರುಳು ಕಳೆಯೇ। ತಂದಿಹುದೇನು ಕಾಣಿಕೆ ತಮಗೆನುತಾ। ಚಿಂದಿ ಬಟ್ಟೆಯೊಳಿದ್ದ ಪ್ರಥಕು ತಂಡುಲವ। ಬ್ರಹ್ಮಾಂಡದೊಡೆಯತಾ ಕೊಂಡ ಸಂಭ್ರಮದಿಂದ।।10।। ಪ್ರಥಕು ತಂಡುಲವಕೊಂಡು। ಸುಧಾಮನ ಭಕುತಿ ಭಾವವನೆ ಕಂಡು। ಅತುಲ ಐಶ್ವರ್ಯದ ಸುಖ ಸಂಪದವಿತ್ತು।। ಮುಕುತಿ ನೀಡಿದ ನಮ್ಮ ಭಕುತ ವತ್ಸಲ ಕೃಷ್ಣಾ।।11।। ಮಂಗಲಂಮಚ್ಛಕೂರ್ಮ। ವರಹ ನರಸಿಂಗ ಸುಂಂದರವಾಮನಾ। ಮಂಗಲಂ ಭೃಗು ರಾಮದಶರಥ ತನಯಗೆ ಮಂಗಳಂ। ಶ್ರೀಕೃಷ್ಣಬೌದ್ದಸುಕಲ್ಕಿಗೆ।।12।। ಮಂಗಲಪ್ರದ ಚರಿತೆಯಾ। ಭಕುತಿಯಿಂದ ಪೇಳಿಕೇಳಿದ ಜನಕೇ। ಹಿಂಗದೆ ಸಕಲ ಸೌಭಾಗ್ಯ ಸಂಪದವೀವಾ।

ಅಂಗಜಪಿತತಂದೆ ಸಿರಿಪುರಂದರ ವಿಠಲಾ ಸ್ವಾಮಿ।।13।। ಶ್ರೀಹರಿಪ್ರಿಯ ಸಖನೂಕುಚೇಲನು ವರವಿಪ್ರೋತ್ತ ಮನವನೂ। ನೀರಜನಾಭನ ಕರುಣೆಯಿಂದಲಿ ತಾ ಭೂರಿ ಸಂಪದ ಸಿರಿ ಭೋಗಿಸುತ್ತಿದ್ದನೂ।।14।।

ಪತಿಯ ಪಾದಕ್ಕೆರಗಿ ಮತಿ ಬೇಡಿ

ಪತಿಯ ಪಾದಕ್ಕೆರಗಿ ಮತಿ ಬೇಡಿ ಪಾರ್ವತಿ। ಸುತಗೆ ವಂದನೆಯ ಮಾಡಿದಳು। ಅತಿ ಭಕ್ತಿಯಿಂದಲಿ ಸ್ತುತಿಸುವ ಜನರಿಗೆ ಸ।ದ್ಗತಿಯಾಗಲೆನುತ ಪೇಳಿದಳು।।1।। ಸುದಾಮನೆಂಬೋರ್ವ ಸೂಕ್ಷ್ಮದ ಬ್ರಾಹ್ಮಣ।ಹೊದಿಯಲಿಕ್ಕಿಲ್ಲ ಅಶನವಿಲ್ಲ। ಗದಗದ ನಡುಗುತ ಮಧುರ ಮಾತಾಡುತ। ಸದನದೊಳಿರುತಿದ್ದನಾಗ।।2।। ಪ್ರಾತಃಕಾಲದಲೆದ್ದು ನಿತ್ಯಕರ್ಮವ ಮುಗಿಸಿ। ನಾಥನ ಧ್ಯಾನ ಮಾಡುತಲಿ।। ಪಾತ್ರರ ಮನೆಗ್ಹೋಗಿ ಯಾಚನೆಯನೆ ಮಾಡಿ। ಗ್ರಾಸ ತರುವನು ತಾನು ಮುಷ್ಟಿತುಂಬ।।3।। ಪತಿವ್ರತೆ ಹೆಂಡತಿ ಪತಿತಂದಿದ್ದೆ ಸಾಕೆಂದು। ಹಿತದಿಂದ ಪಾಕ ಮಾಡುವಳು।। ಅತಿ ಭಕ್ತಿಯಿಂದಲಿ ಪತಿಗೆ ಭೋಜನ ಬಡಿಸಿ। ಮತಿವಂತಿ ಉಳಿದದ್ದುಂಬುವಳು।।4।। ಹಸಿವೆ ತೃಷೆಗಳಿಂದ ಅತಿ ಕ್ಲೇಶವಾಗಿದ್ದು। ಪತಿಕೂಡ ಮಾತನಾಡಿದಳು।। ಗತಿಯೇನು ನಮಗಿನ್ನು ಹಿತದವರ್‍ಯಾರಿಲ್ಲೆ ಸದ್ಗತಿಯೇನೆನುತ ಪೇಳಿದಳು।।5।। ಪೊಡವಿಯೊಳಗೆ ನಿಮ್ಮ ಒಡಹುಟ್ಟಿ ದವರಿಲ್ಲೆ। ಒಡನೆ ಆಡಿದ ಗೆಳೆಯರಿಲ್ಲೆ।। ಕರೆದು ಕೂಡಿಸಿಕೊಂಡು ಬಿರಸು ಮಾತ್ಹೇಳುವ ಹಿರಿಯರು ದಾರಿಲ್ಲೆ ನಿಮಗೆ।।6।। ಚಿಕ್ಕಂದಿಲೋದಿಲ್ಲೆ ಹೆತ್ತವರ್‍ಹೇಳಿಲ್ಲೆ। ಉತ್ತಮ ಗುರುಗಳಿಲ್ಲೇನು। ಹೊತ್ತುವೇಳೆಗಾಗೋ ಮಿತ್ರರು ಯಾರಿಲ್ಲೆ। ಮತ್ತೆ ಕೇಳಿದಳು ಕ್ಲೇಶದಲಿ।।7।। ಮಡದಿಮಾತನು ಕೇಳಿ ಮನದಲಿ ಯೋಚಿಸಿ। ಹುಡುಗನಾಗಿರಲಿಕ್ಕೆ ಹೋಗಿ।। ಗುರುಕುಲವಾಸದಲಿ ಹರಿನಾವು ಓದಿದ್ದು। ಹರಿಹೊರ್ತು ಇನ್ನೊಬ್ಬರಿಲ್ಲಾ ಇನ್ನೊಬ್ಬರೇತಕೆ ಅನ್ಯರಪೇಕ್ಷೇಕೆ। ಮನ್ನಿಸಿ ಹೋಗಿ ಬರ್‍ರೆಂದಳು। ಇನ್ನೇನು ಕೊಡತಿಹೆ ಹರಿ ಮಂದ ಇಡಲಿಕ್ಕೆ। ಚೆನ್ನಾಗಿ ಕೇಳಿದನಾಗ ಕುಚೇಲ।।9।। ಗಾಬರಿಯಾದಳು ಸಾಗಿ ತಾ ನಡೆದಳು।ಬೇಗ ತಂದಳು ಪಕ್ಕದ ಮನೆ ಅವಲಕ್ಕಿ। ಬಾಗಿ ವಸ್ತ್ರದೊಳು ಬೇಗ ಕಟ್ಟಿಕೊಟ್ಟು। ಹೋಗಿ ಬರ್‍ರೆನುತ ಹೇಳಿದಳು।।10।. ಅಂಗಳವನು ಬಿಟ್ಟು ಮುಂದಕೆ ಬಂದನು। ಹಂಗಹಾರಿ ಹೋದಿತೆಡಕೆ। ಮಂಗಳವಾಗುವುದು ರಂಗನ ದರುಶನ।।11।। ಸಂದೇಹ ವಿಲ್ಲದಾಗುವದು ಬಾಗಿಲವನು ಬಿಟ್ಟು ಸಾಗಿ ಮುಂದಕೆ ಬರಲು। ಕಾಗಿ ಹಾರ್‍ಹೋದವು ಬಲಕೆ। ಆಗುವದು ನಮಗಿನ್ನು ಆಗುವದು ಶುಭಚಿನ್ಹ। ಆಗುವದು ಹರಿಕೃಪೆ ಯಿಂದ।।12।। ಹೀಗೆಂದ ಬ್ರಾಹ್ಮಣ ಮುಂದಕೆ ನಡೆದನು। ಕಂಡನು ಕಮಲಪುಷ್ಪಗಳ। ರಂಗನ ಹೆಂಡರಿಗೆ ಹೆರಳಿಗೆ ಬೇಕೆಂದು ತೆಗೆದುಕೊಂಡನು ಕಮಲ ಪುಷ್ಪಗಳ।।13।। ಹರಿಯುವ ಜಲವೆಲ್ಲ ಹರಿಯಭಿಷೇಕವೆಂ- ದ್ಹರುಷದಿಂದಲೆ ತುಂಬಿಕೊಂಡು। ಕರದಲಿ ಹಿಡಕೊಂಡು ಪುರದ ಬಾಗಿಲ ಮುಂದೆ। ಹರಿಹ್ಯಾಗೆ ದೊರಕುವನೆಂದ।।14।। ನಿಂತನು ಬ್ರಾಹ್ಮಣನಂತರೂಪದಿ ಧ್ಯಾನ। ಅಂತರಂಗದಲಿ ಮಾಡುತಲಿ। ಸಂತೋಷದಿಂದಲಿ ಧರಿಸಿದ ದಶರೂಪ-ದಿಂದ ಬಂದೆನ್ನ ಕಾಯೆಂದ।।15।। ಹರಕುವಸ್ತ್ರವನುಟ್ಟು ಹರಿಧ್ಯಾನ ಮಾಡುವ। ವಿಪ್ರನ ಕಂಡು ಚಾರಕರು।। ಬರಬೇಡಿರೊಳಗೆ ಹಿರಿಯರಪ್ಪಣೆಯಿಲ್ಲ। ತಿರುಗಿ ಹೋಗೆನುತ ಹೇಳಿದರು।।16।। ಅಂದ ಮಾತನು ಕೇಳಿ ಅಂಜಿದ ಬ್ರಾಹ್ಮಣ। ಇಂದಿರಾರಮಣಗ್ಹೇಳಿರೆಂದ।। ಹೆಸರು ಸುದಾಮನಂತೆ ಹರಿದು ಬಂದಾನೆಂದು। ವಸುದೇವತನಯಗ್ಹೇಳಿರೆಂದ।।17।। ಕೇಳಿದ ಹರಿಯೆದ್ದು ಬಹಳ ಹರುಷದಿಂದ। ಬೇಗನೆ ಕರೆತನ್ನಿರವನ। ಹೋಗು ಹೋಗೆಂದರೆ ಸಾಗಿ ಮುಂದಕೆ ಬಂದು। ಬಾಗಲಕೆ ಬಂದ ಸುದಾಮ।।18।। ಬಂದ ಭಕ್ತನ ನೋಡಿ ಆನಂದದಿಂದೆದ್ದು। ವಂದಿಸಿ ಆಸನವ ಹಾಕಿದರು।। ಚಂದದಿಂದಲಿ ಕರವ ಹಿಡಿದು ಮಾತಾನಾಡುತ। ಬಂದ ಕಾರಣವ ಕೇಳಿದರು।।19।। ಮಂದಗಮನೆ ಸಹಿದ ತಂದ ಉದಕದಿಂದ। ಚಂದದಿಂದಲಿ ಪಾದ ತೊಳೆದ ಕೃಷ್ಣ।। ಗಂದಕೇಶರ ಹಚ್ಚಿ ಚಂದ ಚಾಮರದಿಂದ। ಅಂದದಿ ಗಾಳಿ ಬೀಸಿದರು।।20।। ಹಸಿದು ಬಂದಾರೆಂದು ಹಸಿವೆಗೆ ತಕ್ಕಂಥ। ಹಸನಾದ ಹಣ್ಣು ಸಕ್ಕರೆಯು। ಕುಸುಮನಾಭನು ತಾನು ಪನ್ನೀರು ತಂದಿಡೆ। ಉಂಡು ಕೈ ತೊಳೆದ ಸುದಾಮ।।21।। ಮಂದರಧರಗಿನ್ನು ಸುಂದರ ಸತಿಯರು। ತಂದರು ತಬಕ ವೀಳೆಯನು।। ಇಂದಿರೆರಮಣನು ಬಂದ ಸುದಾಮಗೆ। ಚಂದದಿ ಮೆದ್ದರು ವೀಳೆಯನು।।22।। ಶ್ರಮ ಬಹಳವಾಗಿದೆ ವಿಶ್ರಮಿಸಿಕೊಳ್ಳಿರೆಂದು। ಸೆಳೆಮಂಚ ತಂದುಹಾಕಿದರು। ಶಾಲು ಸಕಲಾತಿಯು ಮೇಲಾದ ಹಾಸಿಗೆ। ಮೇಲೆ ಮಲಗಿದನು

ಸುದಾಮ॥23॥ ಅಂದಿನ ರಾತ್ರಿಯಲಿ ಮಂದಗಮನೇರ ಬಿಟ್ಟು। ಬಂದು ಮಲಗಿದನು ಶ್ರೀಹರಿಯು॥ ಹಿಂದಿನ ವೃತ್ತಾಂತ ಒಂದೊಂದು ಸ್ಮರಿಸುತ ಆನಂದದಿ ಹರಿಯು ಸುದಾಮ॥24॥ ಅಂದಿನ ಸ್ನೇಹವು ಇಂದೇಕೆ ನೆನಪಾಯ್ತು। ಬಂದಿರಿ ಬಹುದಿನಕೆಂದ। ಹೆಂಡತಿ ಮಕ್ಕಳು ಇಹರೇನು ನಿಮಗೆಂದ। ಇಂದಿರೆರಮಣ ಕೇಳಿದನು॥25॥ ಹೆಂಡತಿ ಕಳುಹಿದಳು ರಂಗನ ದರುಶನ। ಕೊಂಡುಬಾರೆನುತ ಪೇಳಿದಳು॥ ತಂದದ್ದು ಕೊಡಲಿಕ್ಕೆ ಸಂದೇಹವೇತಕೆ। ತಂಡುಲ ವಸ್ತ್ರವ ಹಿಡಿದು ಜಗ್ಗಿದನು॥26॥ ಮುಷ್ಟಿತುಂಬವಲಕ್ಕಿ ಮುಕ್ಕಿದ ಹರಿ ಬೇಗ। ನಕ್ಕರು ಸತಿಯರೆಲ್ಲ। ಇಷ್ಟೆ ಸಾಕು ಎಂದು ಗಟ್ಯಾಗಿ ಕೈ ಹಿಡಿಯೆ। ಕೊಟ್ಟನು ಭಕ್ತಗೈಶ್ವರ್ಯ॥27॥ ಹದಿನಾರು ಸಾವಿರ ಚದುರೆಯರ ಕರಸಿದ। ಕೊಡಿಸಿದರೆಲ್ಲರಿಗೆ ತಂಡುಲವ। ಉಳಿಸಿದ ಅವಲಕ್ಕಿ ಉಣಲಿಕ್ಕೆ ಮಾರ್ಗಕ್ಕೆ। ಬೇಕೆಂದು ಬಿಗಿದು ಕಟ್ಟಿದರು॥28॥ ರನ್ನದ ಬಾಗಿಲಿಗೆ ಚಿನ್ನದ ಚೌಕಟ್ಟು। ಹೊನ್ನ ಹೊಸ್ತಲವ ನಿರ್ಮಿಸಿದ॥ ರನ್ನದ ಮಾಣಿಕ ಬಿಗಿದ ತೊಲಿ ಕಂಬ ಗಿಳಿಬೋದು। ಪನ್ನಗಶಯನ ನಿರ್ಮಿಸಿದ॥29॥ ಇರಿರಿ ನಾಲ್ಕು ದಿವಸ ತ್ವರೆ ಯಾಕೆ ಮಾಡುವಿರಿ। ಇರಲಿಕ್ಕೆ ಬಾರದೆ ಅಂದ। ನೆರೆಹೊರೆಯಾರಿಲ್ಲ ತರುಣಿಯೊಬ್ಬಳಿಹಳು। ಇರಲಿ ನಾ ಹೇಗೆ ಪೇಳೆಂದ॥30॥ ಪಾದಕೆ ಎರಗಿ ತಾ ಸಾಗಿ ಮುಂದಕೆ ಬಂದ। ಬಾಗಿಲಕೆ ಬಂದ ಸುದಾಮ।ಹೋಗಿರಿ ಹಿಂದಕೆ। ಹೋಗಿರಿ ಹಿಂದಕೆ ಹೋಗಿ ಬರುತೇನೆನಲು। ಬಾಗಿಕೈಮುಗಿದ ಶ್ರೀಹರಿಯು॥31॥ ಮುಂದೆ ಬಂದನು ಇಂದೇನೂ ಕೊಡಲಿಲ್ಲ। ಹೆಂಡತಿಗೆ ಹೇಳಲೇನೆಂದಾ॥ ನಿಂತನು ಓಣಿಯಲಿ ಮಂದಿರ ಸಿಗಲಿಲ್ಲಾ। ಹೆಂಡತಿಯ ಕಂಡ ಸುದಾಮ।32॥ ಮಂದಿರವನ್ನೆಲ್ಲವ ಕಂಡನು ಐಶ್ವರ್ಯ। ಚಂದದಿಂದಾಭರಣ ಕಂಡ। ಇಂದಿರಾಪತಿಯನ್ನು ಕಂಡು ಬಂದುದರಿಂದ। ಬಂದಿತು ಸಕಲ ಸಂಪತ್ತು॥33॥ ರವಿವಾರ ಹಾಡಿದರೆ ರಾಜಕಾರ್ಯವಾಗುವುದು। ಬಂಜೆಗೆ ಮಕ್ಕಳಾಗುವವು। ಬರಡೆಮ್ಮೆ ಕರೆಯೊದು ಬಡತನ ಹಿಂಗುವದು। ಗುರುವಾರ ಹಾಡಿದವರಿಗೆ॥34॥ ಶ್ರೀ ನಿವಾಸನ ಧ್ಯಾನ ಮೌನದಿಂದಲಿ ಮಾಡಿ। ನಾನಾ ಸಂಪತ್ತು ಪಡೆದರು। ಅದರ ವಿಷಯ ತಿಳಿದು ಗತಿ ಮೋಕ್ಷ ಇರಲೆಂದು। ಶ್ರೀಹರಿಕೊಡು ದೇವಸಿರಿಯ॥35॥ ಇದು ಭಾಗವತವೆನ್ನಿ। ಇದು ಭಾಗವ ತಕ್ಕೆ ಕೀಲಗಳು॥ ಇದಕೆ ಪ್ರಿಯನು ನಮ್ಮ ಪುರಂಧರ ವಿಠಲ। ಇದರಿಂದ ಮುಕ್ತಿಕೊಡುವನು ಸತ್ಯ ಸತ್ಯ ॥36॥

ಹರನ ಪುತ್ರ ಗಣಪ ನಿಮಗೆ

ಹರನ ಪುತ್ರ ಗಣಪ ನಿಮಗೆ ತರಗು ಚಕ್ಕುಲಿಯ ನೀವೆ। ವರಮತಿಯ ಪಾಲಿಸಯ್ಯ ವಸ್ತು ಮೂರುತಿ॥ ಉರುತರಾದ ಶೃಂಗಪುರದ ಸರಸ್ವತಿಯಮ್ಮ ನಿಮಗೆ। ಕರವ ಮುಗಿದು ಬೇಡುವೆನು। ಕರುಣಿಸಂಬಿಕೆ॥1॥ ರಾಮ ರಂಗಸ್ವಾಮಿ। ಸುಧಾಮಗೊಲಿದ ಕಥೆಯ ಸಾರಪ್ರೇಮದಿಂದ ಬರೆವೆ ಶ್ರೀ। ರಾಮ ಚರಿತೆಯ॥ ಭೂಮಿ ಮೇಲೆ ಈ ಕಥೆಯ ಪ್ರೇಮದಿಂದ ಪೇಳಿದವರಿಗೆ। ಶ್ರೀ ಮಹಾಲಕ್ಷ್ಮಿಯೊಲಿದು ಸಿರಿಯನೀವಳು॥2॥ ಗುರುಗಳಿಗೆ ಮಾತಾಪಿತರು। ಹಿರಿಯರುಗಳ ಚರಣಕೆರಗಿ। ಹರಿಯನಾಮ ಚರಿತೆಯನ್ನು ಬರೆದು ಪೇಳುವೆ॥ ಇರುವನೊಬ್ಬ ವಿಪ್ರನಲ್ಲಿ ಪರಮ ದರಿದ್ರನಾಗಿ ಹರಿಯ ನೆನೆದು ಕಾಲವನ್ನೇ ಕಳೆಯುತಿದ್ದನು॥3॥ ನಡೆಯಲರಿಯ ಧರಣಿನೋಯ ನುಡಿಯಲರಿಯ ಗರ್ಜಿಸುತ್ತ। ಕಡಿಯಲರಿಯ ಮರನ ಕುಡಿಯ ಚಿವುಟಲರಿಯನು। ತಡೆಯಲರಿಯ ಸಾಧುಜನರ। ಹಿಡಿಯಲರಿಯ ಪರರ ವಸ್ತು ವಡವೆಯನ್ನು। ಮುಟ್ಟಲರಿಯ ಬಡವನಾದರೂ॥4॥ ವೃತ್ತಿ ಕ್ಷೇತ್ರಾದಿಗಳಲಿ ಸುತ್ತಿ ಸುಳಿದು ಧರೆಯ ಮೇಲೆ। ನಿತ್ಯ ಯಾಚನೆಯ ಮಾಡಿ ನೀಲವರ್ಣನ। ಮೂರ್ತಿ ಧ್ಯಾನವನ್ನೇ ಮಾಡಿ। ಭಿಕ್ಷೆಯನ್ನು ಬೇಡಿ ತಂದು। ಪತ್ನಿಸಹಿತ ಪ್ರಾಣ ಧಾರಣೆಯ ಮಾಡಿದ॥5॥ ಭಿಕ್ಷೆಯನ್ನು ಬೇಡಿತರಲು। ಲಕ್ಷ್ಯವೆಂದು ಜೋಕೆಮಾಡಿ। ಅಕ್ಷಯಾ ಪಾತ್ರೆಯಲ್ಲಿ ಶಾಕ ಪಾಕವ। ಆ ಕ್ಷಣದಿಂದ ಮಾಡಿ। ಪತಿಯ ಸಂತೋಷಪಡಿಸಿ। ಕುಕ್ಷಿಯನ್ನು ಪೊರೆದು ಹರಿಯ ನೆನೆವುತಿರ್ದಳು॥6॥ ದಾರಿದ್ರ್ಯ ದುಃಖ ಜಗಕೆ ತೋರದಂತೆ ಗೃಹವ ಶೃಂಗಾರವನ್ನೇ ಮಾಡಿ। ಶಂಖ ಚಕ್ರ ಪದ್ಮದಿ॥ ಹರಿದ್ರಾ ಕುಂಕುಮವು। ಅರುಣವನ್ನೇ ಶೃಂಗರಿಸಿ। ನಾರಾಯಣನ ನಾಮವನ್ನೇ ನೆನವುತಿರ್ದಳು॥7॥ ಸ್ನಾನ ಸಂಧ್ಯಾನ ಜಪವು ಮಾನಸವು ಹರಿಯ ಪೂಜೆ ದಾನಧರ್ಮ ವೈಶ್ವದೇವ ಅತಿಥಿ ಸತ್ಕಾರ॥ ನೇಮದಿಂದ ಮಾಡಿ ಕಾಮಧೇನುವಿಗೆ ಕವಳವಿತ್ತು। ಮಾನಿನಿಯ ಸಹಿತ ಉಂಟ ಉಳಿದ ಭಾಗವ॥8॥ ಪತಿವ್ರತೆ ತನ್ನ ಪ್ರಾಣಪತಿಯ ಸೇವಯನ್ನುಮಾಡಿ।

ಅತಿಶಯಾದಿಂದ ಭಿನ್ನಪವ ಮಾಡಲು। ಪಿತರ ವರ್ಗದವರು ಸಂಗತಿಯಲಾಡಿ ಬೆಳೆದವರು। ಹಿತವರಾರಿಲ್ಲವೆಂದು ನುಡಿದಳಂಗನೆ॥9॥ ಹೆತ್ತ ತಾಯಿ ವರ್ಗದವರು ಜೊತೆಯಲಾಡಿ ಬೆಳೆದವರು। ಶಾಸ್ತ್ರಪಾಠ ಸಕಲ ವೇದಾಂತ ವಿಪ್ರರು॥ ನಿತ್ಯದಲ್ಲಿ ಪೋಗಿ ಸಕಲ ಪೃಥ್ವಿಯನ್ನೇ ತಿರುಗುವಾಗ ಇತ್ತ ಬಾರೆಂದು ಕರೆವ ಹಿತವರಿಲ್ಲವೆ॥10॥ ಪತ್ನಿಯೆಂದ ಮಾತಕೇಳಿ ಅರ್ತಿಯಿಂದ ವಿಪ್ರನುಡಿದ। ಮಿತ್ರರೆನಗೆ ರಾಮಕೃಷ್ಣ ಭಕ್ತ ವತ್ಸಲ॥ ರಿಕ್ತ ಹಸ್ತದಲ್ಲಿ ಪೋಗಿ ನಿತ್ಯ ಸದ್ಗುಣ ದಿವ್ಯಮೂರ್ತಿಯನ್ನು ಕಾಣಬಾರದೆಂದು ನುಡಿದನು॥11॥ ಪ್ರಾಣಪದಕ ಹರಿಯ ಪೋಗಿ ಕಾಣಬೇಕಾದರೆ। ಕೈ ಕಾಣಿಕೇಗೆ ಕಾಣೆನೆಂದು ಮನದಿ ನೊಂದನು॥ ರಾಣಿ ಹೋಗಿ ನೆರೆಕೆರೆಯವರ ಮನವನೊಲಿಸಿ। ಕಾಣಿಕೇಗೆ ತಂದಳೊಂದು ಮುಷ್ಟಿ ಪೃಥುಕವ॥12॥ ಮುಷ್ಟಿ ಪೃಥುಕವನ್ನೇ ತಂದು ಕಟ್ಟಿ ಜೀರ್ಣ ವಸ್ತ್ರದಲ್ಲೀ। ಪಟ್ಟ ದೊಲ್ಲಭನ ಕೈಗೆ ಕೊಟ್ಟಳಂಗನೆ॥ ಕೃಷ್ಣಮೂರ್ತಿಯ ಮುಂದೆ ಇಟ್ಟು ಕರವ ಮುಗಿದು। ನಮ್ಮ ಕಷ್ಟವನ್ನು ಪೇಳಿ ಬನ್ನಿರೆನುತ ನುಡಿದಳು॥13॥ ಕೊಟ್ಟಪೃಥುಕವನ್ನೆ ದೊಡ್ಡ ಮೂಟೆಯನ್ನೆ ಕಟ್ಟಿ। ಹೆಗಲೊಳಿಟ್ಟುಕೊಂಡು ನಡೆದ ವಿಪ್ರ ಹರಿಯ ದ್ವಾರದಿ॥ ಬಟ್ಟೆಯನ್ನು ಮೆಟ್ಟಿ ಬರಲು ಬಲಕೆ ಬಂತು ವಾಯಸವು। ಕೃಷ್ಣಪಕ್ಷಿ ಕೃಷ್ಣ ಎಂದು ಎಡಕೆ ಹೋಯಿತು॥14॥ ಉತ್ತಮ ಶಕುನದ ನಿಮಿತ್ತವನ್ನೇ ಕಂಡು ವಿಪ್ರ। ಚಿತ್ತದಲ್ಲಿ ಪರಮ ಸಂತೋಷಪಟ್ಟನು॥ ಕೃಷ್ಣ ಮೂರುತಿಯು ನಮಗೆ ಸಕಲ ಸಂಪದವನೀವ। ಅಚ್ಯುತಾನಂತ ರಕ್ಷಿಸೆಂದು ನುಡಿದನು॥15॥ ಶುದ್ದ ಜಲಗಳೆಲ್ಲ ನಮ್ಮ ಸುಗುಣ ಹರಿಯ ಚರಣಕೆಂದ। ಪದ್ಮ ಪುಷ್ಪ ಪಾರಿಜಾತ ಲಕ್ಷ್ಮಿಗೆಂದನು॥ ಮಧ್ಯಮಾರ್ಗದಲ್ಲಿ ಬೆಳೆದ ಮರುಗ ಮಲ್ಲಿಗೆ ಜಾಜಿ ಪದ್ಮನಾಭಗರ್ಪಿಸುತ್ತ ಮುಂದೆ ನಡೆದನು॥16॥ ಹರಿವ ಜಲಗಳೆಲ್ಲ ಶ್ರೀಹರಿಯ ದಿವ್ಯ ಚರಣಕೆಂದ। ಪರಿಪರಿಯ ಸುಪುಷ್ಪವೆಲ್ಲ ಲಕ್ಷ್ಮಿಗೆಂದನು। ಕೆರೆಯಲಿದ್ದ ತಾವರೆಯು ಕೆಲದಲಿದ್ದ ಕೇದಿಗೇಯು ನರಮೃಗರೂಪ ನಾರಸಿಂಹಗೆಂದನು॥17॥ ಎಳೆಯ ತುಳಸಿ ದಳವು ನಮ್ಮ ನಳಿನನಾಭ ಕೃಷ್ಣಗೆಂದ। ಸುಳಿಯೊಳೆದ ಬಿಳಿ ಎಲೆ ಶ್ರೀ ಲಕ್ಷ್ಮಿಗೆಂದನು॥ ಕಳಿತ ಖರ್ಜೂರ ದ್ರಾಕ್ಷಿ ನಳಿನನಾಭಗರ್ಪಿಸುತ್ತ। ಥಳಥಳಿಪ ದ್ವಾರಕೆಯ ಬಳಿಗೆ ಬಂದನು॥18॥ ಬಿಸಿಲು ಸೆಕೆಗೆ ಸುಧಾಮ ನೆರಳು ತಂಪಿನಲ್ಲಿ ನಿಂತು। ತೃಷೆಗೆ ರಾಮನಾಮವೆಂಬ ರಸವ ಚಿಮ್ಮುತ॥ ಹಸಿದುದಾಗ ಹರಿಯ ನಾಮ ಹಣ್ಣುಗಳನೆ ಭುಂಜಿಸುತ್ತ। ನಸುನಗುತ್ತ ನಡೆದ ವಿಪ್ರ ಹರಿಯ ಧ್ಯಾನದಿ॥19॥ ದೂರದಿಂದ ಕಂಡು ವಿಪ್ರ ದ್ವಾರಕೆಯ ನಗರವನ್ನು। ಸಾರಿ ಮೈಯುಬ್ಬಿ ಸಂತೋಷಪಟ್ಟನು॥ ನಾರಾಯಣನ ನಾಮವನ್ನು ಪಾರಾಯಣ ಮಾಡಿಕೊಂಡು। ಭೋರನೈಯ್ತಂದ ವಿಪ್ರರಾಜ ದ್ವಾರಕೆಗೆ॥20॥ ಗೊಲ್ಲರೆಲ್ಲ ಕಂಡು ವಿಪ್ರ ನಿಲ್ಲು ಹೋಗಬೇಡವೆನಲು। ತಲ್ಲಣಿಸಿ ನೆನೆದ ತನ್ನ ತಂದೆ ಕೃಷ್ಣನ॥ ಫುಲ್ಲನಾಭನೀಗೆ ಪೂರ್ವದಲ್ಲಿ ಮಿತ್ರನೆಂಬುದೊಂದು। ಸೊಲ್ಲಹೋಗಿ ಹೇಳಿ ಲಕ್ಷ್ಮಿರಮಣಗೆಂದನು॥21॥ ಎಂದ ಮಾತ ಕೇಳುತಾ ಬಂದರಾಗ ಚಾರಕರು। ಇಂದಿರಾಪತಿಗೆ ಭಿನ್ನಪವ ಮಾಡಲು॥ ಹಿಂದೆ ತಮ್ಮ ಮಿತ್ರನಂತೆ ಹೆಸರು ಸುಧಾಮನಂತೆ। ಬಂದು ಬಾಗಿಲಲ್ಲಿ ನಿಂದನೆಂದು ನುಡಿದರು॥22॥ ಕರುಣ ನಿಧಿಯು ಬೇಗದಿಂದ ಕರೆದು ತನ್ನಿರೆನಲುವಿಪ್ರ। ತ್ವರದಿ ಬಂದು ಹರಿಯ ದಿವ್ಯ ಚರಣಕೆರಗಿದ॥ ಕರಗಳಿಂದ ಶಿರವನೆತ್ತಿ ಭರದಿ ಮೈದಡವಿ ಕೃಷ್ಣ। ಇರದೆ ಮಂಚದಲ್ಲಿ ಕುಳ್ಳಿರಿಸಿ ಕೊಂಡನು॥23॥ ಬಿಸಿಲೊಳಗೆ ಬಂದಿರೆಂದು ಬೀಸಣಿಗೆಯಿಂದ ಬೀಸಿ। ತೃಷೆಗೆ ತರಿಸಿಕೊಟ್ಟರಾಗ ಗುಡವು ಜಲಗಳ॥ ಹಸಿದುಬಂದ ವಿಪ್ರನೆಂದು ಹಣ್ಣ ಸಕ್ಕರೆಯ ಕೊಡಿಸಿ। ನಸುನಗುತ್ತ ಕೇಳಿದನು ಕುಶಲವಾರ್ತೆಯ॥24॥ ಬರವು ತಡೆದುದ್ಯಾಕಯ್ಯ ಬಂದುದಿಲ್ಲ ಬಹಳ ದಿವಸ। ವರವಿವಾಹ ನಿಮಗೆ ಅದಾವ ಕಡೆಯಲಾಯಿತು॥ ಮರೆತು ಬಿಟ್ಟರೇನು ನಮ್ಮ ಕರೆಯಲಿಲ್ಲವಯ್ಯ ನೀವಿರುವ ಕ್ಷೇತ್ರದಾವ ಕಡೆಯಲಾಯಿತೆಂದನು॥25॥ ಮದನ ಪಿತರ ಕರುಣದಿಂದ ಮದುವೆಯಾಯಿತಯ್ಯ ನಮಗೆ। ಪದುಮನಾಭ ನಿಮ್ಮ ಪಾದಾದ್ವಯದ ಕೃಪೆಯಲಿ॥ ಮೊದಲು ಬಂದುದಿಲ್ಲ ಬಹಳ ಮುಂದೆಗೆಟ್ಟು ಭಂಗಪಟ್ಟು। ವಧುವು ತನ್ನ ಕಳುಹಿ ಕೊಟ್ಟಳೆಂದು ನುಡಿದನು॥26॥ ಇಂದಿರಾಪತಿಯು ವಿಪ್ರ ವಿನಯದಿಂದ ಮಾತನಾಡೆ। ಹಿಂದಿನಧ್ಯಾಯವಿಲ್ಲಿ ಸಂದುಹೋಯಿತು॥ ಹಿಂದೆ ತಾವು ಗುರುಗಳಲ್ಲಿ ಒಂದಾಗಿ ಓದಿ ಬೆಳೆದ। ಅಂದವನ್ನೇ ನೆನೆದು ಸಂತೋಷಪಟ್ಟರು॥27॥ ಗುರುಪತ್ನಿಯೊಂದು ದಿವಸ। ಕರೆದು ಕೆಲಸವನ್ನು ಹೇಳಿ। ಮುರಿದು ತನ್ನಿ ಕಾಷ್ಠವೆಂದೆನುತ ಹೇಳಲು॥ ಸುರರು ಮಳೆಯು ಹೊಯ್ಯುತಿರಲು ಭರದಿ ಕಾನನದ ಒಳಗೆ। ಗುರುಗಳು ಕಂಡು ನಮ್ಮ ಕರೆದು

ಒಯ್ದರು।।28।। ಗುರುಗಳ ಪಂಕ್ತಿಯಲ್ಲಿ ಪರಮ ಸಂತೋಷದಿಂದ। ಹರುಷದಿಂದ ಮೃಷ್ಟಾನ್ನಗಳನೆ ಸವಿದೆವು।। ಗುರುಕುಮಾರಕರಿಗೆ ಎಲ್ಲ ಚಿರಂಜೀವಿ ಪದವನಿತ್ತು। ಹರಸಿದಿರಿ ಧೀರ್ಘಾಯುಷ್ಯರಾಗಿ ಎನುತಲಿ।।29।। ಸತ್ಯಮೂರ್ತಿ ಸರಸದಿಂದ ಭ್ರಾತೃಭಾವದಿಂದ। ನಮ್ಮತ್ತಿಗೇನು ಕಳುಹಿಕೊಟ್ಟಳಪೂರ್ವ ದೊಸ್ತುವ।। ಚಿತ್ತದಲ್ಲಿ ಚಿಂತೆ ಬೇಡ ಇತ್ತ ತನ್ನಿರೆನಲು ವಿಪ್ರ। ಮಸ್ತಕವ ಬಾಗಿಲಜ್ಜೆಯಿಂದ ನಿಂತನು।।30।। ಭಕ್ತಿವರ್ಜ್ಯವಾಗಿ ತಂದ। ಮುತ್ತರತ್ನ ಕೆಲಸವಿಲ್ಲ। ಭಕ್ತಿಯಿಂದ ತಂದುದೊಂದು ಪತ್ರಪುಷ್ಪವ।। ಚಿತ್ತದಲ್ಲಿ ಚಿಂತೆಬೇಡ ಬೇಗತನ್ನಿರೆನಲು ಸ್ವರ್ಣಪಾತ್ರೆಯಲ್ಲಿ ಪೃಥುಕವನ್ನೆ ಸುರಿದ ವಿಪ್ರನು।।31।। ಮುಷ್ಠಿ ಪೃಥುಕವನ್ನೇ ರಾಮಕೃಷ್ಣರೊಂದು ಬಾರಿ ಮೆಲ್ಲೆ। ಕಷ್ಟದಾರಿದ್ರ್ಯವೆಲ್ಲ ದಹಿಸಿಹೋಯಿತು।। ಮುಷ್ಟಿಯಲ್ಲಿ ಮೂರು ಕಾಳು ತಿರುಗಿ ರಾಮಕೃಷ್ಣರು ಮೆಲ್ಲೆ। ಶ್ರೇಷ್ಠವಾದ ವೈಕುಂಠ ಪದಕೆ ವಿಪ್ರನು।।32।। ಮಲ್ಲಿಗೆಯ ಮುಡಿಯ ಲಕ್ಷ್ಮಿವಲ್ಲಭನ ಕರವ ಪಿಡಿದು। ಅಲ್ಲಿಂದ ವಿಪ್ರ ತಂದ ಅಪೂರ್ವದೊಸ್ತುವ ಎಲ್ಲವನ್ನು ನೀವೇ ಸ್ವಾಮಿ ಮೆಲ್ಲಬಹುದೆ ನಮಗೆ ಕೊಡದೆ। ನಮ್ಮೆಲ್ಲರಿಗೆ ಕೊಡಬೇಕೆಂದು ನುಡಿದಳಂಗನೆ।।33।। ಎಂದ ಮಾತಕೇಳಿ ಗೋವಿಂದ ನಸುನಗುತ। ಇಂದು ಮುಖಿಯರಿಗೆ ಎಲ್ಲ ಕರೆದುಕೊಟ್ಟನು।। ಬಂಧು ಬಳಗಕೆಲ್ಲ ಕೊಟ್ಟು ಮಂದಿ ಮಾರ್ಬಲಕೆ ಕೊಟ್ಟು। ಹಿಂದೆ ಮಿಕ್ಕ ಪೃಥಕ ಜೋಕೆ ಎಂದು ನುಡಿದನು।।34।। ಹೊತ್ತು ಹೋಯಿತಯ್ಯ ವಿಪ್ರ ಹಸಿದು ಬಂದಿರೇಳಿ। ಭೋಜನೋತ್ತರದಿ ಮಾತನಾಡಬಹುದು ಎಂದನು।। ಸತ್ಯ ಗಂಗೆಗೆ ಹೋಗಿ ನಿತ್ಯ ಕರ್ಮವ ಮಾಡಿ। ಅಚ್ಯುತನ ಪಂಕ್ತಿಗಾಗಿವಿಪ್ರನು।।35।। ಕೃಷ್ಣನಾ ಪಂಕ್ತಿಯಲ್ಲಿ ಮೃಷ್ಟಾನ್ನಗಳನೆ ಸವಿದು। ಇಷ್ಟ ಗಂಗೆಗೆ ಹೋಗಿ ಕರವ ತೊಳೆದರು।। ಇಟ್ಟ ಗದ್ದಿಗೇಲಿ ಕುಳಿತು ಪಟ್ಟಿವೀಳ್ಯವನ್ನೇ ಹಿಡಿದು। ಕೊಟ್ಟತಾಂಬೂಲ ಚರ್ವಣವ ಮಾಡಿದ।।36।। ಇಂದಿರಾ ಪತಿಯು ವಿಪ್ರ ವಿನಯದಿಂದ ಮಾತನಾಡಿ। ರಂಜಿಸುವ ರಾಜಮಂದಿರವ ತೋರಿದ।। ಅಂಜಬೇಡ ವಿಪ್ರನೆನಲು ಅಧಿಕ ಸಂತೋಷದಿಂದ। ಸಂಜೆಗೆ ಅಮೃತಾನ್ನ ಭೋಜನಾದುವು।।37।। ಶ್ರಮಿಸಿ ಬಂದ ವಿಪ್ರನೆಂದು ಶಾಲು ಪಟ್ಟಿಗಳನೆ ಹಾಸಿ। ವಿಶ್ರಮಿಸಿ ಕೊಳ್ಳಿರೆನುತ ನುಡಿದ ಕೃಷ್ಣನು।। ಅಮರ ವಂದಿತನು ತನ್ನ ಆದಿಲಕ್ಷ್ಮಿಯು ಸಹಿತ। ಕಮಲನಾಭ ಹೋಗಿ। ವಿಶ್ರಮಿಸಿಕೊಂಡನು।।38।। ಅರುಣನುದಯದಲ್ಲಿ ಎದ್ದು ಸುರನದೀಲಿ ಸ್ನಾನಮಾಡಿ। ಪರಮಾತ್ಮ ಅಪ್ಪಣೆಯ ಪಾಲಿಸೆಂದನು।. ತ್ವರಿತವಿಷ್ಟು ಯಾತಕಯ್ಯ ಇರಲುಬಹುದು ಎರಡು ದಿವಸ ಬರುವ ತಡೆದು ಬಹಳ ದಿವಸಕಾಗಿ ಬಂದಿರಿ।।39।। ನೆರೆಹೊರೆಯಿಲ್ಲ ನಮಗೆ ತರುಣಿಯೊಬ್ಬಳೆನುತ ಪೇಳಿ। ಹರುಷದಿಂದ ಹೋಗಿ ಬನ್ನಿರೆನುತ ನುಡಿದನು।। ಕೃಷ್ಣನಪ್ಪಣೆಯ ಕೊಂಡು ತಟ್ಟನೆ ಅಲ್ಲಿಂದ ಬಂದು। ಅಷ್ಟಮಸ್ತ್ರೀಯರಪ್ಪಣೆಯ ಕೇಳಿದ।।40।। ತ್ವರಿತವಿಷ್ಟು ಯಾತಕಯ್ಯ ಇರಲುಬಹುದು ಎರಡು ದಿವಸ। ಕಷ್ಟಪಟ್ಟು ಬಂದಿರೆಂದಳಾದಿಲಕ್ಷ್ಮಿಯು।। ನೆರೆಹೊರೆಯಿಲ್ಲ ನಮಗೆ ತರುಣಿಯೊಬ್ಬಳೆನುತ ಪೇಳಿ। ಹರುಷದಿಂದ ಹೋಗಿ ಬನ್ನಿರೆನುತ ನುಡಿದಳು।।41।। ರಾಜಗೋಪಾಲ ತನ್ನ ರಾಜ ದ್ವಾರತನಕ ಬಂದು। ರಾಜ ಸಮ್ಮೇಳದಿಂದ ಕಳುಹಿಕೊಟ್ಟನು।। ಮೂಜಗಕ್ಕಧಿಕವಾದ ಮುತ್ತರತ್ನ ಅಂದವಾದ। ತೇಜಿಯನ್ನು ಹಿಡಿದರೇ ತಂದು ವಿಪ್ರಗೆ।।42।। ಝುಗಝುಗಿಪ ಚಿತ್ರದಂಗಿ ಜಗಿಯ ತಂದು ತೊಡಿಸಿದರೆ। ಅಗಣಿತ ರತ್ನದಾಭರಣ ತಂದು ಇಟ್ಟರು.। ಬಗೆಬಗೇ ಕೊಂಬುಕಹಳೆ ವಾದ್ಯಗೀತ ರಭಸದಿಂದ ಹೊಗಳಿದರೆ ಹರಿಯ ಭಕ್ತ ಪೋಪ್ಪನೆನುತಲಿ।।43।। ನಿರ್ಮಲಮೂರ್ತಿ ವಿಶ್ವಕರ್ಮನಾಗ ಕರೆಯಕಳುಹಿ। ನಮ್ಮ ನಗರಿಗಿಂತ ಅಧಿಕ ಇಮ್ಮಡಿಯಾಗಿ।। ರಮ್ಯವಾದ ಮುತ್ತುರತ್ನ ಕುಂದಣದ ಕೆಲಸದಿಂದ। ನಿರ್ಮಿಸಯ್ಯ ರಾಜಗೃಹವ ವಿಪ್ರಗೆಂದನು।।44।। ಸುಪ್ಪಣೆ ಸುವರ್ಣಮಯದ ಉಪ್ಪರಿಗೆಯ ಕಂಡುವಿಪ್ರ। ತಪ್ಪಿತೇನು ದಾರಿಯೆನುತ ಮನದಿ ನೆನೆದನು।। ಅಪ್ರತಿಮ ಆದಿಮಹಿಮ। ಸರ್ಪಶಯನ ಕೊಟ್ಟ ಭಾಗ್ಯ ತಪ್ಪಲಿಲ್ಲ ದಾರಿ ಎಂದು ಹರುಷಪಟ್ಟನು।।45।। ಇಂದು ಮುಖಿಯು ಹರುಷದಿಂದ ತುಂಬಿ ಸುವರ್ಣ ಕಲಶಜಲವ। ತಂದು ತನ್ನ ಪತಿಯ ಪಾದವನ್ನೆ ತೊಳೆದಳು।। ಇಂದಿರಾಪತಿಯ ಪೋಗಿ ಕಂಡ ಕಾರಣದಿಂದ ಬಂದುದೀ ಭಾಗ್ಯ ಸಂದೇಹವಿಲ್ಲವು।।46।। ಎತ್ತ ನೋಡೆ ಸುವರ್ಣ ಮಯದ ರತ್ನ ಹೊನ್ನ ರಾಶಿಗಳು। ಮತ್ತೆ ವಿದ್ವಾಂಸರೆಲ್ಲ ವೇದಾಂತ ಘೋಷಣೆ।। ಸುತ್ತಲಿಲ್ದ ಪಕ್ಷಿಗಳು ಹಸ್ತವನ್ನೇ ಮುಗಿದು. ಸೇವೆ ವೃತ್ತಿಯನ್ನೇ ಮಾಡುತಿಹುದು ಕಂಡ ವಿಪ್ರನು।।47।। ಅರ್ತಿಯಿಂದ ವಿಪ್ರತಾ ಅಶ್ವತ್ಥ ವೃಕ್ಷ ನೆಡಿಸಿ। ಮೇಲೆ ಕಟ್ಟಿಸಿದ ಕೆರೆಯ ತರುವಿ ಕಟ್ಟೆ ಕಾಲುವೆ।। ಬಟ್ಟೆಯಲ್ಲಿ ಸಾಲು

ಸಸಿಗಳಿಟ್ಟು ಅರವಟ್ಟಿಗೆಯ। ಕೃಷ್ಣಗರ್ಪಿತವಮಾಡಿ ಕರವ ಮುಗಿದನು॥48॥ ಅನ್ನದಾನ ಹೊನ್ನುದಾನ ಕನ್ಯಾದಾನ ಕಪಿಲದಾನ। ತನ್ನ ಪಂಕ್ತಿಯಲ್ಲಿ ಬ್ರಾಹ್ಮಣರ ಭೋಜನ॥ ಉನ್ನತವಾದ ದಾನ ಧರ್ಮಗಳನೆ ಮಾಡಿ ವಿಪ್ರ। ಪನ್ನಗ ಶಯನಗರ್ಪಿತವಮಾಡಿದ॥49॥ ಅಗ್ನಿಹೋತ್ರ ಯಜ್ಞಸೂತ್ರ ಯಜ್ಞಪೌಂಡ್ರಿಕ ಧರ್ಮ ಶಾಸ್ತ್ರಪಾಠ ಸಕಲ ವೇದಾಂತ ವಿಪ್ರರು॥ ಮಧ್ಯಾಹ್ನ ಕಾಲದಲ್ಲಿ ಹಸಿದು ಬಂದ ವಿಪ್ರರಿಗೆ। ದಧ್ಯನ್ನ ಕ್ಷೀರದಿಂದ ತೃಪ್ತಿ ಬಡಿಸಿದ॥50॥ ಮನಸು ಪೂರ್ಣ ಪಕ್ವವಾಗಿ ಶರೀರ ಧರ್ಮ ನಿತ್ಯವಾಗಿ। ಹರಿಯು ಕೊಟ್ಟ ಭಾಗ್ಯವೆಲ್ಲ ಹರಿಗೆ ಅರ್ಪಿಸಿ॥ ಸತಿಯು ಪತಿಯು ಹೋಗಿ ಲಕ್ಷ್ಮೀಪತಿಯ ಸನ್ನಿಧಿಯಲ್ಲಿರಲು। ಚತುರ್ಮುಖ ಬ್ರಹ್ಮ ಶಾಶ್ವತಗಳಾದುವು॥51॥

ಸರ್ಪಭೂಷಣ ಸುತನ ಭಕ್ತಿಯಿಂದ

ಸರ್ಪಭೂಷಣ ಸುತನ ಭಕ್ತಿಯಿಂದ ಬಲಗೊಂಬೆ ಮತ್ತೇ ಅಜನ ಸತಿಯ ಪಾದಕ್ಕೆ ಎರಗುವೇ॥ ಎಲ್ಲ ದೇವತೆಗಳಿಗೆ ಎರಗಿ ಭಕ್ತಿಯಿಂದ ಲಕ್ಷ್ಮೀ। ವಲ್ಲಭನ ಕಥೆಗಳನ್ನು ವರ್ಣಿಸುಮೆ॥1॥ ಸ್ವಾಮಿ ಶ್ರೀಕೃಷ್ಣನಾ ಪ್ರೇಮವನ್ನು ಪಡೆದ ಸುಧಾಮನೆಂಬೊ ಬಡವ ಭಕ್ತ ಬ್ರಾಹ್ಮಣನಿದ್ದನು॥ ಸ್ನಾನ ಹೋಮ ಜಪವಮಾಡಿ। ನೇಮದಿಂದ ಉಪಾದಾನವನ್ನೇ ಬೇಡಿ ಕಾಲವ ಕಳೆಯುತಿದ್ದನು॥2॥ ಅಶನವಿಲ್ಲದ ವಸನವಿಲ್ಲ। ಹಸಿದ ಮಕ್ಕಳನ್ನೇ ನೋಡಿ। ವ್ಯಸನದಿ ಬಂಧುಬಳಗನಿನಗಿಲ್ಲೆನುತ ನುಡಿದಳು॥ ಪತ್ನಿ ಮಾತು ಕೇಳಿ ಪರಮಭಕ್ತಿಯಿಂದ ನುಡಿದ। ಧರ್ಮಾರ್ಥಕಾಮ್ಯಕೊಡುವ ಮೋಕ್ಷದಾಯಕ॥3॥ ಆದಿಮೂರುತಿಯು ಕೃಷ್ಣ ಓದುವಾಗಿನ ಗೆಳೆಯನೊಬ್ಬ। ಮಾಧವನ ಹೊರತು ಮತ್ತೊಬ್ಬರಿಲ್ಲವು। ಆತನ ಕಂಡು ಬಂದಾರೆ ಯಾತರಾ ದರಿದ್ರ ನಮಗೆ ಪ್ರೀತಿಯಿಂದ ಹೋಗಿ ಬನ್ನಿರೆಂದು ನುಡಿದಳು॥4॥ ವರಮಹಾಲಕ್ಷ್ಮೀ ಅರಸು ಕೃಷ್ಣನ ಅರಮನೆಗೆ ಒಯ್ಯಲಿಕ್ಕೆ। ನದುರುವನು ಕೊಡುವೆ ನರಹರಿಗೆ ಎಂದನು। ಲಕುಮೀಶನ್ನ ದರ್ಶನಕ್ಕೆ ಒಯ್ಯಲಿಕ್ಕೇ। ಮೂರು ಮುಷ್ಟಿ ಅವಲಕ್ಕಿ ತಂದುಕೊಟ್ಟಳು॥5॥ ಅದನು ಗಂಟುಕಟ್ಟಿ ತನ್ನ ಹೆಗಲ ಮೇಲೆ ಇಟ್ಟುಕೊಂಡು ಸ್ನಾನವನ್ನೇ ಮಾಡಿಕೊಂಡು। ವೇದಪುಸ್ತಕ ಹಿಡಿದು ಅಲ್ಲೆ ಓದಿಕೊಂಡನು॥6॥ ಮಲ್ಲೆಮಲ್ಲಿಗೆ ಜಾಜಿ ಅಲ್ಲೆ ಇದ್ದ ಫಲಗಳೂ ಲಕ್ಷ್ಮೀವಲ್ಲಭನಿಗೆ ಅರ್ಪಿತವಾಗಲೆಂದು ನುಡಿದನು॥ ಗೋಪುರವ ಕಂಡು ದ್ವಾರಕಾ ಪುರಕೆಕಯ್ಯ ಮುಗಿದು। ಶ್ರೀಪತಿಯ ಬಾಗಿಲಲ್ಲಿ ಬಂದು ನಿಂತನು॥7॥ ದ್ವಾರದಲಿ ನಿಂತವರು ದಾರು ಎಂದು ವಿಚಾರಿಸಲು। ನಾರಾಯಣನ ಸಖನಾನೆಂದು ಹೇಳುತಿದ್ದನು। ನುಡಿದ ನುಡಿಕೇಳಿಜನರು। ನಡೆದು ಬಂದ ಚಾರಕರು। ಒಡೆಯನಿಮ್ಮ ಗೆಳೆಯನಂತೆ ಬಡ ಬ್ರಾಹ್ಮಣ॥8॥ ಹುಟ್ಟುಮೊದಲು ಅನ್ನವಿಲ್ಲ ಹೊಟ್ಟೆಗುಂಡ ಮನುಜನಲ್ಲ। ಗಟ್ಟಿಗಾಳಿಬರಲು ಹಾರುವಂತೆ ತೋರುವ। ಅಸ್ತಿ ಚರ್ಮ ಆತನ ಹತ್ತಿಕೊಂಡ ಹೊಟ್ಟೆಬೆನ್ನು ನಡೆಯಲಾರ ಮಾತನಾಡಲಾರ ನೆಂದನು॥9॥ ಮರದ ಗುಂಡು ಬುದ್ದಿ। ಕೊರಳೊಳಗೆ ಹಾಕಿಕೊಂಡು। ಅರಳೆ ಚರ್ಮಸುತ್ತಿ ಎಡದ ಬಗಲಲ್ಲಿಟ್ಟಿರುವ। ದೊಡ್ಡ ನಾಮ ಹಚ್ಚಿಕೊಂಡು। ಮುದ್ರೆಮಯ್ಯಲಿ ಬರೆದುಕೊಂಡು। ಶುದ್ಧ ಚಂದ್ರಮನ ಕಾಂತಿ ಹೊಳೆಯುತ್ತಿದ್ದನು॥9॥ ಭದ್ರವಾಗಿ ಬಟ್ಟೆನುಟ್ಟು। ಚಿಗುರು ತುಳಸಿಕಿವಿಯೊಳಿದ್ದ। ಪದ್ಮನಾಭ ಪಾಲಿಸೆಂದು ಪೇಳುತಿರುವ। ನಾನಾಪರಿಯಲ್ಲಿ ನಿಮ್ಮ ಸ್ತುತಿಯ ಮಾಡುತಿರುವನು॥10॥ ಇಷ್ಟು ಎಲ್ಲ ಮಾತನು ಚಾರ ಕರು ಹೇಳುತಿರಲು। ಭಕ್ತರೊಡೆಯ ಬಹು ಸಂಭ್ರಮದಿ ಎದ್ದನು। ಕರೆಸಿ ಕರವ ಪಿಡಿದು ಆಸನದಲ್ಲಿ ಕುಳ್ಳಿರಿಸಿ। ತರಿಸಿ ಚಾಮರದಗಾಳಿ ಬೀಸುತಿದ್ದನು॥11॥ ಪನ್ನೀರು ತಂದು ಪಾದ। ದ್ರಾಕ್ಷಿಕಿತ್ತಳೆ ಹಣ್ಣು ಎಳನೀರ ತಂದು ಮೆಲ್ಲಲು ಕೊಟ್ಟರು॥ ಪದುಮನಾಭ ಹರುಷದಿಂದ ಮುದದಿ ಮಾತನಾಡಿದ। ಮದುವೆಯಾಯಿತೇನು ಸಖನೇ ಎನುತ ಕೇಳಿದಾ॥12॥ ಸೌಳಸಾಸಿರ ಸತಿಯರನ್ನು ಆಳುವ ಶ್ರೀಕೃಷ್ಣಕೇಳು। ರಾಣಿಯೊಬ್ಬಳಿರುವಳಯ್ಯ ನನಗೆ ಎಂದನು। ನಾನು ಇಲ್ಲಿಗೆ ಬರದೆ ಪಾಮರನಾದ ಕಾರಣ। ಈಗ ಕಳುಹಿಕೊಟ್ಟಳೆನ್ನ ಭಾರ್ಯೆ ಎಂದನು॥13॥ ಇಷ್ಟು ದಿವಸವೂ ಇಲ್ಲಿ। ಬರದೆ ಇದ್ದ ಕಾರಣ। ಚಿಕ್ಕಂದಿನ ಸ್ನೇಹವೆಲ್ಲ ಮರೆತೆ ಎಂದನು। ಅಣ್ಣ ನಮ್ಮತ್ತಿಗೇನು ಕಳುಹಿದ್ದಾಳೆ। ನಿನ್ನ ಹೆಗಲಗಂಟ ಬಿಚ್ಚಿ ತೋರಿಸೆಂದನು॥14॥ ತಲೆಯುಬಾಗಿ ವಿಪ್ರನಾಚಿ। ನೆಲವ ನೋಡುತಿರಲು ಕೃಷ್ಣ ಸಲಿಗೆಯಿಂದ ಗಂಟನೆಳೆದು। ಬಿಚ್ಚುತ್ತಿದ್ದನು॥ ಸುಜನ ಜನರು ಮಾಡುವಂಥ ಭಜನೆ ಒಂದೇ ಸಾಕು ಎನಗೆ। ರಜತ ಹೋಮ ರತ್ನಾಭರಣ ಏಕೆ ಎಂದನು॥15॥ ಕುಂದಣದ ಪಾತ್ರೊಯೊಳಗೆ ತಂದು ಸುರಿದ

ಪೃಥಕವನ್ನು ಮಂದರೋದ್ಧರನು ಮುಷ್ಠಿ ತೆಗೆದು ಕೊಂಡನು।। ಮುಷ್ಠಿ ಒಂದು ಬಾರಿ। ಶ್ರೀಕೃಷ್ಣ ತಾನು ಮೆಲ್ಲುತಿರಲು। ಕಷ್ಟದಾರಿದ್ರವೆಲ್ಲ ಹರಿದು ಹೋಯಿತು।।16।। ಎರಡನೇ ಮುಕ್ಕು ಪಾಲ್ಗಡಲಶಯನ ಮೆಲ್ಲುತಿರಲು। ಸಡಗರದ ವೈಕುಂಠ ಪದವಿ ಮುಕ್ತಿಯಾಯಿತು। ಮೂರನೇ ಮುಕ್ಕಿಗೆ ನಾರಿರುಕ್ಮಿಣಿ ಬಂದು ಕೃಷ್ಣ। ಏನು ಕೊಡುವೆ ವಿಪ್ರಗೆ ಎನುತ ಕರವ ಪಿಡಿದಳು।।17।। ಭಾವನವರು ತಂದ। ಬಹು ಮೇಲಾದ ಪದಾರ್ಥವೆಲ್ಲಾ। ತಾವೇ ಸವಿದು ನೋಡುವುದು ಯಾವನೀತಿಯು।। ಅಕ್ಕಕಳೂಹೀದ ಅವಲಕ್ಕಿ ನಮಗೆ ಇಲ್ಲದ್ಹಾಂಗೇ ಮುಕ್ಕಿಬಿಡುವರೇನು ಕೃಷ್ಣ ಎನ್ನುತ ನಕ್ಕಳಾಗಲೇ।।18।। ಇಷ್ಟು ಮಂದಿ ಒಳಗೆ ನನ್ನ ಮುಷ್ಟಿ ಹಿಡಿದು ನಿಲ್ಲುವಂಥ। ದಿಟ್ಟತನಗಳೆಲ್ಲಿ ಕಲಿತೆಹೇಳು ಎಂದನು। ಅಕ್ಕನ ಗೂಢಮಾತಕೇಳಿ। ಚಿಕ್ಕ ಸತ್ಯಭಾಮತಾ ಅಕ್ಕರಾದಿ ಕೃಷ್ಣನೆದುರು ಬಂದು ನಿಂತಳು।।19।। ರಂಗ ನಿನ್ನ ಪಟ್ಟದರ್ಧಾಂಗಿ ಯಾದ ರುಕ್ಮಿಣಿಗೇ ಮುಂಗೈಹಿಡಿವುದಕ್ಕೆ ದಾರ ಭಯವೇನೆಂದಳು।। ವಂಕಿತೋಳು ಹಿಡಿದು। ವಯ್ಯಾರಿ ಸತ್ಯಭಾಮೆಯ। ಅಂಕದೊಳಗೆ ಕುಳ್ಳಿರಿಸಿಕೊಂಡಾಗ ಮೋಹದಿ।।20।। ಎನ್ನ ಭಕ್ತರಲ್ಲಿ ಪ್ರೇಮ ಉಂಟಾದರೆ। ಇನ್ನು ಒಂದು ಮುಕ್ಕು (ಮುಷ್ಠಿ) ಕೊಡುವೆ ಬಾರೆ ಎಂದನು। ಬಾರೆ ಬಾರುಕ್ಮಿಣೀ ಭಾಮೆ ಬಲಗಳಿದ್ದ ಮೇಲೆ ನೀಡು ನನ್ನ ಕರಗಳೊಳಗೆ ನೀಡುವೆನೆಂದನು।।21।। ಕಂತುಪಿತನು ತನ್ನ ಜನಕ । ನಿಂತು ನೀಡುತಿರಲು ಪೃಥಕ। ಅನಂತವಾದವಾಗ ಮೂರು ಮುಷ್ಠಿ ಪೃಥಕವು। ಗುರುವು ಸಾಂದೀಪರಲ್ಲಿ। ಸರ್ವಗ್ರಂಥ ಓದಿಕೊಂಡು। ಇರುವದೆಲ್ಲ ಹೇಳಿದಾನು ಇಂದಿರೇಶನು।।22।। ಕಾಷ್ಟತನ್ನಿರೆಂದು ಗುರುಪತ್ನಿ ನಮ್ಮ ಕಳುಹಿದಳು। ಅಟ್ಟಿ ಆರಣ್ಯದಲ್ಲಿ ಆಡುತ್ತಿದ್ದೆವು। ಕತ್ತಲೆ ಕವಿದು ರಿಂಜಕೆಟ್ಟಡ ಗಾಳಿ ಮಳೆಯು ಸಿಡಿಲು।। ದುಷ್ಟ ಹುಲಿಯು ಕರಡಿ ಮೃಗವು ಕೂಗುತಿದ್ದವು।।23।। ಗಿಡಕೆ ಒಬ್ಬರ್ಹತ್ತಿಕೊಂಡು ಮಿಡುಕುತ ನಿಂದಿರಲು। ಹುಡುಕುತ ಬಂದರಾಗ ನಮ್ಮ ಗುರುಗಳು।। ಅಂಜಬೇಡಿರಂಜಬೇಡಿ ಎಂದು ನಮಗೆ ಅಭಯವಿತ್ತು। ಚಿರಂಜೀವಿಯಾಗಿರೆಂದು ಹರಸುತ್ತಿದ್ದರು।।24।। ಮಕ್ಕಳಿಲ್ಲವೆಂದು ನಮ್ಮ ರಕ್ಷಿಸಿದ ಗುರುಗಳಿಗೆ। ಪುತ್ರ ಸಂತಾನವನು ಕೊಟ್ಟ ಪುರುಷೋತ್ತಮ। ಆದವಡಿಗೆ ಏಳಿರೆಂದು ಶ್ರೀದೇವಿ ಕರೆಯೆ ಹೋಗಿ। ಮಾಧವನ ಸಹಿತ ಮಡಿಯನುಟ್ಟು ಬಂದರು।।25।। ಮಡಿಯಜರದ ಮೇಲೆ ಮುತ್ತಿನ। ಉಡುದಾರವನ್ನೇ ಕಟ್ಟಿ। ಕಡಗ ಕಂಕಣಗಳ ತಂದು ಕರದಲಿಟ್ಟನು। ಕಂಠಿಕಂಠಮೇಲೆ ಸರವು। ಟೊಂಕದುಡುಧಾರವು। ಕಿವಿಯಲೆಂಟು ಮುತ್ತಿನ ಚೌಕಳಿಯನಿಟ್ಟರು।।26।। ಕುಡಿಯ ಬಾಳೆಲೆಯ ಹಾಕಿ। ನಡುವೆ ಜ್ಯೋತಿ ತಂದಿರಿಸಿ। ಕಡಲೆ ಕೋಸಂಬರಿ। ಉಪ್ಪಿನಕಾಯಿ ಶಾಖವು।। ಉಪ್ಪು ಉಪ್ಪಿನಕಾಯಿ। ಹಪ್ಪಳಸಂಡಿಗೆ। ಲಕ್ಷಣಾವಂತೆಯರು ಬಡಿಸುತಿದ್ದರು।।27।। ಹಾಲು ತುಪ್ಪ ಮಂಡಿಗೆಯ ಮೇಲೆ ಬಿಳಿಯ ಸಕ್ಕರೆ। ಭಾಮೆರುಕ್ಮಿಣಿಯು ತಂದು ಬಡಿಸುತಿದ್ದಳು।। ರುಬ್ಬಿದಾಂಬೋಡೆ ಫೇಣಿ। ಉಬ್ಬಿದಾ ಗುಳ್ಳೋರಿಗೆಯ। ಭದ್ರೇ ನೀಲ, ಜಾಂಬುವತಿ ಬಡಿಸುತಿದ್ದರು।।28।। ದುಂಡು ಚಕ್ಕುಲಿ ಫೇಣಿ। ಉಂಡೇ ಖರ್ಜಿಕಾಯಿಗಳ। ಉಂಡು ಕೆನೆಮೊಸರನ್ನ ಕೈತೊಳೆದು ಬಂದರು।।ಕರ್ಪೂರದ ತಾಂಬೂಲವ। ಅರ್ತಿಯಿಂದ ಮೆಲ್ಲುತಿರಲು। ವಿಪ್ರಗಂಗ ತನ್ನ ಅರಮನೆಯ ತೋರಿದ।।29।। ದಂತದ್ಹಲಗೆ ಮಂಚದಲ್ಲಿ। ಸಂಪನ್ಹೂವಿನ ಹಾಸಿಗೆಮೇಲೆ। ಮುಂಚೆ ಸುಧಾಮನಲ್ಲಿ ಪವಡಿಸೀದನು।। ಆಣಿಮುತ್ತು ಬಿಗಿದ ಮಂಚ। ಅರಳು ಮಲ್ಲಿಗೆ ಹಾಸಿಗೆಯಲಿ। ಭಾಮೆರುಕ್ಮಿಣಿಯರಸ ಶಯನ ಮಾಡಿದ।।30।। ಅರುಣ ಉದಯದಲ್ಲಿ ಎದ್ದು। ಗಂಗೆಯಲ್ಲಿ ಸ್ನಾನಮಾಡಿ। ನಳಿನನಾಭನ ಅಪ್ಪಣೆಯ ಕೇಳಿದ।। ಹೋಗಿಬನ್ನಿರೆಂದು ವಿಪ್ರಗೆ। ನಾಗಶಯನ ನಪ್ಪಣೆ ಕೊಡಲು। ಭಾಮೆರುಕ್ಮಿಣಿಗೆ ಹೋಗಿ ಹೇಳುತಿದ್ದನು।।31।। ಬಹಳ ಕಡೆದು ಬಂದಿರೆಂದು। ಏಳೆಂದು ದಿನಗಳಿದ್ದು। ಹೋಗಬಹುದು ಎಂದಳಾಗ ಆದಿಲಕ್ಷ್ಮುಮಿ। ಸತಿಯು ಒಬ್ಬಳೇ ಇರುವಳಾಕೆ। ಜೊತೆಯು ಯಾರು ಇಲ್ಲವೆಂದು। ಅತೀ ಬೇಗ ಅಪ್ಪಣೆಯ ಪಾಲಿಸೆಂದನು।।32।। ಅಪ್ಪಣೆಯ ಕೊಂಡು ವಿಪ್ರ ಪಡ್ಡಿಸಾಲೆಯ ಇಳಿದ ಸುತ್ತ ಬಂದು ಹಿಡಿದರಾಗ। ಛತ್ರಚಾಮರ।। ಅಂಬರೀಷ ವರದ। ಮುತ್ತಿನಂದಣಾವನೇರಿಕೊಂಡು। ಮುಂದೆಮೂರು ಹೆಜ್ಜೆ ಕಳಿಸಿ ತಿರುಗಿ ಬಂದನು।।33।। ತ್ವರಿತದಿಂ ಹರಿಯುವಿಶ್ವ, ಕರ್ಮನಾ ಕರೆಸಿ। ಸರ್ವಭಾಗ್ಯನಗರವೆಲ್ಲ ನಿರ್ಮಿಸೆಂದನು।। ತೋರಮುತ್ತು ತೋರರತ್ನದ್ವಾರ ಗೋಪುರಗಳು। ದ್ವಾರಕೆಗಿಂತ ಅಧಿಕವಾಗಿ ತೋರ್ಪುದು।।34।। ಶ್ರೇಷ್ಠವಾದ ದಿವ್ಯದೊಡ್ಡ। ಪಟ್ಟಣಾ ಅರಮನೆಗಳು ಅಷ್ಟಐಶ್ವರ್ಯದಿಂದ ಭರಿತವಾಯಿತು। ಊರು ಬಿಟ್ಟು ಬರಲುವಿಪ್ರ। ದ್ವಾರಕಾದಿಂದ ಭಟರು ಹೋಗಬೇಡ

ನಿಲ್ಲುನಿಲ್ಲು ಎನುತ ನುಡಿದರು॥34॥ ಅಚ್ಯುತಾನಂತ ಕೊಟ್ಟ। ವಸ್ತ್ರಾಭರಣವೆಲ್ಲ। ಬಿಚ್ಚಿಕೊಂಡು ಬಿಳಿಯ ಕೋರಿ ಉಡಿಸಿಕಳಿಸಲು। ಎತ್ತ ಹೋದರೆನ್ನ ಪ್ರಾರಬ್ಧ ಬೇರೆ ಆಗೋದೆ ಸತ್ಯವಾದ ಬ್ರಹ್ಮ ಬರಹತಪ್ಪದೆಂದನು॥36॥ ಮಕ್ಕಳೆಲ್ಲಾರು ಬಂದು ನಮ್ಮಪ್ಪ ಏನು ತಂದೆ ಎಂದು। ಅಪ್ಪಿಕೊಂಡು ಕೇಳಿದರೆ ಏನು ಹೇಳಲಿ॥ ಸಡಗರದ ಸತ್ಯಭಾಮ। ಉಡುವದೊಂದುಹಳೆಯಸೀರೆ।ಕೊಡಬಾರದಿತ್ತೆ ಎನ್ನ ಮಡದಿಗೆಂದನು॥37॥ ಭಾಗ್ಯವಂತರಲ್ಲಿ ನಿರ್ಭಾಗ್ಯ ಬಂದರೇನು ಫಲವು। ರುಕ್ಮಿಣೀಗು ಕರುಣೆ ಹುಟ್ಟದೆ ಹೋಯಿತೀಗಲೇ॥ ನೀರಿನೊಳಗೆ ಮೀನುಗಳು ನಾರುತಿದ್ದ ಬೆಟ್ಟವ। ಹೇರಭಾರಕಂಜಿ ಮೋರೆ ಕೆಳಗೆ ಮಾಡಿದ್ಯೋ॥38॥ ಬೇಸರವಿದು ಗುಡ್ಡಗಹ್ವರ ದೊಳಗೆ ತಿರುಗಿ ಕಂಭದೊಳಗೆ। ಕುಳಿತೆ ಕರುಳ ಹಾರಕಾಗಿ ತೆರೆದಿಬಾಯನು॥ ನಾರನು ಟ್ಟುನಾರಿ ಬಿಟ್ಟು। ಘೋರ ಅರಣ್ಯತಿರುಗಿ। ಜೋರ ತನವಮಾಡಿ ಬೈಸಿಕೊಳ್ಳಲಿಲ್ಲವೇ॥39॥ ಈಶನಾಗಿ ಈ ಸಮುದ್ರವಾಸ ನಿನಗೆ ತಪ್ಪದೋ। ಕಶನಾಗಿ ಭೂಮಸದ್ರ ದಾಟಿ ನಿಂತೆಯೋ।ದುಷ್ಟಮಗಳ ನೀನು ಉಂಗುಷ್ಟದಿಂದ ಪಡೆದೆಯೋ ಕೊಟ್ಟು ಶರಧಿಮಾಡಿಕೊಂಡು ಮಗಳ ವಿರೋಧವ॥40॥ ಭಾರ್ಯಳಿದ್ದು ಬಸುರಬಾಣಂತಿ ಖರ್ಚು ಇಲ್ಲದ್ದಾಂಗೆ। ನಾಭಿಯಿಂದ ಪಡೆದೆ ನಾಲ್ಕು ಮಾರಿಶಿಶುವನು॥ ನಾಲ್ಕು ಮುಖದ ಬ್ರಹ್ಮೆನೆಂದು। ಏಕ ಪುತ್ರನ ಪಡೆದು ಹದಿ। ನಾಲ್ಕುಲೋಕ ಸೃಷ್ಟಿಮಾಡೆಂದಾಗ ಹೇಳಿದಿ॥41॥ ಅನ್ನ ಪಾನ ಬಿಟ್ಟುವಾರ। ತನ್ನಾವರೆಂದ್ದೇ। ಅನ್ನ ವಿಷಯ ಬೇಡಲವರ ಕೆಳಗೆ ನೂಕುವಿ॥ ಜಾತಿಕುಲಗಳಿಲ್ಲ। ಗೊಲ್ಲರೆಂಜಲುಂಡು ಬೆಳೆದೆಯೊ। ಭೀತಿ ಭಯಗಳಿಲ್ಲದೆ ಕರಡಿ ಮಗಳಕೂಡಿದ್ಯೋ॥42॥ ಮಂಕ ಭಿಡಿಯವಲ್ಲಮಾವನ್ನ ಮಡುಹಿದ್ಯಾತಕೂ। ಅನಾಥಬ್ರಾಹ್ಮಣನ ಪಿಡಿಯ ಯಾತಕೆಂದನು॥ ಹತ್ತಲೊಲ್ಲದೆ ರಥಗಳೆಲ್ಲಿ। ಹದ್ದನೇರಿ ಓಡಾಡುವಿ। ಸರ್ಪನಾಹೆಡೆಯ ಮೇಲೆ ಶಯನ ಮಾಡುವ॥43॥ ತಾರೆಗಣಗಳೆಣಿಸುವೋದು। ಹೆಂಗೆ ಅಸಾಧ್ಯವೋ। ನಾಗಶಯನ ನಿನ್ನ ಗುಣಗಳ ಪೊಗಳಲಾರೆವೊ॥ ಹೆಜ್ಜೆ ಹೆಜ್ಜೆ ಗೊಮ್ಮೆ ಹರಿಯ ನಿಂದಿಸುತ್ತ ಬರುತಿರಲು। ವಜ್ರಮಾಣಕದ ಗೋಪುರವಕಂಡನು॥44॥ ಈ ಪುರವು ಯಾರದೆಂದು ಗೋಪಾಲಕರ ಕೇಳಿದ। ಶ್ರೀಪತಿಯು ಕೊಟ್ಟ ಸುಧಾಮಗೆಂದರು॥ ದನವ ಕಾಯ್ವ ಮಕ್ಕಳೆಲ್ಲ। ನಿನಗೆ ಹಾಸ್ಯಮಾಡುವೋರು। ಜನ್ಮ ವ್ಯರ್ಥವೆಂದು ಮನದಿ ಮರುಗುತಿದ್ದನು॥45॥ ಆನೆಪಲ್ಲಕ್ಕಿ ತೇಜಿ। ಅಂದಣದ ರಥಗಳು। ಕಾಲು ಕಾಲಾಳಜನರ ಕಂಡನಾಗಲೇ। ಪಟ್ಟಣಾದ ನಾಮವೇನು। ಪಟ್ಟಣದ ದೊರೆಯದಾರು। ಇಷ್ಟು ದಂಡುದಾರ ಬಲವು ದಾರದೆಂದನು॥46॥ ಸುಂದರ ಪಟ್ಟಣ ಸುಗುಣ ಸುಧಾಮನದು। ಇಂದಿನಿಂದ ಪುರವನಾಳ್ವಅರಸು ಎಂದನು॥ ಇತ್ತ ಕುಚೇಲನ ಪತ್ನಿ ಉಪ್ಪರಿಗೆ ಏರಿಕೊಂಡು। ಮತ್ತೆ ಬರುವ ಪತಿಯ ಹಾದಿ ನೋಡುತಿದ್ದಳು॥47॥ ಮಿಂದು ಪೀತಾಂಬರವನುಟ್ಟ ಮೇಲೆ ಜರದರವಿಕೆ ತೊಟ್ಟು॥ ಕುಂದಣಾದ ಡಾಬುನಡುವಿಗಿಟ್ಟು ನಡೆದಳು॥ ಪಿಲ್ಲಿ ಕಾಲುಂಗುರ ಲುಲ್ಲುರುಳಿ ಪೈಜಣ। ಘಲ್ಲುಘಲ್ಲು ಹೆಜ್ಜೆ ಇಡುತ ಬಂದಳಾಗಲೇ॥48॥ ವಿಪ್ರವೇದ ಪಾಠಕರು ಮುತ್ತೈದೇರೆಲ್ಲ। ಬಂದು ಕುಚೇಲನ ಕರೆಯೆ ಬಂದರು॥ ಸಾಗರರಾಜನಲ್ಲಿ ಭಾಗೀರಥಿ ಸೇರಿದ್ದಾಗೇ ಆಗ ತನ್ನ ಪತಿಯ ಪಾದಕೆರಗಿನಿಂತಳು॥49॥ ರಾಜಸಿಂಹಾಸನ ಏರಿದಾ ಸುಧಾಮನು। ಬ್ರಾಹ್ಮಣರಿಗೆ। ದಕ್ಷಣೆ ತಾಂಬೂಲಕೊಡುತಲಿ। ತೊದಲು ನುಡಿಗಳಾಡುತ ಬಂದೀ ಬಂದ ಮಕ್ಕಳು। ತೊಡೆಯನೇರಿ ತಂದೆ ಮುಖವ ನೋಡುತಿದ್ದುವು॥50॥ ಅಚ್ಚ ಕೆಂಪು ಕರಿದು ಬಿಳುಪು। ಹೆಚ್ಚಿನಾಭರಣಾವು। ಅಪ್ಪ ನಿನಗೆ ಯಾರು ಕೊಟ್ಟರೆಂದು ಕೇಳಲು॥ ಆಣಿಮುತ್ತು ಬಿಗಿದಸರವು ಹೆಬ್ಬಟ್ಟಲ್ಹಿಡಿದು ತೋರಿಸುತ್ತಾ। ಗೆಜ್ಜೆ ವಂಕಿನಾಗಮುರುಗಿ ತೋರಿಸುತಿದ್ದವು॥51॥ ಗದ್ದ ಗೋಣು ಹಿಡಿದು ಕೇಳ್ವ। ಮುದ್ದು ಮಕ್ಕಳನ್ನೇ ನೋಡಿ। ಪದ್ಮನಾಭನೆಂಬ ಧಣಿಯು ಕೊಟ್ಟನೆಂದನು॥ ತೋಪು ಕರೆಯುಕಾಲುವೆ। ಗೋಪುರದ ವಾಡೆಯು। ನಾನಾಪರಿಯಲಿ ಚಿತ್ರ ಮಂಟಪವ ರಚಿಸಿದ॥52॥ ಅನ್ನದಾನ ಹೊನ್ನುದಾನ। ಧಾನ್ಯಬೆಳೆವ ಧರಣಿದಾನ। ಕನ್ಯಾದಾನ ಮಾಡಿ ಕೃತಾರ್ಥನಾದನು॥ ಕೆರೆಯ ನೀರಕೆರೆಗೆ ಚೆಲ್ಲಿ। ವರಗಳನ್ನು ಪಡೆಯುವಂತೆ। ಹರಿಯು ಕೊಟ್ಟ ಭಾಗ್ಯವೆಲ್ಲ ಹರಿಗೆ ಅರ್ಪಿಸಿ॥53॥ ಬಡವ ಸುಧಾಮನನಾಸೆ ಬಿಡದೆ ಪೂರೈಸಿ ಕೊಟ್ಟ। ಎನ್ನೊಡೆಯ ಶ್ರೀರಾಮಶ್ರೀಶನೆಂದು ಹೊಗಳಿರೋ॥ ಕಷ್ಟ ಬಂದ ಕಾಲಕ್ಕೆ ಹರಿಯ ಮುಟ್ಟಿ ಭಜಿಸಿರೋ। ಕಷ್ಟದಾರಿದ್ರ್ಯವೆಲ್ಲ ಹರಿದು ಹೋಗ್ವುದು॥54॥ ಈ ಕಥೆಯ ಭಕ್ತಿಯಿಂದ ಚಿತ್ತವಿಟ್ಟು ಕೇಳಿದವರಿಗೆ। ಪುತ್ರ ಸಂತಾನಕೊಡುವ ಪುರುಷೋತ್ತಮ॥ ಈ ಕಥೆಯ ನೇಮದಿಂದ ಧ್ಯಾನವಿಟ್ಟು ಕೇಳ್ದವರಿಗೆ।

ಕಾಮಿತಾರ್ಥಕೋಡುವ ಭೀಮೇಶ ಕೃಷ್ಣನು॥55॥

ಗುರುಗಳಿಗೆ ಮಾತಾಪಿತರು

ಗುರುಗಳಿಗೆ ಮಾತಾಪಿತರು ಹಿರಿಯರುಗಳ ಚರಣಕ್ಕೆರಗಿ ಹರಿಯನಾಮ ಚರಿತೆಯನ್ನು ಬರೆದು ಪೇಳುವೆ॥ ಇರುವನೊಬ್ಬ ವಿಪ್ರನಲ್ಲಿ ಪರಮ ದಾರಿದ್ರನಾಗಿ ಹರಿಯ ನೆನೆದು ಕಾಲವನ್ನೇ ಕಳೆಯುತ್ತಿದ್ದನು॥ ನಡೆಯಲರಿಯ ಧರಣಿನೋಯ ನುಡಿಯಲರಿಯ ಗರ್ಜಿಸುತ್ತಾ ಕಡಿಯ ಲರಿಯ ಮರನ ಕುಡಿಯ ಚಿವುಟಲರಿಯನು॥ ತಡೆಯ ಲರಿಯ ಸಾಧುಜನರ ಹಿಡಿಯಲರಿಯ ಪರರವಸ್ತು ವಡವೆಯನ್ನು ಮುಟ್ಟಲರಿಯ ಬಡವನಾದರೂ॥ ವೃತ್ತಿ ಕ್ಷೇತ್ರಾದಿಗಳಲಿ ಸುತ್ತಿಸುಳಿದು ಧರೆಯ ಮೇಲೆ ನಿತ್ಯಾಯಾಚನವ ಮಾಡಿ ನೀಲ ವರ್ಣನಾ॥ ಮೂರ್ತಿಧ್ಯಾನವನ್ನೇ ಮಾಡಿ ಭಿಕ್ಷೆಯನ್ನು ಬೇಡಿ ತಂದು ಪತ್ನಿ ಸಹಿತ ಪ್ರಾಣಧಾರಣೆಯ ಮಾಡಿದ॥ ಭಿಕ್ಷೆಯನ್ನು ಬೇಡಿ ತರಲು। ಲಕ್ಷವೆಂದು ಜೋಕೆಮಾಡಿ ಅಕ್ಷಯಾ ಪಾತ್ರೆಯಲಿ ಶಾಕಪಾಕವಾ॥ ಆಕ್ಷಣಾದಿಂದ ಮಾಡಿ ಪತಿಯ ಸಂತೋಷಪಡಿಸಿ ಕುಕ್ಷಿಯನ್ನು ಪೊರೆದು ಹರಿಯ ನೆನೆವುತಿರ್ದರೂ॥ ದಾರಿದ್ರ್ಯ ದುಃಖ ಜಗಕೆ ತೋರದಂತೆ ಗೃಹವ ಶೃಂಗಾರವನ್ನೇ ಮಾಡಿ ಶಂಖ ಚಕ್ರಪದ್ಮದೀ ಹರಿದ್ರಾಕುಂಕುಮವು ಅರುಣವನ್ನೇ ಶೃಂಗರಿಸಿ ನಾರಾಯಣನ ನಾಮವನ್ನೇ ನೆನೆವುರ್ತಿದವೂ॥ ಸ್ನಾನ ಸಂಧ್ಯಾನ ಜಪವು ಮಾನಸಾವು ಹರಿಯ ಪೂಜೆ ದಾನ ಧರ್ಮ ವೈಶ್ವದೇವ ಅತಿಥಿ ಸತ್ಕಾರ ನೇಮದಿಂದ ಮಾಡಿ ಕಾಮಧೇನುವಿಗೆ ಕವಳವಿತ್ತು ಮಾನಿನೀಯ ಸಹಿತ ಉಂಡನುಳಿದ ಭಾಗವಾ॥ ಪತಿವ್ರತೆ ತನ್ನ ಪ್ರಾಣಪತಿಯ ಸೇವೆಯನ್ನು ಮಾಡಿ ಅತಿಶಯದಿಂದ ಬಿನ್ನಪವಮಾಡಲು॥ ಪಿತರ ವರ್ಗದವರು ಸಂಗತಿಯಲಾಡಿ ಬೆಳೆದವಾರು ಹಿತವರಾರಿಲ್ಲವೆಂದು ನುಡಿಯಲಂಗನೆ॥ ಹೆತ್ತ ತಾಯಿ ವರ್ಗದವರು ಜೊತೆಯಲಾಡಿ ಬೆಳೆದವಾರು ಶಾಸ್ತ್ರೀಪಾಠ ಸಕಲ ವೇದಾಂತ ವಿಪ್ರರೂ॥ ನಿತ್ಯದಲ್ಲಿ ಪೋಗಿ ಸಕಲ ಪೃಥ್ವಿಯನ್ನೇ ತಿರುಗುವಾಗ। ಇತ್ತ ಬಾರೆಂದು ಕರೆವ ಹಿತವರಿಲ್ಲವೆ॥ ಪತ್ನಿಯೆಂದ ಮಾತಕೇಳಿ ಅರ್ತಿಯಿಂದ ವಿಪ್ರನುಡಿದ ಮಿತ್ರರೆನಗೆ ರಾಮಕೃಷ್ಣ ಭಕ್ತವತ್ಸಲಾ॥ ರಿಕ್ತ ಹಸ್ತದಲ್ಲಿ ಪೋಗಿ ನಿತ್ಯ ಸದ್ಗುಣ ದಿವ್ಯ ಮೂರ್ತಿಯನ್ನು ಕಾಣಬಾರದೆಂದು ನುಡಿದನೂ॥ ಪ್ರಾಣಪದಕ ಹರಿಯ ಪೋಗಿ। ಕಾಣಬೇಕಾದರೆ ಕೈ ಕಾಣಿಕೆಯ ಕಾಣೆನೆಂದು ಮನದಿನೊಂದನೂ॥ ರಾಣಿ ಹೋಗಿ ನೆರೆ ಕೆರೆ ಪ್ರಾಣೆಗಳ ಮನವನೊಲಿಸಿ ಕಾಣಿಕೆಗೆ ತಂದಳೊಂದು ಮುಷ್ಟಿಪೃಥುಕವಾ॥ ಮುಷ್ಟಿಪೃಥುಕವನ್ನೇ ತಂದು ಕಟ್ಟಿ ಜೀರ್ಣವಸ್ತ್ರದಲ್ಲಿ ಪಟ್ಟದೊಲ್ಲಭನ ಕೈಗೆ ಕೊಟ್ಟಳಂಗನೆ॥ ಕೃಷ್ಣ ಮೂರುತೀಯ ಮುಂದೆ ಇಟ್ಟು ಕರವ ಮುಗಿದು ನಮ್ಮ ಕಷ್ಟವನ್ನು ಪೇಳಿ ಬನ್ನಿರೆನುತ ನುಡಿದಳೂ॥ ಕೊಟ್ಟ ಪೃಥುಕವನ್ನೇ ಮೂಟೆಯಾಗಿ ಕಟ್ಟಿ ಹೆಗಲೊಳಿಟ್ಟುಕೊಂಡು ನಡೆದ ವಿಪ್ರ ಹರಿಯ ಧ್ಯಾನದೀ॥ ಬಟ್ಟೆಯನ್ನೆ ಮೆಟ್ಟಿ ಬರಲು ಬಲಕೆ ಬಂತು ವಾಯಸವು। ಕೃಷ್ಣ ಪಕ್ಷಿ ಕೃಷ್ಣ ಎಂದು ಎಡಕೆ ಹೋಯಿತು॥ ಉತ್ತಮ ಶಕುನದಾ ನಿಮಿತ್ತವನ್ನೆ ಕಂಡು ವಿಪ್ರ ಚಿತ್ತದಲ್ಲಿ ಪರಮ ಸಂತೋಷಪಟ್ಟನು॥ ಕೃಷ್ಣ ಮೂರುತಿಯು ನಮಗೆ ಸಕಲ ಸಂಪದವನೀವ ಅಚ್ಯುತಾನಂತ ರಕ್ಷಿಸೆಂದು ನುಡಿದನೂ॥ ಶುದ್ಧ ಜಲಗಳೆಲ್ಲ ನಮ್ಮ ಸುಗುಣ ಹರಿಯ ಚರಣಕೆಂದ ಪದ್ಮ ಪುಷ್ಪ ಪಾರಿಜಾತ ಲಕ್ಷ್ಮಿಗೆಂದನೂ॥ ಮಧ್ಯಮಾರ್ಗದಲ್ಲಿ ಬೆಳೆದ ಮರುಗ ಮಲ್ಲಿಗೆ ಜಾಜಿ ಪದ್ಮನಾಭಗರ್ಪಿಸುತ್ತ ಮುಂದೆ ನೆಡದನೂ॥ ಹರಿವ ಜಲಗಳೆಲ್ಲ ಶ್ರೀ ಹರಿಯ ದಿವ್ಯ ಚರಣಕ್ಕೆಂದ ಪರಿಪರಿಯ ಪುಷ್ಪವೆಲ್ಲ ಲಕ್ಷ್ಮಿಗೆಂದನೂ॥ ಕೆರೆಯಲ್ಲಿದ್ದ ತಾವರೆಯೂ ಕೆಲದಲ್ಲಿದ್ದ ಕೇದಿಗೆಯು ನರಮೃಗರೂಪ ನರಸಿಂಹಗೆಂದನೂ॥ ಎಳೆಯ ತುಳಸಿ ದಳವು ನಮ್ಮ ನಳಿನನಾಭ ಕೃಷ್ಣಗೆಂದ। ಸುಳಿವಡೆದ ಬಿಳಿಎಲೆ ಶ್ರೀ ಲಕ್ಷ್ಮಿಗೆಂದನೂ॥ ಕಳಿತ ಖರ್ಜೂರ ದ್ರಾಕ್ಷಿ ನಳಿನನಾಭಗರ್ಪಿಸುತ್ತಾ। ಥಳಥಳಿಪ ದ್ವಾರಕೇಯ ಬಳಿಗೆ ಬಂದನೂ॥ ಬಿಸಿಲು ಸೆಕೆಗೆ ಸುಧಾಮ ನೆರಳು ತಂಪಿನಲ್ಲಿ ನಿಂತು। ತೃಷೆಗೆ ರಾಮ ನಾಮವೆಂಬ ರಸವ ಚಿಮ್ಮುತ್ತಾ॥ ಹಸಿದಾಗ ಹರಿಯ ನಾಮ ಹಣ್ಣುಗಳನೆ ಭುಂಜಿಸುತ್ತ ನಸುನಗುತ ನಡೆದ ವಿಪ್ರ ಹರಿಯ ಧ್ಯಾನದೀ॥ ದೂರದಿಂದ ಕಂಡು ವಿಪ್ರ ದ್ವಾರಕೇಯ ನಗರವನ್ನು ಸಾರಿ ಮೈಯುಬ್ಬಿ ಸಂತೋಷಪಟ್ಟನು। ನಾರಾಯಣನ ನಾಮವನ್ನು ಪಾರಾಯಣ ಮಾಡಿಕೊಂಡು ಬೋರನೈತಂದ ವಿಪ್ರ ರಾಜದ್ವಾರಕೇ॥ ಗೊಲ್ಲರೆಲ್ಲ ಕಂಡು ವಿಪ್ರನಿಲ್ಲು ಹೋಗಬೇಡವೆನಲು ತಲ್ಲಣೇಸಿ ನೆನೆದ ತನ್ನ ತಂದೆ ಕೃಷ್ಣನಾ॥ ಫುಲ್ಲನಾಭನಿಗೆ ಪೂರ್ವದಲ್ಲಿ ಮಿತ್ರನೆಂಬದೊಂದು

ಸೊಲ್ಲಹೋಗಿ ಹೇಳಿ ಲಕ್ಷ್ಮೀರಮಣಗೆಂದನು॥ ಎಂದ ಮಾತ ಕೇಳುತಾ ಬಂದರಾಗ ಚಾರರು ಇಂದಿರಾಪತಿಗೆ ಭಿನ್ನಹವ ಮಾಡಲೂ॥ ಹಿಂದೆ ತಮ್ಮ ಮಿತ್ರನಂತೆ ಹೆಸರು ಸುಧಾಮನಂತೆ ಬಂದು ಬಾಗಿಲಲ್ಲಿ ನಿಂದನೆಂದು ನುಡಿದರೂ॥ ಕರುಣ ನಿಧಿಯು ಬೇಗದಿಂದ ಕರೆದು ತನ್ನಿರೆನಲು ವಿಪ್ರ ತ್ವರದಿ ಬಂದು ಹರಿಯ ದಿವ್ಯ ಚರಣಕ್ಕೆರಗಿದಾ॥ ಕರಗಳಿಂದ ಶಿರವನ್ನೆತ್ತಿ ಭರದಿ ಮೈ ದಡವಿ ಕೃಷ್ಣ ಕರೆದು ಮಂಚದಲ್ಲಿ ಕುಳ್ಳಿರಿಸಿಕೊಂಡನೂ॥ ಬಿಸಿಲೊಳಗೆ ಬಂದಿರೆಂದು ಬೀಸಣಿಗೆಯಿಂದ ಬೀಸಿ ತೃಷೆಗೆ ತರಿಸಿಕೊಟ್ಟ ರಾಗ ಗುಡಜಲಗಳಾ॥ ಹಸಿದು ಬಂದವಿಪ್ರನೆಂದು ಹಣ್ಣು ಸಕ್ಕರೆಯ ಕೊಡಿಸಿ ನಸುನಗುತ್ತ ಕೇಳಿದರು ಕುಶಲವಾರ್ತೆಯಾ। ಬರವು ತಡೆದುದ್ದೇತಕ್ಕಯ್ಯ ಬಂದುದಲ್ಲಿ ಬಹಳ ದಿವಸ ವರವಿವಾಹ ನಿಮಗೆ ಯಾವ ಕಡೆಯಲಾಯಿತು॥ ಮರೆತುಬಿಟ್ಟರೇನು ನಮ್ಮ ಕರೆಯಲಿಲ್ಲವಯ್ಯ ನೀವಿರುವ ಕ್ಷೇತ್ರ ಯಾವ ಕಡೆಯ ಲಾಯಿತೆಂದರೂ॥ ಮದನ ಪಿತನು ಕರುಣದಿಂದ ಮದುವೆಯಾಯಿತಯ್ಯ ನಮಗೆ ಪದುಮನಾಭ ನಿಮ್ಮ ಪಾದ ದ್ವಯದ ಕೃಪೆಯಲೀ॥ ಮೊದಲು ಬಂದುದಿಲ್ಲ ಬಹಳ ಮುಂದೆ ಗೆಟ್ಟು ಭಂಗಪಟ್ಟು ವಧುವು ತನ್ನ ಕಳುಹಕೊಟ್ಟಳೆಂದು ನುಡಿದನೂ॥ ಇಂದಿರಾಪತಿಯು ವಿಪ್ರ ವಿನಯದಿಂದ ಮಾತನಾಡೆ ಹಿಂದಿನಾಧ್ಯಾಯವಿಲ್ಲಿ ಸಂದು ಹೋಯಿತು॥ ಹಿಂದೆ ತಾವು ಗುರುಗಳಲ್ಲಿ ಒಂದಾಗಿ ಸೇರಿ ಬೆಳೆದ ಅಂದವನ್ನೇ ನೆನೆದು ಸಂತೋಷಪಟ್ಟರೂ॥ ಗುರುಪತ್ನಿ ಒಂದು ದಿವಸ ಕರೆದು ಕೆಲಸವನ್ನು ಹೇಳಿ ಮುರಿದು ತನ್ನಿ ಕಾಷ್ಟವೆಂದೆನುತ ಹೇಳಲೂ॥ ಸುರರು ಮಳೆಯ ಹೊಯ್ಯುತಿರಲು ಭರದಿ ಕಾನನಾದ ಒಳಗೆ ಗುರುಗಳು ಕಂಡು ನಮ್ಮ ಕರೆದು ಒಯ್ದುರು॥ ಗುರುಗಳ ಪಂಕ್ತಿಯಲ್ಲಿ ಪರಮ ಸಂತೋಷದಿಂದ ಮೃಷ್ಟಾನ್ನಗಳನೆ ಸವಿದೆವು॥ ಗುರುಕುಮಾರರಿಗೆ ಎಲ್ಲಾ ಸ್ಥಿರಜೀವಿ ಪದವನ್ನಿತ್ತು ಹರಸಿದೀರಿ ದೀರ್ಘಾಯುಷ್ಯರಾಗಿ ಎನುತಲೀ॥ ಸತ್ಯಮೂರ್ತಿ ಸರಸದಿಂದ ಭ್ರಾತೃಭಾವದಿಂದ ನಮ್ಮತ್ತಿಗೆ ಕಳುಹಿಕೊಟ್ಟಳದೇನು ಅಪೂರ್ವದೊಸ್ತುವಾ॥ ಚಿತ್ತದಲ್ಲಿ ಚಿಂತೆ ಬೇಡ ಇತ್ತ ತನ್ನಿರೆನಲು ವಿಪ್ರ ಮಸ್ತಕವ ಬಾಗಿ ಲಜ್ಜೆಯಿಂದ ನಿಂತನೂ॥ ಭಕ್ತಿವರ್ಜ್ಯವಾಗಿ ತಂದ ಮುತ್ತು ರತ್ನ ಕೆಲಸವಿಲ್ಲ ಭಕ್ತಿಯಿಂದ ತಂದುದೊಂದು ಪತ್ರಪುಷ್ಪವೂ॥ ಚಿತ್ತದಲ್ಲಿ ಚಿಂತೆ ಬೇಡ ಬೇಗ ತನ್ನಿರೆನಲು ಸ್ವರ್ಣ ಪಾತ್ರೆಯಲ್ಲಿ ಪೃಥುಕವನ್ನೇ ಸುರಿದ ವಿಪ್ರನೂ॥ ಮುಷ್ಟಿ ಪೃಥುಕವನ್ನೆ ರಾಮಕೃಷ್ಣರೊಂದು ಬಾರಿ ಮೆಲ್ಲೆ ಕಷ್ಟದಾರಿದ್ರ್ಯವೆಲ್ಲಾ ದಹಿಸಿ ಹೋಯಿತೂ॥ ಮುಷ್ಟಿಯಲ್ಲಿ ಮೂರುಕಾಳು ತಿರುಗಿ ರಾಮಕೃಷ್ಣರು ಮೆಲ್ಲೆ! ಶ್ರೇಷ್ಟವಾದ ವೈಕುಂಠಪದಕೆ ವಿಪ್ರನೂ॥ ಮಲ್ಲಿಗೆಯ ಮುಡಿದು ಲಕ್ಷ್ಮಿ ವಲ್ಲಭನ ಕರವ ಪಿಡಿದು ಅಲ್ಲಿಂದ ವಿಪ್ರತಂದ ಅಪೂರ್ವದೊಸ್ತುವಾ॥ ಎಲ್ಲವನ್ನು ನೀವೆ ಸ್ವಾಮಿ ಮೆಲ್ಲಬಹುದೋ ನಮಗೆ ಕೊಡದೆ ನಮ್ಮೆಲ್ಲರಿಗೆ ಕೊಡಬೇಕೆಂದು ನುಡಿದಳಂಗನೇ॥ ಎಂದು ಆಡಿದ ಮಾತ ಕೇಳಿ ಗೋವಿಂದ ನಸುನಗುತ ಇಂದುಮುಖಿಯರೀಗೆ ಎಲ್ಲಾ ಕರೆದುಕೊಟ್ಟನೂ॥ ಬಂಧು ಬಳಗಕ್ಕೆಲ್ಲಕೊಟ್ಟು ಮಂದಿ ಮಾರ್ಬಲಕೆ ಕೊಟ್ಟು ಹಿಂದೆ ಮಿಕ್ಕ ಪೃಥುಕ ಜೋಕೆ ಎಂದು ನುಡಿದನು॥ ಹೊತ್ತು ಹೋಯಿತಯ್ಯ ವಿಪ್ರ ಹಸಿದು ಬಂದರೇಳಿ ಭೋಜನೋತ್ತರದಿ ಮಾತನಾಡಬಹುದು ಎಂದನೂ॥ ಸತ್ಯ ಗಂಗೆಗೆ ಹೋಗಿ ನಿತ್ಯಕರ್ಮವ ಮಾಡಿ ಅಚ್ಯುತನ ಪಂಕ್ತಿಗೆ ಬಂದ ವಿಪ್ರನೂ॥ ಕೃಷ್ಣರಾಮ ಪಂಕ್ತಿಯಲ್ಲಿ ಮೃಷ್ಟಾನ್ನಗಳನೆ ಸವಿದು ಇಷ್ಟಗಂಗೆಗೆ ಹೋಗಿ ಕರವ ತೊಳೆದರೂ॥ ಇಟ್ಟಗದ್ದಿಗೇಲಿ ಕುಳಿತು ಪಟ್ಟವೀಳ್ಯವನ್ನೆ ಹಿಡಿದು ಕೊಟ್ಟ ತಾಂಬೂಲ ಚರ್ವಣಾವಮಾಡಿದಾ॥ ಇಂದಿರಾಪತಿಯು ವಿಪ್ರನೊಡನೆ ವಿನಯದಿಂದ ಮಾತನಾಡಿ ರಂಜಿಸುವ ರಾಜಮಂದಿರವ ತೊರಿದಾ॥ ಅಂಜಬೇಡ ವಿಪ್ರನೆನಲು ಅಧಿಕ ಸಂತೋಷದಿಂದ ಸಂಜೆಗೆ ಅಮೃತಾನ್ನ ಭೋಜನಾದುವು॥ ಶ್ರಮಿಸಿ ಬಂದ ವಿಪ್ರನೆಂದು ಶಾಲು ಪಟ್ಟೆಗಳನೆ ಹಾಸಿ ವಿಶ್ರಮಿಸಿಕೊಳ್ಳಿರೆನುತ ನುಡಿದ ಕೃಷ್ಣನೂ॥ ಅಮರವಂದಿತನು ತನ್ನ ಆದಿಲಕ್ಷ್ಮಿಯೂ ಸಹಿತ ಕಮಲನಾಭ ಹೋಗಿ ವಿಶ್ರಮಿಮಿಸಿ ಕೊಂಡರೂ॥ ಅರುಣ ಉದಯ ಕಾಲದೊಳೆದ್ದು ಸುರನದಿಯಲ್ಲಿ ಸ್ನಾನಮಾಡಿ ಪರಮಾತ್ಮ ಅಪ್ಪಣೇಯ ಪಾಲಿಸೆಂದನೂ॥ ತ್ವರಿತವಿಷ್ಟು ಏತಕಯ್ಯ ಇರಲು ಬಹುದು ಎರಡು ದಿವಸ ಬರವ ತಡೆದು ಬಹಳ ದಿವಸಕಾಗಿ ಬಂದಿರೀ॥ನೆರೆಹೊರೆಯಿಲ್ಲ ನಮಗೆ ತರುಣಿಯೊಬ್ಬಳೆನುತ ಪೇಳೆ ಹರುಷದಿಂದ ಹೋಗಿಬನ್ನಿರೆನುತ ನುಡಿದನೂ॥ ಕೃಷ್ಣನಪ್ಪಣೆಯಗೊಂಡು ಥಟ್ಟನೆ ಅಲ್ಲಿಂದ ಬಂದು ಅಷ್ಟಮಸ್ತ್ರೀಯರ ಅಪ್ಪಣೆಯ ಕೇಳಿದಾ।. ಇಷ್ಟು ತ್ವರಿತ ವೇತಕಯ್ಯ ಇರಲು ಬಹುದು ಎರಡು ದಿವಸ ಕಷ್ಟಪಟ್ಟು ಬಂದಿರೆಂದಳಾದಿ ಲಕ್ಷ್ಮಿಯೂ॥ ನೆರೆಹೊರೆ ಇಲ್ಲ ನಮಗೆ ತರುಣಿಯೊಬ್ಬಳೆನುತ ಪೇಳೆ ಹರುಷದಿಂದ ಹೋಗಿಬನ್ನಿರೆನುತ ನುಡಿದಳೂ॥ ರಾಜಗೋಪಾಲ ತನ್ನ ರಾಜದ್ವಾರ ತನಕ

ಬಂದು ರಾಜಸಮ್ಮೇಳದಿಂದ ಕಳುಹಿಕೊಟ್ಟನೂ।। ಮೂಜಗಕ್ಕಧಿಕವಾದ ಮುತ್ತು ರತ್ನ ಅಂದವಾದ ತೇಜವನ್ನು ಹಿಡಿದಿರೇ ತಂದು ವಿಪ್ರಗೇ।। ಝುಗಝುಗಿಪ ಚಿತ್ರದಂಗಿ ಜರಿಯತಂದು ತೊಡಿಸಿದರೆ ಅಗಣಿತವಾದ ರತ್ನದಾಭರಣಗಳನ್ನೂ ತಂದು ಇಟ್ಟರೂ।। ಬಗೆಬಗೆ ಕೊಂಬುಕಹಳೆ ವಾದ್ಯಗೀತ ರಭಸದಿಂದ ಹರಿಯ ಭಕ್ತ ಪೋಪನೆನುತಲೀ।। ನಿರ್ಮಲಮೂರ್ತಿ ವಿಶ್ವಕರ್ಮನಿಗಾಗ ಕರೆಯಕಳುಹಿ ನಮ್ಮ ನಗರಿಗಿಂತ ಅಧಿಕ ಇಮ್ಮಡಿಯಾಗಿ ರಮ್ಯವಾದ ಮುತ್ತುರತ್ನ ಕುಂದಣದ ಕೆಲಸದಿಂದ ನಿರ್ಮಿಸಯ್ಯ ರಾಜಗೃಹವ ವಿಪ್ರಗೆಂದನೂ।। ಸುಪ್ಪಣಿ ಸುವರ್ಣಮಯದ ಉಪ್ಪರಿಗೆಯ ಕಂಡು ವಿಪ್ರ ತಪ್ಪಿತೇನು ದಾರಿ ಎನುತ ಮನದಿ ನೆನೆದನೂ।। ಅಪ್ರತಿಮ ಆದಿಮಹಿಮ ಸರ್ಪಶಯನ ಕೊಟ್ಟ ಭಾಗ್ಯ ತಪ್ಪಿಲ್ಲ ದಾರಿಯೆಂದು ಹರುಷಪಟ್ಟನೂ।। ಇಂದುಮುಖಿಯು ಹರುಷದಿಂದ ತುಂಬಿ ಸುವರ್ಣ ಕಲಶ ಜಲವ ತಂದು ತನ್ನ ಪತಿಯ ಪಾದವನ್ನೇ ತೊಳೆದಳೂ।। ಇಂದಿರಾಪತಿಯ ಪೋಗಿ ಕಂಡ ಕಾರಣದಿಂದ ಬಂದುದೀ ಭಾಗ್ಯ ಸಂದೇಹವಿಲ್ಲವೂ।। ಎತ್ತನೋಡೆ ಸುವರ್ಣಮಯದ ರತ್ನ ಹೊನ್ನ ರಾಶಿಗಳು ಮತ್ತೆ ವಿದ್ವಾಂಸರೆಲ್ಲ ವೇದಾಂತ ಘೋಷಣೆ।। ಸುತ್ತಲಿದ್ದ ಪಕ್ಷಿಗಳು ಹಸ್ತವನ್ನೇ ಮುಗಿದು ಸೇವೆ ವೃತ್ತಿಯನ್ನೇ ಮಾಡುತಿಹುದ ಕಂಡು ವಿಪ್ರನೂ।। ಅರ್ತಿಯಿಂದ ವಿಪ್ರತಾ ಅಶ್ವತ್ಥ ವೃಕ್ಷ ನೆಡಿಸಿ ಮೇಲೆ ಕಟ್ಟಿಸೀದ ಕೆರೆಯ ಭಾವಿ ಕಟ್ಟೆ ಕಾಲುವೇ।। ಬಟ್ಟೆಯಲ್ಲಿ ಸಾಲು ಸಸಿ ಇಟ್ಟು ಅರವಟ್ಟಿಗೆಯ ಕೃಷ್ಣಗರ್ಪಿತವಮಾಡಿ ಕರವ ಮುಗಿದನೂ।। ಅನ್ನದಾನ ಹೊನ್ನುದಾನ ಕನ್ಯದಾನ ಕಪಿಲದಾನ ತನ್ನ ಪಂಕ್ತಿಯಲ್ಲಿ ಬ್ರಾಹ್ಮಣ್ಯ ಭೋಜನಾ ಉನ್ನತವಾದ ದಾನ ಧರ್ಮಗಳನ್ನೇ ಮಾಡಿ ವಿಪ್ರ ಪನ್ನಗಶಯನಗರ್ಪಿತವ ಮಾಡಿದಾ।। ಅಗ್ನಿಹೋತ್ರ ಯಜ್ಞಸೂತ್ರ ಯಜ್ಞಪೌಂಡ್ರಿಕಧರ್ಮ ಶಾಸ್ತ್ರಪಾಠ ಸಕಲ ವೇದಾಂತ ವಿಪ್ರರೂ।। ಮಧ್ಯಾಹ್ನಕಾಲದಲ್ಲಿ ಹಸಿದು ಬಂದ ವಿಪ್ರರಿಗೆ ದಧ್ಯನ್ನ ಕ್ಷೀರದಿಂದ ತೃಪ್ತಿಬಡಿಸಿದಾ।। ಮನಸ್ಸು ಪೂರ್ಣಪಕ್ವವಾಗಿ ಶರೀರ ಧರ್ಮ ನಿತ್ಯವಾಗಿ ಹರಿಯು ಕೊಟ್ಟ ಭಾಗ್ಯವೆಲ್ಲ ಹರಿಗೆ ಅರ್ಪಿಸೀ।। ಸತಿಯು ಪತಿಯೂ ಹೋಗಿ ಲಕ್ಷ್ಮೀಪತಿಯ ಸನ್ನಿಧಿಯಲ್ಲಿರಲು ಚತುರ್ಮುಖಬ್ರಹ್ಮ ಶಾಶ್ವತಗಳಾದುವು।। ಆದಿತ್ಯವಾರ ದಿನದಲ್ಲಿ ಬಾಲೆಯರು ಹೇಳಿದರೆ ಬಾಲಸಂತಾನಕೊಟ್ಟು ರಕ್ಷಿಸುವನೂ।। ಬಾಲಕರಿಲ್ಲದ ಬಾಲೆಯರು ಹೇಳಿದರೆ ಈ ಪದವ ಸಾಲು ಸಂತಾನ ಕೊಟ್ಟು ರಕ್ಷಿಸುವನೂ।। ಪೃಥ್ವಿಯೊಳಗೆ ಈ ಕಥೆಯ ಕೇಳಿದರಿಗೆ ಪೇಳಿದರಿಗೆ ಪುರಂದರ ವಿಠಲ ಸಂಪದವನೀವನೂ। ರಾಮ ರಾಮ ರಾಮ ರಾಮ। ರಾಮ ರಾಮ ರಾಮ ರಾಮ। ರಾಮ ರಾಮ ರಾಮ ರಾಮ ಕೋದಂಡರಾಘವ।।

❖ ❖ ❖

74. ಕಲ್ಯಾಣಗಳು

ಗಂಗೆಯ ಜಡೆಯಲ್ಲಿ ಹರಿಸರ್ಪದೇವನೆ (ಗಿರಿಜಾ ಕಲ್ಯಾಣ)

ಗಂಗೆಯ ಜಡೆಯಲ್ಲಿ ಹರಿಸರ್ಪದೇವನೆ। ನಂದಿವಾಹನನೆ ಶಂಕರನೆ। ಅಂಬಿಕದೇವಿಯ ಅರಸ ವಂದಿತ ಆ। ನಂದದಿ ಗಿರಿರಾಜನಿರಲು।।1।। ಒಂದು ದಿವಸ ಗಿರಿರಾಜ ನೋಲಗದೋಳು। ಆನಂದದಿಂದಲಿ ಕುಳ್ಳಿರಲು। ಅಂದುಗೆ ಕಿರುಗೆಜ್ಜೆ ಗಲಿಗಲಿ ಬಾಲೆ। ಪಾರ್ವತಿ ಬಂದಳು ಓಲಗಕೆ।।2।। ಬಂದ ಮಗಳಬಿಗಿದಪ್ಪಿ ಮುದ್ದಾಡುತ್ತ। ಚಂದದಿ ತೊಡೆಯೊಳಗಿಟ್ಟು। ಮುಂಗುರುಳನೆ ವಾಸರಿಸುತ್ತ ಮೋಹದಿ। ಆನಂದದಿ ಗಿರಿರಾಜನಿರಲು।।3।। ಪುತ್ರಿಯು ಅತಿಜಾಣೆ ಕಡು ಚೆಲುವೆಯು। ಮಕ್ಕಳೊಳಗೆ ಮಾಣಿಕ್ಯವು। ತಕ್ಕವರನ ಸುರನರರಾದಿಗಳೊಳು। ಪುತ್ರಿಗೆವರನಾರೆಂದ।।4।। ಇನ್ನಿವಳ ಹೋಲುವ ಸಖಿಯರ ನಾಕಾಣೆ। ಎನ್ನಮಗಳ ಚೆಲುವಿಕೆಗೆ। ಕನ್ನಿಕೆ ಯಾರಿಗೆ ಕೊಡಲು ಎನುತಲಿ। ಬಣ್ಣಿಸಿದನೆ ಗಿರಿರಾಜ।।5।। ಗಗನ ಮಾರ್ಗದಿ ವೀಣೆ ಸ್ವರಗೈಯುತಇಳಿದ। ನಾರದನೋಲಗಕೆ ಬಂದ। ಮುನಿಗೆ ಷೋಡಶೋಪಚಾರವಮಾಡಿ। ವಂದನೆಗಳ ಮಾಡಿದರು।।6।। ವಂದಿಸಿ ಕರಗಳ ಮುಗಿಯುತ್ತ ಗಿರಿರಾಜ। ಇಂದು ಕೃತಾರ್ಥತಾನೆಂದ। ಪುತ್ರಿಯು ಅತಿಜಾಣೆ ಕಡು ಚೆಲುವೆಯು। ಮಕ್ಕಳೊಳಗೆ ಮಾಣಿಕ್ಯವು।।7।। ತಕ್ಕವರನಕಾಣೆ ಸುರನರರಾದಿಗಳೊಳು। ಪುತ್ರಿಗೆ ವರನಾರೆಂದ। ಇನ್ನಿವಳ ಹೋಲುವ ಸಖಿಯರ ನಾಕಾಣೆ। ಎನ್ನ ಮಗಳ ಚಲ್ವಿಕೆಗೆ।।8।।

ಕನ್ನಿಕೆಯಾರಿಗೆ ಕೊಡಲಿ ಎನುತಲಿ। ಬಣ್ಣಿಸಿದನೆ ಗಿರಿರಾಜ। ಆದಿಶಕ್ತಿಯೂ ಮೂಲೋಕದ ತಾಯಿವಳು। ನಾರಿಯು ನರರೂಪದಲ್ಲಿ।।9।। ಸೋಮಶೇಖರ ಈಕೆಗೆ ಪತಿಯಹನೆಂದು। ನಾರದ ಕೊಂಡಾಡಿದನು।। ಹಿಂದೆ ದಕ್ಷಗೆ ಮಗಳಾಗಿ ಜನಿಸಿ ಪತಿ। ನಿಂದೆಯ ಕಿವಿಯಲ್ಲಿ ಕೇಳಿ। ತಂದೆಯ ಮುಂದೆ ಶರೀರವ ಬಿಟ್ಟಳು। ಬಂದಳು ನಿನ್ನರಮನೆಗೆ।।10।। ಎಷ್ಟು ಜನ್ಮದ ಫಲತಪದಿಂದಲೋ। ಪಾರ್ವತಿ ಮಗಳಾಗಿ ನಿನಗೆ। ಭೂತೇಶ ಶಿವಬಂದು ಅಳಿಯನಾಗುವ ಪುಣ್ಯ। ರಾಶಿ ನಿನಗೆ ಸರಿಯುಂಟೆ।।11।। ಸಕಲಲೋಕೇಶನೆ ಅಳಿಯನೆ ಆಗುವನು। ಸಕಲ ಲೋಕದ ತಾಯಿಮಗಳು। ಪ್ರಕಟಿಸುವನೆ ನಿನ್ನ ಪುಣ್ಯದ ಭಾಗ್ಯವ। ನಾನೇನ ಬಣ್ಣಿಸಲಿ ಇಂತೆಂದ।।12।। ನಾರದ ಕೊಂಡಾಡಿರಾಯನ ಇಂದ್ರ। ಲೋಕಕೆ ತಾ ಮುನಿ ಬಂದ। ಇಂದು ಮೌಳಿಯ ಮನದಲ್ಲಿ ಧ್ಯಾನಿಸುತ್ತ। ಆನಂದದಿ ಗಿರಿರಾಜನಿದ್ದ।।13।। ಕೇಳುತ್ತ ಪಾರ್ವತಿ ಬಹಳ ಸಂತೋಷದಲಿ। ತಾಯಿತಂದೇಗಭಿನಮಿಸಿ। ಸೋಮಶೇಖರನನ್ನು ತಪದಿಂದ ಒಲಿಸುವೆ। ಬೇಗದಿ ಎನ್ನನ್ನು ಕಳುಹು।।14।। ತುಪ್ಪ ಅನ್ನವನುಂಡು ಪಟ್ಟೆಮಂಚದೊಳಿರುವ। ಚಿಕ್ಕವಳಿಗೆ ತಪಸ್ಸುಂಟೆ। ಪುತ್ರಿ ನಿನ್ನನು ಬಿಟ್ಟು ಇರುವೆವು ನಾವ್ ಹೇಗೆ। ಅಟ್ಟಡವಿಯಲಿ ಹೇಗಿರುವೆ।।15।। ನಿರ್ಮಲಮನಸ್ಸಿನಲಿ ಭಜಿಸಿದಲ್ಲದೆ ಶಿವನು। ಸುಮ್ಮನೆ ನಮಗೊಲಿಯುವನೆ। ಈಗ ನಿನ್ ಅನುಜ್ಞೆಯ ಪಡೆದು ತಪಸ್ಸು ಮಾಡೆ। ಪನ್ನಂಗಧರನ ಮೆಚ್ಚಿಸುವೆ।।16।। ಹಾಲು ಅನ್ನವನುಂಡು ಹಾಸುಮಂಚದೊಳಿರುವ। ಬಾಲಕಿಗೆ ತಪಸುಂಟೇ। ಬಾಲೆ ನಿನ್ನನು ಬಿಟ್ಟು ಇರುವೆವು ನಾವ್ಹೇಗೆ। ಅರಣ್ಯದಲಿ ನೀ ಹೇಗಿರುವೆ।।17।। ಭಾವಭಕ್ತಿಗಳಿಂದ ಭಜಿಸಿದಲ್ಲದೆ ಶಿವನು। ಪ್ರೇಮದಲಿ ನಮಗೊಲಿವನೇ। ಈಗ ನಿಮ್ಮನುಜ್ಞೆಯ ಪಡೆದು ತಪಸುಮಾಡಿ। ಸೋಮಶೇಖರನ ಮೆಚ್ಚಿಸುವೆ।।18।। ಮಗಳಮಾತನು ಕೇಳಿತಲೆದೂಗಿ ಗಿರಿರಾಜ। ನರರೂಪಿನ ನಾರಿಯಲ್ಲ। ಹರನ ಶರೀರದ ಅರ್ಧಾಂಗಿ ಇವಲೆಂದು। ಮಗಳ ತಪಕೆ ಕಳುಹಿದನು।।19।। ಮಗಳಿಗೆ ಅಂಗರಕ್ಷಕ ಪರಿವಾರವ। ವನದ ಸುತ್ತಲು ನಿಲ್ಲಿಸಿದನು। ನಡೆದಳು ಪಾರ್ವತಿ ವನಕೆ ಸಂತೋಷದಲಿ। ಹರನ ಪಾದವ ಧ್ಯಾನಿಸುತ್ತ।।20।। ಮಿಂದಳು ನದಿಯಲ್ಲಿ ನಾರುಸೀರೆಯನುಟ್ಟು। ಅಂಗನೆ ಜಡೆಗಳ ನ್ಹೆಣೆದು। ಅಂಗನೆ ವಿಭೂತಿ ರುದ್ರಾಕ್ಷಿಗಳ ಆ। ನಂದದಲಿ ಧರಿಸಿದಳು।।21।। ಅಷ್ಟದಿಕ್ಕಿಗೆ ಕೈ ಮುಗಿದು ಸಂತೋಷದಲಿ। ನಿಷ್ಟೆಯಿಂ ತಪವನಿಶ್ಚಯಿಸಿ। ಮುಕ್ಕಣ್ಣ ಶಿವನ ಮೂರ್ತಿಯ ಧ್ಯಾನಿಸುತಲಿ। ಮಿತ್ರೆತಪಸ ಮಾಡಿದಳು।। ಚಂದ್ರಶೇಖರನ ಮೂರ್ತಿಯ ಧ್ಯಾನಿಸುತ। ಬಾಲೆ ತಪಸ ಮಾಡಿದಳು। ಅಂಗನ ಸಖರನ್ನು ಸಾಮೀಗರೆಂದು। ಅಂಗನೆ ಒಲಿದು ಮಾಡಿದಳು।।23।। ಬಂದನು ಒಬ್ಬ ರಕ್ಕಸ ಮಾಯಾರೂಪಿನಲಿ। ಅಂಗನೆಯಲಿ ನುಡಿದನು। ಚಂದುಳ್ಳ ಹೆಣ್ಣೆಂದು ಕೊಂಡ್ಹೋಗಿ ಎನ್ನಯ। ಅಂಗನೆಯನೆ ಮಾಡಿಕೊಂಬೆ।।24।। ಎಂದ ಅಸುರನ ನುಡಿಕೇಳಿ ಪಾರ್ವತಿ ಕಂಗಳ। ತೆರೆದು ನೋಡಿದಳು। ಎಂಥುಗ್ರ ದೃಷ್ಟಿಯಲಿ ನೋಡಲು ಅಸುರನು। ಬೆಂದು ಹೋದನು ಆಕ್ಷಣದಿ।।25।। ನೋಡಲು ಅಸುರನು ಬೂದಿಯಾಗಿ ಹೋಗಲು। ಪಾರ್ವತಿ ಮನದಲ್ಲಿ ಶಪಿಸಿ। ಯಾರು ಬಂದರು ಗಂಡು ಹೆಣ್ಣಾಗಲಿ ಎಂದು। ಮುಗುದೆ ತಾ ಶಪಿಸಿ ನುಡಿದಳು।।26।। ಇಂತೆಂದು ಶಾಪವ ಕೊಟ್ಟು ಕಂಗಳು ಮುಚ್ಚಿ। ನಿಂದಳು ತಪದ ನಿಷ್ಠೆಯಲಿ। ಆರು ತಿಂಗಳು ತಪವನ್ನು ಮಾಡಲು ಬಾಲೆ। ಫಾಲಲೋಚನ ತಾನರಿತು।।27।। ಪಾರ್ವತಿ ತಪದಿಂದ ಬಳಲಿದಳೆಂದು। ಬೇಗದಲಿ ಶಿವ ತಾ ಬಂದುದ। ನಂದಿ ಸಕಲ ಪರಿವಾರಗಳೆಲ್ಲವ। ಹಿಂದೇ ನಿಲ್ಲಿಸಿದ ನಾಕ್ಷಣದಿ।।28।। ಬಂದನು ತಾನೊಬ್ಬ ವಿಪ್ರವೇಶದಲಿ। ಅಂಗನೆಯನು ನುಡಿಸಿದನು। ಬಂದವನರಿಯದೆ ಭಾಮೆ ಕಂಗಳು ಮುಚ್ಚಿ। ನಿಂದಳು ತಪದ ನಿಷ್ಠೆಯಲಿ।।29।। ಅಂಗನೆ ಧ್ಯಾನಿಪ ಮೂರ್ತಿಯ ಸೆಳೆಯಲು। ಕಂಗಳು ತೆರೆದು ನೋಡಿದಳು। ನಾರಿನೀ ಏತಕ್ಕೆ ತಪಸನ್ನು ಮಾಡುವೆ। ಯಾರ ಚಿಂತಿಪೆ ಮನದಲ್ಲಿ।।30।। ನಿನ್ನ ಮನಸಿನ ಇಷ್ಟಾರ್ಥ ಬಯಕೆಗಳೇನೆಂದು। ಕೇಳಿದ ವಿಪ್ರನಗುತ। ಸೋಮಶೇಖರ ನನ್ನ ಪತಿಯಾಗಬೇಕೆಂದು। ನಿಂದೆನು ತಪದ ನಿಷ್ಟೆಯಲಿಲೆಂದ್ಲು।।31।। ಹುಚ್ಚೋ ಮರುಳೋ ಮಂಕೋ ಚಿಕ್ಕ ಬುದ್ಧಿಯೋ ನಿನಗೆ। ಚಿತ್ತದ ಭ್ರಮೆ ಹಿಡಿದಿತೆಯೋ। ಮುಕ್ಕಣ್ಣ ಶಿವನು ಏನು ಚೆಲುವನು। ಎಂದು ನೀ ಬಯಸಿದ್ದೆಯಮ್ಮ।।32।। ರೂಪಿಲ್ಲ ಗುಣವಿಲ್ಲ ಶ್ರೀಕಾರ ಮೊದಲಿಲ್ಲ। ಬೇಕೆಂಬೊ ಐಶ್ವರ್ಯವಿಲ್ಲ। ಪಿನಾಕಿಯ ಮದುವ್ಯಾಗಿ ಏನುಂಬೆ ಏನುಡುವೆ। ಕಾಂತೆ ನಿನಗೆ ಗುಣವಲ್ಲ।।33।। ಹರನ ಬೇಕೆಂಬೊ ಹೆಣ್ಮಕ್ಕಳ ನಾಕಾಣೆ। ಮರುಳೆ ನಿನ್ನೊಬ್ಬಳ ಕಂಡೆ। ನಗುವರು ನಿನ್ನ ಸಂಗಾತಿಯೆರೆಲ್ಲರು। ಬಿಡು ತಪವನ್ನು ಗುಣವಲ್ಲ।।34।। ಈ ಪರಿಶಿವನಿಂದೆ ನುಡಿಯಲು ಕಾಂತೆಗೆ। ಕೋಪ ಉಕ್ಕುತ

ಒಡಲೊಳಗೆ। ಪಿನಾಕಿಯ ಮಹಿಮೆಯ ನೀನೇನು ಬಲ್ಲೆಯೋ। ಸಾಕುಬ್ರಾಹ್ಮಣನೆ ಹೋಗೆಂದ್ಲು।।35।। ತೆತ್ತಸಕೋಟೀ ದೇವತೆಗಳೆಲ್ಲರು ಶಿವನ। ಹತ್ತಿರ ನಿಂತು ಓಲೈಸುವರು। ಪ್ರತ್ಯಕ್ಷ ಶಿವನ ಮಹಿಮೆ ನೀನೇನರಿತಿಹೆಯೋ। ಮಂದಮತಿಯೆ ಹೋಗೆಂದಳು।।36।। ಮಿತ್ರೆ ತಾನುಡಿದಳು ನೀ ವಿಪ್ರನೆಯ ಬಿಟ್ಟೆ। ಮತ್ತೊಬ್ಬರಾದರೆ ಈಗ। ತಕ್ಕಬುದ್ದಿಯನ್ಹೇಳಿ ಶಿಕ್ಷಿಸಿ ಕಳುಹುವೇ। ಇಷ್ಟರಲ್ಲಿಯೆ ಹೋಗೆಂದಳು।।37।। ನೋಡಿದ ಶಿವತಾನು ಪಾರ್ವತಿ ಮನಭಕ್ತಿಗಳನ್ನು। ಬೇಗದಿ ಶಿವ ಕೈ ಹಿಡಿದ। ನಡುಗುತ್ತ ನಡುಗುತ್ತ ಅಂಜುತಲಿರೆ ಬಾಲೆ। ತೋರಿದನೆ ನಿಜರೂಪವನ್ನು।।38।। ಜಾನ್ಹವಿ ಜಡೆಯಲ್ಲಿ ಫಾಲರು ಚಂದ್ರರು। ಮೂರು ಕಣ್ಣುಮುಖಕಾಂತಿ। ನೀಲಕಂಠನು ಚತುರ್ಭುಜ ಮೂರುತಿಯ। ಬಾಲೆಗೆ ಶಿವತೋರಿಸಿದ।।39।। ಬಿಡಿಸಿದ ಜಡೆ ನಾರು ಸೀರೆಯ ಶಿವತಾನು। ಕೊಡಹಿದನೇ ಮೈಯಧೂಳು। ತೊಡಸಿದ ಸರ್ವಾಭರಣವ ಗೌರಿಗೆ। ಉಡಿಸಿದ ದಿವ್ಯಾಂಬರವ।।40।। ಗೌರಿ ಬಳಲಿದಳೆನುತ ಗಿರಿಜೆಯ ಶಿವ ತಾನು। ತನ್ನ ತೊಡೆಯ ಮೇಲೆ ಆಗ। ಕುಳ್ಳಿರಿಸಿ ಕೊಳ್ಳಲು ನಂದಿ ಸಮಸ್ತರು। ಕರೆದರು ಹೂವಿನ ಮಳೆಯ।।41।। ಕಾಮಧೇನು ಕಲ್ಪವೃಕ್ಷವು ತುಂಬರ। ನಾರದ ರಂಭೆಊರ್ವಶೀರು। ದೇವೆಂದ್ರರು ಅಷ್ಟದೊರೆಗಳು ಋಷಿಗಳು। ವಿವಾಹಕ್ಕೆ ಬಂದರಾಕ್ಷಣದಿ।।42।। ಮುನ್ನೂರು ಮುಕ್ಕೋಟಿ ದೇವತೆಗಳೆಲ್ಲರು। ಬ್ರಹ್ಮದೇವರ ಸಹಿತಾಗಿ। ಪನ್ನಂಗಧರನ ಮದುವೆಯ ನೋಡಲು ಬರಲು। ಉನ್ನಂತ ಸಕಲ ಸಂಭ್ರಮದಿ।।43।। ಪಾರ್ವತಿಗೆ ಶಿವ ಒಲಿದನು ಎಂದ್ಹೇಳಿ। ಬೇಗದಲಿ ಗಿರಿರಾಜಗುರುಹೇ। ಬಹಳ ಸಂತೋಷದಲಿ ಬಂದನು ಗಿರಿರಾಜ। ದೇವನಂಘ್ರಿಗೆ ನಮಿಸಿದನು।।44।। ಭಕ್ತವತ್ಸಲ ಕರುಣಾಕರ ಶಂಕರ। ರಕ್ಷಿಸಬೇಕು ನಮ್ಮಿಸಗ। ಭಕ್ತಿಯಿಂದಲಿ ಗಿರಿರಾಜ ಸ್ತುತಿಸಲು। ಅರ್ತಿಯಿಂ ಶಿವಮನ್ನಿಸಿದ ।।45।। ಚಂದ್ರಶೇಖರ ಪಾರ್ವತಿ ಸಹಿತ। ಹೊನ್ನಂದಣವನೇರಿದರು। ಭೋರೆಂಬವಾದ್ಯಸಹಿತ ಮುತ್ತೈದೆಯರು ಪಾಡುತ್ತಾ। ಬಂದರು ಮಾವನಮನೆಗೆ।।46।। ಬಾಗಿಲಲ್ಲಿ ಶಿವಪಾರ್ವತಿಯ ಪಾದವ ತೊಳೆದು। ಆರತಿಗಳನೆತ್ತಿದರು। ಆರತಿಗಳನೆತ್ತೆ ವೇದಮಂತ್ರಗಳಿಂದ। ದೇವ ಬಂದನು ಮಂಟಪಕೆ।।47।। ಎಡದಲ್ಲಿ ಶ್ರೀವಿಷ್ಣು ಬಲದಲ್ಲಿ ಬ್ರಹ್ಮನು। ನಡುವೆ ಶಂಕರನು ಕುಳ್ಳಿರಲು। ಸುರನರರಾದಿಗಳೆಲ್ಲ ಚಾಮರವ ಬೀಸುತಲಿರೆ। ಹರನು ಕುಳ್ಳಿರ್ದಾಕ್ಷೀವಿಯಲಿ।।48।। ನವರತ್ನ ಪೀಠದಿ ಹರಬಂದು ಕುಳ್ಳಿರೆ। ಗಿರಿರಾಜಮೇನದೇವಿ ಸಹಿತ। ಹರನ ಪಾದಂಗಳ ತೊಳೆದು ಪೂಜಿಸಿದರು। ಶಿರದಲ್ಲಿ ತೀರ್ಥವಕೊಂಡು।।49।। ತೆತ್ತಸಕೋಟಿ ಸೂರ್ಯಪ್ರಕಾಶದಿ। ಇಟ್ಟ ಆಭರಣಾವು ಹೊಳೆಯೇ। ಕಟ್ಟಿದ್ದ ಭಾಷಿಂಗ ಕಯ್ಯ ಕಂಕಣದಿಂದ। ಒಪ್ಪಿದ ಶಿವ ಹಸೆಮೇಲೆ।।49।। ಮುಡಿದ ಹೂವಿನ ಜಡೆ। ಹರಳೋಲೆಗೊಂಡೆಯು। ಕಡಗ ಕಂಕಣ ಒಪ್ಪುತಿರಲು। ಉಭಯರವಿಕೋಟಿ ಹೊಳೆದಂತೆ ಪಾರ್ವತಿ। ಹರನ ಸನ್ನಿಧಿಯ ಲೊಪ್ಪತಿರಲು।।50।। ಮಾಡಿದರು ಮಧುಪರ್ಕದಿ ಪೂಜೆಯ। ಆಭರಣವು ಸಕಲ ಸಂಭ್ರಮದಿ। ಪೂಜಿಸಿಶಿವನ ಪಾರ್ವತಿಯ ಅಲಂಕರಿಸಿ। ಧಾರೆಯನೆರೆದರು ಶಿವನಿಗೆ।।51।। ಚಿಕ್ಕವಳು ನಮ್ಮ ಅರಿಯದ ಬಾಲೆ। ರಕ್ಷಿಸಬೇಕು ಪಾರ್ವತಿಯ ಪುತ್ರಿಯಧಾರೆಯೆರೆದರು ಶಿವನಿಗೆ। ಉತ್ಸಾಹ ಸಕಲ ಸಂಭ್ರಮದಿ।।52।। ಪಂಚಭಕ್ಷ ಪಾಯಸಘೃತ ಮೃಷ್ಟಾನ್ನವ। ಮಾಡಿ ಮಕ್ಕಳೆಲ್ಲರು ಸಂಭ್ರಮದಿ। ಚಿತ್ರಾನ್ನಪಾಯಸ ಗಳಿಂದ ವಿಪ್ರರ ದಣಿಸಿ। ಕೊಟ್ಟನು ವೀಳ್ಯದಕ್ಷಿಣೆಯ।।53।। ಈ ಪರಿ ನಾಲ್ಕು ದಿವಸ ಸಂತೋಷದಲಿ। ಅನೇಕ ಉತ್ಸವ ಮಾಡಿಸಿದ। ಪಿನಾಕಿಗೂ ಗೌರೀಗೂ ನಾಗವಲ್ಲಿಯ ಮಾಡಿ। ಬೇಕೆಂಬೋ ಉಡುಗೊರೆ ಇತ್ತು।।54।। ಭಾಮೆಯರಿಗೆ ಮರದ ಬಾಗಿನಗಳ ಕೊಟ್ಟು। ಬಂದವರನು ಮನ್ನಿಸಿದ। ಕದಳಿ ತೆಂಗಿನಕಾಯಿ ಪದುಮಸಂಪಿಗೆ ಹೂವು। ಅರಳು ಮಲ್ಲಿಗೆ ವೀಳ್ಯವನ್ನು।।55।। ಪರಮೇಶ್ವರನಿಗೆ ಕಾಣಿಕೆ ಇತ್ತರು। ನಿಜಭಕ್ತರೆಲ್ಲ ವಂದಿಸುತ। ಪೀತಾಂಬರದ ಸೆರಗಿನ ಸೀರೆಗಳು। ನೂತನ ದಿವ್ಯಾಂಬರವ।। ಪ್ರೀತೀಲಿ ನಾರಾಯಣರು ಓದಿಸಿದರು। ಸುಪ್ರೀತಶಿವನಿಗೆ ಸಂಭ್ರಮದಿ। ಸಣ್ಣ ಅಂಚಿನ ಉನ್ನತ ದಿವ್ಯಾಂಬರವ। ಬ್ರಹ್ಮದೇವರು ಓದಿಸಿದರು।।56।। ನಿರ್ಮಲಶಿವಗೂ ಪಾರ್ವತೀಗೂ। ಅಷ್ಟದಿಕ್ಕಿನ ರಾಯರುಗಳು। ನಿಷ್ಠೆಯಿಂ ತಪಗೈವ ಋಷಿಗಳು ಪಟ್ಟಾ।ವಳಿಯ ಜವಳಿಯ ನೋದಿಸಿದರು।।57।। ಪ್ರತ್ಯಕ್ಷ ಶಿವಗೂ ಪಾರ್ವತಿಗೂ ಮಿತ್ರೆ। ಮೇನೆ। ತಾನೇ ಮುತ್ತಿನ ಹಸೆ ಇಟ್ಟು। ತಟ್ಟೇಲಿ ಹೊಸ ಮುತ್ತ ತುಂಬಿ ಪಟ್ಟೆಯನುಡಿಸಿ। ಬಟ್ಟನಿಟ್ಟು ಮುತ್ತಮಡಿಲ ತುಂಬಿದಳು।।58।। ಗಿರಿರಾಜನರಸಿ ತಾನು ಹರುಷದಿಂದಲೆ ಬಂದು। ಮಗಳಿಗೆ ಬುದ್ಧಿ ಹೇಳಿದಳು। ಅಪ್ಪಿಕೊಂಡು ಮುದ್ದಾಡಿ ಬುದ್ಧಿಯನ್ಹೇಳಿ। ಮಿತ್ರೆ ಮೇನೆ ಗಿರಿರಾಜ।।59।। ಅಕ್ಕ ಪಾರ್ವತಿ ನಿನ್ನ ಬಿಟ್ಹೇಗೆ

ಇರುವೆವು। ಅರ್ತಿಯಿಂದಲೆ ಬಂದವಳು। ಇಡಿದರಿಸಿನ ಬಣ್ಣ ಭಂಡಾರದ ಸ್ತವು। ಮಗಳಿಗೆ ಬಳುವಳಿಕೊಟ್ಟು।।60।। ರಜತಗಿರಿಯ ಕೈಲಾಸಕ್ಕೆ ಬಂದರು। ಗೃಹದ ಪ್ರವೇಶದುತ್ಸವದಿ। ಅಲ್ಲಲ್ಲೆ ದೇವ ಪತ್ನಿಯರು ಆರತಿಯೆತ್ತಿ। ಮಲ್ಲಿಕಾರ್ಜುನಗೂ ಪಾರ್ವತಿಗೂ।।61।। ಹೋದಲ್ಲಿ ದೇವ ಪತ್ನಿಯರಾರತಿ ಎತ್ತಿ। ಚಂದ್ರಶೇಖರಗೂ ಪಾರ್ವತಿಗೂ। ನಿಂದನೆ ಕೈಲಾಸಗಿರಿಯಲ್ಲಿ ನಂಜುಂಡ। ಅಂಗನಿದ್ದನು ಹರುಷದಲಿ।।62।। ಅಂತಕಾಂತನು ಬಂದು ಕಂತುಹರನು ಬಂದ। ಶಂಕರಶಿವತಾನು ಬಂದ। ಕಾಂತೆ ಪಾರ್ವತಿ ಅರಸ ಬಂದನು ಎಂದ್ಹೇಳಿ ಆ। ನಂದದಿ ಕಹಳೆಯ ನೂದಿದರು।।63।। ನಂದಕಂದನು ಬಂದ ಇಂದ್ರವಂದಿತ ಬಂದ। ಚಂದ್ರಶೇಖರ ತಾನೇ ಬಂದ। ಅಂಬಿಕೆದೇವಿಯ ಅರಸ ಬಂದನು ಎಂದ್ಹೇಳಿ। ಆನಂದದಿ ಕಹಳೆಯ ನೂದಿದರು।।64।। ಸಾರಾವಳಿಯ ಸೀರೆ ಹೂವಿನ ಸರವನ್ನು। ಬೇಗದಿ ಶಿವತರಿಸಿದನು। ಲಕ್ಷ್ಮೀದೇವಿಗೆ ಸರಸ್ವತೀಗೆ ಇತ್ತರು। ಉತ್ಸಾಹ ಸಕಲಸಂಭ್ರಮದಿ।।65।। ಮುತ್ತೈದೆ ಹೇಳಿದರೆ ಇಟ್ಟೋಲೆಸ್ಥಿರವಕ್ಕು (ವಹುದು)। ಅಕ್ಕಿಲ್ಲದವರು ಹೇಳಿದರೆ। ಲಕ್ಷ್ಮೀಯು ಬರುವ್ಹೋಳು ಬಡವರು ಹೇಳಿದರೆ। ಹೆಚ್ಚಿನ ಧನ ಸೇರುವುದು।।66।। ಬರಡೆ ಹೇಳಿದರೆ ಕೂಸನೆತ್ತಿಕೊಳ್ಳುವಳು। ಹೇಳವರ್‍ಹೇಳಿದರೆ ನಡೆವರು। ಮದುವಿಲ್ಲದವರು ಹೇಳಿದರೆ ವಿವಾಹವು। ಒದಗುತ್ತ ಕಂಕಣಬಹುದು।।67।। ಸೋಮವಾರ ಶಿವರಾತ್ರಿ ಅಮಾವಾಸ್ಯೆ। ಪೌರ್ಣಮಿ ಪಾಡ್ಯ ದಿನಗಳಲ್ಲಿ। ಸೋಮಶೇಖರನ ವಿವಾಹವ ಪೇಳಲು। ಬೇಡಿದಿಷ್ಟಾರ್ಥ ಸಿದ್ಧಿಪುದು।।68।।

ಬಾರೇ ಶ್ರೀ ಗೌರಿ ಶೃಂಗಾರಲಹರಿ (ಗಿರಿಜಾಕಲ್ಯಾಣ)

ಬಾರೇ ಶ್ರೀ ಗೌರಿ ಶೃಂಗಾರಲಹರಿ ಬಾರೆ ಬಾಬಾ ಹಸೆಗೆವಯ್ಯಾರಿ। ಬಾರೆ ಪಾಪ ವಿದಾರಿ ಶೌರಿ। ಸಹೋದರಿ ಬಾರೆ ಮುನಿ ಮಾನಸ ಕಾಂತಮಯೂರಿ।।ಪ।। ಹಿಂದೆ ದಕ್ಷಗೆ ನೀ ನಂದನೆ ಶಿವನಿಗೆ ಸುಂದರಿಯಾಗಿರಲು ಪೊಂದಿ ಗರ್ವವನು। ಕರೆಯದಿಂದು ಮೌಳಿಯ ತಾ ಒಂದು ಯಾಗವಗೈಯಲು ಅಂದು ತಾನೀ ಮನನೊಂದು ಯಾಗಕುಂಡದೆ ಬೆಂದು ಪೋಗಲು ಶಿವನಂದು ಕೋಪವತಾಳಿ ಕೊಂದು ದಕ್ಷನ ಮೇನೆಯ ಬಸುರಿಂದ ನೀಂಬರೆ ಮದುವೆಯಾಗುವೆನೆಂದು। ವರವನ್ನೊಂದು ಪಾಲಿಸುತಿಂದು ಮದುವೆಗೆ ಬಂದಿರುವನು।। ತಾರಕ ಸಿಂಹಾಸ್ಯ ಶರಣ ಪದ್ಮರೆನ್ನುವ ಘೋರ ದೈತ್ಯರ ಭಾದೆಯ ಸೈರಿಸಲಾರದೆ ಶೌರಿಗೆ ಪೇಳಲು ಸೇರಿ ಸುರಸಂತತಿಯ ವಾರಿಜಾಸನ ಗುರು ವರದೇವೇಂದ್ರನ ಸಾರೆ ಕೈಲಾಸಪತಿ ದೂರ ಶಂಕರನಿಗೆ ಗಾರುಗೊರೆ ವರಿದೇಕೆ ಗಿರಿಜೆಯ ಸೇರಿ। ಷಣ್ಮುಖರಿಂದ ರಿಪು ಸಂಹಾರಗೈಸುವೆನೆಂದು ವರನವನೇ ಬಂದಿರುವನು ।। ರಕ್ಷಿಸಿ ಲೋಕವನಾಕ್ಷಣಯೋಚಿಸಿ ದಕ್ಷಿಣಮೂರ್ತಿಯಾಗಿ ಅಕ್ಷಮಾಲಿಕೆಯು ರುದ್ರಾಕ್ಷಿ ಜಪಭಸ್ಮ ಪ್ರೋಕ್ಷಣೆಯುಳ್ಳವನಾಗಿ ತಕ್ಷಣವೇ ವಟವೃಕ್ಷ ಮೂಲದೊಳಿರೆ ಪಕ್ಷಿವಾಹನ ನಾಜ್ಞೆವಶನಾದ ಕಾಮು ಶ್ರೀಷ ರಕ್ಷೆಯ ತೊರೆದವಗೆ ಶರವಾಕ್ಷಣಾರ್ಧದಿ ಬಿಡು ಸುಡುತೆ ನಿಟಿಲಾಕ್ಷ ಇನ್ನುಗುತಾಹಿದು ಕಾಮಾಕ್ಷಿ ನಿನ್ನ ವಿವಾಹಲೋಸುಗ।। ರತಿಯು ಗೋಳಿಡೆ ನಿನ್ನ ಪತಿ ಸಂಗನಾಗಲಿ ಸುತೆ ನಿನಗೆಂದೆನುತ ಅತಿಶಯವರವ ನೀಯುತ ಸಂತೋಷದಿ ಮತಿಯೊಳು ಯೋಚಿಸುತ ಯತಿಗಳ ಕರೆದು ಪೋಗುತ ಹಿಮವಂತನ ಸುತೆಯ ಶಿವನಿಗೀಯುವುದೆನ್ನುತ ಕೇಳಿ ಬಹದೆನೆ ಗತಿ ನಿದಾನವ ತೊರೆದು ಬರೆ ಮುನಿತತಿಗಳಿರವನು ಭಾವಿಸುತೆ ಸಮ್ಮತಿಸೆ ಪೋಗುವರು ನಿರೆ ತಾನೈದುತಲೆ ಲಗ್ನವ ನೋಡುತಿರುವನು।। ಹರಿ ವಿಧಿ ಗುರು ಸುರವರ ಮುನಿ ನಾರದ ಗರುಡ ಕಿನ್ನರ ಯಕ್ಷರು ಉರಗ ಗಂಧರ್ವ ಭೂಸುರ ವಿದ್ಯಾಧರ ವರರೈದಿ ನೆರೆದಿಹರು ಸುರಸತಿಯರು ತಾ ವಾತುರವಾಂತು ನರ್ತಿಸುತಿರುವರು ಮುತ್ತೈದೇರು ಪಾಡಿ ನಲಿಯುತ ಭರದಿಪೂಮಳೆ ಸುರಿಯೆ ದುಂದುಭಿ ಮೊರೆಯೆ ವಾದ್ಯದ ಧ್ವನಿಯು ಸರ್ವ ಕರೆಯೆ ಗಿರಿಜೆಯ ಮದುವೆಯೆನ್ನುತ ಹರುಷವಾನುತ ಪರಿಣಯಕೆ ನೀ ಬಾರೆ ಶ್ರೀಗೌರಿ।।

ಸರ್ವಮಂಗಳ ಮಾಂಗಲ್ಯೆ ಶಿವೆ (ಪಾರ್ವತಿ ಕಲ್ಯಾಣ)

ಸರ್ವಮಂಗಳ ಮಾಂಗಲ್ಯೆ ಶಿವೆ ಸರ್ವಾರ್ಥ ಸಾಧಕೇ ಶರಣ್ಯ ತ್ರಯಂಬಕೇ ದೇವಿ ನಾರಾಯಣಿ ನಮೋಸ್ತುತೇ।। ಸರ್ವೇಶ್ವರನು ಸರ್ವಲೋಕದೊಳಿದ್ದು। ಮಾಡುತಿರೆ ಲೀಲೆಯನು ಅಂಬೆಯ ರೂಪದಲಿ। ಜಗದಂಬೆ ತಾನಾಗಿ ಸರ್ವಶಕ್ತೀ ಪ್ರದಾಯಿನಿ। ಸರ್ವಕೀಟ ಭೂತ ಸರ್ಪ ದೋಷಗಳಿಂದೆ। ಕಾಯುತಲಿ ಭಕ್ತರನು।।1।। ನಂದೀಶ್ವರನು ಕೇಳೆ

ಆನಂದದಲಿ ತಾನು। ಪೇಳೆ ಹರನು ಅದನು ಮತ್ತೆ ಪೇಳಲಾಯ್ತು। ಸೂತ ಪುರಾಣಿಕರಿಂದೆ ಶೌನಕರಿಗೆ ಮುದದಿ। ಪಾರ್ವತಿ ಕಲ್ಯಾಣವೆಂಬ ಶುಭಕಥೆಯ। ಮಾತೆ ಜಗದಂಬೆ ಒಲಿಯೆ ಭಕ್ತರಿಗೆ॥2॥ ಬ್ರಹ್ಮಪುತ್ರ ದಕ್ಷನ ಅರವತ್ತು ಕುವರಿಯರಲ್ಲಿ। ಸ್ವಾದಾ ದೇವಿಯನು ಪಿತೃಗಳಿಗಿತ್ತು। ಪಡೆದರವಳಿಂದೆ ಮೂರು ಕುವರಿಯರ॥ ಮೇನಾ, ಧನ್ಯಾ, ಕಲಾವತಿ ಎಂಬ ನಾಮದಲಿ। ಮಾಡುತಿರೆ ಶ್ರೀಹರಿಗೆ ಸೇವೆಯನು ವೈಕುಂಠದಲಿ ಭಕ್ತಿಯಲಿ॥3॥ ಸನಕಾದಿ ಮುನಿವರರು ಬರಲೊಂದು ದಿನ ವೈಕುಂಠಕೆ। ಎಲ್ಲರಂದದಲಿ ನಿಂದು ನಮಿಸದ। ಈ ಮೂರು ಕುವರಿಯರ। ಶಪಿಸಿದರು ನಿಮಗೆ ವೈಕುಂಠವಾಸ ದೂರಾಗಲೆಂದು। ಅದುವೆ ವರವಾಯ್ತು ಲೋಕಕಲ್ಯಾಣ ಶುಭಕಥೆಗೆ॥4॥ ಮೇನಾದೇವಿ ಹಿಮಾಲಯನ ಸತಿಯಾಗಿ। ಪಡೆದಳು ಜಗದಂಬೆಯನು ಕುವರಿ ಪಾರ್ವತೀಯೆಂದೆನುತ। ಧನ್ಯಾಮಿಥಿಲೆಯರಸನ ವರಿಸಿ ಪಡೆದಳು ಲಕ್ಷ್ಮಿಯನು ಸೀತೆಯಾಗಿ। ಕಲಾವತಿಯು ವೃಷಭಾನು ಅರಸನಿಂದಲಿ। ಪಡೆದಳು ಲಕುಮಿಯ ರಾಧೆಯಾಗಿ॥5॥ ಮಾತೆ ಸೀತೆಯು ಶ್ರೀರಾಮನನುವರಿಸೆ ರಾಧೆ ವರಿಸಿದಳು ಶ್ರೀಕೃಷ್ಣನನ್ನು। ಮತ್ತೆ ದಾಕ್ಷಾಯಿನಿ ಮಾತೆ। ಪಾರ್ವತಿಯು ಎಂದೆನುತ। ವಧುವಾದಳು ಹರಗೆ। ಪಡೆಯಲು ಪುತ್ರನನು ತಾರಕಾಸುರನ ಸಂಹಾರಕ್ಕಾಗಿ। ಲೋಕಕಲ್ಯಾಣಕೆಂದೆನುತ॥6॥ ತಾರಕಾಸುರನು ಪಡೆಯೆ ವರವನ್ನು। ಬ್ರಹ್ಮನಿಂದೆ ಬಾಲಕನಿಂದಲಿ ಮಾತ್ರಮರಣವೆಂದೆನುತ। ಅಸುರನಾಗ ಬಹುವಾಗಿ ಘಾತಿಸಲು ಲೋಕಗಳ। ಬೇಡಿದರು ದೇವತೆಗಳೆಲ್ಲರೂ ಆದಿಶಕ್ತಿಮಾತ ಸಿಂಹವಾಹಿನಿ ದೇವಿಯನು ಭಕ್ತಿಯಲಿ॥7॥ ಬಂದು ನಿಂತಳು ದೇವಿ। ಸಹಸ್ರ ಕರ, ಶಿರ, ಆಯುಧಗಳಿಂದ ಒಪ್ಪುತಲಿ। ರುಂಢಮಾಲೆಯ ಧರಿಸಿ। ಸ್ವರ್ಣಕಿರೀಟಧಾರಿಣೀ। ಜಗದಂಬೆ ರಾಜರಾಜೇಶ್ವಿರಿಯು ಇತ್ತಳು ಅಭಯವನು ಸುರರಿಗೆ। ತಾಬಂದು ವರಿಸೆ ಹರನ ಪಾರ್ವತೀ ಎಂದೆನುತ॥8॥ ಆ ಕ್ಷಣದೆ ಒಪ್ಪಿರಲು ಪರ್ವತನು ನಾರದರಾಣತಿಯಂತೆ। ತಾನು ವಿವಾಹಕೆ ಸಮ್ಮತಿಸೇ ಘೋರ ತಪದಿಂದೆ ವರಸಿದ್ಧಿ ಪಡೆದಂತ ಕುವರಿ ಮೇನಾದೇವಿ ಒಪ್ಪಿದಳು ಪರ್ವತನ ರಾಣಿಯಾಗೆ।ಲೋಕಮಾತೆಗೇ ಮಾತೆಯಾಗಿ ಲೋಕ ಕಲ್ಯಾಣಕೆಂದು॥9॥ ದಾಕ್ಷಾಯಿನಿಯು ದೂರಾಗೆ ಮನನೊಂದ ಹರತಾನು ಇರಲು ಕೈಲಾಸದಲಿ ತಪವ ಪಿಡಿದು। ಬೇಡಲು ಸರ್ವದೇವ ಋಷಿಗಳು। ಒಪ್ಪಿದನು ಬಂದಿಳಿದು ನೆಲೆಸೆ ಧರೆಯಲ್ಲಿ। ಹಿಮಗಿರಿಯಲಿ ಮತ್ತೆ ವರಿಸಲು ಪಾರ್ವತಿಯ। ಪರಶಿವನು ತಾನು॥10॥ ನಾರದರು ಪೇಳಲಾಕ್ಷಣದೆ ಸುರರು ಬೇಡಿದರು ಮಾರನನು ರತಿಸಹಿತ ತಾಪೋಗಿ ತಪಗೈಯುತಿಹಹರನ। ವರಿಸುವಂದದಿ ಮಾಡಿ ಪಾರ್ವತಿಯ। ಪಡೆದವರಿಂದೆ ಕುವರನನು ತಾರಕನ ಕೊನೆಗೊಳಿಸಿ। ತರಲು ಸಂತಸವ ಲೋಕದಲ್ಲಿ॥11॥ ಮಾತಾಪಿತರು ಒಪ್ಪಿರಲು ಪಾರ್ವತಿಯು ಹಿಮಗಿರಿಯಲ್ಲಿ ನೆಲಸಿಹ ಪರಶಿವಗೆ ಸೇವೆ ಗೈಯುತಲಿರಲು। ಮನ್ಮಥನ ರತಿ ಸಹಿತ ಘಾತಿಸೆ ಕಾಮ ಬಾಣವನು ಹರನ ಮೇಲೆ ಆ ಕ್ಷಣದೆ ಲಲಾಟಾಕ್ಷಿಯಿಂದೆ ಭಸ್ಮಗೈದನು ಮನ್ಮಥನ ಹರನು॥12॥ ಕಂಡು ಪಾರ್ವತಿಯ ಹರನು। ವಿಪ್ರನ ವೇಷದಲಿ ಬಹುವಾಗಿ ನಿಂದಿಸಿದ ಕೈಲಾಸಗಿರಿ ಹರನ। ಎಷ್ಟು ಪೇಳಿದರೇನು ಅಚಲ ದೃಢ ನಿರ್ಧಾರ ಮನದ ಪಾರ್ವತಿಯ ಕಂಡ ಹರನು। ಶಿವಶಂಕರನೇ ತನ್ನ ಪತಿಯೆಂದು ನೆನೆದು ಪಾರ್ವತಿಯ॥13॥ ಮತ್ತೆ ಒಪ್ಪಿರಲು ಶ್ರೀಹರನು। ಸಂತಸದೇ ಕೇಳಿದಳು ಹರಗೆ। ಮಾತಾಪಿತರನು ಕನ್ಯಾದಾನವ ಬೇಡೆನಲು ಒಪ್ಪಿದನು ಹರನು। ಕುವರಿ ಪಾರ್ವತಿಯ ಕಂಡು ಅರಮನೆಯಲ್ಲಿ ಸಂತಸದೆ ಒಪ್ಪಿದರು। ಪಾರ್ವತಿಯ ಶಿವನಿಗೆ ಕನ್ಯಾದಾನವನು ಮಾಡೆ ಸಂತಸದೆ॥14॥ ಕರೆಸಿದನು ಪರ್ವತನು ಕುಲಪುರೋಹಿತ। ಗರ್ಗಮುನಿಯನ್ನು ನಾರದರೊಡಗೂಡಿ ಬರೆಸೆ ಶುಭಲಗ್ನಪತ್ರಿಕೆಯ। ಸರ್ವದೇವತೆಗಳಿಗೆ ಕಳುಹಿ ಪತ್ರಿಕೆಯ। ಬೇಡಿದರು ಹರನ, ಬರಲು ದೇವಋಷಿ ಗಣಂಗಳ ಸಹಿತ। ಶುಭಕಲ್ಯಾಣ ವೆಂದೆನುತ॥15॥ ವಿಶ್ವಕರ್ಮನು ನಿರ್ಮಿಸಲು ಲಗ್ನ ಮಂಟಪವ ವೈಭವದಲಿ। ಸುರ, ಶಿವ ಗಣಂಗಳು ಮಾಡೆ। ವರ್ಣ ಪುಷ್ಪಾಲಂಕಾರವನು ಅದಕೆ। ಪಕ್ಷಿ ವಾಹನನಾಗಿ ಹರಿಯು ಲಕುಮಿಯ ಸಹಿತ ಬ್ರಹ್ಮಶಾರದೆಯು ನಂದಿವಾಹನ ಸುಂದರೇಶನು ಬರಲು ಆನಂದದಿಂದೆ॥16॥ ಸ್ವಾಗತಿಸೆ ದೇವದಿಬ್ಬಣವ ಲಕುಮಿ-ಶಾರದೆಯು ಅಲಂಕರಿಸೆ ಪಾರ್ವತಿಯ। ವಿಭೂತಿ, ಕುಂಕುಮ, ಗಂಧ, ಪುಷ್ಪಗಳಿಂದೊಪ್ಪುತಲಿ। ಹರನ ಪೂಜಿಸಿ ಶಿವೆಯು ಕೊಡಲು ಬಾಗಿನ ಅರಿಶಿನ ಕುಂಕುಮವ ಸುಮಂಗಲಿಯರಿಗೆ ನಮಿಸಿ ಆನಂದದಿಂದೆ॥17॥ ಗರ್ಗಮುನಿ ಕೂಡೆ ನಾರದರು ಮಾಡುತಿರೆ ಮಂತ್ರ ಘೋಷವನು ಶ್ರೀಹರಿಯೂ ಬ್ರಹ್ಮನೂ ನಿಂದಿರಲು ಮಂಟಪದಿ

ಮಂಗಳ ವಾದ್ಯಗಳು ಮೊಳಗುತಿರಲು। ಪುಷ್ಪ ವೃಷ್ಟಿಯಾಗುತಿರೆ ಕಟ್ಟಿದನು ಪರಶಿವನು ಪಾರ್ವತಿಗೆ ಮಾಂಗಲ್ಯವನ್ನು॥18॥ ಸಂತಸದೆ ದೇವ ದಿಬ್ಬಣವೆಲ್ಲ ಹೊರಡಲು ನಂತರದೆ ಪರಶಿವನಾಣತಿಯಂತೆ ಪಾರ್ವತಿಯು ಕೊಡಲೊಂದು ಶಿಶುವ ಧರಣಿಗೆ। ಅವಳೀಯೆ ಕೃತ್ತಿಕಾದಿ ಆರು ಕನ್ಯೆಯರಿಗೆ ಶಿಶುವ। ಉಣಿಸಲವರು ಕ್ಷೀರವನು ಶಿಶುಪೊಂದಿತಾಗಲೇ ಆರುಶಿರವ। ಆರು ಮುಖನೆಂದೆನುತ॥19॥ ಇತ್ತಲಾಗಲೆ ತಾರಕಾಸುರನರಿತು ಇದನು। ಹೊರಟನಾಕ್ಷಣದಲ್ಲೆ ಅಸುರ ಸೇನೆ ಇಂದೆ। ಇತ್ತಲೋಕಮಾತೆಯ ಕೊಡಲು ಶಕ್ತ್ಯಾಯುಧವನ್ನು ಪುತ್ರ ಸ್ಕಂದನಿಗೆ। ಹೊರಟರಾಗಲೆ ಸುರ ಸೇನೆಯಿಂದೊಪ್ಪುತಲಿ। ತಾರಕನ ಸಂಹರಿಸೆ ಲೋಕಕಲ್ಯಾಣ ವೆಂದೆನುತ॥10॥ ಘೋರಕದನವಾಗುತಿರೆ ಸುರಾಸುರರಿಗೆ। ತಲ್ಲಣಿಸಿದವು ಈರೇಳು ಲೋಕಗಳು। ಪಾರ್ವತಿಯು ನಿಲ್ಲೆ ಸರ್ವಶಕ್ತಿಮಾತೆ ರೂಪದಲಿ ಆರು ಮುಖನಾದ ಶಕ್ತಿಮಾತೆ-ಶಿವಕುವರ ಬಿಟ್ಟನಾಗಲೆ ಶಕ್ತ್ಯಾಯುಧವ ಹತನಾದ। ತಾರಕನು ಕೊನೆಗೆ॥21॥ ಸರ್ವದೇವತೆಗಳೆಲ್ಲ ಪುಷ್ಪವೃಷ್ಟಿಯ ಗರೆಯೆ। ಮಾತೆಯೊಡಗೂಡಿ ಕುವರ ಶಣ್ಮುಖನು ಆನಂದದಲಿ ಸರ್ವಲೋಕಗಳು ಬೇಡಿರಲು। ನಿಂದಳು ಶಕ್ತಿಮಾತೆ ಸರ್ವಆಯುಧ ಘೋರ ರೂಪದಿಂದಲಿ। ಸಿಂಹವಾಹಿನಿ ಯಾಗಿ। ಅಭಯವಿತ್ತಳು ಮಾತೆಯಾಗಿ ಸರ್ವರಿಗೆ॥22॥ ಸರ್ವಮಂಗಳವು ಪಾರ್ವತೀಕಲ್ಯಾಣ ಶುಭಕಥೆಯೂ ಮಂಗಳವು ಸಿಂಹವಾಹಿನಿ ಚಂಡಿ, ಚಾಮುಂಡಿ ತಾಯಿಯನು ನೆನೆಯೆ ದಿನವು। ಸರ್ವಮಂಗಳವೀ ದೇವಿಯ ಪ್ರಾರ್ಥಿಸಲು ಶ್ರೀಪಾದವರದ ವಿಠಲನ ಸೋದರಿಯ ನೆನೆಯೆ ಭಕ್ತರಿಗೆ ದಿಟದಿ॥23॥

ಕಲ್ಯಾಣವೆನ್ನಿರಿ ಕಾಮಾಕ್ಷಿದೇವಿಯ (ಕಾಮಾಕ್ಷಿದೇವಿ ಕಲ್ಯಾಣ) ರಾಗ: ಕುರಂಜಿ

ಕಾಲ್ಯಾಣವೆನ್ನಿರಿ ಕಾಮಾಕ್ಷಿದೇವಿಯ। ಕಲ್ಯಾಣವೆನ್ನಿರಿ ಕಾಮಾಕ್ಷಿದೇವಿಯ॥ಪ॥ ಕಲ್ಯಾಣದಿಂದ ಜಗತ್ಕಲ್ಯಾಣ ವಾಗುವುದು। ಕಲ್ಯಾಣ ಮೂರ್ತಿ ಶ್ರೀ ಕಾಮಾಕ್ಷಿದೇವಿಯ॥ಅ.ಪ॥ ಹಿಮಗಿರಿಯ ರಾಜನ ಅರಮನೆಯ ಅಂಗಳದಿ। ಅಮಿತವೈಭವದಿಂದ। ಮೆರೆವ ಮಂಟಪಸಾಲು। ಸುಮನಸರು ಬಂದಿಹರು ವನಜ ಸಂಭವ ಸಹಿತ। ವನಜನಾಭನ ಕೂಡೆ, ವರಲಕ್ಷ್ಮಿ ಬಂದಿಹಳು॥1॥ ವಿಶ್ವದಲ್ಲಿಹ ಜನರು ವಿಶ್ವೇಶನೊಡಗೊಂಡು। ವಿಶ್ವಕಲ್ಯಾಣಕೆ ಕಾದಿಹರು ಬಂದು। ವಿಶ್ವದಲೆ ಅತಿ ಶ್ರೇಷ್ಠ ಗಿರಿರಾಜ ಹಿಮವಂತ। ವಿಶ್ವಜನ ಸಮ್ಮುಖದಿ ವರಪೂಜೆ ಮಾಡಿದನು॥2॥ ಧಾರೆ ಮಂಟಪದಲ್ಲಿ ವಾರಿಜಾಕ್ಷಿಯರೆಲ್ಲ। ಧಾರುಣಿಗೆ ಒಡತಿಯನು ಸೇರಿ ನಿಂದಿಹರು। ಧೀರ ಗಿರಿರಾಜನು ನಿಜ ಸತಿಯ ಒಡಗೂಡಿ। ಧಾರೆ ಎರೆದನು ಶಿವಗೆ ಕಾಮಾಕ್ಷಿ ಕುವರಿಯನು॥3॥ ಜಗದ ಜನ ಸಕಲರು ರಾಜರರಮನೆಯ ಮಿಗಿಲಾದ ಮಂಟಪದಿಒದಗಿ ಕುಳಿತಿರೆ ಆಗ। ಜಗದ ಸಂಭ್ರಮವೆಲ್ಲ ಒಂದೆಡೆಯೆ ಸಂದಣಿಸೆ। ಆಗಸ್ತ್ಯ ಋಷಿ ಕೃಪೆಮಾಡಿ ತೆಂಗಲಿಗೆ ತೆರಳಿದರು॥4॥ ಘನಪುರಿಯ ಕ್ಷೇತ್ರದಲಿ ವಿನಯ ವಂತರು ನೆರೆದು। ಅನುನಯದಿ ನಡೆಸಿದರು। ವಧೂಪ್ರವೇಶದ ಕಾರ್ಯ। ಮನದೊಳಗೆ ಕಲ್ಯಾಣ ಕಂಡು ಶ್ರೀಕಂಠದಲಿ। ತನುಮಯದಿ ಹಾಡಿದರು। ಕಾಮಾಕ್ಷಿ ಭಕುತರು॥5॥

ವಾರಿಜನಾಭನ ವನಜಾಂಘ್ರಿಗಳಿಗೆ (ಲಕ್ಷ್ಮೀಕಲ್ಯಾಣ ಸಮುದ್ರಮಥನ)

ವಾರಿಜನಾಭನ ವನಜಾಂಘ್ರಿಗಳಿಗೆ ಜೋಡಿಸಿ ಕರವ ಕೊಂಡಾಡುವೆ ಪದವ॥1॥ ದೇವದೈತ್ಯರು ಕೂಡಿ ಪಾಲಾಂಬುಧಿಯಲ್ಲಿ ಮೇರು ಮಂದರವ ಕಡೆಗೋಲು ಮಾಡಿದರು॥2।. ಗಿರಿಗೆ ವಾಸುಕಿ ಸ್ತುತಿ ಶರಧಿ ಮಧ್ಯದಲಿ ಹರಿ ಕೂರುಮನಾಗಿ ಮದರವೆತ್ತಿದನು॥3॥ ರತ್ನ ಕೌಸ್ತುಭ ಕಾಮಧೇನು ಸುರತರುವು ಹಸ್ತಿಯ ತೇಜಿಯ ಕಲ್ಪವೃಕ್ಷ ಸುಧೆ ಉದಿಸೆ॥5॥ ಸಿಂಧು ಮಥನವ ಮಾಡಲು ಶ್ರೀದೇವಿ ಜನಿಸೆ ಮಂದಾರಮಾಲೆ ಕೈಯಿಂದಲಿ ಪಿಡಿದು॥6॥ ಅರ್ಕಚಂದ್ರರ ಕಾಂತಿಗಧಿಕಾದ ಮುಖವು ದಿಕ್ಕುದಿಕ್ಕಿಗೆ ಮಿಂಚಿನತೆ ಹೊಳೆಯುತಲಿ॥7॥ ವಜ್ರಾಭರಣವು ಕಾಲಗೆಲ್ಲೆ ಸರಪಳಿಯು ಮಲ್ಲಿಗೆ ಕುಸುಮಗಳೊಂದೊಂದ್ದೆಜ್ಜೆಗುದುರುತಲಿ॥8॥ ಕುಡಿಬಹುಬ್ಬು ಕಡೆಗಣ್ಣ ನೋಡುತಲಿ ನಡೆದು ಬಂದಳು ತಾ ಬಡನಡುವಿನ ಒಯ್ಯಾರಿ॥9॥ ಅತಿಹಾಸ್ಯಗಳಿಂದ ದೇವತೆಗಳ ಮಧ್ಯೆ ಈ ಪೃಥಿವಿಗುತ್ತಮನಾದ ಪತಿ ಎಲ್ಲಿಹನೋ ತಾ॥10॥ ಅರ್ಕನ್ವಲ್ಲೆನೆ ಅಗ್ನಿಯಂತೆ ಸುಡುತಿರುವನ ಶಕ್ರನ ಒಲ್ಲೆ ಮೈಯೆಲ್ಲ ಕಣ್ಣವಗೆ॥11॥ ಸೋಮನ ಒಲ್ಲೆ ಕಳೆಗುಂದಿ ತಿರುಗುವನ ಪಾವನ ನಮ್ಮ ಗಾವಿರೂಪದವನ॥12॥ ಶೇಷನ ಒಲ್ಲೆ ವಿಷದ ದೇಹವನ ಗಣೇಶನ್ವಲ್ಲೆನೆ

ಡೊಳ್ಳು ಹೊಟ್ಟೆ ಗಜಮುಖನ॥14॥ ಬ್ರಹ್ಮ ನಾಲಕು ಮೋರೆಗುಮ್ಮನಂತಿರುವ ಯಮಧರ್ಮನ ಒಲ್ಲೆ ನಿಷ್ಕರುಣ ಘಾತಕನ॥15॥ ನಾರದ ನರೆಗಡ್ಡ ಚಾಡಿಕೋರ್‍ಯಿವನನೊಲ್ಲೆ ಸುರಜನರ ನೋಡಿ ಗಾಬರ್‍ಯಾಗುವೆನು॥16॥ ಮಂದಹಾಸ್ಯಗಳಿಂದ ಮಾತನಾಡುತಲಿ ಇಂದಿರೆಪತಿ ಪಾದಾರವಿಂದ ನೋಡುತಲಿ॥17॥ ಗುಣದಲಿ ಗಂಭೀರ ಮಣಿಕೋಟಿತೇಜ ಎಣಿಕಿಲ್ಲದ ಚೆಲುವ ನೋಡೆನ್ನ ಪ್ರಾಣನಾಥ॥18॥ ಹದಿನಾಲ್ಕು ಲೋಕ ತನ್ನುದರದಲ್ಲಿರುವ ಪದುಮಾಕ್ಷಗ್ವನಮಾಲೆ ಮುದದಿಂದ್ಹಾಕುವೆನು॥19॥ ವರ ಶಂಕ ಚಕ್ರ ಕರ ವೈಜಂಯತಿ ಸರ ಕೌಂಸ್ತುಂಭ ಮಣಿ ನಾ ಇರುತಿರೆ ವಕ್ಷಸ್ಥಳವು॥20॥ ಶ್ಯಾಮವರ್ಣನ ಮುದ್ದು ಕಾಮನಜನಕ ಪ್ರೇಮದಿಂದ್ವೊಲಿವೆ ನಾ ಕಾಮಿನಿ ಹರಿಯ॥21॥ ಕಮಲಮುಖಿ ಬ್ಯಾಗ ಕಮಲಾಕ್ಷನ್ನ ನೋಡಿ ಕಮಲಮಾಲೆಯ ತಾ ಕಂದರದಲ್ಹಾಕಿದಳು॥22॥ ರಂಗರಾಯನ ಸುಂದರಾಂಗಕ್ವನಮಾಲೆ ಅಂಗನೆ ರಚಿಸಿ ತಾ ನಿಂತಳು ನಗುತ॥23॥ ರತ್ನ ಮಂಟಪ ಚಿನ್ನ ಚಿತ್ರಪೀಠದಲಿ ಲಕ್ಷ್ಮೀನಾರಾಯಣರು ಒಪ್ಪಿ ಕುಳಿತಿರಲು॥24॥ ಸಾಗರರಾಜ ತನ್ನ ಭಾಗೀರಥಿ ಕೂಡಿ ಭ್ಯಾಗ ಬಂದ್ಹರಿಗೆ ಸಿರಿ ಧಾರೆಯ ನೆರೆದು॥25॥ ಅಚ್ಚಕರಿಮಣಿ ಮಂಗಳಸೂತ್ರವ ಪಿಡಿದು ಅಚ್ಚುತ ಲಕುಮಿಗೆ ಕಟ್ಟಿದ ನಗುತ॥26॥ ಮೇಲು ಕರಿಮಣಿ ಮಂಗಳ ಸೂತ್ರವ ಪಿಡಿದು ಶ್ರೀಲೋಲ ಲಕುಮಿಗೆ ತಾ ಕಟ್ಟಿದ ನಗುತ॥27॥ ವಂಕಿ ಕಂಕಣ ಮುತ್ತಿನ ಪಂಚಾಳಿಪದಕ ಪಂಕಜಮುಖಿಗೆ ಅಲಂಕರಿಸಿದರು॥28॥ ಸರಿಗೆ ಸರಗಳು ನಾಗಮುರಿಗೆ ಕಟ್ಟಾಣಿ ವರಮಾಲಕ್ಷುಮಿಯ ಸಿರಿಮುಡಿಗೆ ಮಲ್ಲಿಗೆಯ॥29॥ ನಡುವಿನ್ವೊಡ್ಯಾಣ ಹೊಸ ಬಿಡಿಮುತಿನ ದಂಡೆ ಮಡದಿ ಸಿರಿ ಪರಮಾತ್ಮನ ತೊಡೆಯ ಲ್ಲೊಪ್ಪಿರಲು॥30॥ ಮಂದರೋದ್ಧರ ನೋಡುತ ಇಂದಿರೆ ಮುಖವ ಆ ನಂದ ಭಾಷ್ಪಗಳು ಕಣ್ಣಿಂದ ಉದುರಿದವು॥31॥ರಂಗನ ಕಂಗಳ ಬಿಂದು ಮಾತ್ರದಲಿ ಅಂಗನೆ ತುಳಸಿ ತಾನವತರಿಸಿದಲು॥32॥ ಪಚ್ಚದಂತ್ಹೊಳೆವೊ ಶ್ರೀತುಳಸಿ ದೇವಿಯರ ಅಚ್ಚುತ ತನ್ನಂಕದಲ್ಲಿ ಧರಿಸಿದನು॥33॥ ಮಂಗಳಾಷ್ಟಕ ಹೇಳುತ ಇಂದ್ರಾದಿ ಸುರರು ರಂಗ ಲಕ್ಷುಮಿಗೆ ಲಗ್ನವ ಮಾಡಿಸಿದರು॥34॥ ಲಾಜಾಹೋಮವ ಮಾಡಿ ಭೂಮವನುಂಡು ನಾಗಶಯನಗೆ ನಾಗೋಲಿ ಮಾಡಿದರು॥36॥ ಸಿಂಧುರಾಜನ ರಾಣಿಗೆ ಸಿಂಧೂಪವನಿತ್ತು ತಂಡುಲುಪ್ಪಿನಲಿ ಚೆಂದದಿ ಬರೆದು॥37॥ ಎಲೆ ಸ್ತ್ರೀಯೆ ಎನ್ನಾನೆ ಎಣಿಕಿಲ್ಲದ್ಹಣವು ಚೆಲುವೆ ನೀ ಬೇಕಾದರೆ ಹಿಡಿಯೆಂದನು ರಂಗ॥38॥ ಅಚ್ಚುತ ಎನ್ನಾನೆ ಲೆಕ್ಕಿಲ್ಲದ್ಹಣವ ಕೊಟ್ಟರೆ ಕೊಡುವೆನೆಂದಳು ಲಕ್ಷುಮಿ ನಗುತ॥36॥ ಮುತ್ತು ಮಾಣಿಕ್ಯ ತುಂಬಿ ಮರದ ಬಾಗಿನವ ಕೊಟ್ಟಳು ಸಿರಿ ತಾ ಋಷಿಪತ್ನೇರನೆ ಕರೆದು॥40॥ ಹವಳ ಮಾಣಿಕ್ಯ ತುಂಬಿ ಮರದ ಬಾಗಿನವ ಹರದಿ ಕೊಟ್ಟಳು ತಾ ಋಷಿಪತ್ನೇರನೆ ಕರೆದು॥41॥ ಕುಂದಣದ್ಹೊನ್ನಕಿಸಿನ ತೊಟ್ಟಿಲೊಳಗಿಟ್ಟು ಕಂದನಾಡಿಸಿ ಜೋಜೋ ಎಂದು ಪಾಡಿದರು॥42॥ ಹರಬ್ರಹ್ಮರಿಗೆ ಆರೋಗಣೆ ಮಾಡಿಸಬೇಕು ಸಿರಿ ನಿನ್ನ ಕೂಸಿನ ಕರಿ ಎಂದನು ರಂಗ॥43॥ ಸುರದೇವತೆಗಳಿಗೆ ಸುಧೆ ಎರೆಯಬೇಕಿನ್ನು ಹರಿ ನಿನ್ನ ಕೂಸನು ಕರಿ ಎಂದಳು ಲಕ್ಷ್ಮೀ॥44॥ ಹೆಣ್ಣನೊಪ್ಪಿಸಿಕೊಟ್ಟು ಚಿನ್ನದಾರುತಿಯ ಕರ್‍ನೆ(ನ್ಯ?) ಸರಸ್ವತಿ ಭಾರತಿ ಬೆಳಗಿದರಾಗ॥45॥ ಈರೇಳು ಲೋಕದೊಡೆಯನು ನೀನಾಗೆಂದು ಬಹುಜನರ್ಧರಸ್ಯೆರೆದರು ಮಂತ್ರಾಕ್ಷತೆಯ॥46॥ ಪೀತಾಂಬರಧಾರಿ ತನ್ನ ಪ್ರೀತ್ಯುಳ್ಳಜನಕೆ ಮಾತುಳಾಂತಕ ಮಾವನೆ ಪ್ರಸ್ತ ಮಾಡಿದನು॥47॥ ಸಾಲು ಕುಡಿ ಎಲೆ ಹಾಕಿ ಮೇಲು ಮಂಡಿಗೆಯ ಹಾಲು ಸಕ್ಕರೆ ಶಾಕ ಪಾಕ ಬಡಿಸಿದರು॥48॥ ಎಣ್ಹೋರಿಗೆ ಫೇಣಿ ಪರಮಾನ್ನ ಶಾಲ್ಯಾನ್ನ ಸಣ್ಣಶ್ಯಾವಿಗೆ ತುಪ್ಪವನ್ನು ಬಡಿಸಿದರು॥49॥ ಏಕಾಪೋಶನ ಹಾಕಿದ ಶೀಕಾಂತಮ್ಮತವ ಆ ಕಾಲದಿ ಸುರರುಂಡು ತೃಪ್ತರಾಗಿಹರು॥50।. ಈ ಮಹಾ ಅಮೃತ ಮಥನವ ಕೇಳಿದ ಜನಕೆ ಪ್ರೇಮದಿಂದ್ವೊಲಿವನಾ ಭೀಮೇಶಕೃಷ್ಣ॥52॥

ಕಲ್ಯಾಣಂ ಲಕ್ಷ್ಮೀ ಕಲ್ಯಾಣಂ (ಲಕ್ಷ್ಮೀ ಕಲ್ಯಾಣಂ) **ರಾಗ: ಮಧ್ಯಮಾವತಿ**

ಕಲ್ಯಾಣಂ ಲಕ್ಷ್ಮೀ ಕಲ್ಯಾಣಂ॥ಪ॥ ಕಲ್ಯಾಣಂ ನಮ್ಮ ಕಾರುಣ್ಯಮೂರ್ತಿಗೆ। ವಲ್ಲಭವಾಗಿಹ ವೇಂಕಟಗೆ॥ಅ.ಪ॥ ದೇವರ ದೇವ ಸದಾ ಶಿವನ। ಶೀವಿಯ ತನಯ ಗಣೇಶ್ವರನ। ಪಾವನವಾಗಿಹ ಶಾರದೆ ಗಿರಿಜೆಯ। ಭಾವಿಸಿ ಮನದೊಳು ಪ್ರಾರ್ಥಿಸುವೆ॥1॥ ಇಂದ್ರಾದಿ ದೇವರಿಗೊಂದಿಸಿಯೆ। ಚಂದ್ರ ಆದಿತ್ಯರ ಬಲಗೊಂಡು। ಮಂದರಮೇರುವಿನಿಂದ

ಸುರಾಸುರರ್। ಸಿಂಧುವ ಮಥಿಸಿದ ಕಥೆಗಳನು।।2।। ಆಗಮಿಸಿದ್ದವು ರಾಗ ಪುರಾಣವು। ಭಾಗವತೋತ್ತಮ ಸಾರಗಳು। ಸಾಗರ ರಾಯನ ಮಗಳ ಕಲ್ಯಾಣವು। ಭಾಗೀರಥಿಯ ಫಲ ತೋರುವುದು।।3।। ಕೊಬ್ಬಿದ ದಾನವರಡಿಯಿಡುವಬ್ಬರ। ಕುಬ್ಬಸವಾದುದು ಧಾರುಣಿಗೆ। ಗರ್ಭದಿ ಭಯಗೊಂಡು ಅಜಭವ ಸುರರಿಗೆ ಒಬ್ಬಳೆ ನಾರಿಯೆ ದೂರಿದಳು।।4।। ಬ್ರಹ್ಮೇಂದ್ರಾದಿಗಳೆಲ್ಲರ ಬಳಿಯೊಳು ಉಮ್ಮಳಿಸುತ ಭೂಭಾರದಲಿ। ಹಮ್ಮಯಿಸಲು ಕಂಡು ಧರ್ಮಪಾಲಕನಿಗೆ। ತಮ್ಮೊಳೊಂದಾಗಿಯೆ ದೂರಿದರು।।5।।ಉರ್ವಿಯ ಮೇಲೆಲ್ಲ ಸರ್ವದೋಷಗಳ್ಹುಟ್ಟಿ। ಪರ್ವತದಂದದಿ ಬೆಳೆದಿಹರು। ಒರ್ವರಿಗಳವಲ್ಲ ಗರ್ವವ ಮುರಿವರೆ ಸರ್ವಾತ್ಮಕ ದಯ ದೋರೆನುತ।।6।। ಕರ್ಣಿಕೆಯಾತ್ಮಜೆ ವರ್ಣಿಸಿ ಪೇಳಲು। ತನ್ನಿಂದ ತಾನೇ ಮನದೊಳಗೆ ಅರ್ಣವ ಮಥಿಸುವ ಕಾಲದಿ ಖಳರನು। ನಿರ್ನಾಮವ ಮಾಡಬೇಕೆನುತ।।7।। ಕರೆಯಲು ಕಳುಹಿಸಿದ ದುರುಳ ದಾನವರನು ಶರಧಿಯ ತೀರದಿ ನೆರಹಿದನು। ತರಿಸಿಯೆ ಮಂದರ ಮೇರುವಿಗುರಗನ। ಕರಸಿಯೆ ಸುತ್ತಿದರಾಕ್ಷಣಕೆ।।8।। ಹೆಡೆಯೊಳು ಸುರರೆಲ್ಲ ಫಣಿಪತಿಯ। ಪಿಡಿಯಲು ಅಸುರರು ಖತಿಗೊಂಡು ಪಿಡಿಯಲು ಫಣೆಯೊಳು ಸುರರೊ ಡಂಬಟ್ಟರು। ತೊಡಗಿದರಾಕ್ಷಣ ಮಥಿಸುವರೆ।।9।। ಶರಧಿಯ ಭರದೊಳು ಮಥಿಸುತಿರೆ। ಸಿರಿಯುದಿಸಿದುದನು ಈಕ್ಷಿಸುತ। ದುರುಳರು ಕಾಮಿಸಿ ತರಹರಿಸಲು ಕಂಡು। ಸುರರೊಂದು ಪಾಯವ ವರ್ತಿಸಲು।।10।। ಆ ಮಹಾಖಳ ಸಂದೋಹದೊಳುದಿಸಿದ। ಕಾಮುಕತಲ ಹವ ಪರಿಹರಿಸಿ। ತಾಮನ ಮೆಚ್ಚಿದ ಪುರುಷನ ವರಿಸಲಿ। ಕಾಮಿನಿಯೆಂದೆನು ಸರಿಸಿದರು।।11।। ಸುಜ್ಜಲವನು ಹೊಂಗೊಡನೊಳು ತಂದರು। ವಜ್ರದಂತನು ಸುಪ್ರತೀಕ ಗಜ। ಕಜ್ಜಳ ಕಂಗಳ ಬಾಲೆಯ ಶಿರದೊಳು। ಮಜ್ಜನವೆರೆದವು ಮಹಾಲಕ್ಷ್ಮೀಗೆ।।12।। ದೇವಿಯ ಕೈಯೊಳು ಹೂವಿನ ಸರವನು। ತಾವೊಂದಾಗಿಯೇ ಪಿಡಿಸಿದರು। ಭಾವದಿ ತೋರಿದ ಪುರುಷಗೆ ತೊಡಿಸೆಂದು ಸಾವಿರ ನಾಮವ ಜಪಿಸುವರು।।13।। ವೇದ ನಿರೀಕ್ಷೆಯು ಶಾಸ್ತ್ರವು ಮಂಗಳ। ವಾದ ಪೌರಾಣದ ಮಾಲಿಕೆಯ। ಆ ಮಹಾಉದಧಿಯ ತನಯಳು ಪಿಡಿದಳು ವಿ। ನೋದದಿ ನೋಡಿಯೆ ಮನದೊಳಗೆ।।14।। ನಿನ್ನ ಮನಕೆ ಬಂದ ಚೆನ್ನಗೆ ಹಾಯ್ಕೆಂದು ಕನ್ಯೆಯ ಕೈಯೊಳು ವರ್ಣಿಸಲು। ನಿರ್ಣಯವಾಗಿಯೆ ಮನದೊಳುಯೋಚಿಸಿ। ಪನ್ನಗಶಯನಗೆ ತೊಡಿಸಿದಳು।।15।। ಆಲದೆಲೆಯ ಮೇಲೆ ಕಾಲಬೊಟ್ಟನೆ ಕಚ್ಚಿ। ಮೂಲವಯೋಚಿಸಿ ಒರಗಿಹನ ಲೀಲೆಯನೆಲ್ಲವ ತಿಳಿವುತ ಮನದೊಳು। ಕಾಲದಿ ಮಾಲೆಯನಿಕ್ಕಿದಳು।।16।। ಆದಿ ಕಾಲಯದೋಳ್ವೇದವ ನೊಯ್ದಿಹ। ಸಾಧು ವಿರೋಧಿಯ ಭೇದಿಸಿಯೆ। ಸಾಧಿಸಿ ನಿಗಮಾ ವನಾಧರಿಸಿದ ಸಿರಿವಿ। ನೋದಗೆ ಮಾಲೆಯನಿಕ್ಕಿದಳು।।17।। ಅಲ್ಲಿಯೆ ಭೂಮಿಯು ಪಲ್ಲಟವಾಗಲು। ಬಲ್ಲಿದನಾಗಿಯೆ ತಳಕಿಳಿದು। ವಲ್ಲಭೆಯನು ಬೆನ್ನೊಳಿರಿಸಿದ ನಲ್ಲಗೆ। ಮಲ್ಲಿಗೆ ಸರವನ್ನು ಹಾಕಿದಳು।। ಧರಣಿಯ ದಾನವನೊಯ್ಯಲು ಆ ಕ್ಷಣ ವರಾಹನಾಗಿಯೆ ಧರೆಯಪಹರಿಸಿ। ದುರುಳನ ದಾಡೆಯ ಖುರದೊಳು ಸೀಳ್ದನ। ಕೊರಳಿಗೆ ಮಾಲೆಯ ನಿಕ್ಕಿದಳು।।19।। ತರಳನು ಕರೆಯಲು ಕಂಬದೊಳುದಿಸಿಯೆ। ನರ ಹರಿಯಾಗಿಯೆ ನಿಂತವನ। ಹರಿಯನು ಕಾಣುತ ಹರುಷವ ತಾಳಿಯೆ। ತರಳಾಕ್ಷಿ ಮಾಲೆಯ ನಿಕ್ಕಿದಳು।।20।। ಪೊಡವಿಯ ರಾಯರ ಕಡಿದು ಈಡಾಡಲು। ಕೊಡಲಿಯ ಪಿಡಿದಿಹ ಭೂ ಸುರಗೆ ಮಡದಿ ಮಹಾಲಕ್ಷ್ಮೀ ಪಿಡಿದಿಹ ಮಾಲೆಯ ಸಡಗರದಿಂದಲೆ ತೊಡಿಸಿದಳು।।21।। ಸಣ್ಣವನಾಗಿಯೆ ಬಲಿಯೊಳು ದಾನದ ಮಿಣ್ಣನೆ ಕೇಳಲು ಕೊಡಲವನ। ಬಣ್ಣವಗೆಡಿಸಿದ ಚೆನ್ನಿಗರಾಯನ ಬಣ್ಣಿಸಿ ಮಾಲೆಯನಿಕ್ಕಿದಳು।।22।। ಹತ್ತುರಥಗೆ ಹರಿಪುತ್ರನೆಂದೆನಿಸಿಯೆ। ಪೃಥಿವಿಜಾತೆಗೆ ಕರ್ತನಾಗಿ ಧೂರ್ತದಲ್ಲಣನಾದ ಸತ್ಯಸ್ವರೂಪಗೇ ಅರ್ತಿಯಿಂದಲೆ ಮಾಲೆಯನಿಕ್ಕಿದಳು।।23।। ಉಡುವ ಸೀರೆಯ ಕೊಂಡು ತಡಹದ ಮರನೇರಿ। ಮಡದಿ ಮಾನಿನಿಯರ ಮೋಹಿಸುತ ಕಡುಗದಲ್ಲಣನಾದ ಕಡು ಮುದ್ದುಕೃಷ್ಣಗೆ। ತೊಡಸಿದೊಳು ಹೂವಿನ ಮಾಲೆಯನು।।24।। ಬೆತ್ತಲೆಯಾಗಿಹ ಉತ್ತಮ ಪುರುಷನ। ಮತ್ತಗಾಮಿನಿಕಂಡು ಮೋಹಿಸುತ। ಮುತ್ತಿನ ಕಡಗದ ಹಸ್ತದಿ ಮಾಲೆಯ। ಕುತ್ತಿಗೆಗಿಕ್ಕಿಯೆ ನೋಡಿದಳು।।25।। ವಾಜಿಯನೇರಿ ವಿರಾಜಿಪ ವೀರಗೆ। ರಾಜೀವನೇತ್ರೆಯು ಮಾಲೆಯನು ಸೋಜಿಗದೊಳಗಿಕ್ಕಿ ಮೂಜಗದೊಡತಿ ಸರೋಜ ವದನವನ್ನು ನೋಡಿದಳು।।26।। ದಶವಿಧರೂಪನ ವಶವಾದಳು ದೇವಿ। ಅಸುರ ಸಂತತಿಗೆಲ್ಲ ವಿಷವೀಯೆ। ಶಶಿಧರ ಕಂಠದಿ ಧರಿಸಿದ ಸುರರಿಗೆ। ಕದಲದಿ ಅಮೃತವು ಸೇರಿದುದು।।27।। ಲೋಕನಾಯಕನನ್ನು ಕಾಣುತ ದೇವಿವಿ। ವೇಕದಿ ಹತ್ತಿರ ನಿಂದಿರಲು। ನಾಕಾಧಿಪರೆಲ್ಲ

ಪುಷ್ಪದ ವೃಷ್ಟಿಯ ಸಾಕೆನಿಸಲು ಹರಿ ಮಸ್ತಕದಿ।।28।। ದೇವ ದುಂದುಭಿ ವಾದ್ಯ ಮೊಳಗಲು ಗಿರಿಜೆಯು। ದೇವಿಯರೆಲ್ಲನೊಡಗೊಂಡು ಆ ಮಹಾಲಕ್ಷ್ಮಿ ವಿವಾಹವ ರಚಿಸುವ। ಠಾವಿಗೆ ಬಂದರು ಹರುಷದಲಿ।।29।। ಸಾಗರವಾಗಲೆ ಭಾಗೀರಥಿ ಸಹ। ವಾಗಿಯೆ ಬಂದರು ಮಂಟಪಕೆ। ನಾಗವೇಣಿಯ ನಾಗಶಯನಗೆ ಧಾರೆ ಲೇಸಾಗಿ ಯೆರೆಯಲು ಬೇಕೆನುತ।।30।। ಅರುವತ್ತು ನಾಲ್ಕು ನದಿಗಳ ನೊಡಗೊಂಡು ಪರುವತವಾಗಿಹ ಹರುಷದಲಿ। ಗರುವೆ ಮಹಾಲಕ್ಷುಮಿಯು ಧಾರೆಯನೆರೆದನು ಸಾರ್ವಭೌಮನ ಕರಕಮಲದಲಿ।।31।। ವಿದ್ಯುಕ್ತ ಮಾರ್ಗದಿ ವರಿಸಿಯೆ ದೇವಿಯ ಭದ್ರ ವಿಷ್ಟರದೊಳು ಕುಳಿತಿರಲು। ಮುದ್ದು ಮಹಾಲಕ್ಷ್ಮಿ ತೊಡೆಯ ಮೋಲೊಪ್ಪಿರೆ। ಗೆದ್ದನೆಂಬ್ವಾಡನು ತೊಡಗಿದರು।।32।। ಶರಧಿಯೊಳುದಿಸಿದ ವರಮಹಾಲಕ್ಷ್ಮಿಯ। ಮುರರಿಪುಗೆದ್ದನು ಹರುಷದಿ। ವರ ಮದಕರಿಯನು ಗೆದ್ದನು ಹರಿಯೆಂದು। ಸರಸಿಜಾಕ್ಷಿಯರೆಲ್ಲ ಪಾಡಿದರು।।33।। ಸ್ವಾಮಿ ಸರ್ವೇಶನು ಕಾಮಧೇನುವ ಗೆದ್ದ। ಭೂಮಿಗೆ ಕಲ್ಪದ ತರುಗೆದ್ದ। ಆ ಮಹಾವಾಜಿಯ ಪ್ರೇಮದಿಂದಲೆ ಗೆದ್ದ। ಸೋಮ ಸನ್ನಿಭನೆಂದು ಪಾಡಿದರು।।34।। ಪಾರಿಜಾತವ ಗೆದ್ದ ಪರಮ ಸಂತೋಷದಿ। ತೋರಿಸಿಗೆದ್ದನು ಅಮೃತವನು। ತೀರಿದ ದನುಜರ ಉರಗನ ಗರಳದಿ। ವಾರಿಜಾಕ್ಷನು ಗೆದ್ದನೆನುತಿರಲು।।35।। ಮೂರುಲೋಕ ದೊಳುಳ್ಳ ಮೂಲ ಮೃತ್ಯುವನ್ನೆಲ್ಲ। ಹಾರಿಸಿ ಗೆದ್ದನು ಹರಿಯೆಂದು। ನಾರಿಯರೆಲ್ಲರು ಪಾಡುತ ಪೊಗಳುತ। ಸೂರೆಗೊಂಡರು ಕಣು ಮನದಿ।।36।। ಕಂಗಳ ಚೆಲುವಿನ ಮಂಗಳ ಮಹಿಮಗೆ। ಶೃಂಗಾರವ ಮಾಳ್ಪ ಭರದೊಳಗೆ। ಅಂಗನೆಯರು ಬಂದು ಮಂಗಳ ಸೂತ್ರವ। ಅಂಗಜನಯ್ಯಗೆ ತೊಡಿಸೆಂದರು।।37।। ನಾರಿಯ ಮೈಯೊಳು ಸೇರುವಾಭರಣವ। ವಾರಿಜನಾಭನೆ ತರಿಸೆಂದು। ವಾರಿಜ ನೇತ್ರೆಗೆ ಪೇಳಲಾಕ್ಷಣ। ಕುಬೇರನ ಮೊಗವನು ನೋಡಿದನು।।38।। ಮನಕೆ ಬೇಕಾಗಿಹ ಕನಕಾ ಭರಣವ। ಧನವನು ಇತ್ತನು ಉಚಿತದಲಿ। ವನಧಿಪ ರತುನದ ತೆನೆಯನೆ ಕೊಯ್ತುಂದು। ವಿನಯದಿ ಮಗಳಿಗೆ ಇತ್ತನಾಗ।।39।। ಅಷ್ಟ ದಿಕ್ಪಾಲಕರು ಕೊಟ್ಟರು ಉಡುಗೊರೆ। ಪಟ್ಟೆ ಪೀತಾಂಬರ ವಸನಗಳ। ಶಿಷ್ಟರಾಗಿಹ ಋಷಿಪತ್ನಿಯರ್ವೆರಸಿಯೆ। ಸೃಷ್ಟಿಯ ಮಾತೆಗೆ ತೊಡಿಸಿದರು।।40।। ಲಕ್ಷಣಯುಕ್ತದಿ ವಸನಾಭರಣವ ಕೃಪಾಕ್ಷನ ರಾಣಿಗೆ ತೊಡಿಸಿದರೆ। ಪಕ್ಷಿವಾಹನ ಕಂಡು ಉಚಿತವನಿತ್ತನು। ಅಕ್ಷಯವಾಗಲಿ ಜಗಕೆನುತ।।41।। ಶೃಂಗಾರವಾಗಿಹ ಮಂಗಳ ಮಹಿಮನು। ಅಂಗನೆ ಲಕ್ಷುಮಿ ಒಪ್ಪಿರಲು। ಹೆಂಗೆಳೆಯರೆಲ್ಲರು ಬಂದು ಮಂಗಳಾರತಿ ಎತ್ತಿ ಅಂಗಜನಯ್ಯನ ಪಾಡಿದರು।।42।। ತುಂಬುರು ನಾರದರು ಗೀತವ ಪಾಡಲು। ರಂಭೆ ಊರ್ವಶಿಯರು ಅಂಬರದಿ। ಸಂಭ್ರಮದಿಂದಲೆ ನಾಟ್ಯವನಾಡಿಯೆ। ಅಂಬುಜ ನೇತ್ರನ ಪೊಗಳಿದರು।।43।। ಉರಗನ ಹಸೆಮಣೆ ಇರಿಸಲು ಆಕ್ಷಣ ಸಿರಿಸಹವಾಗಿಯೆ ಹರಿಬಂದು। ಮರಕತಮಣಿಮಯ ಜಗುಲಿಯೊಳೊರಗಿಯೆ। ಅರಸಿಯ ಮೊಗವನು ನೋಡಿದರು।।44।। ಅಷ್ಟದಿಕ್ಪಾಲಕರ ಪಟ್ಟದ ರಾಣಿಯರು। ಕುಟ್ಟಿದರರಿಷಿಣ ಚೂರ್ಣವನು ಬಟ್ಟಲ ಪರಿಮಳ ದೆಣ್ಣೆಯಗೂಡಿಸಿ। ಕೊಟ್ಟರು ದೇವಿಯ ಹಸ್ತದಲಿ।।45।। ಕೇಶವ ಆದಿಯ ಸಾಸಿರ ನಾಮದಿ ವಿಶೇಷ ವಾಗಿಹದೊಂದ ಹೇಳಿದನು। ಆಸುದತಿಯು ಕಂಡು ತನ್ನ ನಾಮವ ಕೂಡಿ ಈಶನೆ ಮೊಗವನು ತಾರೆಂದಳು।।46।। ಶಂಖ ಚಕ್ರವು ಗದಾಪದ್ಮವು ಒಪ್ಪುವ। ಬಿಂಕದ ಹಸ್ತವ ತಾರೆನುತಾ। ಶಂಕಿಸಿ ಮನದೊಳು ವೆಂಕಟರಾಯಗೆ। ಕುಂಕುಮದೆಣ್ಣೆಯ ತಿವುರಿದಳು।।47।। ಮೇದಿವಿಗೆಲ್ಲವು ಆಧಾರವಾಗಿಹ। ಪಾದಸರೋಜವ ತೋರೆನುತಾ। ಆದಿನಾರಾಯಣ ಅರಸನೆಂದೆನುತ ವಿನೋದದಿ ಅರಿಶಿನ ತಿವುರಿದಳು।।48।। ಬಟ್ಟಲ ವೀಳ್ಯವ ಕೊಟ್ಟಳು ಕೈಯೊಳು। ಹುಟ್ಟಲಿ ನಿನ್ನೊಳು ಸುತರೆನುತ। ಇಟ್ಟಳು ಅಕ್ಷತೆ ಪಟ್ಟದ ರಾಣಿಯು। ತಟ್ಟನೆ ಕುಳಿತಳು ವಿಷ್ಟರದಿ।।49।। ರಾಜಲಕ್ಷುಮಿ ರವಿತೇಜದಿಂದೊಪ್ಪುವ ಸರೋಜವದನ ವನ್ನೊಮ್ಮೆ। ತಾರೆನುತ। ಮೂಜಗದೊಡೆಯನು ಅರಿಶಿನದೆಣ್ಣೆಯ। ಮಾಚದೆ ಹರುಷದಿ ತಿವುರಿದನು।।50।। ಹತ್ತಿರೆ ಕುಳಿತಿಹ ಕೀರ್ತಿಲಕ್ಷ್ಮಿಯೆ ನಿನ್ನ। ಹಸ್ತಸರೋಜವ ತಾರೆನುತ। ಉತ್ತಮ ವಾಗಿಹ ಅರಿಶಿಣದೆಣ್ಣೆಯ। ಒತ್ತಿದ ನಿತ್ಯವು ಮಂಗಲೆಗೆ।।51।। ಸಡಗರ ದಿಂದಲೆ ಕಡಲ ಮಗಳ ಕಂಡು। ಒಡೆಯನು ವೀಳ್ಯವ ಕೊಡಲಾಗಿ। ಕಡೆಯ ಮುಂಚೆರಗನು ಪಿಡಿದು ಕೊಂಡಳು ತನ್ನ। ಕಡೆಗಂಗಳಿಂದವೆ ನೋಡಿದಳು।।52।। ಈ ಪರಿ ದಿನದಿನ ತಪ್ಪದೆ ನಡೆಸಲು। ಶ್ರೀ ಪರುಮಾತುಮನು ಉತ್ಸವವ। ಪಾಪನಾಶನ ನದಿಗಳು ಅವಭೃತ ಸರ್ವ। ವ್ಯಾಪಕನಿಗೆ ತಾವ್ ರಚಿಸಿದರು।।53।। ದೂರ್ವೆಯೊಳ್ ತೈಲವವಿಡಿಸಿಯೆ ಫಣೆಯೊಳು ಸರ್ವಾಭರಣವ ನಿಡಿಲಿಸಿಯೆ।

ಸರ್ವೋತ್ತಮನಿಗೆ ಮಜ್ಜನವೆರೆದರು। ಉರ್ವಿಗೆ ಮಂಗಲ ವೆಸಗಿದವು॥54॥ ದೆಸೆಯ ಮೋಹಿಸುವಂಥ ವಸನಾಭರಣವ। ಹೊಸ ಪರಿಯಾಗಿಯೆ ಧರಿಸಿದರು। ಮಿಸುನಿಯ ಮಂಟಪ ಮಧ್ಯದೊಳೊಪ್ಪಿರೆ। ಹಸನವಾದುದು ಸುರಸಂತತಿಗೆ॥55॥ ಧಾರೆ ಚತುರ್ಥಿ ನಾಗೋಲೆ ಸಹವಾಗಿ। ಆಯಿತು ಐದನೆ ದಿವಸದಲಿ। ವಾರಿಜನಾಭನು ವಾರಿಧಿಯನು ಕಂಡು। ಊರಿಗೆ ಪೋಗುವೆನೆಂದೆನಲು॥56॥ ಕಾಮಿತ ಫಲಗಳ ಆ ಮಹಾದಿವಿಜರ। ಸೀಮೆ ಯೊಳಡಗಿಸಿ ಹರಿ ತನ್ನ। ಭಾಮಿನಿಯೊಡಗೊಂಡು ಪೋಪೆನು ಎನ್ನನು ಪ್ರೇಮದಿ ಕಳುಹಿಸ ಬೇಕೆನಲು॥57॥ ವಾರಿಜನಾಭನು ಆಡುವ ಮಾತಿಗೆ ಭೋರೆಂಬ ಕುರುಹನು ತೋರುತಲೆ। ಸೇರುವೆಯಲ್ಲಿಹ ನಾರಿಯ ನೊಡಗೊಂಡು। ತೀರದಿ ಸ್ಥಿರದೊಳು ನಿಲ್ಲೆನಲು॥58॥ ಚನ್ನಿಗರಾಯನೆ ನಿನ್ನನು ಮಗಳನು। ಇನ್ನೊಂದು ಘಳಿಗೆಯು ಬಿಡಲಾರೆ। ಉನ್ನತವಾಗಿಹ ಗೃಹದೊಳು ಉರಗನ। ಬೆನ್ನೊಳು ಒರಗಿರು ನೀನೆನಲು॥59॥ ಮನೆಯೊಳು ಅಳಿಯನು ಎನಿಸಿಯೆ ದಿನವಿರೆ ತನಗದು ಕಷ್ಟವು ಎಂದೆನಲು। ವನಜನಾಭಗೆ ಕೈಯ್ಯ ಮುಗಿದನು ವನಧಿಯು। ಅನುಮಾನ ಬೇಡವೋ ನಿನಗೆನುತ॥60॥ ಸಂತಸದೊಳಗಿರು ಚಿಂತೆ ಬೇಡಿದಕೆಂದು ಅಂತರ್ಯಾಮಿಗೆ ವಂದಿಸಲು। ಸಂತೈಸಿಯೆ ಸುರಸಂತತಿಯೆಲ್ಲ ಗೃಹಾಂತರಕಾಗಿಯೆ ಕಳುಹಿದನು॥61॥ ಕಷ್ಟಗಳೆಲ್ಲವ ಕಡಿದು ಈಡಾಡಿಯೆ ದುಷ್ಟರನೆಲ್ಲರ ನಿಗ್ರಹಿಸಿ। ಇಷ್ಟಾರ್ಥಗಳನು ಸುರರೊಳು ವರ್ತಿಸಿ। ಕೊಟ್ಟನು ಕರುಣದಿ ಅಪ್ಪಣೆಯ॥62॥ ನೆಲ್ಲಿಯೆ ಕಾಯನು ಚೆಲ್ಲಿದ ತೆರದಲಿ ಅಲ್ಲಲ್ಲಿಗೈದರು ಸುರರೆಲ್ಲ। ವಲ್ಲಭೆ ಸಹವಾಗಿ ಅಲ್ಲಿಯೆ ಇರುತಿರೆ। ಮೆಲ್ಲನೆ ಗಿರಿಯೊಳು ತೋರಿದನು॥63॥ ಕಾಮಿತಾರ್ಥವನ್ನೆಲ್ಲ ಸುರರಿಗೆ ಇಪ್ಪುದು। ಪ್ರೇಮದಿ ಮಥಿಸುವ ಕಾಲದೊಳು ಆ ಮಹಾ ಪ್ರತಿನಿಧಿಯಾಗಿಯೆ ತೋರ್ಪುದು। ಭೂಮಿಯ ಜನರಿಗೆ ಕಾಣು ಮನಕೆ॥64॥ ಕ್ಷೀರಸಾಗರದಲ್ಲಿ ಸಿರಿನಾರಾಯಣ। ಮೇರುವಿನಗ್ರದಿ ಸೇರಿದನು। ಸ್ವಾಮಿ ಪುಷ್ಕರಣಿಯ ತೀರವೆ ಉದಧಿಯು ಆ ಮಹಾ ಅಂಜನ ಗಿರಿ ಮೇರು॥65॥ ವೇದವು ಬಂದುದು ಶಾಸ್ತ್ರವು ನಲಿದುದು। ಆದಿನಾರಾಯಣ ಪರ್ವತದಿ। ಪಾದವ ನೂರಿದ ಸಾಧು ಸಜ್ಜನರ ವಿನೋದದಿ ಸಲಹಲು ಬೇಕೆನುತ॥66॥ ಪಕ್ಷಿವಾಹನನು ಆ ಮಹಾಲಕ್ಷ್ಮಿಯ। ಸಾಕ್ಷಾತ್ ವರಿಸಿದ ಕಥೆಗಳನು। ಲಕ್ಷಣಯುತ್ತದಿ ಹೇಳಿದ ಜನರಿಗೆ। ಅಕ್ಷಯ ವಾಗಿಯೆ ತೋರುವುದು॥67॥ ಆರನೆಯ ವಾರದಿ ನಾರಿಯರೆಲ್ಲರು ಓರಣವಾಗಿಯೆ ಹೇಳಿದರೆ। ನಾರಿ ಮಹಾಲಕ್ಷ್ಮಿನಾರಾಯಣ ಸಸ ಸೇರಿಯೆ ಇರುವರು ಗೃಹದೊಳಗೆ॥68॥ ಮೇಲಪ್ಪ ಫಲಗಳ ಪಾಲಿಪ ಶ್ರೀಹರಿ। ಬಾಲಸಂತಾನವು ಸೌಭಾಗ್ಯ। ಲೀಲೆಯಿಂದಲೆ ಇತ್ತು ಮೂಲ ರೂಪವನೆಲ್ಲ। ಕಾಲದಿ ತೋರುವ ಭಕ್ತರಿಗೆ॥69॥ ಮಂಗಲ ವೆನ್ನಿರೆ ಅಂಗಜನಯ್ಯಗೆ। ಮಂಗಲರಂಗ ತಿಮ್ಮಪ್ಪನಿಗೆ। ಮಂಗಲ ಮಾಧವ ಶ್ರೀಧರ ಕೃಷ್ಣಗೆ। ಮಂಗಲ ವೇಂಕಟನಾಯಕಗೆ॥70॥ ಲಕ್ಷುಮೀ ವಲ್ಲಭ ಲಕ್ಷ್ಮೀನಾರಾಯಣ। ಲಕ್ಷುಮಿ ಕಾಂತನೆ ಜಯ ಜಯತು॥ ಲಕ್ಷುಮಿ ಪಕ್ಷನೆ ರಕ್ಷಿಸೆಂದೆನುತಲೆ। ಅಕ್ಷತೆಯಾರತಿ ಎತ್ತಿದರು॥71॥ ಎನ್ನಮನದಿ ನಿಂತು ಪನ್ನಗಾದ್ರಿಯ ವಾಸ। ವರ್ಣಿಸಿದಂದದಿ ಹೇಳಿದೆನು। ಇನ್ನಿದರೊಳಗುಳ್ಳ ಭಿನ್ನಭೇದಗಳೆಲ್ಲ। ಉನ್ನತ ಭಕ್ತರು ತಿದ್ದುವುದು॥72॥ ಮಕ್ಕಳ ಬಾಯೊಳು ಸಕ್ಕರೆಯನು ತಂದು। ಇಕ್ಕಿದ ಪರಿಯೊಳು ಸಿರಿಯರಸ। ಒಕ್ಕಣೆಯೆಲ್ಲವ ತಿದ್ದಿದ ಕಾರಣ। ನೆಕ್ಕರೆ ಕೃಷ್ಣದಾಸ ರಚಿಸಿದನು।.73॥ ಹೆಂಗೆಳೆಯರೆಲ್ಲರೂ ಕೂಡಿ ಮಾಂಗಲ್ಯದೊಳಿದ। ಸಾಂಗ್ಯದಿ ಹೇಳಿಯೆ ಪಠಿಸಿದರೆ। ಬಂಗಾರ ಗಿರಿವಾಸ ವರಾಹ ತಿಮ್ಮಪ್ಪನು ಮಂಗಳ ವನುದಿನ ತೋರುವನು॥74॥

ಲಕ್ಷ್ಮೀಕಲ್ಯಾಣಂ ವೈಭೋಗಮೇ (ತಮಿಳು) **ರಾಗ: ಕುರಂಜಿ-ಖಂಡಛಾಪುತಾಳ**

ಲಕ್ಷ್ಮೀ ಕಲ್ಯಾಣಂ ವೈಭೋಗಮೇ॥ಪ॥ ವಸುದೇವ ತವಬಾಲ ಅಸುರಕುಲ ಕಾಲ। ಶಶಿವದನ ರುಕ್ಮಿಣೀ ಸತ್ಯಭಾಮ ಲೋಲ॥1॥ ಕೊತ್ತೋಡವಾಳೈಮರಂ ಕೊಂಡುವಂದು ನಿರುತ್ತಿ। ಕೋಪುಡೈಯ ಪಂದಲುಕ್ಕು ಮೇಲ್ಕಟ್ಟು ಕಟ್ಟಿ॥2॥ ತೂಂಡಾದ ಮಣಿವಿಲಕ್ಕೈ ತೊಲ್ಲುಲಗಿಲುದಿತ್ತ। ತೂಯ ರಂಗರಾಜರ್ ಪದಮ್ ತುಂಗಮಾಯ್ ಪದಿತ್ತಾಲ್॥3॥ ಪಟ್ಟರ್‌ಬಿರಾನ್ ಮನಂಮಹಿಳ ಪಾಲುಲಕಿಲ್ ಉದಿತ್ತ। ಭಕ್ತಿಯುಡನ್ ತಿರುಪ್ಪಾವೈ ಪಾಡಿ ದಿನಂ ತುದಿತ್ತಾಳ್॥4॥

ಹರಿಗೆ ಸಿರಿಗೆ ಕಲ್ಯಾಣ (ಆರತಿ) ರಾಗ: ಮಧ್ಯಮಾವತಿ

ಹರಿಗೆ ಸಿರಿಗೆ ಕಲ್ಯಾಣ ನಾರಿಯರಾರತಿ ಬೆಳಗೋಣ॥ಪ॥ ವೈಕುಂಠವಾಸೀ ಶ್ರೀಹರಿಗೆ। ಕ್ಷೀರಾಬ್ಧಿ ತನಯೆ ಶ್ರೀಲಕ್ಷ್ಮಿಗೇ। ಕಲ್ಯಾಣದಾರತಿ ಮಾಡೋಣ। ಮಾಂಗಲ್ಯ ಭಾಗ್ಯವ ಬೇಡೋಣ॥1॥ ತ್ರಿಲೋಕ ಪಾಲಿಪ ಶ್ರೀಹರಿಯು। ಪಟ್ಟೆ ಪೀತಾಂಬರ ಉಟ್ಟಿಹನು। ಸರ್ವಾಭರಣವ ತೊಟ್ಟಿಹನು। ಬಾಸಿಂಗ ಕಟ್ಟಿ ವರನಾಗಿಹನು॥2॥ ತ್ರಿಭುವನ ಸುಂದರಿ ಮಹಾಲಕ್ಷ್ಮೀ। ನಿಲುವಾಭರಣದಿ ಶೋಭಿಸುತ। ವರಮಾಲೆಯನು ಕರಯುಗದಿ। ಪಿಡಿದು ಮೆಲ್ಲಗೆ ಬಂದಿಹಳು॥3॥ ಹರಿಯು ಸಿರಿಯು ಹಸೆಯಲ್ಲಿರೆ। ಕಲ್ಯಾಣ ವಾದ್ಯವು ಕೇಳುತಿದೆ। ಮಂತ್ರ ಘೋಷವು ಮೊಳಗುತಿದೆ। ಮಾಂಗಲ್ಯ ಧಾರಣೆಯಾಗುತಿದೆ॥4॥ ಜಗದ ಜನನಿ ಜನಕರಿಗೆ। ನಮಿಸಿ ಆರತಿ ಮಾಡೋಣ। ಹೂರಣದಾರತಿ ಮಾಡೋಣ। ಷೋಡಶದಾರುತಿ ಮಾಡೋಣ ॥5॥

ಪಾಕ ಶೇಷಾದ್ರಿ ಬ್ರಹ್ಮಕೆ ಶರಣು (ಸೀತಾ ಕಲ್ಯಾಣ)

ಪಾಕ ಶೇಷಾದ್ರಿ ಬ್ರಹ್ಮಕೆ ಶರಣು। ಲೋಕನಾಯಕ ಹೆಳವನಕಟ್ಟೆ ವೆಂಕಟ। ನೀ ಕರುಣಿಸಿ ಸಲಹುವುದೆನಗೆ ಜಯ ಜಯ॥ಪ॥ ಮದುವೆಯ ನಾಲ್ಕು ದಿವಸದಲ್ಲಿ। ಮದುವಣಿಗನು ರಾಮ ಜಾನಕಿಗೆ। ಮುದದಿಂದ ಅರಿಷಿಣೆಣ್ಣೆಯ ಮಾಡೊ ಸಂಭ್ರಮ(ದ)। ಪದನ ಹೇಳುವೆ ಸುಜನರು ಕೇಳಿ ಜಯ ಜಯ॥1॥ ಚಿತ್ತಜಪಿತ ಶ್ರೀರಾಮರಿಗೆ ಅರ್ತಿಯಿಂದರಿಷಿಣೆಣ್ಣೆಯ ಮಾಡ್ವ। ಮಿತ್ರೆ ಕೌಸಲ್ಯದೇವಿ ಕೇರಿ ಕೇರಿಯ ಗುಂಟ। ಮುತ್ತೈದೇರನು ಕರೆಸಿದಳು ಜಯ ಜಯ॥2॥ ಪೀತಾಂಬರ ದುಡುಗೆಯನುಟ್ಟು। ಜ್ಯೋತಿಯಂದದಿ ಥಳಥಳಿಸುತಲಿ। ಜಾತಿಮಾಣಿಕದಾ ಭರಣವಿಟ್ಟು ರಾಮರ। ಮಾತೆಯರೆಲ್ಲ ಶೃಂಗಾರವಾಗಿ ಜಯಜಯ॥3॥ ಚೀಣ ಚೀಣಾಂಬರಗಳನುಟ್ಟು। ವೇಣಿ ಕಸ್ತೂರಿಯ ಪಣೆಗಿಟ್ಟು। ಜಾಣೆಯರೆಲ್ಲ ಶೃಂಗಾರವಾಗಿ ಮಲ್ಲಿಗೆ। ಬಾಣನ ಪಟ್ಟದಾನೆ ಗಳಂತೆ ಜಯಜಯ॥4॥ ಪೊಂಬಣ್ಣದ ಹಳದಿಯ ಕಲೆಸಿ। ತುಂಬಿದ ಹರಿವಾವಾಣದೊಳಗೆ। ಅಂಬುಜನಾಭಗೆ ಅರಿಷಿಣೆಣ್ಣೆಯ ಮಾಡ್ವ। ಸಂಭ್ರಮಕ್ಕೆ ನಡೆತಂದರಾಗ ಜಯಜಯ॥5॥ ಗರುಡನ್ವಲ್ಲಭ ಸೌಂದರದೇವಿ। ವರುಣನ್ವಲ್ಲಭೆ ಕಾಳಕದೇವಿ। ಹರನ್ವಲ್ಲಭೆ ಪಾಪ(ನಾ)ಶಿಗಂಗೆ ಸಹಿತಲಿ। ಅರಿಷಿಣೆಣ್ಣೆಯ ಮಾಡಬಂದರಾಗ ಜಯಜಯ॥6॥ ಬ್ರಹ್ಮವಲ್ಲಭೆ ಶಾರದಾದೇವಿ। ವಾಯುರಮಣಿ ಅಂಜನಾದೇವಿ। ಹರುಷದಿ ಕೌಸಲ್ಯೆ ಕೈಕೆಸೌಮಿತ್ರೆಯರು। ಅರಿಷಿಣೆಣ್ಣೆಯ ಮಾಡಬಂದರಾಗ ಜಯಜಯ॥7॥ ಅಲ್ಲಲ್ಲಿ ನಡೆವ ನಾಟಕಶಾಲೆ। ಬಿಲ್ಲಾಳು ಬೆತ್ತ ಕಾಟನವರು। ಸೊಲ್ಲುಸೊಲ್ಲಿಗೆ ಹಿಡಿಹೊನ್ನನು ತ್ಯಾಗವ। ಚೆಲ್ಲುತ ದಶರಥ ನಡೆದನಾಗ ಜಯಜಯ॥8॥ ಹೊಡೆವ ತಂಬಟೆ ಭೇರಿ ನಿಸ್ಸಾಳೆ। ಬಿಡದೆ ಚೀರುವ ಹೆಗ್ಗಾಳೆಗಳು। ಸಿಡಿಲು ಗರ್ಜಿಸುವಂತೆ ಪಂಚಮವಾದ್ಯದಿ। ನಡೆದರು ಜನಕರಾಯನ ಮನೆಗೆ ಜಯಜಯ॥9॥ ಕುಸುಮಬಾಣನ ಮಾರ್ಬಲದಂತೆ। ಹಸುರು ಪಚ್ಚೆಯ ಪಲ್ಲಕ್ಕಿಗಳು। ಮುಸುಕಿದ ಪರಿಮಳದೊಳ ಪ(ಸಾ)ತಕೆ। ದಶರಥ ಬಂದನೆಂದರೆ ಜನರು ಜಯಜಯ॥10॥ ಭರದಿಂದಲೆದ್ದು ಜನಕರಾಯ। ತರಿಸಿ ನಿವಾಳಿಗಳನು ಹಾಕಿ। ಹರುಷದಿ ಕೈಲಾಗವ ಕೊಟ್ಟಿಯೋಧ್ಯದ। ಅರಸ(ನ) ಮನ್ನಿಸಿ ಒಡಗೊಂಡನಾಗ ಜಯಜಯ ॥11॥ ಬೇಗದಿ ಗದ್ದುಗೆಯನು ಹಾಸಿ। ಬೀಗನ ಉಪಚರಿಸಿದ ಜನಕ। ಭಾಗೀರಥಿ ಪಾರ್ವತಿ ಗಂಗೆ ಸಹಿತಲಿ। ನಾಗಭೂಷಣನು ಕುಳಿತನಾಗ ಜಯಜಯ॥12॥ ಸುತ್ತಣ ರಾಯರಾಯರಿಗೆಲ್ಲ। ರತ್ನಗಂಬಳಿಗಳ ಹರಹಿದರು। ಅರ್ತಿಯಿಂದಲಿ ಸುರರೆಲ್ಲರು ಕುಳಿತರು। ವಿಸ್ತರಿಸಿದ ಮಂಟಪದೊಳಗೆ। ಜಯಜಯ॥13॥ ಮಣಿಮಂಟಪದೊಳು ಹಸೆಹಾಕಿ ಕನಕ। ಮಣಿಯ ತಂದಿಳುಹಿದರು। ದಿನಕರಕುಲರಾಮ ಹಸೆಗೇಳೆನುತಲಿ। ಗುಣಾವಳಿಗ ಕೊಂಡಾಡಿದರು ಜಯಜಯ॥14॥ ಪೊಕ್ಕಳೊಳಜನ ಪೆತ್ತವನೇಳು। ಅಕ್ರೂರಜನ ಪೆತ್ತವನೇಳು। ಮುಕ್ಕಣ್ಣನ ರಿಪುಬಲವ ಸಂಹರಿಸಿದ। ಭಕ್ತವತ್ಸಲ ಹಸೆಗೇಳೆಂದರು ಜಯಜಯ॥15॥ ದಶರಥರಾಜ ನಂದನನೇಳು। ಅಸುರಸಂಹಾರ ಕಾರಣನೇಳು। ವಸುಧೆಗೊಡೆಯ ರಾಮ ಹಸೆಗೇಳೆನುತಲಿ। ಋಷಿಗಳೆಲ್ಲರು ಶ್ರುತಿಗರೆದರಾಗ ಜಯಜಯ॥16॥ ಋಷಿವಾಲ್ಮೀಕಿ (ಯ)ರೆಲ್ಲರು ಕೂಡಿ। ಕುಶಲದ ಬಾಸಿಂಗವ ಪಿಡಿದು। ಅಸುರಾರಿಯ ಮಸ್ತಕಕಳವಡಿಸೋರು। ವಸುದೇವನಾಗೆಂದು ಹರಸುತಲಿ ಜಯಜಯ॥17॥

ತಂಡತಂಡದ ರತ್ನ ಅಡಸಿದಾಗ। ದುಂಡುಮುತ್ತಿನ ಮಣಿ ಬಿಗಿದಿದಾಗ। ತೊಂಡಿಲ ಮುತ್ತೈದೇರಳವಡಿಸೋರು ಕೋ। ದಂಡ ಪಾಣಿಸತಿಜಾನಕಿಗೆ ಜಯಜಯ।।18।। ಅರಳುಗಂಗಳಿಗೆ ಅಂಜನ ಹಚ್ಚಿ। ಬೆರಳಿಗೆ ಮುದ್ರೆ ಉಂಗುರವಿಟ್ಟು। ಕೊರಳಿಗೆ ಏಕಾವಳಿಯನೆ ಹಾಕೋರು। ತರಳಾಕ್ಷಿಯರಾ ಜಾನಕಿಗೆ ಜಯಜಯ।।19।। ಬೊಂಬೆಯ ತೊಂಡಿಲ ಮುಡಿದಿರ್ದ। ಕುಂಭಿಣಿಸುತೆ ಕುಳ್ಳಿರಲಾಗಿ। ಅಂಬುಜಾಂಬಕ ರಘುರಾಮನ ಹರುಷದಿ। ರಂಭೆಯಿದ್ದೆಡೆಗೆ ಬಂದನೆ ನಗುತ ಜಯಜಯ।।20।। ಬಂದನೆ ಭಾಗ್ಯಲಕ್ಷ್ಮೀರಮಣ। ಬಂದನೆ ಭಕ್ತವತ್ಸಲ ಸ್ವಾಮಿ। ಬಂದನೆ ಜಾನಕಿಯಡೆ ರಾಮನು ತಾ। ಬಂದನೆ ಮಣಿಮಂಟಪದೆಸೆಗೆ ಜಯಜಯ।।21।। ನಿರ್ಜರನರನಾಗಸ್ತೋತ್ರ ಬಂದ। ಸಜ್ಜನಸಂತಾಪದೂರ ಬಂದ। ದೂರ್ಜಟಿ ಜಪಿಸುವ ನಾಮವಿಗ್ರಹ ಬಂದ। ವಜ್ರಮಾಣಿಕದ್ವಸೆ ಯಿದ್ದೆಡೆ ಜಯಜಯ।।22।। ಕೌಸಲ್ಯಸುತ ಕುಮಾರ ಬಂದ। ಹಂಸವಾಹನಪಿತರಾಮ ಬಂದ। ಕಂಸಾರಿ ದುಃಖವಿ (ನಾಶ) ರವಿಕುಲ। ವಂಶೋದ್ಧಾರಕ ಬಂದನಾಗಜಯಜಯ।।23।। ಭಕ್ತವತ್ಸಲ ರಾಘವ ಬಂದ। ಮುಕ್ತಿದಾಯಕ ಶ್ರೀರಾಮಬಂದ। ಅರ್ಕನು ಶತಕೋಟಿತೇಜನು ಜಗಕತಿ। ಶಕ್ತ ತಾ ಬಂದನೆಂದವೆ ಕಹಳೆ ಜಯಜಯ।।24।। ಸಿಂಧು ಬಂಧನ ರಾಘವ ಬಂದ ಪು। ರಂದರವರದ ಶ್ರೀರಾಮಬಂದ। ಇಂದುವದನೆಪತಿ ರಾಮ ಬಂದನು ರಾಮ। ಚಂದ್ರ ತಾ ಬಂದನೆಂದವೆ ಕಹಳೆ ಜಯಜಯ।।25।। ಯಜ್ಞರಕ್ಷಕ ರಾಘವ ಬಂದ। ಯಜ್ಞಶಿಕ್ಷಾಮಿತ್ರ ರಾಮ ಬಂದ। ಸುಗ್ರೀವರರಕ್ಷಕಾರಣ ಬಂದ ಲಕ್ಷ್ಮಣಾಗ್ರಜ। ಬಂದನೆಂದವೆ ಕಹಳೆ ಜಯಜಯ।।26।। ಯಂತ್ರವಾಹಕ ರಾಘವ ಬಂದ। ಮಂತ್ರಮೂರುತಿ ರಾಮ ಬಂದ। ಕಾಂತೆ ಶ್ರೀಜಾನಕಿರಮಣ ಬಂದನು ರಾಮ। ತಂತ್ರಿ ತಾ ಬಂದನೆಂದವೆ ಕಹಳೆ ಜಯಜಯ।।27।। ದೂಷಕಹರಣ ಶ್ರೀರಾಮ ಬಂದ ವಿ। ಭೀಷಣವರದ ರಾಘವ ಬಂದ। ಭಾಷೆ ಪಾಲಿಪ ರಾಮಚಂದ್ರ ಬಂದನು ಜಗ। ದೀಶ ತಾ ಬಂದನೆಂದವೆ ಕಹಳೆ ಜಯಜಯ।।28।। ತಾಟಕಪ್ರಾಣಾಪಹಾರ ಬಂದ। ಜಟಾಯುಮುಕ್ತಿಕಾರಣ ಬಂದ। (ತಾಟಂಕ)ಧರ ನಾರಾಯಣ ರವಿಕುಲ। ಕೋಟಿ ತಾ ಬಂದನೆಂದವೆ ಕಹಳೆ ಜಯಜಯ।।29।। ವೀರ ವಿಕ್ರಮ ರಾಘವ ಬಂದ। ಮಾರೀಚಮರ್ದನ ರಾಮ ಬಂದ। ನಾರಿ ಶ್ರೀ ಜಾನಕಿರಮಣ ಬಂದನು। ಹರಿ ರಾಮ ತಾ ಬಂದನೆಂದವೆ ಕಹಳೆ ಜಯಜಯ।।30।। ದೇವಕುಮಾರ ರಾಘವ ಬಂದ। ದೇವರ ದೇವನು ರಾಮಬಂದ। ಭಾಮೆ ಶ್ರೀ ಜಾನಕಿರಮಣ ಬಂದನು। ರಾಮಚಂದ್ರ ತಾ ಬಂದನೆಂದವೆ ಕಹಳೆ ಜಯಜಯ।।31।। ನಿರುಪಮಚರಿತ ರಾಘವ ಬಂದ। ದುರುತದಲ್ಲಣ ರಾಮದೇವ ಬಂದ। ಭರತಶತ್ರುಘ್ನರ ಸಹೋದರಯೋಧ್ಯದ। ಸುರಪತಿ ಬಂದನೆಂದವೆ ಕಹಳೆ ಜಯಜಯ।।32।। ಹೇಮ ಖಚಿತ ರತ್ನ ಪೀಠದಲಿ। ಭೂಮಿಜೆ ಸಹಿತ ಕುಳಿತ ರಾ। ವಾಮ ಭಾಗದಿ ಒಪ್ಪಿರ್ದಳು ಜಾನಕಿ। ಆ ಮಹಾಸಭೆಯನು ಬೆಳಗುತಲಿ ಜಯಜಯ।।33।। ಕುಂದಣ ರತ್ನದಡ್ಡಿಕೆಯೊಳಗೆ। ಹೊಂದಿಸಿ ನವರತ್ನ ಇರುವಂತೆ। ಇಂದುವದನೆ ಜಾನಕಿ ಹರುಷದಿ ರಾಮ। ಚಂದ್ರನ ಮಧ್ಯದೊಳೊಪ್ಪಿದಳು ಜಯಜಯ।।34।। ಹೇಮದ್ವರಿವಾಣದೊಳಗ್ನಿಯನು। ಕಾಮಿನಿಯರು ತಂದಿಳುಹಿದರು। ರಾಮ ಮನ್ನಿಸಿ ಉಡುಗೊರೆಯಿತ್ತು ಅವರಿಗೆ। ಹೇಮಾರ್ಚನೆಗಳ ತೊಡಗಿದನು ಜಯಜಯ।।35।। ಲಾಜತಂಡುಲ ಆಹುತಿಗೊಟ್ಟು। ಪೂಜಿಸಿದನೆ ವಿಘ್ನೇಶ್ವರನ। ರಾಜವದನೆಯ ಒಡಗೊಂಡು ರಾಘವ। ಪೂಜಿಸಿದನೆ ಋಷಿಮುನಿವರ ಜಯಜಯ।।36।। ಇಂದ್ರಾದಿ ಮುನಿಗಳು ಕೈ ಹೊಡೆದು। ಚಂದ್ರಸೂರ್ಯರು ಉಘೇಉಘೇಯೆನಲು। ಮಂದಾರ ಮಲ್ಲಿಗೆ ಮಳೆಗಳ ಕರೆದರು। ಅಂದದಿ ಸುರಜನರೆಲ್ಲರಾಗ ಜಯಜಯ।।37।। ಅರಳುವ ಕೆಂದಾವರೆ ಕುಸುಮ। ಪರಿಮಳ ಸುರಮ್ಯ ಕಣ್ಗೆಸೆಯೆ। ಎರಗುವ ಮರಿದುಂಬಿಗಳಂತೆ ರಾಘವ। ಕರಗಳ ಪಿಡಿದೆತ್ತಿದ ಸತಿಯ ಜಯಜಯ।।38।। ಇಳೆಯ ಜಗಂಗಳನುದರದಲಿ। ಅಳವಡಿಸಿದ ಮಹಾತ್ಮಕನು। ಇಳೆಯ ಮಗಳನು ಎತ್ತಲಾರದೆ ರಾಮ। ಬಳಲಿದನೆಂದು ನಕ್ಕರು ಜನರು ಜಯಜಯ।।39।। ಪಾದ ಎಚ್ಚರಿಕೆ ಪರಾಕು ಸ್ವಾಮಿ। ಪಾದ ಎಚ್ಚರಿಕೆ ಪರಾಕು ದೇವ। ಪಾದ ಎಚ್ಚರಿಕೆ ಸೀತಾಪತಿ ರಾಮನೆ। ಪಾದ ಎಚ್ಚರಿಕೆ ಪಾದಪದನ ಜಯಜಯ।।40।। ಚರಣ ಎಚ್ಚರಿಕೆ ಪಾರಾಕುದೇವ। ಚರಣ ಎಚ್ಚರಿಕೆ ಪರಾಕು ಸ್ವಾಮಿ। ಚರಣ ಎಚ್ಚರಿಕೆ ಜಾನಕಿಪತಿ ರಾಮನೆ। ಚರಣ ಎಚ್ಚರಿಕೆ ಗರುಡಗಮನ ಜಯಜಯ।।41।। ತಟ್ಟೆ ಬಟ್ಟಲೊಳಿರ್ದರಿಷಿಣವ। ಬೊಟ್ಟಲಿ ತೆಗದು ಕೌಸಲ್ಯದೇವಿ। ಸೃಷ್ಟಿಗೊಡೆಯ ಶ್ರೀರಾಮಗೆ ತೊಡೆಯೆಂದು। ಕೊಟ್ಟಳೆ

ಸಿರಿದೇವಿ ಕೈಲಿ ಜಯಜಯ॥42॥ ನಳಿನನಾಭನು ಶ್ರೀ ರಾಘವನ। ಇಳೆಯ ಮಗಳು ಜಾನಕಿ ತಾನು। ಗಿಳಿನುಡಿಗಳ ನುಡಿಸುವ ಸಮಯದಿ। ಗುಳುಗುಳಿಸು(ವ) ಗಲಭೆಯ ನಿಲಿಸಿ ಜಯಜಯ॥43॥ ಗೆಜ್ಜೆ ಕಾಲಂದುಗೆ ಘಿಲಿರೆನುತಾ। ವಜ್ರಮಾಣಿಕದೋಲೆ ಪೊಳೆಯುತಲಿ। ಹೆಜ್ಜೆಯಿಂದಳುಕೆ ನಾಚುತ ನಿಂದು ಬೇಡಿದವ। ಅಜನಯ್ಯನ ಸಿರಿವದನವನು ಜಯಜಯ॥44॥ ಅಚ್ಯುತಾನಂತ ಶ್ರೀಹರಿ ರಾಮ। ರಚ್ಚೆಗಿಕ್ಕಿದಳೆನ್ನಲಿ ಬೇಡ। ಹೆಚ್ಚಿನ ತಮನೆಂಬ ದೈತ್ಯನ ಗೆಲಿದಂಥ। ಮತ್ಸ್ಯರೂಪದ ಮುಖ ತಾರೆಂದಳು ಜಯಜಯ॥45॥ ನಿರ್ಮಳಾತ್ಮಕ ನಿತ್ಯ ರಾಮ। ನಿಮ್ಮ ಪೂರ್ವವನೆತ್ತಿದಳೆನ್ನ ಬೇಡ। ಕೂರ್ಪುಪಕಾರದಿ ಸುರರಿಗೆ ಅಮೃತವ। ವರ್ಮದಿಂ ತಂದ ಮುಖ ತಾರೆಂದಳು ಜಯಜಯ ॥46॥ ಸರ್ವದೇವೋತ್ತಮ ರಾಮ ನಿಮ್ಮ। ಪೂರ್ವವನೆತ್ತಿದಳೆನ್ನ ಬೇಡ। ಉರ್ವಿಯ ಕದ್ದ (ದೈತ್ಯನ)ನು। ಗೆಲಿದಂಥ। ದೇವ ನಿಮ್ಮಯ ಮುಖ ತಾರೆಂದಳು ಜಯಜಯ॥47॥ ಹಗಲು ಇರುಳು ನಿಮ್ಮ ಧ್ಯಾನದೊಳು। ಮಗುವು ಸ್ಮರಿಸೆ ನೀವು ಮರುಳಾಗಿ। ಜಗವರಿಯಲು ಕಂಬದಿ ಬಂದ ಮಾನಸ। ಮೃಗದ ಮುಖವನೊಮ್ಮೆ ತಾರೆಂದಳು ಜಯಜಯ॥48॥ ಮಂಗಳಾತ್ಮಕ ನಿತ್ಯ ರಾಮ ನಿಮ್ಮ। ದಿವ್ಯಂಗಳ ಮರೆಸಿ ಕುಬುಜನಾಗಿ। ಪಂಗನಾಮವ ಸಿರಿನೊಸಲಿಗೆ ಧರಿಸಿದ। ಬಂಗಾರದ ಮುಖ ತಾರೆಂದಳು ಜಯಜಯ॥49॥ ತಂದೆಯ ಮಾತನು ಕೇಳುತಲಿ। ಕೊಂದೆ ತಾಯನು ಭಾರ್ಗವನಾಗಿ। ನಿಂದು ಕೊಡಲಿಯನು ಪಿಡಿದು ಚರಿಸುವ। ಬಂಗಾರದ ಮುಖ ತಾರೆಂದಳು ಜಯಜಯ॥50॥ ನಗೆನುಡಿ ಮಾತನಾಡಲು। ಇಷ್ಟು ದುಗುಡವ್ಯಾತಕೆ ದೇವೋತ್ತ ಮನೆ। ಜಗವನೆಲ್ಲವ ನಿಮ್ಮ ಹೃದಯದೊಳಿಂಬಿಟ್ಟ। ಸುಗುಣ ಶ್ರೀರಾಮ ಮುಖ ತಾರೆಂದಳು ಜಯಜಯ॥51॥ ನೀಲವರ್ಣನೆ ನಿತ್ಯಕಲ್ಯಾಣನೆ। ಬಾಲಭಾಸ್ಕರ ಅನಂತತೇಜ। ತೋಳಿಗೆ ಸಾಸಿರ ಗೋಪಿಯರಾಳಿದ। ಲೋಲಕೃಷ್ಣನೆ ಮುಖ ತಾರೆಂದಳು ಜಯಜಯ॥52॥ ಸುಂದರ ರೂಪಿನಿಂದಲಿ ಬಂದು। ಕಂದರ್ಪನ ಕೇಳಿಗೊಳಗಾಗಿ। ಇಂದುಮುಖಿಯರ ವ್ರತಗಳನಳಿದ ಆ। ನಂದ ಮುಖನೊಮ್ಮೆ ತಾರೆಂದಳು ಜಯಜಯ॥53॥ ಕಾಯಜಕೋಟಿ ಲಾವಣ್ಯರೂಪ। ಹಯವಾಹನ ಮೂರ್ಲೋಕದೊಡೆಯ। ರಾಯರಾಘವ ರಾಜೀವಲೋಚನ ಎನ್ನ। ಜೀಯಪಾಲಿಸಿ ಮುಖ ತಾರೆಂದಲು ಜಯಜಯ॥54॥ ಸುಗುಣೆ ಆಡಿದ ನುಡಿಗೇಳಿ ಮೆಚ್ಚಿ। ಮಿಗೆ ಹರುಷದಿ ಶ್ರೀರಾಘವನು। ಮುಗುಳುನಗೆಯನು ನಗುತಲಿ। ನೆಗಹಿದ ಮುಖಪದ್ಮವ ಸತಿ ಜಾನಕಿಗೆ ಜಯಜಯ॥55॥ ನೀಡಿದ ನಿಡಿ ತೋಳ್ಗಳ ರಾಮ। ತೀಡಿದಳರಿಷಿಣವನು ಸೀತೆ। ಕಾಡದೆ ಚರಣವ ಕೊಡಬೇಕೆನುತಲಿ। ಬೇಡಿಕೊಂಡಳು ತನ್ನಪತಿಯೊಡನೆ ಜಯಜಯ॥56॥ ಕಲ್ಲೊಳು ಕಾಂತೆ(ಯ) ಮಾಡಿದಚರಣ। ಬಲ್ಲಿದ ಬಲಿಯ ಒತ್ತಿದ ಪಾದ। ಮಲ್ಲರ ಮರ್ದಿಸಿ ಮದನಾರಿಯ ಬಲ। ಅಲ್ಲಿ ಮುರಿದ ಪಾದ ತಾರೆಂದಳು ಜಯಜಯ॥57॥ ತಾವರೆ ಎಸಳ ಪೋಲುವ ಚರಣ। ಹಾವಿನ ಹೆಡೆಯಲಾಡುವ ಚರಣ। ಆವಾಗಲು ರಾಮನು ಭಕ್ತರ। ಜೀವ ಚರಣವ ತಾರೆಂದಳು ಜಯಜಯ॥58॥ ಶಂಖಚಕ್ರದ ರೇಖಿನ ಚರಣ। ಕುಂಕುಮರಾಗ ರಂಜಿತ ಚರಣ। ಶಂಕೆಯಿಲ್ಲದೆ ಶಕಟನ ಮರ್ದಿಸಿದ ಮಿನಾಂಕನ ಚರಣವ ತಾರೆಂದಳು ಜಯಜಯ॥56॥ ಪಿಡಿದರಿಷಿಣವ ಜಾನಕಿದೇವಿ ತ। ನ್ನೊಡೆಯನ ಮುಖ ಚರಣಕೆ ತೊಡೆದು। ತಡವು ಮಾಡದೆ ಸ್ವಾಮಿ ಕೋದಂಡಪಾಣಿಯ ನೀವು। ಕೊಡಬೇಕೆಂದಳು ಪತಿಯೊಡನೆ ಜಯಜಯ॥60॥ ಮುದ್ದು ಮುಖದ ಶ್ರೀ ಜಾನಕಿಗೆ। ತಿದ್ದಿ ತಿಲಕವ ನೊಸಲಿಗಿಟ್ಟು। ಹೊದ್ದಿದ್ದ ಹೊದಿಕೆಯ ನಿವಾರಿಸಿ ಕುಶಲದಿ। ಭದ್ರ ಗಜಗಮನೆಯರೆಲ್ಲ ಜಯಜಯ॥61॥ ರಾಮನ ಚರಣಕೆ ಸಿರಿದೇವಿ। ಹೂವಿನಕ್ಷತೆಯಿಟ್ಟೆರಗಿದಳು। ಪ್ರೇಮದಿ ಎನ್ನನು ಅಗಲದೆನ್ನುರದೊಳು। ಸ್ವಾಮಿಯಾಗಿರು ಎಂದು ಬೇಡಿದಳು ಜಯಜಯ॥62॥ ಹರಿವಾಣದೊಳಿರ್ದರಿಷಿಣವ। ಬೆರಳಲಿ ತೆಗೆದು ಪಾರ್ವತಿದೇವಿ ಹರುಷದಿ ರಾಮನ ಕೈಯಲಿ ಕೊಟ್ಟಳು। ಸಿರಿದೇವಿಗೆ ನೀನು ತೊಡೆಯೆನುತ ಜಯಜಯ॥63॥ ಬಲ್ಲೆವೊ ದೇವೋತ್ತಮ ನಿನ್ನ। ಫುಲ್ಲಲೋಚನೆ ಜಾನಕಿಯೊಡನೆ। ಸಲ್ಲದು ಸಲಿಗೆಯು ರಾಘವನೀ। ನಿಲ್ಲಬೇಕೆನುತ ಪಾರ್ವತಿನುಡಿದೊಳೆ ಜಯಜಯ॥64॥ ಎದ್ದು ನಿಂತನು ಅಗಜೆಯ ನುಡಿಗೆ। ಹೊದ್ದಿದ್ದ ಪೀತಾಂಬರವ ರಾಮ। ಮಧ್ಯದೊಳಳವಡಿಸುತ ಪಿಡಿದನು। ಶುದ್ಧ ಪತಿವ್ರತೆ ಜಾನಕಿಯ ಜಯಜಯ॥65॥ ಸರುವ ವೇದದ ತತ್ತ್ವದಸಾರೆ। ಧರೆಸುತೆ ಜನಕರಾಯನ ತನುಜೆ। ಅರಸಿ ನಿನ್ನಯ ಮುಖಕಮಲವ ತಾರೆಂದು। ಅರಿಷಿಣಗಳ ತಿಗುರಿ ಸತಿಗೆ ಜಯಜಯ॥66॥

ಲೋಕದೊಳಗೆಣೆಗಾಣೆ ನಿನಗೆಂದು। ಏಕಪತಿವ್ರತೆ ಕೈಗೊಂಡೆ। ನೀ ಕರುಣಿಸಿ ಮುಖಕಮಲವ ತಾರೆಂದು। ಕಾಕುತ್ಸ್ಥದಿರಾಮ ನುಡಿಸಿದ ಸತಿಯ ಜಯಜಯ॥67॥ ಪರುಷದ ಕಣಿಯೆ ಪುತ್ಥಳಿಗೊಂಬೆ। ಸರಸಸದ್ಗುಣಕೆನ್ನೆ ಸಮಗಾತ್ರೆ। ಅರಸಿ ನಿನ್ನಯ ಮುಖಕಮಲವ। ತಾರೆಂದು ಅರಿಷಿಣಗಳ ತಿಗುರಿದ ಸತಿಗೆ ಜಯಜಯ॥68॥ ಸತಿಯಳ ಮುಖ ಮೈಗರಿಷಿಣವ। ಅತಿ ಹರುಷದಿ ರಾಮನು ತಿಗುರಿ। ಕ್ಷಿತಿಯೊಳು ರಾಮನ ಸತಿಯಾಗೀ ಜಗದೊಳು। ಶ್ರುತಿವಂತಳಾಂಗೆದು ಹರಸಿದನು ಜಯಜಯ॥69॥ ಕಪಟನಾಟಕ ಕಾರುಣ್ಯಸಿಂಧು। ಸುಪ(ರ್ಣ) ಗಮನ ಶೇಷಾದಿಬಂಧು ಎ। ನ್ನಪರಾಧವ ಕ್ಷಮಿಸೆಂದು ಎರಗಿದೊ(ದಳು?)। ಚಪಲಾಕ್ಷಿ ರಘುಪತಿಗೆ ಜಯಜಯ॥70॥ ಜಾರಿದ ಬಾಸಿಂಗವ ಪಿಡಿದು। ಸೇರಿಸಿ ಮಸ್ತಕಕಳವಡಿಸಿ। ನಾರಿಯರು ಕುಳ್ಳಿರಿಸೊರು ಬೇಗದಿ। ವಾರಿಜಾಂಬಕ ಶ್ರೀರಾಘವನ ಜಯಜಯ॥71॥ ಒಂದು ಕೈಯಲ್ಲಿ ಮುತ್ತನೆ ಪಿಡಿದು। ಮತ್ತೊಂದು ಕೈಯಲ್ಲಿ ರತ್ನವ ಪಿಡಿದು। ಗಂಧಸುಗಂಧಿ ಜಾನಕಿ ದೇವಿ ಹರುಷದಿ। ಚಂದದಿ ನಿವಾಳಿಸಿದೊ(ದಳು?) ಪತಿಗೆ ಜಯಜಯ॥72॥ ಸರಿಸಕಲಾಗಮಸನ್ನುತನು ನ। ವರತ್ನವ ಕೈಯಲಿ ಪಿಡಿದು। ಯುವತಿ ಜಾನಕಿಗೆ ನಿವಾಳಿಯ ತೆಗೆದನು। ರವಿಕುಲೋದ್ಭವ ಶ್ರೀರಾಘವನು ಜಯಜಯ॥73॥ ಒಳ್ಳೆಯ ಕುಂಕುಮದೋಕುಳಿಯ। ಬೆಳ್ಳಿಯ ಬಟ್ಟಲೊಳಗೆ ತುಂಬಿ। ವೀಳ್ಯದ ಎಲೆಯ ತೆಗೆದು ಜಾನಕಿದೇವಿ। ಚೆಳ್ಳುಗುರ್ಗೊನೆಯಿಂದ ಚಿಮ್ಮಿದಳು ಜಯಜಯ॥74॥ ಮಂಗಳಗಾತ್ರೆ ಶ್ರೀಜಾನಕಿಯು ಆ। ಯಂಗದೊಳೋಕುಳಿಯನು ತುಂಬಿ ರಂಗರಾಯನ ಮಂಡೆ ಮೇಲೆ ತಾ ಚೆಲ್ಲಿದಳು। ಶೃಂಗಾರನಾಭಯೆನುತ ಜಯಜಯ॥75॥ ಎಸೆದ ಕುಂಕುಮ ದೋಕುಳಿಯನ್ನು। ಮಿಸುನಿಯಬಟ್ಟಲೊಳಗೆ ತುಂಬಿ। ದಶರಥರಾಮನ ಕೈಯಲಿ ಕೊಟ್ಟರು। ಕುಸುಮಗಂಧಿಗೆ ನೀನು ತೊಡೆಯೆನುತ ಜಯಜಯ॥76॥ ಚೆನ್ನಿಗರಾಮ ಸಂತೋಷದಿಂದ। ತನ್ನ ವಲ್ಲಭೆ ಕೊಪ್ಪಿರಿಕೆಯನು। ಬಿನ್ನಾಣದಿ ಸಡಿಲಿಸಿ ಓಕುಳಿಯನ್ನು। ಬೆನ್ನಿಗೆ ಲೇಪಿಸಿದನೆ ಸತಿಯ ಜಯಜಯ॥77॥ ಸಂಪಿಗೆ ಸುರಗಿ ಶಾವಂತಿಗೆಯ। ಇಂಪು ಪುಷ್ಪಂಗಳ ಮುಡಿದು। ದಂಪತಿಗಳು ಹಸೆಮೇಲೆ ಕುಳ್ಳಿರ್ದರು। ಸಂಪತ್ತಿನ ಕಹಳೆ ಹಿಡಿದವಾಗ ಜಯಜಯ॥78॥ ಹೊಡೆವ ತಂಬಟೆ ಭೇರಿ ನಿಸ್ಸಾಳೆ। ಸಿಡಿಲು ಕದಡುವಂತಾರ್ಭಟದಿ। ಪಿಡಿದು ತಂದರು ಋಷಿಸತಿಯರು। ಪಾಡುತ ವೈಢೂರ್ಯದ ಆರತಿಗಳನು ಜಯಜಯ॥79॥ ಲಕ್ಷ್ಮೀಕಾಂತ ಶ್ರೀರಾಘವಗೆ। ಮುಕ್ತಿದಾಯಕಿ ಶ್ರೀಜಾನಕಿಗೆ। ಭಕ್ತರ ಸಲಹೆಂದು ಬಾಳ ಸಂತೋಷದಿ। ಅಕ್ಷತೆಯಿಟ್ಟರೆ ಐದೆಯರು ಜಯಜಯ॥80॥ ಅಂಬುಜನಾಭ ಶ್ರೀರಾಘವಗೆ ಕುಂಭಿಣಿಸುತೆ ಶ್ರೀ ಜಾನಕಿಗೆ। ನಂಬಿದಭಕ್ತರ ಸಲಹೆಂದು ಹರಸುತ। ತಾಂಬೂಲ ಇತ್ತರೆ ಐದೆಯರು ಜಯಜಯ॥81॥ ನಳಿನನಾಭನು ಶ್ರೀರಾಘವಗೆ। ಇಳೆಯ ಮಗಳು ಜಾನಕಿದೇವಿ(ಗೆ)। ಥಳಥಳಿಸುತ ಆರತಿಗಳನೆ(ತ್ತಿದ)ರು। ಹೊಳೆಯುತ ಜನಕರಾಯನ ಸತಿಯರು॥82॥ ಸುರಪತ್ನಿಯರೆಲ್ಲ ಪಾಡುತಲಿ। ಪರಿಪರಿ ಆರತಿಗಳ ಪಿಡಿದು। ಹರಸಿ ಕೃಷ್ಣಗೆ ಹರಸುತ ಯೆ(ತ್ತಿದ)ರು। ತರಳಾಕ್ಷಿಯರೆಲ್ಲ ಪಾಡುತಲಿ ಜಯಜಯ॥83॥ ಬಗೆಬಗೆ ರತ್ನದಾರತಿಗಳನು। ಜಗದೋದ್ಧಾರಗೆ ಎತ್ತುತಲಿ। ಉಘೇ ಉಘೇಯೆನುತಲಿ ಸುಮನಸರೆಲ್ಲರು। ಮಿಗೆ ಪೂಮಳೆಗಳ ಕರೆದರಾಗ ಜಯಜಯ ॥84॥ ಸಂತತದಿಂದ ಭಕ್ತರ ಮನದ। ಚಿಂತೆ ಪರಿಹರಿಸುವ ಸ್ವಾಮಿ। ಯಂತ್ರವಾಹಕ ರಾಮ ಸಲಹೆಂದು ಸುರಜನ। ಮಂತ್ರಾಕ್ಷತೆ ಸುರಿದರು ಜಯಜಯ॥85॥ ಕಮಲಜಸುತ ಸಂತೋಷದಿಂದ। ನಮೊನಮೊ ನಾರಾಯಣಯೆನುತ। ವಿಮಲಗೀತದಿ ವೀಣೆಯ ಶೃತಿಗೈಯುತ। ಅಮರನಗರಿಗೈದಿದನಾಗ ಜಯಜಯ॥86॥ ತುಂಗವಿಕ್ರಮ ರಾಮಜಾನಕಿಯರ। ಮಂಗಳುತ್ಸವ (ದು)ರುಟಣೆಯ ಪದವ। ಸಂಗೀತದಿ ಹೇಳಿ ಕೇಳಿದ ಜನರಿಗೆ ಹೆಳವನಕಟ್ಟೆ। ರಂಗಯ್ಯನೊಲಿದಿಹನು ಜಯಜಯ॥87॥

ಶ್ರೀ ಮಹಾಗಣಪತಿಯ ಬಲಗೊಂಡು (ಸೀತಾಕಲ್ಯಾಣ)

ಶ್ರೀ ಮಹಾಗಣಪತಿಯ ಬಲಗೊಂಡು ಪ್ರೇಮದೊಳೊಂದಿಸುವೆ। ಆ ಮಹಾಶಾರದೆ ಚರಣಕ್ಕೆ ನಮೋ ಎಂಬೆ ಪ್ರೇಮದಿಂದುಸುರುವೆ ಸೀತಾ ಕಲ್ಯಾಣ॥ಪ॥ ಕಲ್ಯಾಣಂ ಜಾನಕಿಗೆ ಭೂ ಸುತೆಯಾದ ಕಲ್ಯಾಣಿ ಜಾನಕಿಗೆ। ಕಲ್ಯಾಣಂ ಜನಕಸುನಂದನೆ ಸೀತೆಗೆ ಕಲ್ಯಾಣ ಶ್ರೀ ರಘುರಾಮ ಸೀತೆಗೆ ಸಹಾ॥1॥ ಮಿಥಿಳಾ ಪಟ್ಟಣದೊಳಗೆ ಜನಕನು।

ಮತಿವಂತನೆನಿಸುತಿರೆ ಅತಿಶಯ ಯಾಗವ ರಚಿಸುವೆ ತಾನೆಂದು ಜತೆಯಾಗಿ ಕೂಡುತ್ತ ಸಾಗರಕ್ಕೈ ತಂದೂ॥2॥ಶರಧಿ ಗಂಭೀರವಾದ ತೆರೆ ತೆರೆ ತಳಪಳವೆನುತಿರಲು ಶರಧಿ ಭೋರ್ಗರೆಯುತ್ತ ತೆರೆಗಳು ಹಾರುತ್ತ ತರ ತರ ಮತ್ಸ್ಯವು ಮಕರ ಕೂರ್ಮಗಳಿರೆ॥3॥ ಯಾಗವ ರಚಿಸಲೆಂದು ಜನಕನು ಸಾಗರ ದಡದೊಳಗೆ ಬೇಗದಿ ಹೂಡಿಸೆ ನೋಡಲು ನೃಪ ಚಂದ್ರಕಾಂತಿಯ ಶಿಲೆಯಂತೆ ಜಾನಕಿ ಜನಿಸೆ॥4॥ ಧಾರುಣಿಸುತೆ ಸುರರೆಲ್ಲ ಶ್ರೀಲಕ್ಷ್ಮಿಯೆಂದೆನುತಾ ಭೇರಿನಗಾರಿಯ ಹೊಡೆಸಿ ಸಂತೋಷದಿ ಹೂಮಳೆ ಸುರಿಸಿ ಅರಳಿನ ಮಳೆ ತರಿಸಿ॥5॥ ಹರುಷದಿ ನೃಪವರನು ಸುತೆಸಹ ಪುರಕಾಗಿ ನಡೆತರಲೂ ಗುರುಗಳ ಮುಖದಿಂದ ನಾಮಕರಣ ವೆಸಗಿ ಸೀತೆಯ ವರಕರ್ಣಪುಟದೊಳಗರುಹುತ್ತ॥6॥ ಪುಣ್ಣಿಮೆ ಶಶಿಯಂತೆ ದಿನದಿನ ಚೆನ್ನಾಗಿ ಬೆಳೆಯುತಿರೆ ಮಿಣ್ಣನೆ ನೋಡುತ್ತ ಚೆನ್ನಾಗಿ ನಗುತಿರೆ ಸಣ್ಣ ಹೆಜ್ಜೆಯನಿಡುವ ಪುಣ್ಯವಂತೆಯ ಕಂಡ॥7॥ ಮೆಲ್ಲಡಿಯಿಡುತವಳು ನಗುತಿರೆ ಎಲ್ಲಾ ಮಾತಾಡುತಿರೇ ನಲ್ಲೆಯರನು ಕೂಡಿ ನಿಲ್ಲದೆ ಓಡುತ್ತ ಚೆಲ್ವೆತಾ ಬಂದಳು ಜನಕನಿದ್ದೆಡೆಗಾಗಿ॥8॥ ಸುತೆಯನು ತಕ್ಕಯಿಸಿ ಜನಕನು ಹತ್ತೀರ ಕುಳ್ಳಿರಿಸಿ ಜೊತೆಯಹ ವರನನ್ನು ಕಾಣೆ ನಾನೆನುತಲೆ ಕ್ಷಿತಿಪ ಚಿಂತಿಸುತಿರ್ದ ವಿಧಿಯರಿತು ಬಗೆದನು॥9॥ ಮೂರು ಲೋಕವ ತಿರುಗಿ ವೀಣೆಯ ನಾರದ ಬಾರಿಸುತ ನಾರಾಯಣನೆಂಬ ನಾಮವ ನುಡಿಯುತ್ತ ಧಾರುಣಿಗಿಳಿಯುತ್ತ ಮಿಥಿಲಾಪುರಿಗೆ ಬಂದ॥10॥ ನಾರದ ಮುನಿಯವನಾ ಕಾಣುತ್ತ ಬರವನು ನೃಪವರನು ಚಾರು ಪೀಠದಿ ಕುಳ್ಳಿರಿಸಿ ಪೂಜೆಯ ಗೈದು ಚರಣಕೊಂದಿಸೆ ಮುನಿ ಭೂಪಗೆ ಹರಸುತ್ತ॥11॥ ಸೊರಗಿದಾನನವೇನೂ ನೃಪವರ ಭರದಿಂದ ಪೇಳೆನಲು ತರಳೆಗೆ ವರನನು ಕಾಣದೆ ಮರುಗುವೆ ಕರುಣೆಯೆ ಹರಸೆಂದು ಉಸುರಲು ಇಂತೆಂದ॥12॥ ಧರಣಿಪ ಲಾಲಿಪುದು ಸಭೆಯೊಳು ಹರಧನುವನಿರಿಸು ಧರಣಿ ಪಾಲಕರಿಗೆ ಬರೆದೋಲೆ ಕಳುಹಿಸು ಹರಧನುವೆತ್ತಲು ವರನಹ ಸೀತೆಗೆ॥13॥ ಇಂತೆಂದು ಮುನಿತೆರಳೆ ನೃಪವರ ಸಂತೋಷದಿಂ ಬಳಿಕ ಮಂತ್ರೀಶಗೆಂದನು ಸುತೆಗೆ ಸ್ವಯಂವರ ಎಂತೂ ನಿಶ್ಚೈಸಿದ ಸೀತಾಕಲ್ಯಾಣವ॥14॥ ಚಪ್ಪರ ತೋರಣವ ಮಾಡಿಸು ಒಪ್ಪುವ ಮಂಟಪವ ದರ್ಪದ ವಜ್ರ ವೈಢೂರ್ಯ ಪಚ್ಚೆಗಳಿಂದ ಮಂಟಪ ರಚಿಸುತ್ತ ದರ್ಪಣವಿರಿಸು॥15॥ ಪಟ್ಟಣ ಶೃಂಗರಿಸು ಬೀದಿಯೊಳೆಲ್ಲ ಒಟ್ಟು ಸಾರಣೆಯಗೈಸು ತಟ್ಟನೆ ಕುರುಜು ಮೇರುವೆಗಳ ರಚಿಸುತ್ತ ಒಟ್ಟಾಗಿ ಗುಡಿಕಟ್ಟಿ ಕಟ್ಟಿಸಿಂಗರವಾಗಿ॥16॥ ಚಿತ್ರಗಾರರ ಬರಿಸೀ ವಿಧವಿಧ ಚಿತ್ರಂಗಳನು ಬರೆಸೀ ಪುತ್ಥಳಿಯಂದದಿ ಚಿತ್ರವಾಯಿತು ಪುರ ಸುತ್ತಲು ದ್ವಾರದಿ ನವರತ್ನ ತೋರಣ॥18॥ ಹರಧನು ಸಭೆಯೊಳಗೆ ಇರಿಸಲು ವರವೆಂಟು ಸಾವಿರ ಗಜವು ಸರಿಯಾಗಿ ಸೆಳೆ ತಂದು ಸಭೆಯ ಮಧ್ಯದೊಳಿಟ್ಟು ಏರಿಸಿ ಮಂತ್ರದ ಮತ್ಸ್ಯವ ಇರಿಸಿ॥18॥ ಮುತ್ತು ಮಾಣಿಕದಿಂದ ಧನುವಿಗೆ ಕೆತ್ತಿಸಿ ಶೃಂಗರಿಸಿ ಸುತ್ತಲು ನವರತ್ನ ಗಂಟೆಯನೇರಿಸಿ ಉತ್ತಮ ಮುನಿಗಳು ಪೂಜೆಯ ರಚಿಸುತ್ತ॥19॥ ನಾಕೂ ರಾಜ್ಯದ ಒಳಗೆ ಡಂಗುರ ಹಾಕಿಸಿದನು ಕಡೆಗೆ ನಾಕದಿ ಸುರರಿಗೆ ಲೋಕಪಾಲಕರಿಗೆ ಲೇಖನ ಕಳುಹಿಸಿ ಸೀತೆಯ ಸ್ವಯಂವರಕೆ॥20॥ ಬಂಧು ಬಾಂಧವರೆಲ್ಲ ಜನಕನ ಮಂದಿರ ಕೈ ತರಲು ಒಂದಾಗಿ ಭೂಸುರರೊಂದು ಗೂಡುತಲಿರೆ ಚಂದದಿ ಧರಣಿಪರೊಂದುಗೂಡುತ ಬರೆ॥21॥ ಜನಕನು ಕುಶಧ್ವಜನು ಸ್ವಯಂವರಕೆನುತಲೆ ಪೊರಡುತಿರೆ ತನುಜೆಯ ವಿಷಯಕೆ ಕೀರ್ತಿಯ ನೊಡಗೊಂಡು ತಾನಾಗಿ ಪುರಕೈದಿ ಜನಕಾನಿಗೊಂದಿಸಿ॥22॥ ಜನಕನು ಕುಶಧ್ವಜನ ಕರೆವುತ ಅನುನಯ ದೊಳೆಂದನು ವಿನುತೆ ಸೀತೆಯ ಶೃಂಗಾರಮಾಡಿಸಿ ತಂದು ವಿನಯದಿಂದಲಿ ಕನಕಾಭರಣಗಳ ಕೊಟ್ಟು॥23॥ ಗಣಪತಿಯನ್ನು ಪೂಜಿಸಿ ಸೀತೆಗೆ ಹನಿಯೆಣ್ಣೆ ತಲೆಗ್ಹೊಯ್ಯಿಸಿ ಎಣಿಕೆಯಿಲ್ಲದ ಸತಿಯರು ಕೂಡಿ ಕಲಶದ ಪನ್ನೀರ ಜಳಕದ ಮೇಲೆ ಬಣ್ಣವನುಡಿಸಿ॥24॥ ತಲೆಯನು ಬಾಚುತಲೆ ಸೀತೆಗೆ ಸಲುವ ಆಭರಣ ತೊಡಿಸಿ ತಲೆಗೆ ರಾಕುಟಿ ಚಮುಲಿ ಚೂಡಾಮಣಿಯನಿಟ್ಟು ಜಡೆಗೊಂಡೆ ಬಿಗಿಯುತ್ತ ಬೊಟ್ಟು ಮುಂದಲೆ ಕಟ್ಟಿ॥25॥ ಕಸ್ತೂರಿ ಕುಂಕುಮವ ರಚಿಸುತ್ತ ಒತ್ತಿ ತಿಲಕವನಿರಿಸಿ ಕಸ್ತೂರಿ ಮಲ್ಲಿಗೆ ಶಿರದೊಳು ಮುಡಿಸುತ್ತ ಹೊತ್ತಿಸಿ ದೀಪವ ದೇವರ ಮುಂದಿರಿಸಿ ॥26॥ ಮುತ್ತಿನ ಮಣಿಯಿರಿಸಿ ಮಿತ್ರೆಯರೆಲ್ಲ ಪಟ್ಟಾವಳಿಯ ಉಡಿಸಿ ಎತ್ತಿ ಸೀತೆಯ ತಲೆ ನೆತ್ತಿ ಪೂವಳೆಯಿಟ್ಟು ಮುತ್ತೈದೆಯರು ಎಲ್ಲ ಹರಸಿ ಸೇಸೆಯನಿಕ್ಕಿ॥27॥ ನಾರಿಯರೊಟ್ಟಿನಲಿ ಹರುಷದಿ ನಾರಿ ಸೀತೆಯು ಸಹಿತ ವೀರ ಕುಶಧ್ವಜನೆತ್ತಿ ಕೊಂಡೈ ತಂದು ಚಾರು ಮಂಟಪ ಕೈದಿ ಜನಕನಿಗೊಂದಿಸಿ॥28॥ ಭೇರಿ ನಗಾರಿಗಳುವಿವಿಧ ವಾದ್ಯ ಬೋರೆಂಬ ಕಹಳೆಗಳು ನಾರದ ತುಂಬುರು ವೀಣೆ

ಗಾಯನದಿಂದ ವಾರಾಂಗನೆಯರು ನಲಿದು ನಟ್ಯಾವನಾಡೆ॥29॥ ಪಟ್ಟೆಯ ತೆರೆ ಹಿಡಿಸಿ ಸೀತೆಯ ಮೆಟ್ಟಕ್ಕೀಲಿ ನಿಲಿಸಿ ದಿಟ್ಟತನದಿಧನುವೆತ್ತಿದ ಭಟನಿಂಗೆ ಕೊಟ್ಟು ಪೂ ಮಾಲೆಯ ಇಕ್ಕಲು ಪೇಳಿದ॥30॥ ಗುರುವಾಣತಿಯ ಪಡೆದು ಜನಕನು ಸರುವರಿ ಗೊಂದಿಸುತ ಧರಣಿಪಾಲಕರಿಗೆ ಕರಗಳ ಜೋಡಿಸಿ ಹರಧನು ಎತ್ತಲು ಸಮಯವೆಂದನು ಜನಕ॥31॥ ಭುಜಬಲವುಳ್ಳವರು ಭೂಪಾರಲು ಈಜಗದೊಳಗಿರುವವರು ತ್ರಿಜಗದೊಡೆಯ ಶ್ರೀ ಹರಧನುವೆತ್ತಲು ಭುಜ ಪರಾಕ್ರಮಿಗಳಿಗಿದು ವೇಳೆ ಎಂದನು॥32॥ ಕಾಳಿಂಗ ನೃಪವರನು ಶೃಂಗಾರದಿ ನಲವಿಂದ ಧನುವೆತ್ತಲು ಕಾಂಳಿಂಗರಾಯನು ಧನುವೆತ್ತಲಾಗದೆ ತಲೆಕೆಳಗಾಗುತ್ತ ಧರೆಯೊಳು ಹೊರಳುತ್ತ॥33॥ ಮಗಧ ದೇಶದ ನೃಪನು ಮನದೊಳು ಬಗೆ ಬಗೆಯೆಣಿಸಿಕೊಂಡು ಬಿಗಿಯಾಗಿ ಧನುವೆತ್ತಿ ಧರೆಗಾಗಿ ಬೀಳಲು ಅಗಣಿತ ಜನರೆಲ್ಲ ನಗುತ ಹಾಸ್ಯವನಾಡೆ॥34॥ ಸುರಪಾಲ ಹರುಷದಿಂದ ಎತ್ತಲು ಹರಧನು ಸನಿಹಕೆ ಬರುತಾಗಲು ಸುರಪಾಲ ಧನುವೆತ್ತಿ ತಲೆಗೆಳಗಾಗುತ್ತ ಧರೆಯೊಳು ಹೊರಳುತ್ತ ಸುರಪಾಲನಿಂತೆಂದು॥35॥ ಹರಿಹರ ಬ್ರಹ್ಮರಿಗೆ ಈ ಧನು ಅಳವಲ್ಲ ನಮಗೆನುತ ಸುರಪನು ತಿರುಗಲು ಉಳಿದ ರಾಯರು ಬಂದು ವರಧನುವೆತ್ತದೆ ತಿರುಗಿ ಹೋದರು ಹಿಂದೆ॥36॥ ಕುಂಭಿನಿ ನಗರದಲಿ ಸ್ವಯಂವರ ಎಂಬ ವಾರ್ತೆಯ ಕೇಳಿ ಕುಂಭಕರ್ಣನು ಸಹ ರಾವಣೇಶನು ಬಂದು ಕಂಬದಂತೆಸೆದನು ಸಿಂಹವಿಷ್ಟರದಲ್ಲಿ॥37॥ ಹರನ ಈ ಧನುವನೆತ್ತಿ ಸುರಪನ ಸೆರೆಯಿಟ್ಟು ಆಳುವೆನು ಹರಿಹರ ಬ್ರಹ್ಮರ ತೊಡಕಿ ಗಂಜುವನಲ್ಲ ಸರಿಯಾತು ತನಗೆಂದುಧನುವಿನೆಡೆಗೆ ಬಂದ॥38॥ ಏತಕೆ ತೊಡಗಿದೆನೋ ಸ್ವಯಂವರ ಜಾತೆಯ ಪರಿಣಯವ ಪಾತಕಿ ದಶಶಿರ ಧನುವೆತ್ತಲೇ ಗೈವೆ ಸೀತೆಯ ಪುಣ್ಯವದೆಂತೆಂದ ಜನಕನು॥39॥ ದಶಕಂಠ ಧನುವನೆತ್ತಿ ಬಿಸುಸುಯ್ದು ಬಿಸಿ ರಕುತ ಕಾರುತಿರೆ ಅಸುರರೆಲ್ಲರು ಕೂಡಿ ಪೀಠದಿ ಕುಳ್ಳಿರಿಸಿ ಶಶಿ ಮುಖಿಯರು ನಗಲು ದಶಕಂಠ ತಿರುಗಿದ॥40॥ ಮಿಥಿಲೆಯಿಂದಲಿ ಜನಕ ವಿಶ್ವಾಮಿತ್ರ ಯತಿಗೋಲೆ ಬರೆದಿರಲು ಸುತೆ ಜಾನಕೀಸ್ವಯಂವರ ಕೀಗ ಬಾಲರ ಜೊತೆಯಾಗಿ ಕರಕೊಂಡು ಕರುಣಸಿ ಬಹುದೆಂದು॥41॥ ಯತಿ ರಾಮ ಲಕ್ಷ್ಮಣರು ಪೊರಟಾಗ ಜೊತೆಯಾಗಿ ಬರುತಿರಲು ಪಥದೊಳು ಶಿಲೆಯನು ತುಳಿಯೆ ಶ್ರೀರಾಮನು ಸತಿಯಾದುದನು ಕಂಡು ರಾಮನು ಇಂತೆಂದ॥42॥ ಮುನಿರಾಯ ಲಾಪಿಪುದು ಸತಿಯಾದ ಮುನಿಸತಿಯಾರೆಂದು ಮುನಿಪತಿ ಪೇಳೀಗ ಎನಲೆಂದ ಕೌಶಿಕ ಮುನಿಮೌಳಿ ಗೌತಮ ಸತಿಯೀಕೆ ಅಹಲ್ಯೆ ದೇವಿ॥43॥ಯತಿ ಸತಿಯನು ಬೀಳ್ಕೊಂಡು ಮೂವರು ಮಿಥಿಲಾಪುರಕೆ ಬಂದು। ಪೃಥಿವಿ ಪತಿಯು ತಾನು ಯತಿಗೆ ಪೂಜೆಯ ಗೈದು ಅತಿಭಕ್ತಿಲೊಂದಿಸೆ ಮುನಿರಾಯ ಹರಸುತ್ತ॥44॥ ಮುನಿರಾಯ ಲಾಲಿಪುದು ಈ ಬಾಲರು ಇನ ಬಿಂಬ ಪೋಲುವರೆನೆ ಇನವಂಶದರಸನ ಸುತರಾಮ ಲಕ್ಷ್ಮಣ ಘನ ಪರಾಕ್ರಮಿಗಳು ಇಳೆಯ ಪಾಲಿಪರೆಂದನು॥45॥ ಕರದಲ್ಲಿ ಧನು ಪಿಡಿದು ಶ್ರೀರಾಮನು ಹರುಷದಿ ನಿಂತಿರಲು ತರಿಸುತ ನವರತ್ನ ಪೀಠವನೇರಿಸಿ ಚಾರುಮನ್ನಣೆಗೈದು ಜನಕ ತಾನಿಂತೆಂದನು॥46॥ ಹರುಷದಿ ಜನಕ ನೃಪ ಡಂಗುರ ಹೊಡಿಸಿ ಶ್ರೀರಾಮ ದೇವರಿಗೆ ಹರನ ಧನುಸನೆತ್ತಿಸೀತೆಯ ವರಿಸೆಂದು ವರೆದ ವಚನ ಕೇಳಿಶ್ರೀರಾಮನಿಂತೆಂದ॥47॥ ಹರಧನುವೆತ್ತುವೆನು ಲಕ್ಷ್ಮಣ ಸೀತೆಯ ನೋಡೆನಲು ಹರುಷದಿ ಲಕ್ಷ್ಮಣ ಸಭೆಯೊಳ ಗೈದಿ ಧರೆಯೊಳಿರುವ ಲೋಕ ವಂದಿತೆ ಸಂಪೂಜ್ಯ ಸೀತೆಯ ಕಂಡ॥48॥ ಪಾದದಂಗಳದಲ್ಲಿ ಅಂಗುಳಿಗಳ ಚಂದ್ರಲೇಖೆಯಂತೆ ಹದವಾದ ಜಂಘೆಯು ಬಾಳೆಕಂಬಕೆ ಎಣೆ ಮೃದುವಾದ ನಡು ಎದೆ ಕುಂಭ ಸ್ಥಳದ ಚಂದ॥49॥ ಮದಗಜ ಸೊಂಡಿಲವ ಪೂಲುವ ಕರಗಳೂ ಚೆಲುವಿಕೆಯ ಅಧರ ಪವಳದಂತೆ ಸಾಲು ಮುತ್ತಿನದಂತ ಹದವಾದ ನಾಸಿಕ ಮುಗುಳು ಸಂಪಿಗೆಯಂತೆ॥50॥ ಪೂರ್ಣಚಂದ್ರನ ಪೋಲುವ ಮುಖಮುದ್ರೆ ಚೆನ್ನಾಗಿ ಬೆಳಗುತಿರೆ ಕನ್ನಾಟಿ ಕದಪಿನ ಕಣ್ಣು ಸೋಗೆಲೆಯಂತೆ ಅಣ್ಣಾ ನೀನೇನೆಂಬೆ ರತಿಗೆ ಇಮ್ಮಡಿ ಸೀತೆ॥51॥ ತಮ್ಮ ನಾಡಿದ ನುಡಿಯಾ ಆಲಿಸಿ ರಾಮಾ ಸುಮ್ಮಾನದಲಿ ನಗುತ ಧಿಮ್ಮನೆ ನಡೆತಂದು ಧನುವಿಗೆ ಬಲಿ ಬಂದು ಪ್ರೇಮದಿ ಮಣಿಯುತ ಕರವ ಮುಗಿದ ರಾಮ॥52॥ ಹರುಷದಿ ರಾಮಚಂದ್ರ ಧನುವೆತ್ತಿ ಘನ ಹೆದೆಯೇರಿಸುತ ಸರಿಯಾಗಿ ಸೆಳೆಯಲು ಧನುವು ತುಂಡಾಗಲು ಸುರರೆಲ್ಲ ಜಯವೆಂದು ಸಮವೃಷ್ಟಿ ಸುರಿಸಲು॥53॥ ತರುಣಿ ಜಾನಕಿ ದೇವಿ ಶ್ರೀರಾಮಗೆ ಮಂದಾರ ಮಾಲೆಯನು ಮೆರೆವ ರಾಮನ ಕೊರಳಿಗಿಕ್ಕಿ ಸಂತೋಷದಿ ಚರಣಕೆ ವಂದಿಸಿ ನಾಚಿ ನಿಂತಳು ಬಳಿಗೆ॥54॥ ಉಡುಗೊರೆ ಲೇಖನವ ಅಯೋಧ್ಯೆಗೆ ಜನಕರಾಯನು ಕಳುಹೆ ಒಡನೆ ವಾಚಿಸಿ ಮಂತ್ರಿ

ಪೊಡವಿ ಪಾಲಕ ಕೇಳಿ ಕಡುಹರುಷ ತಾಳಿ ಮಡದಿ ಮಕ್ಕಳ ಸಹಿತ॥55॥ ಪರಮ ವೈಭವದಿಂದ ದಶವಥ ಮಿಥಿಲಾಪಟ್ಟಣ ಕೈದಿದ ವರಮಹಾಜನಕ ತಾನಿದಿರ್ಗೊಂಡು ಮನ್ನಿಸಿ ವರದ ಶ್ರೀ ರಾಮನಿಗೆ ಲಗ್ನ ನಡೆಸೆಂದನು॥56॥ ಮಂಗಲ ಕಾರ್ಯವೆಂದು ಸಂತೋಷದಿ ಗಂಗಾಜಲವ ತುಂಬಿ ತುಂಗ ವಿಕ್ರಮ ಶ್ರೀರಾಮಗೆ ಸೀತೆಯ ಅಂಗನೆ ಸಹಿತಲಿ ಜನಕ ಧಾರೆಯನೆರೆದನು॥57॥ ಆಗಲೆ ಋಷಿವರರು ಬ್ರಾಹ್ಮಣರೆಲ್ಲ ವೇದ ಘೋಷಗಳಿಂದಲಿ ಆಗಮಯುಕ್ತ ವಿಧಾನ ಮಂತ್ರಗಳಿಂದ ಸಾಗರ ಶಯನ ಶ್ರೀ ರಾಮನ ಹರಸುತ್ತ॥58॥ ಗುರುವಸಿಷ್ಠನು ಮುದದಿ ಶ್ರೀರಾಮಗೆ ಹರಸಿ ಸೇಸೆಯ ತಳಿದು ಹರುಷದಿ ದಶರಥ ಜನಕರಾಯನ ಸಹಿತ ಹರಸಿ ಮುತ್ತಿನ ಸೇಸೆ ತಳಿದು ಹರಸುತ್ತಿರೆ॥59॥ ಹರುಷದಿ ಕುಶಧ್ವಜನು ಮಾಳವಿಯನ್ನು ಭರತಗೆ ಧಾರೆಯನೂ ತರಳೆಯಾಗಿಹ ಶ್ರುತಕೀರ್ತಿ ಯೆಂಬವಳನು ವೀರಶತ್ರುಘ್ನಗೆ ಧಾರೆಯನೆರೆದನು॥60॥ ಮಿಥಿಲಾಧೀಶ ನಗುತ ಊರ್ಮಿಳೆಯನ್ನು ಲಕ್ಷ್ಮಣ ದೇವನಿಗೆ ಜತೆಯಾಗಿ ಕುಳ್ಳಿರಿಸಿ ಸುತೆಯ ಧಾರೆಯನೆರೆಯೆ ಸತಿಯರೆಲ್ಲರು ಕೂಡಿ ರತ್ನದಾರತಿ ಬೆಳಗೆ॥61॥ ಮುತ್ತೈದೆಯರೆಲ್ಲಾ ಮಂಟಪದೊಳು ಮುತ್ತಿನಾರತಿ ತರಲು ಮಿತ್ರ ಕುಲಾನ್ವಯರಾಮ ಸೀತೆಗೆ ಬೆಳಗಿ ಮತ್ತಕಾಶಿನಿಯರೆಲ್ಲ ಶೋಭಾನೆ ಹಾಡಿದರು॥62॥ ಅಷ್ಟದಿಕ್ಪಾಲಕರು ಶ್ರೀರಾಮಗೆ ಜಯಜಯವೆನ್ನುತಲಿ ದುಷ್ಟರ ಸದೆದು ನಮ್ಮಿಷ್ಟ ಪಾಲಿಪುದೆಂದು ಅಷ್ಟದಿಕ್ಪಾಲಕರು ಹರಸಿಹೂಮಳೆ ತರಿಸಿ॥63॥ ಇಂತಾದ ಕವಿತೆಯನು ರಚಿಸಿದೆ ಕಂತುಪಿತನ ದಯದಿ ಕಾಂತೆ ಮೂಕಾಂಬಿಕೆ ಸೀತಾಕಲ್ಯಾಣವ ಈತೆರ ರಚಿಸಿದೆ ಪ್ರೀತಿಯಿಂದೊರೆವುದು॥64॥ ಮಂಗಲಂ ಶ್ರೀರಾಮಗೆ ಅಂಗನೆಯರು ಮಂಗಲಂ ಮೇನಕೆಗೆ ಮಂಗಲಂ ಕೊಲ್ಲೂರ ಒಡತಿ ಮೂಕಾಂಬೆಗೆ ಮಂಗಲಂ ರಘುರಾಮ ಸೀತೆಗೆ ಸಹ॥65॥

ಕಲ್ಯಾಣಂ ತುಳಸಿ ಕಲ್ಯಾಣಂ (ತುಳಸಿ ಕಲ್ಯಾಣ) ರಾಗ: ಸೌರಾಷ್ಟ್ರ-ಆದಿತಾಳ

ಕಲ್ಯಾಣಂ ತುಳಸಿ ಕಲ್ಯಾಣಂ॥ಪ॥ ಕಲ್ಯಾಣವೇ ನಮ್ಮ ಕೃಷ್ಣ ಶ್ರೀ ತುಳಸಿಗೆ। ಬಲ್ಲಿದ ಶ್ರೀ ವಾಸುದೇವನಿಗೆ॥ಅ.ಪ.॥ ಅಂಗಳದೊಳಗೆಲ್ಲ ತುಳಸಿಯ ವನಮಾಡಿ। ಶೃಂಗಾರವ ಮಾಡಿ ಶೀಘ್ರದಿಂದ। ಕಂಗಳ ಪಾಪವ ಪರಿಹರಿಸುವ ಮುದ್ದುರಂಗ ಬಂದಲ್ಲಿ ತಾ ನೆಲಸಿದನು॥1॥ ಮಿಂದು ಮಡಿಯನುಟ್ಟು ಸಂದೇಹವ ಬಿಟ್ಟು। ತಂದ ಶ್ರೀಗಂಧಾಕ್ಷತೆಗಳಿಂದ। ಸಿಂಧುಶಯನನ ವೃಂದಾವನದಿ ಪೂಜಿಸೆ। ಕುಂದದ ಭಾಗ್ಯ ಕೊಡುತಿಹಳು॥2॥ ಭಕ್ಷ ಭೋಜ್ಯಂಗಳ ನೈವೇದ್ಯವಿತ್ತು। ಲಕ್ಷಬತ್ತಿಯ ದೀಪವ ಹಚ್ಚಿ। ಅಧೋಕ್ಷಜ ಸಹಿತ ವೃಂದಾವನ ಪೂಜಿಸೆ। ಸಾಕ್ಷಾತ್ ಮೋಕ್ಷವ ಕೊಡುತಿಹಳು॥3॥ ಉತ್ಥಾನದ್ವಾದಶೀ ದಿವಸದಲ್ಲಿ। ಕೃಷ್ಣ ಉತ್ತಮ ತುಳಸಿಗೆ ವಿವಾಹವ। ಚಿತ್ತನಿರ್ಮಲರಾಗಿ ಮಾಡಿದವರಿಗೆ। ಉತ್ತಮ ಗತಿಯೀವ ಪುರಂದರವಿಠಲ॥4॥

ನೆನೆವೆ ಶ್ರೀ ಹರಿಯಾ ಚರಣ ಚರಿತ್ರೆಯ (ರುಕ್ಮಿಣಿ ಕಲ್ಯಾಣ)

ನೆನೆವೆ ಶ್ರೀ ಹರಿಯಾ ಚರಣ ಚರಿತ್ರೆಯ। ನೆನೆದು ಶ್ರೀ ಹರಿಗೆ ವಂದಿಸುವೆ ॥ಪ॥ ಕುಂಡಿನ ಪುರವನು ಆಳುವ ಭೀಷ್ಮಕ। ರಾಯಗೆ ಸುತರಿಲ್ಲದಿರಲು॥ ತಾನಾಗ ಪುತ್ರಕಾಮೇಷ್ಟಿಯ ಮಾಡಲು। ಬಾಲಕಿ ಜನಿಸಿದಳಂದು॥ ಹುಟ್ಟಿದಳಾಗಲೇ ರುಕ್ಮಿಣಿದೇವಿಯು। ರುಕ್ಮಮಾಲಿಯೊಡಗೂಡಿ॥ ನಾರಿ ರುಕ್ಮಿಣಿಗೆ ನಾಮಕರಣವ ಮಾಡಿ ಬಾಲ ತೊಡಿಗೆಯ ತೊಡಿಸಿದಳು॥ ಕಾಲದಂದುಗೆ ಗೆಜ್ಜೆ ಸರಪಳಿಯನ್ನಿಟ್ಟು ಹಾರ ಹೀರಾವಳಿಸರವ ತೋಳರಕ್ಷೆಯ ಮಣಿ ಅರಳೆಲೆಮಾಗಾಯಿ ಬಾಲಕಿಗಲಂಕರಿಸಿದರು॥ ಕಂಬಸಾಲೆಯೊಳಗೆ ರಂಭೆ ರುಕ್ಮಿಣಿದೇವಿ ಅಂಬೆಗಾಲಿಕ್ಕುತ ಬರಲು ರಂಭೆಯರೆಲ್ಲರೆತ್ತಿ ಮುದ್ದಿಸಿದರು। ರಂಗಗೆ ವಧುವಾಗಲೆಂದು॥ ಓಲಗ ಶಾಲೆಯೊಳಗೆ ರುಕ್ಮಿಣಿ ದಟ್ಟಡಿಯಿಕ್ಕುತ್ತ ಬರಲು ಮಿತ್ರೆಯರೆಲ್ಲರೂ ಮುದ್ದಿಸಿದರು ಕೃಷ್ಣಗೆ ವಧುವಾಗಲೆಂದು॥ ಏಳನೆ ವರುಷವಾಯಿತು ರುಕ್ಮಿಣಿಗೆ। ತಕ್ಕವರನು ಯಾವನೆಂದು ತಾನಾಗ ಬ್ರಾಹ್ಮಣರ ಕರೆಯಿಸಿ ಭೀಷ್ಮಕ ಕಾಣಿಕೆ ಕೊಟ್ಟು ಕೈಮುಗಿದ॥ ಏನು ಕಾರಣ ನಮ್ಮ ಕರೆಸಿದೆ ಎನುತಲಿ। ಬ್ರಾಹ್ಮಣರು ಕೇಳಿದರಾಗ॥ ಏಳನೆ ವರುಷವಾಯಿತು ರುಕ್ಮಿಣಿಗೆ ತಕ್ಕ ವರನು ಪೇಳಿರೆಂದ॥ ತ್ರೈಲೋಕ್ಯ ಸಂಚಾರಿ ನಾರದ ಮುನಿಯಾಗ ಸುರಲೋಕದಿಂದಲಿ ಬಂದು ಏನಯ್ಯ ಭೀಷ್ಮಕನೆ ಮನದೊಳು ಯೋಚನೆ ಮುದದಿಂದ

ಪೇಳಬೇಕೆಂದ।। ನಾರೀ ರುಕ್ಮಣಿಗೆ ವರನಾರೆನ್ನುತಲಿ ನಾನು ಚಿಂತೆಯನು ತಾಳುವೆನು ಧರೆಯೊಳು ಕುವರಿಗೆ ವರನಾರೆನ್ನುವೆ ದ್ವಾರಕೆಯಾಳುವ ಕೃಷ್ಣ।। ಆತನಲ್ಲದೆ ಮತ್ತೆ ವರರಿನ್ನುಂಟೇನೋ। ಮುದದಿಂದ ಕೇಳಯ್ಯ ಭೀಷ್ಮಕ।। ನಾರದರ ನುಡಿಯನ್ನು ಲಾಲಿಸಿ ಭೀಷ್ಮಕ ಕರೆಸಿದ ತನ್ನ ಮಂತ್ರಿಯನು।। ಮುದದಿಂದ ಮಂತ್ರೀಶ ತಾ ಬಂದು ಕೇಳಿದ ಕರೆಸಿದ ಕಾರಣವೇನೈ। ನಿನ್ನನು ಕರೆಸಿದ ಕಾರಣ ಪೇಳುವೆ ನೀನು ಲಾಲಿಸು ಎನ್ನಮಾತ।। ಕೇಳಯ್ಯ ಮಂತ್ರೀಶ ಎನ್ನ ಬಿನ್ನಪಗಳ। ನಾರದ ಮುನಿಯ ವಾಕ್ಯವನು ನಾರೀ ರುಕ್ಮಿಣಿಗೆ ದ್ವಾರಕೆಯರಸನು ವರನೆಂದು ಪೇಳಿಹನಯ್ಯ।। ಲಾಲಿಸು ದೊರೆಯೇ ನಾರದ ವಾಕ್ಯವು ಸರ್ವರಿಗೂ ಸಮ್ಮತವಯ್ಯ।। ಮಂತ್ರಿಯ ನುಡಿಯನು ಲಾಲಿಸಿ ಭೀಷ್ಮಕ ಮುದದಿಂದ ಕಳುಹಿದ ಚಾರರಾ।। ಬೇಗದಿಂದಲಿ ಚಾರರು ಬಂದು ದ್ವಾರಕೆಗಾಗ। ವಂದಿಸಿ ಹರಿಗೆ ಕೈ ಮುಗಿಯೆ।। ಕರಗಳ ಮುಗಿದು ನಿಂದಿರೆ ಚಾರರಾಗ। ಮುದದಿಂದ ಹರಿಯು ಕೇಳಿದನು।। ಬಂದ ಕಾರಣವೇನು ಕ್ಷೇಮವೇ ಭೀಷ್ಮಕ। ಕಳುಹಿದ ಪರಿಯು ಇದೇನು। ಕರುಣಿಸಿ ಕೇಳಯ್ಯ ಪಂಕಜನಾಭನೆ ನಾರಿ ರುಕ್ಮಿಣಿಯನು ನಿಮಗೆ। ಮುದದಿಂದ ಭೀಷ್ಮಕರು ಧಾರೆಯನೆರೆಯುವರು।। ಮುದದಿ ಪತ್ರಿಕೆಯ ನೋಡೆಂದು। ಪತ್ರಿಕೆಯನು। ನೋಡಿ ಹರುಷದಿ ಶ್ರೀಹರಿ ಕರೆಸಿದ ಆಳು ಮಂದಿಯನು।। ದಂಡಿಗೆ ಪಲ್ಲಕ್ಕಿ ಅಂದಣ ಸಹಿತಲೇ। ಆನೆ ಕುದುರೆ ಮಂದಿ ಸಹಿತಾ। ದ್ವಾರಕಾಪುರದಿಂದ ತಾ ಬಂದ ಶ್ರೀ ಕೃಷ್ಣ ರುಕ್ಮಿಣಿಯನು ನೆನೆಯುತಲಿ।। ನಾರಿ ರುಕ್ಮಿಣಿಯನ್ನು ಶ್ರೀಕೃಷ್ಣರಾಯಗೆ ಧಾರೆಯನೆರೆದನು ಭೀಷ್ಮಕ।। ದಂಡಿಗೆ ಪಲ್ಲಕ್ಕಿ ಅಂದಣ ಸಹಿತಲೆ ಧಾರೆಯನೆರೆದನು ಭೀಷ್ಮಕ।। ಆನೆ ಕುದುರೆ ಮಂದಿ ಸೇನಾದಳವು ಸಹಿತ। ಕೃಷ್ಣಗೆ ಧಾರೆಯನೆರೆದು।। ಬಂದ ಜನರಿಗೆ ಜಮಖಾನವ ಹಾಸಿ। ಸಂಭ್ರಮದಿಂದ ಕುಳ್ಳಿರಿಸಿ।। ಶೃಂಗಾರದ ಮಂಚಕ್ಕೆ ಬಂಗಾರದ ಹಾಸಿಗೆ ಹಾಸಿ ರಂಗಲಕ್ಷ್ಮಿಯು ಕುಳಿತರು। ಪುಷ್ಪಮಾಲಿಕೆಯನ್ನು ಕೊರಳಿಗೆ ಹಾಕಿಸಿ ಧಾರೆಯನೆರೆದರು ಹರಿಗೆ। ತಂಗಿ ಸುಭದ್ರೆಯ ಬರಹೇಳಿ ಎನುತಲೆ ಅಂಗನೆಯರ ಕಳುಹಿದನು। ಮುತ್ತಿನ ಗಿಂಡೀಲಿ ರಂಭೆರೋಕುಳಿ ತುಂಬಿ ಕೃಷ್ಣರುಕ್ಮಿಣಿ ಕೆಲದಲ್ಲ।। ಚಿನ್ನದಗಿಂಡಿಲಿ ಕನ್ಯೆಯರೋಕುಳಿ ತುಂಬಿ। ಅಣ್ಣ ಅತ್ತಿಗೆ ಕೆಲದಲ್ಲಿ ಸುಭದ್ರೆಯು ಬಂದು ಕಾಲನ್ನೇ ತೊಳೆಯುತ್ತ ಕೊಡು ಮಗಳನೆಂದು ಕೇಳಿದಳು।। ಕೃಷ್ಣನ ಮೋರೆಯ ನೋಡುತ್ತಿರೆ ರುಕ್ಮಿಣಿ ಹಿರಿಯರ ಕೇಳೆಂದು ನಗುತ್ತ। ಕೆಚ್ಚಾಲ ಕೋಟಿ ಬಾಲಕಿ ಹುಟ್ಟಿದರೆ ಅಕ್ಕನ ಮನೆಗೆ ಕೊಡಬೇಕು।। ಏಳನೇ ಕೋಟಿ ಬಾಲಕಿ ಹುಟ್ಟಿದರೆ ತಂಗಿಯ ಮನೆಗೆ ಕೊಡಬೇಕೆಂದು। ತಂಗಿಯ ಮನೆಗೆ ಕೊಡಬೇಕು ಎಂದರೆ। ಕೃಷ್ಣ ನಕ್ಕನು ಮುಗುಳ್ನಗೆಯ।। ಬಟ್ಟಾಗೆ ಮುತ್ತ ತುಂಬಿ ನಾರಿಯರೆಲ್ಲಾ ಎಡವುತ್ತ ಹೋಗೆಂದು ಪೇಳಿದರು। ಹೊಸ್ತಿಲ ಒಳಗೆ ಹಚ್ಚಿಟ್ಟ ದೀವಿಗೆ ಮಾಣಿಕ್ಯ ಪಡಿ ಎಡವುತಲೆ।। ಮಿತ್ರೆ ರುಕ್ಮಿಣಿಗೆ ಎಡವುತ ಹೋಗೆಂದು ಮುತ್ತೈದೆಯರು ಹೇಳಿದರು। ಹೊಸ್ತಿಲ ಒಳಗೆ ಲಕ್ಷದೀಪವ ಹಚ್ಚಿ ಮನದೊಳಗೆ ಮುತ್ತ ತುಂಬಿ।। ಭಾಮೆ ರುಕ್ಮಿಣಿ ನೀನು ಎಡವುತ್ತ ಹೋಗೆಂದು ಬ್ರಾಹ್ಮಣರು ಹೇಳಿದರು। ಹೆರ್ತ ತುಪ್ಪದ ಚಟ್ಟು ನೊಸಲಿಗೆ ಮುಂಗೊಳಿಸಿ। ಅತ್ತೆಯ ಸೆರಗಿಗೊರಸಿದಳು।। ಹಾಲು ತುಪ್ಪದ ಚಟ್ಟು ದೇವರ ಮುಂಗೊಳಿಸಿ ದೇವಕಿ ಸೆರಗಿಗೊರಸಿದಳು। ಅಕ್ಕಿಯ ಹೆಡಿಗೇಲಿ ಅತ್ತೆಯ ನಿಲ್ಲಿಸಿ। ಹಾಲು ಹೋಳಿಗೆ ತುಪ್ಪವೆರಸಿ।। ಗೋಧಿಯ ಹೆಡಿಗೇಲಿ ಸೋದರರ ನಿಲ್ಲಿಸಿ। ಸೊಲಿಗೆ ಹಾಲು ತುಪ್ಪವೆರಸಿ।। ಗಂಗಾನದಿಯೊಳು ಏನು ಕಂಡೆ ರುಕ್ಮಿಣಿ। ಮೇಘವ ಕಂಡೆನೆಂದಳು।। ರಾಶಿಯ ಒಳಗೆ ಏನು ಕಂಡೆ ರುಕ್ಮಿಣಿ। ಶಂಭುವ ಕಂಡೆನೆಂದಳು।। ಕಡಗ ಕಂಕಣ ತೆಗೆದು ಕೈಯೊಳಗಿಟ್ಟರು। ಕೊರಳಿಗೆ ಮಾಲೆಯ ಹಾಕಿದರು।। ಹವಳ ಕಟ್ಟಿನ ಮೊರ ಆರ್ನೂರು ಸಾವಿರ ಹರದೆ ಬಾಗಿನ ಕೊಡುತಿರಲು। ಹರದೇಯರೆಲ್ಲಾ ಬಾಗಿನವ ತಕ್ಕೊಂಡು ಹೊರಟರು ತಂತಮ್ಮ ಮನೆಗೆ।। ಮುತ್ತಿನ ಕಟ್ಟಿನ ಮೊರ ಮುನ್ನೂರು ಸಾವಿರ ಮಿತ್ರೆ ಬಾಗಿನ ಕೊಡುತಿರಲು। ಮಿತ್ರೆಯರೆಲ್ಲಾ ಬಾಗಿನವ ತಕ್ಕೊಂಡು ಬಂದರು ತಂತಮ್ಮ ಮನೆಗೆ।। ಚಿನ್ನದ ಕಟ್ಟಿನ ಮೊರವೈನೂರು ಸಾವಿರ ಹರದೆ ಬಾಗಿನ ಕೊಡುತಿರಲು। ಹರದೆಯರೆಲ್ಲಾ ಬಾಗಿನವ ತಕ್ಕೊಂಡು ಹೊರಟರು ತಂತಮ್ಮ ಮನೆಗೆ।। ಎಣ್ಣೆಯೋರಿಗೆ ತುಪ್ಪ ಸಣ್ಣ ಶಾವಿಗೆ ಪಾಯಸ। ಕನ್ಯೆಯರುಣಬಡಿಸಿದರು। ಬೀಸುಹೋರಿಗೆ ತುಪ್ಪ ಸಣ್ಣ ಶಾವಿಗೆ ಪಾಯಸ ದಾಸಿಯರುಣಬಡಿಸಿದರು।। ಕೃಷ್ಣರ ಕೈಪಿಡಿದು ಹೋಗ್ಹೋಗು ಎನುತಲಿ। ಮಗಳಿಗೆ ಬುದ್ಧಿ ಪೇಳಿದರು। ಕಂಬದ ಮರೆಯಲ್ಲಿ ನಂಬಿ ತಾ ನಿಂತಳು ಕಂಡನೆ ರಂಗ ಮೂರುತಿಯ।। ಹೋಗಿ ಬರುವೆನೆಂದು ಮಾವಗೆ ನಮಸ್ಕರಿಸಿ ಅತ್ತೆಯ ಪಾದಕ್ಕೆ ನಮಿಸಿ ಮುದದಿಂದ ಶ್ರೀಹರಿ ಹೊರಟನು ಬೇಗದಿ

ಆನೆ ಕುದುರೆ ಮಂದಿ ಸಹಿತಾ।। ಗರುಡನ ಪೆಗಲೇರಿ ತಾ ಬಂದು ಶ್ರೀಹರಿ ನಾರಿರುಕ್ಮಿಣಿ ಯೊಡಗೂಡಿ ಮಗಳ ಮದುವೆ ಮಾಡಿ ಕಳುಹಿದ ಭೀಷ್ಮಕ ಕರೆದು ತಂದರು ದ್ವಾರಕೆಗೆ।। ಹಿಡಿಯಲ್ಲಿ ಮುತ್ತ ಸಾಲಿಡುತಲಿ ರುಕ್ಮಿಣಿ ನಡೆದಳು ತಮ್ಮವರ ಮನೆಗೇ। ಅಂದಣ ಸತ್ತಿಗೆ ದಂಡಿಗೆ ಸಾವಿರ ಮುಂದೆ ಕಹಳೆಗಳು ಭೋರಿಡುತಾ।। ರಂಗಲಕ್ಷ್ಮಿಯು ತಾನು ಅಂದಣವೇರುತ್ತಾ ಬಂದರು ದ್ವಾರಕಾಪುರಿಗೆ ಬಂದ ಬೀಗರಿಗೆ ಸಿಂಹಾಪೀಠಗಳಿರಿಸಿ ಮಂದಿರದೊಳಗುಪಚರಿಸಿ।। ಷಡ್ರಾಸಾಮೃತದ ಹೊನ್ನಡಿಕೆ ವೀಳ್ಯವ ತರಿಸಿ ಕೊಡಿಸಿದರಾಗ ಶ್ರೀಹರಿಯು ನಮ್ಮ ಶ್ರೀಹರಿಗೆ। ಬಾಳುವುದೊಂದು ಸ್ನೇಹವು ಮಡದೀರ ಮೇಲೆ ಪ್ರೇಮಗಳು।। ಒಳಗೆ ಹಾಸಿಗೆ ನೀವು ಸರಳ ಮಂಚಗಳೆನುತಲಿ ಮಡದಿಯರಿಗೆ ಪೇಳಿ ಹರಿಯು। ಸಕ್ಕರೆ ತುಪ್ಪವು ಹಾಲನಿರಿಸಿರಿ ಹಲತರ ಹಣ್ಣು ಕಾಯಿಗಳೂ।। ರತ್ನ ಹಾಸಿಗೆ ಹಾಸಿ ಮತ್ತಿಡಿ ದೀವಿಗೆ ಲಕ್ಷ್ಮಿಯ ಪತಿಗೆ ಅರ್ಪಿತವು ಒಳ ಹಿಡಿ ನಡಸಣ್ಣ ನಡೆಯೆ ನೊಸಲ ಹಂಸೆ ನುಡಿಯೆ ಪಂಜರದರಣಿಗಿಯೇ।। ಕಡಗಣ್ಣ ಕಪ್ಪು ಕುಂಕುಮದ ಕಾಂತಿಯ ಕಂಡು ಕರೆಸಿದನಾಗಲೇ ಶ್ರೀಹರಿಯೂ।। ಹೆರಳು ಮಂಡೆಯ ಬಾಚಿ ಅರಳು ಮಲ್ಲಿಗೆ ಮುಡಿಸಿ। ಪರಿಪರಿ ವಸ್ತ್ರಂಗಳುಡಿಸಿ।। ಪರಮಾನ್ನ ಪಾಯಸ ಭಕ್ಷ್ಯಂಗಳ ಮಾಡಿ। ಕಳುಹಿರಿ ರುಕ್ಮಿಣಿಗೆಂದಾ। ಮಿಂದು ಮಂಡೆಯ ಬಾಚಿ ದುಂಡು ಮಲ್ಲಿಗೆ ಮುಡಿಸಿ ಚಂದಾದ ವಸ್ತ್ರಂಗಳುಡಿ।। ರಂಭೆ ರುಕ್ಮಿಣಿದೇವಿ ಹೋಗ್ಹೋಗು ಎನುತಲೆ। ಅಂಗನೆಯರು ಎಲ್ಲ ಪೇಳೆ। ನಲಿಯುತ ನಾಚುತ ತಲೆಬಾಗಿ ರುಕ್ಮಿಣಿ। ನಡೆದಳು ಹರಿಯ ಮಂದಿರಕೆ।। ಮಡದಿ ಬರುವ ಭಾವವ ನೋಡಿ ಶ್ರೀಹರಿಯು ಒಡನೆ ಬಾಗಿಲನೆ ಮುಚ್ಚಿದನು। ರಂಬೆ ಬರುವ ಭಾವವ ನೋಡಿ ಶ್ರೀಹರಿಯ ತಲೆ ಬಾಗಿಲನೆ ಮುಚ್ಚಿದನು।। ಮುಚ್ಚಲು ಲಕ್ಷ್ಮಿಯ ಪತಿ ತಾನು। ಮಿತ್ರೆಯ ಮುಖವ ನೋಡುತಲೀ। ಬಾಗಿಲ ಮುಚ್ಚಿದ ನಾರಾಯಣ ತಾನು ದೇವಿಯ ಮುಖ ನೋಡುತಲೆ।। ಹೀಗಿತ್ತ ರುಕ್ಮಿಣಿ ಬಾರೆಂದು ಕರೆಯುತ। ಹರಿಯು ಮಂಚದಲಿ ಕುಳ್ಳಿರಲೂ। ಮುಂಗೈಯ ಪಿಡಿಯಲೂ ಅಂಜಿ ರುಕ್ಮಿಣಿದೇವಿ। ದುಂಡು ಮುತ್ತಿನಂತೆ ಬೆವೆತು।। ಅಂಗನೆಯ ಮುಖ ಕಮಲವೆಲ್ಲವು ಬಾಡಲು। ಗಡಗಡನೆ ಲಕ್ಷ್ಮೀ ನಡುಗಿದಳು। ನಡುಗಲೇತಕೆ ನಿನಗೆ ಹೊಡೆದೀತೆ ಭೂತ। ಕರೆಸಾಲೆ ಪಂಚಕ್ಷರ।। ಬಿಡಿಸೋ ಉಪಾಯವ ಕಾಣೆನು ಎನುತಲೆ। ಸರಸವಾಡಿದನು ಶ್ರೀಹರಿಯೂ। ಕೃಷ್ಣನ ಮಾತಿಗೆ ಚಿಕ್ಕ ರುಕ್ಮಿಣಿ ತಾನು। ಕಣ್ಣೊಳು ಕಂಬನಿಗರೆದು।। ನಿನ್ನ ಹೆತ್ತ ತಾಯಿತಂದೆ ಸತ್ತು ಹೋದರೆಂದು। ಮಿತ್ರೆಯರು ಹೇಳಿದಾರು। ಒಂದಾಗಿ ಹುಟ್ಟಿದ ರುಕ್ಮಮಾಲಿಯು ತಾನು। ಮಡಿದನೆ ರಣರಂಗದೊಳಗೆ।। ಮನದೊಳು ಧೈರ್ಯವ ಮಾಡೆಂದು ರಮಣಿಗೆ। ಸರಸದ ನುಡಿಯ ಪೇಳಿದನು। ಅತ್ತುತ್ತು ಕಣ್ಗಳ ವ್ಯರ್ಥವಾಗಿ ಕಳೆಯಬೇಡ। ಮಿತ್ರೆ ಧೈರ್ಯವನು ಮಾಡೆಂದಾ।। ಕಪ್ಪುರೂಪಗಳೆಂದು ಒಪ್ಪಲಾರೆಯೇನೇ। ಪಟ್ಟವಾದರೂ ನನಗಿಲ್ಲ। ಹಿರಿಯಣ್ಣ ಬಲಭದ್ರ ಪಟ್ಟಾಧಿಕಾರಿಯು। ಅವರ ಕೈಕೆಳಗಿರುವೆ ನಾನು।। ಎನ್ನನು ನೀ ಕೂಡಿ ಕಷ್ಟಕೆ ಗುರಿಯಾದೆ। ಚಿಂತೆ ಮಾಡಿದರೇನು ಫಲವೂ। ಪೂರ್ವದಿ ನಿಮ್ಮ ತಂದೆ ಅಣ್ಣ ರುಕ್ಮಿ ತಾನು ಎನಗೆ ಕೊಡ ಕೂಡದು ಎಂದು।। ಬಲಿಷ್ಠರ ಧರೆಯೊಳು ನೋಡಿನ್ನು ಕುವರಿಯ। ಕೊಡುವೆನು ಎಂದೆನುತಲಾಗ। ಬ್ರಾಹ್ಮಣರನು ಕರೆಸಿಕೇಳುವ ಸಮಯದೀ। ನಾರದ ಮುನಿಯ ವಾಕ್ಯದಲೀ।। ಎನ್ನ ಕರೆಸಿ ಲಗ್ನವಾಗುತ್ತ ಮತ್ತೆ। ಹೀಗೇಕೆ ಕಣ್ಣೀರು ಸುರಿಸುವೆ ನಿನ್ನಿಚ್ಛೆ ಬಂದರೆ ಬಾ ಬಾರದಿರ್ದಡೆ ಹೋಗು ಹೋಗೆಂದನಾ ಹರಿಯು।। ಭಾವರ ಮನೆಗ್ಹೋದರೆ ಭಾವಿಸಿ ಕರೆದರು। ಬಾಚಿ ಬಿಗಿದಪ್ಪಿ ಕೊಂಬುವರು। ರಂಭೇರಮನೆಗ್ಹೋದರೆ ಸಂಭ್ರಮ ಪಡುವರು। ಗೊಂಬೆಮಂಚಗಳ ಹಾಸುವರು।। ಗಂಧ ಶ್ರೀಗಂಧ ಪನ್ನೀರು ಬಳಿವರು। ವೀಳ್ಯವ ಕೊಡು ತಿರ್ದರವರು।। ನಿನಗೆ ನನಗೆ ಸ್ವರ್ಗ ಲಿಖಿತಗಳಿಲ್ಲೆಂದು। ಮನೆವಾರ್ತೆಗಳಾಗದೆಂದೂ।। ಕಕ್ಕುಲತೆಯ ಪಟ್ಟು ಪಚ್ಚೆ ಮಂಚಕೆ ಬಂದೆ। ನಿನ್ನ ಸುಟ್ಟು ಮೋರೆಗೆ ಬೆಂಕಿ ಬಡಿಯಾ। ಎನ್ನಿಚ್ಛೆಗೊಡಿಸಿ ನೀನು ಕರೆಸಿದಲ್ಲೆ ರುಕ್ಮಿಣಿ। ಬಹಳಸ್ನೇಹವ ಮಾಡಿ ಎನಗೆ।। ಡೊಂಕು ಮೋರೆಯು ಕಾಗೆಯಂತೆ ಕಾಡಿಗೆ। ಯಾಗಿದೆ ಎನುತ ಪುರುಷರ ನೋಡದಂತೆ। ಬೆಂಕಿಯಂದದಿ ಎನ್ನ ಎದುರಿಗೆ ನಿಂತೇಕೆ। ಹೊರಟ್ಹೋಗು ಎಂದ ಶ್ರೀಹರಿಯು।। ಎನ್ನ ಮಾತನು ಕೇಳು ಇನ್ನೊಮ್ಮೆ ರುಕ್ಮಿಣಿ ನಿನ್ನ ಮನೆಗೆ ನಾನು ಬರಲೊ ನಿನ್ನ ಮನೆಗೆ ನಾನು ಬಂದುದುಂಟಾದರೆ। ಎನ್ನಮ್ಮನಾಣೆಯು ಎಂದ ಶ್ರೀಹರಿಯೂ।। ಸಿಟ್ಟಲೀ ಹೊರಟನು ಲಕ್ಷ್ಮೀಯ ಪತಿ ತಾನು। ಮಿತ್ರೆಯ ಮೇಲೆ ಕೋಪದಲಿ। ಸಾಧು ಶ್ರೀಗಂಧವೆಲ್ಲವ ಚೆಲ್ಲಿ। ಸಾದೀನ ತಬಕ ಈಡಾಡಿ।। ಬೇಗದಿ ಹೊರ ಹೊರಟನಾರಾಯಣ ತಾನು। ದೇವಿಯ ಮೇಲೆ ಕೋಪದಲೀ।

ಅಲ್ಲಿಂದ ಈಚಿಗೆ ಮೆಲ್ಲನೆ ನಡೆ ತಂದು ಹರಿಯು ಮಾಡಿದ ಒಂದು ಕಪಟಾ।। ನಾರಿ ರುಕ್ಮಿಣಿಯ ಕಷ್ಟ ಕೋಟಲೆಯಿಂದ। ನರಳಿಸಬೇಕೆಂದೆನುತಾ। ಬೆಂಕಿಯಂತಾ ಚೇಳ ನಿರ್ಮಾಣ ಮಾಡಿ। ಕಂಬದ ಮೇಲೆ ಕುಳ್ಳಿರಿಸಿ। ಕಪಟವ ತಿಳಿಯದೆ ರುಕ್ಮಿಣಿ ದೇವಿಯು। ಹರಿಯು ತಾ ಹೋದಾರು ಎಂದೂ। ಹರಿಯು ಹೋದಾರೆಂದು ರುಕ್ಮಿಣಿದೇವಿಯು। ಹವಳದ ಕಂಭ ಸಾರಲು ಸಾರುತಲಿ।। ಹವಳದ ಕಂಭ ಸಾರಲು ರುಕ್ಮಿಣಿ। ತನ್ನ ಪುರುಷನ ನೋಡುತ್ತಿರಲೂ। ಅಲ್ಲಿಂದ ಆ ಚೇಳು ಉದ್ಭವದಿಂದಲಿ। ಕನ್ಯೆ ಅಂಗೈಯ ಊರಿತು।। ಅಂಗೈಯ ಊರಲು ಅಂಜಿ ರುಕ್ಮಿಣಿದೇವಿ। ದುಂಡು ಮುತ್ತಿನಂತೆ ಬೆವೆತು। ಅಂಗನೆಯ ಮುಖ ಕಮಲವೆಲ್ಲ ಬಾಡಿತು। ಗಡಗಡನೆ ಅರಸಿ ನಡುಗಿದಳೂ।। ಗಡಗಡನೆ ನಡುಗುತ್ತ ಮುಡಿಯ ಮುತ್ತುದುರಿತು। ಕೆಡೆದಳು ಧರಣಿಯ ಮೇಲೆ ಹೆತ್ತ ತಾಯಿ ತಂದೆ ಕಾಣೆನು ಎನುತ ಅತ್ತಳು ರುಕ್ಮಿಣಿದೇವಿ।। ಅಕ್ಕಮ್ಮ ನಿನಗೆ ಶ್ರೀಕೃಷ್ಣನೇನು ಮಾಡಿದ। ಎಂದು ಕೇಳಿದರು ದಾದಿಯರು ತಾಯಮ್ಮ। ನಿನಗೆ ನರಹರ ಏನು ಮಾಡಿದ। ಬಹಳ ಶ್ರಮ ಪಟ್ಟ್ಯಲ್ಲೆ ಅರಸಿ।। ಮಂತ್ರಗಾರರನ್ನು ಕರೆಸಬೇಕೆನ್ನುತ। ಸುತ್ತ ಅಟ್ಟಿದರು ದಾದಿಯರು। ಮಂತ್ರಗಾರರು ಬಂದು ಮಂತ್ರಿಸುತ್ತಿರಲಾಗ। ಕಂತು ಪಿತನ ರಾಣಿಗಾಗ।। ಬೆಂಕಿಯಂತಾ ಚೇಳು ಏರಿದ್ದು ಇಳಿಯಾದು। ಸಂಪನ್ನ ಹರಿಯ ಕರೆತನ್ನಿ। ಇನ್ನೇನು ಬದುಕೇನು ಎನ್ನ ಪ್ರಾಣ ಉಳಿಯೋದು। ಬೇಗನೆ ಪತಿಯ ಕರೆತನ್ನೀ।। ಚೆನ್ನಿಗ ಚೆಲುವ ಹರಿಯು ಬಂದಲ್ಲದೆ। ಎನ್ನ ಪ್ರಾಣ ಉಳಿಯೋದಿಲ್ಲಾ। ಹಾಗೆಂದು ಪೇಳುವ ಸಮಯದಿ ನಾರದ ಮುನಿಯು ತಾ ಬಂದನು ಬೇಗಾ।। ತ್ರೈಲೋಕ್ಯ ಸಂಚಾರಿ ನಾರದಮುನಿ ತಾನು। ಸುರಲೋಕತಿರುಗುತಲಿ ಬಂದಾ। ಬಂದ ನಾರದರನ್ನು ಕಂಡು ರುಕ್ಮಿಣಿದೇವಿ। ವಂದಿಸಿ ಕರಗಳ ಮುಗಿದು।। ಯಾವ ದೇಶದಿಂದ ಬಂದಿರಿ ಮುನಿಗಳೆ ಎನ್ನ ಕಷ್ಟಗಳ ನೋಡಿದಿರಾ। ಏನಾಯಿತು ಎನ್ನ ತಾಯಿ ರುಕ್ಮಿಣಿದೇವಿ ಹೀಗೇಕೆ ಕಣ್ಣೀರು ಸುರಿಸುವೇ।। ಏನು ನಿಮ್ಮ ದುಃಖ ಎನ್ನೊಳು ಪೇಳೆಂದು। ನಾರದ ಮುನಿಯು ಕೇಳಿದನು। ಸತ್ತೇನು ಮುನಿಗಳೇ ದಕ್ಕದು ಈ ಪ್ರಾಣ। ಕೃಷ್ಣ ಮೂರುತಿಯ ಕರೆತನ್ನಿ।। ಇನ್ನೇನು ಬದುಕೇನು ಎನ್ನ ಪ್ರಾಣ ಉಳಿಯದು। ರಮಣನ ಕರೆತನ್ನೀ ಬೇಗಾ। ಚೆನ್ನಿಗ ಚೆಲುವ ಶ್ರೀಹರಿಯು ಬಂದಲ್ಲದೇ। ಎನ್ನ ಪ್ರಾಣ ಉಳಿಯೋದಿಲ್ಲಾ।। ಅರಿಯದೆ ನಾರದರೆ ಹರಿ ನಮ್ಮ ಮಂದಿರಕೆ। ನಡೆದು ತಾವಾಗಲೇ ಬರಲೂ। ಕರೆದರೆ ನಾವೀಗ ಹೋಗದಿದ್ದಕೆ ಬಂದು ಕಪಟವಿದ್ಯವ ಮಾಡಿ ಪೋದಾ। ಕಲ್ಲಾಗಿ ಮಲಗಿರ್ದಹಲ್ಯೆಯ ಸತಿಯಳಾ। ಬೆಲ್ಲದ ನುಡಿಯಲೆಬ್ಬಿಸಿದಾ। ಕೊಡುವೊಲ್ಲೆ ಎನುತಾ ಮೊರೆಯಿಟ್ಟು ರುಕ್ಮಾಂಗದಾ ಬರೆದಿರ್ದ ಸುಕೃತ ಫಲಗಳಾ।। ಮರೆವಂತೆ ಓಲೆಯ ಬರೆದ್ಯಲ್ಲೇ ರುಕ್ಮಿಣಿ ಸವರಿಸಿ ಕೊಳ್ಳಬೇಕೆಂದಾ ಗೊಲ್ಲಾರ ಮಗನಾತ ಬಲ್ಲರ ಮಗಳ್ನೀನು ದಲ್ಲಾಳಿಯಲ್ಲವೇ ಕೃಷ್ಣಾ।। ಕಟ್ಟಿ ತಂದು ನಿನ್ನ ಮನೆಯ ಮುಂದ್ಹಾಕುವೆ ಹಾಗೆಂದು ನಕ್ಕನು ಮುನಿಯು ಹರಿಯು ನರೋತ್ತಮನು ನಿಷ್ಟುರಗೊಳಿಸದೆ ಪ್ರೀತಿಯಿಂದಲಿ ಕರೆತನ್ನಿ।। ನಮ್ಮ ಸ್ವಾಮಿಯ ನೀವು ಕರೆದು ತಂದರಾಗಲೇ ಕೌಸ್ತುಭ ಹಾರವ ಕೊಡುವೆ ಸ್ತ್ರೀಯಳ ವಾಕ್ಯವ ಕೇಳುತ್ತ ನಗುತ್ತಲೇ ನಾರದ ಮುನಿಯು ತಾ ಹೊರಟ।। ಶೀಘ್ರದಿ ಬಂದನು ಆ ಹರಿಯು ಮಂದಿರಕ್ಕೆ ನಾರದ ಮುನಿಯು ಹರುಷದಲೀ ಬಂದ ನಾರದನು ಕಂಡು ಶ್ರೀಗೋವಿಂದ ವಂದಿಸಿ ಕರಗಳ ಮುಗಿದಾ।। ಆವ ದೇಶದಿಂದ ಬಂದಿರಿ ನಾರದರೇ ಹೇಳ್ಯನ್ನಕೂಡೇ ಭಿನ್ನಪವ ಎನ್ನ ಭಿನ್ನಪಗಳ ಮುನ್ನವೇ ಕೇಳಲಿ ಸಣ್ಣ ಪೋರನೇ ಹೋಗು ಎಂದ।। ಅದು ಏನು ನಾರದರೇ ಏನ್ನಪರಾಧವು ನಿಮಗೇಕೆ ಇಷ್ಟು ಕೋಪಗಳು ಎನ್ನಯ್ಯ ಶ್ರೀಕೃಷ್ಣ ಎನ್ನೊಳು ಕೇಳುವೆ ನಿನಗೇಕೆ ಇಂಥಾ ಬುದ್ಧಿಗಳು।। ಅಧಿಕಾರಿಯಾದರೆ ನಿನಗೆ ಮತ್ತೊಬ್ಬರು ಶಿಕ್ಷೆಯ ಪೇಳುವರಿಲ್ಲಾ ನಿಮಗಿಂತ ಶಿಕ್ಷೆಯ ಪೇಳುವರಿನ್ನಾರು ಈ ಲೋಕದೊಳಗೆಂದು ಹರಿಯು।। ರಾಯರ ಮಗಳು ಚಿಕ್ಕ ರುಕ್ಮಿಣಿ ತಾನು ಇನ್ನು ಉಳಿವಳಲ್ಲಾ ಕೇಳು ಚಿಕ್ಕ ಮಗುವು ಶ್ರೀ ರುಕ್ಮಿಣಿ। ದೇವಿಯು ನಿಮ್ಮ ಗುರುತೇನು ಬಲ್ಲಳು।।ಕಣ್ಣಿಟ್ಟು ಬಂದ ಗೋಕುಲನ ಪಳ್ಳಿಯೊಳಗೆ ಹೆಣ್ಣು ಮೋಹಿಸಿದಳವಂಗಾ। ತ್ರೈಲೋಕ ಸಂಚಾರಿ ಮುನಿಪನೆ ಕೇಳಯ್ಯಾ ಎನ್ನ ಭಿನ್ನಪಗಳಾ ನೀನೂ।। ನಿಮ್ಮ ರುಕ್ಮಿಣಿ ನಮಗೆ ಮಾಡಿದ ಅಪರಾಧ ಹೇಳುವೆ ಕೇಳಯ್ಯಾ ಮುನಿಯೇ ಕರೆದಾರೆ ಬಾರಾಳು ಕಣ್ಣೆತ್ತಿ ನೋಡಾಳು ನುಡಿಯಳು ಎನ್ನೊಳು ಮಾತಾ।। ಮನದ ಕ್ರೋಧದಿಂದ ನಾನು ಆಕೆಗೊಂದು ಪರಿಯ ಚೇಳನೆ ನಾನೂರಿ ಬಂದೆ ಚೇಳನಾದರೆ ನೀನು ಉರಿಸಿ ಬಂದ್ಯಲ್ಲಾ ಸತ್ತಾಳು ರುಕ್ಮಿಣಿದೇವಿ।। ಸತ್ತಳೆಂಬುದ ಕೇಳಿ ಗಕ್ಕುಬಿಕ್ಕನೆ ಕಣ್ಣು ಒತ್ತಿದನು ಕದವನ್ನು ಹೆಣ್ಣಿನ ದೆಸೆಯಿಂದ ಕಣ್ಣು ನೀರುಗಳೇಕೆ ಹದಿನಾರು ಸಾವಿರ ನಿನಗೇ।। ಹಾಗಲ್ಲಾ ನಾರದರೆ ಸ್ತ್ರೀಯರೊಳಗೆ ಆಕೆ ಬಹಳ

ಉತ್ತುಮಳು ಕೇಳಯ್ಯಾ. ತಾಯಿ ತಂದೆಯ ಮಾತು ಒಪ್ಪದೆ ರುಕ್ಮಿಣಿ ಸೋದರನ ಮಾತನೇ ಮೀರಿ।। ಓಲೆಯ ಬರೆದಳು ಕರೆಸಿದಳಾಗಲೇ ನಾರಿ ರುಕ್ಮಿಣಿ ಹರುಷದಲಿ ಓಲೆಯ ಬರೆದರೆ ಏಳಿಗೆಯಾಗುವುದೇ ಸ್ತ್ರೀಯರ ಮಂದಿರಕೆ ಹೋಗೇ ಸಲ್ಲಾ।। ಮತಿವಂತನಾಗಿ ಮಂದಿರಕೆ ಹೋಗುವಂಥಾ ಗತಿಗೆಟ್ಟ ಹರಿಯು ನೀನೆಂದಾ ಛೀ ನಿನ್ನ ಜನ್ಮವು ನಾಲ್ವರು ನಗುತಾರೇ ಬಾವಿ ಕೆರೆ ಬೀಳೋದು ಲೇಸು।। ಸ್ತ್ರೀಯ ಕರೆತಂದು ಪಾದಕೆ ನಮಿಸುವೆ ನುಡಿಸುವೆ ನಿನ್ನ ಕೂಡೆ ಮಾತಾ ನಮ್ಮ ರುಕ್ಮಿಣಿ ದೇವಿಯ ಕರೆದು ತಂದರೆ ಕೊರಳ ಮುತ್ತಿನ ಹಾರವ ಕೊಡುವೆ।। ನಾರಾಯಣನ ವಾಕ್ಯವ ಕೇಳಿ ನಗುತಲಿ ನಾರದ ಮುನಿಯು ತಾ ಹೊರಟಾ ಶೀಘ್ರದಿ ಬಂದನು ರುಕ್ಮಿಣಿಯ ಮಂದಿರಕೆ ನಾರದ ಮುನಿಯು ಹರುಷದಲೀ।। ಶ್ರೀಧರನರಸಿ ರುಕ್ಮಿಣಿಯ ಮಂದಿರಕ್ಕಾಗ ದೇವರ ಸೇವಿಸಿ ಬರಲಿ ದೂರದಿಂದಲಿ ತಾನು ಕಂಡಳು ನಾರದರಾ ಕರಗಳ ಮುಗಿದು ಕೇಳಿದಳು।। ಎನ್ನೊಡೆಯ ಶ್ರೀಹರಿ ಏನೆಂದು ನುಡಿದಾರು ನಿಮ್ಮೊಡನೆ ನಾರದ ಮುನಿಯೇ ಏನೆಂದಿರಿ ನಾರದರೆ ಹರಿಯೊಳು ಭಿನ್ನಪವ ಪಾದಕ್ಕೆರಗಿದಳಂದೂ।। ಕರವ ಮುಗಿದು ಬೇಡಿ ಕೈ ಮುಗಿದು ನಿಂದು ಪೇಳಯ್ಯ ಮುನಿಪರೆ ನೀವು ನಿಮ್ಮ ದೆಶೆಗಳಿಂದ ಎನ್ನೊಳು ಕ್ರೋಧವು ನಿನ್ನ ವಲ್ಲಭ ಕೇಳಮ್ಮಾ ।। ಕರೆದಾರೆ ಮಾತಾಡ ಕಣ್ಣೆತ್ತಿ ನೋಡಾನು ನುಡಿಯಾನು ಎನ್ನಕೂಡೆ ಮಾತಾ ಹೆತ್ತ ತಾಯಾಣೆಯ ಇಟ್ಟು ಕೊಂಡ ಮೇಲೆ ಮೆಟ್ಟೇನೇ ಅವಳ ಬಾಗಿಲನು। ಎಂದನು ಶ್ರೀಹರಿ ಇನ್ನೇನ ಪೇಳಲಿ ಕೇಳಮ್ಮಾ ರುಕ್ಮಿಣಿಯೆಂದ ಹದಿನಾರು ಸಾವಿರ ಮಂದಿ ನಿನಗಾತನ ಕಣ್ಣಲ್ಲಿ ನೋಡಲಿಸುವರೇ। ಕಣ್ಣಲ್ಲಿ ತೋರಲಿಸುವರೇ ರುಕ್ಮಿಣಿ ದೇವಿ ಇನ್ನೇಕೆ ಅವನ ಚಿಂತೆಗಳೂ, ಮೃತ್ಯು ಬಂದೀತೆಂದು ಸಂದೇಹವಿಲ್ಲದೇ ಪೇಳೆನಗುಪಾಯವನ್ನೂ।। ಈಗಲುಪಾಯವ ಕೇಳಲಿಕೆ ಬಂದೆ ಆಗೇನು ಆಗಿತ್ತು ನಿನಗೇ ಮುಟ್ಟಿ ಕರೆದರೆ ಅತ್ಯೇಕೆ ರುಕ್ಮಿಣಿ ಚಿಕ್ಕ ಮಗುವು ನೀನಲ್ಲಾ।। ಬಾರೆಂದು ಕರೆದರೆ ಹೋಗದೆ ನಿಲ್ಲುವರುಂಟೆ ಗ್ರಹಹಿಡಿದಿತ್ತೇ ನಿನಗಾಗ ಗೊಲ್ಲರ ಮಗನೆಂದು ಬೈದ್ಯಂತೆ ನೀನಾಗ ಹೇಳುವೆ ನಿನ್ನ ವಲ್ಲಭಗೆ।। ನಾನಾಡಬಾರದು ಅನ್ಯಾಯ ನುಡಿಯುವೆ ಚಾಡಿಕೋರನೇ ಹೋಗು ಎನಲು ಮಾರಿಯನರಸಿಯಮನೆಗೆ ಕರೆದಂತಾಯ್ತು ಮುನಿಯ ಕೂಡ್ಯೇಕೆ ಪೇಳಿದೆನು।। ನೀನು ಹೋಗುವ ಮುನ್ನ ಸ್ವಾಮಿಯ ಕರೆಸುವೆನೆಂದು ದಾದಿಯರ ಕರೆಸಿದಳು. ಕೃಷ್ಣರಾಯರ ರಾಣಿಕಾಂತೆ ರುಕ್ಮಿಣಿ ದೇವೀ ಏತಕ್ಕೆ ನಮ್ಮ ಕರೆಸಿದಿರಿ।। ಕಾಂತೆ ನಿನ್ನಯ ಮುಖ ಕಮಲವು ಬಾಡಿದೆ ಏತರ ಚಿಂತೆ ಹೇಳಮ್ಮಾ ಚಿಂತೆಯೆಂಬುದು ಪರಾತ್ಪರ ನಿಚ್ಚೆಯಾಗಿದೆ ಕಂತುಪಿತನ ಕರೆತನ್ನಿ।। ಇಷ್ಟು ಚಾಳಿಸಿ ಬಾರದೆ ಇರುವ ಕಾರಣವೇನೇ ಕೃಷ್ಣ ಮತ್ಯಾವ ದೊಡ್ಡವನೇ ಚಂದಾದ ಚೌಕಿಲಿ ದಾಳವನಾಡುತ್ತಾ ಸತ್ಯಭಾಮೆಯ ಸಹವಾಗಿ।। ಕೌಸ್ತುಭಧಾರಿಯ ತರುವೆವು ನಾವಿನ್ನು ಎನುತ ದಾದಿಯರು ತೆರಳಿದರು। ಬರುವ ದಾದಿಯರ ಕಂಡು ಶ್ರೀಹರಿ ತಾನು ಸತಿಯರೊಡನೆ ಪೇಳುತ್ತಿದ್ದ।। ಬರುವ ದಾದಿಯರನ್ನು ಕಂಡು, ಕೃಷ್ಣನು ತಾನು ನೋಡಿದೆಯ ದಾದಿಯರೆಂದಾ ತೊತ್ತಿನ ದೆಸೆಯಿಂದ ಇಷ್ಟು ಭೀತಿಗಳೇಕೆ ಕಪಟನಾಟಕ ಸ್ವಾಮಿ ನಿಮಗೆ।। ಬೆರಳಲ್ಲಿ ಗೋವರ್ಧನಗಿರಿ ಎತ್ತಿದಿರಿ ಇಷ್ಟು ಭೀತಿಗಳೇಕೆ ನಿಮಗೇ ಹಾಗೆಂದು ನುಡಿಯುವ ಸಮಯಕ್ಕೆ ದಾದಿಯರು ಬಂದರು ಗೋವಿಂದನೆಡೆಗೆ।। ಮಾತನಾಡದೇ ಬಂದು ಹಿಡಿದಾರು ಸೆರಗನ್ನು ಇಂದಿರೆರಮಣಾ ಎಂದೆನುತಾ ಕಂತುಪಿತನೇ ನಿನ್ನ ಕಾಂತೆಗಂಜುವರಲ್ಲಾ ಮಂಚವನಿಳಿದು ಬಾ ಬೇಗಾ।। ವಂಚನೆ ಬುದ್ಧಿಯೊಳು ಸಂಚನೆಮಾಡಿದಿರಿ ನಿಮ್ಮ ಭೀತಿಗೆ ಅಂಜುವರಲ್ಲಾ ಪ್ರತಿಷ್ಠೆಯ ಉಳುಹಿಸಿಕೊಂಡು ತಪ್ಪದೇ ನಡೆ ಬೇಗಾ। ಕಟ್ಟಿ ಎಳೆಸುವೆವು ಮಂದಿರಕೇ।। ದಾದಿಯಾರಾಡಿದ ನುಡಿಯನು ಲಾಲಿಸಿ ಮಡದಿಯು ನುಡಿದಳು ಬೇಗಾ ಬಹುಮಾನಗಳಿಂದೇ ಸುಮ್ಮನೆ ಕುಳಿತಿರಿ ಆಡಬಾರದೇ ಒಂದು ಮಾತಾ।। ಗಾಡಿಗಾರ ಕೃಷ್ಣ ಚೇಳಳೂರಿಸಿ ಬಂದೆ ಆರು ಬಲ್ಲರು ನಿಮ್ಮ ಮಾಯಾ ಸತಿಯಳ ನುಡಿಯೆಂದು ಲಾಲಿಸಿ ಶ್ರೀಕೃಷ್ಣ ಭಾಮೆಯೊಡನೆ ತಾ ನುಡಿದಾ।। ಮಂದಗಮನೆಯರ ಮನಸ್ಯಾರೆ ಬಲ್ಲವರು ಮರ್ಮವು ತಿಳಿಯಂದು ಜನಕೆ ಅಕ್ಕತಂಗಿಯರು ನೀವು ಒಂದಾಗಿ ಹೋದಿರಿ ನಿಂದ್ಯಕ್ಕೆ ನಗುವಿರಿಯೆಂದಾ।। ಅಲ್ಲಿಂದಯೀಚೆಗೆ ಮೆಲ್ಲನೆ ನಡೆದಂತು ಹೊರಟನು ರುಕ್ಮಿಣಿ ಮನೆಗೇ ಉಟ್ಟ ಪೀತಾಂಬರ ಉರದೊಳು ಕೌಸ್ತುಭ ಎಡಬಲದೊಳು ಶಂಖ ಚಕ್ರಾ।। ಲಕ್ಷ್ಮೀನಾರಾಯಣ ಹೊರಟ ತಾನಾಗಲೇ ಪಕ್ಷಿಯ ಹೆಗಲೇರಿಕೊಂಡು ಹೊದ್ದು ಪೀತಾಂಬರ ಉರದೊಳು ಕೌಸ್ತುಭ ಎಡಬಲದಲಿ ಶಂಖಚಕ್ರ।। ಮದನ ಮೋಹನರಂಗ ಎದೆಮೇಲೆ ಕೌಸ್ತುಭ ಗರುಡವಾಹನನೇರಿಕೊಂಡು ಅಷ್ಟಮಿಯರ್ಧರಾತ್ರಿಯೊಳು ಉದ್ಭವಿಸಿದ

ಹರಿಬಂದ ರುಕ್ಮಿಣೀ ಮನೆಗೇ॥ ಹತ್ತಾನೆ ದಿನದೊಳು ಪೂತನಿಯ ಕೊಂದ ಪಾರ್ಥನ ಸಾರಥಿ ಬಂದ ಮಾತುಳನ ಕೊಂದು ಮಲ್ಲರ ಮಡುಹಿದ ಹರಿಬಂದ ರುಕ್ಮಿಣಿ ಮನೆಗೇ॥ ಅಂಗಳವ ಸಾರಿಸಿ ರಂಗೋಲೆ ತುಂಬುವರು ಮಂಗಳಾರತಿಯ ಬೆಳಗುವರು ನಂದನತನಯನ ನೋಡಿ ಸಂತೈಸುವರು ಮಂದಗಮನೆಯರು ನಗುತಾ॥ ಹಾದಿಯ ಸಾರಿಸಿ ರಂಗೋಲೆ ತುಂಬುವರು ಆರತಿಯನು ಬೆಳಗುವರು ದೇವಕಿ ತನಯನ ನೋಡಿ ಸಂತೈಸುವರು ಗಜರಾಜಗಮನೆಯರು ನಗುತಾ॥ ಹೀಗೆ ಬಾರೋ ಕೃಷ್ಣ ಮುತ್ತಿನಹಾರ ಕೊಡುವೆ ಪಟ್ಟೆ ಮಂಚಗಳ ಹಾಸುವೆನು ಈಗಲೆ ಪಕ್ಷವು ಪೂರೈಸಬೇಕೆಂದು ಮಿತ್ರಾವತಿ ದೇವಿ ಕರೆಯೇ॥ ಓರೆಗಣ್ಣಲಿ ಕೃಷ್ಣ ಸ್ತ್ರೀಯರ ನೋಡುತಾ, ಆನಂದ ಕ್ರೀಡೆಯ ಕೊಡುತಾ ನಾರ್‍ಯೆರಕೂಡೇ ವಿನೋದದ ಮಾತಾಡುತಾ ನಾಳೆ ಬಂದೇವು ನಿಮ್ಮೆಡೆಗೆ॥ ಗರುಡನೇರಿ ಬಂದ ಮುದ್ದು ಮುಖದ ಸ್ವಾಮಿ ಪದ್ಮಿನಿ ರುಕ್ಮಿಣಿ ಮನೆಗೇ ಪುಲ್ಲನಾಭನು ತನ್ನ ಪತ್ನಿಯನೆ ಕಂಡನು. ಪುಷ್ಪದಂದದಿ ಮುಖ ಬಾಡಿ॥ ಶಾಂಭವಿ ಮುಖದೊಳು ಬಂಗಾರ ಹೊಳೆಯುತಾ ಪೊಂಬಟ್ಟೆ ನಿಧಿಯ ವಸ್ತ್ರವನೂ ಶ್ಯಾಮಲವರ್ಣದ ಶ್ರೀಣಿ ವಸ್ತ್ರವನುಟ್ಟು ಬಾಳೆಯ ಹಾಗೇ ಬಳುಕತಲೀ॥ ನೀಲವರ್ಣನು ಬಂದು ದ್ವಾರದಿ ನಿಂದಿರೇ ನಾರಿ ರುಕ್ಮಿಣಿ ದಾದಿಯರು ಇಂದಿರೆ ರಮಣ ಗೋವಿಂದನೆಂದೆನುತಾ ಚಂದುಳ್ಳ ಚೌಕಿ ವೀಳ್ಯವನೂ॥ ಹರಿ ಮಲಗೋ ಮಂಚಕ್ಕೆ ಹವಳದ ಹಾಸಿಗೆ ಅರಳು ಮಲ್ಲಿಗೆ ತಲೆದಿಂಬು ಸುರಪುರದ ಚುಕ್ಕಿಟ್ಟು ಪಾರಿಜಾತದ ಗಂಧ ಒಪ್ಪಿದವೇ ಮಂಚದೆಡೆಗೇ॥ ಶ್ರೀಣಿಯ ಸೀರೆಯನೋಡಿ ತಾನುಟ್ಟಾನು ದ್ವಾರದ ಕೀಲ ತಿರುಹಿದಳು. ಶ್ರೀನಿವಾಸನ ಮಂಚದ ಬಳಿಯಲ್ಲಿ ಪೂರ್ಣಲಕ್ಷ್ಮೀಯು ತಾನು ಹೊಳೆಯೇ॥ ಬರಬೇಡವೇ ಹೆಣ್ಣೇ ಮಾತೇಯಗ್ರಜರಾಣೆ ಬರಬೇಡವೆಂದು ಶ್ರೀಹರಿಯು ತಪ್ಪೆಂಬುದ ಕಾಯೋ ಲಕ್ಷ್ಮೀಯ ಕಾಂತನೇ ಎತ್ತೆರಡು ಕರಗಳ ಮುಗಿವೆ॥ ಅಪರಾಧ ಎಂಬುದ ಕ್ಷಮಿಸಿಕೋ ಎನುತ ಹರಿಗೆ ಲಕ್ಷ್ಮೀಯು ನಮಿಸಿದಳು ಮುತ್ತಿನ ಶಾಂಭವಿ ಎತ್ತಿ ಬೀಸಣಿಗೆಯ ಕೃಷ್ಣರಾಯರಿಗೆ ಬೀಸಿದಳು॥ ಕುಲವಾದಿಯೇ ಹೆಣ್ಣೇ ರಟ್ಟೆಗಳ್ ನೊಂದಾವು ಬೀಸೋರು ನಮಗ್ಯಾರೂ ಇಲ್ಲಾ ಒತ್ತೀದ ರಟ್ಟೇಗೆ ಹತ್ಯಾವು ನಮ್ಮ ಕಪ್ಪು ಬಳಲೀಯೆ ರುಕ್ಮಿಣಿ ನೀನು॥ ಬರಡು ಕರೆಯಲಿ ಬಂಜೆಗೆ ಮಕ್ಕಳಾಗಲಿ ಹರಿ ನಮ್ಮ ಹೃದಯದೊಳಗಿರಲಿ ಋಣವು ತಾ ಹರಿಯಲಿ ದಾರಿದ್ರ್ಯ ತೊಲಗಿ ಶ್ರೀಹರಿ ನಮ್ಮ ಹೃದಯದೊಳಿರಲಿ॥ ಶ್ರೀಕೃಷ್ಣ ರುಕ್ಮಿಣಿ ಸರಸವನಾಡುತಲಿಂದು ವಿನೋದವ ಪಡುತ ರಂಗ ಲಕ್ಷ್ಮೀಯೊಳು ವಿನೋದವನಾಡಿದಾ ಕತೆಗಳ ಕೇಳಲು ಜಗದೀ॥ ದಾರಿದ್ರ್ಯ ತೊಲಗಿ ಅಷ್ಟೈಶ್ವರ್ಯ ಬರುವುದು ಹರಿಯು ತಾನೀವ ಸದ್ಗತಿಯಾ॥ ಇದು ಭಾಗವತವೆನ್ನಿ ಇದು ಭಾಗವತವೆನ್ನಿ. ಇದು ಭಾಗವತದಖಿಲಗಳ ಇದಕ್ಕೆ ಪ್ರಿಯ ನಮ್ಮ ಪುರಂದರ ವಿಠಲನು॥

❖ ❖ ❖

75. ದ್ರೌಪದಿಗೆ ಅಕ್ಷಯಾಂಬರ ಅನುಗ್ರಹ

ಕೃಷ್ಣ ಕೃಷ್ಣ ಕಷ್ಟ ಬಿಡಿಸು ಬಾರೋ **ರಾಗ: ಶಿವರಂಜನಿ**

ಕೃಷ್ಣ ಕೃಷ್ಣ ಕಷ್ಟ ಬಿಡಿಸು ಬಾರೋ। ಕಡೆಗಾಗಿ ನಾನೊಬ್ಬಳಿದ್ದೆ। ಅಲ್ಲಿಗೆ ದುಶ್ಯಾಸನ ಬಂದ। ಕೇಶವ ಹಿಡಿದು ಎಳೆದು ಸೆಳೆದು। ದುರ್ಜನರ ಸಬೆಗೆ ನಡೆದು ಬಂದ॥1॥ ಭೀಷ್ಮ ದ್ರೋಣ ಕೃಪಾಚಾರ್ಯ ನಷ್ಟವಾಯಿತು। ಅವರ ಶೌರ್ಯ। ನಮಗೆ ಬಂದಿತು ಮಹತ್ಕಾರ್ಯಕೆ ಎಷ್ಟೆಂತ ನಾ ಹಿಡಿಯಲಿ ಧೈರ್ಯ। ಕೃಷ್ಣಯ್ಯ ನೀ ದ್ವಾರಕೆಯಲ್ಲಿ ನಾನು ಒಬ್ಬಳೇ ಪರದೇಶದಲ್ಲಿ ಎನ್ನ ಸುದ್ದಿ ಹೇಳುವರ್‍ಯಾರು ಅಲ್ಲಿ। ಸರ್ವಜ್ಞ ಹರಿ ನೀವೆಲ್ಲಾ ಬನ್ನಿ॥3॥ ಕಮಲದಳ ಮಡುವಿನಲ್ಲಿ। ಮದ ಸೊಕ್ಕಿದ ಆನೆ ಹೊಕ್ಕಿತು। ಅಲ್ಲಿ ಇಂತು ಈ ಪರಿಯಾಯಿತು ಎನಗೆ। ಇನ್ನಾದರು ಕರುಣವು ಬಾರದೇ ನಿನಗೆ॥4॥ ತಂದೆ ತಾಯಿ ಎನಗೆ ನೀನೆ। ಎನಗೆ ಬಂಧು ಬಳಗವು ನೀನೆ। ನಿನ್ನ ಚರಣ ಶರಣು ಹೊಕ್ಕೆನು ನಾನು। ಅತ್ಯಂತ ಭಕ್ತರ ಪ್ರಿಯ ನೀನು॥5॥ ಕೌರವರ ಸಭೆಯು ನಡೆಯಿತು ನೋಡಿ। ಹರಿಹರಿ ಸಲಹು ನೀನೆ॥6॥ ಪಾಂಚಾಲಿಯಂಬವರ ಹಿಡಿದು ಸೇಳೆಯಲು। ಆ ಸತಿಯ ಕಾಯೋ ಸುಕೃತ ಶ್ರೀಕೃಷ್ಣ ಹೇ ಕೃಷ್ಣ ವಾಸುದೇವ ಪಾಂಡವರ ರಕ್ಷಕ। ದುಷ್ಟ ದುಶ್ಯಾಸನ ಪತಿವ್ರತೆ

ನುಡಿದಳು। ಉಂಗುಷ್ಠ ಕಾಣಲಿಲ್ಲವೋ।।7।। ಕುಂಕುಮ ಕೇಸರಿ ಪೂಸಿದವನೇ ಪೀತಾಂಬರವನೆ ಉಟ್ಟಿರುವನೆ ಸ್ವಾಮಿ ಹಿಂದಕೆ ತಿರುಗಿ ನೋಡಿದೆಯೇನೋ ಕೃಷ್ಣ।।9।। ಗರುಡಧ್ವಜ ಗರುಡನೇರಿ। ಶಂಖಚಕ್ರ ಚತುರ್ಭಜನಾಗಿ ಸ್ವಾಮಿ ಪುರಂದರ ವಿಠಲ ಬಂದನೊ। ಪತಿವ್ರತೆಯು ಮಾಡಿದಳು ಸ್ಮ ೃತಿಯೂ। ಶಬ್ದ ಹೋಯಿತು ದ್ವಾರಕೆಗೆ ಮಲಗಿದ್ದ ಸ್ವಾಮಿ ಎದ್ದು ಕುಳಿತ। ನೆರೆದಿದ್ದ ಸಭೆಗೆ ನಡೆದು ಬಂದ।।11।।

ಕಣ್ಣೆವೆಗಳ ಮುಚ್ಚುತ ವೈಯ್ಯಾರೆ ರಾಗ: ಪುನ್ನಾಗವರಾಳಿ

ಕಣ್ಣೆವೆಗಳ ಮುಚ್ಚುತ ವೈಯ್ಯಾರೆ। ಕರಗಳ ಜೋಡಿಸಿ ನಿಂತಳು ನೀರೆ। ತನುಮನವ ಹರಿಗೆ। ಎರೆದಳು ಧಾರೆ। ಸುಲಭದಿ ಸೆಳೆದನು। ಪುಟ್ಟಿಹ ಸೀರೆ। ಸರ್ರನೆ ಬಂತು ಕೈಗಾ ಸೀರೆ। ತಿರುಗಿನೋಡೆ ಪುಟ್ಟಿಹಳಾ ಸೀರೆ। ಖಳ ಬೆರಗಾಗುತ್ತ ಸೆಳದನು ಸೀರೆ। ಬೆಳೆಯುತಿದ್ದುದಾ। ಪರಿಪರಿ ಸೀರೆ। ನಾನಾಬಣ್ಣದ ಮಿನುಗುವ ಸೀರೆ। ಚೆಂಗಾವಿಯಂಚುಳ್ಳ ಗಾವಿಯ ಸೀರೆ। ಕಠಾರಿ ಅಂಚು ಕಲಾಬತ್ತು ಸೀರೆ। ಬರಿ ಜರತಾರಿಯ ಕುಸುಂಬ ಬಣ್ಣದ ಸೀರೆ।ಹೊಂಬಣ್ಣದ ಬುಗಡಂಚಿನ ಸೀರೆ। ಹಳದಿ ಬಣ್ಣದ ಚುಕ್ಕೆಯಸೀರೆ ಗಿಣಿಬಣ್ಣದ ಸೀರೆ। ಮೇಘವರ್ಣ ದೊಡ್ಡಂಚಿನ ಸೀರೆ। ಚಿತ್ರಚಿತ್ರವ ಬರೆದಿಹಸೀರೆ। ಹೆಚ್ಚು ಮೌಲ್ಯ ತಗುಲಿದ ಸೀರೆ। ಪಾದರಿಹೂವಿನ ಪೈಠಣಿಸೀರೆ। ಲವಂಗದೂವಿನ ಸರಿಗೆಯ ಸೀರೆ। ಶ್ಯಾಲುಬುಟ್ಟ ಬಂದಿಹ ಬಿಳಿಯ ಹೂವಿನ ಚೀಟಿ ಸೀರೆ। ನವಿಲು ಬಣ್ಣದ ಬಿಳಿಯ ಸೀರೆ। ಪಂಚವರ್ಣ ಪಗಡೂವಿನ ಸೀರೆ। ಮುತ್ತು ಪೋಣಿಸಿದಾ ಸೆರಗಿನ ಸೀರೆ। ಬಂಗಾರದೂವಿನ ಬಹು ವಿಧ ಸೀರೆ। ಮಾಯಾಪೊಪ್ಪಳಿ ಚೌಕಳಿ ಸೀರೆ। ಶೃಂಗಾರವಾಗಿಹ ಮುಂಗಿಯ ಸೀರೆ। ಮೋಹದೊಳುಡುತಿಹ ಚೀಟಿ ಸೀರೆ। ಕನ್ನಡಿ ಕೆತ್ತಿದ ಕರಿಬಣ್ಣದ ಸೀರೆ। ಧಾರುಣಿಯಂತೆ ಬೆಳಗುವ ಬಿಳಿಸೀರೆ। ಕಾಡಿಗಣ್ಣಿನ ಕಲಾಬತ್ತು ಸೀರೆ। ರುಮಾಲು ಅಂಚಿನ ಘನತರ ಸೀರೆ। ಶುಕಮುನಿಯಿಂ ದಿರ್‍ವ ಕೊರೆದ ಸೀರೆ। ರಮೆಯುಡುತಿಹುದಾ ಪುರಾಣಿ ಸೀರೆ। ಪಾರ್ವತಿ ಉಡುತಿಹ ಪೈಟಣಿ ಸೀರೆ। ಸರಸ್ವತಿ ಕಟ್ಟುವ ಶುಭ್ರದ ಸೀರೆ। ತಾಮ್ರವರ್ಣ ಅರುಂದತಿಯಳ ಸೀರೆ। ಮೇಘವರ್ಣ ಶಚಿದೇವಿಯಳ ಸೀರೆ। ಅರುಣವರ್ನಿ ಸಹದೇವಿಯ ಸೀರೆ। ಭ್ರಮರವರ್ಣ ಶ್ಯಾಮಳೆಯಳ ಸೀರೆ। ನೀಲವರ್ಣ ಮಹದುರ್ಗಿಯ ಸೀರೆ। ಚಂದ್ರಗಾವಿ ಕಾಳಿಕೆಯಳ ಸೀರೆ। ಸಂಜೆಗೆಂಪು ಅನಂಜನೆಯಳ ಸೀರೆ। ವಿಚಿತ್ರ ತರ ಚಿತ್ರರೇಖೆಯ ನೀಲವರ್ಣ ಸೀರೆ। ಸರ್ವಲೋಕಗಳು ತೋರುವ ಸೀರೆ। ಸರ್ವದೇಶಗಳು ತಿಳಿಯುವ ಸೀರೆ। ಶಂಕುಚಕ್ರದಂಕಿತವಿಹ ಸೀರೆ। ಪಂಕಜಗದೆ ಅಚ್ಚುಗಳಿಹ ಸೀರೆ। ದಶಾವತಾರ ನೀಲವರ್ಣ ಸೀರೆ। ಸಹಸ್ರನಾಮ ಪುಂಜರದಿಹ ಸೀರೆ। ಹರಿ ಕೃಪೆ ಸುರಿದುದು ಸುರಿಮಳೆ ಸೀರೆ। ಕಳಕುಲಕೆಲ್ಲವೂ ಕೆಟ್ಟಿತು ಮೋರೆ। ಎಚ್ಚರಗೊಳ್ಳುತ ದ್ರೌಪದಿ ವಾರೇ ನೋಟದಿ ಭೀಮಗೆ ಸಂಜ್ಞೆಯ ತೋರೇ। ನಡುಗಿತು ಸಭೆಯೆಲ್ಲಾ। ಬಳಲಿದನಾಕುಲ್ಲಾ।।

ರಂಗನೊಲಿದ ನಮ್ಮ ಕೃಷ್ಣನೊಲಿದ

ರಂಗನೊಲಿದ ನಮ್ಮ ಕೃಷ್ಣನೊಲಿದ।।ಪ।। ಅಂಗನೆ ದ್ರೌಪದಿಗೆ ವಸ್ತ್ರ ಅಕ್ಷಯವೆಂದನು।।ಅ.ಪ।। ಕರಿಯಪುರದ ನಗರದಲ್ಲಿ ಕೌರವರು ಪಾಂಡವರು। ಧರೆಯನೊಡ್ಡಿ ಜೂಜನಿಟ್ಟು ಲೆತ್ತವಾಡಲು।। ಪರಮ ಪಾಪಿ ಶಕುನಿ ತಾನ್ ಪಾಶದೊಳ್ ಪೊಕ್ಕಿರಲು। ಧರ್ಮರಾಯ ಧಾರುಣಿ ದ್ರೌಪದಿಯಸೋತನು।।1।। ಸೋತನೆಂದು ದುರ್ಯೋಧನ ಸಂತೋಷದಿಂದಲಿ ತನ್ನ। ದೂತರಟ್ಟಿಪಾಂಡವರ ಬದುಕು ತರಿಸಿದ। ಜಾತಿಮುತ್ತು ಬೆಳ್ಳಿ ಆನೆ ಕುದುರೆಗಳ ಸಹಿತ। ಭೀತಿಯಿಲ್ಲದಲೆ ಭಾಂಡಾರಕಿಟ್ಟನು।।2।। ಮುದ್ದು ಮುಖದ ದ್ರೌಪದಿಯ ಮುಂದೆ ಮಾಡಿತನ್ನಿರೆಂದು। ತಿದ್ದಿ ತನ್ನ ಮಾನವರಿಗೆ ತಿಳಿಯ ಹೇಳಿದ। ಮುದ್ರೆಮಾನವರು ಬಂದು ದ್ರೌಪದಿಯ ಮುಂದೆ ನಿಂತು।।ಬುದ್ದಿಯಿಂದಲೆಲ್ಲ ಬಿನ್ನಹ ಮಾಡಲು।।3।। ಅಮ್ಮ ಕೇಳೆ ಅರಸುಗಳು ಅಚ್ಚಪಗಡೆ ಪಂಥವಾಡಿ। ಹಮ್ಮಲಿಂದ ಜೂಡನಿಟ್ಟು ಲೆತ್ತವಾಡಲು।। ಧರ್ಮರಾಯ ಸೋತನೆಂದು ಸತ್ಯವಚನ ಕೌರವಂಗೆ। ನಿಮ್ಮ ಇಂಬುನಿಲುವು ಕರೆಯ ಕೊಟ್ಟರೆಂದರು।।4।। ಪಟ್ಟಪದವಿ ಅವರಿಗಾಗಿ ಬಡವರಾಗಿ ಇದ್ದೇವೆಂದರೆ। ಕೆಟ್ಟಪಗಡೆ ಪಂಥ ಜೂಜಿನ್ನೆಲ್ಲಿ ಒದಗಿತು।। ದುಷ್ಟ ಕೌರವನು ಎನ್ನ ಲಜ್ಜೆ ನಾಚಿಕೆಯ ಕಂಡು। ಭ್ರಷ್ಟ

ಮಾಡುವನು ಎಂದು ಬಳಲಿ ದ್ರೌಪದಿ॥5॥ ಬಾಗಿ ಬಳುಕಿ ಬಿಕ್ಕಿ ತನ್ನ ಕಣ್ಣ ನೀರು ಸುರಿಸುತಲಿ। ಮಾಗಿಯ ಕೋಗಿಲೆಯಂತೆ ಕಾಯಸೊಲವುತ॥ ಆಗ ಕೃಷ್ಣನಂಘ್ರಿಗಳ ಅಂತರಂಗದಲ್ಲಿ ನೆನೆದು। ಸಾಗಿಸಾಗಿ ಹೆಜ್ಜೆಯಿಡುತ ಸಭೆಗೆ ಬಂದಳು॥ ವೀರಕರ್ಣ ಅಶ್ವತ್ಥಾ ವಿದುರ ಶಲ್ಯ ಭಗದತ್ತನು। ಕ್ರೂರಕೌರವ ದುಶ್ಶಾಸನ ಗುರುಹಿರಿಯರು॥ ಸಾರುತ್ತಿದ್ದ ಭಟರು ಪರಿವಾರ ರಾಹುತರ ನೋಡಿ॥ ಧಾರುಣಿಗೆ ಮುಖವ ಮಾಡಿ ನಾಚಿ ನಿಂತಳು॥7॥ ಚಂದದಿಂದ ದುರ್ಯೋಧನ ಚದುರೆ ದ್ರೌಪದಿಯ ಕೂಡೆ। ಮುಂದನರಿಯದೆ ಮುಗುಳುಗನೆಯ ಮಾತನಾಡಿದ॥ ಹಿಂದೆ ಸ್ವಯಂವರದಲ್ಲಿ ಐವರಿಗೆ ಆದ ಬಾಲೆ। ಇಂದು ಎನ್ನ ಪಟ್ಟದರಸಿಗೊಪ್ಪಿತೆಂದನು॥8॥ ಮಲ್ಲಿಗೆಯ ಮುಡಿಯ ನಾರಿ ಮುದ್ದು ಮುಖದ ವೈಯಾರಿ। ಚೆಲ್ಲೆಗಂಗಳ ದ್ರೌಪದಿ ಬಾರೆ ಎಂದನು॥ ಬಿಲ್ಲು ಎತ್ತಲಾರದವನೆ ಭಾಂಡಾರದ ಕದ್ದವನೆ। ಹಲ್ಲು ಕೀಳುವರೈವರು ಬೇಡವೆಂದಳು॥9॥ ಅಚ್ಚಪೊಂಬಣ್ಣದ ಬೊಂಬೆ ಆನೆಯಂತೆ ನಡೆವರಂಭೆ। ನಿಚ್ಚಮುತ್ತಿನಂತೆ ಬಿಂಬಾಧರೆ ಬಾರೆ ಎಂದನು॥ ಹೆಚ್ಚು ಮಾತನಾಡದಿರೊ ಹೆರರ ಹೆಣ್ಣ ನೋಡದಿರೊ। ನುಚ್ಚು ಮಾಡುವರೈವರು ಬೇಡವೆಂದಳು॥10॥ ಮಟ್ಟೆಬಡಕರೈವರಿಗೆ ಮಡದಿಯಾಗುವದು ಸಲ್ಲ। ಪಟ್ಟೆ ಮಂಚಕ್ಕೊಪುವಂತೆ ಬಾರೆ ಎಂದನು। ಹೆಚ್ಚು ಮಾತನಾಡದಿರೋ ಕ್ರೋಧದಿಂದ ನೋಡದಿರೊ। ರಟ್ಟೆ ಕೀಳುವರೈವರು ಬೇಡವೆಂದಳು॥11॥ ಅಡವಿ ತಿರುಕರೈವರಿಗೆ ಮಡದಿಯಾಗುವದು ಸಲ್ಲ। ತೊಡೆಯ ಮೇಲೆ ಒಪ್ಪುವಂತೆ ಬಾರೆ ಎಂದನು॥ ಬೆಡಗು ಮಾತನಾಡದಿರೋ ಭೀಮಸೇನನ ಗದೆಯು ನಿನ್ನ। ತೊಡೆಯ ಮೇಲೆ ಒಪ್ಪುವುದು ಬೇಡವೆಂದಳು॥12॥ ಇಷ್ಟು ಬಿಂಕ ಬಡಿವಾರವು ಹೆಣ್ಣು ಬಾಲೆಗಿವಳಿಗೆಷ್ಟು। ಸಿಟ್ಟಿನಿಂದ ದುರ್ಯೋಧನ ಸಾರಿ ಕೋಪಿಸಿ॥ ಉಟ್ಟ ಸೀರೆ ಉಡಿಯಲವಳ ಉಯಿಕೊ ತೀರಲೆಂದು। ದೃಷ್ಟಿಯಿಂದ ದುಶ್ಶಾಸನಗೆ ಸನ್ನೆ ಮಾಡಿದ॥13॥ ಮಚ್ಚಕೂರ್ಮವರಾಹ ಕಾಯೊ ಮುದ್ದು ನಾರಸಿಂಹ ಕಾಯೊ॥ ಹೆಚ್ಚಿನ ವಾಮನನೆ ಕಾಯೊ ಭಾರ್ಗವನೆ ಕಾಯೊ॥ ಅಚ್ಚರಾಮ ಕೃಷ್ಣ ಕಾಯೊ ಬುದ್ಧಕಲ್ಕಿರೂಪ ಕಾಯೊ। ಸಚ್ಚಿದಾನಂದನೆ ಕಾಯೊ ಸ್ವಾಮಿ ಎಂದಳು॥14॥ ಸಜ್ಜನರ ಪ್ರಿಯಕಾಯೊ ಸಾಧು ರಕ್ಷಕನೆ ಕಾಯೊ। ನಿರ್ಜರವಂದಿತನೆ ಕಾಯೊ ನರಹರಿ ಕಾಯೊ। ಅರ್ಜುನನ ಸಖನೆ ಕಾಯ ಅನಂತ ಮೂರುತಿ ಕಾಯೊ। ಲಜ್ಜೆ ನಾಚಿಕೆಯ ಕಾಯೊ ಸ್ವಾಮಿ ಎಂದಳು॥15॥ ದುರುಳ ದುಶ್ಶಾಸನನು ಬಂದು ದ್ರೌಪದಿಯ ಮುಂದೆ ನಿಂದು। ಕರವ ಪಿಡಿದು ಸೆರಗ ಹಿಡಿದು ನೆರಿಯ ಸೆಳೆಯಲು॥ ಮರುಳು ಆಗದಿರೊ ನಿನ್ನ ರಕ್ತದೊಳು ಮುಡಿಯ ಅದ್ದಿ। ಕರುಳದಂಡೆಯನೆ ಮಾಡಿ ಮುಂಡಿವೆನೆಂದಳೂ॥16॥ ಕಲಹಗಂಟೆ ಹೆಣ್ಣೆ ನಿನ್ನ ಫಾಸಿ ಮಾಡುವೆನೆಂದು। ಗಲ್ಲದಲ್ಲಿ ಗೈಯನಿಕ್ಕಿ ನೆರಿಯ ಸೆಳೆಯಲು॥ ನಿಲ್ಲೊ ನಿಲ್ಲೊ ಪಾಪಿ ನಿನ್ನ ನಾಲಿಗೆಯ ಕಿತ್ತು ಎರಡು। ಪಲ್ಲಿನಲ್ಲಿ ಕೇಶನ್ನಿಕ್ಕಿಕೊಂಬೆನೆಂದಳು॥17॥ ಬೆನ್ನನಲ್ಲಿ ಪಟ್ಟನಿಕ್ಕಿ ಭಂಡು ಮಾಡುವೆನೆಂದು। ಕೆನ್ನೆಯಲ್ಲಿ ಕೈಯನಿಕ್ಕಿ ನೆರಿಯ ಸೆಳೆಯಲು॥ ರನ್ನೆ ವೀರೆಬೊಬ್ಬೆನಿಕ್ಕಿ ರಭಸದಿಂದ ಸಾರುತಲಿ। ಪನ್ನಂಗಶಯನಾ ಕೃಷ್ಣ ಕಾಯೊ ಎಂದಳು॥18॥ ಸಾರಿದವರ ಪೊರೆವ ಕರುಣಿ ಸಾಗರಶಯನ ಕೃಷ್ಣ। ನಾರಿ ದ್ರೌಪದಿಗೆ ವಸ್ತ್ರ ಅಕ್ಷಯವೆಂದನು॥ ಸುರುತಿ ಕುಂಭವತಿ ಬಣ್ಣ ಬಣ್ಣ ಸೀರೆಗಳು। ಮೇರುವಿನ ಬೆಟ್ಟದಂತೆ ಮಹಿಮೆ ತೋರಿದ॥19॥ ಪೊಂದಿದವರ ಪೊರೆವ ಕರುಣಿ ಸಿಂಧುಶಯನ ಶ್ರೀಕೃಷ್ಣನಲ-ವಿಂದ ದ್ರೌಪದಿಗೆ ವಸ್ತ್ರ ಅಕ್ಷಯವೆಂದನು॥ಒಂದು ಎರಡು ಮೂರು ನಾಲ್ಕು ಕೋಟಿ ಸಂಖ್ಯೆ ಸೀರೆ ಸುಲಿದು। ನೊಂದು ಬೆಂದು ದುಶ್ಶಾಸನನು ನಾಚಿ ಕುಳಿತನು॥ ನೋಡಿದರು ದ್ರೌಪದಿಯ ಮಾನರಕ್ಷ ಲೀಲೆಗಳ। ಮಾಡಿದರು ಮಾಧವನ ಮುದ್ದು ಸ್ತೋತ್ರವ॥ ಮೂಢ ಕೌರವನ ಕೂಡ ಮಾನಿನಿ ದ್ರೌಪದಿಯು। ಮಾತನಾಡಿ ತನ್ನ ಪತಿಗಳೈವರನು ಗೆದ್ದಳು॥21॥ ಕೇಸುಮುಡಿಯ ಕಟ್ಟಿದಳು ಕೈಯ ಕಾಲಮಣ್ಣ ನೊರಸಿ। ಸಾಸಿರ ನಾಮದ ಒಡೆಯ ಸುರರ ಪಾಲಕ॥ ವಾಸಿವುಳ್ಳ ಕೃಷ್ಣ ಎನ್ನ ವಹಿಸಿ ಕಾಯ್ದಿ ಎಂದು ಸಂ-ತೋಷದಿಂದ ದ್ರೌಪದಿಯು ಮನೆಗೆ ಬಂದಳು॥ ಭಕ್ತಿಯಿಂದ ದ್ರೌಪದಿಯ ಮಾನರಕ್ಷೆ ಲೀಲೆಗಳ। ಯುಕ್ತಿಯಿಂದ ಹಾಡಿಪಾಡಿ ಕೇಳುವವರಿಗೆ॥ ಸಕಲ ದೋಷಪರಿಹಾರ ಸಂತಾನ ಸಂಪತ್ತು ಫಲಗಳುಂಟು। ಮುಕುತಿ ಕೊಡುವನು ನಮ್ಮ ಪುರಂದರವಿಠಲ॥23॥

ಇಂದ್ರಪ್ರಸ್ಥದಲ್ಲೆ ಕುಂತಿ ನಂದನ ರಾಜಸೂಯ್ಯಾಗವನು

ಇಂದ್ರಪ್ರಸ್ಥದಲ್ಲೆ ಕುಂತಿ ನಂದನ ರಾಜಸೂಯ್ಯಾಗವನು ಆ ನಂದದಿ ಮಾಡಿಂದಿರೇಶಗರ್ಪಿಸಿ ದನು।।1।। ಮಂದಬುದ್ಧಿ ಕೌರವನು ಚಿಂದನೋಡಿ ಸೈರಿಸದೆ ಪಾಂಡವರ ಪಟ್ಟಣದಿಂದ್ದೊರ ಗ್ಹಾಕುವೆನೆಂದನು।।2।। ಘಾತಕ ದುರ್ಯೋಧನ ತನ್ನ ಮಾತುಳ ಶಕುನಿಯ ಕೇಳಿ ಪ್ರೀತಿಂದೆ ಪಾಂಡವರ ಕರೆಸಿ ದ್ಯೂತವಾಡಿದ।।3।। ಆಗ್ರಾದಿಂದಾಟಗಳ ಸೋಲಿಸಿ ಶೀಘ್ರದಿಂದ್ವನವಾಸವ ಚರಿಸಿ ಅಜ್ಞಾತ್ವಾಸೊಂದೊ(ದ್ದ?) ರುಷವೆಂದು ಪ್ರತಿಜ್ಞೆಮಾಡಿದ।।4।। ಸೋತುಧರ್ಮ ಸಕಲೈಶ್ವರ್ಯ ಸಾದೇವ ನಕುಲ ಭೀಮರ ಪಾರ್ಥದ್ರೌಪದಿಯ ಪಣಕಿಟ್ಟು ಕೂತನಾಗಲೆ।।5।। ಆನೆ ಕುದುರೆ ಅಷ್ಟೈಶ್ವರ್ಯ ಬ್ಯಾಗೆ ತನ್ನಿರಿ ಭಂಡಾರವನು ಹೋಗಿ ದ್ರೌಪದಿ ಕರೆಯಿರೆಂದು ಹೇಳಿದನಾಗ।।6।। ಬಂದು ಭಟರು ದ್ರೌಪದಿಯ ಮುಂದೆ ಕರವ ಮುಗಿದು ನಿಂತು ಇಂದು ನಮ್ಮ ರಾಜಸಭೆಗೆ ಬನ್ನಿರೆಂದರು।।7।। ತಾಯೆ ಕೇಳ್ ನಿಮ್ಮರಸುಗಳು ಮಾಯದಿಂದ್ವಂಚಿತರಾಗಿ ದಾಯವಾಡಿ ಸೋತುರಿನ್ನುಪಾಯವಿಲ್ಲೀಗೆ।।8।। ಇಂದಿರೇಶನ ದಯವು ನಮ್ಮಲಿದ್ದ ಕಾರಣ ದಿಂದೀಗ ಬಂದ ದುರಿತ ಬಯಲಾಗುವುದ್ಹ್ಯಾಗೆಂದು ನುಡಿದಳು।।9।। ಚಂದ್ರಜ್ಯೋತಿಯಂತೆ ಹೊಳೆವೊ ಮಂದಗಮನೆ (ಇ)ಂದು ವದನೆ ದುಂಡು ಮಲ್ಲಿಗೆಶಿರವ ಬಾಗಿ ಬಂದು ನಿಂತಳು।।10।। ಕಂಡು ದುರ್ಯೋಧನ ದ್ರೌಪದಿ ನಿನ್ನ ಗಂಡರಡವಿಗ್ಹೈದುವ್ಹೋರು ಹೆಂಡತ್ಯಾಗಿರೆನ್ನ ಬಳಿಗೆ ಬಾರೆ ಎಂದನು।।11।। ಕೆಂಡತುಂಬಿದ ಕೊಂಡದೊಳು ಕಂಡೂ ನೀ ಹಾರುವರೇನೋ ತುಂಡುಮಾಡಿ ಕಡಿವ್ಹೋರೈವರು ಬ್ಯಾಡೋ ಯೆಂದಳು।।12।। ಪತಿಗಳಿಂದೆ ರಹಿತಳೆ ದ್ರೌಪದಿಯೆ ನೀನತಿ ಹರುಷದಿಂದೆ ಸತಿಯಾಗಿ ಬಾಳ್ವಿತದಿಂದೆನ್ನ ಕೂಡೇಯೆಂದನು।।13।। ಪತಿಯಿಂದೆ ರಹಿತಳು ಭಾನುಮತಿಯೋ ಧೃತರಾಷ್ಟ್ರ ಗಾಂಧಾರಿ ಸುತಹೀನರಾಗುವರತಿ ಬ್ಯಾಗ ಮತಿಗೇಡಿ ಕೇಳೋ।।14।। ಅಷ್ಟಬಡವವರ್ರೈ ಹಿಂದೆ ಕಷ್ಟಬಟ್ಟು ತಿರುಗೋರೇನೂ ಪಟ್ಟೆ ಮಂಚಕ್ಕೊಪ್ಪು ವ್ಯಂತೇ ಬಾರೇಯೆಂದನು।।15।। ಅಷ್ಟ ಬಡವರ್ರೈವರು ನಿನ್ನ ಶಿರ ಕುಟ್ಟಿ ಯಮಪಟ್ಟಣಕ್ಕೆ ಅಟ್ಟಿ ರಾಜ್ಯಕ್ಕಧಿಕಾರ್ರ್ಯವರು ಕೇಳೋಯೆಂದಳು।।16।। ಅಚ್ಚ ಮುತ್ತಿನಂತೆ ಹೇಮ ಪುತ್ಥಳಿಗೊಂಬೆ ನಿನ್ನಲ್ಲಿ ಇಚ್ಛಮಾಡಿದ್ದೇನೀಗೆನ್ನ ಕೂಡೆ ಎಂದನು।।17।। ಹುಚ್ಚು ಹಿಡಿದಿತೇನೋ ನಿನಗೆ ಉಚ್ಚು ಬಡಿದು ನಿನ್ನ ಹಲ್ಲು ನುಚ್ಚು ಮಾಡಿ ಕೊಲ್ಲೋರೈವರು ಬ್ಯಾಡೋಯೆಂದಳು।।18।। ಬಡನಡುವಿನ ವೈಯಾರಿ ಕಡುಚೆಲ್ವೆ ದ್ರೌಪದಿಯೆ ಎನ್ನ ತೊಡೆಯಮ್ಯಾಲೆ ಒಪ್ಪುವ್ಯಂತೆ ಬಾರೆಯೆಂದನು।।19।। ಕಡುಪಾಪಿ ನೀ ನುಡಿವ್ಹೋ ನಾಲಿಗೆ ಕಡಿದು ಭೀಮನ ಗದೆಯು ನಿನ್ನ ತೊಡೆ ಉರ ಭೇದಿಸುವ್ಹೋದನು ನೋಡೇನೆಂದಳು।।20।। ಅಂಗನೆ ನಿನ್ನಂಗಸಂಗವಾಗದಿದ್ದರೆ ನಿನ್ನ ಮಾನಭಂಗಮಾಡಿ ಬತ್ತಲೆ ನಾ ನಿಲಿಸೇನೆಂದನು।।21।। ಪುಂಡ ಖಳ ನಿನ್ನುದರ ಓಕುಳಿಕೊಂಡಮಾಡೋಕುಳಿಯನಾಡಿ ಚೆಂಡನಾಡಲು ನಿನ್ನ ಶಿರವ ನೋಡೇನೆಂದಳು।।22।। ಪಾಪಿ ದುಶ್ಯಾಸನನು ಬಂದು ದ್ರೌಪದಿಯ ಮುಂದೆ ನಿಂತು ನೂತನದ ನಿರಿಯ ಪಿಡಿದು ಸೆಳೆಯುದಿದ್ದನು।।23।। ನಿಲ್ಲೊ ಪಾಪಿ ನಿನ್ನ ರಕ್ತ ಎರೆದು ಹಲ್ ಹಣಿಗಿಯಲ್ಹಿಕ್ಕಿ ಎಲ್ಲ ಕರುಳ್ವನಮಾಲೆಯ ಮಾಡಿ ಮುಡಿವೆನೆಂದಳು।।24।। ಮಂಗಳ ಮೂರುತಿ ಮಾರಜನಕ ಎನ್ನ ರಕ್ಷಿಸೆಂದು ಕಂಗಳೆರಡ ಮುತ್ತಿ ಕರವ ಮುಗಿದು ನಿಂತಳು।।25।। ಮಡುವಿನಲ್ಲೆ ಮುಚ್ಚನಾಗಿ ಬಿಡದೆ ವೇದವ ತಂದು ಕ್ಷೀರ ಕಡಗ ಕಡೆದ ಕೂರುಮ ಎನ್ನ ಕಾಯೋಯೆಂದಳು।।26।। ಕಡೂಕ್ರೂರ ವರಾಹಾವತಾರ ಹಿಡಿದು ಹಿರಣ್ಯಾಕ್ಷನ ಕಂಬ ವೊಡೆದು ಬಂದಾರ್ಭಟಿಸುವ ಸಿಂಹ ಕಾಯೊ ಎಂದಳು।।27।। ಬಡವನಾಗಿ ಬಲಿಯ ದಾನ ಬೇಡಿಕೊಂಡ್ವಾಮನನೆ ದೊಡ್ಡ ಕೊಡಲಿ ಪಿಡಿದು ಕ್ಷತ್ರಿಯರನೆ ಕಡಿಬ್ಯಾಗೆಂದಳು।।28।। ಹತ್ತು ತಲೆಯ ರಾವಣನ ಹತವಮಾಡಿದ್ದವನೆ ಗೋಪೀ ಪುತ್ರನಾದ ಕೃಷ್ಣ ಎನ್ನ ರಕ್ಷಿಸೆಂದಳು।।29।। ಬತ್ತಲಿದ್ದ ಬೌದ್ಧ ನೀ ಬಿಟ್ಟೊಸ್ತ್ರ ಎನಗುಡುಗೊರೆಯ ಕೊಟ್ಟು ಹತ್ತಿ ತೇಜಿ ಹರುಷದಿಂದ ಬಾರೋಯೆಂದಳು।।30।। ಕ್ಷೀರಸಾಗರದಲ್ಲೆ ಶ್ರೀಲಕ್ಷ್ಮೀ ಸಹಿತ ಇದ್ದರೇನು ಭೂ ವೈಕಂಠವಾಸಿ ಎನ್ನ ಕಾಯೋಯೆಂದಳು।।31।। ಅನಂತಾಸನದಲ್ಲೆ ಆದಿಲಕ್ಷ್ಮೀ ಸಹಿತಾಗಿದ್ದರೇನು ಸೇತೂ (ಶ್ವೇತ?) ದ್ವೀಪವಾಸಿಯೆನ್ನ ಕಾಯೋಯೆಂದಳು।।32।। ಮಧುರಾ ವಾಸಿ ವೃಂದಾವನ ಗೋವ್ರಜದಲ್ಲಿದ್ದರೇನೊ ಕೃಷ್ಣ ಬದಿಗಿಬಂದೀಗೆನ್ನಭಿಮಾನ ಕಾಯೊಯೆಂದಳು।।33।। ದ್ವಾರಕಿ ಯಲ್ಲೇ ಹದಿನಾರುಸಾವಿರ ಮಂದಿ ಸತಿಯರ ಬ್ಯಾಗೆ ಬಿಟ್ಟೀಗೆನ್ನ ಬಳಿಗೆ ಬಾರೋ

ಯೆಂದಳು।।34।। ನಿಂತು ಕರೆವೊ ದ್ರೌಪದಿ ತನ್ನ ಏಕಾಂತಾಭಕ್ತಳೆಂದು ಲಕ್ಷ್ಮೀ ಕಾಂತ ಅಕ್ಷಯ ವೆಂದ ವಸ್ತ್ರಾನಂತವಾದುವು।।35।। ಕೆಂಪು ಹೂವು ಇರುವಂತಿಗೆಯ ಪಂಚಪೈಠಣಿ ಪಗಡಿ ಬಣ್ಣ ಚಿಂತಾಗು ಪೈಠಣಿಯ ನಿರಿ ಸೆಳೆಯುತ್ತಿದ್ದನು।।36।। ಕರಿಯ ಹೂವು ಕಡ್ಡಿಪೈಠಣಿ ಸೆರಗು ಜರದ ಚಾರಖಾನಿ ಪರಿಪರಿ ಪತ್ತಲಗಳ ತಾ ಸೆಳೆಯುತಿದ್ದನು।।37।। ಬಿಳಿಯಹೂವು ಬಟ್ಟ ಮುತ್ತಿನ ಹೊಳೆವೊ ನಿಂಬಾವಳಿಯು ಚಂದ್ರ ಕಳೆಯ ಸೀರೆಗಳನೆ ಪಿಡಿದು ಸೆಳೆಯುತಿದ್ದನು।।38।। ಸೂರೂತಿ ಸುಗುತೀಯ ಬಣ್ಣ ಭಾರಿ ಬಾಳೆಪಟ್ಟೆಗನು ದ್ವಾರ್ಯಾಮನಿ ಖಂಬಾವತಿ ಸೀರೆ ಸೆಳೆಯುತಿ ದ್ದನು ।।39।। ತಬಕಾದ್ಯೋವೆಳ್ಳ್ಯುವು ಗೆರೆ ಸಾಸಿವೆಯ ಚಿಕ್ಕ ಸರಪಳ್ಯಂಚು ಥಳಕೆಂದ್ಯೊಳೆವೊ ಮಗ್ಗೀ ಸೀರೆ ಸೆಳೆಯುತಿದ್ದನು।।40।। ನೂತನವಾಗಿದ್ದ ಜರಿಪೀತಾಂಬರ ಕಡೆಯಿಲ್ಲ ಹರಿಯು ಪ್ರೀತಿಂದೆ ಕೊಟ್ಟಂಥ ವಸ್ತ್ರ ಸೆಳೆಯುತಿದ್ದನು।।41।। ಸೆಳೆದು ಸೆಳೆದು ಎರಡು ರಟ್ಟೆ ಬಳಲಿ ಅಸುರ ಭಾಳ ನೊಂದು ಇಳೆಯಲ್ಲೆ ಬಿದ್ದುಡಿಯ ಮ್ಯಾಲೆ ಹೊರಳುತ್ತಿದ್ದನು।।42।। ಕಂಡು ದುರ್ಯೋಧನನು ಜವಳಿ ಪೆಂಡಿಗಳನೆ ಕಟ್ಟಿ ತನ್ನ ಭಂಡಾರಕ್ಕೊಯ್ಯುವೊ ದೆಂದಾಗಪ್ಪಣೆಯ ಮಾಡಿದ।।43।। ಭರದಿ ಕೋಪದಿಂದ ದ್ರೌಪದಿ ತೆರೆದು ಕಂಗಳಿಂದ ನೋಡೆ ಉರಿದು ಭಸ್ಮವಾಗಿ ಕುಪ್ಪೆ ಧರೆಗೆ ಬಿದ್ದುವು।।44।। ವಜ್ರದ್ದರಳಿನಂತೆ ಬೆವೆತ ಮುದ್ದುಮುಖ ಮುಂಜೆರಗಿಲೊರೆಸಿ ತಿದ್ದಿ ತನ್ನ ತವರ (ಕಬರಿ?)ಗಳನೆ ಕಟ್ಟನಿಂತಳು।।45।। ವಿದುರ ಭೀಷ್ಮರೆಲ್ಲ ದ್ರೌಪದಿಯೆದುರು ಬಂದತಿ ಹರುಷದಿಂದ ಇದು ನಿನ್ನಾಭೀಷ್ಟಗಳ ಬೇಡೆ ನೀಡೇವೆಂದರು।।46।। ಕೆಟ್ಟಕೌರವರ ಕುಲವು ನಷ್ಟವಾಗುತಿರಲು ಧರ್ಮ ಪಟ್ಟಣವಾಳುವುದೆ ಇದು ಎನಗಿಷ್ಟವೆಂದಳು।।47।। ಇಂದ್ಯೋಗ್ವನವಾಸವ ಚರಿಸಿ ಬಂದು ಗಾಂಧಾರಿಯ ಸುತರ ಕೊಂದು ಧರ್ಮ ರಾಜ್ಯಕ್ಕೆ ರಾಜನಾಗುವನೆಂದರು।।48।। ಮಿಂಚುಸೂರ್ಯ ರೆಂತೆ ಹೊಳೆವೊ ಪಾಂಚಾಲೀಪರಿ ಮಾತನಾಡೆ ಪಂಚಪಾಡವರ ಕೂಡ್ವನಕ್ಕೋಗುವೆ ನೆಂದಳು।।49।। ಅಪಾರಮಹಿಮ ಕೃಷ್ಣನ ವ್ಯಾಪಾರ ನೋಡುತ ಜನರು ದ್ರೌಪದಿಯ ಗುಣಗಳ ಕೊಂಡಾಡುತಿದ್ದರು।।50।। ಮಂಗಳ ಮೂರುತಿ ಕೃಷ್ಣನ ತಂಗಿ ದ್ರೌಪದಿಯ ಮಹಿಮೆ ಪಾಂಡವರು ಕಂಡು ಪರಮಾನಂದ ಬಟ್ಟರು ।।51।। ಭೀಮನ ವಲ್ಲಭೆಯ ಅಭಿಮಾನವ ಕಾಯ್ದಂಥಹರಿಯು ಭೀಮೇಶ ಕೃಷ್ಣನೆ ನಮ್ಮನ್ ಸಲಹುವೆಂದರು।।52।।

ಶುಂಡಾಲ ಪುರದೊಳಗೆ ದುರುಳ

ಶುಂಡಾಲ ಪುರದೊಳಗೆ ದುರುಳ ದುರ್ಯೋಧನನು ಪಾಂಡ್ವ ನಂದನನೊಡನೆ ಕಪಟ ಜೂಜನೆ ಆಡಿ ಗಂಡರೈವರ ಮುಂದೆ ನೃಪನ ಸತಿಯ ಸೆರಗ ಸೆಳೆಯುತಿರೆ ಲಂಡ ದುಶ್ಯಾಸನ ಪಿಡಿದು ಅಂಡಲೆದು ಸೀರೆಯನು ಸೆಳೆಯುತಿರೆ ಸುವ್ರತೆಯು ಕಂಡು ಮನದಲಿ ಬೆದರಿ ಪರಮಾತ್ಮ ಪರಿಪೂರ್ಣ ಪುಂಡಲೀಕಾಯಕನೇ ರಕ್ಷಿಪುದೆನುತ ಮೊರೆಯಿಡಲು ಅಂಡ ಚದುರಂಗ ಬಂದು ಹರಿಯೇ ವಾಸುದೇವಾಯನ್ನಮೋ ವಾಸುದೇವ।। ವಾಸುದೇವಯನ್ನಮೋ ವಾಸುಕೀಶಯ ನಾಯ ವಾಸ ವಾದ್ಯಖಿಲ ಮುನಿ ಅಮಿತ ಚರಣಾಂಬುಜ ಕೇಶವನಗೆ ನರಗೆ ಸಖ ವಾಸು ದೇವಾ ಕೃಷ್ಣ ಕೇಶವ ಮುಕುಂದ ಬಂಧು ಸಿಂಧೂ।। ಹರಿಯೇ ವಾಸುದೇವಾಯನ್ನಮೋ ವಾಸು ದೇವಾ।। ಪತಿಗಳೈವರು ಸತ್ಯವ್ರತದಿ ಸುಮ್ಮನೆ ಇರಲು ಅತಿಕ್ಲೇಶ ಪಡುತಿರಲು ವಿದುರ ಭೀಷ್ಮಾದಿಗಳು ಸುತರ ಮೇಗಣ ಮೋಹದ ಒಳಗೆ ಸುಮ್ಮನೆ ಇರಲು (ಧೃತರಾಷ್ಟ್ರ) ಗತಲೋಚನ ಮಾವನು ಅತಿಕಾರಿ ಶತಕಾರಿ ಶಕುನಿ ಕರ್ಣಾದಿಗಳು ಹಿತವ ಬಯಸುವರೊಬ್ಬರ ಕಾಣೆ ನಿವರೊಳಗೆ ಗತಿಯಿಲ್ಲದವರಿಗೆ ಸದ್ಗತಿ ನೀನೇ ರಕ್ಷಿಪುದೈ ರತಿಪತಿಯ ಪಿತನೆ ಕಾಯೈ।। ಅತ್ತೆಯಲ್ಲವೇ ಎನಗೆ ಗಾಂಧಾರಿದೇವಿಯಳೆ ಸತ್ಯವಂತಳೇ ಇವನ ಬಿಡಿಸಬಾರದೇ ತಾಯೇ ಉತ್ತಮಳಲ್ಲವೇ ನೀನು ಭಾನುಮತಿ ನೆಗೆಯಣೆ ಇತ್ತ ದಯಮಾಡಿ ನೋಡಿ ಸುತ್ತ ನೆರೆದಿದ್ದ ಸಭೆ ಪರಿವಾರದವರೆಲ್ಲ ಪೆತ್ತು ಇಲ್ಲವೇ ಎನ್ನ ಪೋಲ್ವ ಪೆಣ್ಮಕ್ಕಳನು ಹುತ್ತದೊಳಗೆ ಬಿದ್ದ ಹಾವು ಸಾಯದವೋಲು ತತ್ವಭಾಗಿಗಳಾದಿರಿ। ಪಾವುಕನ ಮರಿಯೊಳಗೆ ಹೊಕ್ಕು ಹರಡಲಿಬಹುದು ಹಾವುಗಳ ಹೆಡೆಹಿಡಿದು ಎಳಎಳದು ತರಬಹುದು ಠೀವಿದ್ದ ಮಡುವ ಧುಮಕಲಿಬಹುದು ಗರಳವನು ಸೇವಿಸಬಹುದು ಉದರಕೇ ಸಾವಿಗಂಜದೆ ಕೊರಳ ಉತ್ತರಿಸಿ ಕೊಡಬಹುದು ಜೀವವಿದ್ದಂತೆ ಲಜ್ಜೆಯ ತೊರೆಯಲಾರೆನು ಆವ ಪರಿಯಲಿ

ಎನ್ನ ಮಾನಾಭಿಮಾನವನೆ ದೇವ ನಿನಗೊಪ್ಪಿಸಿ ದೆನೋ। ಅಸುರ ಬೆನ್ನಟ್ಟಿ ಬರೆ ಪಶುಪತಿಯ ರಕ್ಷಿಸಿದೆ ಋಷಿಯಾಗವ ಕಾಯ್ದೆ ಅಂಬರೀಶನ ಪೊರೆದೆ ವಸುಧೆಯೊಳು ಕಲ್ಲಾಗಿರ್ದ ಅಹಲ್ಯೆಶಾಪವ ಪೊರೆದೆ ಶಿಶು ಹಸುಳೆ ಪ್ರಾಹ್ಲಾದನಿಗೆ ವರವಿತ್ತೆ॥ ಎಸೆವ ಧೃವರಾಯನಗೆ ಒಲಿದಿತ್ತು ವರವಿತ್ತೆ ದಶಕಂಠನನುಜನಿಗೆ ಸ್ಥಿರ ರಾಜ್ಯವನೆ ಕೊಟ್ಟೆ। ಪೆಸರುಗೊಂಡರೆ ಅಜಮಿಳನ ರಕ್ಷಿಸಿದೆ ವಸುದೇವ ಸುತನೆ ಕಾಯ್ಯೆ ಹರಿಯೇ। ಲಕ್ಷ್ಮೀ ಮನೋಹರನೆ ಇಕ್ಷುಚಾಪನ ಪಿತನೆ ಯಕ್ಷ ಗಂಧರ್ವ ಮುನಿ ಅಮರೇಂದ್ರ ವಂದಿತನೇ ಅಕ್ಷಯನೆ ಆಟದೊಳು ಜಗವಮೋಹಿಪ ಸ್ಥೂಲಸೂಕ್ಷ್ಮದೊಳಗನು ಚರಿತನೇ॥ ಅಕ್ಷಯ ಅಸುರಾಂತಕಗೆ ವರವಿತ್ತೆ ದಕ್ಷ ಸುತೆ ಪತಿ ಸಖನೆ ಪಕ್ಷಿವಾಹನನೇ ಸ್ವಾಮಿ ರಕ್ಷಿಸಿ ಅನಾಥ ಬಂಧು॥ ಸಿಂಧೂ ಹರಿಯೇ॥ ತಂದೆ ತಾಯಿಯು ನೀನೆ ಬಂಧುಬಳಗವು ನೀನೇ ಇಂದೆನ್ನ ಕುಲಸ್ವಾಮಿ ಕುರುಪಿತಾಮಹ ನೀನೆ ಎಂತು ಪರಿಯಲಿ ಎನ್ನ ಮಾನಾಭಿಮಾನ ಮುಕುಂದ ನಿನಗೊಪ್ಪಿಸಿದೆನೋ ಕೊಂದರೊಳ್ಳಿತು ಕಾಯ್ದರೊಳ್ಳಿತು ಅಂತೆರಡು ಕಂಗಳನೆ ಮುಚ್ಚಿ ಪ್ರಾಣವ ಬಿಡುವೆನೆಂದು ಗೋವಿಂದ ಎಂದಳೆ ಮೃಗಾಕ್ಷಿ॥ ಯಾರಿಗೊರಲಿದರೆನ್ನ ದೂರಕೇಳುವರಿಲ್ಲ ಭಾರವಹಿಸುವವರೊಬ್ಬರನು ಕಾಣೆ ಇದರೊಳಗೆ ಸೇರಿದ್ದ ಭಕ್ತರ ಪೊರೆವ ಕಂಸಾರಿ ನೀನಲ್ಲದೇ ಮುರಾರಿ ಎನಗಾಪ್ತ ಬಂಧುವೆ॥ ಮಾರಿದರು ಧರ್ಮದೇವತೆಗೆನ್ನ ವಲ್ಲಭರು ಭಾರ ನಿನ್ನದು ಎಂದು ನಂಬಿದಾ ಅನಾಥಳನು॥ ಕ್ಷೀರದೊಳಗದ್ದು ನೀರೋಳಗದ್ದು ನೀನೇ ಗತಿ ನಾರಾಯಣನೆ ರಕ್ಷಿಸೈ। ಇಂತೆಂದು ದ್ರೌಪದಿಯು ಮೊರೆಯಿಡುವ ಸಮಯದಲಿ ಅಂತರಾತ್ಮಕ ಕೃಷ್ಣ ದ್ವಾರಕಾಪುರದೊಳಗೆ ಕಾಂತೆ ರುಕ್ಮಿಣಿ ಸತ್ಯಭಾಮಾದಿ ಸತಿಯರ ಒಡನೆ ಏಕಾಂತದ ಭವನದೊಳಗಿರಲು। ಕುಂತೀನಂದನನ ಸತಿ ಉಟ್ಟಿದಕ್ಷಯವೆಂದು ಸಂತೋಷಪಡಲೆಂದು ಒಲಿದಿತ್ತು ವರವಿತ್ತು ಎಂತಲೋ ಹರಿಯ ಕೃಪೆ ನೆನೆಯೋರ ಮನದಲ್ಲಿ ಅನಂತ ವಸ್ತ್ರಗಳಾದುವೈ॥ ಸೆಳೆಯುತ್ತಿದ್ದನು ಹರಿಯ ಕೃಪೆ ನೆನೆದಿರೋರ ಮನದಲ್ಲಿ ಅನಂತ ನಾನಾ ಬಣ್ಣದ ವಸ್ತ್ರ ಮೊದಲಾಗಿ ಸೆಳೆಸೆಳೆದು ಪಾಪಾತ್ಮ ಹೊಳಲ ತುಂಬುವ ತೆರದಿ ಧರೆಯೊಳಗೆ ಉರುಳಿದನು॥ ಕಳೆಯುಗುಂದಿತು ಮೋರೆ ಕರ್ಣ ದುರ್ಯೋಧನಗೆ ಬಳಿಯೆ ನಿಂತಿದ್ದ ದೂತರ ಕರೆದು ನೇಮಿಸಿದ ಬೆಳೆವುದೀ ವಸ್ತ್ರವನು ಕಳುಹು ಬೊಕ್ಕಸಕೆನಲು ನಳಿನಮುಖಿ ಕಣ್ತೆರೆದಳು॥ ಸಿಟ್ಟಿನಲಿ ದ್ರೌಪದಿಯು ಕಣ್ತೆರೆದು ನೋಡಲು ಬೆಟ್ಟದಂತೋಟ್ಟಿರ್ದಾ ವಸ್ತ್ರದಾರಾಶಿಗಳು ಸುಟ್ಟಗ್ನಿ ಕಿಡಿಸೋಕಿ ಪಟ್ಟಣದ ಗೃಹಕೆಲವು ಥಟ್ಟನಾಹುತಿಗೊಂಡವು॥ ಕೊಟ್ಟಳೈ ಶಾಪವನೆ ಕಮಲಮುಖಿ ಕೌರವಗೆ ಕಟ್ಟಾಳು ಭೀಮಸೇನನ ತೋಳಗದೆಯಿಂದಕುಟ್ಟಿ ಬಿಸುಡಲಿ ಇವನ ನಿನ್ನ ಊರುಗಳೆ ರಡನು ಎನುತ ಥಟ್ಟನಾಚೆಗೆ ನಡೆದಳು॥ ಮೂಡಿದವು ಪ್ರತಿಸೂರ್ಯ ಧೂಮಕೇತುಗಳು ಓಡಾಡಿದವು ಗಗನದಲಿ ಹದ್ದು ಕಾಗೆಗಳು ಗಡಗಡನೆ ನಡುಗಿದ್ದವು ಮಾತಾಡಿದವು ಶಿಲೆಯ ಪ್ರತಿಮೆ ಕೂಡಿದು ಪಾತಕವಕಂಡು ಪುರಜನರೆಲ್ಲ ಕೇಡು ಕೌರವರಿಗಾಯ್ತೆಂದು ಮಾತಾಡುತ್ತ ಮಾತಾಡಿ ಮನೆಗಳ ಪೊಕ್ಕರೈ॥ ಹರುಷಪಟ್ಟರು ಮನದಿ ವಿದುರ ಭೀಷ್ಮಾದಿಗಳು ಸುರರು ಕಿನ್ನರರು ಮಹಾಸುರರು ಅಂಬರದಲ್ಲಿ ಹರಸಿ ದ್ರೌಪದಿಯ ಸಿರಿಮುಡಿಗೆ ಹೂವಿನ ಮಳೆ ಕರೆದರಂಬಿನತುದಿಯಲ್ಲಿ॥ ಹರಿಯ ನಾಮಾವಳಿಯ ಪೊಗಳುತಲಿ ದಿವಿಜೇಂದ್ರ ತಿರುಗಿ ಬಂದನು ತನ್ನ ಪಟ್ಟಣದ ಅರಮನೆಗೆ ಹರಿಯ ನೆನೆದವರಿನ್ನು ಏನು ಧನ್ಯರೋ ಎಂದೂ ಹರಿಯನಾಮವೇ ಕಾಯ್ದುದು॥ ಶ್ರೀ ವಾಸುದೇವರಾಜ್ಞಾಪಿಸಿದ ರುಕ್ಮಿಣಿಗೆ ದೇವಿಕೇಳೆನ್ನಾ ಭಾಷೆಯ ಮುನ್ನ ಅರ್ಜುನಗೆ ನಾವು ಸಾರಥಿಯಾಗಿ ಅವರ ಸಲಹುವೆನೆಂದು ಜೀವ ಪಾಂಡವರೆಂದನು॥ ಯಾರಾದರೂ ಇದನು ಉದಯಕಾಲ ದೊಳಗೆದ್ದು ಭಾವಭಕ್ತಿಗಳಿಂದ ಹೇಳಿಕೇಳಿದವರಿಗೆ ಸಾವಿರಾರು ವರುಷದ ಸಂಚಿತಾರ್ಥದ ಪಾಪ ತಾನೆ ಹತವಾಗ್ವುದೆಂದ॥ ಮಂಗಳಂ ಮುರಹರಗೆ ಮಂಗಳಂ ಸಿರಿಧರಗೆ ಮಂಗಳಂ ಕಮಲಾಕ್ಷ ಕರುಣನಿಧಿಗೆ ಮಂಗಳಂ ತರಳೆಯ ಮಾನಾಭಿಮಾನವನೆ ಕಾಯ್ದವಗೆ ಜಯಮಂಗಳಂ ನಿತ್ಯ ಶುಭಮಂಗಳಂ॥ ಕೃಷ್ಣ ಮಂಗಳಂ ಮತ್ಸ್ಯ ಕೂರ್ಮ ವರಹರೂಪನಿಗೆ ಮಂಗಳಂ। ನರಸಿಂಹ ವಾಮನ ರೂಪನಿಗೆ ಮಂಗಳಂ। ಪರಶುರಾಮ ಕೃಷ್ಣ ಬೌದ್ಧ ಕಲ್ಕ್ಯನಿಗೆ ಜಯಮಂಗಳಂ ನಿತ್ಯಶುಭಮಂಗಳಂ॥

❖ ❖ ❖

76. ಗಜೇಂದ್ರ ಮೋಕ್ಷ

ನಾರಾಯಣಾಯ ನಮೋ

ನಾರಾಯಣಾಯ ನಮೋ॥ಪ॥ ನಾರಾಯಣಾಯ ನಮೋ ನಾಗೇಂದ್ರಶಯನಾಯ ನಾರದಾದ್ಯಖಿಳ ಸನ್ಮುನಿನುತ ಚಾರಿತ್ರಾಯ ಘೋರಭವದುಃಖಸಂಹಾರಾಯ ಪಾಹಿಮಾಂ ಕಾರುಣ್ಯಲೋಚನ ಹರೇ॥ಅ.ಪ॥ಪಾಂಡ್ಯ ದೇಶದೊಳಿಗಿಂದ್ರದ್ಯುಮ್ನನೆಂಬ ಭೂ ಮಂಡಲಾ ಧಿಪನು ವೈರಾಗ್ಯದಿಂ ಹರಿಪಾದ ಪುಂಡರೀಕ ಧ್ಯಾನಪರನಾಗಿ ತಪದೊಳಿರೆ ಚಂಡ ತಾಪಸನಗಸ್ತ್ಯ ಹಿಂಡುಶಿಷ್ಯರವೆರಸಿ ಬರಲು ಸತ್ಕರಿಸದಿರೆ ಕಂಡು ಗಜಯೋನಿಯೊಳು ಜನಿಸು ಹೋಗೆನುತಲು ದ್ದಂಡಶಾಪವನು ಮುನಿಯಿತ್ತು ಪೋಗಲು ಬಳಿಕ ಶುಂಡಾಲನಾದನರಸ॥1॥ ಕ್ಷೀರ ಸಾಗರ ತಡಿಯಲ್ಲೈದು ಯೋಜನದ ವಿಸ್ತಾರದಲಿ ವರ ತ್ರಿಕೂಟಾದ್ರಿ ಶೃಂಗತ್ರಯದಿ ರಾರಾಜಿಸುವ ತಾಮ್ರ ರಜತ ಕಾಂಚನದಿಂದ ಮೇರು ಸಮ ಗಾಂಭೀರ್ಯದಿ ಪಾರಿಜಾತಾಂಭೋಜ ತುಲಸಿ ಮಲ್ಲಿಗೆ ಜಾಜಿ ಸೌರಭದೊಳಶ್ವತ್ಥ ಪೂಗ ಪುನ್ನಾಗ ಜಂಬೀರಾದಿ ತರುಗುಲ್ಮ ಖಗ ಮೃಗಗಳೆಸೆವಲ್ಲಿ ವಾರಣೇಂದ್ರನು ಮೆರೆದನು॥2॥ ಆನೆ ಹೆಣ್ಣಾನೆ ಮರಿಯಾನೆಗಳ ಸಹಿತಲ್ಲಿ ತಾನು ನೀರಡಿಸಿ ಒಂದೊಂದು ಸರಸಿಯಲಿಳಿದು ಪಾನಾಭಿಲಾಷೆ ಯಿಂದ ನಾನಾಪ್ರಕಾರದಲಿ ಜಲಕ್ರೀಡೆ ಯಾಡುತಿರಲೇನಿದೆತ್ತಣ ರಭಸವೆಂದುಗ್ರ ಕೋಪದಲಿ ಆನೆಗಳು ಬಾಯ್ದೆರೆದು ನುಂಗಿತೊಂದಂಘ್ರಿ ಯನು ಏನೆಂಬೆನಾಕ್ಷಣದೊಳು॥3॥ ಒತ್ತಿ ಪಿಡಿದೆಳೆಯುತಿರೆ ತತ್ತರಿಸಿದೇನೆನುತ ಮತ್ತ ಗಜರಾಜನೌಡೊತ್ತಿ ಘೀಳಿಡುತಲೆಳೆ ದೊತ್ತಿ ತಂದನು ಕಾದುತ್ತ ಸಾವಿರ ವರುಷ ವಿಸ್ತರಿಸಿತೇನೆಂಬೆ ಮತ್ತಾ ಗಜೇಂದ್ರಂಗೆ ಶಕ್ತಿ ಕುಗ್ಗಿತು ತನ್ನ ಚಿತ್ತದಲಿ ಧ್ಯಾನಿಸಿದ ಮತ್ತಾರು ಗತಿಯೆನುತಲಿ॥4॥ ಬಂದುದಾ ಸಮಯದಲಿ ಹಿಂದೆಮಾಡಿದ ಸುಕೃತ ದಿಂದ ದಿವ್ಯಜ್ಞಾನ ಕಣ್ದೆರೆದು ಕೈಮುಗಿದು ವಂದಿಸುತ ಮನದೊಳರವಿಂದನಾಭಾಚ್ಯುತ ಮುಕುಂದ ಮುನಿವೃಂದವಂದ್ಯ ಇಂದಿರಾರಮಣ ಗೋವಿಂದ ಕೇಶವ ಭಕ್ತ ಬಂದು ಸಿಲುಕಿದೆನು ಬಲು ದಂದುಗದ ಬಂಧನದೊಳಿಂದ ನೆಗಳಿಂದ ಹರಿಯೆ॥5॥ ಪರಮಾತ್ಮ ಪರಮೇಶ ಪರಿಪೂರ್ಣ ಪರತತ್ವ ಪರತರ ಪಂರಜ್ಯೋತಿ ಪರಮ ಪಾವನಮೂರ್ತಿ ಉರುತರ ಪರಬ್ರಹ್ಮ ಪರಮೇಷ್ಟಿ ಪರಮ ಪುರುಷಾನಂದ ಪುರುಷೋತ್ತಮ ನಿರುಪಮ ನಿಜಾನಂದ ನಿರ್ಭಯ ನಿರಾವರಣ ನಿರವಧಿಕ ನಿರ್ಗುಣ ನಿರಂಜನ ನಿರಾಧಾರ ನಿರವದ್ಯ ನಿಸ್ಸಂಗ ನಿಶ್ಚಿಂತ ನಿಖಿಲೇಖ ನಿರುತ ನೀ ಸಲಹೆಂದನು॥6॥ ಇಂತೆನುತ ಮೂರ್ಛೆಯೊಳು ಗುಪ್ತ ಕಂಠಧ್ವನಿಯೊ ಳಂತರಾತ್ಮಕನ ನೆನೆನೆನೆದಳುತಲಿರಲಿತ್ತ ನಂತಮಹಿಮನು ಕೇಳಿ ಕರುಣಾದಿಂದಾಕ್ಷಣದೊಳೆದ್ದ ನಹಿಶಯನದಿಂದ ಸಂತಸದಿ ಸಿರಿಸಹಿತ ಗರುಡ ವಾಹನನಾಗಿ ಚಿಂತೆ ಬೇಡೇಳೆನುತಲಭಯಹಸ್ತದಲಿ ಏ ಕಾಂತ ಭಕ್ತನ ಬಳಿಗೆ ಬಂದೆರಡು ಕೈಗಳಿಂ ದಂತಿರಾಜನ ನೆಗಹಿದ॥7॥ ನೆಗಳ ಬಾಯನು ಚಕ್ರದಿಂ ಸೀಳಿ ಕರಿವರನ ಉಗುವ ಕರಣದಲಿ ಮೈದಡಹಲ್ಕೆ ಗಜಜನ್ಮ ತೆಗೆದುದಾಕ್ಷಣ ಚತುರ್ಭುಜ ತುಳಸಿ ವನಮಾಲೆ ಮಿಗೆ ಶೋಭಿಸುತಲೆಸೆದನು ವಿಗಡ ದೇವಲ ಮುನಿಯ ಶಾಪದಿಂದಲಿ ಬಿದ್ದು ಮಿಗೆ ನಕ್ರನಾಗಿ ಹೂಹೂ ಎಂಬ ಗಂಧರ್ವ ಅಘಹರನ ಕಂಡೆರಗಿ ನಿಜಗತಿಗೆ ಐದಿದನು ಪೊಗಳು ತಿರಲಮರಗಣವು॥8॥ ಮಣಿಮಯ ಕಿರೀಟ ಕುಂಡಲ ಹಾರ ಕೌಸ್ತುಭದಿ ಮಿನುಗುತಿಹ ವನಮಾಲೆ ಶ್ರೀವತ್ಸಲಾಂಛನದಿ ಪಣೆಯ ಕತ್ತುರಿ ತಿಲಕದಿಂದೆಸೆವುತಲಿ ಗದಾಘನಶಂಖ ಚಕ್ರಾಬ್ಜದಿ ಝಣಝಣಿತ ನೂಪರದಿ ದಂತಪಂಗ್ತಿಯ ಕೃಪೇ ಕ್ಷಣದಿ ಸಿರಿಮೊಗದಿ ಪೀತಾಂಬರಾಲಂಕೃತದಿ ಮಣಿದು ಜಯಜಯವೆಂಬ ಸುರಸಿದ್ಧ ಸಾಧ್ಯ ಸಂದಣಿಯೊಳಗೆ ಹರಿ ಮೆರೆದನು॥9॥ ಹರಿಸ್ತುತಿಯಗೈದಂಘ್ರಿಗೆರಗಲಾ ಭೂವರನ ಕರುಣದಿಂದಾದರಿಸಿ ಶರಧಿ ಶ್ವೇತದ್ವೀಪ ಗಿರಿಶೃಂಗಗಳು ಸರಸಿ ತರುಶೇಷ ವಾಲ್ಗಮೀಕಿ ಧರಣಿಧ್ರುವ ಶ್ರೀಲಕ್ಷ್ಮಿಯು ಹರಿಗಿರಿಜೆ ವಿಧಿವಾಣಿ ನಾರದ ಪ್ರಹ್ಲಾದ ಗರುಡ ಗೋ ವಿಪ್ರ ಋಷಿ ಗಂಗಾರ್ಕ ಚಂದ್ರಗ್ನಿ ಸಿರಿವತ್ಸ ದರಚಕ್ರ ಅವತಾರ ಕಾರ್ಯಗಳ ಸ್ಮರಿಸುವರ ಕಾಯ್ವೆನೆಂದ॥10॥ ಆವನಿದನುದಯ ಕಾಲದೊಳೆದ್ದು ಭಕ್ತಿಯಲಿ ಭಾವಶುದ್ಧಿಯಲಿ ಚಿಂತನೆ ಮಾಳ್ಪನೊ ಅವನ ಸಾವಿರಾರ್ಜನ್ಮಗಳ ಸಂಚಿತ ಘರಾಸಿಗಳು ತಾವೆ ಹತವಾಹವೆಂದು ಶ್ರೀವಾಸುದೇವನಾಜ್ಞಪಿಸಿ ಗಜೇಂದ್ರ ಸಹಿ ತಾವಿಹಂಗಾ ಧಿಪನ ಏರಿ ವೈಕುಂಠಕ್ಕೆ ದೇವ ಬಿಜಯಂಗೈದ ಪುರಂದರವಿಠ್ಠಲನ ಸೇವಕರಿಗಿದು ಚೋದ್ಯವೆ॥11॥

ಶ್ರೀನಾಥ ಪಾರ್ವತಿಯನಾಥ ಶರಣೆಂಬೆ

ಶ್ರೀನಾಥ ಪಾರ್ವತಿಯನಾಥ ಶರಣೆಂಬೆ ನಾರಾಯಣ ಕೃಷ್ಣ। ವಾಣಿ ಸರಸ್ವತಿಯ ಗಜಮುಖನ ಬಲಗೊಂಡೂ ನಾರಾಯಣ ಕೃಷ್ಣ। ನಾನು ಬಲ್ಲಿಷ್ಟ ಹೇಳುವೆನು ಈ ಕಥೆಯಾ ನಾರಾಯಣ ಕೃಷ್ಣ। ಶ್ರೀನಾಥ ಗಜರಾಜಗೊಳಿದ ಸಂಗತಿಯಾ ನಾರಾಯಣ ಕೃಷ್ಣ। ಚಪ್ಪನ್ನ ದೇಶದಾರಾಜ್ಯದಲಿ ನಾರಾಯಣ ನಾರಾಯಣ ಕೃಷ್ಣ। ಉತ್ತಮ ದೇಶ ದ್ರಾವಿಡದೇಶ ತಾನು ನಾರಾಯಣ ಕೃಷ್ಣ।।5।। ವಿಷ್ಣು ಭಕ್ತರಿಗೆಲ್ಲ ಧೃವನೆಂಬೊ ನೃಪನೂ ನಾರಾಯಣ ಕೃಷ್ಣ। ಮತ್ತೆ ಭೂಸರರ ಪಾಲಿಸುತಿದ್ದನೂ ನಾರಾಯಣ ಕೃಷ್ಣ। ಚಿತ್ತದಲಿ ನರಹರಿಯು ನೆನೆದು ಚಿಂತಿಸುತಾ ನಾರಾಯಣ ಕೃಷ್ಣ। ಚಿತ್ತದಲಿ ನರಹರಿಯ ನೆನೆದು ಚಿಂತಿಸುತಾ ನಾರಾಯಣ ಕೃಷ್ಣ। ಪುತ್ರ ಮಿತ್ರಾದಿ ಬಂಧುಗಳ ನೀಕ್ಷಿಸುತಾ ನಾರಾಯಣ ಕೃಷ್ಣ।।10।। ಸರ್ಪಶಯನನ ಧ್ಯಾನದಲಿ ನಡೆತಂದಾ ನಾರಾಯಣ ಕೃಷ್ಣ। ಮತ್ತೆ ಮಂದರ ಪರ್ವತಕಾಗಿ ಬಂದಾ ನಾರಾಯಣ ಕೃಷ್ಣ। ಹಲವು ನದಿ ಹಲವು ಕೊಳ ಹಲವು ಸುರತರದೀ ನಾರಾಯಣ ಕೃಷ್ಣ। ಸುರಕಿನ್ನರರ ಗಾಂಧರ್ವರೆಡೆಗೆ ನಿಸ್ಸಿಮಾ ನಾರಾಯಣ ಕೃಷ್ಣ।।15।। ಶುದ್ಧ ಸುವರ್ಣ ವಸ್ತ್ರವನು ಏಕಧಾಮ ನಾರಾಯಣ ಕೃಷ್ಣ। ಎದ್ದು ನೋಡಿದನು ನಾಲ್ಕು ದೆಸೆಗೆ ನಿಸ್ಸೀಮಾ ನಾರಾಯಣ ಕೃಷ್ಣ। ಬಂದು ನದಿಯಲಿ ಸ್ನಾನವ ಮಾಡಿ ಬಂದೂ ನಾರಾಯಣ ಕೃಷ್ಣ। ಸಂಧ್ಯಾವಂದನೆ ಮಾಡಿ ಪದ್ಮಾಸನದಿ ನಾರಾಯಣ ಕೃಷ್ಣ। ಚಂದಕಿಟ್ಟನೆ ದ್ವಾದಶಿ ನಾಮಗಳನೂ ನಾರಾಯಣ ಕೃಷ್ಣ।।20।। ಇಂದಿರಾ ಪತಿಯ ಧ್ಯಾನದಲ್ಲಿದ್ದ ತಾನು ನಾರಾಯಣ ಕೃಷ್ಣ। ಅಂದಾಗ ಆಯೆಡೆಗೆ ದೂರ್ವಾಸ ಮುನಿ ಬರಲು ನಾರಾಯಣ ಕೃಷ್ಣ। ನಿಂದೆದ್ದು ವಂದನೆಯ ಮಾಡುತಲಿಲ್ಲವೆನುತಾ ನಾರಾಯಣ ಕೃಷ್ಣ। ಇಂತೆನುತ ಕೋಪಿಸಿದ ತನ್ನೊಳಗೆ ತಾನು ನಾರಾಯಣ ಕೃಷ್ಣ। ಕುಂಜನ ರೂಪ ನೀನಾಗು ಹೋಗೆಂದ ನಾರಾಯಣ ಕೃಷ್ಣ।।25।। ತಪ್ಪುಂಟೆ ಎಲೆ ಮುನಿಯೆ ಕೇಳು ಬಿನ್ನಪವಾ ನಾರಾಯಣ ಕೃಷ್ಣ।ಎಂದಿಗೆ ನಿಶ್ಶಾಪ ಆಗುವುದೆನುತ ಹೇಳೆ ನಾರಾಯಣ ಕೃಷ್ಣ। ಸರ್ಪಶಯನನು ನಿನ್ನ ಸೋಕಿದರೇ ನಾರಾಯಣ ಕೃಷ್ಣ। ಅಂದಿಗಾ ನಿಶ್ಶಾಪ ಆಗುವುದೆನುತ ಹೇಳೆ ನಾರಾಯಣ ಕೃಷ್ಣ। ಜ್ಞಾನವಡಗಿದವು ಅಜ್ಞಾನ ಹೆಗ್ಗಳಿಸೇ ನಾರಾಯಣ ಕೃಷ್ಣ।।30।। ಸೂರ್ಯನೂ ಮುಸುಕಿ ಕತ್ತಲೆ ಯಾದಂತೇ ನಾರಾಯಣ ಕೃಷ್ಣ। ಧ್ಯಾನಿಸುತ ಹಿಂದೆ ಮುಂದೆ ನೋಡುತಲೆ ನಾರಾಯಣ ಕೃಷ್ಣ। ಆನೆಯಾದನೆ ನೃಪನು ಆಕ್ಷಣದಿ ನಾರಾಯಣ ಕೃಷ್ಣ। ಮೇಲು ನದಿ ಪರ್ವತವು ನಡೆದು ಬಂದ್ದಕೇ ನಾರಾಯಣ ಕೃಷ್ಣ। ಮೇಲು ಮದ ಕೀಳು ಮದ ಸುರಿಯುಂದಬ್ಬರದಿ ನಾರಾಯಣ ಕೃಷ್ಣ।।35।। ಕಾಡಾನೆಯೊಳಗೆ ಹಲವು ಮಕ್ಕಳ ಪಡೆದೂ ನಾರಾಯಣ ಕೃಷ್ಣ। ಕೂಡಿ ಕೊಂಡೆಲ್ಲ ಒಂದಾಗಿ ಸಂಭ್ರಮದಿ ನಾರಾಯಣ ಕೃಷ್ಣ। ಗುಟ್ಟ ಬೆಟ್ಟಗಳ ಏರುತಲೆ ಇಳುಹುತಲೇ ನಾರಾಯಣ ಕೃಷ್ಣ। ಅಟ್ಟ ಅಡವೀಯಲ್ಲಿ ಸಂಚಾರ ಮಾಡುತಲೇ ನಾರಾಯಣ ಕೃಷ್ಣ।ಬಿತ್ತಿದವು ಕರೆತೊರೇ ಬೇಸಿಗೆ ಬರಲು ನಾರಾಯಣ ಕೃಷ್ಣ।।40।। ಚೋಳ ಕಿತ್ತಳೆ ಚೂತ ಫಲಮಾದ ಫಲವೂ ನಾರಾಯಣ ಕೃಷ್ಣ। ದಾಳಿಂಬ ದ್ರಾಕ್ಷಿ ಖರ್ಜೂರ ಕದಳಿಯನೂ ನಾರಾಯಣ ಕೃಷ್ಣ। ಮೇಲೆನಿಪ ಫಲಪುಷ್ಪದಿಂದ ಲೊಪ್ಪಿಹನೂ ನಾರಾಯಣ ಕೃಷ್ಣ। ತಾವರೆ ಕೊಳವ ಕಂಡನು ಸಂಭ್ರಮದೀ ನಾರಾಯಣ ಕೃಷ್ಣ। ನವರತ್ನ ಖಚಿತಮಯವಾದ ಸೋಪಾನ ನಾರಾಯಣ ಕೃಷ್ಣ।।45।। ಕೊಳದ ಸುತ್ತಮುತ್ತಲೂ ಗಿಣಿಯು ಕೋಗಿಲೆಯೂ ನಾರಾಯಣ ಕೃಷ್ಣ। ಕುಣಿವೊ ನವಿಲುಗಳೂ ಸ್ವರಗೈವ ಕೋಗಿಲೆಯೂ ನಾರಾಯಣ ಕೃಷ್ಣ। ಕಾಡಾನೆ ಮರಿಯಾನೆ ಕರಿಯಾನೆಗಳನೂ ನಾರಾಯಣ ಕೃಷ್ಣ। ಕೂಡಿಕೊಂಡೆಲ್ಲ ಒಂದಾಗಾ ಸಂಭ್ರಮದೀ ನಾರಾಯಣ ಕೃಷ್ಣ।ಕೊಡುವುತಲೆ ಮಡುವುತಲೆ ಕುಡಿವುತಲೆ ನೀರಾ ನಾರಾಯಣ ಕೃಷ್ಣ।।50।। ಕೊಡುವುದಲೆ ಮಡುವುತಲೆ ಚಲ್ವಿದ್ಕೊಂದಾಗಿ ನಾರಾಯಣ ಕೃಷ್ಣ। ಹಲಕಾಲ ಇರಲಾಗ ಹೊಕ್ಕ ಗಜಲಾಜ ನಾರಾಯಣ ಕೃಷ್ಣ। ಮುನಿಯ ಶಾಪದಲ್ಲೊಂದು ಮಕರಿ ಮಡುವಿನಲ್ಲಿ ನಾರಾಯಣ ಕೃಷ್ಣ। ಮದಗಜವು ಬಂದು ಮಡುವ ಕಲಕುತಿರಲೂ ನಾರಾಯಣ ಕೃಷ್ಣ। ಮಡುವಿನಲಿ ಬಂದು ಹಿಡಿಯಿತು ಆಮಕರಿ ನಾರಾಯಣ ಕೃಷ್ಣ।।55।। ಅತ್ತಿತ್ತ ನೋಡೋನು ಸುತ್ತ ನೋಡೋನು ನಾರಾಯಣ ಕೃಷ್ಣ। ಎತ್ತ ನೋಡಿದರೆ ಬಿಡದು ಆ ಮಕರಿ ಕಾಲು ನಾರಾಯಣ ಕೃಷ್ಣ। ಎಳೆದೊಮ್ಮೆ ನೋಡೋನು ಸೆಳೆದು ನೋಡೋನು ನಾರಾಯಣ ಕೃಷ್ಣ। ಸೆಳೆದು ನೋಡಿದರೆ ಬಿಡದು ಆ ಮಕರಿ ಕಾಲೂ ನಾರಾಯಣ ಕೃಷ್ಣ। ಆತನ್ನ ಸತಿ ಸುತರೆಲ್ಲ ಎಳೆದು

ನೋಡೋಣ ನಾರಾಯಣ ಕೃಷ್ಣ॥60॥ ನಮ್ಮ ಗೈಲಾಗದೆನುತ ಹೋಗೋರು ನಾರಾಯಣ ಕೃಷ್ಣ। ಎನ್ನ ಪೂರ್ವಫಲ ಹೋಗಿ ನೀವೆಲ್ಲ ನಾರಾಯಣ ಕೃಷ್ಣ। ದುಮ್ಮಾನದಿಂದ ದುಗುಡದಲಿ ಹೋದರವರೂ ನಾರಾಯಣ ಕೃಷ್ಣ। ಕಚ್ಚುತಲೆ ಕಾರುತಲೆ ಆ ಮಕರಿಕಾಲೂ ನಾರಾಯಣ ಕೃಷ್ಣ। ರಕ್ತಮಯವಾಗಿ ತುಂಬಿತು ಕೊಳದ ನೀರೂ ನಾರಾಯಣ ಕೃಷ್ಣ॥65॥ ಅಕ್ಕ ಇನ್ನೂ ಯಾರುಗತಿ ಎನುತಾ ನಾರಾಯಣ ಕೃಷ್ಣ। ದಿಕ್ಕು ಕೆಟ್ಟಂತೆ ಮೊರೆಯಿತ್ತ ಗಜರಾಜ ನಾರಾಯಣ ಕೃಷ್ಣ। ಎಂಬತ್ತುನಾಲ್ಕು ಲಕ್ಷ ಜೀವರಾಶಿಗಳ ನಾರಾಯಣ ಕೃಷ್ಣ। ಇಂಬಿಟ್ಟು ಸಲಹೋನೆ ಈಶ್ವರನೆ ಕಾಯೋ ನಾರಾಯಣ ಕೃಷ್ಣ। ಜಂಗಮಸ್ಥಾವರದಿ ಒಳಗೆ ಪರಿಪೂರ್ಣ ನಾರಾಯಣ ಕೃಷ್ಣ। ಇತೆನ್ನೊನೆ ನೀಯೆನ್ನ ಬಂಧನವ ಬಿಡಿಸೋ ನಾರಾಯಣ ಕೃಷ್ಣ। ವೇದವನು ಕದ್ದು ಕೊಂಡೊಯ್ದ ದಾನವನ ನಾರಾಯಣ ಕೃಷ್ಣ। ಸಾಧಿಸಿದೆ ಭೇದಿಸಿದೆ ಅವನ ಛೇದಿಸಿದೆ ನಾರಾಯಣ ಕೃಷ್ಣ। ಆನಿಗಮವನೆ ತಂದು ಮಲಜಗೆ ಇತ್ತೆ ನಾರಾಯಣ ಕೃಷ್ಣ। ವೇದಾಂತ ವೇದ್ಯ ಮತ್ಸ್ಯಾವತಾರ ಶರಣು ನಾರಾಯಣ ಕೃಷ್ಣ॥75॥ ಸುರರು ದಾನವರು ಅಮೃತವ ಭುಜಿಸುವಲ್ಲಿ ನಾರಾಯಣ ಕೃಷ್ಣ। ಮುರವೈರಿ ಹಾಸಿಗೆಯ ಮರೆಮಾಡಿಕೊಂಬೆ ನಾರಾಯಣ ಕೃಷ್ಣ। ಭರದಿಂದ ಮಂದರವ ತಳಕೆ ಇಡಲಿಕೆ ಬಂದೆ ನಾರಾಯಣ ಕೃಷ್ಣ। ಗಿರಿಯನ್ನೆತ್ತಿದ ಕೂರ್ಮಗೋವಿಂದ ಶರಣೂ ನಾರಾಯಣ ಕೃಷ್ಣ। ಪೊಡವಿಯನು ಕದ್ದು ಕೊಂಡೊಯ್ದ ದಾನವನ ನಾರಾಯಣ ಕೃಷ್ಣ॥80॥ ಬಿಡದೆ ಬೆನ್ನಟ್ಟಿ ಪಾತಾಳಕೆ ಎಳದೇ ನಾರಾಯಣ ಕೃಷ್ಣ। ಹಿರಣ್ಯಾಕ್ಷನ ಸೀಳಿ ಮೇದಿನಿಯ ತಂದೇ ನಾರಾಯಣ ಕೃಷ್ಣ। ವರಹಾವತಾರ ಶ್ರೀಹರಿ ನಿಮಗೆ ಶರಣೂ ನಾರಾಯಣ ಕೃಷ್ಣ। ಬಾಲಕನೂ ಕರೆಯಲೂ ಕಂಬದಿಂ ಬಂದೆ ನಾರಾಯಣ ಕೃಷ್ಣ। ಸೀಳಿ ಹಿರಣ್ಯ ಕಶಿಪನ ಕರುಳ ಮಾಲೆಯನು ಮಾಡಿ ನಾರಾಯಣ ಕೃಷ್ಣ॥85॥ ಆವಾಗ ಪ್ರಹ್ಲಾದನಿಗೆ ಅಭಯವನು ಇತ್ತೆ ನಾರಾಯಣ ಕೃಷ್ಣ। ಶ್ರೀಲಕ್ಷ್ಮೀನರಸಿಂಹ ನಿನಗೆ ಶರಣೂ ನಾರಾಯಣ ಕೃಷ್ಣ। ಬಲಿಯದಾನವ ಮೂರಡಿ ಮಾಡಿ ಅಳೆದೆ ನಾರಾಯಣ ಕೃಷ್ಣ। ಇಳೆಯನೆಲ್ಲವ ಮೂರಡಿ ಮಾಡಿ ಅಳೆದೆ ನಾರಾಯಣ ಕೃಷ್ಣ। ಚೆಲುವ ಪಾದದಲಿ ಭಾಗೀರಥಿ ತಂದೆ ನಾರಾಯಣ ಕೃಷ್ಣ॥90॥ ಅಳೆದ ವಾಮನನೆ ತ್ರಿವಿಕ್ರಮನೆ ಶರಣು ನಾರಾಯಣ ಕೃಷ್ಣ। ಉತ್ತಮ ಕ್ಷತ್ರಿಯರ ಕುಲವ ಸಂಹರಿಸಿ ನಾರಾಯಣ ಕೃಷ್ಣ। ರಕ್ತದೊಳಗೆ ಸ್ನಾನ ತರ್ಪಣವ ಮಾಡಿ ನಾರಾಯಣ ಕೃಷ್ಣ। ವಿಪ್ರ ಭಾರ್ಗವ ರಾಮ ಕರುಣಿಸೈಯ್ಯಾ ನಾರಾಯಣ ಕೃಷ್ಣ। ಹರನ ಬಿಲ್ಲನು ಮುರಿದು ಧರಣಿಜೆಯ ತಂದೆ ನಾರಾಯಣ ಕೃಷ್ಣ॥95॥ ದುರುಳ ರಾವಣನ ಶಿರವನೂ ಹತ್ತು ಕೊಂದೆ ನಾರಾಯಣ ಕೃಷ್ಣ। ಅವನ ತಮ್ಮಗೆ ಅಧಿಕ ರಾಜ್ಯವನು ಇತ್ತೆ ನಾರಾಯಣ ಕೃಷ್ಣ। ಭುಜವನೆ ಕಾಯ್ದ ರಾಮಚಂದ್ರನೆ ಶರಣು ನಾರಾಯಣ ಕೃಷ್ಣ। ಗೋವುಗಳ ಕಾಯ್ದ ಗೋವರ್ಧನವನೆತ್ತಿದೆ ನಾರಾಯಣ ಕೃಷ್ಣ। ಮತ್ತೆ ವೇದ ವೇಂದಾತವನೆ ಓದಿ ನಾರಾಯಣ ಕೃಷ್ಣ॥100॥ ಮಾವ ಕಂಸನ ಕೊಂದು ಮಧುರೆಯಲಿ ನಿಂದೆ ನಾರಾಯಣ ಕೃಷ್ಣ। ನಾರಿ ರುಕ್ಮಿಣಿಗೊಲಿದು ಬಲರಾಮ ಸಹಿತಲೆ ನಾರಾಯಣ ಕೃಷ್ಣ। ದ್ವಾರಕಿಯಲಿ ನೆಲೆಸಿದ ಗೋಪಾಲ ಕೃಷ್ಣನೆ ನಾರಾಯಣ ಕೃಷ್ಣ। ತ್ರಿಪುರ ಸತಿಯರ ವ್ರತವ ಅಪಹರಿಸಿದವನೆ ನಾರಾಯಣ ಕೃಷ್ಣ। ಪೃಥ್ವಿ ಒಳಗೆ ಅಶ್ವಥನಾಗಿ ನಿಂದವನೆ ನಾರಾಯಣ ಕೃಷ್ಣ॥105॥ ಉರಿಗಣ್ಣು ಕೈಯಲ್ಲಿ ತೋರ್ದವನೆ (ತೆಗೆದವನೆ) ನಾರಾಯಣ ಕೃಷ್ಣ। ಪುಷ್ಪವತಿಯ ಕೈಯ್ಯ ಬೌದ್ಧಾವತಾರ ಶರಣು ನಾರಾಯಣ ಕೃಷ್ಣ। ಧರ್ಮಕರ್ಮಗಳೆಲ್ಲ ಒಂದಾಗಿ ಬರಲೂ ನಾರಾಯಣ ಕೃಷ್ಣ। ಭಿನ್ನಾಣದಿಂ ತುರುಗವ ನೇರಿಕೊಂಡೂ ನಾರಾಯಣ ಕೃಷ್ಣ। ಭಂಗಪಡಿಸುವೊ ಹಲವು ಪಾತಕರ ಕೊಂದೇ ನಾರಾಯಣ ಕೃಷ್ಣ॥110॥ ಬ್ರಹ್ಮ ಸ್ವರೂಪ ಶ್ರೀಕಲ್ಕ್ಯಾನೆ ಶರಣು ನಾರಾಯಣ ಕೃಷ್ಣ। ಕಾಯೋ ಕೇಶವ ನಿಮ್ಮ ಮನದಲ್ಲಿ ನೆನೆವೆನೋ ನಾರಾಯಣ ಕೃಷ್ಣ। ಹರಿಯೆ ನಿನ್ನನ್ನು ಅಚ್ಯುತನೆಂದು ನೆನೆವೆನೊ ನಾರಾಯಣ ಕೃಷ್ಣ। ಹರಿಕಾಯೋ ಪ್ರಾಣಹೋಗುತಿದೆ ಎನುತಾ ನಾರಾಯಣ ಕೃಷ್ಣ॥115॥ ಯಾವಾಗ ಹರಿ ಬಂದು ಕಾಯ್ವನೋ ಎನುತಲೆ ನಾರಾಯಣ ಕೃಷ್ಣ। ಕೂಗಿ ಮೊರೆಯಿಟ್ಟನೇ ಗಜರಾಜ ಆಗ ನಾರಾಯಣ ಕೃಷ್ಣ। ಕ್ಷೀರಾಬ್ಧಿಯಲಿ ವೈಕುಂಠ ನಗರದಲಿ ನಾರಾಯಣ ಕೃಷ್ಣ। ಶೇಷನ್ಹಾಸಿಗೆ ಮೇಲೆ ಹರಿಯು ತಾನಿರಲು ನಾರಾಯಣ ಕೃಷ್ಣ। ಶ್ರೀಲಕ್ಷ್ಮಿಯೊಡನೆ ತಾ ಸವ್ಯದಿಂದಿರಲೂ ನಾರಾಯಣ ಕೃಷ್ಣ॥120॥ ಸಜ್ಜಲುಪ್ಪರಿಗೆಯಿಂದ ತಾ ಇಳಿದು ಹೋದ ನಾರಾಯಣ ಕೃಷ್ಣ। ವಜ್ರಮಾಣಿಕ್ಯದ ಕುಂಡಲವು ಕಿವಿಯಲ್ಲಿ ಹೊಳೆಯೆ ನಾರಾಯಣ ಕೃಷ್ಣ। ಹೊದ್ದ ಪಿತಾಂಬರವು ನೆಲಕೆ ಒಲಿಯುತಿರೆ ನಾರಾಯಣ ಕೃಷ್ಣ। ಎದ್ದು ಬಂದಂತೆ ದಯಾ ಸಮುದ್ರ ಬಂದಂತೆ ನಾರಾಯಣ ಕೃಷ್ಣ। ಶಂಕು ಚಕ್ರವು ಕರಕಮಲದಲಿ

ಸಂಧಿಸಿದೆ ನಾರಾಯಣ ಕೃಷ್ಣ।।125।। ಪಂಕಜಾಕ್ಷಿಯ ಕೂಡೆ ಏನೊಂದು ಉಸುರದೇ ನಾರಾಯಣ ಕೃಷ್ಣ। ಬಿಂಕದಲಿ ಗರುಡನಾ ಹೆಗಲೇರಿ ನಿಲ್ಲದೇ ನಾರಾಯಣ ಕೃಷ್ಣ। ಪಂಕಜನಾಭ ಬಂದನೆ ಮಡುವಿನೆಡೆಗೇ ನಾರಾಯಣ ಕೃಷ್ಣ। ಸಿಂಧು ಶಯನನ ಸತಿ ಶ್ರೀಹರಿ ಎಲ್ಲಿಗೈ ತಂದರೋ ನಾರಾಯಣ ಕೃಷ್ಣ। ಮಂದಗಾಮಿನಿ ಬರಲು ಪುರವೆಲ್ಲ ತೆರಳಿ ನಾರಾಯಣ ಕೃಷ್ಣ।।130।। ದೇವಋಷಿ ಸಪ್ತಋಷಿಗಳೊಂದಾಗಿ ಬರಲೂ ನಾರಾಯಣ ಕೃಷ್ಣ। ದೇವ ದೇವೋತ್ತಮರು ಇದ್ದೆಡೆಗೆ ಬರಲು ನಾರಾಯಣ ಕೃಷ್ಣ। ಬಂಧು ಮಿತ್ರರೂ ಸನಗಾತಿ ಒಂದಾಗಿ ನಾರಾಯಣ ಕೃಷ್ಣ। ಶಿರದ ಮೇಲಿನ ಗಂಗೆ ತುವುಗಾಡುತಿರಲೂ ನಾರಾಯಣ ಕೃಷ್ಣ। ಹರನಂದು ಕೈಲಾಸ ಪುರದಿಂದ ಇಳಿದೂ ನಾರಾಯಣ ಕೃಷ್ಣ।।135।। ಏನು ಕಾರಣದಿ ಶ್ರೀಹರಿ ಇಲ್ಲಿಗೈ ತಂದಾನೋ ನಾರಾಯಣ ಕೃಷ್ಣ। ಮೋರೆ ಮೋರೆಗಳ ನೋಡುತಲಿ ಸಂಧಿಸಿದೆ ನಾರಾಯಣ ಕೃಷ್ಣ। ಸಂಧಿಸಿಟ್ಟನೆ ಮಕರಿ ಹಲ್ಲು ಕಿರಿವಂತೆ ನಾರಾಯಣ ಕೃಷ್ಣ। ಗಂಧರ್ವ ರೂಪಿನಲಿ ಬಂದವನ ಹಾಗೇ ನಾರಾಯಣ ಕೃಷ್ಣ।।140।। ಕೊಳದಿಂದೆದ್ದು ಬಂದನು ಸಂಭ್ರಮದೀ ನಾರಾಯಣ ಕೃಷ್ಣ। ಗರುಡ ವಾಹನನ ಚರಣಕ್ಕೆರಗಿನಿಂದಾ ನಾರಾಯಣ ಕೃಷ್ಣ। ಇಂದು ಇವನ ಪುಣ್ಯ ನೋಡೆನ್ನೋರು ನಾರಾಯಣ ಕೃಷ್ಣ। ಮಂದಾರ ಪತಿಯ ಕೊಂಡಾಡೋರು ಕೆಡವೋರು ನಾರಾಯಣ ಕೃಷ್ಣ।।145।। ಮಂದಾರ ಪೂಮಳೆಯ ಕರೆವೋರು ಸೂರರೂ ನಾರಾಯಣ ಕೃಷ್ಣ। ಸಕ್ತಿ ಸಹಿತ ಶ್ರೀಹರಿಯ ಗರುಡನೇರಿಕೊಂಡು ನಾರಾಯಣ ಕೃಷ್ಣ। ಹರನು ಪಾರ್ವತಿ ವೃಷಭವನೇರಿಕೊಂಡು ನಾರಾಯಣ ಕೃಷ್ಣ। ಧುಮೇ ಧುಮೇ ಹೆಗ್ಗಾಳಿ ಇಟ್ಟಳಿಸೇ ನಾರಾಯಣ ಕೃಷ್ಣ। ಕರಿರಾಜನ ಸಹಿತ ವೈಕುಂಠಕೇ ತೆರಳಿದರು ನಾರಾಯಣ ಕೃಷ್ಣ।।150।। ಹೊತ್ತಿನಲ್ಲೆದ್ದು ಹೇಳಿ ಕೇಳಿದವರಿಗೆ ನಾರಾಯಣ ಕೃಷ್ಣ। ದುಸ್ವಪ್ನ ದುರ್ಬುದ್ಧಿ ದುರ್ವ್ಯಸನ ತೊಲಗುವುದು ನಾರಾಯಣ ಕೃಷ್ಣ। ಸತಿ ಸಹಿತ ಸಾಯುಜ್ಯ ಪದವಿ ದೊರಕುವುದು ನಾರಾಯಣ ಕೃಷ್ಣ। ಮುನ್ನ ಪಾಂಡವರ ರಕ್ಕಿಸಿದಂತೆ ನಮ್ಮಾ ನಾರಾಯಣ ಕೃಷ್ಣ। ಮನ್ನಿಸೈಯ್ಯ ಪುರಂದರ ವಿಠಲ ಗೋಪಾಲ ನಾರಾಯಣ ಕೃಷ್ಣ।।155।।

❖ ❖ ❖

77. ವಿವಿಧ ಸ್ತೋತ್ರ / ವ್ರತ ಕಥೆಗಳು

ದ್ವಾರಾವತಿಯಲಿ ದನುಜದಲ್ಲಣ (ಶ್ರೀಕೃಷ್ಣ ಪಾರಿಜಾತ)

ಶ್ಲೋಕ: ದ್ವಾರಾವತಿಯಲಿ ದನುಜದಲ್ಲಣ ಮುಕುಂದ। ಸಾರೆ ರುಕ್ಮಿಣಿಸಹಿತ ಆನಂದದಿಂದ। ವಾರಿಜಾಂಬಕ ವಾಲಗದೊಳು ಚಂದ। ನಾರಂದಮುನಿ ತಾ ಪಾರಿಜಾತವ ತಂದ।।1।।

ಪದ: ಬಲ್ಲಿದ ಮುನಿಯ ಕುಳ್ಳಿರಿಸಿ ಸತ್ಕರಸಿದ ಪುಷ್ಪಯಾರಿಗೆ ಎಂದದ ವಲ್ಲಭೆರುಕ್ಮಿಣೆಗಲ್ಲದೆ ಬ್ಯಾರೆ ಸಲ್ಲದು ಎಲ್ಲ ನೀನು ಬಲ್ಲದೆ ಇಂತೆದ। ಈ ಸುದ್ದಿ ಸತ್ಯಭಾಮೆಗೆ ತಂದು ಹೇಳಿದರಂದು ಕೇಳಿದಲಾಕೆ ನಿಂದು। ತಲ್ಲಣಿಸುತ ಎದೆ ಧಿಗಿಲೆಂದು ಭುಗಿಭುಗಿಸಲೆಂದು ಮನದಲ್ಲಿ ಅತಿ ನೊಂದು।।1।।

ಶ್ಲೋಕ: ಇಂದ್ರಲೋಕದ ಚಂದದ ಕುಸುಮವನ್ನು। ಮಂದಗಮನೆಯ ಮುಡಿಗೆ ತಾ ಮುಡಿಸಿದನು। ಎಂದು ಎನ್ನೊಳು ಎರವು ಇಲ್ಲವು ಕಾಣೆ। ಇಂದು ಮಾಡಿದ ಕುಹಕವ ಕೃಷ್ಣ ತಾನು।।2।।

ಪದ: ಹರಿಯು ಮಾಡಿದ ಮಾಟವನು ಕಂಡೆನು ನಾನು ಇನ್ನಾರಿಗೆ ಪೇಳುವೆನು। ಪರಿಮಳದ ಪಾರಿಜಾತದ ಹೂವ ತಂದನು ಭಾಮೆ ರುಕ್ಮಿಣಿ ತನ್ನ ಜೀವ। ಸರಿ ಬಂದ ಮಡದಿಗೆ ಮುಡಿಸಿದ ಶೃಂಗರಿಸಿದದ ಬಹುಪ್ರೀತಿ ಬಡಿಸಿದ। ಬರಿಯ ಮಾತಿನ ಬನ್ನಣೆಯಿಲ್ಲ ಸ್ನೇಹ ತನಗಲ್ಲಿ ಠಕ್ಕುಠವಳಿ ಗಳಿಲ್ಲ।।2।।

ಶ್ಲೋಕ: ಮೆಚ್ಚಿ ಬಂದೆನೆ ಮೋಹಕ್ಕೆ ಮರುಳಾದೆನೆ। ಹಚ್ಚಿರೆ ಮಾತ ಹರಿಯು ತಾ ಕೇಳಿದನೆ ನೆಚ್ಚಿ ಇದ್ದೆನೆ ಎನ್ನೊಳು ವಂಚಿಸಿದನೆ। ರಚ್ಚೆಗಿಕ್ಕಿದ ರಂಪು ಮಾಡಿದ ಕಾಣೆ।।3।।

ಪದ: ಮಾರನಟ್ಟುಳಿ ತಾಳಲಾರೆನೆ ಮುಖದೋರನೆ ಇನ್ನೇನು ತೆರನೆ ತೋರಿಸೆ ಕೃಷ್ಣನ್ನ ಅಮ್ಮಯ್ಯ ಕೇಳು ದಮ್ಮಯ್ಯ ಕಂತು ಕಮಲಜನಯ್ಯ। ಬಾರದಿದ್ದರೆ ಪ್ರಾಣ ಉಳಿಯದು ಮತ್ತೆ ಅಳಿವುದು ಏನೆಂದು ತಿಳಿಯದು।।ಸಾರಿದ ಸರಿಬಂದ

ಸತಿಯ (ಳ) ಬಹುರತಿಯ(ಳ) ಬಹು ಪ್ರೀತಿ ಇದ್ದವ(ಳ)॥3॥ ಶ್ಲೋಕ: ಮಳೆ ಇಲ್ಲದ ಮೇಘವಿದ್ಯಾತಕಮ್ಮ। ಬೆಳೆ ಇಲ್ಲದ ಭೂಮಿ ಮತ್ಯಾತಕಮ್ಮ। ಗಿಳಿಇಲ್ಲದ ಗೂಡು ತಾನ್ಯಾತಕಮ್ಮ। ತಾಳಲಾರೆನೊ ಶ್ರೀಕೃಷ್ಣನಿಲ್ಲದೆ ಎಮ್ಮ॥4॥
ಪದ: ಯಾಕೆನ್ನ ಬ್ರಹ್ಮ ಪುಟ್ಟಿಸಿದನೊ ಸೃಷ್ಟಿಸಿದನೊ ಮಾತೆನ್ನ್ಯಾಕ ಪಡೆದಳೊ। ಸಾಕಿನ್ನು ಹೆಣ್ಣು ಜನ್ಮದ ಬಾಳು ಯಾತಕೆ ಹೇಳು ತಾಕಲೆನ್ನಯ ಗೋಳು। ಕುಹಕ ಪೇಳ್ದ ನಾರದ ಸಿದ್ಧ ಎಂಬುದು ಬದ್ಧ ಮೂರುಲೋಕ ಪ್ರಸಿದ್ಧ। ಶ್ರೀಕೃಷ್ಣಂಗೆ ಎನಗೆ ಭೇದವ ಮಾಡಿ ಹೋದನು ಓಡಿ ತನಗ್ಯಾಕಿದು ಬ್ಯಾಡಿ॥4॥
ಶ್ಲೋಕ: ಬಿಸಜಾಕ್ಷನ ಬಹಳ ನಂಬಿದ್ದೆ ನಾನು। ವಶವಾದನೆ ಒಲಿದು ರುಕ್ಮಿಣಿಗೆ ತಾನು ಶಶಿಮುಖಿಯಳೆ ಸವತಿ ಅಟ್ಟುಳಿ ಇದೇನು। ಆಸೆಪಟ್ಟೆನೆ ಬಹಳ ವಸುದೇವ ಸುತಗೆ॥5॥
ಪದ: ಸಿಟ್ಟಿನಿಂದತಿ ಘಡಘುಡಿಸುತ ಆರ್ಭಟಿಸುತ ಎಲ್ಲರೊಡನೆ ಕೋಪಿಸುತ ತೊಟ್ಟತೊಡಿಗೆ ಈಡಾಡುತ ಬಿಸಾಡುವ ನನಗ್ಯಾಕಿದು ಎಂದು। ಪಟ್ಟೆಮಂಚದ ಮೇಲೆ ಒರಗುತ ತಾ ಎರಗುತ ಮನದೊಳು ಮರುಗುತ। ಇಷ್ಟುಮಾಡುವುದಿದು ನೀತವೆ ಪ್ರಖ್ಯಾತವೆ ಸುರಪಾರಿಜಾತವೆ॥5॥ ಶ್ಲೋಕ: ದೇವಲೋಕದ ಹೂವ ತನಗಿಲ್ಲವಲ್ಲ। ಭಾವೆ ಎನ್ನೊಳು ಮುನಿಯದೆ ಬಿಡುವಳಲ್ಲ। ಆವಪರಿಯಲಿ ತಿಳಿದು ಹೇಳುವೆನು ಸೊಲ್ಲ। ಜೀವದೊಲ್ಲಭೆಯೊಡನೆ ಪಂಥವು ಸಲ್ಲ॥6॥
ಪದ: ಮಂದಗಮನೆ ಮುನಿದಿಹಳೊ ಎನ್ನ ಪ್ರಿಯೆಳೊ ಎನ್ನೊಡನೆ ನುಡಿಯಳೊ। ಇಂದು ಅಲ್ಲಿಗೆ ಹೋಗದಿದ್ದರೆ ಇಲ್ಲಿದ್ದರೆ ಅಪ್ರಬುದ್ಧನಾದರೆ। ಕುಂದು ಎನ್ನ ಮ್ಯಾಲಿಡುವಳೋ ಸ್ನೇಹ ಬಿಡುವಳೊ ಕೋಪವನು ತಾಳುವಳೋ ಇಂ। ತೆಂದು ನುಡಿದ ಮುಕುಂದ ನಿತ್ಯಾನಂದನು ಬಾಗಿಲೊಳು ನಿಂದನು॥6॥
ಶ್ಲೋಕ: ಚಿತ್ತದೊಲ್ಲಭೆ ಚದುರೆ ಮೋಹನಾಕಾರೆ। ಮುತ್ತುರತ್ನವ ಮನೆಯೊಳಗೆಲ್ಲ ಬೀರಿ ಎತ್ತ ಹೊದಳೊ ಎನ್ನ ಪ್ರಾಣದ ನಾರಿ। ಸತ್ಯಭಾಮೆಯ ಸುಳುಹು ಕಾಣೆನು ತೋರಿ॥7॥
ಪದ: ಕನ್ನಡಿ ಕದಪಿನ ಜಾಣೆಯ ಸುಪ್ರವೀಣೆಯ ಕೋಕಿಲವಾಣಿಯ। ಇನ್ನೆಲ್ಲಿ ಹೋದಳು ತೋರಿಸೆ ಹತ್ರ ಸೇರಿಸೆ ಬಂದೆನು ಹಾರೈಸಿ ನಿಂತವರು ಕಣ್ಣು। ಸನ್ನೆಯ ಮಾಡಿ ತೋರ್ವದು ನೋಡಿ ಮೆಲ್ಲಗೆ ಮಾ(ತಾ)ಡಿ॥7॥
ಶ್ಲೋಕ: ಹಾಸಿ ಮಲಗಿದ್ದ ಸತಿಯ ಕಂಡು। ಬೀಸಣಿಕೆಯಲಿ ಬೀಸಿದ ಕೃಷ್ಣ ತಾನು। ಸೂಸು ಪರಿಮಳ(ದ) ಪಾರಿಜಾತದ ಹೂವ ಹಾರೈಸಿ। ಕಂಗಳು ತೀರ(ವು) ನೋಡಿದಳು ಕಾಂತೆ॥8॥
ಪದ: ಕಂಡಳು ಕಾರುಣ್ಯಮೂರ್ತಿಯ ಸತ್ಕೀರ್ತಿಯ ಫಲ್ಗುಣನ ಸಾರಥಿಯ। ಇಲ್ಲಿಗ್ಯಾತಕೆ ಬಂದೆ ಹೋಗೆಂದು ಅತ್ತ ಸಾಗೆಂದು ಇದು ಏನು ಸೋಗೆಂದು। ಹಿಂಡು ಸ್ತ್ರೀಯರ ಶಿರೋರನ್ನಳೆ ಮೋಹನ್ನಳೆ ಮುನಿಸ್ಯಾತಕೆನ್ನೊಡನೆ। ಕಂಡಕನಸು ಎಂದು ಭಾವಿಸೆ ಎನ್ನ ಜೀವಿಸೆ ಅಪರಾಧವ ಕ್ಷಮಿಸೆ॥8॥
ಶ್ಲೋಕ: ಅಕ್ಕರಿಂದಲೆ ರುಕ್ಮಿಣಿಗೆ ಇತ್ತ ಹೂವ। ಮಿಕ್ಕ ಸತಿಯರಿಗ್ಯಾತಕೆಂಬ ಭಾವ ಕಕ್ಕುಲಾತಿಯ ಕಂಡೆ ನಿನ್ನಲ್ಲಿ ಜೀವ। ಸೊಕ್ಕಬ್ಯಾಡವೊ ಸಾಕು ಹೋಗೆಲೊ ಗೋವ॥9॥
ಪದ: ಮಲಯಜಗಂಧಿ ಮರನ ತಂದು ನಿಲಿಸುವೆನಿಂದು ಮನ್ನಿಸೆ ಕೃಪಾಸಿಂಧು। ಬಲರಾಮ ನಂದಗೋಪನಾಣೆ ತಪ್ಪೆನು ಕಾಣೆ ಕೋಕಿಲಸ್ವರಗಾನೆ। ಛಲವ್ಯಾತಕೆಂದು ತಕ್ಕೈಸಿದ ಸಂತೈಸಿದ ತೊಡೆಯಲ್ಲಿ ಕುಳ್ಳಿರಿಸಿದ। ಹೆಳವನಕಟ್ಟೆಯ ರಂಗನು ಕೃಪಾಂಗನು ದೇವೋತ್ತುಂಗ ವಿಕ್ರಮನು॥9॥

ಪತಿಗಳೈವರು ಹರುಷದಿಂ ಬರುತಿರೆ (ಪಾಂಡವರು ದ್ರೌಪದಿ ಸಂವಾದ)

ಪತಿಗಳೈವರು ಹರುಷದಿಂ ಬರುತಿರೆ ಸರಸದಿಂ ಪತ್ನಿ ಕದವನಿಕ್ಕಿ॥ ಸರಸದಿಂ ಪತ್ನಿ ಕದವನಿಕ್ಕಿ॥ ನಾಗವೇಣಿಯೆ ನೀನು ಸಾಗಿ ಮುಂದಕ್ಕೆ ಬಂದು ಬಾಗಿಲಿಕ್ಕಿದ ಬಗೆ ಪೇಳೆ॥ ಬಾಗಿಲಿಕ್ಕಿದ ಬಗೆ ಪೇಳೆ॥ ಯಾರು ಬಂದವರೆಂದು ಹೇಳದೇ ನಿಮ್ಮ ಹೆಸರು ಹೇಗೆ ತೆಗೆಯಲಿ ಕದವನು॥ ಇನ್ಹ್ಯಾಗೆ ತೆಗೆಯಲಿ ಕದವನೂ॥ ಹರದಿ ದ್ರೌಪದಿ ಕೇಳೆ ದೊರೆಯು ಧರ್ಮನುನಾನು ತ್ವರಿತದಿಂ ಬಂದೆ ತೆಗೆ ನೀನು॥ ತ್ವರಿತದಿಂ ಬಂದೆ ತೆಗೆನೀನು॥ ದೊರೆಗಳಾದರೆ ರಾಜ್ಯ ಪರರಿಗೆ ಕೊಟ್ಟು ಅಡವಿಲ್ಯಾತಕೆ ತಿರುಗ್ವೀರಿ॥ ಕಾನನದಿ ಏತಕೆ ತಿರುಗ್ವೀರಿ॥ ಪಟ್ಟದರಸರ ಕೊಡೆ ಇಷ್ಟು ಮಾತುಗಳೇಕೊ ಶ್ರೇಷ್ಠ

ಭೀಮನು ನಾ ಬಂದೇನೇ।। ಶ್ರೇಷ್ಠ ಭೀಮನು ನಾ ಬಂದೇನೇ।। ಶ್ರೇಷ್ಠನಾದರೆ ಕೈಯೊಳ್ಳುಟ್ಟು ಹಿಡಿದು ಅಟ್ಟಡಿಗೆಯ ಬಡಿಸೋಗ್ಯೆ।। ನೀನಟ್ಟಡಿಗೆಯ ಬಡಿಸೋಗ್ಯೆ।। ಪಾಂಡುಕೌರವರಿಗೆ ಗಂಡು ಎಂದೆನಿಸಿದ ಗಾಂಢೀವ ಅರ್ಜುನ ನಾ ಬಂದೇನೆ।। ಗಾಂಢೀವ ಅರ್ಜುನ ನಾ ಬಂದೇನೆ।। ದುಂಡು ಮುತ್ತನೆ ಕಟ್ಟಿ ಗೊಂಡ್ಯ ಹೆರಳನ್ಹಾಕಿ ಶಿಖಂಡಿವಿದ್ಯವ ಕಲಿಸೋಗ್ಯೆ।। ಅಖಂಡ ವಿದ್ಯವ ಕಲಿಸೋಗ್ಯೆ।। ಸಕಲ ವಿದ್ಯೆಗಳಲ್ಲಿ ಸರ್ವಸಂಪನ್ನನಾದ ನಕುಲದೇವನು ನಾ ಬಂದೇನೆ।। ನಕುಲದೇವನು ನಾ ಬಂದೇನೆ।। ಸಕಲ ವಿದ್ಯೆಗಳಲ್ಲಿ ಸರ್ವಸಂಪನ್ನ ಚೇದಿ ಕೆಲಸ ರಾಯರಿಗೆ ತಿಳಿಸೋಗ್ಯೆ।। ಕೆಲಸ ರಾಯರಿಗೆ ತಿಳಿಸೋಗ್ಯೆ।। ಸರಸಿಜಾಂಬಕಿ ನಾಗವೇಣಿ ಕೇಳೆಲೆ ನಾನು ಸಹದೇವರಾಯನು ನಾ ಬಂದೇನೆ।। ಸಹದೇವರಾಯನು ನಾ ಬಂದೇನೆ।। ಗೋವ ಕಾಯುತ್ತ ಗೋಪಾಲಕನಾಗಿ ಕೊಳಲೂದೋ ಗೊಲ್ಲರನೊಡಗೂಡ್ಯೆ। ಸರಸಿಜಮುಖಿ ನಮ್ಮ ಕರು ಹೇಳಿ ಕೊಟ್ಟರೆ ನಾಳೆ ನಾವೆಲ್ಲಿ ಕರೆಯಲಿ।। ನಾಳೆ ನಾವೆಲ್ಲಿ ಕರೆಯಲಿ।। ಕಮಲನಯ್ಯನ ಕರುಣಕ್ಕೆ ಪಾತ್ರರು ನಾವು ಸಾಮಜಗಮನೆ ಸರಸವ್ಯಾಕೆ।। ಸಾಮಜಗಮನೆ ಸರಸವ್ಯಾಕೆ।। ಹೇಮಮಾಣಿಕದ ಕದವ ತೆರೆದು ಪತಿಗಳ ನೋಡಿ ಪಾದಕೆರಗಿ ಕರೆದಳೇ।। ಪಾದಕೆರಗಿ ಕರೆದಳೇ।। ಪಂಚಪಾಂಡವರು ಬಂದು। ಪರಮ ಸಂಭ್ರಮದಿಂದ ಮಂಚದ ಮೇಲೆ ಕುಳಿತರೆ।। ಸಿರಿಮಂಚದ ಮೇಲೆ ಕುಳಿತರೆ।। ಭೀಮ ನಗುತ ಬಿಗಿದಪ್ಪಿ ದ್ರೌಪದಿಯ ಧರ್ಮರಾಯರ ತೊಡೆಯಲ್ಲಿರಿಸಿದ।। ಧರ್ಮರಾಯರ ತೊಡೆಯಲ್ಲಿರಿಸಿದ।। ಅರ್ಜುನನತಿ ಮೋಹದಿ ಮುಂಗುರಳನ್ನೆ ತಿದ್ದಿ ವಜ್ರದಾಭರಣವಿಡಿಸಿದ।। ವಜ್ರದಾಭರಣವಿಡಿಸಿದ।। ನಕುಲದೇವನು ತಾನು ಸುಖದಿ ಮುದ್ದಿಡುತ ಮಡದೀಯ।। ಸುಖದಿ ಮುದ್ದಿಡುತ ಮಡದೀಯ।। ಕರಕಮಲವ ಪಿಡಿದು ಕರೆದು ಸಹದೇವರಾಯ।। ತುರುಬಿಗ್ಹೂಮಾಲೆ ಮುಡಿಸೀದಾ। ತುರುಬಿಗ್ಹೂಮಾಲೆ ಮುಡಿಸೀದಾ।।

ಭಜ ಗೋವಿಂದಂ ಭಜ ಗೋವಿಂದಂ (ಸಂಸ್ಕೃತ)

ಭಜ ಗೋವಿಂದಂ ಭಜ ಗೋವಿಂದಂ ಗೋವಿಂದಂ ಭಜ ಮೂಢಮತೇ। ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿ ನಹಿ ರಕ್ಷತಿ ಡುಕೃಂಕರಣೇ।।1।। ಮೂಢಜಹೀಹಿ ಧನಾಗಮತೃಷ್ಣಾಂ ಕುರುಸದ್ಬುದ್ಧಿಂ ಮನಸಿ ವಿತೃಷ್ಣಾಂ। ಯಲ್ಲಭಸೇ ನಿಜ ಕರ್ಮೋಪಾತ್ತಂ ವಿತ್ತಂತೇನ ವಿನೋದಯ ಚಿತ್ತಮ್।।2।। ನಾರೀಸ್ತನಭರ ನಾಭೀದೇಶಂ ದೃಷ್ಟ್ವಾ ಮಾಗಾಮೋಹಾ ವೇಶಂ। ಏತನ್ಮಾಂಸವ ಸಾದಿ ವಿಕಾರಂ ಮನಸಿ ವಿಚಿಂತಯ ವಾರಂವಾರಮ್।।3।। ನಲಿನೀದಲಗತಜಲ ಮತಿ ತರಲಂ ತದ್ವಜ್ಜೀವಿತ ಮತಿಶಯ ಚಪಲಂ। ವಿದ್ಧಿವ್ಯಾಧ್ಯಭಿಮಾನಗ್ರಸ್ತಂ ಲೋಕಂ ಶೋಕ ಹತಂ ಚ ಸಮಸ್ತಮ್।।4।। ಯಾವದ್ವಿತ್ತೋಪಾರ್ಜನಸಕ್ತಃ ತಾವನ್ನಿಜ ಪರಿವಾರೋ ರಕ್ತಃ ಪಶ್ಚಾಜ್ಜೀವತಿ ಜರ್ಜರ ದೇಹೇ ವಾರ್ತಾಂ ಕೋಪಿನ ಪೃಚ್ಛತಿ ಗೇಹೇ।।5।। ಯಾವತ್ಪವನೋನಿವಸತಿ ದೇಹೇ ತಾವತ್ಪೃಚ್ಛತಿ ಕುಶಲಂ ಗೇಹೇ। ಗತವತಿ ವಾಯೌ ದೇಹಾಪಾಯೇ ಭಾರ್ಯಾಬಿಭ್ಯತಿ ತಸ್ಮಿನ್ ಕಾಯೇ।।6।। ಬಾಲಸ್ತಾವತ್ ಕ್ರೀಡಾಸಕ್ತಃ ತರುಣಸ್ತಾವತ್ ತರುಣೀಸಕ್ತಃ। ವೃದ್ಧಸ್ತಾವತ್ ಚಿಂತಾಸಕ್ತಃ ಪರೇ ಬ್ರಹ್ಮಣಿ ಕೋಪಿ ನ ಸಕ್ತಃ।।7।। ಕಾತೇ ಕಾಂತಾ ಕಸ್ತೇ ಪುತ್ರಃ ಸಂಸಾರೋಯಮತೀವ ವಿಚಿತ್ರಃ ಕಸ್ಯತ್ವಂ ಕಃ ಕುತ ಆಯಾತಃ ತತ್ತ್ವಂ ಚಿಂತಯ ತದಿದಂ ಭ್ರಾತಃ।।8।। ಸತ್ಸಂಗತ್ವೇ ನಿಸ್ಸಂಗತ್ವಂ ನಿಸ್ಸಂಗತ್ವೇ ನಿರ್ಮೋಹತ್ವಂ। ನಿರ್ಮೋಹತ್ವೇ ನಿಶ್ಚಲತತ್ವಂ ನಿಶ್ಚಲತತ್ವೇ ಜೀವನ್ಮುಕ್ತಿಃ।।9।। ವಯಸಿ ಗತೇ ಕಃ ಕಾಮವಿಕಾರಃ ಶುಷ್ಕೇ ನೀರೇ ಕಃ ಕಾಸಾರಃ। ಕ್ಷೀಣೇ ವಿತ್ತೇ ಕಃ ಪರಿವಾರೋಜ್ಞಾತೇ ತತ್ವೇ ಕಃ ಸಂಸಾರಃ।।10।। ಮಾಕುರು ಧನಜನ ಯೌನ ಗರ್ವಂ ಹರತಿ ನಿಮೇಷಾತ್ಕಾಲಃ ಸರ್ವಂ। ಮಾಯಾಮಯಮಿದಮಖಿಲಂ ಬುದ್ಧ್ವಾ ಬ್ರಹ್ಮಪದಂ ತ್ವಂ ಪ್ರವಿಶವಿದಿತ್ವಾ।।11।। ದಿನಯಾಮಿನ್ಯೌ ಸಾಯಂ ಪ್ರಾತಃ ಶಿಶಿರವಸಂತೌ ಪುನರಾಯಾತಃ ಕಾಲಃ ಕ್ರೀಡತಿ ಗಚ್ಛತ್ಯಾಯುಃ ತದಪಿ ನ ಮುಂಚತ್ಯಾಶಾವಾಯುಃ।।12।। ಕಾತೇ ಕಾಂತಾ ಧನಗತ ಚಿಂತಾ ವಾತುಲ ಕಿಂ ತವ ನಾಸ್ತಿ ನಿಯಂತಾ। ತ್ರಿಜಗತಿ ಸಜ್ಜನ ಸಂಗತಿರೇಕಾ ಭವತಿಭವಾರ್ಣವ ತರಣೇ ನೌಕಾ।।13।। ಜಟಿಲೋ ಮುಂಡೀ ಲುಂಚಿತಕೇಶಃ ಕಾಷಾಯಾಂಬರ ಬಹುಕೃತ ವೇಷಃ। ಪಶ್ಯನ್ನಪಿ ಚ ನ ಪಶ್ಯತಿ ಮೂಢೋಃ ಉದರನಿಮಿತ್ತಂ ಬಹುಕೃತ ವೇಷಃ।।14।। ಅಂಗಂ ಗಲಿತಂ ಫಲಿತಂ ಮುಂಡಂ ದಶನವಿಹೀನಂ ಜಾತಂ ತುಂಡಂ। ವೃದ್ಧೋ ಯಾತಿ ಗೃಹೀತ್ವಾದಂಡಂ ತದಪಿ ನಮುಂಚತ್ಯಾಶಾ ಪಿಂಡಂ।।15।। ಅಗ್ರೇ ವಹ್ನಿಃ ಪೃಷ್ಠೇ ಭಾನುಃ ರಾತ್ರೌ ಚುಬಕ ಸಮರ್ಪಿತಜಾನುಃ। ಕರತಲ ಭಿಕ್ಷಸ್ತರುತಲವಾಸ-ಸ್ತದಪಿ ನ

ಮುಂಚತ್ಯಾಶಾಪಾಶಃ॥16॥ ಕುರುತೇ ಗಂಗಾ ಸಾಗರ ಗಮನಂ ವ್ರತಪರಿಪಾಲನಮಥವಾ ದಾನಂ। ಜ್ಞಾನವಿಹೀನಃ ಸರ್ವಮತೇನ ಭಜತಿ ನ ಮುಕ್ತಿಂ ಜನ್ಮಶತೇನ॥17॥ ಸುರಮಂದಿರ ತರುಮೂಲ ನಿವಾಸಃ ಶಯ್ಯಾ ಭೂತಲಮಜಿನಂ ವಾಸಃ। ಸರ್ವಪರಿಗ್ರಹ ಭೋಗತ್ಯಾಗಃ ಕಸ್ಯ ಸುಖಂ ನ ಕರೋತಿ ವಿರಾಗಃ॥18॥ ಯೋಗರತೋ ವಾ ಭೋಗರತೋ ವಾ ಸಂಗರತೋ ವಾ ಸಂಗ ವಿಹೀನಃ । ಯಸ್ಯ ಬ್ರಹ್ಮಣಿ ರಮತೇ ಚಿತ್ತಂ ನಂದತಿ ನಂದತಿ ನಂದತ್ಯೇವ॥19॥ ಭಗವದ್ಗೀತಾ ಕಿಂಚಿದಧೀತಾ ಗಂಗಾಜಲಲವ ಕಣಿಕಾಪೀತಾ। ಸಕೃದಪಿ ಯೇನ ಮುರಾರಿ ಸಮರ್ಚಾ ಕ್ರಿಯತೇ ತಸ್ಯ ಯಮೇನ ನ ಚರ್ಚಾ॥20॥ ಪುನರಪಿ ಜನನಂ ಪುನರಪಿ ಮರಣಂ ಪುನರಪಿ ಜನನೀ ಜಠರೇ ಶಯನಂ। ಇಹಸಂಸಾರೇ ಬಹುದುಸ್ತಾರೇ ಕೃಪಯಾ ಪಾರೇ ಪಾಹಿ ಮುರಾರೇ॥21॥ ರಥ್ಯಾಚರ್ಪಟ ವಿರಚಿತಕಂಥಃ ಪುಣ್ಯಾಪುಣ್ಯ ವಿವರ್ಜಿತ ಪಂಥಃ। ಯೋಗಿ ಯೋಗನಿಯೋಜಿತ ಚಿತ್ತೋ ರಮತೇ ಬಾಲೋನ್ಮತ್ತವದೇವ॥22॥ ಕಸ್ತ್ವಂ ಕೋಹಂ ಕುತ ಆಯಾತಃ ಕಾ ಮೇ ಜನನೀ ಕೋ ಮೇ ತಾತಃ। ಇತಿ ಪರಿಭಾವಯ ಸರ್ವಮಸಾರಂ ವಿಶ್ವಂ ತ್ಯಕ್ತ್ವಾ ಸ್ವಪ್ನವಿಚಾರಂ॥23॥ ತ್ವಯಿ ಮಯಿ ಚಾನ್ಯತ್ರೈಕೋ ವಿಷ್ಣುಃ ವ್ಯರ್ಥಂ ಕುಪ್ಯಸಿ ಮಯ್ಯ ಸಹಿಷ್ಣುಃ। ಭವಸಮಚಿತ್ತಃ ಸರ್ವತ್ರ ತ್ವಂ ವಾಂಛಸ್ಯ ಚಿರಾದ್ಯದಿ ವಿಷ್ಣುತ್ವಂ॥24॥ ಶತ್ರೌ ಮಿತ್ರೇ ಪುತ್ರೇ ಬಂಧೌ ಮಾ ಕುರು ಯತ್ನಂ ವಿಗ್ರಹಸಂಧೌ। ಸರ್ವಸ್ಮಿನ್ನಪಿ ಪಶ್ಯಾತ್ಮಾನಂ ಸರ್ವತ್ರೋತ್ಸೃಜ ಭೇದಜ್ಞಾನಂ॥25॥ ಕಾಮಂ ಕ್ರೋಧಂ ಲೋಭಂ ಮೋಹಂ ತ್ಯಕ್ತಾತ್ಮಾನಂ ಪಶ್ಯತಿ ಸೋಹಂ। ಆತ್ಮಜ್ಞಾನವಿಹೀನಾ ಮೂಢಾಸ್ತೇ ಪಚ್ಯಂತೇ ನರಕನಿಗೂಢಾಃ॥26॥ ಗೇಯಂ ಗೀತಾನಾಮಸಹಸ್ರಂ ಧ್ಯೇಯಂ ಶ್ರೀಪತಿ ರೂಪಮಜಸ್ರಂ ನೇಯಂ ಸಜ್ಜನ ಸಂಗೇ ಚಿತ್ತಂ ದೇಯಂ ದೀನಜನಾಯಚ ವಿತ್ತಂ॥27॥ ಸುಖತಃ ಕ್ರಿಯತೇ ರಾಮಾಭೋಗಃ ಪಶ್ಚಾದ್ಧಂತ ಶರೀರೇ ರೋಗಃ। ಯದ್ಯಪಿ ಲೋಕೇ ಮರಣಂ ಶರಣಂ ತದಪಿ ನ ಮುಂಚತಿ ಪಾಪಾಚರಣಂ॥28॥ ಅರ್ಥಮನರ್ಥಂ ಭಾವಯ ನಿತ್ಯಂ ನಾಸ್ತಿ ತತಃ ಸುಖಲೇಶಃ ಸತ್ಯಂ। ಪುತ್ರಾದಪಿಧನ ಭಾಜಾಂ ಭೀತಿಃ ಸರ್ವತ್ರೈಷಾ ವಿಹಿತಾ ರೀತಿಃ॥29॥ ಪ್ರಾಣಾಯಾಮಂ ಪ್ರತ್ಯಾಹಾರಂ ನಿತ್ಯಾನಿತ್ಯವಿವೇಕ ವಿಚಾರಂ। ಜಾಪ್ಯ ಸಮೇತಸಮಾಧಿವಿಧಾನಂ ಕುರ್ವವಧಾನಂ ಮಹದವಧಾನಂ॥30॥ ಗುರುಚರಣಾಂಬುಜ ನಿರ್ಭರಭಕ್ತಃ ಸಂಸಾರಾ ದಚಿರಾದ್ಭವ ಮುಕ್ತಃ ಸೇಂದ್ರಿಯಮಾನಸನಿಯಮಾದೇವಂ ದ್ರಕ್ಷ್ಯಸಿ ನಿಜಹೃದಯಸ್ಥಂ ದೇವಂ॥31॥

ಗೋವಿಂದನ ನೆನೆ ಗೋವಿಂದನ (ಭಜಗೋವಿಂದಂ ಕನ್ನಡ ಭಾವಾನುವಾದ)

1. ಗೋವಿಂದನ ನೆನೆ। ಗೋವಿಂದನ ನೆನೆ। ಗೋವಿಂದನ ನೆನೆ। ಮೂಢಮನ। ಕಾಲಸಮೀಪಿಸಿ ಬಂದರೆ ನಿನ್ನನು ರಕ್ಷಿಸಲಾರದು ಡುಕ್ರುಂಕರಣೆ॥ಭಜ॥ 2. ಧನಸಂಚಯ ದಾಹವ ಬಿಡುಮೂಢ ನಿಜವೇನೆಂಬುದ ಚಿಂತಿಸು ಮನದಿ। ಏನನು ಗಳಿಸಿದೆ ಅದರಿಂದಲೇ ನೀ ಪಡೆದುಕೊ ನೆಮ್ಮದಿ ಸಂತೋಷವನು॥ಭಜ॥ 3. ನಾರಿಯ ಗುರುಕುಚ ನಾಭಿದೇಶವ। ನೋಡುತ ಮೋಹಿತನಾಗದಿರು। ಅವು ಬರಿ ಮಾಂಸ ವಿಕಾರಗಳೆಂಬುದ ಮತ್ತೂ ಮತ್ತೂ ನೆನೆಯುತಿರು॥ಭಜ॥ 4. ನಲಿನೀ ದಳಗತ ಜಲವತಿ ಚಂಚಲ। ನಶ್ವರ ಜೀವನವದರಂತೆ। ಲೋಕದೊಳೆಲ್ಲೆಡೆ ತುಂಬಿವೆ ತುಳುಕಿವೆ। ರೋಗರುಜಿನ ಮದ ಶೋಕಗಳು॥ಭಜ॥ 5. ಧನಸಂಗ್ರಹ ಬಲ ನಿನಗಿರುವನಕ ನಿನ್ನನು ಮುತ್ತಿರುವುದು ಪರಿವಾರ। ಮುಪ್ಪಾವರಿಸಿದ ದುರ್ಬಲದೇಹದ ನಿನ್ನನು ಕಂಡರೆ ಸರಿವರು ದೂರ॥ಭಜ॥ 6. ನಿನ್ನ ದೇಹದೊಳುಸಿರಿರುವನಕ ಕೇಳುವರೆಲ್ಲರು ಮನೆವಾರ್ತೆಯನು ನಿನ್ನುಸಿರಡಗಿ ಶವವಾದಂದು। ಮಡದಿಗು ಬಲು ಭಯ ಬಳಿ ಬರಲು॥ಭಜ॥ 7. ಬಾಲ್ಯಾವಸ್ಥೆಯೊಳಾಡುವ ಚಪಲ। ಯೌವನದಲ್ಲಿ ಯುವತಿಯ ಚಪಲ। ವೃದ್ಧಾಪ್ಯದೊಳು ಚಿಂತೆಯ ಸಂತೆ। ಇರದೊಬ್ಬನಿಗು ಬ್ರಹ್ಮದ ಚಿಂತೆ॥ಭಜ॥ 8. ಸತಿ ನಿನಗಾರು ಸುತ ನಿನಗಾರು। ಅತಿ ವೈಚಿತ್ರ್ಯದ ಸಂಸಾರವಿದು। ನೀನಾರೆಲ್ಲಿಂದಿಲ್ಲಿಗೆ ಬಂದೆ। ಎಂಬುದ ಚಿಂತಿಸು ಸೋದರನೆ॥ಭಜ॥ 9. ಸತ್ಸಂಗತ್ವದಿ ನಿಸ್ಸಂಗತ್ವವು। ನಿಸ್ಸಂಗತ್ವದಿ ನಿರ್ಮೋಹತ್ವವು। ನಿರ್ಮೋಹತ್ವದಿ ನಿಶ್ಚಲ ತತ್ವವು। ನಿಶ್ಚಲ ತತ್ವದಿ ಜೀವನ ಮುಕ್ತಿ॥ಭಜ॥ ಮುಪ್ಪಡರಿದ ಬಳಿಕೆಲ್ಲಿಯ ಕಾಮ? ಎಲ್ಲಿಯ ಕೆರೆ ನೀರಿಂಗಿದ ಮೇಲೆ? ಹಣ ಮುಗಿದಂದೆಲ್ಲಿಯ ಪರಿವಾರ? ತತ್ವಜ್ಞನಿಗೆ ಎಲ್ಲಿಯ ಸಂಸಾರ?॥ಭಜ॥ 11. ಧನ ಜನ ಯೌವನ ಗರ್ವವ ಬಿಡು ಅವು ನಿಮಿಷದಿ ಕಾಲನ ವಶವಾಗುವುವು

ಮಾಯಾಮಯವೀ ಜಗವೆಂದರಿತು ಬ್ರಹ್ಮ ಪದತ್ವಕೆ ನೀನೊಳಗಾಗು।।ಭಜ।। 12. ಹಗಲಿನ ಇರುಳಿನ ಬೈಗಿನ ಬೆಳಗಿನ ಶಿಶಿರ ವಸಂತದ ಪುನರಾಗಮನ। ಕಾಲಕ್ಕಾಟ ಕಳೆಯುವುದಾಯು ಜೀವವಿದಾಶೆಯ ಬಿಡದೆಂದೂ।।ಭಜ।। 13. ಸತಿ ಸಂಪತ್ತಿನ ಚಿಂತೆಯದೇಕೆ? ವಿಧಿಯೊಂದಿದೆ ಎಂಬುದನೆನೆ ಮರುಳ ತ್ರಿಜಗದಿ ಸಜ್ಜನ ಸಂಗವದೊಂದೆ। ಭವಸಾಗರವನು ದಾಂಟಿಪ ನೌಕೆ।।ಭಜ।। 14. ಜಟೆ ಬೆಳಸಿರುವ। ತಲೆಬೋಳಿಸಿದ ಕಾವಿಯನುಟ್ಟ ಬಗೆ ಬಗೆ ವೇಷ ಕಂಡರು ಕಾಣದ ತೆರನೀ ಮರುಳರು ಉದರ ನಿಮಿತ್ತಕೆ ಬಲುವಿಧ ವೇಷ।।ಭಜ।। 15. ಅಂಗಗಳೆಲ್ಲವೂ ಶಕ್ತಿ ವಿಹೀನವು। ಒಂದೂ ಹಲ್ಲು ಬಾಯೊಳಗಿಲ್ಲ। ದಂಡದ ಬಲದಿ ನಡೆಯುವ ವೃದ್ಧನು ಆದರು ಆಶಾಪಿಂಡವ ಬಿಡನು।।ಭಜ।।16।। ಎದುರಿಗೆ ಬೆಂಕಿ ಬೆನ್ನಿಗೆ ಬಿಸಿಲು। ಇರುಳನು ಕಳೆವುದು ಮಂಡಿಯನೊರಗಿ। ಓಡಿನ ಅನ್ನ ಮರದಡಿ ಜೀವನ। ಆದರು ಬಿಡದಿದೆ ಆಶಾ ಪಾಶಾ।।ಭಜ।। 17. ಗಂಗಾಸಾಗರ ತಾಣಕೆ ತೆರಳಿ ವ್ರತದಾನಗಳನು ಮಾಡಿದರೇನು। ಜ್ಞಾನಿಗಳಲ್ಲದ ಯಾರೇ ಇರಲಿ। ಶತಜನ್ಮಕ್ಕೂ ಲಭಿಸದು ಮುಕ್ತಿ।।ಭಜ।।18।। ಗುಡಿಗಳ ಮರಗಳ ಆಶ್ರಯದಲ್ಲಿ ನೆಲದಲಿ ಮಲಗಿ ಅಜಿನವನುಟ್ಟು ಸಮಸ್ತ ಭೋಗವ ತ್ಯಜಿಸಿದ ಬಳಿಕ। ದೊರೆಯದೆ ಸುಖ ವೈರಾಗ್ಯಗಳು।।ಭಜ।। 19. ಯೋಗದೊಳಿದ್ದೋ ಭೋಗದೊಳಿದ್ದೋ। ಸಂಗದೊಳಿದ್ದೋ ನಿಸ್ಸಂಗದೊಳೋ। ಬ್ರಹ್ಮಾನಂದವ ಪಡೆವಾಸಕ್ತನೇ। ಸುಖಿಯೋ ಸುಖಿ ಅವ ನಿತ್ಯ ಸುಖಿ।।ಭಜ।। 20. ಭಗವದ್ಗೀತೆಯೊಳೊಂದಿಷ್ಟರಿತು। ಒಂದೇ ಹನಿಗಂಗಾಜಲ ಸೇವಿಸಿ। ಒಮ್ಮೆ ಮುರಾರಿಯನರ್ಚಿಸಿದವರಿಗೆ ಯಮನೊಡನೆಲ್ಲಿದೆ ಹೋರಾಟ।।ಭಜ।। 21. ಹುಟ್ಟುತ ಮತ್ತೆ ಸಾಯುತ ಮತ್ತೆ। ಜನನಿಯ ಜಠರದಿ ಶಯನವು ಮತ್ತೆ। ದುಸ್ತರವೀ ಸಂಸಾರ ಮುರಾರೀ। ಅಪಾರ ಕೃಪೆಯಿಂ ಎನ್ನನು ಸಲಹು।।ಭಜ।। 22. ಬೀದಿಯೊಳಾಯ್ದ ಗೋಣಿಯನುಟ್ಟು ಪುಣ್ಯ ಪುಣ್ಯಾ ತೀತನೆನಿಸಿ। ಯೋಗಾಸಕ್ತಿಯೊಳಿರುವನು ಯೋಗಿ ಮಗುವೋ ಮರುಳನೋ ಎಂಬಂತೆ।।ಭಜ।। 23. ನೀನಾನಾರೆಲ್ಲಿಂದೈತಂದೆವು। ಜನನೀ ಜನಕರದಾರೆನಗೆ। ಎಂಬುದ ಯೋಚಿಸು ಕೈಬಿಡು। ಕನಸಿನ ಲೋಕವಿದಸಾರವೆಂದರಿತು।।ಭಜ।। 24. ನಿನ್ನೊಳು ನನ್ನೊಳು ಎಲ್ಲೆಡೆ ವಿಷ್ಣುವು। ಸಿಟ್ಟೇತಕೆ ನಿನಗೆನ್ನೊಡನೆ। ಎಲ್ಲದರಲ್ಲಿಯೂ ಸಮಚಿತ್ತವ ಪಡೆ। ನಿನಗಿದೆ ವಿಷ್ಣುತ್ವದ ಬಯಕೆ।।ಭಜ।।25।। ಶತ್ರುಮಿತ್ರ ಸುತ ಬಂಧುಗಳೊಂದಿಗೆ ಕಲಹ ಮೈತ್ರಿಗಳಿಗೆತ್ನಿಸದೆ। ಎಲ್ಲೆಡೆ ಭೇದಜ್ಞಾನವಳಿನ್ನುದು। ಎಲ್ಲೆಡೆಯಲ್ಲೂ ಆತ್ಮನ ಕಾಣು।।ಭಜ।। 26. ಕಾಮವ ಕ್ರೋಧವ ಲೋಭವ। ಮೋಹವ ಬಿಡು ಚಿಂತಿಸು ನೀನಾರೆಂದು। ಆತ್ಮಜ್ಞಾನವ ಪಡೆಯದ ಮೂಢರು। ನರಕದ ಸೆರೆಯೊಳು ನರಳುವರು।।ಭಜ।। 27. ಭಗವದ್ಗೀತೆಯ ಸಹಸ್ರನಾಮವ। ಪಠಿಸುತ ಹರಿಯನು ನೆನೆಯುತಿರು। ಸಜ್ಜನ ಸಂಗದಿ ಮನ ನಟ್ಟೆಸಗು ದೀನಜನಕುಪಕಾರವನು ಮಾಡು ।।ಭಜ।। 28. ದೇಹದ ಭೋಗಸುಖಕ್ಕೆಳಸುವರು ದೇಹವೇ ರೋಗದ ಬೀಡಾಗುವುದು। ಮರಣಕೆ ಶರಣಾಗುವುದನು ತಿಳಿದೂ। ಪಾಪಾಚರಣೆಯ ಬಿಡರೀ ಜನರು।।ಭಜ।। 29. ಐಸಿರಿಯಿಂದಾ ಪತ್ತೇ ಹೊರತು। ಸುಖವಿನಿತಿಲ್ಲೆಂಬುದು ಸತ್ಯ। ಮಗನಿಂದಲೂ ಭಯ ಸಿರಿವಂತನಿಗೆ। ಎಲ್ಲೆಲ್ಲಿಯೂ ಈ ಬಗೆಯಿಹುದು।।ಭಜ।। 30. ಪ್ರಾಣಾಯಾಮವ ಪ್ರತ್ಯಾಹಾರವ ನಿತ್ಯಾನಿತ್ಯವಿವೇಕ ವಿಚಾರವ। ನೆಚ್ಚರದೊಳು ಬಲು ಎಚ್ಚರದಿಂದ। ಜಪವ ಸಮಾಧಿಯನಾಚರಿಸು।। 31. ಗುರುವಿನ ಚರಣಾಂಬುಜವನುನಂಬಿದ। ಭಕ್ತನೆ ಮುಕ್ತಿಯ ಪಡೆಯುವ ನೀ ಮನ ಮೇಣಿಂದ್ರಿಯಗಳನು। ನಿಯಂತ್ರಿಸು ಕಾಣುವೆ ನಿನ್ನೊಳೆ ದೇವನನು।।ಭಜ।। ಭಜ ಗೋವಿಂದಂ। ಭಜ ಗೋವಿಂದಂ। ಗೋವಿಂದಂ ಭಜ ಮೂಢಮತೇ।।

ನಾರೇರೆಲ್ಲ ಬನ್ನಿ ನಾರಾಯಣನು (ಮೋಹಿನೀರೂಪ)

ನಾರೇರೆಲ್ಲ ಬನ್ನಿ ನಾರಾಯಣನು ನಾರಿಯಾದ।।ಪ।। ನಾರಾಯಣನು ನಾರಿಯಾದ। ಅಸುರರಿಗೆಲ್ಲ ಮೋಹಿಯಾದ।। ಅ.ಪ.।। ಕಾಲಲಂದುಗೆ ಗೆಜ್ಜೆ। ಹಂಸದ ನಡೆಗಳಂತೆ ಹೆಜ್ಜೇ ಜಗದನಾರಿಯರಂತೆ ಲಜ್ಜೆ। ಕೈಯಲಿ ಪಿಡಿದ ಬೆಣ್ಣೆಯ ಮುದ್ದೆ।।1।।ಆಣಿ ಮುತ್ತಿನ ಹಾರ। ನೋಡೆ ಆಕೆ ಕುಚದ ಭಾರ। ನಾರೀ ಮಣಿಯ ನಡೆ ವಯ್ಯಾರ। ಉಂಗುರವಿಟ್ಟಂಥಕರ।।2।। ಬುಲಾಕಿನ ಬೆಳಕು। ಏಕದಾಣೆ ಒಂಟಿ ಥಳಕು। ವಾಲೆ ಸರಪಳಿ ಆಡೋಕುಲುಕು।

ಕನ್ನಡಿಯಂದದಿ ಹೊಳೆವೊ ಕದಪು॥3॥ ವಾಲೆ ಚಳತುಂಬಿಟ್ಟು। ಜರಿಯ ಸೀರೆ ನೆರಿಹಿಡಿದುಟ್ಟು। ಸಣ್ಣಗೆ ನಡುವಿಗೆ ಚಿನ್ನದ ಕಟ್ಟು। ಕನ್ನಡಿ ಹಾಕಿದ ಕುಪ್ಪಸ ತೊಟ್ಟು॥4॥ ಹರಡಿ ಬಾವುಲಿ ಕೆಂಪು। ನೋಡೆ ಆಕೆ ಮುಖದ ಸಂಪು। ಎಳೆ ಮಾವಿನ ನೆರಳ ತಂಪು ಕಣ್ಣಿಗೆ ಹಚ್ಚಿದ ಕಾಡಿಗೆ ಕಪ್ಪು॥5॥ ಮರುಗ ಮಲ್ಲಿಗೆ ದಂಡೆ। ರಾಗಟೆ ಚೌರಿ ಹೆರಳಗೊಂಡೆ। ಜಡೆ ಭಂಗಾರ ವಲಿವುದ ಕಂಡೆ। ಯೌವನ ಸ್ತ್ರೀಯು ಬರುವುದ ಕಂಡೆ॥6॥ ವಾಲೆ ಚಳತುಂಬಿನ ಮಾಟ। ಮುತ್ತಿನ ಬುಗುಡಿ ವಾರೆ ನೋಟ। ಹಲಸು ಕಿತ್ತಳೆ ತೆಂಗಿನ ತೋಟ। ರಂಭೆ ವನದೊಳಗಾಡೋ ಆಟ॥7॥ ಅರಸಿನ ಕುಂಕುಮ ತಟ್ಟೆಯ ಪಿಡಿದು। ಮದಗಜಗಮನೆಯರೆಲ್ಲಾನೆರೆದು। ಜಯಜಯ ವೆಂದು ಕೂಗುತ ಬರಲು। ಮೋಹಿನಿ ತಾನು ನಗುತಲಿರಲು॥8॥ ಚಂದ್ರಮುರುವಿನ ಚಂದ। ಸುರರು ನೋಡೆ ಬ್ರಹ್ಮಾನಂದ। ಅವಳ ನೋಡಿ ನಾಚಿದ ಚಂದ್ರ। ಮೋಹಿತನಾಗಿ ನಿಂತ ಶಿವನು॥9॥ ಹೊನ್ನ ಕಲಶವ ಪಿಡಿದು। ಮದಗಜದಂತೆ ಮೆಲ್ಲನೆ ನಡೆದು। ಸುರರಿಗೆಲ್ಲ ಅಮೃತವೆರೆದು। ದೈತ್ಯರಿಗೆಲ್ಲ ವಂಚಿಸಿ ಮೆರೆದು॥10॥ ಶೇಷಾಚಲವಾಸ ನಿನ್ನ। ನಂಬಿದೆನೋ ವೆಂಕಟೇಶಾ। ಎನ್ನ ಸಲಹೋ ಶ್ರೀನಿವಾಸಾ। ಅನುದಿನದಲ್ಲಿ ಭಕ್ತರ ಪೋಷ॥11॥ ಬಾಳೆ ಸುಳಿಯಂತೆ ಹೊಳೆಯುತ ನೀಲದಂತೆ ನೇತ್ರ ಹೊಳೆಯುತ। ನಾರಾಯಣ ಪುರಂದರರ ವಿಠಲ ನರ್ತನ ಮಾಡುತ ಬರುವ ಬಗೆಯ॥12॥

ತರುಣಿ ವೇಷವನು ಧರಿಸಿ ಹರಿ ತಾನು (ಮೋಹಿನಿ ರೂಪ)

ತರುಣಿ ವೇಷವನು ಧರಿಸಿ ಹರಿ ತಾನು। ಮರುಳು ಮಾಡುತ ಅಸುರ ವೃಂದವನು ಅಂದು॥ಪ॥ ಬಗೆಬಗೆಯ ಆಭರಣ ಶೋಭಿಸುತ ಮುದದಿಂದ। ಬಿಗಿದು ಪೀತಾಂಬರ ವಯ್ಯಾರದಿಂದ। ತೆಗೆದ ತಿಲಕವ ನೋಡಿ ಕನ್ನಡಿಯ ನೋಡುತಲಿ। ಲಗುಬಗೆಯಲಿ ತಾನು ಅಸುರರ ಮೋಹಿಸುತಲಿ॥1॥ ಹೆರಳ ಬಂಗಾರವನು ಕಟ್ಟುತಲಿ ವೇಣಿಯೋಳು। ಬೆರಳಿಗುಂಗುರಗಳನೆ ಹಾಕುತಲಿ ಬೇಗ। ಕೊರಳಿಗ್ಹಾಕುತ ಸರವ ಪದಕದ ಮಾಲೆಗಳ ಸುರತಿ ಮೋಹಿಪ ತೆರದಿ ಸಿಂಗರಿಸಿಕೊಂಡ॥2॥ ಹಿಡಿದಿಹನು ಕರದಲ್ಲಿ ಅಮೃತ ಕಲಶವತಾನು। ಬಡಿಸುವ ನೆಪದಲ್ಲಿ ಸುರಾಸುರರಿಗೆ। ಕಡೆಗಣ್ಣಿನ ನೋಟ ತಾಳಲಾರದೆ ಜಗವು। ಬಡಿದಾಡುತಿರಲಾಗ ಮುಗುಳು ನಗುತಲಿ ಹರಿಯು॥3॥ ಸರುವ ದೇವತೆಗಳು ಸಾಲು ಸಾಲಾಗಿತಾ ಇರುವಂತೆ ಕುಳ್ಳಿರಿಸಿ ದೈತ್ಯರುಗಳಾ ಮರುಳು ಮಾಡುತ ಸುಧೆಯ ದೇವತೆಗಳೆಲ್ಲರಿಗೂ ಗುರುಶಾಮಸುಂದರನು ನೀಡಿದನು ಮುದದಿ॥4॥

ಕಾಮಪಿತನು ಕೃಷ್ಣ ಕಾಮಿನಿಯಾದನು (ಮೋಹಿನೀರೂಪ)

ಕಾಮಪಿತನು ಕೃಷ್ಣ ಕಾಮಿನಿಯಾದನು। ಕಾಮನ ಪಿತ ಕೃಷ್ಣ ಕಾಮಿನಿ ಆಗುವೊ ಕಾರಣ ಕೇಳಿರಿ। ಕಾಮಿಸಿ ಶ್ರೀಹರಿ ಆ ಮಹಾಸುರರಿಗೆ ಸುಧೆಯನ್ನವಂಚುನೆಸಲು। ಶ್ರೀಮಾಯಾಪತಿಯು ತಾ ಸ್ತ್ರೀಯಾದ ಚೆಲುವಿಕೆ॥ಪ॥ ರುಳಿ ಲುಲ್ಲು ಗೆಜ್ಜೆ ಪೈಜಣ ಪಾಗಡವನಿಟ್ಟು ಚರಣದಿ। ಕಾಲುಂಗರ ಪಿಲ್ಯ ಮೆಂಟಿಕೆ ಝುಣಝುಣ ನಾದ। ಕಾಳಿಯ ಫಣ ತುಳಿದಂಥ। ಖಳರ ಮರ್ಧನ ದಿವ್ಯ ತರುಣಿ ತಾನಾದನು॥1॥ ಸೆರಗು ನಿರಿಯು ಜರತಾರಿ ಪೀತಾಂಬರ। ಬಿಡಿ ಮುತ್ತಿನುಡಿಗಂಟೆ ನಡುವಿನ್ವೊಡ್ಯಾಣ ಸಡಗರದಿಂದ್ವೊಪ್ಪೊ ತಾಳಿ ಪದಕವಿಟ್ಟು। ಮೃಡನ ಪ್ರಿಯನು ಮುದ್ದು ಮಡದಿ ತಾನಾದನು॥2॥ ಕಂಚುಕ ತೋಳಿನಲ್ವಂಕಿ ಬಾಜುಬಂದು। ಮಿಂಚಿನಂದದಿ ನಲಿದಾಡುತ ಗೊಂಡ್ಯವು। ಕಂಕಣ ತೋಡ್ಯ ವಜ್ರದ್ವಾರ್ಯ ಹರಡಿಯು। ಪಂಚ ಬೆರಳಿನಲ್ಲುಂಗುರವನಿಟ್ಟು ಸೊಬಗಲಿ॥3॥ ಚಿಂತಾಕು ಸರಿಗೆ ಚಿನ್ನದ ಗುಂಡು ಹವಳವು। ಕೆಂಪು ಏಕಾವಳಿ ಮಲಕು ತಾಯಿಯ ಮುತ್ತು। ಮಿಂಚುವೋ ಪದಕ ಮುತ್ತಿನ ಕಟ್ಟಾಣಿಯು ಪಂಚರತ್ನದ ಹಾರ ಪರಮಾತ್ಮ ಗಲೆಯುತ॥4॥ ಉಂಗುರ ಕೂದಲು ಶೃಂಗಾರ ಕ್ಯಾದಿಗೆ। ಚಂದ್ರ ಚೌರಿ ಜಡೆಬಂಗಾರ ರಾಗಟೆ। ಮುಂದೆ ಮುತ್ತಿನದಂಡೆ ಮುಡಿಯಲ್ಲೆ ಒಪ್ಪಿದ। ದುಂಡುಮಲ್ಲಿಗೆ ದೋಷದೂರ ನಿಗಲೆವುತ॥5॥ ಪಂಜಿನ ವಾಲೆ ಬುಗುಡಿ ಬಾಳ್ಯ ಚಳತುಂಬು। ಚಂದ್ರಮುರುವು ಚಿನ್ನದ ಕಡ್ಡಿ ಕಿವಿಯಲ್ಲಿ। ಕುಂದಣ ಕುಸುರು ವಜ್ರಗಳು ಕೊಪ್ಪೊಳೆವಂಥ। ದುಂಡು ಮುತ್ತಿನ ಮುಕುರ್ಯವ ಮೂಗಿನಲ್ಲಿಟ್ಟು॥9॥ ಅಚ್ಚ ಮುತ್ತಿನ ದಂಡೆ ಕುಚ್ಚು ತೊಂಡಿಲುಗಳು। ಹಚ್ಚೆಯ ಬೊಟ್ಟು ಕಸ್ತೂರಿ ಕುಂಕುಮನಿಟ್ಟು। ಪಚ್ಚೆ ಮಾಣಿಕ್ಯದರಳೆಲೆ ಚಂದ್ರ ಸೂರ್ಯರು। ನಿತ್ಯತೃಪ್ತನು ನೀಲವರ್ಣ ದಂತ್ಪೊಳೆಯುತ॥7॥ ಆ

ಮಹಾವೈಕುಂಠಪುರದರಸಾದ ಈ ಮಹಾ ರಜತ ಪೀಠ ಪುರದಲಿ ಬಂದು ಪ್ರೇಮದಿ ನಿಂತು। ನೋಡುತ ಬಂದ ಜನರಿಗೆ। ಕಾಮಿತ ಫಲ ಮುಕ್ತಿ ಕೊಡುವ ಕಮಲಾಪತಿ॥8॥ ಅಷ್ಟಯತಿಗಳಿಂದಲಿ ಪೂಜೆಯಗೊಂಬೊ। ಲಕ್ಷ್ಮಿಯ ಪತಿಯು ಸ್ತ್ರೀರೂಪವ ಧರಿಸಿರೆ। ದೃಷ್ಟಿಂದೆ ನೋಡದಿನ್ನಿರುವೋರೆ ಭೀಮೇಶ। ಕೃಷ್ಣ ನಿನ್ನ ಮನದಲ್ಲಿಟ್ಟು ಸ್ತುತಿಸುವೆನು॥9॥

ಮನೋಬುದ್ಧ್ಯಹಂಕಾರ ಚಿತ್ತಾನಿ (ಆತ್ಮಾಷ್ಟಕಂ-ಸಂಸ ತ)

ಮನೋಬುದ್ಧ್ಯಹಂಕಾರ ಚಿತ್ತಾನಿ ನಾಹಂ। ನ ಚ ಶ್ರೋತ್ರ ಜಿಹ್ವೇ ನ ಚ ಘ್ರಾಣನೇತ್ರೇ॥ ನಚ ವ್ಯೋಮಭೂಮಿರ್ನ ತೇಜೋ ನ ವಾಯುಃ॥ ಚಿದಾನಂದ ರೂಪಃ ಶಿವೋऽಹಂ ಶಿವೋऽಹಂ॥ ನ ಚ ಪ್ರಾಣಸಂಜ್ಞೋ ನ ವೈ ಪಂಚವಾಯುಃ। ನವಾ ಸಪ್ತಧಾತುರ್ನ ವಾ ಪಂಚಕೋಶಃ॥ ನ ವಾಕ್ಪಾಣಿ ಪಾದೌ ನ ಚೋಪಸ್ಥ ಪಾಯೂ। ಚಿದಾನಂದರೂಪಃ ಶಿವೋऽಹಂ ಶಿವೋऽಹಂ॥ ನ ಮೇ ದ್ವೇಷರಾಗೌ ನ ಮೇ ಲೋಭಮೋಹೌ। ಮದೋ ನೈವ ಮೇ ನೈವ ಮಾತ್ಸರ್ಯ ಭಾವಃ। ನ ಧರ್ಮೋನ ಚಾರ್ಥೋನ ಕಾಮೋ ನ ಮೋಕ್ಷಃ। ಚಿದಾನಂದರೂಪಃ ಶಿವೋऽಹಂ ಶಿವೋऽಹಂ॥ ನ ಪುಣ್ಯಂ ನ ಪಾಪಂ ನ ಸೌಖ್ಯಂ ನ ದುಃಖಂ। ನ ಮಂತ್ರೋ ನ ತೀರ್ಥೋ ನ ವೇದಾಃ ನ ಯಜ್ಞಾ॥ ಅಹಂ ಭೋಜನಂ ನೈವ ಭೋಜ್ಯಂ ನ ಭೋಕ್ತಾ। ಚಿದಾನಂದ ರೂಪಃ ಶಿವೋऽಹಂ ಶಿವೋऽಹಂ॥ ನ ಮೇ ಮೃತ್ಯುರ್ನಶಂಕಾ ನ ಮೇ ಜಾತಿಭೇದಃ। ಪಿತಾನೈವ ಮೇ ನೈವ ಮಾತಾ ನ ಜನ್ಮ ॥ ನ ಬಂಧುರ್ನ ಮಿತ್ರಂ ಗುರುರ್ನೈವ ಶಿಷ್ಯಃ। ಚಿದಾನಂದರೂಪಃ ಶಿವೋऽಹಂ ಶಿವೋऽಹಂ॥ ಅಹಂ ನಿರ್ವಿಕಲ್ಪೋ ನಿರಾಕಾರ ರೂಪೋ। ವಿಭುರ್ವ್ಯಾಪ್ಯ ಸರ್ವತ್ರ ಸರ್ವೇಂದ್ರಿಯಾಣಾಂ। ಸದಾ ಮೇ ಸಮತ್ವಂ ನ ಮುಕ್ತಿರ್ನ ಬಂಧಃ। ಚಿದಾನಂದರೂಪಃ ಶಿವೋऽಹಂ ಶಿವೋऽಹಂ॥

ಬುದ್ಧಿಮನ ಚಿತ್ತಹಂಕಾರ ನಾನಲ್ಲ (ಆತ್ಮಾಷ್ಟಕಂ-ಕನ್ನಡ)

ಬುದ್ಧಿಮನ ಚಿತ್ತಹಂಕಾರ ನಾನಲ್ಲ। ಕಣ್ಣುಕಿವಿ ಮೂಗಲ್ಲ ನಾಲಿಗೆಯುಮಲ್ಲ। ನಭವಲ್ಲ ಧರೆಯಲ್ಲ, ಶಿಖಿವಾಯುವಲ್ಲ। ಸಚ್ಚಿದಾನಂದಾತ್ಮ ಶಿವ ನಾನು ನಾನು॥ ಪಂಚವಾಯುಗಳಲ್ಲ, ಪ್ರಾಣನಾನಲ್ಲ; ಸಪ್ತಧಾತುಗಳಲ್ಲ। ಕೋಶವೈದಲ್ಲ। ಕರ್ಮಾಂಗ ವಿಷಯೇಂದ್ರಿಯಗಳಾನಲ್ಲ। ಸಚ್ಚಿದಾನಂದಾತ್ಮ ಶಿವನಾನು ನಾನು॥ ದ್ವೇಷರಾಗಗಳಿಲ್ಲ ಲೋಭವೆನಗಿಲ್ಲ। ಮೋಹಮದ ಮಾತ್ಸರ್ಯ ಭಾವಮೆನಗಿಲ್ಲ। ಧರ್ಮಾರ್ಥಕಾಮದಿ ದೋಷನಾನಲ್ಲ। ಸಚ್ಚಿದಾನಂದಾತ್ಮ ಶಿವ ನಾನುನಾನು॥ ಪಾಪಪುಣ್ಯಗಳಲ್ಲ। ಸುಖದುಃಖವಲ್ಲ। ಮಂತ್ರತೀರ್ಥಗಳಲ್ಲ ವೇದಮುಖವಲ್ಲ। ಭೋಜ್ಯ ಭೋಜನವಲ್ಲ ಭೋಕ್ತನಾನಲ್ಲ। ಸಚ್ಚಿದಾನಂದಾತ್ಮ ಶಿವ ನಾನು ನಾನು॥ ಜಾತಿಭೇದಗಳಿಲ್ಲ। ಮೃತ್ಯುಭಯವಿಲ್ಲ। ಜನ್ಮ ಮೃತ್ಯುಗಳಿಲ್ಲ। ತಂದೆತಾಯಿಲ್ಲ। ಬಂಧು ಸುಖರಿಲ್ಲ। ಗುರುಶಿಷ್ಯರಾರಿಲ್ಲ। ಸಚ್ಚಿದಾನಂದಾತ್ಮ ಶಿವನಾನುನಾನು॥ ನಿರ್ವಿಕಲ್ಪನು ನಾನು। ನಿರಾಕಾರ ನಾನು। ಸರ್ವೇಂದ್ರಿಯಾತೀತ ಸರ್ವತ್ರ ನಾನು। ಕಾಲದೇಶಾತೀತ ವಿಶ್ವವಿಭು ನಾನು। ಸಚ್ಚಿದಾನಂದಾತ್ಮ ಶಿವ ನಾನು ನಾನು॥

ಕಾಶಿಯಾ ಪುರದ ವಿಶ್ವೇಶ್ವರನ (ನಂದೀ ಸ್ತೋತ್ರ)

ಕಾಶಿಯಾ ಪುರದ ವಿಶ್ವೇಶ್ವರನ ಸನ್ನಿಧಿಯಲ್ಲಿ। ವಾಸವಾಗಿಹ ಜಗದೀಶನಾ ನಂದಿ॥1॥ ಮಣಿಕರ್ಣಿಕೆಯ ಸ್ನಾನ ಫಣಿ ಭೂಷಣನ ಧ್ಯಾನ। ಅಣಿಯಾಗಿದೆ ಸುಖಿ ಕುಣಿವಾನಂದಿ॥2॥ ಅಂಗ ಲಕ್ಷಣದ ಹೆಜ್ಜೆ ಶೃಂಗಾರಕ್ಕೊಪ್ಪುವ ಗೆಜ್ಜೆ। ಲಂಘಣೆಸುತ್ತಿದೆ ಭಸ್ಮಾಂಗನಾ ನಂದಿ॥3॥ ಪ್ರಜ್ವಲಿಸುತ್ತಿದೆ ತಾಳ ಮಜ್ಜನದ ಜಲದಲ್ಲಿ। ಘರ್ಜನೆ ಮಾಡುವ ಶಿವನ ದುರ್ಜನಾ ನಂದಿ॥4॥ ಆತಾಳ ಪಾತಾಳ ಲೋಕ ಭೂತಳದೊಳಗೆ ಬಹು। ನೂತನವಾಗಿದೆ ಸೋಮನಾಥಾನಾ ನಂದಿ॥5॥ ರೂಢಿಯೊಳು ಶಿವನ ಕೊಂಡಾಡಿ ವರಗಳ ಬೇಡಿ। ಮೃಡನ ಮುಂದೆ ಅಂಬೆಗಾಲ್ ಹೂಡುವಾನಂದಿ॥6॥ ಎಂಟು ನಾಲಿಗೆಯ ಪಂಚಘಂಟೆಯ ನಾದಂಗಳಿಂದ। ಠಣ್ ಠಣೆಸುತ್ತಿದೆ ನೀಲಕಂಠನಾ ನಂದಿ॥7॥ ಹಬ್ಬಿಗೆ ಗಾಳ್ಪೂಜೆ ಸಿದ್ಧರು ಮುನಿಗಳು ನೆಲಸಿರುವರಲ್ಲಿ। ಅಲ್ಲಿದ್ದ ಮಲ್ಲೇಶ ನಿಮ್ಮ ಮುದ್ದಾದ ನಂದಿ॥8॥ ಜೋಡು ತುಂಗ ಭದ್ರ

ಗಾಡಿವಾಡದಲ್ಲಿ ನೆಲೆಸಿರುವ ಕೂಡ್ಲಿಯ ಬ್ರಹ್ಮೇಶ ನಿಮ್ಮ ಮೇಲಾದ ನಂದಿ॥9॥ ನಟ್ಟ ವಜ್ರದ ಕಂಭವನ್ನು ಮೆಟ್ಟಿ ಲಂಘಣೆಸುತ್ತಿರುವ। ಬೆಟ್ಟದ ಮಲ್ಲೇಶ ನಿಮ್ಮ ಪಟ್ಟದಾನಂದಿ॥10॥ ಯಜ್ಞ ಹೋಮ ವೇದಶಾಸ್ತ್ರ ಯತಿಗಳು ತಪಿಸಿರುವರಲ್ಲಿ। ಎಡ ತೊರೆಯಲ್ಲಿ ನೆಲೆಸಿರುವ ಅರ್ಕೇಶ್ವರನಾ ನಂದಿ॥11॥ ಕಾವೇರಿ ಹೇಮಾವತಿ ನಡುಮಧ್ಯದಲ್ಲಿ ನೆಲೆಸಿರುವ। ಸ್ವಾಮಿಸಂಗಪ್ಪ ನಿಮ್ಮ ಮೇಲಾದಾ ನಂದಿ॥12॥ ಕಾವೇರಿ ನಡುಮಧ್ಯದಲ್ಲಿ ಗೋವು ಪ್ರತಿಷ್ಠೆಮಾಡಿ। ಕಾಶಿಗೆ ಅಧಿಕವೆನಿಸಿದ ರಾಮೇಶ್ವರದಾ ನಂದಿ॥13॥ ಎಲ್ಲ ತೀರ್ಥವು ಕೂಡಿ ಕನ್ನಂಬಾಡಿಗೆ ಹೋಗಿ। ಕಣ್ಣು ಭುವನೇಶ ನಿಮ್ಮ ಚೆನ್ನಾದಾನಂದಿ॥14॥ ಅಷ್ಟ ತೀರ್ಥವು ಕೂಡಿ ಪಟ್ಟಣವ ಬಳಸಿ ಬಂದು। ಗಂಗಾಧರೇಶ ನಿಮ್ಮ ಮೇಲಾದಾ ನಂದಿ॥15॥ ಗುಗ್ಗುಳ್ ಸಾಂಬ್ರಾಣಿ ಧೂಪ ತೇರ್ ಮುಂದೆ। ಲಂಘಡಿಸಿ ಬರುತ್ತಿರಲು ಕಪಿಲ ತೀರದ ನಂಜಪ್ಪನಾ ನಂದಿ॥16॥ ಕಾವೇರಿ ಕಪಿನಿ ಕೂಡಿಭೋರ್ ಮೊರೆವ ರಭಸದಿಂದ। ತಿರಮಕೂಡಲಲ್ಲಿ ನೆಲೆಸಿರುವ ಅಗಸ್ತೇಶ್ವರನಾ ನಂದಿ॥17॥ ಮಳಲು ಕಾವೇರಿ ಕೂಡಿ ಹರಿದು ಬರುವುದ ಕಂಡು। ತಲಕಾಡಲ್ಲಿ ನೆಲೆಸಿರುವ ವೈದ್ಯೇಶ್ವರನಾ ನಂದಿ॥18॥ ನಿಂತು ನೋಡಿದರಲ್ಲಿ ಕಂಚುಕ ಮಾಣಿಕ ಮುತ್ತುರತ್ನ। ಕುಂಚ ಹಾಕುತ್ತಿದೆ ಶಿವನ ಕಂಚಿಯಾ ನಂದಿ॥19॥ ತಿರುಗಿ ನೋಡಿದರಲ್ಲಿ ಬರಿಯ ಮುತ್ತಿನ ಝುಲ್ಲಿ ಸರವ। ಹಾಕುತ್ತಿದೆ ಶಂಭು ಲಿಂಗನಾ ನಂದಿ॥20॥ ಕಾಳೆ ಪಂಚಮ ವಾದ್ಯಸಹ ಭೋರ್ ಮೊರೆವ ರಭಸದಿಂದ। ಕುಂಭಕೋಣೆಯಲ್ಲಿ ನೆಲೆಸಿರುವ ಕುಂಭೇಶ್ವರನಾ ನಂದಿ॥21॥ ಬೆಳ್ಳಿ ಅಂದಿಗೆ ಗೆಜ್ಜೆಸರ ಮೆಲ್ಲನೆ ಲಂಘಣೆಸುತ್ತಿರುವ। ಹಳ್ಳದ ರಾಮ ಲಿಂಗ ನಿಮ್ಮ ಒಳ್ಳೆಯಾ ನಂದಿ॥22॥ ಕೋಡಿಗೆ ಕಟ್ಟಿದ ಕುಂಚ ಮಾಣಿಕದ ಹುರಿಗೆಜ್ಜೆ। ಕಿಗ್ಗದ ಶೃಂಗೇಶ ನಿಮ್ಮ ಮುದ್ದಾದ ನಂದಿ॥23॥ ಜನರ ಪಾಪವ ಕಳೆದು ನರರ ಪಾವನವ ಮಾಡುವ। ಸೇತುವೆಯಲ್ಲಿ ನೆಲೆಸಿರುವ ರಾಮೇಶ್ವರನಾ ನಂದಿ॥24॥ ಗಂಗೆಗೌರಿ ಶಿವಸಹ ಚಂದದಿಂದ ಏರಿಬರುವ। ತಂದೆ ಕೈಲಾಸವಾಸ ಪರಮೇಶ್ವರನಾ ನಂದಿ॥25॥ ಕಾಶಿಯಾ ವಾಸದ ಫಲ ಭೂಪ್ರದಕ್ಷಿಣೆ ಮಾಡಿದ ಫಲ। ತಪ್ಪದೆ ಮಣಿಕರ್ಣಿಕೆಯ ಸ್ನಾನದ ಫಲ ಇಪ್ಪತ್ತೈದು ಲಿಂಗವನ್ನು ಭಕ್ತಿಯಿಂದ ಹೇಳಿ ಕೇಳಿದವರಿಗೆ ತಪ್ಪದೆ ಮುಕ್ತಿಯ ಕೊಡುವಾ ಕಾಶಿ ವಿಶ್ವೇಶ್ವರ ಲಿಂಗ॥26॥

ಕಾಡು ಮಲ್ಲೇಶ್ವರ ನಮೋ ನಮೋ

ಕಾಡು ಮಲ್ಲೇಶ್ವರ ನಮೋ ನಮೋ ನೀಡು ಶಾಂತಿಯನು ನಮೋ ನಮೋ। ಭುಜಗ ಭೂಷಣನೆ ನಮೋ ನಮೋ। ನಿಜ ಸುಖದಾಯಕ ನಮೋ ನಮೋ। ಗಂಗಾಧರ ಹರ ನಮೋ ನಮೋ। ಮಂಗಲಕಾರಕ ನಮೋ ನಮೋ। ಜಟಾಜೂಟಧರ ನಮೋ ನಮೋ। ದಿಟಪಥ ತೋರಿಸು ನಮೋ ನಮೋ। ಶಂಕರ ಭಯಹರ ನಮೋ ನಮೋ। ಕಿಂಕರರೆನಿಸೆಮ್ಮ ನಮೋ ನಮೋ। ಶಿವ ಶಿವ ಭವಭವ ನಮೋ ನಮೋ। ಭವಭಯ ಹರಿಸೋ ನಮೋ ನಮೋ। ಹರಹರ ಹರಹರ ನಮೋ ನಮೋ। ಶಿವ ದುರಿತ ದೂರಹರ ನಮೋ ನಮೋ। ಶಂಭೋ ಶಂಕರ ನಮೋ ನಮೋ। ಅಂಬುಜಲೋಚನ ನಮೋ ನಮೋ। ಫಾಲಲೋಚನ ನಮೋ ನಮೋ। ಕಾಲಕಾಲನೆ ನಮೋ ನಮೋ। ದಕ್ಷಶಿಕ್ಷನೆ ನಮೋ ನಮೋ। ದಾಕ್ಷಾಯಿಣಿ ಪತಿ ನಮೋ ನಮೋ। ಅಘಹರ ಸುಖಕರ ನಮೋ ನಮೋ। ಅಗಜಾರಮಣನೆ ನಮೋ ನಮೋ। ಗಿರಿಧರ ಪ್ರೀತನೆ ನಮೋ ನಮೋ। ಹರ ಗಿರಿಜಾವಲ್ಲಭನೆ ನಮೋ ನಮೋ। ಶೇಷಭೂಷಣನೆ ನಮೋ ನಮೋ। ದಾಸ ಕೇಶವನುತ ನಮೋ ನಮೋ॥

ಪಾಯಾತ್ ಕುಮಾರ ಜನಕಃ (ಹರಿಹರ ಸ್ತೋತ್ರ)

ಪಾಯಾತ್ ಕುಮಾರ ಜನಕಃ। ಪಾಯಾತ್ ಮಾರ ಜನಕಃ। ಶಶಿಖಂಡ ಮೌಳಿಃ। ಶಿಖಂಡ ಮೌಳಿಃ। ಶಂಖ ಪ್ರಭಶ್ಚ। ಖ ಪ್ರಭಶ್ಚ। ನಿಧನಶ್ಚ ಗವೀಶ ಯಾನಃ। ಧನಶ್ಚ ವೀಶ ಯಾನಃ। ಗಂಗಾಂಚ ಪನ್ನಗ ಧರಶ್ಚ ಉಮಾ ವಿಲಾಸಃ। ಗಾಂಚ ನಗಧರಶ್ಚ ಮಾವಿಲಾಸಃ। ಆದ್ಯಕ್ಷರೇಣ ಸಹಿತಃ ರಹಿತೋಽಪಿದೇವ॥

ಈತನೇ ಹರಿಗೋವಿಂದನು

ಈತನೇ ಹರಿಗೋವಿಂದನು। ಜನರೆಲ್ಲಾ ಕೇಳಿ ಆತನೇ। ಮಹಾನುಭಾವನು।। ಕಮಲದಳ ನೇತ್ರನು। ಈತನು। ಕಾಮನ ದಹಿಸಿ। ಒಲಿದು ಭಸ್ಮವ ಧರಿಸಿದನಾತನೂ। ಕಮಲ ಮುಖಿಯರೊಡನೆ ನಲಿದು। ಕರುಗಳ ಕಾಯ್ದವನೀತ। ಸಮರದಿಂದರ್ಜುನನಿಗೆ। ಮೆಚ್ಚಿ ಪಾಶುಪತಾಸ್ತ್ರವ। ಕೊಟ್ಟಂತವನಾತ। ಸುರ ಮುನಿ ಜನರೀಗೆ। ಸುಖಗಳ ಕೋರುತ। ನರರ ಕೈಯಲಿ ಪೂಜೆಗೊಂಬುವನೀತನು। ಹರಿದ ವಸ್ತ್ರವ ತೊಟ್ಟು ಅಸುರನ ಭಾಧೆಗೆ ಭರದಿಂದೋಡಿದ। ಪರಶಿವನಾತನು।।1।। ರಾಕ್ಷಸರ ಸಂಹರಿಸುವನೀತನೂ। ಪರಶಿವನಾಗಿ। ಅಸ್ಥಿ ಚರ್ಮವ ಪೊತ್ತವನಾತನೂ। ಕಸ್ತೂರಿ ತಿಲಕವ ಧರಿಸಿ ಬಲು ಸಿಸ್ತುಗಾರನಾದನೀತನೂ। ಮಿತ್ರೆ ಗೌರಿದೇವಿಗೆ ಒಲಿದೆ ಮುದ್ದು ವರಲಿಂಗನಾತ, ಸಜ್ಜನರನು ಪರಿಪಾಲಿಪನೀತನೂ। ದುರ್ಜನರಿಗೆ। ವರವ ಕೊಡುವವನಾತನೂ। ಹಕ್ಕಿನೇರಿ ಮೆರೆಯುವನೀತನೂ। ತನ್ನ ನಂಬಿದವರಿಗೆ। ವರವ ಕೊಡುವವನಾತನೂ। ಶಂಖುಚಕ್ರವ ಪಿಡಿದವನೀತನೂ। ಕೊರಳೊಳಗೇ ತಾ। ರುಂಡಮಾಲೆಯ। ಧರಿಸಿದನಾತನು। ಪಂಕಜಾಕ್ಷಿ ಮಾನಭಂಗವ। ಕಾಯ್ದನೀತ। ಶಂಕರಾನೆಂತೆಂಭೋ ಹೆಸರ ಪಡೆದು। ಮೆರೆಯುವನಾತ। ಕಂಕಣ ಕುಂಡಲ ಕೌಸ್ತುಭನೀತನು। ಬಿಂಕದಿ ಶರಣರ ಪೊರೆಯುವನಾತನು। ಲಂಕಾನಾಥನ ಕೊಂದವನೀತನು। ಅಖಿಳಾಂಕದಿ ವಿಷವನು ಧರಿಸಿದನಾತನೂ।।3।। ಪಾಂಡವರ ಪರಿಪಾಲಿಪನೀತನೂ। ತಾಂಡವನಾಗಿ ಅಂಧಕಾಸುರನ ಕೊಂದವನಾತನೂ। ಅಂಡವನಳೆದು ತ್ರಿವಿಕ್ರಮನಾದವನೀತ। ಚಂದ್ರನ ಶಿರದೊಳುಧರಿಸಿ। ಪಡೆದು ಮೆರೆಯುವವನಾತ। ಗಂಗೆಯ ಪಾದದಿ ಪಡೆದವನೀತನೂ। ಗಂಗೆಯ ಜಡೆಯಲಿ ಧರಿಸಿದನಾತನೂ। ರಂಗನಾಥನಾಗಿ ಮಲಗಿದನೀತನೂ। ಗಂಗಾಧರನಾಗಿ ಮೆರೆಯುವ ನಾತನೂ।।4।। ಸಾಗರಾತ್ಮಜ ತಂದವನೀತನೂ। ಸರ್ವಾಂಗದೊಳು। ನಾಗರಾಜನ ಧರಿಸಿದನಾತನೂ। ಭಾಗವತರ ಮೇಳದಲ್ಲಿ ಒಲಿದು ನೋಡುವನೀತ। ಹೋಗಿ ಸ್ಮಶಾನದಲ್ಲಿ ವಿನೋದದಿಂ ಮೆರೆಯುವನಾತ। ಪ್ರೇಮದಿಯಾದವ ಮನೆಯಲಿ ನೆಲೆಸಿದನೀತನೂ। ಭೋಗನಂಜುಂಡನಾಗಿ ಮೆರೆಯುವ ನಾತನೂ। ಪ್ರೇಮದಿ ಸತಿಯರ ಸಲಹುವನೀತನೂ। ನಾರಿ ಚಾಮುಂಡಿಗೆ ಒಲಿಯುವನಾತನು।।5।। ಜಯ ಜಗನ್ನಾಥನಿಗೆ ಜಾಹ್ನವೀರಮಣ। ಭಯನಿವಾರಣ ಸದ್ಗುರುಲಿಂಗಗೇ। ಜಯಜಯ ಹರ ಶಂಕರಗೇ। ಅಘಪಾಪ ಪರಿಹಾರಗೆ। ಜಯ ಜಯ ಹರಿದಾಸರ ಕೂಡೆ। ಚೆಲುವನಾಗಿ ಮೆರೆಯುತಿಹನು। ಜಯಜಯ ಕೂಟದಿ ಜಯಿಸುತಲಿಹನು। ಜಯಶಂಕರನಿಗೆ ಪ್ರಿಯನಾಗಿಹನು। ಅಗಣಿತ ಪದವಿಯ ಗಣ ಪೊತ್ತಿಹನು। ಜಯ ಮೂರುತಿ ಹರಿ ಗೋವಿಂದನು।।9।। ಎನುತಲಿ ಈ ಪರಿ ಸ್ತುತಿಯ ಮಾಡುತ್ತ। ಭಕ್ತರುಗಳೂ। ಕರುಣ ವಾಕ್ಯಗಳನಾಡುತ। ವಿನಯವಾದ ನುಡಿಗಳಿಂದ ಮಧುರವಾಕ್ಯಗಳನೇ ಕೋರುತ ಹರಿಹರ ದರ್ಪಣ ತೇಜದಂತೆ। ಚೆಲುವನಾಗಿ ಮೆರೆಯುತಿಹನು ಪದುಮನಾಭನ ಬೇಗದಳಾಡುತ ಪೊಗಳುತ। ಸಿರಿಯರಸನ ದಿವ್ಯ ಅನುದಿನ ಪೊಗಳುತ। ಶಿವಸ್ತುತಿ ವಚನವ ಮನದಲಿ ಭಜಿಸುತ।।3।।

ಉತ್ತರಾಭಾಗದೇಶದಲೊಂದು ಶಿವಪುರಾ (ಕೋಳೂರು ಕೊಡಗೂಸು)

ಉತ್ತರಾಭಾಗದೇಶದಲೊಂದು ಶಿವಪುರಾ। ವಿಸ್ತರಿಸಿ ಕೇಳೊಂದು ವಿಪ್ರಗನ್ನೇಪುರ। ಅಲ್ಲೊಬ್ಬಳುಂಟೂ। ಶಿವಭಕ್ತ ಶಂಕರಗೊಲಿದೂ। ಸಲ್ಲವೇ ಸಾಧ್ಯವೇ ದೇಶಭಾಷೆಗಳಿಂದಾ। ಯನಗೊಬ್ಬ ಮಗಳುಂಟು ಕೋಳೂರು ಕೊಡಗೂಸು। ಮನುಜ ಮಾನ್ಯರಿಗೆಲ್ಲ ಮುದ್ದಿಸುವ ಹಸುಗೂಸು। ಆಗಿರ್ಪ ಶಿವ ತಾನಿಗೊಂದು ನೇಮವ ಮಾಡೀ। ಸೋಮವಾರದ ಹಾಲು ಅಭಿಷೇಕ ಈಶ್ವರಗೇ। ಸೋಮವಾರದ ಹಾಲು ನೈವೇದ್ಯ ಈಶ್ವರಗೇ। ಅಲ್ಲೊಂದು ಸೋಮವಾರದ ಹಾಲತಂದು। ಕಡೆಯದೇ ಅಮೃತ ಪಂಚಾಮೃತವನೇ ಕೊಂಡೂ। ಗಡಿಗೆ ಹಾಲನೆ ಕೊಂಡು ಹೋದೆ ಎಲ್ಲಿಗೆ ತಾಯೆ। ಹರಿವೆ ಹಾಲನು ಕೊಂಡು ಹೋದೆ ಎಲ್ಲಿಗೆ। ತಾಯೆ ಯಾರ್‍ಗೆರೆದು ಬಂದೆ ನೊರೆ ಹಾಲನ್ನೇ ತಾಯಮ್ಮ। ಯಾರ್‍ಗೆರೆದು ಬಂದೆ ಹಾಲನ್ನೆ ತಾಯಮ್ಮ ಕಲ್ನಾಥ ಶಂಕರಗೆ ಸರ್ವಜ್ಞೆಗೇ ಮಗಳೇ। ನೀಲಕಂಠನಿಗೆ ನಿರ್ವಾಣ ನಿತ್ಯನಿಗೀಗಾ। ಹಾಲ್ಹುಯ್ದು ಎರೆದು ಬಂದೆನೆ। ಮಗಳೆ ಕೇಳೆಂದು ನೆರೆದ ಮಕ್ಕಳವಡನೆ ಅಕ್ಕರಂ ಪೊಗಳೋಳೂ। ಇಟ್ಟೆ ಕೇಯಲ್ಲಿ

ಕಲ್ಲಾತನಂ ಪೊಗಳೋಳೂ। ತಾಯಿ ಮುಟ್ಟಾದಳೂ ಕೇಳಯ್ಯಾ ಎಲೆ ದೇವ। ಎಲೆ ತಾಯಿ ಮಾತ್ಕೇಳಿ ಅಂಜುತಲೆ ಬೆಚ್ಚುತಲೆ। ಅಂಗನೆ ಮೈ ತೊಳೆದು ಕದಲಿಕೊಂಡೇ ನಡೆದು। ಕಾಳಿಯಾ ಕರಕೊಂಡಾಕಳನೆ ಕರೆದಳೂ। ಭೋರೈಸಿ ಕಪಿಲೇನು ತಾನಾಗ ಕರೆದಳೂ ಕರದ ಗಡಿಗೇ ತಂದು ನೆಲುವಿನಾ ಮೇಲಿರಿಸೀ। ಹಿತ್ತಲಾವನದೊಳಗೆ ಹೊಕ್ಕಳಾಗಲೆ ಹೆಣ್ಣು। ಅರಿವಿಗೊಂದರಿಸಿನವ ಬಳಿದಳಾಗಲೇ ಹೆಣ್ಣು ಶಶಿಮುಖೀ ಬಿಸೀಕಾಡಿಗೆಯನ್ನಚ್ಚಿದಳೂ। ಕಾಲುಂಗುರಾ ಮೀಟೀ ವೀರಮುದ್ರಿಕೆನಿಟ್ಟಳೂ। ಹತ್ತು ಬೆರಳಿಗೆ ಕೆತ್ತಿಸಿದ ಉಂಗುರವನಿಟ್ಟಳೂ। ಚೀನಾಂಬರದ ಸೀರೇನೆ ಉಟ್ಟಳೂ। ಮೇಲಾದ ಪಟ್ಟೆಯಾ ಕುಪ್ಪುಸವ ತೊಟ್ಟು। ತುರುಬಿಕ್ಕಿ ಅಲ್ಲಾಡಿ ನೋಡಿದಳೀ ಹೆಣ್ಣೂ। ಗಂಟ್ಹಾಕಿ ಅಲ್ಲಾಡಿ ನೋಡಿ ಹೀಗೆ ಹೋದರೆ ಶಿವನು ಮೆಚ್ಚಾನೊ ಮೆಚ್ಚನೋ।। ಯಾವ ಪರಿಯಲಿ ಶಿವನು ತಾನು ಮೆಚ್ಚಾನೆಂದೂ। ತುಂಬೆ ಹೂವು ಬಿಲ್ವಪತ್ರೇನೆ ಕೊಯ್ದಳೂ। ಮರುಗ ಮಲ್ಲಿಗೆ ಜಾಜಿ ಮಲ್ಲೇನೆ ಕೊಯ್ದಳೂ। ಸುರಗಿ ಸುರಹೊನ್ನೆ ಸಂಪೀಗೆ ತಾ ಕೊಯ್ದಳೂ। ತಾಯೆ ಕೇಳೂ ಗೊಂಬೆಬಾನ ಚೊಕ್ಕನವಿದೇ। ಹಾಲು ಗಡಿಗೆ ಬಾಯಿ ಬಟ್ಟಲನೆ ಅನುಸರಿಸಿ। ಅರಿದೋರು ಬಂದರೆ ಮನೆವಳಗೆ ಇರಹೇಳು। ತಿಳಿದೋರು ಬಂದರೆ ಮನೆವಳಗೆ ಇರಹೇಳೂ। ಬಂದಳಾಗಲೆ ಶಿವನ ರಂಗು ಮಂಟಪಕಾಗಾ। ನಿಂದಳಾಗಲೆ ಶಿವನ ಹತ್ತಿರ್ದಲ್ಲೆ ಆ ಹೆಣ್ಣೂ। ಶಂಭುಗೇ ನೊರೆಹಾಲು ಎರೆದಳಾಗಲೆ ಹೆಣ್ಣೂ। ಶಂಭುವೆ ಕೇಳ್ಮಹಾಲಿಂಗವೇ ಕೇಳಯ್ಯ। ಎನ್ನ ರಕ್ಷಿಸುವ ದಾತಾರನೇ ಕೇಳಯ್ಯಾ। ಚಿತ್ತ ಕನ್ನಿಕೆ ಸ್ವಾಮಿ ಹಾಲ್ಕುಡಿಯಬೇಕಯ್ಯ। ಪಲುಕಿ ಪರತತ್ವನ್ಹೇಳಿ ಹಾಲ್ಕುಡಿಯಬೇಕಯ್ಯಾ। ಪಾರ್ವತಿ ಪ್ರಿಯನೇ ಹಾಲ್ಕುಡಿಯಬೇಕಯ್ಯಾ। ಪಾದಪಾಲಿಸುವ ದಾತಾರನೇ ಕೇಳಯ್ಯಾ। ಎನ್ನಯಾ ದಮ್ಮಯ್ಯಾ ಹಾಲ್ಕುಡಿಯ ಬೇಕಯ್ಯಾ। ನಮ್ಮಮ್ಮ ಬೈದಾಳು ಹಾಲ್ಕುಡಿಯಬೇಕಯ್ಯಾ। ಹಿಂದೊತ್ತಿ ಮುಂದೊತ್ತಿ ಮುಂದೆತಾ ಕುಳಿತಿರಲೂ। ದೇವರಾ ದೇವ ಮನ ಮನಸಿನಲಿ ಕುಳಿತಿರಲೂ। ಬಾಗಿಲದ ತೋರಣದ ಕಲ್ಲು ಕಟ್ಟೆನ್ಹಾದೂ। ನೆತ್ತಿ ಎಲ್ಲಾ ವಡೆದು ತಾನಾಗಿ ಸುರಿಯುತಿದೆ। ಬಾಯಿ ಎಲ್ಲಾ ವಡೆದು ತಾನಾಗಿ ಸುರಿಯುತಿದೇ। ದೇವರಾ ದೇವ ಗಡಗಡನೆ ತಾ ನಡುಗಿದಾ। ಜೀವ ಕಾಪೋನು ಗಡಗಡನೆ ತಾ ನಡುಗಿದೇ ಭೋರೈಸಿ ಹಂಪೆ ವಿರುಪಾಕ್ಷ ತಾನೆದ್ದನೂ। ಕಣ್ಣು ಜೋರೂ ತನ್ನ ಕೈಯಲ್ಲೇ ವರಸಿದಾ। ಮೈ ಜೋರೂ ತನ್ನ ಕೈಯಲ್ಲೆ ವರೆಸಿದಾ। ನಿ ಎನ್ನ ಮಡದಿಯೇ ಅಲ್ಲವೇ ಹೇಳೆಂದಾ। ನೀ ತಂದ ಹಾಲು ನಾನಾರೋಗಣೆಯ ಮಾಡ್ವೆನೆಂದಾ। ಎನಗೆ ಬಂಧುಗಳುಂಟು ಕೇಳಯ್ಯಾ ಎಲೆ ದೇವ। ಮೂವತ್ತು ಮೂರ್ಕೋಟಿ ಕೆಲದೇರು ಎನಗುಂಟೂ। ತಾಯಿತಂದೇರಿಗೇ ಸಂತಾನವಿಲ್ಲವಯ್ಯಾ। ಹಾಗಂದ್ರೇ ಶಿವ ತಾನು ಗಳಗಳನೆ ಹಾಲ್ಕುಡಿದಾ। ಬಾಯ್ತೊಳೆದು ಬಟ್ಟಲನು ಬೆಳಗಿರೆ ನೀವೆಂದಾ। ಕೋಳೂರು ಕೊಡಗೂಸು ಹಾಲನೆರವಿಗೆ ಬಂದೂ। ಈ ಬಟ್ಟಲು ಎನಗೆ ವತ್ತೆ ಎಂದನೆ ಶಿವನೂ ಈಗಲೆ ತೆಗೆದು ಭಂಡಾರಕ್ಕೆ ಹಾಕಲೆಂದಾ। ಗದ್ದಲದವಳಗೆಲ್ಲ ಬಿದ್ದಳೋ ಮಗಳೆಂದೂ। ಸಂದಣೆವಳಗೆಲ್ಲ ನೊಂದಳೋ ಮಗಳೆಂದೂ। ಏನು ಹೋಗ್ಲಾಡಿಸೀ ಕೊಂಡಳೋ ಮಗಳೆಂದೂ। ಬಂದು ತಲೆ ಬಾಗಿಲಲಿ ನಿಂದು ತಾ ನೋಡಿದಳು। ತಲೆ ಬಾಗಿಲಾ ಕದವ ತೆಗೆದು ತಾ ನೋಡಿದಳು। ಹರಿದ್ಹೋಗೀ ಮಾಳಿಗೆಯನೇರಿ ತಾ ನೋಡಿದಳೊ। ಇಂತು ಚಿಂತಿಸುತಿರಲು ಪಾರ್ವತಿ ಸರಿಯಾಗೀ। ಇಂತು ಚಿಂತಿಸುತಿರಲು ಗಂಗೆಯೂ ಸರಿಯಾಗಿ। ಯಾಕೆ ಮಗಳಿಷ್ಟೊತ್ತು ತಡವು ಯಾಕೆ ಅಮ್ಮಾ। ಬಂದ ಮಗಳನ್ನೆ ಕಂಡು ತಾಯ್ನುಡಿಸಿ ಕೇಳಿದಳೂ। ನಿಂದ ಮಗಳನೆ ಕಂಡು ತಾಯ್ನುಡಿಸಿ ಕೇಳಿದಳೂ। ಮಗಳೆ ನೀ ಇಷ್ಟೊತ್ತು ತಡವು ಯಾಕೆ ಅಮ್ಮಾ। ಶಿವನನ್ನುಳಿಸಿಕೊಂಡನು ಕಾಣೆನಮ್ಮಮ್ಮಾ। ಶಿವನನ್ನ ಕೂಡಿಕೊಂಡನು ಕಾಣೆ ನಮ್ಮಮ್ಮಾ। ಶಿವ ನನ್ನ ಬೇಡಿಕೊಂಡನು ಕಾಣೆ ನಮ್ಮಮ್ಮಾ। ಏನು ಮಾಡಿದರು ಶಿವನು ಹಾಲ್ಕುಡಿಯವೊಲ್ಲನೂ। ಯಾವ ಪರಿಯಲಿ ಶಿವನು ಹಾಲ್ಕುಡಿಯವೊಲ್ಲನೂ। ಚಿತ್ತ ಕನ್ನಿಕೆ ಸ್ವಾಮಿ ಹಾಲ್ಕುಡಿಯವೊಲ್ಲನೂ। ಮುಕ್ಕಣ್ಣೇಶ್ವರನೂ ಹಾಲ್ಕುಡಿಯವೊಲ್ಲನೂ। ಪಲ್ಲಕ್ಕಿ ಪರತತ್ವನೂ ಹಾಲ್ಕುಡಿಯವೊಲ್ಲನೂ। ಪಾರ್ವತಿಪ್ರೀಯನೂ ಹಾಲ್ಕುಡಿಯವೊಲ್ಲನೂ। ಗದ್ದವಾ ಹಿಡಿದು ಹಿಡಿದು ಮುದ್ದಾಡಿಯೇ ಕೊಂಡೆನೂ। ಗಲ್ಲವಾ ಹಿಡಿದುನಾ ಬೇಡಿಯೇ ಕೊಂಡೆನೂ। ಏಳಿರೇ ಏಳೀರೇ ಪುಣ್ಯ ಸವೆದೋರು ನೀ। ವೇಳಿರೇ ಏಳಿರೆ ಕರ್ಮ ಸವೆದೋರು ನೀವ್। ನಿಷ್ಠೂರಗಾತ್ರೇರು ಎಲ್ಲ ನೀವೇಳಿರೇ। ಕಷ್ಟವನು ಧರೆ ಮೇಲೆ ಕೊಂಬೋರು ನೀವೇಳಿ। ವಳಗಿದ್ದ ಮಾನಬೊಂಬೇನೆ ತಕ್ಕೊಂಡೂ। ತಾಯಿ ತಂದೇರನೂ ಕೈ ಹಿಡಿದು ಕರಕೊಂಡು। ಕೋಳೂರು ಕೊಡಗೂಸು

ಬಂದಾಳೋ ಬಾರಳೋ। ಬಾರದಿದ್ದರೆ ನೂರಾಳು ಕಳುಹುವೆನೆಂದು। ಹೇಳಿ ಮುಂದಲೆಯಾ ಎಳೆಎಳಿಸಿ ತಹೇನೆಂದ। ಇಂತೆಂದು ಶಿವ ತಾನು ಚಿಂತಿಸುವಹೊತ್ತಿನಲಿ। ಹಣ್ಣು ಹಾಲೂ ಜೇನು ತುಪ್ಪವನೆ ತಕ್ಕೊಂಡೂ। ಆಗಲೇ ಗುಗ್ಗಳದ ಧೂಪವನೆ ತಕ್ಕೊಂಡೂ। ಬಂದ ಮಂದೀನೆಲ್ಲ ಸಂಗಡವಡಗೊಂಡೂ। ಬಂದಳಾಗಲೆ ಶಿವನರಂಗಮಂಟಪಕಾಗಾ। ನಿಂದಳಾಗಲೇ ಶಿವನ ಹತ್ತಿರ್ದಲ್ಲೆ ಆ ಹೆಣ್ಣೂ। ಬಂದ ಮಂದಿನೆಲ್ಲಾ ಪಾದದಾ ಮೇಲಿರಿಸೀ। ನಿಂದ ಮಂದೀನೆಲ್ಲಾ ಪಾದದಾ ಮೇಲಿರಿಸೀ। ತಂದ್ಹಿಂಡು ದಂಡೇನು ಪಾದದಾ ಮೇಲಿರಿಸೀ। ಅಟ್ಟಾಡಿಕರದುಂಬೋ ಬಟ್ಟಲನೆ ಕೊಟ್ಟನೂ। ಅಟ್ಟುಂಬೊ ಮನೆ ಮಾಡಿ ಬಟ್ಟಲಾಗಲೇ ಕೊಟ್ಟ। ತನ್ನ ಗುಡಿಗೆದುರಾಗಿ ತೊಟ್ಲು ಕಟ್ಟಿಸಿ ಕೊಟ್ಟ। ಬರೆದ ವ್ಯೊಲೇ ತಂದು ಬಾಗಿಲಿಗೆ ಕಟ್ಟಿಸಿದ। ನಿಂದ ವೋಲೇ ನೋಡಿ ತಾ ನೋಡಿ ನಕ್ಕನೂ। ಮಕ್ಕಳೂ ಇಲ್ಲದ ಹುಟ್ಟು ಬಂಜೇರಿಗೇ। ಸಂತಾನಗಳನು ತಾನು ಪಾಲಿಸಿ ಕೊಟ್ಟಾ। ಹದಿನಾಲ್ಕು ವರ್ಷದಾ ಕೆಳದೇರಿಗೆಲ್ಲರಿಗೂ। ಹದಿನಾರು ವರುಷದಾ ಪತಿಯರೆನೆ ತಾ ಕೊಟ್ಟ। ಗಿಡ ಮರಗಳಾಗಿ ಹುಟ್ಟಿರೇ ನೀವೆಂದಾ। ತುಂಬೆ ತುಳಸಿಯಾಗಿ ಹುಟ್ಟಿರೇ ನೀವೆಂದ। ಅರಳಿ ಅಶ್ವತ್ಥವಾಗಿ ಹುಟ್ಟಿರೇ ನೀವೆಂದಾ। ಪಾರ್ವತಿ ಕರೆದಾಗ ಪಾಯ್ಸವನೆ ಮಾಡೆಂದಾ। ಚಂದ್ರನ್ನ ಕರೆದಾಗ ಭೂಮಕಣಿ ಮಾಡೆಂದಾ। ಗಂಗೆಯಾ ಕರೆದಾಗ ಆರುತಿಯ ಮಾಡೆಂದಾ। ಇಂತಿಬ್ಬರಿಗೂ ಭೂಮ ನೀಡುವಾಗಾ। ಇಂತಿಬ್ಬರೀಗೂ ಮಡದೀ ನೀಡುವಾಗ। ಶಿವನಾನು ಒಂದು ಮಾತನು ಹೇಳಿಕೊಂಬೆನೂ। ಶಿವನಾನು ಒಂದು ಮಾತನು ಕೇಳಿಕೊಂಬೆನೂ। ಹೇಳು ಹೇಳೆನ್ನಾಣೆ ಹೇಳುಪಾರ್ವತಿ ಆಣೆ। ಅದಕಿಂತ ಮೀರಿದರೆ ಗಂಗೆಯಾ ಆಣೆಂದಾ। ಕೊಳೂರು ಕೊಡಗೂಸು ತಾಯಿತಂದೇರಿಗೇ। ಕೈಲಾಸದಿಂದೆರಡು ಪುಷ್ಪಗಳು ಬರಬೇಕೂ। ವೇದವ್ಯಾಸರೂ ಕೈ ತಟ್ಟಿ ಬರಬೇಕೂ। ಶಾಸ್ತ್ರ ಪುರಾಣಿಕರು ತಾವಾಗಿ ಬರಬೇಕು। ವಟವೃಕ್ಷ ಅರಳೀ ಮರವಾಗಿ ಹುಟ್ಟೆಂದ್ರೂ। ಎಸೆವೋ ಮಲ್ಲಿಗೆ ಗಿಡಾ ಆಗಿ ನೀ ಹುಟ್ಟೆಂದ್ರೂ। ಕೋಳೂರು ಎನಗೊಂದು ಹೊಸ ಪ್ರೀಯವಾಯ್ತೆಂದಾ। ಆಳುದ್ದ ಶಿವಪುರವ ಎತ್ತಿ ಗುಡಿ ಕಟ್ಟಿಸಿದಾ। ಸೋಮವಾರದ ಉದಯಕಾಲದಲಿ ಈ ಹಾಡು ಆದಿತ್ಯವಾರ ಅಮಾವಾಸ್ಯೆ ಕಾಲದಲೀ ಈ ಹಾಡು ಹೇಳಿ ಕೇಳಿದ ಮನುಜಮಾನ್ಯರಿಗೆಲ್ಲರಿಗೂ। ಪುತ್ರ ಸಂತಾನವನು ಕೊಟ್ಟು ರಕ್ಷಿಸುವನೂ। ವೇದವ್ಯಾಸರು ಹೇಳಲು ನಾರದ ಮುನಿಗಳು ಕೇಳಲೂ। ಇದನ್ನು ಹೇಳಿ ಕೇಳಿದವರಿಗೆ ಮುನ್ನೂರು ಮೂವತ್ತು ಮೂರು ತುಂಬೆ ಹೂವು ಪೂಜೇ ಮಾಡಿದಷ್ಟು ಫಲಾ। ಶಿವಾಸಾಯುಜ್ಯವ ಕೊಟ್ಟು ರಕ್ಷಿಸುವನೂ। ವಿಷ್ಣು ಸಾಯುಜ್ಯವಾ ಕೊಟ್ಟು ರಕ್ಷಿಸುವನೂ॥

ಸಿತಗಿರಿಶೃಂಗ ಸಮಾಶ್ರೀತರಂಗಂ

ಸಿತಗಿರಿಶೃಂಗ ಸಮಾಶ್ರೀತರಂಗಂ। ನತಜನಪಾಲನ ತತ್ಪರಂಗಂ॥ಶ್ರುತಿತತಿ ಮೌಳಿ ಸುಶೋಭಿ ತರಂಗಂ ತಂ ಪ್ರಣಮಾಮಿ ಸಿತಾಚಲರಂಗಂ॥1॥ ಚಂಪಕಕಾನನ ರಾಜಿತರಂಗಂ। ಕಂಪಿತ ದಾನವ ಮಾನಸರಂಗಂ। ಸಂಪದಶೇಷ ವಿವರ್ಧನರಂಗಂ। ತಂ ಪ್ರಣಮಾಮಿ ಸಿತಾಚಲ ರಂಗಂ॥2॥ ದಕ್ಷಿಣಬಾಹು ಸುಶೋಭಿರಥಾಂಗಂ। ಕುಕ್ಷಿಧೃತಾಖಿಲ ಲೋಕ ಶುಭಾಂಗಂ। ಭಕ್ಷಿತಕಾನನ ವಹ್ನಿವರಾಂಗಂ। ತಂ ಪ್ರಣಮಾಮಿ ಸಿತಾಚಲರಂಗಂ॥3॥ ಹೇಮವಿಭೂಷಣ ಶೋಭಿಶುಭಾಂಗಂ॥ ವಾಮಕರಾಂಕಿತ ನಿರ್ಮಲಶಂಖಂ। ಕ್ಷೇಮಕರಾಧ್ವನಿ ದರ್ಶಕರಂಗಂ। ತಂ ಪ್ರಣಮಾಮಿ ಸಿತಾಚಲರಂಗಂ॥4॥ ರಥಬಲಿಸೇವಿ ಸುತಪ್ರದರಂಗಂ। ಪಥಿಕತತೇ ಸ್ಸುಖದಾಯಕರಂಗಂ। ಕಥಕವೀಶ್ವರ ಸೇವಿತರಂಗಂ। ತಂ ಪ್ರಣಮಾಮಿ ಸಿತಾಚಲರಂಗಂ॥5॥ ನಲ್ಲನಡಾದರ ಸೇವಿತರಂಗಂ। ಫುಲ್ಲಸುಮೈರಭಿ ಭೂಷಿತರಂಗಂ। ಭಿಲ್ಲಜನೈರಭಿಭಾವಿತರಂಗಂ। ತಂ ಪ್ರಣಮಾಮಿ ಸಿತಾಚಲರಂಗಂ॥6॥ ಮಾಧವತೀರ್ಥ ವಿರಾಜಿತ ರಂಗಂ। ಪಾದುಕಯಾ ಹೃತ ಸಾಧ್ವಸರಂಗಂ। ರುದ್ರಕೃತೇಕೃತ ದಿವ್ಯಶುಭಾಂಗಂ। ತಂ ಪ್ರಣಮಾಮಿ ಸಿತಾಚಲ ರಂಗಂ॥7॥ ಮಂಗಳವಾದ್ಯ ವಿಭೋಧಿತರಂಗಂ। ತುಂಗಗಿರೀಶ ಸಮಾಶ್ರಿತರಂಗಂ। ಶೃಂಗ ಸಮುತ್ಥ ದಯಾಬ್ಧಿತರಂಗಂ। ತಂ ಪ್ರಣಮಾಮಿ ಸಿತಾಚಲ ರಂಗಂ॥8॥ ಸಾಲತಮಾಲ ಕುಲಾಂಚಿತ ಶೃಂಗಂ। ಶೈಲಕುಲಾಧಿಪತೇರಪಿ ತುಂಗಂ। ನೀಲಸರೋಜಸಮಾನ ಶುಭಾಂಗಂ। ತಂ ಪ್ರಣಮಾಮಿ ಸಿತಾಚಲ ರಂಗಂ॥9॥ ಗೋಪಕೃತಸ್ತುತಿ ತೋಷಿತರಂಗಂ। ನೂಪುರನಾದ ವಿನಿರ್ಜಿತಭಂಗಂ। ಆಪದಶೇಷ ವಿನಾಶನರಂಗಂ। ತಂ ಪ್ರಣಮಾಮಿ ಸಿತಾಚಲರಂಗಂ॥10॥

ಜಗದಾದಿಮನಾದಿ ಮಜಂ (ರಮಾಪತ್ಯಷ್ಟಕಮ್)

ಜಗದಾದಿಮನಾದಿ ಮಜಂ ಪುರುಜಂ। ಶರದಂಬರ ತುಲ್ಯತನುಂ ವಿನುತಮ್। ಧೃತಕಂಜರಥಾಂಗಗದಂ ವಿಗದಂ। ಪ್ರಣಮಾಮಿರಮಾಧಿಪತಿಂತಮಹಮ್॥1॥ ಕಮಲಾನನ ಕಂಜರತಂ ವಿರತಂ। ಹೃದಿಯೋಗಿ ಜನೈ ಕಲಿತಂ ಲಲಿತಮ್। ಕುಜನೈ ಸುಜನೈ ರಲಭಂ ಸುಲಭಂ। ಪ್ರಣಮಾಮಿ........ ॥2॥ ಮುನಿವೃಂದ ಹೃದಿಸ್ಥಪದಂ ಸುಪದಂ। ನಿಖಿಲಾಧ್ವರಭಾಗ ಭುಜಂ ಸುಭುಜಮ್। ಹೃತವಾಸವಮುಖ್ಯಮದಂ ವಿಮದಂ। ಪ್ರಣಮಾಮಿ....... ॥3॥ ಹೃತದಾನವ ದೃಪ್ತಬಲಂ ಸುಬಲಂ। ಸ್ವಜನಾಸ್ತ ಸಮಸ್ತಮಲಂ ವಿಮಲಮ್। ಸಮಪಾಸ್ತ ಗಜೇಂದ್ರದರಂ ಸುದರಂ। ಪ್ರಣಮಾಮಿ...... ॥4॥ ಪರಿಕಲ್ಪಿತ ಸರ್ವಕಲಂ ವಿಕಲಂ। ಸಕಲಾಗಮ ಗೀತಗುಣಂ ವಿಗುಣಮ್। ಭವಪಾಶ ನಿರಾಕರಣಂ ಶರಣಂ। ಪ್ರಣಮಾಮಿ...... ॥5॥ ಮೃತಿಜನ್ಮ ಜರಾಶಮನಂ ಕಮನಂ। ಶರಣಾಗತ ಭೀತ ಹರಂ ದಹರಮ್। ಪರಿತುಷ್ಟರಮಾ ಹೃದಯಂ ಸುದಯಂ। ಪ್ರಣಮಾಮಿ........ ॥6॥ ಸಕಲಾವನಿ ಬಿಂಬಧರಂ ಸ್ವಧರಂ। ಪರಿಪೂರಿತ ಸರ್ವದಿಶಂ ಸುದೃಶಮ್। ಗತಶೋಕ ಮಶೋಕ ಕರಂ ಸುಕರಂ। ಪ್ರಣಮಾಮಿ........ ॥7॥ ಮಥಿತಾರ್ಣವ ರಾಜರಸಂ ಸರಸಂ। ಗ್ರಥಿತಾಖಿಲಲೋಕ ಹೃದಂ ಸುಹೃದಮ್। ಪ್ರಥಿತಾದ್ಭುತಶಕ್ತಿ ಗಣಂ ಸುಗಣಂ। ಪ್ರಣಮಾಮಿ........ ॥8॥ ಸುಖರಾಶಿಕರಂ ಭವಬಂಧ ಹರಂ। ಪರಮಾಷ್ಟಕ ಮೇತದನನ್ಯಮತಿಃ। ಪಠತೀಹತು ಯೋನಿಶಮೇವನರೋ। ಲಭತೇ ಖಲು ವಿಷ್ಣು ಪದಂ ಸ ಪರಮ್॥ ಪ್ರಣಮಾಮಿ.......... ॥9॥

ಸಿದ್ಧಿದಾಯಕ ಶಿಷ್ಯಜನ ಪರಿಪಾಲ (ಶ್ರೀ ಕಪಿಲದೇವರ ಸ್ತೋತ್ರ ಸುಳಾದಿ)

ಸಿದ್ಧಿದಾಯಕ ಶಿಷ್ಯಜನ ಪರಿಪಾಲ ಪರಮಾ। ಶುದ್ಧಾತ್ಮ ಸುಗುಣಸಾಂದ್ರ ಸುಖವಾರಿಧಿ। ನಿದ್ರಾರಹಿತ ನಿದ್ರಾರಮಣ ನಿರ್ವಿಕಾರ। ಚಿದ್ದೇಹ ಸರ್ವಕಾಲ ಸುಂದರಸಾರ। ಪದ್ಮ ಸಂಭವ ಬಲಿ ಪ್ರಕ್ಷಾಲಿತ ಪಾದ ಮಹಾ। ಹೃದ್ರೋಗನಾಶ ವೈಕುಂಠವಾಸ। ವಿದ್ಯಾತೀತ ವಿಶ್ವನಾಟಕ ನಾರಾಯಣ। ವಿದ್ಯ ಉದ್ಧಾರಕೆ ಉದಧಿ ಸದನಾ। ಸಿದ್ಧಾದಿ ವಿನುತ ಸಂತತ ಪಾತಾಳವಾಸಿ। ಬುದ್ಧಿ ವಿಶಾಲಮಹಿಮ ಪಾಪಹಾರಿ। ಖದ್ಯೋತವರ್ಣ ಸಕಲ ವ್ಯಾಪ್ತ ಆಕಾಶ ಅಮಿತ। ಬಂದ್ಧ ವಿಚ್ಛೇದ ನಾನಾ ರೂಪಾತ್ಮಕಾ। ಅದ್ವೈತಕಾಯಾ ಮಾಯಾರಮಣ ರಾಜೀವನೇತ್ರ। ಅದ್ವಯ ಅನಾದಿ ಪುರುಷ ಚಿತ್ರ। ಕರ್ದಮ ಮುನಿಸೂನು ವಿಜಯವಿಠ್ಠಲ ಕಪಿಲ ನಿರ್ದೋಷಕರುಣಾಬ್ಧಿ ಸರ್ವರಾಧಾರಿ॥1॥ ಆದಿ ಮನ್ವಂತರದಿ ಜನಿಸಿದ ಮಹದೈವ। ಆದಿಪೂರಬೊಮ್ಮ ಬೊಮ್ಮನಯ್ಯ ಜೀಯಾ। ಸಾಧು ಜನರ ಪ್ರೀಯಾ ಸಂತತ ಮುನಿತಿಲಕ। ಬೋಧ ಶರೀರ ಭಕುತರ ಮನೋಹರ ಹರಿ। ಮಾಧವ ಸಿರಿ ವಿಜಯವಿಠ್ಠಲ ವಿಮಲೇಶಾ। ಮೋದ ಮತಿಯ ಕೊಡುವ ಕಪಿಲ ಭಗವನ್ಮೂರ್ತಿ॥2॥ ಘನಮಹಿಮ ಗೌಣಾಂಡದೊಳಗೆ ಲೀಲೆಯಿಂದ। ಜನಿಸಿ ಮೆರೆದೆ ಬಿಂದು ಸರೋವರದಲ್ಲಿ। ಮಿನುಗುವ ದ್ವಯ ಹಸ್ತ ಅಪ್ರಾಕೃತ ಕಾಯ। ಇನನಂತೆ ಒಪ್ಪುವ ಶಿರೋರುಹವೋ। ಕನಕ ಪುತ್ಥಳಿಯಂತೆ ಕಾಂತಿ ತ್ರಿಭುವನಕ್ಕೆ। ಅನವರತ ತುಂಬಿ ಸೂಸುತಲಿದಕೋ। ಜನನಿ ದೇವಹೂತಿಗೆ ಉಪದೇಶವನು ಮಾಡಿ। ಗುಣ ಮೊದಲಾದ ತತ್ವವ ತಿಳಿಸಿದೆ। ತನುವಿನೊಳಗೆ ನೀನೇ ತಿಳಿದು ತಿಳಿದೆ ನಿತ್ಯ। ಜನರನ್ನು ಪಾಲಿಸುವ ಕಪಿಲಾಖ್ಯನೆ। ಅನುದಿನ ನಿನ್ನ ಧ್ಯಾನವ ಮಾಡಿ ಮಣಿಯಿಂದ। ಎಣಿಸುವ ಸುಜನಕ್ಕೆ ಜ್ಞಾನ ಕೊಡುವೆ। ಎಣೆಗಾಣೆ ನಿನ್ನ ನಂಬಿದ ಮೂಢ। ಮನುಜನಿಗೆ ಮಹಪದವಿ ಬರುವದಯ್ಯ। ಮುನಿಕುಲೋತ್ತಮ ಕಪಿಲ ವಿಜಯವಿಠ್ಠಲರೇಯ। ಎನಗೆ ಯೋಗ ಮಾರ್ಗವನು ತೋರೋ ತವಕದಿಂದ॥3॥ ಕಪಿಲ ಕಪಿಲ ಎಂದು ಪ್ರಾತಃಕಾಲದಲೆದ್ದು। ಸಪುತ ಸಾರಿಗೆಯಲಿ ನುಡಿದ ಮಾನವನಿಗೆ। ಅಪಜಯ ಮೊದಲಾದ ಕ್ಲೇಶಗಳೊಂದಿಲ್ಲಾ। ಅಪರಿಮಿತ ಸೌಖ್ಯ ಅವನ ಕುಲಕೋಟಿಗೆ। ಗುಪುತ ನಾಮವಿದು ಮನದೊಳಗಿಡುವುದು। ಕಪಟ ಜೀವರು ಈತನ ಒಬ್ಬ ಋಷಿಯೆಂದು। ತಪಿಸುವರು ಕಾಣೋ ನಿತ್ಯ ನರಕದಲ್ಲಿ। ಕೃಪಣವತ್ಸಲ ನಮ್ಮ ವಿಜಯವಿಠ್ಠಲರೇಯ। ಕಪಿಲಾವತಾರ ಬಲ್ಲವಗೆ ಬಲು ಸುಲಭ॥4॥ ಬಲದಹಸ್ತದಲಿ ಯಜ್ಞಶಾಲೆಯಲ್ಲಿ ಕಂಗಳಕಪ್ಪಿನಲ್ಲಿ ಹೃದಯಸ್ಥಾನ ನಾಭಿಯಲ್ಲಿ। ಜಲಧಿ ಗಂಗಾ ಸಂಗಮದಲ್ಲಿ ಗಮನದಲ್ಲಿ। ತುಲಸಿಯ

ಪತ್ರದಲ್ಲಿ ತುರುಗ ತುರುವಿನಲ್ಲಿ। ಮಲಗುವ ಮನೆಯಲ್ಲಿ ನೈವೇದ್ಯ ಸಮಯದಲ್ಲಿ। ಬಲು ಕರ್ಮ ಬಂಧಗಳು ವಿಮೋಚಕವಾಗುವಲ್ಲಿ। ಚೆಲುವನಾದವನಲ್ಲಿ ವಿದ್ಯೆ ಪೇಳುವನಲ್ಲಿ। ಫಲದಲ್ಲಿ ಪ್ರತಿಕೂಲವಿಲ್ಲದ ಸ್ಥಳದಲ್ಲಿ। ಬೆಳೆದ ದರ್ಭೆಗಳಲ್ಲಿ ಅಗ್ನಿಯಲ್ಲಿ ಹರಿವ। ಜಲದಲ್ಲಿ ಜಾಂಬುದ ನದಿಯಲ್ಲಿ ಶ್ಲೋಕದಲ್ಲಿ। ಬಲಿಮುಖ ಬಳಗದಲ್ಲಿ ಆಚಾರಶೀಲನಲ್ಲಿ। ಫಳಿಗೆ ಆರಂಭದಲ್ಲಿ। ಪಶ್ಚಿಮ ಭಾಗದಲ್ಲಿ। ಪೊಳೆವ ಮಿಂಚಿನಲ್ಲಿ ಬಂಗಾರದಲ್ಲಿ ಇನಿತು। ಕಾಲಕಾಲಕ್ಕೆ ಬಿಡದೆ ಸ್ಮರಿಸು ಕಪಿಲ ಪರಮಾತ್ಮನ। ಗೆಲವುಂಟು ನಿನಗೆಲವೋ ಸಂಸಾರದಿಂದ ವೇಗ। ಕಲಿಯುಗದೊಳಗಿದೆ ಕೊಂಡಾಡಿದವರಿಗೆ। ಖಳರ ಅಂಜಿಕೆಯಿಲ್ಲ ನಿಂದಲ್ಲೇ ಶುಭಯೋಗ। ಬಲವೈರಿನುತ ನಮ್ಮ ವಿಜಯವಿಠ್ಠಲರೇಯ।। ಇಳೆಯೊಳಗೆ ಕಪಿಲಾವತಾರನಾಗಿ ನಮ್ಮ ಭಾರವಹಿಸಿದ।।5।। ತಮ್ಮ ಪರಿಚ್ಛೇದ ಈತನ ಸ್ಮರಣೆ ಮಾಡು ಹೃ-।ತ್ಕಮಲದೊಳಗೆ ವಿಜಯವಿಠ್ಠಲನ್ನ ಚರಣಾಬ್ಜಾ ಸಂಸ್ಮರಣ ಸರ್ವದಂ ಶಾಂತ ನೀಲವರದಂ ಮಂಗಳಂ ಮಂಗಳಾ ನಾಂ।।6।। ಜಗದ ಹಿತಪಾಲನಂ ಕಂಜನಂ ಕಂಜ ನೇತ್ರಂ ವಿಠಲಂ ಚಿಂತಯಾಮಿ। ಇತಿ ಶ್ರೀ ಕಪಿಲ ಪರಮಾತ್ಮನು ದೇವಹೂತಿ ದೇವಿಗೆ ಉಪದೇಶ ಮಾಡಿದ ಮಂತ್ರ ಸಂಪೂರ್ಣಂ।।

ವರಕ್ರೂಢ ಪುರದಲ್ಲಿ ಸ್ಥಿರವಾಗಿ ನೆಲೆಸಿಹ (ಅಗ್ನಿತಂದದ್ದು)

ವರಕ್ರೂಢ ಪುರದಲ್ಲಿ ಸ್ಥಿರವಾಗಿ ನೆಲೆಸಿಹ ಗಜಮುಖಗೊಂದಿಸುತ। ಕಡಲೇ ಕಬ್ಬಿನ ಕೋಲು ನೊರೆಹಾಲು ಸಕ್ಕರೆ ಗಜಮುಖಗರ್ಪಿಸುತ। ಅಜನ ಪಟ್ಟದ ರಾಣಿ ಮರಿದುಂಬಿಗುರುಳಿನ ಭಾರತಿಗಭಿವಂದಿಸುತ। ಸುರಮುನಿ ಕಾವೇರಿ ವಿವಾಹದುತ್ಸವದಲ್ಲಿ ಸರಸ್ವತ ದೇವಿ ಅನಲನ ತಂದಿರುವ ಚರಿತೆಯನೆ ಪಾಡಿ ಪೊಗಳುವೆ।।ಶೋಭಾನೆ।। ಮುಕ್ತಫಲದ ಮಂಟಪದ ಮಧ್ಯದಲ್ಲಿ ಮುತ್ತಿನ ಜಲ್ಲಿಗಳೂ ಕೆತ್ತಿದ ನವರತ್ನಮಯದ ವಿಸ್ತಾರದ ಬಾಗಿಲೊಳು। ಸಪ್ತಋಷಿಗಳು ಗರುಡಗಂಧರ್ವರು ಯಕ್ಷರು ಸಹಿತಿರಲೂ। ಹಸ್ತಿಗರ್ಚನವನ್ನೆ ಗೈದು ಮಂಡಲದಿ ಶಾಸ್ತ್ರೋಕ್ತದಿಂದ ಪಾರ್ವತನನು ತಾರೆಂದು ವಿಸ್ತರಿಸಿ ಮುನಿಯ ನುಡಿದನು।।ಶೋಭಾನೆ।। ನುಡಿದ ಮಾತನು ಕೇಳಿ ಮನದೊಳು ಹಿಗ್ಗುತ ಸರಸ್ವತಿದೇವಿ ಆಗ। ಕಡುತವಕದಿಂದ ಮಜ್ಜನವನ್ನೇ ಗೈಯುತ್ತ ಉಳುಗಂಧ ಪೂಸುತಲಿ। ತಲೆಗೆ ಮುತ್ತಿನ ಬಟ್ಟು ಕುಂಕುಮ ಕಸ್ತೂರಿ ಘಮಘಮಿ ಸುತಲೀ। ಬೀಡು ಮುತ್ತಿನ್ಹರಳಿನ ಮುಕುರವನಿಟ್ಟು ಕಡದಡಿಗಚ್ಚಿನ ಸೀರೆಯನುಟ್ಟು। ಪರಿಮಳದ ಗಂಧ ತಿವುರ್‍ಯಾಳು।।ಶೋಭಾನೆ।। ಪಾದದಲೊಪ್ಪುವ ಪೈಜಣೆ ಪಾಡಗ। ಬಂಗಾರದ ಹೊರಡುಂಗುರ ಈರ ಮುದ್ರಿಕೆ ಮಿಂಚು ಡಾಬುಒಡ್ಯಾಣವು ನೀಲದ ಓಲೆಕಮಲ ಚೂಡಗ ಕಂಕಣ ಬಾಜಬಂಧಿ ವಂಕಿ ನಾಗಮುರಿಗೆ ಹೊಳೆಯೆ ಮೋಹನ್ನ ಮಾಲೆಯು ಸರವೂ ಕಂಠದಿ। ಓಲೆಯು ಮುತ್ತಿನ ಗಿಣಿಯೆ ಬಾವುಲಿನಿಟ್ಟು। ವೀಳ್ಯತಂಡುಲವ ಮೆಲುವಳು ।।ಶೋಭಾನೆ।। ಬ್ರಹ್ಮನ ರಾಣಿ ಪನ್ನಗ ವೇಣಿ ಪ್ರಸನ್ನೇ ಪಾವಕ ಮೊಗೆದು। ರನ್ನ ಮಾಣಿಕದ ಸುವರ್ಣದ ಯಜನವ ತನ್ನ ಕರದಿ ಪಿಡಿದೂ। ಮಲ್ಲಿಗೆ ಗಂಧಿನಿ ಮನದ ಕಟ್ಟಾಣಿ ನಿಲ್ಲದೆ ರಾಜ ಸಭೆಯ ಮಧ್ಯದಲಿ ಚಲುವೆ ಶಾರದೆಯೂ ಬರುವಳು।।ಶೋಭಾನೆ।। ಸಿರಿಯು ಸಂಪನ್ನೆ ಶಾರದಾ ದೇವಿಯು ಅನಿಲನ ತಾ ಪಿಡಿದೂ ಭುಜಗಭವೇಣಿ ಮದನ ಕಟ್ಟಾಣಿ ಕೋಕಿಲಗಾನೆ ಝಣಝಣಿಸಿ ನಡೆವ ಭಾರಕೆ ಶೇಷ ಗಡಗಡ ನಡುಗುತ್ತ ಶಿರವನು ತಗ್ಗಿಸುತ। ಮುಡಿದ ಮಲ್ಲಿಗೆ ಹೂವು ಎಡಬಲಕುದುರುತ್ತ ಹರಿಹರಬ್ರಹ್ಮ ಸಭೆಯ ಮಧ್ಯದಲಿ ಅನಲನ ತಂದಳೊಲವಿಂದ ।।ಶೋಭಾನೆ।। ಹೇಮದ ಹರಿವಾಣದಲಿ ಅಗ್ನಿಯನ್ನು ವಾಣಿದೇವಿಯು ಪಿಡಿದು ಕಾಮಕಲಶವ ಪೋಲುವ ಕುಚದ ಮೇಲ್। ಮಾಲೆ ಮುತ್ತಿನ ಸರವೂ। ವೀಣೆ ಕಸ್ತೂರಿ ಗಂಧ ಪರಿಮಳ ಎಸೆಯುತ್ತ। ದೇವತೆಗಳು ಎಲ್ಲ ಜಯಜಯವೆನಲು ಪಾವಕನ ಹುತವ ರಚಿಸ್ಯಾರು।।ಶೋಭಾನೆ।। ಹೇಮ ಮಂಡಲದಲ್ಲಿ ಪಾವಕನನಿಳುಹ್ಯಾರು ಸುರಮುನಿ ವಿವಾಹದಲಿ। ವೇದಮಂತ್ರಗಳಿಂದ ಪೂಜಿಸಿ ಅನಲನ ಆಗ ಘೃತವನೆರೆದು ದೇವಗಂಗೆಯಲ್ಲಿ ವಾಣಿ ಹಸ್ತವ ತೊಳೆದು ಹೂವಿನಕ್ಷತೆ ತಳಿದು। ಬೇಡಿದ ವಿಪ್ರರಿಗೆ ವೇದವವೀವಳಿಗೆ ತಾಂಬೂಲ ಸಹಿತ ಉಡುಗೊರೆ ಇತ್ತರು ಪಾವಕನ ಹುತವರ ರಚಿಸ್ಯಾರು।।ಶೋಭಾನೆ।।

ನಾರದರು ಧರ್ಮಜರು (ಅಶ್ವತ್ಥ ನಾರಾಯಣಸ್ತೋತ್ರ)

ನಾರದರು ಧರ್ಮಜರು ಈರ್ವರೊಂದಾಗಿ ಬಂದರು। ಮಂದಾಕಿನೀ ನದಿಯ ತೀರಕ್ಕಾಗಿ। ಕ್ಷೀರವಾರಿಧಿಯೊಳಗೆ ವೃಕ್ಷವಿರುತಿರಲು। ಧರ್ಮರಾಯನು ಕಂಡು ಅತಿ ಚೋದ್ಯ ಪಡಲು।। ಕೇಳಯ್ಯ ಧರ್ಮಜನೆ ಪಾಂಡು ನಂದನನೇ। ವಿವರಿಸಿ ಹೇಳುವೆನು ವಿಸ್ತಾರವಾಗಿ। ಅನಾದಿ ಅಶ್ವಥ್ಥ ಆ ಮೂಲದಲ್ಲಿ। ತ್ರೈಮೂರ್ತಿಗಳು ತಾವು ಸ್ಥಿರವಾಗಿಹರು।। ಮೂಲದಲ್ಲಿ ಬ್ರಹ್ಮವಾಸವಾಗಿಹನು। ಮಧ್ಯದಲ್ಲಿ ವಿಷ್ಣು ತಾಂಡವಾಡುತ್ತಿಹನು। ಅಗ್ರದಲ್ಲೇ ಶಿವನು ಅಭಯ ಕೊಡುತಿಹನು। ಬೇಡಿದವರಿಗೆ ಬೇಕಾದ ವರಗಳನ್ನು। ಸುವಾಸಿನಿಯರಾಗಿದ್ದ ಸುಗುಣೀಯರೆಲ್ಲಾ। ಲೇಸಾಗಿ ಮೈ ತೊಳೆದು ಮಡಿಗಳನ್ನೇ ಉಟ್ಟು। ಲೇಸಾಗಿ ಅರಳಿ ಪೂಜೆ ಮಾಡಿದರೆ। ಪುತ್ರರೂ ಪುರುಷರು ಸುಖದಿಂದ ಇರುವರು। ವೇದವಾನೋದುವ ಬ್ರಹ್ಮಚಾರಿಗಳು। ಆಸರಿಕೆ ಬೇಸರಿಕೆ ಇಲ್ಲದೇ ಹೋಗಿ। ಅಲಸದೇ ಈ ಅರಳಿ ಪೂಜೆ ಮಾಡಿದರೆ। ಕಾಲದಲಿ ಕಲ್ಯಾಣವಾಗುವುದೆಂದು। ಕೋಮಟೀಗರೀ ವೃಕ್ಷಕ್ಕೆ ಪೂಜೆಯನ್ನು ಮಾಡಿದರೆ। ಅರ್ಥಧನವೆತ್ತಿ ಸಂಪನ್ನರಾಗೋರು। ಕೊಂಕಣಿಗಳರಳಿ ಪೂಜೆ ಮಾಡಿದರೆ। ಅರ್ಥ ಜನ ಹೆಚ್ಚಿ ಸಾಮರ್ಥರಾಗುವರು। ಪತಿ ಅಳಿದ ಸ್ತ್ರೀಯರು ಬಾಲೆಯರು ತಪ್ಪದೆ ಹನ್ನೆರಡು ಪ್ರದಕ್ಷಿಣೆ ಹಾಕಿದರೆ। ಮುಕ್ತಿಯನ್ನೆ ಹೊಂದೋರು। ಇತಿ ಶ್ರೀ ಬ್ರಹ್ಮಾಂಡ ಖಾಂಡೇ ಬ್ರಹ್ಮನಾರದೇ ಸಂವಾದೆ ಅಶ್ವತ್ಥ ನಾರಾಯಣ ಸ್ತೋತ್ರಂ ಸಂಪೂರ್ಣಂ।।

ಗಜಮುಖನೆ ಕಾಮಿತಾರ್ಥವೀವನೆ (ಭಾರತ)

ಗಜಮುಖನೆ ಕಾಮಿತಾರ್ಥವೀವನೆ ತ್ರಿಜಗುಣಾನ್ವಿತ ಪಾದಪೀಠನೆ ತ್ರಿಜಗವಂದಿತ ಗಣಪ ಮಾಳ್ಪುದೇ ಮತಿಗೆ ಮಂಗಳವಾ।।ಕೇಳು ಜನಮೇಜಯ ಮಹೀಪತಿ ಪಾಲಿಸಿ ವೇದವ್ಯಾಸ ಮುನಿಪರೆ ಪಾಲಿಸಿದರವತಾರದಲಿ ಪಾಂಡವರ ಕೌರವರ ಜನನವನು।।ಶ್ರೀಲತಾಂಗಿಯ ರಮಣ ಶ್ರೀಕೃಷ್ಣ ಪಾಲಿಸಿದನರ ಗಿನಮನೆಯಲ್ಲೈವರು ಮೇಲೆ ಮದುವೆಯ ಮಾಡಿ ಕಾಯ್ದನು ಆದಿಪರ್ವದಲಿ।।1।। ರಾಜಾಸೂಯಯಾಗವನೆ ಮಾಡಿ ಧರ್ಮಜ ರಾಜ್ಯವನ್ನಾಳುತ್ತಿರಲು ಪಾಂಡವರು। ಜೂಜಿನಲಿ ಸೋಲಿಸಿದ ಪಾಂಚಾಲೆಯನು ಸಬೆಯೊಳಗೆ। ರಾಜವನಿತೆಯ ಭಂಗಪಡಿಸಲು ಮೂರು ಜಗತ್ಪತಿ ಲಕ್ಷ್ಮೀರಮಣನೆ ಶ್ರೀಜನಾರ್ಧನ ಕಾಯ್ದುಕೊಂಡಳನು ಸಭಾಪರ್ವದಲಿ।।2।। ದೇಶವನೆ ಬಿಟ್ಟು ಅಡವಿಯಲಿ ವನವಾಸವನೆ ಮಾಡುತಲಿರಲು ಪಾಂಡವರು ದೂರ್ವಾಸರ ಮುನಿಪನು ಬಂದು ಬೇಡೆ ಗ್ರಾಸವ ರಾಯ ಧರ್ಮಜನು ಆ ಸಮಯದಲಿ ಶ್ರೀ ಕೃಷ್ಣ ಶೇಷದಳವನೆ ಕೃಷ್ಣ ಮಹೇಶ ಪಾರ್ಥನಿಗಿತ್ತು ಕಾಯ್ದನು ಸರ್ವಾರಣ್ಯ ಪರ್ವದಲಿ।।3।। ಅಂದು ವಿರಾಟನ ನಗರಿಯಲಿ ಬಂದು ಇರುತ್ತಿರಲು ಪಾಂಡವರು ಸಹಿಳೇಂದ್ರಿಗಳು ಪಿಮಡಿದ ಕೀಚಕರನು। ಕೇಳಿ ಕುರುಪತಿಯು ಅಂದು ಗೋಗ್ರಾಣದಲಿ ಪಶುಗಳ ಸಂಜೇಲಿ ಹೊಡದೊಯ್ಯೊ ನರನೊಳು ಮತ್ತೆ ಮರಳಿಸಿ ತರುಗಳ ಕಾಯ್ದನಾ ವಿರಾಟಪರ್ವದಲಿ।।4।। ದೇವನಾರಾಯಣು ಕಪಟತನದಲಿ ಭಾವಿಸಿದ ನುದ್ಯೋಗ ಸಂಧಿಯ ಠೀವಿಯಿಂದಲಿ ಬಂದು ವಿದುರನ ಮನೆಯ ಪಾಲ್ಕುಡಿದು। ಕೌರವರ ಸಭೆಗೈದಿದನು ಶ್ರೀಕೃಷ್ಣ ಐದು ಗ್ರಾಮವ ಕೇಳೆ ಕೊಡದಿರೆ ದೇವಯುದ್ಧಕ್ಕೆ ಭಾಗವ ಮಾಡಿಕೊಂಡನು ಉದ್ಯೋಗ ಪರ್ವದಲಿ।।5।। ಕರಸಿದರು ಗಾಂಗೇಯ ಭೀಷ್ಮನ ಕರೆಸಿ ಸೇನೆಯ ಪಟ್ಟಕಟ್ಟಲು ಮೆರವಣಿಗೆ ರಣಭೂಮಿ ನಲವತ್ತೆಂಟು ಯೋಜನವ। ಕರಸಿದರು ಪಾಂಡವರು ಸೇನೆಯ ಎರಡು ಪಕ್ಷವು ಬೆರೆಸಿ ಕಾದಲು ಸರಳಮಂಟದ ಮೇಲೆ ಮಲಗಿದನು ಭೀಷ್ಮನು ಭೀಷ್ಮ ಪರ್ವದಲಿ।।6।। ಗುರುಗಳಿಗೆ ಪಟ್ಟಾಭಿಷೇಕವ ಅರಿತು ಮಾಡಿಸಿ ಕೌರವೇಂದ್ರನು ಧರೆಗೆ ಪದ್ಮ ವ್ಯೂವೊಡ್ಡಿತು ಪ್ರಾರ್ಥನಂದನನ। ತರಳ ತನದಲಿ ಹೊಕ್ಕು ಮಡಿದನಾ ನರನು ಜಯದ್ರಥನ ಕತ್ತರಿಸಿ ದ್ರೋಣನ ಶಿರವನಲಿದನಾ ದ್ರೋಣಪರ್ವದಲಿ।।7।। ವೀರಕರ್ಣಗೆ ಪಟ್ಟಕಟ್ಟಲು ವೀರ ನಾರಾಯಣನ ಕರುಣದಿ। ಮೂರು ಪುರವನು ಗೆದ್ದ ಹರತಾಂ ಗದೆಯನಾರ್ಭಟಿಸೆ।ಸಾರಥಿಯ ಮಾಡಿದರು ಶಲ್ಯನ ವೀರ ಅರ್ಜುನರೊಡನೆ ಕಾದಲು। ಧಾರುಣೆಗೆರಗಿ ರವಿಸುತ ಮಡಿದನು ಕರ್ಣಪರ್ವದಲಿ।।8।। ಸೂತಬಲನಳಿದುಳಿದ ಶುದ್ಧಿಯ ವ್ಯರ್ಥಾಯವಾಯ್ತೆನುತ ಕುರುಪತಿ ಪ್ರೀತಿಯಲಿ ಅಳಿದುಳಿದ ಬಲಗಳ ತಾನಾತು ಕಾಡುವೆನೆನುತ ಪ್ರೀಯಲಿ ಮಾರ್ಥೀಶನ ಯುದ್ಧದಿ ಕೌತುಕವಿದೇನೆನುತಲೆ ಆತ ಮಡಿದನು ಅರ್ಧದಿನದಲಿ ಶಲ್ಯಪರ್ವದಲಿ।।9।। ಷಡ್ರಥರ ಬಲವೆಲ್ಲ ಮುಗ್ಗಿದು ಒಡನೆ ಕುರುಪತಿ ಸಮರಕಾಳಗ ಪಿಡಿದು ಕಾದಿದ ಭೀಮಸೇನನ ಬಾಹುಬಲಗಳಿಂದ। ಪಿಡಿದ

ಗಧೆಯಲಿ ಕೆಡಹೆ ರಾಯರ ಬಿಡದೆ ಶಿಶುಗಳ ಶಿರವ ತರಿಯಲು ಕಡೆಯ ಕಾಳಗವಾಯ್ತು॥ ಭಾರತ ಗದಾಪರ್ವದಲಿ॥10॥ ಅಂಧಕನು ಕೇಳಿ ತಾ ಮನದಲಿ ಕೊಂದೇರಾಯರ ಕರೆಯಲ್ಪಟ್ಟು ಕಂದೆ ಬಾರೈ ಎಂದು ಕರೆದನು ಅಂದು ಕೌರವನ ಕೊಂದ ಭೀಮನ ಅಪ್ಪಿಕೊಂಡೆನೆಂದೆನಲು ತಂದು ಉಕ್ಕಿನ ಪ್ರತಿಮೆಯ ಮುಂದೆ ನಿಲ್ಲಿಸಿದ ರಾಯ ಕೋಪದಲೈತ್ಯಪರ್ವದಲಿ॥11॥ ರಣದೊಳಗೆ ಬಿದ್ದವರ ಹೆಂಡರುಗಳು ಮುಡಿಯ ಮಂಡೆಕೆದರಿ ದುಃಖಿದಿ ಒಡನೆ ಮರುಗಿ ಹಲುಬುತಿದ್ದರು ತಮ್ಮಯ ಪುರುಷರನೆ ಕಂಡು ಫಣೆಗೆ ಫಣೆಗಳನೊತ್ತಿ ಕಂಗಳ ಕುಣಿಕೇಲಿ ಜಲಸುರಿಯೆ ರಾಯರ ವನಜ ಮುಖಿಯರು ಮಡುವ ಬಿದ್ದರು ಸ್ತ್ರೀಯಪರ್ವದಲಿ॥12॥ ಅರಸು ಧರ್ಮಜನು ಭೀಷ್ಮಗೆರಗಿ ಕಂಬನಿ ತುಂಬಲು ನಿಜ ಗುರುಮಿತ್ರ ಜ್ಞಾತಿ ಬಾಂಧವ ಸಹೋದರರನೆ ಕೊಂದು। ಈ ಧರೆಯನಾಳುವದಕ್ಕಿಂತ ದೇಶಾಂತ್ರ ಹೋಗುವೆನೆನಲು ತತ್ವದ ಕಥೆಯನರುಹಿ ಜೀವವ ಬಿಟ್ಟರು ಆದಿಶಾಸನಾನು ಪರ್ವದಲಿ॥13॥ ಬಂದು ಕರ್ಮವನು ತೊಡೆಗೆ ಧರ್ಮಜಿ ತನ್ನ ದಾಯಾದ್ಯರಿಗೆ ದಶದಿನ ಬಂದರು। ಉಪಾಧ್ಯಾಯರು ವೇದವ್ಯಾಸ ಮುನಿಸಹಿತ। ಅಂದು ಅಸ್ತಿಯ ಮಂತ್ರದಿಂದಲೆ ಇಂದು ಏಕಾದಶಿಗೆ ದಶದಿನ ಬಂದರು ಭೂರಿಶ್ರಾದ್ಧವ ಮಾಡಿಸಿದರು ಶಾಂತಿಪರ್ವದಲಿ॥14॥ ತುರಗವನೆ ಶೃಂಗರಿಸಿ ಬಿಟ್ಟರು ಇಳೆಯ ರಾಯರ ಕರೆದಿ ಕಪ್ಪವ ತೈರಿಗೇನೆ ಕೈಕೊಳುತ ಬಂದರು ವೀರವಿಕ್ರಮರು।ಪರಿಪರಿಯ ಭಂಡಾರ ದ್ರವ್ಯವ ಅರಿತು ಹೇರಿಸಿ ವಿಪ್ರೊಡನೆ ಬಿಡದೆ ಅಶ್ವಯಾಗವ ಮಾಡಿಸಿದರಾ ಅಶ್ವಮೇಧವೆಂಬ ಪರ್ವದಲಿ॥15॥ ವರುಷ ಮೂವತ್ತಾರು ವರುಷ ಸ್ಥಿರದಿ ರಾಜ್ಯವನ್ನಾಳುತ್ತಿರಲು ಕಲಿಬರೆ ಕಲಿಯ ಕಾಣುತ ಬಿಟ್ಟರು ರಾಜ್ಯಾದಾ ಅಭಿಲಾಶೆಗಳನು। ಅರಿತು ನೆಡದರು ಸ್ವರ್ಗಾದ್ವಾದಿಯ ಬಳಿ ಹಿಡಿದು ಪಾಂಡವರು ಅರಸುಗಳು ತೆರಳಿದರು ಮಹಾಪ್ರಸ್ತಾನೀತವೆಂಬ ಪರ್ವದಲಿ॥16॥ ಕಲಿಯುಗದ ಭರವೇನೆನುತಲೆ ಕಲಿತವನೆ ಶ್ರೀಕೃಷ್ಣ ಯಾದವರ ತೊಲ್ಲಿಸಿದ ಕಿಚ್ಚಿನ ಒಳಗೆ ನುಗ್ಗಿಸಿದ। ಕೊಲ್ಲಿಸಿದ ಕದನವಾಡಿಸಿದ ಮನಕೆ ಮಗೆ ಮೊಳೆಗಾಯ ಒಡೆಯದಿರೆ ಇಳೆಯಭಾರವ ನೀಗಿ ಕಾಯ್ದನು ಮುಸಲ ಪರ್ವದಲಿ॥17॥ ಕೇಳು ಧರ್ಮಜ ನೀನು ಮಾಡದ ದಾನಧರ್ಮಗಳುಂಟೆ ಬಳಿತೇನು ನಿನ್ನಯ ವಿಧಿಯು ಹವಣಿಸಿತು ಈ ನರಕದೊಳಗೆ। ಕಡೆಯ ವೈತರಣೆಯಲಿ ಪುಷ್ಪಕ ಜಡಿದು ಬಿದ್ದವು ಯಮರಾಯರೊಡನೆ ವೈಕುಂಠಕ್ಕೆತೆರಳಿದಲು ಸ್ವರ್ಗಾರೋಹಣವೆಂಬ ಪರ್ವದಲ್ಲಿ ॥18॥

ಆದೌ ಪಾಂಡವ ಧಾರ್ತರಾಷ್ಟ್ರ (ಸಂಕ್ಷಿಪ್ತ ಮಹಾಭಾರತ)

ಆದೌ ಪಾಂಡವ ಧಾರ್ತರಾಷ್ಟ್ರ ಜನನಂ ಲಾಕ್ಷಾಗೃಹೇದಾನಂ। ದ್ಯೂತೇ ಶ್ರೀಹರಣಂ ವನೇವಿಹರಣಂ ಮತ್ಸಗೃಹೇ ವಧನಂ। ಲೀಲಾಗೋಗ್ರಹಣಂ ರಣೇವಿತರಣಂ ಸಂಧಿಕ್ರಿಯಾ -ಜೃಂಭಣಂ। ಭೀಷ್ಮದ್ರೋಣ ಸುಯೋಧನಾದಿ ಹನನಂ ಏತನ್ಮಹಾ ಭಾರತಂ॥

ಗಂಗೇನೂ ಭಗೀರಥನೂ (ಗೌರಿ-ಶಿವರಸಂವಾದ) ರಾಗ: ಮೋಹನ

ಗಂಗೇನೂ ಭಗೀರಥನೂ। ತಂದನೆಂಬ ಸಂಭ್ರಮಗೊಳ್ಳದೀರೇ। ತಂದೆನೇ ಚೆಲುವೆಯನೂ। ಶಿವತಾನೂ। ಕಂಜೆಡೆಯೊಳವಡಿಸಿದಾ॥ಪ॥ ಬಂದನೇ ಶಿವನು ತಾನೂ। ಬಾಗಿಲಾ ಮುಂದೆ ತಾ ಬಂದು ನಿಂತೂ। ರಂಭೆ ಕದವಾ ತೆಗೆಯೇ। ಹಾಗೆಂದರೇ ಬಂದು। ಕದವ ತೆಗೆದಳೂ॥1॥ ನಡುಮನೇಗೆದರು ಆಗೀ। ಮಾಣಿಕದ। ಎರಡು ಗದ್ದಿಗೆನಿಟ್ಟಳೂ। ಎರಡು ಗದ್ದಿಗೆ ಯಾರಿಗೇ। ಸತಿಗೆ ನೀ ಸರಿಗೆ ಕುಳ್ಳಿರುವೆ ಬಾರೇ॥2॥ ಮಣಿಯ ಮಕುಟದವಳಗಿನಾ। ಸ್ವಾಮಿನಿಮ್ಮಾ। ಮಡದಿಗೊಂದು। ನಿಮಗೆ ಒಂದು। ಮಡದಿ ನೀನೊಬ್ಬಳಲ್ಲೇ। ಇಲ್ಲದೊಂದು ವಡವೆಯನು। ಹೇಳದೀರೇ॥3॥ ಚಾಡಿಗಾರರ ಮಾತನೂ। ದೇವಿ ನೀ ಕೇಳಿ ಮುನಿಯಾದೇ ಇರೆ। ನಿನ್ನ ಕೂಡೆ ಆಡೋ ಸತಿಯರಾ। ವಡನುಡಿಯ ಬಾಯಿಲಾಡೋದ್ಯಾತಕೇ॥4॥ ನಿಷ್ಠೂರವನಾಡದಿರೇ। ಬೇವಿನಕಾಯಿ ಸತ್ಯವನು ಮಾಡಿಕೋ ಕಿಚ್ಚುನಾನಿಡುವೆ ಕಾಣೆ ಸರ್ಪನಾ। ಮುಟ್ಟಿ ಭಾಷೆ ಊದುವೇ॥5॥ ಕಿಚ್ಚು ನಿಮ್ಮ ಕಂಗಳೂ। ಸರ್ಪನಾ ತೊಡಿಗೆಯೇ ಆಭರಣವೂ। ಇಟ್ಟರೆ ಶಿವನಲ್ಲವೇ। ಮರುಳಾದೆ ಸೃಷ್ಠಿಗೀಶ್ವರನೇ ಕೇಳೂ॥6॥ ಒಬ್ಬ ಗಂಡಿಗೆ ಹೆಂಡಿರೂ।

ಲೋಕದೊಳಗಿಬ್ಬರನು ಉಂಟೆಂಬರೇ। ಕೊಟ್ಟೆದಾನವನು ಬೇಡೇ। ಗಂಗೇನೀ ಕೊಬ್ಬದೆ ಇಳಿ ಎಂದಳೂ।।7।। ಇಳಿದಳ್ ಗಂಗಾ ದೇವಿಯೂ। ಅಕ್ಕನಾ ಎದುರಲೀ ಬಂದು ನಿಂತೂ। ತೊಡೆಯನೇರಿದಳು ಗೌರೀ। ಈಶ್ವರನ ಜಡೆಯನೇರಿದಳು ಗಂಗೇ।।8।। ಆ ಕಡೆಯಲೆರಡು ಕಂಭಾ। ಸಮುದ್ರದಾ ಕಡೆಯಲೆರಡು ಕಂಭಾ। ಮುತ್ತಿನಂಥಾ ಉಯ್ಯಾಲೆ। ಗೌರಮ್ಮ ಹತ್ತಿ ಆಡಿದಳೂ।।9।। ತೂಗು ತೂಗೆನ್ನುಯ್ಯಾಲೇ ತೂಗಿದರು। ಹರನು ಪಾರ್ವತಿ ಸಹಿತಲೇ ಆತನಾಡಿದನುಯ್ಯಾಲೇ। ಶ್ರೀ ಸೋಮನಾಥನಾಡಿದನುಯ್ಯಾಲೇ।।10।। ಲಂಕೆಗ್ದಾರಿದ ಉಯ್ಯಾಲೆ ರಾವಣನ ಬಿಂಕ ಮುರಿಯಿತು ಉಯ್ಯಾಲೇ। ಪಿಡಿದು ಸತಿಯರು ತೂಗಲೂ। ಉಯ್ಯಾಲೆ ಜಡಿದು ಲಂಕೆಗೆ ಹಾರಿತೂ।।11।।

ಇಂತಿ ಶ್ರೀ ಸಿದ್ಧಿವಿನಾಯಕಗೊಂದಿಸಿ (ಧೃವಚರಿತ್ರೆ)

ಇಂತಿ ಶ್ರೀ ಸಿದ್ಧಿವಿನಾಯಕಗೊಂದಿಸಿ ಶಾರದೆಯ ಬಲಗೊಂಡು ಉತ್ತಾನ ಪಾದನ ರಾಯನ ತನುಜಾತವಾದಂತ ಧೃವನ ಚರಿತ್ರೆಯ ಪೇಳ್ವೆನೆಂದರೇ। ಉತ್ತಾನ ಪಾದರಾಜನ ಪಟ್ಟಣದೊಳು ಅತ್ಯಂತ ಭೋಗದಿಂದ ಬಿತ್ತಿ ಬೆಳೆವ. ನವ ಧಾನ್ಯಗಳು ಸಂತೃಪ್ತಿಯೊಳಿರುತಿರಲು।। ಹಲವು ಧಾನ್ಯಗಳುಂಟು ಕೊಟ್ಟುತಿಂಬುವರಿಲ್ಲ, ಸಿರಿಯು ಸಂಪತ್ತುಂಟು ಕೊಡುವವರೊದ್ದರತಾಗಿ ಬೇಡಿ ತಿಂಬುವರಿಲ್ಲ। ದೊರೆಯ ಪಟ್ಟಣದೊಳಗೆ।। ಒಂದು ದಿವಸ ಭೂಪನೊರೆದ ಓಲಗದಲಿ ತಂದು ದರ್ಪಣವ ನೋಡಿ ಸಂದಿತು ಕಾಲವು ಕಂದರಿಲ್ಲದ ಮೇಲೆ ಆನಂದಗಳೇಕೆಂದು ಜಪ, ತಪ, ಹೋಮ, ನೇಮಗಳೆಲ್ಲಾ ನಡೆಸಿಯೇ ಚಪಲಾಕ್ಷ ನಂದನನು ಅಪರಿಮಿತ ಹರಿಭಜಿಸುತ್ತ ಸುತರ ಪಡೆವೆನೆಂದನು।। ಬ್ರಾಹ್ಮಣರೆಲ್ಲಾ ಕೂಡಿ ವೇದಮಂತ್ರವನ್ನೇಳಿ ಮಾವಿನ ಫಲವ ತಂದು ಈಗ ನಿಮ್ಮ ಹಿರಿ ಅರಸಿಗೆ ಕೊಡುವುದೆಂ ತೆಂದರು. ಅಂದ ಮಾತನೆ ಕೇಳಿ ಬಂದಳೆ ಸುರುಚಿಯು ತಂದು ಕೊಟ್ಟ ರಸ ಫಲವ ಹಿಂಡಿ ಸವಿ ರಸವನು ಭುಂಜಿಸಿದಳು ಹರುಷದಿಂದ।। ಹಿಂಡಿದ ಗೊರೆಟೆಯ ಅಂಗಳದಲೀ ಬಿಸುಟು।। ಕಂಡನೇ ಮಂತ್ರಿ ತಾನು ಕೊಂಡು ತಮ್ಮಕ್ಕಗೆ ಕೊಡಬೇಕೆನುತಲಿ ತಂದು ಬಚ್ಚಿಟ್ಟನಾಗ। ಸೂತಕದ ನಾಲ್ಕು ದಿವಸ ಕಳೆದು ತನ್ನಯ ಹೃದಯ ತುಂಬಿಸಿಕೊಂಡು ಕೊಳದಲ್ಲಿ ಮಿಂದು ಭಾಸ್ಕರನಿಗೆ ಕರವ ಮುಗಿದು ಕೊನೆಗೆ ದಾಸಿಯ ಕಳುಹಿದಳು।। ಅಂಜುತಾ ಅಳುಕುತ್ತಾ ಬಂದಳಾ ದಾಸಿಯು, ಕಂಡಳೆ ಸುರುಚಿಯ ತಾನು। ಇಂದಿಗೆ ಅಣಿಯಲ್ಲಾ ಕೊಂದು ನೂಕಿರವಳ ಹಾಗೆಂದು ನುಡಿದಳು।। ಕಂಗಳ ಕಣ್ಣೀರ ಸುರಿಸುತ್ತ ಬರುವವಳ ಕಂಡನೆ ಮಂತ್ರಿ ತಾನು ತಂದ ಗೊರಟಯ ಫಲವನು ಕೊಡು ನಮ್ಮಕ್ಕಗೆ ಒಡಗೊಂಡು ಬರುವ ರಾಜನು ಹಿಂಡಿಯೇ ಅಲ್ಪ ರಸ ಹೋಯಿತಲ್ಲದೆ ಗಂಡುಫಲವು ಸಿಕ್ಕಿದೆ ಹಿಂದಿನ ಸುದ್ದಿಯ ಎಣಿಸದೆ ಮನದಲಿ ಆನಂದದಿಂದಿರಿ ಎಂದನು।। ದಾಸಿ ಫಲವ ತಂದು ಕೊಡಲು ಸುನಿತೆ ತನ್ನಯ ಮನದ ಕ್ಲೇಶವನ್ನು ನೆನೆದು ಮತ್ತೇನೆಂದು ಪ್ರಲಾಪಿಸುತ್ತಿದ್ದಳು। ಎಲೆ ದಾಸಿ ಕೇಳೇ ಎನ್ನೊಡಲ ಉಬ್ಬಸವ ಯಾರಿಗೆ ಉಸುರಲೇ ಈ ದುಃಖಗಳ ಸುಳುವ, ನಾ ಕಾಣೇನು ಪತಿಯ ಪಾದವನು ಹಣ್ಣಿನ ಸಿಪ್ಪೆ ಮೆದ್ದರೆ ಗರ್ಭ ಉತ್ಪತ್ತಿಯಾಗುವುದೇ ಸ್ವಪ್ನದಿ ಕಾಣೇನು ಪತಿಯಪಾದವನು ಮತ್ತೆ ಈ ಸುದ್ದಿಯ ಸುರುಚಿಕೇಳಿದರೆ ನಕ್ಕು ಹಾಸ್ಯವ ಮಾಡಿ ನಗುವ ತೆರನಾಯ್ತು।। ಅಮ್ಮಾ ನೀವು ಲಾಲಿಸೆ ಎನ್ನ ಭಿನ್ನಪವ ನಿಮ್ಮ ಸೋದರ ಮಂತ್ರಿ ಎಂಬಾತ ದೊರೆಯನ್ನು ಪ್ರಯತ್ನದಿಂದೊಡಗೊಂಡು ಬರುವನು ದುಮ್ಮಾನವನು ಬಿಟ್ಟೆ ನಿರ್ಮಲರಾಗಿರಿ ಎಂದ ಮಾತನು ಕೇಳಿ। ಅತಿ ಹರುಷದಿಂದ ಎದ್ದು ಮಡಿಯನುಟ್ಟು ಹರಿಯ ಧ್ಯಾನಿಸುತ ತಂದ ಮಾವಿನ ಫಲವನು ಬೀಜ ಸಹಿತ ಭುಂಜಿಸಿದಳು। ಪತಿಯೇ ಗತಿ ಎನುತ ಹರುಷದಿಂದ ಹರಿಯ ಧ್ಯಾನಿಸುತ ಇದ್ದಳು ಸುನೀತಿ ಸಂಭ್ರಮದಿ।। ಉತ್ತಮ ದೊರೆ ಎನ್ನ ಬಿನ್ನಪವ ಕೇಳಿ ಗಜ, ಸಿಂಹ, ಬಂದುವನದ ಮಧ್ಯದಲಿ ಸುತ್ತಿತ್ತಿವೆ। ಬೇಟೆಯ ನಾಡ ಬೇಕು ಎಂದೆನುತ ತಟ್ಟನಾಗಲೆ ಮಂತ್ರಿ ನುಡಿದನೇ ನಗುತಾ।। ಆಳು ಮಕ್ಕಳು ಪ್ರಜೆಯು ಪರಿವಾರ ಸಹಿತ ಕೋವಿ ಬಿಲ್ಲು ಬಾಣಗಳನು ಪಿಡಿದು ಹೋಗಿ ವನದಿ ಮಧ್ಯದಲಿ ಬೇಟೆಯನು ಆಡುತಲಿರೆ ಕಾರುಗತ್ತಲೆಯು ಕವಿಯೆ ಸೋನೆ ಮಳೆಯು ಸಿಡಿಲು ಮಿಂಚುಗಳು ನಾಲ್ಕು ದಿಕ್ಕಿಂದ ಆರ್ಭಟಿಸುತ್ತ ಬರಲು ತಟ್ಟನೆ ರಾಯ ಮಂತ್ರಿ ಕೇಳೆಂದ।। ಹೊತ್ತು ಹೋಯಿತು ಕತ್ತಲೆ ಕವಿಯಿತು ಬಟ್ಟೆಗಳು ನೆನೆದವು ಬಹು ಬಳಲಿಕೆಯಿಂದ ಅರ್ಥಿ ಎಂದೆನೆಲು ಎನ್ನ ಕರೆದು ಕೊಂಡ್ಹೋಗು ಎಂದ।। ಆಗಲೇ ಮಂತ್ರಿಯು ನಸುನಗುತಲೆಂದ ವೇಶ್ಯೆಯ ಮನೆ ಇದೆ ಎಂದು

ಹರುಷದಲಿ। ವೇಶ್ಯೆಯ ಮನೆಯು ಯಾವುದೆಂದೆನುತ ರಾಯ ಬಹಳ ಹರುಷದಿಂದ ಆಳು ಮಕ್ಕಳು ಪ್ರಜೆಯು ಪರಿವಾರ ಸಹಿತ ಹೋದಾರಾಗಲೇ ಸುನೀತೆಯರ ಮನೆಗೆ।। ಭಕ್ತಿ ಭಾವದಲಿ ಸುನೀತೆ ಸಂಭ್ರಮದಿ ಮುತ್ತಿನ ಗಿಂಡಿಯಲಿ ಉದಕವನೆ ತುಂಬಿ ಚಿತ್ತದೊಲ್ಲಭನ ಪಾದವನು ತೊಳೆದು, ರತ್ನಪೀಠದಲಿ ಕುಳಿತ ರಾಜಗೆ ಬಾಳೆಲೆಗಳನು ಹಾಕಿ, ಮುದದಿಂ ಮೃಷ್ಟಾನ್ನವ ತಂದು ಬಡಿಸಿದಳೆ।। ಗೆಳೆಯರೆಲ್ಲಾ ಉಂಡರಾಗಲೇ ಬಹಳ ಸಂತೋಷದಿಂದ, ಉಂಡು ಕರಗಳ ತೊಳೆದು ತಾಂಬೂಲ ತಿಂದು ಬಂದು ಮಂಚದ ಮೇಲೆ ಕುಳಿತನೇ ರಾಜ।।15।। ಹತ್ತಿರ ನಿಂತಿದ್ದವಳ ದೃಷ್ಟಿ ನೋಡಿ, ಮತ್ತಾಗ ಮಂತ್ರಿಯ ಕರೆದು ಕೇಳಿದನು ಪ್ರತ್ಯಕ್ಷ ಲಕ್ಷ್ಮಿಯೋ, ಸರಸ್ವತಿಯೋ, ಪಾರ್ವತಿಯೋ, ಗುಟ್ಟಾಗಿ ಹೇಳೆನ್ನೊಡನೆ ಇಂತೆಂದ। ಪರಮ ಪತಿವ್ರತೆಯೋ, ಅರುಂಧತಿಯೋ, ಭಾಗೀರಥಿಯೋ ಹರುಷದಿಂದ್ಹೇಳೆನ್ನೊಡನೆ ಇಂತೆಂದ। ದೊರೆಗೆ ಪಟ್ಟದ ರಾಣಿ ಸುನೀತೆ ಎಂದ್ಹೇಳಿ ಮಂತ್ರಿ ನುಡಿದಲ್ಲಿಂದ ನಡೆದ।।

ಇತ್ತ ಬಾರೆನುತಲೆ ಪ್ರತ್ಯಕ್ಷ, ಪತಿರಾಯ ಹಸ್ತವನ್ಹಿಡಿದನಂಗನೆಯ ದತ್ತಕ್ಕೂ-ದ್ರವ್ಯಕ್ಕೂ ಬಂಗಾರ ಲಕ್ಷ್ಮಿ-ಗೂ ತಕ್ಕವಳಲ್ಲ ತಾನೆಂದ್ಲು। ಮುಂದೆ ಬಾರೆನ್ನುತಲೆ ಭೂಮಂಡಲ ಪತಿರಾಯ ಅಂಗನೆಯ ಕರಹಿಡಿದೆಳೆದು ದುಂಡುಮುತ್ತಿನ ಹಾರ ಪದಕವನು ಅಂಗನೆಯ ಕೊರಳಿಗ್ಹಾಕಿದನು।। ಮರೆಯಬೇಡ ದೊರೆಯೇ ಎನ್ನಸಿರಿಯೇ ಆಕೆ ಮೋಹದವಳು ಆಕೆಯ ರೂಪಿಗೆ ಸ್ವೀಕರಿಸಿ ಎನ್ನ ನಿರಾಕರಿಸಿ ಎನ್ನೀತರ ಮಾಳ್ಪರೆ ಎಂದಳಾಕೆ।। ಅಂಜಬೇಡ ಬಾಲೆ ಗುಣ ಶೀಲೆ ಅಂಜುವುದೇದಕೆ ಕುಂಜ ಲೋಚನೆ ಕಡು ಚೆಲ್ವೆ ನಿನ್ನನ್ನು ಬಿಟ್ಟು ಪೋಪೆನೇನೆ ಕರ್ಪೂರ ಕೈರಸ ಬಳಿಕ ತಾಂಬೂಲವ ಕೊಟ್ಟಳೆ ತನ್ನ ಕೊಟ್ಟಳೆ ತನ್ನ ಪತಿಗಾಗ ಪಟ್ಟದೊಲ್ಲಭನ ಪಾದಸೇವೆಯ ಮಾಡಿ ಪಟ್ಟೆ ಮಂಚದಲಿರುತಿರಲು।। ಆಗ ಹೆಂಡತಿಯ ಸಂಗ ಸಕ್ಕರೆಯ ಸವಿದಂತೆ ರಾಣಿಯ ಸಂಗ ಸುಖ ಸವಿದರಾಯ ಸಜ್ಜೆಯ ಬಿಟ್ಟು ಹೊರಗ್ಹೊರಟನಾಗಲೆ ಕಾಲನು ನಗುತಿದ್ದನಲ್ಲಿ ಕೋಗಿಲೆ ಕೂಗಿದವು ಆಗಲೆ ಭೂಪಾಲ ಬೇಗದಿಂದೆದ್ದು ಮುಖ ತೊಳೆದು ಆಳು ಮಕ್ಕಳು ಪ್ರಜೆ ಪರಿವಾರ ಸಹಿತಲೆ ಹೋದನೆ ತನ್ನರಮನೆಗೆ।।20।। ಪೊಡುವೀಶ ಪತಿರಾಯ। ಮಡದಿ ಮನೆಗೆ ಬಂದು ದಿನವು ನಕ್ಷತ್ರ ವಾರಾಗಳಾಗಿ ಅರುಣಾನ ಉದಯಕಾಲದಲಿ ಬಂದಾಗ ಸುರುಚಿಯು ದೃಷ್ಟಿಸಿ ನೋಡಿದಳು ಕಂಡಿದಿದ್ಯಾತಕೆ ನಿಮ್ಮ ಮುಖವು।। ಮುತ್ತಿನ ಮಣಿ ಕೇಳೆ ನಿನ್ನ ಬಿಟ್ಟು ನಾನು ದಿವಸವೆರಡಾಯ್ತೆಂದ, ಚೆನ್ನಾರ ಚೆಲುವೆ ಕೇಳೆ ನಿನ್ನಂಗದ ಭಾವಕೆ ಚೆನ್ನೆ ಬೇರಾಗಿ ಹೋದೆನೆ ನಾನೊಲಿದೆ ಇಲ್ಲಿಗೆ ಬಂದೆ ಎನ್ನೊಳ್ಯಾತಕೆ ಪರಿಹಾಸ್ಯ, ಚಿಂತಿಸಲೇತಕೆ ಹರಿಯ ಕರುಣದಿಂದ ಕಾಂತೆ ಮೃದುವಾಗು।।

ಉನ್ನಂತ ಸುನೀತೆ ಅತಿ ಹರುಷದಿಂದ ತನ್ನ ಮನೆಯೊಳಗೆ ಸುಖದಿಂದವಿರುತಿರಲು ಅನ್ನವನ್ನುಣ್ಣದೆ ಅತಿ ಬಳಲಿಕೆಯಿಂದ ತನ್ನ ಮನಸ್ಸಿಗೆ ಗರ್ಭ ಚಿಹ್ನೆ ತೋರುತಿರಲು। ಬೆಳಗಿದ ದರ್ಪಣವ ತೊಳದಿಟ್ಟಂತೆ ನಾರಿ ದಿನ ದಿನಕೆ ಶೋಭಿಸುತ ಅಂಗನೆ ಸುನೀತೆ ಆದ ಆರೇಳು ಮಾಸಗಳು ಆರ್ತಿಯಲಿ ಪ್ರೇಮದಿಂದಲೇ ಕಳೆದು ಅತಿ ಹರುಷದಲಿ।। ಮಂತ್ರಿ ಭೂಪಾಲಕನಿಗ್ಹರುಹ ಬೇಕೆಂದು ಓಲಗದಿ ನುಡಿಯೇ। ನಿಂತು ಘರ್ಜಿಸಿದನು ರಾಯ ಇದೇನು ಪರಿಯೇ। ತಟ್ಟನಾಗಲೇ ಮಂತ್ರಿ ಪುರಕೆನಡೆತಂದು ಓಟೆಯನು ತಂದು ಮುಂದಿಟ್ಟು ಮುದದಿಂದ ನೋಡಿಕೊಂಡನೆ ರಾಯ ತನ್ನ ಮನದೊಳಗೆ।। ಆಗಲಿ ಅತಿ ಉತ್ಸಾಹಗಳಿಂತೆಂದ ಹಾದಿಹಾದಿಯೊಳಗೆ ಬೀದಿ ಬೀದಿಯೊಳಗೆ ಮಕರ ತೋರಣವು। ದಿಕ್ಕುದಿಕ್ಕಿನ ನೃಪರ ಕರೆಸಿ ಸೀಮಂತ ಉತ್ಸವವನು ನಡೆಸಿದನುರಾಯ। ಉಂಡು ಭೂಸುರರೆಲ್ಲ ಹರಸುತ್ತ ಮುದದಿಂದ ಚಂದದಿಂದೆಲ್ಲರೂ ನಡೆದರವರ ಮನೆಗೆ।। ಇತ್ತಲಾ ಸುರುಚಿಗೆ ಉತ್ತಮನೆಂಬ ಮಗ ಜನಿಸಿ ಧರಣೀಶನದಕೆ ಹಾರೈಸೆ ಧರಣೀಶರಿಗೆ ಓಲೆ ಬರೆದು ಬಾಲಗೆ ನಾಮಕರಣದುತ್ಸವ ಮಾಡಿಸಿದ। ಅದಕೇಳಿ ಮರುಗುತಿರೆ ಉರಿದುಂಟಿ ಎನುತಲೆ। ಕೋಲು ಚಿನ್ನಿಗೆ ಮುರಿದಂತೆ ಬೀಳಾಗಿ ಸವಿದ ಚಿತ್ತಾರದ ಹೊರೆಯಂತೆ ಕಾಯಲಾಗ ಅಂಗನೇ ಸುನೀತೆಗಾಗಲೆ ಸಂದವೇ ನವಮಾಸ ಬೇಗದಿ ಅಂಗನೆಗೆ ನೋವು ಬೇನೆ ಕೆಣಕಿ ಬಳಲುತಿಹಳು ।।

ಹುಟ್ಟಿದೆನು ತಾಯ್ತಂದೆ ಬಸುರಲಿ, ಸಿಕ್ಕಿದೆನು ಕಾಮನ ಬಲೆಯಲಿ, ಇತ್ತ ಬಾರೆನ್ನುವವರ ಕಾಣೆಸು ಕೇಳೊ ಶಿವನೆ।।
ಸೂರ್ಯ ಚಂದ್ರಮ ರನ್ನೆ ಹೋಲುವ ಕುಂದಣದ ಪ್ರತಿಮೆಯನು ಹೋಲುತ ಗಂಡು ಕುವರನ ಪಡೆದಳು ಮಂದಗಮನೆ।।
ಕುಸುಮ ಜಾಜಿಗಳೆಲ್ಲಾ ಅರಳಲು ವಸುಧೆ ತಲ್ಲಣಿಸುತ ನಲಿಯುತ ಕುಸುಮ ವೃಷ್ಟಿಯ ಕರೆಯೇ ಬೇಗದಿ ಸುರರು।।

ಶಶಿಕಾಂತ ಕೋಟಿಯನೆ ಹೋಲುವ ಸುತನ ಪಡೆದಳು। ರಾಣಿ ಎನುತಲೆ ವಸಗೆಯನು ತಂದಾಗ ಹೇಳ್ದರು ಚಾರರು॥ ಭೂಪ ನದಿಯಲಿ ಮಿಂದು ಬಂದನು ಜಾತಿ ಪಟ್ಟೆಯನ್ನೊದ್ದು ಬೇಗದಿ ಜಾತಕವ ತೆಗೆದೋದಿರೆಂದನು ಜ್ಯೋತಿಷ್ಯರೊಡನೆ ಚಂದದಲಿ। ಬೃಹಸ್ಪತಿಯು ಬೇಗದಿ ನಿಂದು ಜನನವ ಗುಣಿಸಿ ಹೇಳಲು ಒಂದು ಯುಗ ಸಾಮ್ರಾಜ್ಯ ಆಳುವ ಸಂದ ಮೇಲೆ ವಿಷ್ಣು ಕಿಂಕರ - ನಾಗುವನು ಧೃವನು-॥

ಪಟ್ಟಕಟ್ಟಲು ಕಂದನೆಂದು ಅರುಹೆ ಭೂಪಗೆ, ನಿಂದು ದಕ್ಷಿಣ ಉಡುಗೊರೆಗಳ ಕೊಟ್ಟು ನಡೆಸಿದ। ಪ್ರೇಮದಲಿ ದಶರಾತ್ರಿ ಕಳೆಯಲು ಆಗ ಮಜ್ಜನ ಮಾಡಿ ಸುನೀತೆಗೆ ಹೆರಳನೇ ಹೆಣೆದರು ನಾರಿಯರಂದು॥ ಉತ್ತಾನ ಪಾದರಾತ್ಮನ ಧ್ರುವ ಜೋಜೋ। ಸತ್ಯನೀ ಕಂದ ಧರೆ ಶುಭ ಜೋಜೋ। ಉತ್ತಮ ಗಣೇಶ ಕೀರ್ತಿಯೇ ಜೋಜೋ ಭಕ್ತ ವತ್ಸಲನ ಒಲಿಸಿದಾತನೆ ಜೋಜೋ। ಮಾತೇಯ ವಚನವ ಶಿರದೊಳಾಗಾಂತು ಭೂತಳ ದೊಳಗೆ ಸಂಸಾರದ ಭ್ರಾಂತು ಭೂತಳಧಿಪನ ಕಂಡರೆ ಶುಭವೆನಿಸು ಪ್ರತ್ಯಕ್ಷನಾಗೆಂದು ರಕ್ಷೆಯ ನಿಟ್ಟಿರುಹರಸಿ॥ ಮಾತೆಗೆ ಬಂದ ಕಷ್ಟವ ಪರಿಹರಿಸು ಭೂತಳದೊಳಗೆ ಸತ್ಯವನಾಚರಿಸು ಭೂತಳ ಪತಿ ಎಂಬು ಹೆಸರ ಸ್ವೀಕರಿಸಿ ಪ್ರಖ್ಯಾತನಾಗಿ ಬಾಳೆಂದರ್ಹರಸಿ ಜೋಜೋ॥ ಜಗ ಜಗಿಸುವ ಹೊನ್ನ ತೊಟ್ಟಿಲೊಳಗೆ ಹೊಡೆ ಮಗ್ಗುಲಾಗಿ ಬಾಲ ಆಡುತಿರಲು ಕೊಂಡಳು ಕೊಳಾಲು ತಾರಮ್ಮಯ್ಯಾನಾಡುತ ತಂದು ತೋರಮ್ಮ ಗುಬ್ಬಿ ಎಂದಾಡುತಿರಲು ತಪ್ಪೆಜ್ಜೆ ನಿಕ್ಕು ತರಳರೊಳಾಡುತ ದೊರೆ ಇದ್ದ ತಾವಿಗೆ ಬಂದ ಧೃವನು॥ ಆಡುತ್ತಾ ಆಡುತ್ತಾ ಬಂದ ಮಕ್ಕಳೊಡನೆ ದೊರೆ ಇದ್ದ ತಾವಿಗಾಗಿ ಬಂದಾನೆ ಧೃವನು ಪುತ್ಥಳಿಯಂದದಿ ಹೊಳೆಯುತ್ತಾ ತಮ್ಮಯ್ಯನ ಹತ್ರೆ ನಿಂತಿದ್ದಾನಾಗ ಮಗನೆಬಂದೆಯ ಎನ್ನ ಮಗನೆ ಎಂದೆನುತಲೆ (ಪಿಡಿದೆತ್ತಿಕೊಂಡ) ಬಾಲನ ಕಡು ಮೋಹದಿಂದಲೆ ಪಿಡಿದೆತ್ತಿ ಬಾಲನ ತೊಡೆಯ ಮೇಲಿಟ್ಟುಕೊಂಡನು॥36॥ ಅಪ್ಪಿ ತೊಡೆಯೊಳು ಕುಳ್ಳಿರ್ಪ ಬಾಲಕನ ದೃಷ್ಟಿಸಿ ನೋಡಿದಳು ಸುರುಚಿ ಸಿಟ್ಟಿನಿಂದಲೇ ಬಂದು ಸುನೀತೆಯ ಬಾಲನ ಎತ್ತಿ ಬಿಸುಟ್ಟಳಾಗ। ಎಲವೋ ಬಾಲಕ ನೀನು ಸುಮ್ಮನೆ ಯಾರ ತೊಡೆ ಎಂದುಬಂದು ಕುಳಿತೆ ವರಿದೆ ಹೋಗು ಸುಮ್ಮನೆ ಎನುತ ಬಾಲನ ಹೊರಡಿಸಿದಳು॥ ಕೂಳಿಗೆಬಿದ್ದ ಸುನೀತೆಯ ಮೇಲೆ ಪೌರುಷ ಬಂತೇ ಈಗಲೆ ತಾಳು ಅವಳಿಗೆ ತಕ್ಕ ಶಿಕ್ಷೆಯ ಮಾಡಿಸುವೆನು. ಕಟ್ಟ ಸುನೀತೆ ಮನೆಯ ದಾಸಿಯ ಭಿಕ್ಷೆ ಎನುತ ನಾಳೆ ಬಂದರೆ ಕುಟ್ಟಿ ಬಾಯಮೇಲೆ ಹೊಡೆದು ಕಳಿಸುವೆ ಚಿಕ್ಕಮ್ಮ ನಿಮ್ಮ ಮನಕೆ ಸಿಟ್ಟಾಗದಿರಿ ನೀವು ಉತ್ತಮ ಸಹಜವಾಗಿ ಸಾಮ್ರಾಜ್ಯವನಾಳುವ ನೆಂದು ತಿಳಿಯಿರಿ॥

ಹೆತ್ತ ತಾಯಿತಂದೆ ಯಾರು, ಮಕ್ಕಳು ನಾವು ಯಾರು ಪ್ರಪಂಚದಿ ಹಡೆದ ತಂದೆ ಮಹಾವಿಷ್ಣು ಪಡೆದ ಕಾಂತೆ ಮಹಾಲಕ್ಷ್ಮಿ ನಿಮ್ಮ ತೊಡೆಯೇರುವಾತನಲ್ಲ ತಾಯೇ ನೀವು ಕೇಳಿ ನರಹರಿಯ ತೊಡೆಯಮೇಲೆ ಹೋಗಿ ಕುಳ್ಳಿರುವೆ ನಾನು ಜಗದೊಡೆಯನ ಪಾದ ಸೇವೆಗೆ ಐಕ್ಯವಾಗಿ ಜಗದಿ। ಮುದ್ದು ಮಗನ ನಿರೀಕ್ಷಿಸಿ ಸುನೀತೆ ತನ್ನ ಮನದ ಕ್ಲೇಷವನು ಮತ್ತೇನೆಂದು ಪ್ರಲಾಪಿಸುತ್ತಿದ್ದಳು. ಅರಗಿಳಿಯೇ ನಾನು ನಿನ್ನ ಅರಸಿ ದಣಿದೆನಲ್ಲ ಮನೆ ಬಿಟ್ಟು ಎಲ್ಲಿಗಾಗಿ ಹೋಗಿದ್ಯಾತಕೋ, ಊರ ಹುಡುಗರ ಕೂಡಿ ಜಗಳ ಆಡಬೇಡವೆಂದು ನಾನು ಹೇಳಲಿಲ್ಲವೇ ನೋ ಬಾಲಾ। ಬೇಡ ಬೇಡೆಂದು ನಾನು ಅರಿಯದೇ ಬೈದು ನೂಕಿದವರು ಯಾರೋ, ಹೀಗೆ ಅಳುವರೇನೋ ಬೇಡ ಬೇಡೆಂದು ಕಂಬನಿ ಸುರಿಸಿ ಕರುಬುತಿರಲು। ಜನನಿಯ ಪಾದಕ್ಕೆರಗಿ ಧೃವ ಎಂದನು। ಉಸುರಾಡದೆ ನಮ್ಮಮ್ಮ ನಾನು ಬಸವಳಿದೆ, ನೀನು ಎಸೆವ ಮಾತಿನ್ನೇನು ಬಿಂಕ ಎನ್ನ ಮೇಲೇ ದಾತ ಉತ್ತಮ್ಮನ ಎತ್ತಿಕೊಂಡು ಉತ್ಸವದಿಂದ ಕುಳ್ಳಿದ್ದ ನಾನು ಅತ್ತು ಕಾಡುತ್ತಲ್ಹೋಗಿ ಎತ್ತಿಕೋ ಎಂತೆಂದರೇ ಕಡು ಮೋಹದಿಂದಲೆನ್ನ ತೊಡೆಯೊಳಿಟ್ಟುಕೊಂಡನಮ್ಮ। ಕಾಣುತ್ತ ಚಿಕ್ಕಮ್ಮ ಬಂದು ಏಳು ಏಳೆಂದಳು ನಾ ಏಳದೆ ಕುಳ್ಳಿರಲು ಕೊರಳ ಹಾರ ಹಿಡಿದೆಳದು। ಮಕ್ಕಳೀರ್ವರು ಸರಿಯೇ ಅಂತ ಅಕ್ಕರೆ ಇಲ್ಲದೆ ನೂಕಲಾಗಿ ಅಳುತ ಬಂದೆ ಲಕ್ಷ್ಮಿರಮಣ ಬಲ್ಲಾ ಯಾರ ಮಕ್ಕಿಗೆರಡು ಬಗೆದೇನು, ಮಗ ನಿನ್ನ ಯಾರು ಕಂಡು ಕರು ಬಿದ್ದರೋ ತಾಯ್ ಮಕ್ಕಳಗಲಿಸಿದೆನೋ। ಎನಗೆಂತ ಬಾಲನಗಲುವ ಹೊತ್ತಾಯಿತೇ ವಿಧಿಯೇ ಪಂಚ ವರ್ಷಗಳಿಲ್ಲವೇ ಮಗ ನಿನಗೆ ಇಂಥ ಬವಣೆಯು ಬಂದಿತೆ ವನವಾಸಕೆ ತೆರಳುವ ಹೊತ್ತಾಯಿತೇ। ಹಗೆಯವರ ಮನಕೆ ಸಂತೋಷವಾಯಿತೇ ವಿಧಿಯೇ ಕಾನನಕ್ಕೆ ಹೇಗೆ ಪೋಪೆ ಮಗನೀನು ಆಹಾರ ನಿದ್ದೆ ತೊರೆದು ಅಲ್ಲಿಹುದು। ಪಂಚ

ವರ್ಷಗಳಲ್ಲವೇ ಮಗ ನಿನಗೆ ಇಂಥ ಬವಣೆಯು ಬಂದಿತೆ) ವನವಾಸಕೆ ಹೋಗಬೇಕೆ ಮಗ ನಿನಗೇಕೆ ಇಂಥ ಬವಣೆಯು ಬಂದೀತೇ ಹರಿಯೇ।। ಏಕೆ ಮರುಗುವೆ ಅದು ಸುಮ್ಮನೇ ಅಮ್ಮ ದುಃಖದಿಂದಲಿ ಫಲವೇನೇ ಅಮ್ಮಯ್ಯ। ಲಕ್ಷ್ಮಿ ಕೃಷ್ಣರ ಕೃಪೆ ಇಲ್ಲವೇನೆ। ಅಚ್ಯುತಾನಂತನೇ ನೋಡಿ ಬರುವೆನ್ಹೋಗಿ ಅಲಂಕಾರ ರೂಪನಾಗಿ ಐಕ್ಯವಾಗುವೆ ನ್ಹೋಗಿ (ಏಕೆ ಮರುಗುವೆ ಸುಮ್ಮನೆ)।।

ನರಹರಿಯ ತನ್ನ ಹೃದಯದೊಳಗಿಟ್ಟು ಜನನಿಯ ಬಳಿಯಿಂದ ತೆರಳಿದನು ಕಂದ ಒಲುಮೆ ಯಿಂದ। ಕಾಲ್ಗಳಿಗೆ ಬಲು ಮುಳ್ಳುಗಳು ಸೋಕಿ ನೆತ್ತರು ಸುರಿಯುತ್ತಿದೆ ಬಾರೋ ಕಂದಯ್ಯ ಹರಿಯ ಭ್ರಮೆಯಲಿ ಕಣ್ಣ ಮರೆಯಾಗಿರುವವನ ತಿರುತಿರುಗಿ ನೋಡುತ್ತಾ ಕಂಡಳಾ ಮಾತೆ।।

ಅತ್ತಲಾ ಧೃವ ಘೋರಾರಣ್ಯ ಪೊಕ್ಕು ಪೋಗಲು ಇತ್ತಲಾ ಸುನೀತೆ ತನ್ನರಮನೆಗೆ ನಡೆತಂದು ದಾಸಿಯೊಡನೆ ಮತ್ತೇನೆಂದು ಪ್ರಲಾಪಿಸುತ್ತಿದ್ದಳು, ದಾಸಿ ಕೇಳೆಲೆ ನಾನು ಪೂರ್ವಜನ್ಮದಲಿ ಜಗದೀಶನ ಪೂಜಿಸಲಿಲ್ಲ ಹೊತ್ತು ನವಮಾಸ ಹೆತ್ತು ಸಾಕಿದ ಮಗನ ಅಟ್ಟ ಅಡವಿಗೆ ಕಳುಹಿಸಿದೆನು ಹಾಲಹೆಪ್ಪೊಡೆದೇನೋ। ಜೇನು ತಟ್ಟಿ ಕಿತ್ತೆನೋ, ಬಾಲರಿಗೆರಡನೊಂಚಿಸಿದ ಕಾರಣದಿಂದ ಬಾಲನಗಲುವ ಹೊತ್ತಾಯ್ತು ವಿಧಿಯೆ.

ಉಂಡೆನೆ ಫಲಗಳನು ಸಂತೋಷವಿದ್ದ ಸತಿ-ಪತಿಗಳಗಲಿಸೆನೋ ಬಂದೀತು ಎನಗಿಂತ ವಿಧಿಯೇ। ಮುತ್ತಿನ ಮಣಿಯಂತ ಮಗನ ಬಿಟ್ಟೆ ನಾನು ಇಪ್ಪೆನೆ ದಾಸಿ ಕೇಳ್। ಚಿಂತಿಸಿ ಇತ್ತಲಾ ಸುನಿತೆ ಪ್ರಲಾಪಿಸುತ್ತಿರಲಾಗಿ।।

ಅತ್ತಲಾ ಧೃವ ಘೋರಾರಣ್ಯವಂ ಪೊಕ್ಕು ಪೋಗಲು ನಾರದರು ನಡೆತಂದರು। ನಾರದರಿಗೆ ಸಾಷ್ಟಾಂಗಕ್ಕೆರಗಿ ಧೃವ ಮತ್ತೇನೆಂದನೂ ಎಂದರೆ। ಹರಹರ ಜನ್ಮಾಂತರದ ಫಲ ದೊರಕಿತೆನುತ ಚರಣ ಕಮಲಕ್ಕೆರಗಿ ನಿಂತನು ಹರುಷದಿಂದ ಹಿಂದೆ ಮಾಡಿದ ಪುಣ್ಯದಿಂದಲೇ ಕಂಡೆ ನಿಮ್ಮಯ ಚರಣ ಕಮಲವ ತಂದೆ ಮುನಿ ಪತಿ ನೀವಿತ್ತ ಬಿಜಂಗೈದಿರೆಂತದ।। ಯಾರ ಕಂದನಯ್ಯ ನೀನು ಅಂಜಿಕಿಲ್ಲದೆ ಘೋರ ಕಾನನಕೆ ಬಂದ ಪರಿಯೇನಯ್ಯಾ। ಕಾಡು ಹುಲಿಯು, ಕರಡಿ ಕಪಿಯು ಇರುವ ಸ್ಥಳವಿದು ತರಳ ನೀನೋರ್ವ ಬಂದ ಪರಿಯೇನಯ್ಯ। ನೋಡಿದಾರೆ ರಾಜ ಕುಮಾರನಂತಿದೆ ಮೂಡುವ ಚಂದ್ರಮನಂತೆ ತರಳನೀನಿರುವೆ। ಉತ್ತಮ ಪಾದ ರಾಜ ಎನ್ನಯ್ಯ ಉತ್ತಮ ಸುನೀತೆ ಎನ್ನ ಪಡೆದ ಜನನಿ। ಹೀಗಿರುತ್ತಿರಲೊಂದು ದಿವಸದಲಿ ನಾನೂ ಆಡುತ್ತಲ್ಹೋದೆ ಎನ್ನಯ್ಯನವರಮನೆಗೆ ಕಂಡಳಾಗಲೆ ಸುರುಚಿ ಪರಮ ರಾಕ್ಷಸಿ ಕಂದನಿವನ್ಯಾರೆಂದು ಹೊರಗೆ ನೂಕಿದಳು। ಹೇಳಿದರೆ ಅಲ್ಲೇನು ಹುರುಳಿಲ್ಲವಯ್ಯ ಸ್ವಾಮಿ ತಾನಿರುವಂಥ ಸ್ಥಳವ ತೋರಿರಯ್ಯ। ಬಾಲ ನೀ ಕೇಳು ನಾನ್ಹೇಳುವ ಮಾತ ನೀ ಪೋಗು ಆ ವನದಲ್ಲಿ ದೇವತೆ ನೆಲೆಯು, ಮಹಾ ಮುನಿಗಳು ಅಲ್ಲಿ ತಪವಾಚರಿಸುವರು। ನೀ ಪೋಗು ಅಲ್ಲಿಗೆ ಎಂದು ಧೃವನೊಳು ಈರೀತಿ ವಿಸ್ತಾರ ಪೇಳಿಯೇ ನಾರದ ಮುನಿ ಬಂದ ಉತ್ತಾನಾಪಾದನರಮನೆಗೆ।। ಏರಿದ ಸಿಂಹಾಸನವನ್ನಿಳಿದು ಪಾದ ಪೂಜೆಯ ಗೈದು ಕುಳ್ಳಿರಿಸಲು ಭೂಪಾಲಕನೊಡನೆ ನಾರದರು ಮತ್ತೇನೆಂದು।।

ಯಾಕಯ್ಯ ಭೂಪಾಲಕ ಏತಕ್ಕೋಸ್ಕರದಿ ಮನ ವ್ಯಾಕುಲವಾಗಿದೆ ಎಂದನಾ ಮುನಿಪ।। ಉಮ್ಮಳ ವಿದೇನಯ್ಯಾ ನಿನ್ನ ಮನಸಿನಲಿ ಖಿನ್ನನಾಗಿಹುದೇನು ಎಂದನಾ ಮುನಿಪ। ಏನು ಪೇಳಲಿ ಮುನಿಯೇ ಎನ್ನ ಮನದ್ವೆಥೆಯಾ ಬಾಲಕನ ಹೊರಡಿಸಿದಳು ಪಾಪಿ ಇವಳು। ಇವನು ಎನ್ನಕುವರ, ಧೃವನೆಂಬನೋರ್ವ, ಇವರಿಬ್ಬರು ತನಯರೆನಗಿರುತ್ತಿದ್ದರಯ್ಯ। ಹೀಗಿರುತ್ತಿರಲ್ಲೊಂದು ದಿವಸದಲಿ ಅವನು ಆಡುತ್ತ ಬಂದನು ಎನ್ನ ಅರಮನೆಗೆ। ಕಂಡಳಾಗಲೆ ಸುರುಚಿ ಪರಮ ರಾಕ್ಷಸಿ ಕಂದನಿವರ್‍ಯಾರೆಂದು ಹೊರಗೆ ನೂಕಿದಳು। ಹೇಳಿದರೆ ಇಲ್ಲೇನು ಹುರುಳಿಲ್ಲವಯ್ಯಾ ಮಡದಿಯಲ್ಲವು ಎನಗೆ ಮಾರಿ ಕಾಣಯ್ಯ। ಬೇಡ ಬಿಡಯ್ಯ ಕ್ಲೇಶ ಭೂಪಾಲಕರ, ಸ್ತ್ರೀಬುದ್ಧಿ ಪ್ರಳಯಾಂತಕ ಎಂಬಂತಗಾದೆ ಕೇಳಿ ಅರಿಯೇ। ಲೋಕದಿ ತಾ ಮಾಡಿಕೊಂಡ ಸತಿ ತನಗೇ ಅಂಜದ ಮೇಲೆ ಪೇಳುವುದೇನೀ ಬಾಳುವೆಗೇಡು। ವನದೊಳು ಧೃವನೆಂಬೋರ್ವ ಪುಟ್ಟ ಬಾಲಕನಿರಲು ಎನ್ನೆಡೆಗೆ ಬಂದು ಪೇಳಿದನಾತನು ಮನ್ನಿಸಿ ಕಳುಹಿದೆ ನಿನ್ನ ಬಾಲಕನ ಬೇಡ ಬಿಡಯ್ಯ ಕ್ಲೇಶ ಸಂಜೆಗೆ ನಿನ್ನ ಕುವರ ಬರುವನೆಂದು, ನಾರಾಯಣನೆಂದು, ನಾರದ ಮುನಿ ಹೇಳಿ ಪೋದ.

ಅತ್ತ ಮುನಿಯನಗಲಿ ಬಾಲ ಅರ್ಥಿಯಿಂದಲಿ ಅಚ್ಯುತನ ಪದ ನೋಡಲೆಂದು ಹರುಷದಿ. ಸಪ್ತ ಮುನಿಗಳಾಶ್ರಮವ

ಕಂಡನಾಗಲೇ ಅರ್ಥಿಯಿಂದ ಹೋಗಿ ಮುನಿಯ ಚರಣಕ್ಕೆರಗಿದ। ಯಾರ ಕಂದನೈಯ್ಯ ನೀನು ಎನುತ ಮುನಿಗಳು ಬೇಗದಿಂದ ತೊಡೆಯೊಳಿಟ್ಟು ಮನ್ನಿಸಿದರು। ಕಾಡಹುಲಿಯು ಕರಡಿ ಕಪಿಯು ಇರುವ ಸ್ಥಳವಿದು ತರಳ ನೀನೋರ್ವ ಬಂದ ಪರಿಗಳೇನಯ್ಯ। ಪೃಥ್ವಿಯು ಎನ್ನ ಪಿತನು ಎಂದು ನುಡಿದನು. ಉತ್ತಮ ಸುನಿತೆ ಎನ್ನ ಪಡೆದ ಜನನಿ ಎಂದನು ಕೊಟ್ಟವಚನ ನುಡಿದಳೆನ್ನ ಕಿರಿಯ ಜನನಿ ಎಂದನು. ಅಚ್ಯುತನ ಪಾದವ ನೋಡ ಬಂದೆನೆಂದನು ಅದಕ್ಕೆತಕ್ಕಯಜ್ಞಕೊಡಿಸಿರೆಂದನು ಅರ್ಥಿಯಿಂದ ಮುಂಜಿ ಎನಗೆ ಮಾಡಿರೆಂದನು। ಎಂದ ಮಾತು ಕೇಳಿ ಮುನಿಗಳುಹರುಷದಿಂದಲಿ ಮುಂಜಿಯನು ಕಟ್ಟಿದರು ಮಂತ್ರಯುಕ್ತದಿ ಕುಂದು ಉಳಿಯದಂತೆ ಹರಸಿ ಬಾಲಗೆ ಮುಂದೆ ನಿನಗೆ ಹರಿಯು ಒಲಿಯಲೆಂದು ನುಡಿದರು।।

ಫಲಹಾರದಿಂದ ಕೆಲವು ದಿನ ಕಳೆದನು ಜಲಾಹಾರ ದಿಂದ ಕೆಲವು ದಿನ ಕಳೆದನು ವಾಯು ಆಹಾರದಿಂದ ಕೆಲವು ದಿನ ಕಳೆದನು ಮತ್ತೆ ನಿರಾಹಾರದಿಂ ಬಾಲ ನಗುತ ನಿಂದನು। ಬಾಲ ಮಾಡಿದ ಭಾರ ಅಳಿಯ ಬೇಕೆನುತಲೆ ಸುರಮುನಿ ವರರು ಎಲ್ಲಾ, ಕಾಡಾನೆ, ಕರಡಿ, ಸಿಂಹಗಳಂದದಿ ಮಾಯದಿಂ ಧರಿಸಿ, ಪರಿಪರಿ ಹೆಬ್ಬಾವು ಘಟಸರ್ಪ, ಮೊದಲಾಗಿ ಸುತ್ತಿ ಭೋರಿಡುತಲೆ, ಮತ್ತೊಂದು ವೀಕ್ಷಿಸಿ ನೋಡದೆ ಬಾಲನು ಯೋಗನಿದ್ದೆಯೊಳಿದ್ದಾನು। ಇನ್ನೇನು ಉಪಾಯ ಮಾಡಬೇಕನುತಲೆ ಸುರಮುನಿಯರೆಲ್ಲರು ಮಾಯದ ಜನನಿಯಾಗಿ ಕೂಗುತ ತರಳನ ಕರೆಕರೆಯುತ್ತಿದ್ದರು। ಹರಿತಪದಿಂದ ಫಲವೇನು ಕಂದ। ಎನ್ನೊಳಗಿಂದು ಉಬ್ಬಸವೇನು ಕಂದ, ದುರುಳ ಸುರುಚಿ ಎನ್ನ ಕಂದನಾ ಬೈದು ನೂಕಿದಳೆ। ಊರುಕೇರಿಗಳಿಲ್ಲ ಕಂದ, ತಿರಿದುಣ್ಣುವರ ಮನೆ ಇಲ್ಲ। ಬಲು ಮೋಹಗಳ ತೋರಿಸುತ ಮಾಯದ ಜನನಿಯು ಕರೆಕರೆದಳು ಇರಲು ಬಾಲಕ ಅದನಾಲಿಸುತ ಕಣ್ಣು ತೆರೆದು ನೋಡಿದ ಮಾಯವೆನುತ ಕಣ್ಣು ತೆರೆದು ನೋಡಿ ಕಾಣದ ಜನನಿಯ, ಮುನಿಸಿ ನಂದದಿ ಬಾಲನು ಇನ್ನೊಮ್ಮೆ ವೀಕ್ಷಿಸಿ ನೋಡದೆ ಬಾಲನು ಯೋಗ ನಿದ್ರೆಯೊಳಿದ್ದಾನು। ಇನ್ನೇನುಪಾಯ ಮಾಡಬೇಕೆಂದೆನುತಲೆ ಸುರಮುನಿವರರು ಎಲ್ಲ ಬೇಗದಿಂದಲಿ ಹೋಗಿ ಕಮಲ ಸಂಭವನೆ ಹೇಳಬೇಕೆನುತಿದ್ದರು।।

ಜೋಡಿ ಕೂಡಿಯೇ ಮುನಿಗಳೆಲ್ಲಾ ನಡೆದರೂ ಕೂಡಿದರಾಗ ಕಮಲ ಸಂಭವನೊಳು ತಾಪ ಹೆಚ್ಚಿತು, ಮೂರು ಲೋಕ ಸುಟ್ಟಿತು, ತಾಪ ಹೆಚ್ಚಿತು ನಾವು ತಾಳಲಾರೆವು। ಮುನಿ ದೇವಾದಿಗಳೆ ಕೇಳಿರೆನ್ನೆಯ ಮಾತ ಹರಿ ಭಕ್ತ ಮಾಡುವನು ತಪಸು। ಪರಮ ಪುರುಷೋತ್ತಮಗೆ, ನಮಗೆ ಪೇಳುವುದಕ್ಕೆ ಅಳವಲ್ಲವಯ್ಯಾ ಅಸಾಧ್ಯ। ನರಹರಿಗೆ ಹೋಗಿ ಭಿನ್ನೈಸಿದರೆ ಈ ಕಾರ್ಯ ನಿರ್ವಹಿಸಿಹುದೇನೋ ಕಾಣೆ ಎಂದ ಕಮಲಜ ಪೇಳಿದ ಮಾತ ಆ ಕ್ಷಣದಲಿ ಕೈಕೊಂಡು ನಡೆದರಾ ಬ್ರಹ್ಮಪುರದಿಂದ।

ದೇವ ರಕ್ಷಿಸು, ಭಾವ ರಕ್ಷಿಸು ದೇವ ನಮ್ಮನ್ನು ದೇವದೇವನೆ ರಕ್ಷಿಸೆನುತಲೆ। ಭಾವ ಭಕ್ತಿಯೊಳಗೆರಗಲು। ಪಂಚವರ್ಷದ ಬಾಲನೊಬ್ಬನು ಕೋಟಿ ಸೂರ್ಯರನು ಜರಿಯುತ ನಿಂತು ಮಾಡುತ್ತಿರುವ ತಪವನೂ ವರವ ಕೊಟ್ಟು ನಮ್ಮನು ರಕ್ಷಿಸು। ಮೂರ್ತಿ ಕಿರಿದು, ಕೀರ್ತಿ ಹಿರಿದು ಎಂಬಗಾದೆ ಪ್ರಸಿದ್ಧವಾಗಿಯೇ ನಿಂತು ಮಾಡುತ್ತಿರುವ ತಪವನು ವರವ ಕೊಟ್ಟು ನಮ್ಮನ್ನು ರಕ್ಷಿಸು ಸೃಷ್ಟಿಗೊಡೆಯಾ ಬೆದರದಿರಿ ಏತಕೆ ದೇವ ಮುನಿಗಳಿರಾ ಇರಿರೈ ನೀವು ಇರುವ ವನಸ್ಥಳದಿ। ಒಲಿದು ತೋರುವೆನು ನಿಜ ಎನ್ನ ಭಕ್ತನಿಗೆ ಉರಿವ ಜ್ವಾಲೆಗಳೆಲ್ಲಾ ನಿಲಿಸುವೆ ಕ್ಷಣಮಾತ್ರದಿ। ಇದಕೆ ಭಾದಕವಿಲ್ಲ ಹಿಂದಿನಂತೆ ತಪವ ಮಾಡುತ ನೀವು ಪೌರ ಸುಖದಲಿರಿ ಎಂದಾ।

ಅತ್ತಲಾ ದೇವಾದಿ ದೇವತೆಗಳಗಲಿ ಪೋಗೆ ಇತ್ತಲಾ ಧ್ರುವಗೆ ಹರಿ ಪ್ರತ್ಯಕ್ಷನಾಗುವನೆಂದನು। ನವರತ್ನದ ಕಿರೀಟ ಥಳಥಳಿಸೈ ಕುಂಡಲ, ಕೊರಳಲಿ ವೈಜಯಂತಿ ಹಾರ ಪದಕ ಹೊಳೆಯೇ। ಬಲದೊಡೆಯೊಳು ಶ್ರೀಮಹಾಲಕ್ಷ್ಮಿ ಸಹಿತ, ಗರುಡವಾಹನವೇರಿ ಪರಮ ಪುರುಷಬಂದ। ಪೊಗಳಲಳವೇ ಎನಗೇ ತರಳ ನೀ ಮಾಡಿದ ತಪಕೆ ಮೆಚ್ಚಿದೆನಯ್ಯ ಮನಕೆ ಬೇಕಾದಂಥ ವರವ ನೀ ಬೇಡು। ಸ್ವಾಮಿ ಕೇಳಯ್ಯಾ ನಾನ್ನಿನ್ನೇನ ಬೇಡುವನಲ್ಲ। ಯಾವಾಗಲು ನಿಮ್ಮ ಪಾದಸೇವೆಯ ಮಾಡಿ ಚರಣಾರವಿಂದವೇ ಸಾಕು ಅಂದಂದ। ಕರುಣಾಕರ ಶ್ರೀಕೃಷ್ಣ ಅಭಯವಿತ್ತ ಧ್ರುವಗೆ।

ನಾರಾಯಣತೇ ನಮೋ ನಮೋ ಭವನಾರದ ಸನ್ನುತ ನಮೋ।

ಹರಿಕಾಯೋ ಕರುಣಾಕರ ನಮೋ ನಮೋ। ಹರಿ, ಬಲರಾಮಸೋದರ ನಮೋ ನಮೋ।
ಹರಿ ಸುರಮುನಿ ವಂದ್ಯನೆ ನಮೋ ನಮೋ। ಹರಿ ಲಕ್ಷ್ಮಿ ವಲ್ಲಭಗೇ ನಮೋ ನಮೋ।।
ಕಮಲನಾಭನ ಭಜಿಸಿ ಅಮರ ವರಗಳಿಂದ ಬರುತ್ತಿದ್ದ ಧೃವನು ಪಟ್ಟಣಕೆ ಸಂಭ್ರಮದಿ, ಸಟೆಯೆಲ್ಲವೇ ಸ್ವಾಮಿ ನಿನ್ನ ಬಾಲಕ ಹಿರಿಪಾದ ಸೇವೆಯ ಮಾಡಿ ಬೇಗದಲಿ ಬಂದ। ಊರ ಶೃಂಗರಿಸಿದರು, ತೋರಣಗಳ ಕಟ್ಟಿ ಮೇಲ್ಪತ್ತೀ ಬುರುಜು ಮಂಟಪವನ್ನು ರಚಿಸಿ ಊರ ನಾರಿಯರೆಲ್ಲಾ ಆರತಿಗಳ ಪಿಡಿದು, ನೋಡಬೇಕೆಂದು ಸಂಭ್ರಮದಿ ನಿಂದಿಹರು।
ಭೇರಿ ಮೃದಂಗಗಳು ನಾನಾ ವಾದ್ಯಗಳು ನಾನಾ ವಿಧದ ಪಾಠಕರು ಸಹ,
ಆನೆ ಕುದುರೆ ಮಂದಿ ಸೇನೆಗಳೊಡಗೊಂಡು ಆನಂದದಿಂದ ಧೃವ ಬರುತಿದ್ದನಾಗ ಅಪ್ಪ ಬಂದೆಯಾ ಎಂದು ಅಪ್ಪಿಕೊಂಡು ಮುದ್ದಿಸುತ್ತಿದ್ದನಾಗ ಧೃವಗೆ ನಡೆತಂದು ಸುನೀತೆಯ ಚರಣಕ್ಕೆ ಎರಗಲು. ಮರುಗಿಕೊಂಬುವರುಂಟೆ ಮಗನೇ ಎಂದಾಳು. ನರಹರಿಯ ದಯವಲ್ಲವೇ ನಮಗಿನ್ನು ಜಗಗೊಳು, ನಡುಗುತ್ತಾ ನುಡಿದಳಾಮಾತೇ। ದುಷ್ಟರ ಸಂಹರಿಸಿ, ಶಿಷ್ಟರ ಸಲಹುವ ಭಕ್ತ ವಲ್ಲಭ ಧೃವಗೆ ಪಟ್ಟಕಟ್ಟಿದ।
ಎಡದೊಳುತ್ತಾನ ಪಾದರಾಯ ಮಡದಿ ಸುನಿತೆ ಕುಳ್ಳಿರಲು, ನಡುವೆ ಧೃವನು ಹಸೆಯ ಮೇಲೆ ಕುಳ್ಳಿರಲು ಮಿತ್ರೆಯರಿಬ್ಬರು ಬಡನಡು ಬಳುಕುತ್ತಾ ಮಡದಿಗೆ ತುಂಬಿದ್ದಾರೆ ಮಡಿಲನು, ಮುತ್ತಿನ ಹಸೆಮಣೆ ಮೇಲೆ ಮತ್ತೆ ಧೃವನು ಕುಳ್ಳಿರಲು ಮುತ್ತಿನಾಕ್ಷತೆಗಳ ಕರದಲಿ ಪಿಡಿದು ಮಿತ್ರೆರಿಬ್ಬರು ಬಡನಡು ಬಳುಕುತ್ತ ಮುತ್ತಿನಾರತಿಯಾ ಬೆಳಗಿರೇ। ಪಡುವಿ ರಾಜ್ಯವ ಸ್ಥಿರವಾಳು, ಬಡವರ ಪಾಲನೆಯಮಾಡು। ಬಿಡದೆ ನರಹರಿಯ ಸೇವೆ ಮಾಡು,, ವರ ಮುನಿಗಳು ಮಂತ್ರಾಕ್ಷತೆ ತಳಿದರು ಸುರರು ಹೂಮಳೆಯ ಕರೆದಾರು।।

ಮಂಗಳ

ನಿತ್ಯಾನಂದ ನಿರಾಕಾರ ಮೂರ್ತಿಗೆ ಭಕ್ತವತ್ಸಲ ಪಾವನ ಚರಿತಗೆ। ಸತ್ಯಭಾಮೆ ಸಹಿತ ಸುರಲೋಕಕೆ ಹೋಗಿ ಮತ್ತೆ ಅಸುರರನೆಲ್ಲಾ ಗೆದ್ದ ಹರಿಗೆ। ಜಯಮಂಗಳಂ ನಿತ್ಯ ಶುಭಮಂಗಳಂ। ಹತ್ತಾವತಾರನಿಗೆ ಸತ್ಯ ಗುಣ ಮೂರುತಿಗೆ ಭಕ್ತವತ್ಸಲ, ಪಾವನ ಚರಿತಗೆ ಸತ್ಯ ಭಾಮೆಯ ಸಹಿತ ಸುರಲೋಕಕೆ ಹೋಗಿ ವೃಕ್ಷವನ್ನುತಂದಿತ್ತ ಅಚ್ಯುತನಿಗೆ ಜಯಮಂಗಳಂ ನಿತ್ಯ ಶುಭಮಂಗಳಂ। ಶಂಖ ಚಕ್ರ ಧಾರನಿಗೆ ಶಾಂತಗುಣ ಮೂರುತಿಗೆ ಪಂಕಜೋದ್ಭವ ಪಾವನ ಚರಿತಗೆ ಜಯಮಂಗಳಂ ನಿತ್ಯ ಶುಭಮಂಗಳಂ।।

ಅಖಿಲವೇದ ಶಾಸ್ತ್ರ ಪುರಾಣಗಳ (ಅಜಮಿಳನ ಚರಿತ್ರೆ) ರಾಗ: ಭೌಳಿ

ಅಖಿಲವೇದ ಶಾಸ್ತ್ರ ಪುರಾಣಗಳ ತಿಳಿದೋದಿ। ಮುಪ್ಪಿನ ತಾಯಿತಂದೆಚಿತ್ತ ಹಿಡಿದೋನ ದಾಕ್ಷಿಣ್ಯವನೆ ಮಾಡಿ।ಜಗದೊಳಗೆಖ್ಯಾತಿಯನು ಪಡೆದೆ। ಸುಕುಮಾರನೆನಿಸಿಕೊಂಡೆ ಭಕ್ತಿಯಲಿ। ಹೋಮಕ್ಕೋಸ್ಕರ ಸಮಿತ್ತ ತರಲುಹೋಗಿ ದುಷ್ಕೃತಾ ಫಲದಿಂದ ನಿತ್ಯಜೇಯಳಕಂಡು। ಕಂಡುಕಾಮಿತನಾದನು ಅಜಾಮಿಳನು। ಘೋರಪಾತಕಿ ಎಂಬುದನರಿಯದೆ। ಹರಿಯೇ ನಾರಾಯಣ ನಮೋ ನಾರಾಯಣ।।1।। ನಿಲ್ಲು ನಿಲ್ಲೆಲೆ ಕಾಂತೆ ನಿನಗೊಲಿದೆ। ನೀನ್ಯಾರು ಸಲ್ಲಿಸೆನ್ನೊಡನೆ।ಸತಿಯರ ಕುಲಕೆ ಕಟ್ಟಾಣಿ। ಮಲ್ಲಿಗೇ ಗಂಧಿ ಮದನನ ಕೈಯ ಮಸದಳಕೆ। ಹುಲ್ಲೆ ನೋಟದ ಭಾಮಕಿ ಸಲ್ಲಲಿತಗಾತಿಯೆ। ಸೊಕ್ಕಾನೆ ಮೆಲ್ಲಡಿಯಳೆ ಇಲ್ಲಿ ಬಾ ಅಂಜಬೇಡವೆ। ಮುಗುಧೆ ಹೆಂಗೆಳೆ ನಿಲ್ಲೆನುತ ಸೆರಗ ಪಿಡಿದ। ಹರಿಯೇ ನಾರಾಯಣ ನಮೋ ನಾರಾಯಣ।।2।। ಎಲೆ ವಿಪ್ರಕೇಳುನಾಕುಲದಲ್ಲಿ ಹೀನೆ। ಬಹು ಹೊಲೆಶಬ್ದ ಮಾಂಸ। ಗೋವಿನ ಚರ್ಮದ್ವಾಸಿಗೆ ಎಲುಬಿನರಾಶಿಗಳು। ಒದರುವ ನಾಯಿ ಹಿಂಡುಗಳ। ಬಹು ಘೋರವಾಗಿರ್ಪ್ಪೋದು ಬಲೆಗೆ ಬಿದ್ದಾ ಪಕ್ಷಿ ಬೇಟೆ। ನಮಗಲ್ಲದೇಕುಲವ ಕೂಡುವುದೇ।ಕಾಮಿನಿರನ್ನೆ ನಿನ್ನೊಡನೆ ಸದಾ ಬದುಕಿ ಬಾಳಿ।ಸುಖದಲ್ಲಿ ಇರುವೆನೆಂಬೋ ಛಲವೊಂದೆ ಎನ್ನದೆಂದ। ಹರಿಯೆನಾರಾಯಣ ನಮೋ ನಾರಾಯಣ।।3।। ವ್ಯರ್ಥವೆನ್ನೊಡನೆ

ಮಾತ್ಯಾತಕೆಲೆ। ಹಾರುವ ಚಿತ್ತ ನಿನ್ನಲ್ಲಿ ಉಂಟು ಹೋಗು। ನೀ ಎನ್ನ ಹೆತ್ತತಂದೆಕೇಳು। ಸಮ್ಮತಾವಾದರೆಮತ್ತೆ ನಿನಗೊಲಿವೆನೆನಲು। ಮತ್ತ ಗಾಮಿನಿಯನೊಡಗೊಂಡು। ಆಕೇ ಪಿತನ ಹತ್ತಿರಕ್ಕೆ ಪೋಗಿ ಪೇಳಿದಾರಾತನಿಂತೆದ। ನಿನ್ನುತ್ತುಮದ ಕುಲವ ನೀ ಪೋಗ್ಲಾಡಿ। ಪಾತಕದ ಮತ್ತಾಕಾಗೊಳಗಾಗಬೇಡ। ಹರಿಯೇ ನಾರಾಯಣ ನಮೋ ನಾರಾಯಣ।।4।। ಆಗದಾಗದು ಎನ್ನಕುಲ ಬಂಧು ಬಳಗವನು ನೀಗಿ। ನಿನ್ನಿಂದ ಬಾಳುವದೊಂದೆ ಪರಮ ಸುಖ।ನಾಗಭೂಷಣನ ಫಣೆಕಣ್ಣಲೆರೆವ ಉರಿಯನು। ಬಾಣ ತಾಕಿ ತನ್ನೆದೆಯೊಳೆಂದ ಕೂಗಿ ಹೇಳುವೆ ಕೇಳು ನಿನ್ನ ಕುಲವನಳಿಯದಿರೆಂದು। ಹೋಗಿ ನಿನ್ನೆತ್ತ ತಾಯಿತಂದೆ। ಸೇರುವುದು ಹಾಗಲ್ಲದಿದ್ದರೆ ಆಚೆಮನೆಯೊಳಗೆನೀವಿಬ್ಬರು ಇರಿ ಎಂದನು। ಹರಿಯೇ ನಾರಾಯಣ ನಮೋ ನಾರಾಯಣ।।5।। ಹಾಲಂಥ ಕುಲವ ನೀಗ್ಲಾಡಿ ಪೂರ್ವದ ಶೀಲವನೆ ಅಳಿದು।ಸತಿಯಳೆನೆ ಕಳೆದುಕೊಂಡು ಚಾಂಡಲಗಿತ್ತಿಗೆ। ಹತ್ತುಮಕ್ಕಳನೆ ಪಡೆದುಕೊಂಡು। ಅವಳಲೀಲೆಯ ನೋಡಿ। ಹಿಗ್ಗಿ ಆಲಂಬದೊಳಗೆ ಅಜಮಿಳನು ಇರುತಿರಲಾಗ। ಕಾಲಬಂದೊದಗಿತುಕರೆಯಿರೋ ಪಾತಕಿಯ। ಜೋಲುತುಟಿ ಡೊಂಕುಮುಖ ಅಬ್ಬರದ ಮೀಸೆಗಳು ಯಮನಾಳುಗಳುಬಂದರಾಗ। ಹರಿಯೇ ನಾರಾಯಣ ನಮೋ ನಾರಾಯಣ।।6।। ಎಡಗೈಯ ಚಾಪವು ಬಲಗೈಯ ಚಮ್ಮಟಿಕೆಯೂ ಒಡನೆ ಜೋಲುವನಾಯಿ ವಜ್ರಮೂತಿಕಾಗೆ। ತುಳಿತುಳಿದು ಕಟ್ಟಿರೋ ಪಾತಕಿಯ ಎಂದು ಘುಡಿಘುಡಿಸುತ ಬಂದರು। ಗಡಗಡನೆ ನಡುಗಿ ಕಂಗೆಟ್ಟು ಅಜಮಿಳ। ತಮ್ಮ ಕಡು ಹಸಳೆ ಕಂದಯ್ಯ। ಇನ್ನೆಷ್ಟು ಅಂಜುವನೆಂದು। ಕಡೆಯ ಪುತ್ರನ ನಾರಗನೆಂದು ಕರೆಯಲಾ ನುಡಿಯ ಲಾಲಿಸಿದ ಸ್ವಾಮಿ। ಶೌರಿನಾರಾಯಣ ನಮೋ ನಾರಾಯಣ।।7।।ಉದರ ದ್ವಾದಶಿನಾಮ ಕೊರಳ ತುಳಸೀಮಾಲೆ। ವರಶಂಖುಚಕ್ರವೂ ಊರ್ಧ್ವಕುಂಡಲವಿಟ್ಟು। ಕರವನಿತ್ತಂಜ ಬೇಡಂಜಬೇಡವೆಂದು। ಹರಿದಾಸರು ಬಂದರು।ಪುಂಢರೀಕಾಕ್ಷಣ ಭೃತ್ಯರನೆ ಬಾಧಿಸುವ ತೊಂಡರಿವರ್ಯಾರು।ನೂಕಿರೋ ನೂಕಿರೋ ಎಂದು ಯಮದಂಡಗಳನೆ ಮುರಿದು। ಈಗ ನಿಮ್ಮ ಸುಗಳನು ಹಿಂಡ್ಯೇವು ತಾವೆನುದಲೇ। ಹರಿಯೇ ನಾರಾಯಣ ನಮೋ ನಾರಾಯಣ।।8।। ಅಂದು ಕುರುಹರ ಪೇಳಿ ಒಡೆಯ ಯಮರ್ಧಮನಿಗೆ। ಹಿಂದಿರುಗಿ ನೂಕಿರೋ ನೂಕಿರೋ ಯಮನಾಳುಗಳಾ। ಬಂದಿದೆ ಶ್ರೀಹರಿಯ ದಿವ್ಯಪುಷ್ಪಕವೆಂದು। ಬಂದರಾ ವೈಕುಂಠಕೇ। ಹರಿಯೇ ನಾರಾಯಣ ನಮೋ ನಾರಾಯಣ।।9।। ಬಿದ್ದು ಮೂರ್ಛಿತನಾಗಿಮೈಮುರಿದೆದ್ದು ಅಜಾಮಿಳ। ತನ್ನ ಇದ್ದ ದೇಹವ ಬಾಧಿಸುವರಿವರ್ಯಾರೆನುತ। ಉಪದ್ರವನೆ ಬಿಡಿಸಿದ ದಿವ್ಯ ಸ್ವರೂಪನಾದ। ಶುದ್ಧಾತ್ಮನ್ಯಾರೆನುತಲೇ। ಮದ್ಯಪಾನವ ಮಾಳ್ಪ ಹೆಂಗಳೊಡನೆ ಆಡಿ ಆಡಿದ್ದನು ನೂರೊಂದುಕುಲವ ನಾ ನರಕದಲಿಬಿದ್ದ। ಹದ್ದಿನ ಬಾಯ ಉರಗನಂತ ಜಮುಳನು ಇದ್ದ ತಾನತಿ ಮರುಗತ ಹರಿಯೇ ನಾರಾಯಣ ನಮೋ ನಾರಾಯಣ।।10। ವಿಪ್ರಕುಲದೊಳಗ್ಹುಟ್ಟಿ ವೇದಶಾಸ್ತ್ರವ ಮರೆತು। ಮುಪ್ಪಾದ ತಾಯಿತಂದೆ ಬಿಟ್ಟು। ಬುಧ ಜನರು ಒಪ್ಪಿ ಧಾರೆಯೆರೆದ ಕುಲಸ್ತ್ರೀಯಳನೆ ಬಿಟ್ಟು। ಕಂದರ್ಪನಾ। ಬಲಗೆ ಸಿಲುಕಿ। ಅಪ್ರತೀಎನ್ನಂತವರ ಕಾಣೆ ಜಗದೊಳಗೆ। ದುಷ್ಕೃತಾವನು ಪೊತ್ತೆ ಜಗಕೆ ನಿಂದಿತನಾದೆ।ತಪ್ಪಲರಿಯದು ಫಣೆಯ ವಿಧಿಯ ಬರಹವಿದ್ಯೆ। ಸತ್ಯವೀ ನುಡಿಯೆಂದನು। ಹರಿಯೇ ನಾರಾಯಣ ನಮೋ ನಾರಾಯಣ।।11।।। ಕಮಲನಾಭನ ಪದವ ನೆಲೆಯರಿತು ನಂಬಿದವರ್ಗೆ ಕುಲದೋಷಗಳಿಲ್ಲ। ಕುಂದುನಿಂದ್ಯಗಳಿಲ್ಲ। ಸುಲಭನಾಮಸ್ಮರಣೆ। ಅಂತ್ಯಕಾಲದಿ ಮಾಡೆ ಸಾಯುಜ್ಯಪದವಿ ದೊರೆಯುವುದೆಂದ। ನಾರಾಯಣ ನಮೋ ನಾರಾಯಣ ।।12।। ಮಂಗಳಂಮುರಹರಿಗೆ ಮಂಗಳಂ ಗಿರಿಧರಗೆ ಮಂಗಳಂ ಕರುಣಾಕ್ಷ ಕರುಣಾನಿಧಿಗೆ। ಮಂಗಳಂ ತರುಣಿಯ ಮಾನಾಭಿಮಾನವನು ಕಾಯ್ದವಗೆ ಜಯಮಂಗಳಂ ನಿತ್ಯ ಶುಭಮಂಗಳಂ।।

ಅಪರಿಮಿತ ಮಹಿಮೆಗಳ (ಸಿರಿಯಾಳನ ಕಥೆ)

ಅಪರಿಮಿತ ಮಹಿಮೆಗಳ ತೋರಿಯೇ ಅತಿ ಭಕ್ತಿಯಿಂದ ಗಣಪತಿಯ ಪೂಜಿಸಿ ಗುರು ವಿನಂಫ್ರಿಗೆ ಸ್ಮರಿಸಿ ನಮಸ್ಕರಿಸಿ। ಪತಿರಾಯ ಪಾದದ್ವಿಜಕೆ ವಂದಿಸಿ। ಸ್ತುತಿಸಿ ಸಿರಿಯಾಳನಾ ಕಥೆಯನು। ಪೃಥ್ವಿಯಲಿ ಪೇಳುವೆನು ಶಾರದೆ। ಮತಿಯ ಕೊಡಿಸೆನಗೆ।।1।। ಕೊಂಡಿನಾಪರದಿ ಪಟ್ಟಣದಿ ಶಿವಶಂಭುವಿನ ಸಹಿತ ಸಿರಿಯಾಳನೂ ಇಂತೆಂದು ದೊರೆ ರಾಜ್ಯವನೆ

ಆಳುತಿರಲು ಸತ್ವದಲೀ ಶಂಭುಶಂಕರ ತನ್ನ ಭಕ್ತರ ಉದ್ದಂಡ ಮತವನು ಜನಕೆ ತೋರಬೇಕೆಂದು ಈ ವ್ರತವನು ಉದಿಸಿದ ಚಂದ್ರಶೇಖರನೂ।।2।। ಶಿವಭಕ್ತ ವೈಶ್ಯ ಶಿರಿಯಾಳಗೆ ಶಿಲೆ ಸದ್ಧರ್ಮಜಂಗಳಿಗೆ ಎಂಬ ಸಿರಿ ಉದರದಲಿ ಜನಿಸಿದನು। ಚಿಲಾಳನೆಂಬುವನು ಸಿರಿಯು ಸಂಪದದಿ ಸಿರಿಯಾಳ ಬಹು ಭರದಿಂದ ರಾಜ್ಯವನೆ ಆಳುತಿರೆ ದೃಢಭಕ್ತಿಯಿಂದನ್ನದಾನವ ನಡೆಸುತಿರುತಿಹನು ।।3। ನಿತ್ಯಾನ್ನದಾನವನು ನಡೆಸುತಿರೆ ಮೆಚ್ಚಿದನು ಶಿವ ತನ್ನು ಭಕ್ತಿಗೆ ಶಕ್ತಿ ಸಹನಂದೀಯನೇರಿ ತ್ರಿನೇತ್ರನ ನಡೆತರಲು ಪಟ್ಟದರಸಿಯ ಸಹಿತ ಬಂದು ಪಟ್ಟಣದ ಬಾಗಿಲೊಳನಿಂದಿರೆ। ವಾರ್ತೆಯನು ನಡೆತಂದು ಚರರು ಸಿರಿಯೊಳಗರುಹಿದರೂ।।4।। ಲಕ್ಷ ಬ್ರಾಹ್ಮಣ ಭೋಜನವ ಸದ್ಭಕ್ತಿಯಲಿ ಮಾಡಿಸುತಲಿರಲು ಕಾಲದಲಿ ಅತಿಥಿಗಳು ಒಂದು ವಾರ್ತೆಯನು ಪೇಳಿ। ಥಟ್ಟನೈತಂದು ಪಾದಕ್ಕೆರಗಿದೊಡೆ। ಚಿತ್ತೈಸಿಗೃಹಕೆಂದು ನುಡಿಯಲು। ಪಟ್ಟದೊಲ್ಲಭೆ ನುಡಿದ ಪತಿ ಮನಸಿಗಿಷ್ಟವಾದುದನೂ।।5।। ಮುಪ್ಪಿನಾಪತಿ ನಿನ್ನ ಗೃಹದಿ ತಕ್ಕ ಸತ್ಕಾರ್ಯವನೆ ಮಾಡುವಂಥಾ ಸಾಮರ್ಥ್ಯವಿದ್ದರೆ ಹೇಳಿ ಬರುವೆನು। ಪತ್ನಿಯನೆ ಕೇಳು ಪ್ರತ್ಯೇಕ ಬದಲೊಂದು ಆಗದು। ಚಿತ್ತದಲಿ ನಿನಗೆ ದೃಢವಿದ್ದರೆ ಪುತ್ರ ನಾಶಿರವನ್ನೇ ಛೇಧಿಸಿ ಪಾಕವಣಿಮಾಡೊ।।6।। ಎನಲಾಗ ನುಡಿಕೇಳುದಾಕ್ಷಣ ಕರತಂದು ವನದಡಿಗೆ ಕುವರನ ಶಿರವ ಛೇದಿಸಿ ಶೀಘ್ರದಿಂದಲಿ ಅತಿ ಮೃದುವಾದ ಭೋಜ್ಯದ ವಸ್ತುವ ಪತಿಸತಿಗಿತ್ತನಾಕ್ಷಣದೀ।।7।। ಭಕ್ತಿಯಲಿ ಪಾಕವನು ನಡೆಸಿ ನೀವ್ ಚಿತ್ತೈಸಿ ಗೃಹಕೆಂದು ನುಡಿಯಲು ಮಕ್ಕಳಿಲ್ಲದ ಗೃಹದಿ ಭೋಜನ ಇಷ್ಟವಿಲ್ಲ ನಮಗೆ। ಅಪ್ಪಣೆ ಕೊಟ್ಟ ಪ್ರಕಾರದಿ ಪುತ್ರನಾ ಶಿರವನೆ ಛೇದಿಸಿದೆ ಎತ್ತಲಿಂದಲಿ ಬರುವ ಮಗ ಪರಿಯಿತಕೇನು ಹರನೆಂದಾ।।8।। ಕರೆ ನಿನ್ನ ಮಗನ ಶೀಘ್ರದಲಿ ನಾವ್ ತೆರಳಬೇಕೆಂದೆನುತ ನುಡಿಯಲು ತನಯ ಬಾಚಿಲಾಳನೆನ್ನಲು। ಭರದಿನಡೆತಂದಾಶಿರವ ಛೇದಿಸಿದವಗೇ ಬರುವ ಪರಿ ಧರೆಯ ಮೇಲುಂಟೇಯೆನ್ನೊಡನೆ ನೀ ಅನೃತವನಾಡಿ ಕರೆತಂದ್ಯಾ। ಇದಕನುವ ಹೇಳೆನಲೂ।।9।। ಬರಿದೆನುಡಿವೋನಲ್ಲ ನಿಮ್ಮ್ಮಯ ಎದುರಲ್ಲಿ ಛೇದಿಸುವೆನು ತಲೆ ಹಿಡಿದ ಖಡ್ಗದಿ ಸುತನ ಶಿರವ ಧರೆಗಿಳುಹಲಾಕ್ಷಣದೀ। ಗುಡುಗುಡಿಸಿ ಸತಿಸಹಿತ ಶೀಘ್ರದಿಂ ನಡೆದರಾದ್ಯಂತ ಕೋಪದಲಿ ಶಿವ ಮನದೊಳಗೆ ಚಿಂತಿಸುತಾ ಪತಿಸತಿಯೊಡನೆ ಇಂತೆದಾ।।10।। ನಿನಗಿಂತ ಮೂರು ಇಮ್ಮ್ಮಡಿಯಲಿ ನಡೆಸಿಕೊಂಡಿರುವೆನು ಧರ್ಮವಾ। ಕೆರೆಯ ತಡಿಯಲಿ ಹೋಗಿ। ತಪವನಾಚರಿಸಿ ಶಿವನೊಲಿಸಿ ಕಟ್ಟುಗ್ರತಪವನಾಚರಿಸಲು ಮೆಚ್ಚಿದನು ಶಿವ ತನ್ನ ಭಕ್ತನ। ಶಕ್ತಿ ಸಹನಂದಿಯನೇರಿ। ತ್ರಿನೇತ್ರ ನಡೆತರಲು ಮೆಚ್ಚಿದೆನು ನಿನ್ನ ದೃಢಭಕ್ತಿಗೆ ಪೃಥ್ವಿಯಲಿ ಚೋಡಿಲ್ಲ ನಿನಗೆ ಮಗನಿತ್ತೆವರವನು ಬೇಡು ಮನಸಾ। ಭೀಷ್ಟವಿಂತೆಂದಾ।।11।। ಗೆಜ್ಜೆ ಕಾಲಂದುಗೆಯ ಪಾದದಿ ಝಣಿರೆಂಬನಾದಗಳು। ಹರುಷದಿ ಹೆಜ್ಜೆ ಇಡುತಲೆ। ಎದ್ದು ಬಂದನು ಮುದ್ದುಮಗ ನಗುತಾ ಸಿದ್ದಿಸಿತು ಶಿವನ ಕಟಾಕ್ಷವೆಂದೂ ಉಚ್ಚರಿಸುತಿರಲೆತ್ತಿದನು ಕಂದನಾ ಧೀರ್ಘಾಯು ಸುಖನೀಡೆನುತಲೆ। ಶಿವಸುತನ ಹರಿಸಿದನೂ।।12।। ರಕ್ಷಿಸೈ ಋಷಭವಾಹನನೆ ಶಿವ ರಕ್ಷಿಸೈ ರಾಜಾಧಿನೇತ್ರನೇ। ರಕ್ಷಿಸೈ ರತಿಪತಿಯ ಧರನೇ। ಶಿವ ರಾಜಶೇಖರನೇ। ರಕ್ಷಿಸೈ ರಾಕ್ಷಸಾಂತಕನೆ ಶಿವ ರಕ್ಷಿಸೆನುತ್ತಿದ್ದಾ।।13।।

❖ ❖ ❖

78. ಶ್ರೀ ಹರಿಗುರು
ಸಂಕೀರ್ತನ, ಸ್ಮರಣ, ಭಜನ, ಪ್ರಾರ್ಥನ, ನಮನ

ಶುಕ್ಲಾಂಬರಧರಂ ವಿಷ್ಣುಂ

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ। ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪ ಶಾಂತಯೇ॥1॥ ಸರ್ವವಿಘ್ನ ಪ್ರಶಮನಂ ಸರ್ವಸಿದ್ಧಿಕರಂ ಪರಂ। ಸರ್ವಜೀವ ಪ್ರಣೇತಾರಂ ವಂದೇ ವಿಜಯದಂ ಹರಿಮ್॥2॥ ಸಮಚರಣ ಸರೋಜಂ ಸಾಂದ್ರನೀಲಾಂ ಬುದಾಭಂ। ಜಘನ ನಿಹಿತಪಾಣಿಂ ಮಂಡನಂ ಮಂಡನಾನಾಂ॥ ತರುಣ ತುಲಸಿ ಮಾಲಾ ಕಂಧರಂ ಕಂಜನೇತ್ರಂ। ಸದಯ ಧವಲಹಾಸಂ ವಿಠ್ಠಲಂ ಚಿಂತಯಾಮಿ॥3॥ ಶ್ರೀಮತ್ ಸೌಭಾಗ್ಯ ಜನನೀಂ ಸ್ತೌಮಿಲಕ್ಷ್ಮೀಂ ಸನಾತನೀಂ। ಸರ್ವಕಾಮ ಫಲಾವಾಪ್ತಿ ಸಾಧನೈಕ ಸುಖಾವಹಾಮ್॥4॥ ಬುದ್ಧಿರ್ಬಲಂ ಯಶೋಧೈರ್ಯಂ ನಿರ್ಭಯತ್ವಮರೋಗತಾ। ಅಜಾಡ್ಯಂ ವಾಕ್ಪಟುತ್ವಂಚ ಹನೂಮತ್ ಸ್ಮರಣಾದ್ಭವೇತ್॥5॥ ತಪೋವಿದ್ಯಾಂ ವಿರಕ್ತ್ಯಾದಿ ಸದ್ಗುಣೌ ಘಾಕರಾನಹಂ। ವಾದಿರಾಜ ಗೂರೂನ್ ವಂದೇ ಹಯಗ್ರೀವ ದಯಾಶ್ರಯಾನ್॥6॥ ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರತಾಯಚ। ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ॥7॥ ಮನ್ಮನೋ ಭೀಷ್ಟವರದಂ ಸರ್ವಾಭೀಷ್ಟ ಫಲಪ್ರದಂ। ಪುರಂದರ ಗುರುಂ ವಂದೇ ದಾಸ ಶ್ರೇಷ್ಠಂ ದಯಾನಿಧಿಂ॥8॥ ಅಜ್ಞಾನ ತಿಮಿರ ಚ್ಛೇದಂ ಬುದ್ಧಿ ಸಂಪತ್ ಪ್ರದಾಯಕಂ। ವಿಜ್ಞಾನ ವಿಮಲಂ ಶಾಂತಂ ವಿಜಾಯಾಖ್ಯ ಗುರುಂ ಭಜೇ॥9॥ ಭೂಪಾಲನತ ಪಾದಾಬ್ಜಂ ಪಾಪಾಲಿ ಪರಿಹಾರಿಣಂ। ಗೋಪಾಲದಾಸ ಮೀಡೇಹಂ ಗೋಪಾಲ ಹರಿ ದರ್ಶನಂ॥10॥ ಜಲ ಜೇಷ್ಠ ನಿಭಾಕಾರಂ ಜಗದೀಶ ಪದಾಶ್ರಯಂ। ಜಗತೀತಲ ವಿಖ್ಯಾತಂ ಜಗನ್ನಾಥಂ ಗುರುಂ ಭಜೇ॥12॥

ಏಳಯ್ಯ ಬೆಳಗಾಯಿತು ಏಳು ನಾರಾಯಣ (ಉದಯರಾಗ) ರಾಗ: ಭೂಪಾಳಿ-ಝಂಪೆತಾಳ

ಏಳಯ್ಯ ಬೆಳಗಾಯಿತು॥ಪ॥ ಏಳು ನಾರಾಯಣ ಏಳು ಲಕ್ಷ್ಮೀರಮಣ। ಏಳು ಶ್ರೀಗಿರಿವಾಸ ಶ್ರೀ ವೆಂಕಟೇಶ॥ಅ.ಪ.॥ ದಾಸರೆಲ್ಲರು ಬಂದು ಧೂಳಿದರ್ಶನಗೊಂಡು ಲೇಸಾಗಿ ತಾಳದಂಡಿಗೆಯ ಪಿಡಿದು। ಕೇಶವನೆ ನಿಮ್ಮ ಸಿರಿನಾಮವನೆ ಸ್ಮರಿಸುತಲಿ। ವಾಸುದೇವನ ಉದಯದಲಿ ಪಾಡುತಿಹರು॥1॥ ಕಾಸಿದ್ದ ಹಾಲುಗಳ ಕಾವಡಿಯಲ್ ತುಂಬಿಟ್ಟು। ಲೇಸಾಗಿ ಕೆನೆಮೊಸರು ಬೆಣ್ಣೆಯನು ಮೆದ್ದು। ಶೇಷಶಯನನೆ ಏಳು ಸಮುದ್ರಮಥನವ ಮಾಡು ದೇಶ ಕೆಂಪಾಯಿತೇಳಯ್ಯ ಹರಿಯೇ॥2॥ ಅರಳು ಮಲ್ಲಿಗೆ ಜಾಜಿ ಪರಿಮಳದ ಪುಷ್ಪಗಳ। ಸುರರು ತಂದಿಹರಯ್ಯ ಸುಜನರೊಡೆಯ। ಅರವಿಂದಲೋಚನನೆ ಕೋಳಿ ಕೂಗಿತು ಕೇಳು ಪುರಂದರವಿಠಲನೆ ಬೆಳಗಾಯಿತು॥3॥

ಮಂಗಳ ಸ್ನಾನಮಾಡೇಳೋ ಜಗನ್ಮಂಗಲದಾಯಕ (ಉದಯರಾಗ)

ಮಂಗಳ ಸ್ನಾನಮಾಡೇಳೋ ಜಗನ್ಮಂಗಲದಾಯಕ ಹರಿಯೆ ದಯಾಳೋ॥ಪ॥ ಸಣ್ಣ ನಾಮವ ಬರೆದಿಟ್ಟು ಬಹು। ಬಣ್ಣದ ಕುಂಕುಮ ಮಧ್ಯದಲಿಟ್ಟು। ಸಣ್ಣೆಟ್ಟ ಕಸ್ತೂರಿ ಬಟ್ಟು ಮಾಡು। ಪುಣ್ಯಾಹ ವಾಚನ ಪೀತಾಂಬರ ಉಟ್ಟು॥1॥ ದೇವರಿ ಗೊಂದನೆ ಮಾಡು ಕುಲ। ದೇವತೆ ಸ್ಥಾಪನೆ ಮನೆಯಲ್ಲಿ ಮಾಡು। ಕೇವಲೌಕಿಕನೋಡು ಭೂ। ದೇವರಿಗೊಂದಿಸಿ ವರಗಳ ಬೇಡು॥2॥ ನಾನಾ ದೇಶದಿ ಬಂದ ಜನರು ನಿನ್ನ। ಆನಂದೋತ್ಸವವಿದು ನೋಡುವೆನೆಂಬುವರು। ಸ್ನಾನಮಾಡಿಸುವ ಸೇವಕರು। ಅಚ್ಯುತಾನಂತಾದ್ರೀಶ ಸಿದ್ಧರಾಗಿಹರು॥3॥

ಸತತ ಗಣನಾಥ ಸಿದ್ಧಿಯನೀವ (ಉಗಾಭೋಗ) ರಾಗ: ನಾಟ

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ। ಮತಿ ಪ್ರೇರಿಸುವಳು ಪಾರ್ವತೀದೇವಿ ಮು। ಕುತಿ ಪಥಕೆ ಮನವೀವ ಮಹರುದ್ರದೇವರು ಗತಿ ಭಕುತಿದಾಯಕಳು ಸಿರಿ ಭಾರತೀದೇವಿ। ಯುಕುತಿ ಶಾಸ್ತ್ರಗಳಲ್ಲಿ ವನಜಸಂಭವನರಸಿ। ಸತ್ಕರ್ಮಗಳ ನಡೆಸಿ ಸುಜ್ಞಾನಮತಿಯಿತ್ತು। ಮತ್ತೆ ಪಾಲಿಸುವನಮ್ಮ ಪವಮಾನನು। ಚಿತ್ತದಲಿ ಆನಂದ ಸುಖವನೀವಳು ರಮಾ। ಭಕುತ ಜನರೊಡೆಯ ನಮ್ಮ ಪುರಂದರವಿಠ್ಠಲನು। ಸತತ ಇವರಲಿ ನಿಂತು ಕೃತಿಯ ನಡೆಸುವನು॥

ಎಲ್ಲಿ ಹರಿಕಥಾ ಪ್ರಸಂಗವೋ (ಉಗಾಭೋಗ)

ಎಲ್ಲಿ ಹರಿಕಥಾ ಪ್ರಸಂಗವೋ। ಅಲ್ಲಿ ಗಂಗಾ ಯಮುನಾ ಗೋದಾ ಸಿಂಧು ಸರಸ್ವತಿ। ಎಲ್ಲ ನದಿಗಳು ಬಂದು ಎಣೆಯಾಗಿ ನಿಲ್ಲುವವು। ವಲ್ಲಭ ಶ್ರೀಹರಿ ಮೆಚ್ಚುವನು॥ ಜಯಹರಿ ಎಂಬುವುದೇ ತಾರಾ ಬಲವು। ಜಯ ಹರಿ ಎಂಬುವುದೇ ವಿದ್ಯಾಬಲವು। ಜಯ ಹರಿ ಎಂಬುವುದೇ ದೈವ ಬಲವು। ಜಯ ಹರಿ ಪುರಂದರ ವಿಠಲನ ಬಲವಯ್ಯ ಸಕಲ ಸುಜನರಿಗೆ॥

ಗುರು ಮಧ್ವರಾಯರಿಗೆ ನಮೋ ನಮೋ **ರಾಗ: ಮೋಹನ**

ಗುರು ಮಧ್ವರಾಯರಿಗೆ ನಮೋ ನಮೋ। ಗುರುಮಧ್ವ ಸಂತತಿಗೆ ನಮೋನಮೋ॥ಪ॥ ಶ್ರೀಪಾದರಾಜರಿಗೆ ಗುರು ವ್ಯಾಸರಾಜರಿಗೆ। ಗುರು ವಾದಿರಾಜರಿಗೆ ನಮೋ ನಮೋ॥1॥ ರಾಘವೇಂದ್ರರಾಯರಿಗೆ ವೈಕುಂಠದಾಸರಿಗೆ। ಪುರಂದರದಾಸರಿಗೆ ನಮೋ ನಮೋ॥2॥ ಗುರು ವಿಜಯದಾಸರಿಗೆ ಭಾಗಣ್ಣದಾಸರಿಗೆ। ಶ್ರೀರಂಗವಲಿದ ದಾಸರಿಗೆ ನಮೋ ನಮೋ॥3॥ ಪರಮವೈರಾಗ್ಯಶಾಲಿ ತಿಮ್ಮಣ್ಣದಾಸರಿಗೆ। ಹುಂಡೇಕಾರ ದಾಸರಿಗೆ ನಮೋನಮೋ॥4॥ ಗುರು ಶ್ರೀಶವಿಠಲನ ಪರಮ ಭಕ್ತರ ಚರಣ। ಸರಸಿಜಯುಗಗಳಿಗೆ ನಮೋ ನಮೋ॥5॥

ಸ್ಮರಿಸು ಗುರುಗಳ ಮನವೆ **ರಾಗ: ಬಿಲಹರಿ-ಝಂಪೆತಾಳ**

ಸ್ಮರಿಸು ಗುರುಗಳ ಮನವೆ। ಸ್ಮರಿಸು ಗುರುಗಳ ನಿನಗೆ ಪರಮ ಮಂಗಳ। ದುರಿತ ಪರ್ವತಕೆ ಪವಿಯೆಂದು ತಿಳಿದು॥ಪ॥ ಉರಗ ವೃಶ್ಚಿಕವ್ಯಾಘ್ರ ಅರಸು ಚೋರಾಗ್ನಿ। ಕರಿಗಳ ಜ್ವರ ಮೊದಲಾದ ಭಯಗಳಿಂದ। ಪೊರೆದು ಮಂಗಳವೀವ ನರಹರಿಯ ದಾಸರ। ಚರಣ ಕಂಡೆನೋದುರಿತ ಪರಿಹಾರವಾಯಿತು॥1॥ ಗುರುಸ್ಮರಣೆಯಿಂದ ಸಕಲ ಆಪತ್ತು ಪರಿಹಾರ। ಗುರುಸ್ಮರಣೆಯಿಂದ ಸಕಲ ಸಂಪದವು ನಿನಗೆ॥ ಗುರುಸ್ಮರಣೆಯಿಂದ ವಿಶೇಷ ಧನ ದೊರಕುವದು। ಗುರಸ್ಮರಣೆಯಿಂದ ಹರಿಯೊಲಿದು ಪೊರೆವಾ॥2॥ ಗುರುಗಳಿಂದಧಿಕ ಇನ್ನಾರು ಆಪ್ತರು ನಿನಗೆ। ಗುರುಗಳೇ ಪರಮ ಹಿತಕರು ನೋಡು। ಗುರುಸ್ವಾಮಿ ವರದ ಗೋಪಾಲವಿಠಲ ಸರ್ವ। ದುರಿತಗಳ ಕಳೆವನು ಸುಖಗರೆವ ನೋಡು॥3॥

❖ ❖ ❖

ಎಂತು ಪೊಗಳಲಿ ಜಗನ್ನಾಥದಾಸರ **ರಾಗ: ಶ್ರೀರಾಗ-ಝಂಪೇತಾಳ**

ಎಂತು ಪೊಗಳಲಿ ಜಗನ್ನಾಥದಾಸರ ನಾ। ಕಂತುಪಿತ ಒಲಿದಿವರ ಅಂತರಂಗದಿ ಪೊಳೆವ ॥ಅ.ಪ.॥ ಶ್ರೀರಮಾದೇವಿ ಪತಿಯೊಡನೆ ಇವರಲಿ ನಿಂತು। ಈರೆರಡು ಅವ್ಯಕ್ತ ದೇಹ ಸಹಿತ॥ ಆರು ನಾಲಕು ತತ್ವದಭಿಮಾನಿಗಳ ಕೂಡಿ। ಮೂರು ಗುಣ ಕಾರ್ಯಗಳ ಮಾಡಿ ತೋರ್ಪಳು ಸುಖವ॥1॥ ಚತುರಮುಖ ವಾಯು ನಿಜ ಸತಿಯರಿಂದೊಡಗೂಡಿ। ಇತರ ದೇವತೆಗಳು ಸತತ ಇದ್ದು॥ ವಿತತ ಮಹಿಮನ ಸೇವಿಸುತಲಿ ಸುಜ್ಞಾನವನು। ಹಿತದಿಂದವರಿಗಿತ್ತತಿತೋಷ ಪಡಿಸುವರು॥2॥ ಕರುಣಾಭಿಮಾನಿಗಳು ಶಿವ ಇಂದ್ರ ಸೂರ್ಯರು ತಾವ್। ನಿರವಧಿಷ್ಠಾನದಲಿ ಹರಿಗರ್ಪಿಸಿ॥ ಸುರನರರ ತರತಮವ ಆರುಪಿ ಪಂಚಭೇದವನು। ಹರಿದಾಸ್ಯವಿತ್ತು ಪರಿಶೋಭಿಸುವರನುದಿನದಿ॥3॥ ಈ ಪರಿ ನಿರಂತರದಿ ಅಪಾದಮೌಲಿತನ। ಕಾಪಯೋಜಜ ಮುಖರ ರೂಪಂಗಳಲಿ॥ ಆ ಪರಮ ಪುರುಷನ ವ್ಯಾಪಾರ ನೋಡುತಲಿ। ಅಪಾರಮಹಿಮನ ಸ್ವರೂಪ ಸ್ಮರಿಸುತಲಿಹರು॥4॥ ಈ ಸುಮನಸರ ಮಹಿಮೆ ಸೂಸಿ ತಾ ತಿಳಿದು ನಿಜ। ದಾಸನಾದವನ ಅಘನಾಶನ॥ ಕಾಸಿನಾಶೆಗೆ ಪರರ ದಾಸನಾದವನು ಗುರು॥ ಶ್ರೀಶವಿಠಲನ ದಾಸರು ಮಹಿಮೆ ಬಲ್ಲನೆ॥5॥

ಸಂಗಸುಖವ ಬಯಸಿ ಬದುಕಿರೊ **ರಾಗ: ಆನಂದಭೈರವಿ-ರೂಪಕತಾಳ**

ಸಂಗಸುಖವ ಬಯಸಿ ಬದುಕಿರೊ ಸುಜನರೆಲ್ಲ। ರಂಗ ಒಲಿದ ಭಾಗವತರ॥ಪ॥ ಸಂಗ ಸುಖವ ಬಯಸಿ ಬದುಕಿ ಭಂಗ ಬಡಿಪ ಭವವ ನೂಕಿ। ಹಿಂಗದೆ ನರಸಿಂಗನನ್ನು ಕಂಗಳಿಂದಲಿ ಕಾಣುತಿಹರ॥ಅ.ಪ॥ ಪುಟ್ಟಿದಾರಭ್ಯ ಪರಮ

ವೈಷ್ಣವಾಧ್ಯಕ್ಷರೆನಿಸಿ। ಶಿಷ್ಯ ಸದಾಚಾರದಲ್ಲಿ ನಿಷ್ಠರಾಗಿ ನಿತ್ಯ ಮುದ್ದು। ಕೃಷ್ಣ ಕೀರ್ತನೆಯ ಪಾಡುತ, ಮಧ್ವಮತವ। ಪುಷ್ಟಿಗೈಸಿ ಖಳರ ಕಾಡುತ, ಕಾಮ್ಯಕರ್ಮ। ಬಿಟ್ಟು ಭಕ್ತಿಯನ್ನೇ ಮಾಡುತ, ಬಂದಲಾಭ। ನಷ್ಟ ತುಷ್ಟಿಗಲಿಗೆ ಒಡಂಬಟ್ಟ ಬಗೆಯ ಪೇಳಲೆಷ್ಟು॥1॥ ಭೂತದಯಾಶೀಲರಾದ ನೀತ ಗುರುದ್ವಾರ ಜಗ। ನ್ನಾಥ ವಿಠಲಾಂಕಿತವನು। ಪ್ರೀತಿಯಿಂದ ಪಡೆದು ಸಂಗೀತ ವೃತ್ತ ಪದಸುಳಾದಿಯ, ಪೇಳಿ ಪ್ರೇ। ಮಾತಿಶಯದಿ ಮಧುವಿರೋಧಿಯ, ಒಲಿಸಿಕೊಂಡು। ಜಾತರಾಗಿ ಜವನ ಬಾಧೆಯ, ಬಯಲುಮಾಡಿ ಖ್ಯಾತರಾಗಿಹರು ಪುಸಿಯ ಮಾತಿದಲ್ಲ ಮರೆಯಸಲ್ಲ॥2॥ ಮೇದಿನಿಯೊಳುಳ್ಳ ಗಂಗಾದಿತೀರ್ಥ ಪತಿಗಳಿವರ। ಕಾದುಕೊಂಡಿಹರು ಬಿಡದೆ ಸ್ವಾದಿರಾಜೇಂದ್ರರ ಪ್ರಸಾದದಿಂದ ಹರಿಕಥಾಮೃತಸಾರ ತತ್ತ್ವ ಸಾಧು ಜನರಿಗಾಗಿ ಪ್ರಾಕೃತಪದ್ಧತಿಯನ್ನು ಸಾದರದಲ್ಲಿ ಪೇಳಿ, ದುಷ್ಕೃತ ದೂರಮಾಡಿ ಮೋದಿಸುವರಿಗೆಣೆಗಾಣೆ ಶ್ರೀದ ವಿಠ್ಠಲನಾಣೆ॥3॥

ತಿಳಿಯೆನು ಎಂದೆಂದಿಗನ್ಯ-ರಂಗ

ತಿಳಿಯೆನು ಎಂದೆಂದಿಗನ್ಯ-ರಂಗ। ಒಲಿದ ದಾಸರು ಜಗನ್ಮಾನ್ಯ॥ಪ॥ ಅಲವ ಮಹಾತ್ಮರೆಂಬ ಪುಣ್ಯ ಕೀರ್ತಿ।ಗಳಕೇಳ್ವನವ ಧನ್ಯ॥ಅ.ಪ.॥ ಹಿರಣ್ಯಕಶಿಪುಜ ಸಲ್ಹಾದ-ನೇ। ಎರಡನೆಯ ಜನ್ಮದಿ ಶಲ್ಯನಾದ। ಗುರುವಾದಿರಾಜರನರ್ಚಿಸಿದ-ಪುರಂ। ದರದಾಸರಾಯರಲ್ಲುದಿಸಿದ॥1॥ ಐದನೆಯ ರೂಪವೀಗಿದಂತೆ-ಬ।ಹುದು ಏಳುಜನ್ಮ ಮುಂದಂತೆ। ಮೋದಾಭಿವೃದ್ಧಿಗೆನೋ ಅಂತೆ-ಎಂಬ। ವಾದಿಗಿದೆಲ್ಲ ಅಂತೆ-ಕಂತೆ॥2॥ ದಾಸಕೂಟಸ್ಥರಿಗೀ ಮಾತು ಕೆಲವು। ದೇಶಗಳಲ್ಲಿ ಅನುಭವವಾಯ್ತು। ಈಸು ಕಥಾ ಲಾಪವಲ್ಲಾಯಿತು ಶ್ರೀಪಾ। ದದೇಶ ವಿಠಲನಲ್ಲಿ ಹನಾತು॥3॥

❖ ❖ ❖

ಗೋಪಾಲದಾಸರ ಶ್ರೀಪಾದ ಸ್ಮರಿಸಲು

ಗೋಪಾಲದಾಸರ ಶ್ರೀಪಾದ ಸ್ಮರಿಸಲು ಆಪತ್ತು ಪರಿಹಾರವಾಗುವದು॥ಪ॥ ತರಣಿ ಉದಿತವಾಗೆ ತಮವು ನಿಲ್ಲುವುದುಂಟೆ ತವಕಿಸುವದು ಯಾತಕೆ॥ ಪರಮ ಕರುಣಿ ನಮ್ಮ ಗುರುಗಳ ನೆನೆದರೆ। ತ್ವರಿತದಲ್ಲೋಡುವವು ದುರಿತ ರಾಶಿಗಳು॥1॥ ಪವಿಗೆ ಮಣಿಯದ ಪರ್ವತಗಳುಂಟೆ। ಮಹಾಪವನಕೆ ಪಟನಿಲ್ಲವದುಂಟೆ। ಕರಿರಾಜ ಭಾಗಣ್ಣ ರಾಯರ ನೆನೆದರೆ। ಕವಿವವೆ ಕಲಿಮಲ ಕಲುಷಗಳೂ॥2॥ ಹರಿದಿನ ವ್ರತಕೆ ಪೋಗದ ಪಾಪಗಳುಂಟೆ। ಸರಸಗಳುಂಟೆನೊ ಶುಕ ಸಾಕುವಗೆ॥ ವರದ ಗೋಪಾಲ ವಿಠ್ಠಲದಾಸರ ಪಾದ। ನಿರುತ ನೆನೆವಗೆ ಉಂಟೇನೊ ಭೀತಿಗಳು॥3॥

ಬಾಗಿ ಬೇಡುವೆ ಪಿಡಿಯೋ ಬೇಗ

ಬಾಗಿ ಬೇಡುವೆ ಪಿಡಿಯೋ ಬೇಗ ಕೈಯ್ಯ। ಭಾಗವತ ಜನಪ್ರೀಯ ಭಾಗಣ್ಣದಾಸಾರ್ಯ॥ಪ॥ ದ್ವಿಜಕುಲಾಬ್ಧಿಗೆ ಪೂರ್ಣದ್ವಿಜರಾಜನೆಂದೆನಿಪ। ವಿಜಯವಿಠ್ಠಲದಾಸರೊಲುಮೆ ಪಾತ್ರ। ನಿಜಮನದಿ ನಿತ್ಯದಲಿ ಭುಜಗಶಯನನ ಪಾದ। ಭಜಿಪ ಭಾಗ್ಯದಿ ನಲಿವ ಸುಜನರೊಳಿಡು ಎಂದು॥1॥ ನೀನೇವೆ ಗತಿ ಎಂದ ದೀನರಿಗೆ ನಾನೆಂಬ। ಹೀನಮತಿ ಕಳೆದು ಪವಮಾನಪಿತನ। ಧ್ಯಾನಗೈಯುವ ದಿವ್ಯಜ್ಞಾನ ಮಾರ್ಗವ ತೋರಿ। ಸಾನುರಾಗದಿ ಪೊರೆವ ದಾನಿ ದಯವಾರಿಧಿಯೇ॥2॥ ಮಂದಜನ ಸಂದೋಹ ಮಂದಾರತರು ವಿಜಿತ। ಕಂದರ್ಪ ಕಾರುಣ್ಯ ಸಿಂಧು ಬಂಧೋ। ಕಂದನೆಂದರಿದೆನ್ನ ಕುಂದು ಎಣಿಸದೆ ಹೃದಯ। ಮಂದಿರದಿ ಶ್ರೀ ಶ್ಯಾಮಸುಂದರನ ತೋರೆಂದು॥3॥

ಗೋಪಾಲವಿಠಲ ನೀ ಕಾಪಾಡೋ — ರಾಗ: ಆನಂದಭೈರವಿ-ಆದಿತಾಳ

ಗೋಪಾಲವಿಠಲ ನೀ ಕಾಪಾಡೋ ಎನ್ನನು। ಅಪಾರಜನುಮದಿ ಪೊಂದಿಪ್ಪೆ ನಿನ್ನ॥ಪ॥ ಉದಿತ ತರಣಿನಿಭ ಪದಪದ್ಮ ನಿನ್ನಯ। ಹೃದಯದೊಳಗೆ ನಿಲಿಸಿ ಮುದದಿಂದ ಧೇನಿಪ। ಸದಯಗುರುಗಳ ಪಾದ ಪದುಮ ಸೇವಿಯನು। ಪೊದಗಿ

ಪಾಲಿಸೊ ಶಶಿವದನ ಸುಖಸದನನೆ॥1॥ ವಾಸುದೇವನೆ ನಿನ್ನ ದೋಷ ಎಂತೆಂದರೆ। ಆಸರಿನ್ನಾರೊ ನಿನ್ನ ದಾಸರ ದಾಸಗೆ। ವಾಸವನುತ ಹೀಗುದಾಸೀನ ಮಾಡಲು। ದಾಸಜನರು ನಿನ್ನ ಲೇಸು ಮೆಚ್ಚರೋ ಹರೇ॥2॥ಮಂದಜಾಸನಭವ ಇಂದ್ರಾದಿ ವಂದಿತ। ಸಿಂಧೂರವರದ ಅಘವೃಂದಾತಿದೂರನೆ। ಕುಂದಗಳನೆಣಿಸದಾ ನಂದದಿ ಎನ್ನನು। ತಂದೆ ಗೋಪಾಲ ವಿಠಲ ಪೊಂದಿದೆನೊ ನಿನ್ನ॥3॥

❖ ❖ ❖

ವಿಜಯರಾಯರ ಪಾದ ಭಜಿಸಿದವಗನವರತ — ರಾಗ: ಮೋಹನ-ಝಂಪೆತಾಳ

ವಿಜಯರಾಯರ ಪಾದ ಭಜಿಸಿದವಗನವರತ। ವಿಜಯವಾಗುವುದಕ್ಕೆ ಸಂದೇಹವೇಕೆ॥ಪ॥ ಗಜರಾಜ ವರದನಿಗೆ ನಿಜದಾಸರೆಂದೆನಿಸಿ। ದ್ವಿಜಕುಲದಲ್ಲಿ ಮೆರೆವರು, ಇವರು॥ಅ.ಪ.॥ ಮೊದಲು ಋಷಿಗಳು ಕೂಡಿ ಸತ್ರಯಾಗವನಾಕ। ನದಿಯ ತೀರದಿ ರಚಿಸಿಯಿರಲು। ಪದುಮ ಸಂಭವನಂಕ ಭವ ಬಂಧ ಮುನಿವೃಂದ। ಹೃದಯ ಸಂಶಯಹೊಂದಲು। ವಿಧಿ ವಿಷ್ಣುಶಿವರೊಳಗೆ ಉತ್ತಮರು ತೋರದಲೆ ಮದಡಭಾವವ ವಹಿಸಲು॥ ಒದಗಿ ಭೃಗುಮುನಿಗಳೇ ಸರ್ವೇಶ ವೈಕುಂತ ಸದನ ನೆಂದರುಹಿದವರೋ, ಇವರು॥1॥ ಆದೇವ ಮುನಿ ಪುಂರದರದಾಸರು ಈ ಮೇದಿನಿ ಸ್ಥಳಕೆ ಬರಲು। ಸಾಧು ಸಮ್ಮತವಾದ ಪದ ಪಂಚ ಲಕ್ಷಕ್ಕೆ ಪಾದವೇ ನ್ಯೂನವಿರಲು। ಆ ಪಾದವನು ಪೂರ್ತಿಪರು ಮತ್ಪುತ್ರರಿವರೆಂದು ಆದಿಯಲಿ ಸೂಚಿಸಿರಲು॥ಭೂದೇವ ಜನ್ಮ ದಿಂದಾದಾಸರಭಿಲಾಷೆ ಸಾಧಿಸಿದ ಸದಯರಿವರೋ, ಇವರು॥2॥ ವಿ ಎನಲು ವಿಮಲತೆಯು ಜ ಯೆಂದವಗೆ ಜಯವು, ಯ, ಎನಲು ಯಾಗ। ಫಲವೋ ರಾ ಎನಲು ರಾಜ್ಯವು ಯ ಎನಲು ಯಮಭಟರು ನೋಯಿಸರು। ಇವನ ಕುಲವು॥ ಈ ಯಾವದಕ್ಷರವು ಓಂಕಾರ ಸಹ ಪಠಿಸೆ ಕಾಯಜನ ಪಿತನ ಬಲವೊ। ಜಾಯ ಸಮೇತ ಮೋಹನ್ನ ವಿಠ್ಠಲನ ಪಾದ ತೋಯಜ ಭ್ರಮರ ರಿವರೋ ಇವರು॥3॥

ವಿಜಯರಾಯರ ಪಾದವ ನೀ ಭಜಿಸಿ — ರಾಗ: ಶುದ್ಧಸಾರಂಗ-ರೂಪಕತಾಳ

ವಿಜಯರಾಯರ ಪಾದವ ನೀ। ಭಜಿಸಿ ಬದುಕೆಲೊ ಮಾನವ॥ಪ॥ ವೃಜಿನವೆಲ್ಲವ ಕಳೆದು ಕರುಣದಿ। ಅಜನನಯ್ಯನ ತೋರುವ॥ಅ.ಪ.॥ ಜಗಕೆ ಹರಿ ಪರನೆಂದು ತಾ ಭುಜ। ಯುಗಗಳೆತ್ತಿ ಸಾರಿದಾ॥ ಭೃಗುಮುನಿ ಇವರೆಂದು ಭಾವಿಸಿ ಮಿಗೆ ಸುಭಕ್ತೀಲಿ ಸರ್ವದಾ॥1॥ ವರಹಜಾ ತಟದಲ್ಲಿ ಚೀಕಲ। ಪರವಿಗ್ರಾಮದಿ ಜನಿಸಿದ॥ ಪರಿಪರಿಯಲನುಭವಿಸಿ ಬಡತನ। ಜರಿದು ಭವವೈರಾಗ್ಯ ಧರಿಸಿದ॥2॥ ಭಕುತಿ ಪೂರ್ವಕವಾಗಿ ಬಿಡದಲೆ। ಸಕಲ ಕ್ಷೇತ್ರವ ಚರಿಸಿದಾ। ಮುಕುತಿ ಸುಖ ದಾತಾರನಾದ ಲಕುಮಿ ರಮಣನ ಸ್ತುತಿಸಿದಾ॥3॥ ತಾ ಸುಸ್ವಪ್ನದೊಳೊಂದು ದಿನ। ಶ್ರೀ ವ್ಯಾಸ ಕಾಶಿಗೆ ತೆರಳಿದಾ। ವಾಸುದೇವನ ಕಂಡು ನಮಿಸಿ। ಲೇಸು ವರ ಸ್ವೀಕರಿಸಿದಾ॥4॥ ಪುರಂದರಾ ಯರ ಕವನಗಳು। ಮೂರೆರಡುಲಕ್ಷಕ್ಕೆ ತ್ರಯಪದ। ಕೊರತೆ ಇರಲವರಾಜ್ಞೆಯಿಂದಲಿ। ಬರೆದು ತಾಪೂರೈಸಿದ॥5॥ ಬಾಲೆಯೋರ್ವಳು ಬಂದು ಪ್ರಾರ್ಥಿಸೆ। ಕೇಳುತಾಕೆಯ ಪತಿಯನು। ಕಾಲಪಾಶವ ಬಿಡಿಸಿದ ಕರುಣದಿ। ಪಾಲಿಸಿದ ಸುಮಹಾತ್ಮರ॥6॥ ಶ್ರೀಮನೋಹರ ಶಾಮ ಸುಂದರ। ನಾಮ ಮಹಿಮೆ ವಿಧವಿಧ। ಭೂಮಿಸುಮನಸ ಸ್ತೋಮಕನುದಿನ। ಪ್ರೇಮದಿಂದಲಿ ಬೀರಿದ॥7॥

ವಿಜಯರಾಯರ ಭಜಿಸೋ ಹೇ

ವಿಜಯರಾಯರ ಭಜಿಸೋ। ಹೇ ಮನುಜನೀ। ವಿಜಯರಾಯರ ಭಜಿಸೋ॥ಪ॥ ವಿಜಯ ರಾಯರಪಾದ ಭಜಿಸುವ ಮನುಜರ। ವೃಜನ ವಾರಿಧಿಗೆ ಕುಂಭಜ ರೆನಿಸಿದ ಗುರು॥ಅ.ಪ॥ ಮೊದಲು ಭೃಗುಮುನಿ ರೂಪದಿ ಶೀಘ್ರದಿ ಪೋಗಿ। ಬರಲು ಶ್ರೀಹರಿ ಲೋಕದಿ। ವಿಧಿ ವಿಷ್ಣು ಶಿವರೊಳು। ಪದುಮನಾಭನಿಗಿಂತ। ಅಧಿಕರಿಲ್ಲೆಂದು ನಾರದ ಮುನಿಗರುಹಿದ॥1॥ ಜಗದೊಳು ಸಕಲ ಕ್ಷೇತ್ರ ತೀರ್ಥಗಳ ಮಹಿಮೆಯ ವರ್ಣಿಸುತ। ಖಗರಾಜ ಗಮನ ಶ್ರೀ ಭಗವದ್ಗುಣಗಳನ್ನು। ಬಗೆಬಗೆ ಪದ ಸುಳಾದಿಗಳಿಂದ ಸ್ತುತಿಸಿದ॥2॥ ಕಾಶಿಯೊಳು ಸಂಪ್ರತ ಪುರಂಧರ ದಾಸರಿಂದಲಿ।

ಅಂಕಿತವನು ಪಡೆದು ಶೇಷಶಯನ ಶ್ರೀನಿವಾಸ ಕಾರ್ಪರನರಕೇಸರಿ ಗತಿ। ಪ್ರೀಯ ದಾಸರೆಂದೆ ನಿಸಿದ॥3॥

❖ ❖ ❖

ಕನಕದಾಸರ ಮೇಲೆ ದಯೆಮಾಡಲು **ರಾಗ: ಕಾಂಭೋದಿ-ಝಂಪೆತಾಳ**

ಕನಕದಾಸರ ಮೇಲೆ ದಯೆಮಾಡಲು ವ್ಯಾಸ। ಮುನಿಮಠದ ಜನರೆಲ್ಲ ದೂರಿಕೊಂಬು ವರೋ॥ಪ॥ ತೀರ್ಥವನು ಕೊಡುವಾಗ ಕನಕನ್ನ ಕರೆಯೆನಲು। ಧೂರ್ತನಾಗಿದ್ದ ವಿದ್ವಾಂಸರೆಲ್ಲ। ಸಾರ್ಥಕವಾಯಿತು ಇವರ ಸನ್ಯಾಸಿತನವೆಲ್ಲ। ಪೂರ್ತ್ಯಾಗಲೆಂತೆನಲು ಯತಿಯು ನಗುತಿಹನು॥1॥ ಮರುದಿನ ಅವರವರ ಪರೀಕ್ಷಿಸಲಿಬೇಕೆಂದು ಕರೆದು ವಿದ್ವಾಂಸರನ್ನು ಕನಕನ್ನ ಬಿಡದೆ ಕರದಲ್ಲಿ। ಕದಳಿಯ ಫಲಗಳನ್ನೆ ಕೊಟ್ಟು। ಯಾರಿರದ ಸ್ಥಳದಲ್ಲಿ ಮೆದ್ದು ಬನ್ನಿರೆನ್ನೆಲು॥2॥ ಊರ ಹೊರಗ್ಹೋಗಿ ಬೇರೆ ಬೇರೆ ಕುಳಿತು। ತೋರದಲೆ ಎಲ್ಲರೂ ಮೆದ್ದು ಬರಲು। ತೋರಲಿಲ್ಲವು ಎನಗೆ ಏಕಾಂತ ಸ್ಥಳವೆನುತ। ಸಾರಿ ಕದಳೀಫಲವ ತಂದು ಮುಂದಿಟ್ಟ॥3॥ ಡಿಂಭದೊಳು ಶಬ್ದವಾಗಾದಿ ಶ್ರೋತ್ರಾದಿಗಳಲ್ಲಿ। ಇಂಬಾಗಿ ತ್ರತ್ವೇಶರೆಲ್ಲ ತುಂಬಿಹರೊ। ತಿಂಬುವುದು ಹೇಗೆನುತ ವ್ಯಾಸರಾಯರ ಕೇಳೆ। ಸಂಭ್ರಮದವರೆಲ್ಲ ಕುಳಿತು ಕೇಳಿದರು॥4॥ ಮಾಣಿಕವು ಕೋಡಗನ ಕೈಯಲ್ಲಿ ಇದ್ದಂತೆ ಕೋಣನೆದುರಿಗೆ ಕಿನ್ನರಿಯ ಮೀಟಿದಂತೆ। ವೇಣುಧ್ವನಿ ಬಧಿರನ ಬಳಿ ಮಾಡಿದಂತೆ ಕಣ್ಣು। ಕಾಣದವನಿಗೆ ಕನ್ನಡಿಯ ತೋರಿದಂತೆ॥5॥ ನೋಡಿದರೆ ಈ ಕನಕನಾಡುವ ಮಾತುಗಳ। ಮೂಢ ಜನರರಿಯಬಲ್ಲರೆ ಮಹಿಮೆಯ। ನಾಡಾಡಿಯಂತೆಯೇ ಮಾಡಿಬಿಟ್ಟರು ಇವಗೆ। ನಾಡೆಲ್ಲ ಹುಡುಕಿದರು ಈಡಾರ ಕಾಣೆ॥6॥ ತಮ್ಮ ಕೈ ಮುಷ್ಠಿಯನು ಪಿಡಿದು ಕೇಳಲು ಯತಿಯು। ತಮತಮಗೆ ತೋರಿದ್ದು ಪೇಳೆ ಬ್ರಾಹ್ಮಣರು। ಗಮ್ಮನೆ ಕನಕ ಸಿರಿ ವಾಸುದೇವನೆ ಪರಬೊಮ್ಮ। ಪುರಂದರ ವಿಠಲನೆನುತ ಸಾರಿದನು॥7॥

ಲೇಸಿನಲಿ ದಾಸರಾದವರಲ್ಲವೋ

ಲೇಸಿನಲಿ ದಾಸರಾದವರಲ್ಲವೋ। ಶ್ರೀಶ ಶ್ರೀ ನೆಲೆಯಾದಿಕೇಶವಾಂಕಿತರು॥ಪ॥ ಶೇಷಗಿರಿವಾಸನ ದಯದಿಂದ ಜನಿಸಿದರು। ದಾಸಕುಲದಲ್ಲಿವರು ಸುಪ್ರಮುಖರು। ವಾಸುದೇವನೆ ತನ್ನ ದಾಸನಾಗೆಂದಿವರ। ಭಾಷೆ ಪಡೆದಾ ಮೇಲೆ ದಾಸರಾದವರಿವರು॥ಲೇಸಿನಲ್ಲಿ॥1॥ ಜಾಣಮಂತ್ರವು ಎಂದು ವ್ಯಾಸ ಗುರು ನೀಡಿದ। ಕೋಣ ಮಂತ್ರವಜಪಿಸಿ ಸಿದ್ಧಿ ಪಡೆದವರು। ಪ್ರಾಣಕುಲವೆಲ್ಲಕೂ ತ್ರಾಣನೆನಿಸಿದ ಮುಖ್ಯ। ಪ್ರಾಣದೇವರ ಪಂಥ ಸಾರಿದವರು॥2॥ ಚಿಣ್ಣ ಜಯಕೃಷ್ಣನ ಸ್ತುತಿಸಿ ಕಿಂಡಿಯ ತೆರೆಸಿ। ಕಣ್ಣು ಮನ ತಣಿವಂತೆ ಕಂಡವರು ಅವನ। ಬಣ್ಣದಾ ಈ ಬದುಕು ಎಂದಿಗೂ ನಿಲದೆಂದು। ಬೆಣ್ಣೆ ಮಾತುಗಳಲಿ ಬೋಧಿಸಿದರು॥3॥

ದಾಸರಾಯ ಪುರಂದರ ದಾಸರಾಯ **ರಾಗ: ಷಣ್ಮುಖಪ್ರಿಯ**

ದಾಸರಾಯ ಪುರಂದರ ದಾಸರಾಯ॥ಪ॥ ದಾಸರಾಯ ಪ್ರತಿವಾಸರದಲಿ ಶ್ರೀನಿ-। ವಾಸನ ತೋರೊ ದಯಾಸಾಂದ್ರ ಪುರಂದರ॥ಅ.ಪ.॥ ವರದನಾಮಕ ಭೂಮಿಸುರನ ಮಡದಿ ಬ-। ಸುರಲಿ ಜನಿಸಿ ಬಂದು ಮೆರೆದೆ ಧರಣಿಯೊಳು॥1॥ ಕುಲಿಶಧರಾಹ್ವಯ ಪೊಳಲೊಳು ಮಡದಿ ಮ-। ಕ್ಕಳ ಕೂಡೆ ಸುಖದಿ ಕೆಲವು ಕಾಲದೊಳಿದ್ಯೊ॥2॥ ವ್ಯಾಸರಾಯರಲಿ ಭಾಸುರ ಮಂತ್ರೋಪ-। ದೇಶವ ಕೊಂಡು ರಮೇಶನ ಭಜಿಸಿದೆ॥3॥ ಮನೆ ಧನಧಾನ್ಯ ವಾಹನ ವಸ್ತುಗಳನ್ನೆಲ್ಲ। ತೃಣಕೆ ಬಗೆದು ಕೃಷ್ಣಾರ್ಪಣವೆಂದ್ಯೊ ಬುಧರಿಗೆ॥4॥ ಪ್ರಾಕೃತ ಭಾಷೆಯೊಳ್ ನೀ ಕೃತಿ ಪೇಳಿ ಅ-। ಪ್ರಾಕೃತಹರಿಯಿಂದ ಸ್ವೀಕೃತನಾದೆ॥5॥ ತೀರ್ಥಕ್ಷೇತ್ರಗಳ ಮೂರ್ತಿ ಮಹಿಮೆಗಳ। ಕೀರ್ತಿಸಿ ಜಗದಿ ಕೃತಾರ್ಥನೆಂದೆನಿಸಿದೆ॥6॥ ಪಾತಕ ವನನಿಧಿ ಪೋತನೆನಿಪ ಜಗ-। ನ್ನಾಥವಿಠಲನ ಪ್ರೀತಿಯಿಂದೊಲಿಸಿದೆ॥7॥

ದಾಸರಿತ್ತರು ನಮಗೆ ದಯವತೋರಿ **ರಾಗ:ಕಾಂಬೋದಿ-ತ್ರಿಪುಟತಾಳ**

ದಾಸರಿತ್ತರು ನಮಗೆ ದಯವತೋರಿ। ಶ್ರೀಶ ಶ್ರೀ ಪುರಂದರ ವಿಠಲನಂಕಿತದಲ್ಲಿ॥ಪ॥ ಮಾತು ತಿಳಿಯಾದರೂ

ಮಧುವಿಗಿಂತಲು ಸಿಹಿಯು। ನೀತಿಯೇ ತುಂಬಿಹುದು ಅರ್ಥದಲ್ಲಿ। ಸೀತೆರಮಣಗೆ ಸಾಟಿಯಾರು ಎಂಬುವ ಧಾಟಿ। ಭೀತಿ ಇಲ್ಲವು ನಮಗೆ ಇದನು ಪಠಿಸಿದರೆ॥1॥ ಅನುದಿನದ ಆತಂಕ ಅಳಿಲಿಗೌಷದಿ ಇದು। ಅನವರತ ಪಾಡಿದರೆ ಆತ್ಮಶುದ್ಧಿ। ದನುಜಾರಿಯನು ಅರಿಯೆ ಅತಿಸುಲಭ ಹಾದಿ ಇದು। ಅನಂದವಿದು ಇಹಕೆ ಪರಕು ಸಾಧನವೂ॥2॥ ಪದವಲ್ಲವಯ್ಯ ಇದು ಪರಮ ಪದಕಾಸ್ಪದವು। ಇದರ ನುಡಿ ಹರಿ ಎಡೆಗೆ ಕಡೆದ ಸೋಪಾನ। ಒದಗಿಸಿರುವಕ್ಷರವು ಜಯಕೃಷ್ಣನನು ಭಜಿಸಿ। ಬದುಕಿರೋ ಎಂದೆಮನಗೆ ಸಾರುತ್ತಲಿಹುದು॥

ಅಡಿಗಳಿಗೊಂದಿಪೆ ಪುರಂದರ ಗುರುವೆ **ರಾಗ: ನಾಸಿಕಾಭೂಷಿಣಿ**

ಅಡಿಗಳಿಗೊಂದಿಪೆ ಪುರಂದರ ಗುರುವೆ॥ಪ॥ ಕಡು ಜ್ಞಾನ-ಭಕ್ತಿ-ವೈರಾಗ್ಯದ ನಿಧಿಯೆ॥ಅ.ಪ.॥ ವರ ಮಧ್ವಮತ ಕ್ಷೀರಾಂಬುಧಿಗೆ ಚಂದ್ರನಾದೆ। ಗುರು ವ್ಯಾಸರಾಯರಿಂದುಪದೇಶಗೊಂಡೆ। ಎರಡೆರಡು ಲಕ್ಷದಿಪ್ಪತ್ತೈದು ಸಾವಿರ। ವರ ನಾಮಾವಳಿ ಮಾಡಿ ಹರಿಗೆ ಅರ್ಪಿಸಿದೆ॥1॥ ಗಂಗಾದಿ ಸಕಲ ತೀರ್ಥಂಗಳ ಚರಿಸಿ ತು.। ರಂಗವದನ ವೇದವ್ಯಾಸರ ಹಿಂಗದೆ ಮನದಲ್ಲಿ ನೆನೆದು ನೆನೆದು ಮೆರೆವ। ಮಂಗಳ ಮಹಿಮೆಯನುತಿಸಿ ನುತಿಸಿ ನಾ॥2॥ ನಿನ್ನತಿಶಯ ಗುಣ ವರ್ಣಿಸಲಳವಲ್ಲ। ನಿನ್ನ ಸೇವಕನ ಸೇವಕನೆಂತೆಂದು। ಪನ್ನಗಶಯನ ಮುಕುಂದ ಕರುಣ ಪ್ರ-। ಸನ್ನ ವಿಜಯವಿಠ್ಠಲ ಸಂಪನ್ನ॥3॥

ದಾಸರೇ ಗತಿಯು ನಮಗೆ **ರಾಗ: ಕಾಂಭೋದಿ-ಝಂಪೇತಾಳ**

ದಾಸರೇ ಗತಿಯು ನಮಗೆ। ಕಾಸುವೀಸವು ಬೇಡದಂಥ ಸಿರಿ ಪುರಂದರ॥ಪ॥ ನದಿಗಳಿಗೆ ಜಲಧಿ ಗತಿ ನರರಿಗೆಲ್ಲರಸು ಗತಿ। ಸುದತಿಯರಿಗೆಲ್ಲ ನಿಜಪತಿಯೇ ಗತಿ। ಸದಕಾಲ ಶಿಷ್ಯರಿಗೆ ಗುರುಚರಣಗಳೆ ಗತಿಯು। ಮುದದಿಂದ ಕರವೆತ್ತಿ ಕೂಗುವೆನು ಪುರಂದರ॥1॥ ತನಯರಿಗೆ ತಾಯಿಗತಿ ಸಸಿಗಳಿಗೆ ಮಳೆಯೆ ಗತಿ। ವನದ ಲತೆಗಳಿಗೆಲ್ಲ ತರುವೆ ಗತಿಯೊ ಮನೆಗೆ ಬಂದದಥಿತಿಗಳಿಗನ್ನದಾನವೆ ಗತಿಯೊ। ದಣಿದ್ಹಕ್ಕಿಗಳಿಗೆ ಗಿಡಗೋಪುರವೆ ಗತಿಯೊ॥2॥ ರಾಮಕಪಿಗಳ ನಮ್ಮ ಹನುಮಪ್ಪ ಕಾಯ್ದಂತೆ। ಸ್ವಾಮಿ ಸಿರಿ ಬಾದರಾಯಣವಿಟ್ಠಲನ। ಶ್ರೀಮನೋಹರ ಚರಣಸೇವಕರನುದ್ಧರಿಪ। ಆ ಮಹಾ ನಾರದಾತ್ಮಕರಾದ ಪುರಂದರ॥3॥

❖ ❖ ❖

ಬಾರೋ ಗುರು ರಾಘವೇಂದ್ರ **ರಾಗ: ಮಧ್ಯಮಾವತಿ-ಅಟ್ಟತಾಳ**

ಬಾರೋ ಗುರು ರಾಘವೇಂದ್ರ। ಬಾರಯ್ಯ ಬಾ ಬಾ॥ಪ॥ ಹಿಂದು ಮುಂದಿಲ್ಲೆನಗೆ ನೀ ಗತಿ। ಎಂದು ನಂಬಿದೆ ನಿನ್ನ ಪಾದವ। ಬಂಧನವ ಬಿಡಿಸೆನ್ನ ಕರಪಿಡಿ। ನಂದಕಂದ ಮುಕುಂದ ಬಂಧು॥ಅ.ಪ॥ ಸೇವಕನೆಲೊ ನಾನು। ಧಾವಿಸಿ ಬಂದೆನು। ಸೇವೆ ನೀಡೆಲೋ ನೀನು॥ ಸೇವಕನ ಸೇವೆಯನು ಸೇವಿಸಿ। ಸೇವ್ಯಸೇವಕಭಾವವೀಯುತ॥ ಠಾವುಗಾಣಿಸಿ ಪೊರೆಯೋ ಧರೆಯೊಳು। ಪಾವನಾತ್ಮಕ ಕಾವ ಕರುಣಿ॥1॥ ಕರೆದರೆ ಬರುವಿಯೆಂದು। ಸಾರುವುದು ಡಂಗುರ। ತ್ವರಿತದಿ ಒದಗೋ ಬಂದು॥ ಜರಿಯ ಬೇಡವೊ ಬರಿದೆ ನಿನ್ನಯ। ವಿರಹ ತಾಳದೆ ಮನದಿ ಕೊರಗುವೆ। ಹರಿಯ ಸ್ಮರಣೆಯ ನಿರುತದಲಿ। ಎನಗ್ಹರುಷದಲಿ ನೀ ನಿರುತ ಕೊಡುತಲಿ॥2॥ ನರಹರಿಯ ಪ್ರಿಯನೆ ಬಾ। ಗುರು ಶ್ರೀಶವಿಠಲನ ಕರುಣಾಪಾತ್ರನೆ ಬೇಗ ಬಾ। ಗುರುವರನೆ ಪರಿಪೋಷಿಸೆನ್ನನು। ಮರೆಯದಲೆ ತವ ಚರಣಕೋಟಿಯಲಿರಿಸಿ। ಚರಣಾಂಬುಜವ ತೋರುತ ತ್ವರಿತದಲಿ ಓಡೋಡಿ ಬಾ ಬಾ॥3॥

ತುಂಗಾತೀರ ವಿರಾಜಂ **ರಾಗ: ಮಲಯಮಾರುತ**

ತುಂಗಾತೀರ ವಿರಾಜಂ ಭಜಮನ। ರಾಘವೇಂದ್ರ ಗುರುರಾಜಂ ಭಜಮನ॥ಪ॥ ಮಂಗಳಕರ ಮಂತ್ರಾಲಯವಾಸಂ।

ಬೃಂದಾವನ ಸನ್ಮಂದಿರ ವಾಸಂ॥ಅ.ಪ॥ ಕರಧೃತ ದಂಡಕಮಂಡಲ ಮಾಲಂ॥ ಸುರಚಿರಚೇಲಂ ಧೃತಮಣಿ ಮಾಲಂ। ನಿರುಪಮಸುಂದರಕಾಯ ಸುಶೀಲಂ। ವರ ಕಮಲೇಶಾರ್ಚಿತ ನಿಜ ಸಕಲಂ॥

ಮಂತ್ರಾಲಯದೊಳು ರಾಜಿಪನಾರೆ — ರಾಗ: ಆರಭಿ-ಆದಿತಾಳ

ಮಂತ್ರಾಲಯದೊಳು ರಾಜಿಪನಾರೆ। ಸಂತರ ಒಡೆಯರ ನೋಡುವ ಬಾರೆ॥ಪ॥ ಇಂದ್ರನೀಲಮಣಿ ಕಾಂತಿಯಂತೆಸೆಯುವ। ಬೃಂದಾವನ ಸನ್ಮಂದಿರನಾರೆ। ಎಂದಿಗು ಕುಂದದ ಮಹಿಮ ಮುನೀಂದ್ರರು। ವಂದಿತ ಶ್ರೀ ರಾಘವೇಂದ್ರ ಕಣಮ್ಮ ॥1॥ ಗಂಧ ತುಳಸೀಮಾಲ ದಂಡಕಮಂಡಲ। ಸುಂದರ ಕಾಷಾಯ ವಸನನು ಯಾರೆ। ವಂದಿತ ಕನ್ನಡರಾಯನಘವ ತರಿದು। ಚಂದ್ರಿಕೆ ರಚಿಸಿದ ವ್ಯಾಸಯತೀಂದ್ರನೆ॥2॥ ಚೆಂದದಿ ಮಣಿಮಯ ಮುಕುಟವ ಧರಿಸಿಹ। ಸುಂದರ ಬಾಲಕ ನಿವನಾರೆ। ತಂದೆ ಅಸಿಹಿರಿದು ಕಮಲೇಶನ ತೋರೆನೆ। ಮುಕುಂದನ ತೋರಿದ ಬಾಲ ಪ್ರಹ್ಲಾದನೆ॥3॥

ಇಂಥಾಗುರುವ ಕಾಣೆನೋ

ಇಂಥಾಗುರುವ ಕಾಣೆನೋ। ಈ ಧರೆಯೊಳಿನ್ನಿಂಥಾ। ಗುರುವ ಕಾಣೆನೋ॥ಪ॥ ಇಂಥಾ ಗುರುವ ಕಾಣೆ ಕಂತುಪಿತನದಿವ್ಯ। ಚಿಂತನ ಮಾಡುತ ಸನ್ಮಂತ್ರಾಲಯ ನಿವಾಸ॥ಅ.ಪ.॥ ಬೃಂದಾವನದಿ ಮೆರೆವಾ। ನಂದನಕಂದ ಗೋವಿಂದನಾ ನೆನೆವಾ। ಬಂದು ವಂದಿಪ ಜನರ। ಮಂದಮತಿಯ ಕಳೆದು। ಸಂದೇಹವಿಲ್ಲದೆ ತಂದೆ ತಾಯಿಯಂತೆ॥ ಕುಂದದವರಗಳ। ಛಂದದಿ ಕೊಡುವನು। ಹಿಂದಿನ ಅಘ ಒಂದೊಂದು ಎಣಿಸದೆ। ಮುಂದೆ ಮುಕುಂದನ। ಪಾದವ ತೋರಿಸಿ। ಎಂದೆಂದಿಗೂ ಆನಂದ ಕೊಡುವನೆಂಬೊ॥1॥ ಚಂಡಾಮರ್ಕರು ಖಂಡಿಸಿ। ಚಂದ್ರಿಕೆಗೈದುದ್ದಂಡ। ಪಂಡಿತನೆನಿಸಿ। ಕಂಡ ಕಂಡವರಘವ। ತುಂಡು ತುಂಡನೆ ಮಾಡಿ। ಪುಂಡರೀಕಾಕ್ಷನ ಕಂಡು ಬ್ರಹ್ಮಾಂಡದಿ॥ ಭೂಮಂಡಲಪತಿ। ಮಂಡೋದರಿ ಪತಿ। ದಶತುಂಡನ ಶಿರ ಚಂಡಾಡಿದ। ದಂಡಧರನಪದ ಪುಂಡರೀಕ। ಕೊಂಡಾಡಿ ಕಮಂಡುಲ। ದಂಡವ ಧರಿಸಿದ॥2॥ ದುರ್ವಾದಿಗಳ ಜಯಿಸಿ। ಸರ್ವೋತ್ತಮ। ಸರ್ವದಾರನ್ನೆಭಜಿಸಿ। ಪೂರ್ವಾವತಾರದಲ್ಲಿ। ಗರ್ವಾಂಧಕಶ್ಯಪನ। ಗರ್ವಾಪಹರಿಸಿದ। ಸರ್ವೇಶಹರಿಗೇ॥ ಸರ್ವಕಾಲದಲಿ। ಸರ್ವಸಮರ್ಪಿಸಿ। ಸರ್ವಾಂತರ್ಗತ। ಸರ್ವನಿಯಾಮಕ। ಸರ್ವಸಾಕ್ಷಿ ಜಗರಕ್ಷಕ। ಸರ್ವಾಧೀಶ್ವರ ನರಹರಿ। ಚಾರುಚರಣಕಿನ್ನಿಂಥಾ॥3॥ ಸುಧೀಂದ್ರವರ ಕುವರಾ। ಜಿತೇಂದ್ರಿಯ। ಅದ್ವೈತಾಂತಕ ಚತುರಾ। ಇಂದ್ರಚಂದ್ರಾದಿವಂದ್ಯ। ಗಜೇಂದ್ರ ಭಯಹರ। ಫಣೇಂದ್ರ ಶಯನಶ್ರೀ। ಉಪೇಂದ್ರಭಜಕಪ॥ ಸುಶೀಲೇಂದ್ರ ಕರಜಾತ। ಸುವ್ರತೀಂದ್ರ ಕರಜನಿತ ದಯಾನಿಧಿ। ಸೌಖ್ಯಸುಧಾ ಸುಯಮೀಂದ್ರ। ಕರಾರ್ಚಿತ। ರಾಘವೇಂದ್ರ ಗುರು ಸಾರ್ವಭೌಮರೆಂಬೊ॥4॥ ಹೇಮ ಕಶ್ಯಪ ಪುತ್ರ। ಕಾಮಾದಿರಹಿತ। ಪರಮ ಪವಿತ್ರ ಚರಿತ್ರ। ಕಾಮಾರಿ ಪಿತ ಪೂಜ್ಯ। ಮೂಲ ರಾಮರ ಪಾದ। ನೇಮದಿಂ ನಿತ್ಯದಲ್ಲಿ। ಪ್ರೇಮದಿಂ ಭಜಿಸಿದ। ಸೋಮಸಮಾನನ। ಶಾಮಲ ಕೋಮಲ। ಕಾಮಜನಕ। ನಿಗಮಾಗಮ ವಾಮನ। ಕಾಮಾರೀ ಸನ್ಮಾನ್ಯರಮಾಪತಿ। ರಾಮವಿಠಲ ಕಮಲೇಶನಾಮಪ್ರಿಯ॥5॥

ಪ್ರಹ್ಲಾದರಾಯರ ಚರಿತೆಯ — ರಾಗ: ಸಾರಂಗ

ಪ್ರಹ್ಲಾದರಾಯರ ಚರಿತೆಯ ಪಾಡಿದವ। ಶಾಶ್ವತ ಲೋಕವ ತಪ್ಪದೆ ಪಡೆಯುವ॥ಪ॥ ಪ್ರಹ್ಲಾದನ ಪಿತ ಹರಿಯ ದ್ವೇಷಿಸಿದ। ಹರಿಯಿಂದಲೆ ತಾ ಮುಕ್ತಿಯ ಪಡೆದ। ಪರಮ ಭಾಗ್ಯವಿದು ಅಸುರ ರಾಜನದು। ಪುತ್ರ ಪ್ರಹ್ಲಾದನ ನಿಷ್ಠೆಯ ಫಲವಿದು॥1॥ ಗರ್ಭದಿಂದಲೇ ತಾ ಹರಿಭಕ್ತನಾದವ। ಗರ್ಭದಿಂದಲೆ ತಾ ಜ್ಞಾನಿಯೆನಿಸಿದವ। ನಾರದ ಉಪದೇಶ ಶಿರಸಾವಹಿಸಿದವ। ಸರ್ವತ್ರದಲ್ಲಿಯೂ ಹರಿಯ ಕಂಡವ॥2॥ ಹರಿಹರಿ ಹರಿ ಎಂದು ಸರ್ವದಾ ಭಜಿಸಿದವ। ಹರಿಮಹಿಮೆಯನು ಜಗಕೆ ಸಾರಿದವ। ಹರಿಯಿಂದಲೇ ಪರಮಪದ ಎಂದವ। ಚೈತನ್ಯ ದಾಸಗೆ ಭಕ್ತಿಪಥ ತೋರಿದವ॥3॥

ಬಾಗಿ ಭಜಿಸುವೆ ಯತಿಯೆ **ರಾಗ: ನೀಲಾಂಬರಿ-ಆದಿತಾಳ**

ಬಾಗಿ ಭಜಿಸುವೆ ಯತಿಯೆ ರಾಗದಿಂದಲಿ ನಿನ್ನ। ತ್ಯಾಗಿಕುಲ ತಿಲಕ ಶ್ರೀ ರಾಘವೇಂದ್ರಾ ಗ್ರಣಿಯೆ।।ಪ।। ಶ್ರೀರಾಘವೇಂದ್ರ ನಿಮ್ಮ ಚಾರುಚರಣವ । ಸಾರಿದೆ ಶರಣ ಮಂದಾರ ಕರುಣವ।।ಅ.ಪ.।। ಜಗದೊಳದ್ಭುತ ಮಹಿಮ ಭಾಗವತ ಜನಸ್ತೋಮ। ತುಂಗಾ ತೀರದ ನಾಮ, ಮಂಗಳಪ್ರದನಾಮ। ತುಂಗ ವಿಕ್ರಮನಾದ ಹರಿಯ ಸ್ತಂಭದಿ ತರಿಸಿ। ಭಂಗಗೊಳಿಸಿದೆ ಪಿತನ ರಂಗಪ್ರಿಯ ಪ್ರಹ್ಲಾದ।।1।। ಬಾರಿ ಬಾರಿಗೂ ನಿನ್ನ ಚರಣ ಕಮಲವ ನೆನೆಯೆ ಮರೆಯದಲೆ ನೀನವರ ಅತಿಶಯದಿ ಪೊರೆವೆ। ಪರಮ ಕರುಣಾಜಲಧಿ ಹರಿ ಮತಾಂಬುಜ ತರಣಿ। ವರದ ಕಮಲೇಶಪ್ರಿಯ ಕರಪಿಡಿದು ಸಲಹಯ್ಯ।।2।।

ರಥವನೇರಿದ ರಾಘವೇಂದ್ರರಾಯ **ರಾಗ: ಮೋಹನ-ಆದಿತಾಳ**

ರಥವನೇರಿದ ರಾಘವೇಂದ್ರರಾಯ ಗುಣಸಾಂದ್ರ।।ಪ।। ಸತುವ ಮಾರ್ಗದಿ ಸಂತರ ಸೇವಿಪರಿಗೆ ಹಿತದಿಂದಲಿ ಮನೋರಥವ ಕೊಡುವೆನೆಂದು।।ಅ.ಪ।। ಚತುರದಿಕ್ಕು ವಿದಿಕ್ಕುಗಳಲ್ಲಿ ಸ್ಮರಿಸುವ ಜನರಲ್ಲಿ। ಮಿತಿಯಿಲ್ಲದೆ ಬಂದು ಓಲೈಸುತಲಿ ವರಗಳ ಬೇಡುತಲಿ। ನುತಿಸುತ ಪರಿಪರಿ ನತರಾಗಿ ಹರಿಗೆ। ಗತಿ ನೀಡದೆ ಸರ್ವಥಾ ನಾ ಬಿಡೆನೆಂದು।।1।। ಅತುಳಮಹಿಮನಾ ದಿನದಲ್ಲಿ ದಿತಿಜವಂಶದಲ್ಲಿ। ಉತ್ಪತ್ತಿಯಾಗಿ ಉಚಿತದಲ್ಲಿ ಉತ್ತಮ ಮತಿಯಲ್ಲಿ ಅತಿಶಯವಿರುತಿರೆ ಪಿತನ ಬಾಧೆಗೆ ಮನ್ಮಥ। ಪಿತನೊಲಿಸಿದ ಜಿತ ಕರಣದಲಿ।।2।। ಪ್ರಥಮ ಪ್ರಹ್ಲಾದ ವ್ಯಾಸಮುನಿಯೆ ರಾಘವೇಂದ್ರಯತಿಯೆ। ಪತಿತೋದ್ಧಾರಿಯೆ ಪಾವನ ಕಾರಿಯೆ ಕರ ಮುಗಿವೆನು ದೊರೆಯೆ ಕ್ಷಿತಿಯೊಳು ಗೋಪಾಲವಿಠಲನ ನೆನೆಯುತ ವರ ಮಂತ್ರಾಲಯದೊಳು ಶುಭವೀಯುತಲಿ।।3।।

ರಾಘವೇಂದ್ರ ಗುರುರಾಯರ ಸೇವಿಸಿರೋ

ರಾಘವೇಂದ್ರ ಗುರುರಾಯರ ಸೇವಿಸಿರೋ। ಸೌಖ್ಯದಿ ಜೀವಿಸಿರೋ।।ಪ।। ತುಂಗಾತೀರದಿ ರಘುರಾಮನ ಪೂಜಿಪರೋ। ನರಸಿಂಗನಭಜಕರೋ।।ಅ.ಪ।। ಶ್ರೀಸುಧೀಂದ್ರ ಕರ ಸರೋಜ ಸಂಜಾತ। ಜಗದೊಳಗೆ ಪುನೀತ। ದಾಶರಥಿಯ ದಾಸತ್ವವ ತಾನ್ವಹಿಸಿ। ದುರ್ಮತಗಳ ಜಯಿಸಿ। ಈ ಸಮೀರ ಮತ ಸಂಸ್ಥಾಪಕರಾಗಿ। ನಿಂದಕರನು ನೀಗಿ। ಭೂಸುರರಿಗೆ ಸಂಸೇವ್ಯ ಸದಾಚರಣೀ। ಕಂಗೊಳಿಸುವ ಕರುಣಿ।।1।। ಕುಂದದೆ ವರ ಮಂತ್ರಾಲಯದಲ್ಲಿರುವ। ಕರೆದಲ್ಲಿಗೆ ಬರುವ। ವೃಂದಾವನಗತ ಮೃತಿಕೆ ಜಲಪಾನ। ಮುಕ್ತಿಗೆ ಸೋಪಾನ।। ಸಂದರ್ಶನ ಮಾತ್ರದಲಿ ಮಹಾತ್ಪಾಪ। ಬಿಡಿದೋಡಿಸಲಾಪ। ಮಂದಭಾಗ್ಯರಿಗೆ ದೊರೆಕದಿವರ ಸೇವಾ। ಶರಣರ ಸಂಜೀವಾ।।2।। ಶ್ರೀದವಿಠ್ಠಲನ ಸನ್ನಿಧಾನ ಪಾತ್ರ। ಸಂಸ್ತುತಿಸುವ ಮಾತ್ರ। ಮೋದಪಡಿಸುತಿಹ ತಾ ನಿಹಪರದಲ್ಲಿ। ಈತಗೆ ಸರಿಯೆಲ್ಲಿ। ಮೇದಿನಿಯೊಳಗಿನ್ನರಸಲು ನಾ ಕಾಣೆ। ಪುಸಿಯಲ್ಲೇನ್ನಾಣೆ। ಪಾದಸ್ಮರಣೆಯ ಮಾಡದವನೆ ಪಾಪಿ। ನಾ ಪೇಳುವೆ ಸ್ಥಾಪಿ।।3।।

ತುಂಗಾತೀರದಿ ನಿಂತ ಸುಯತಿವರನ್ಯಾರೆ

ತುಂಗಾತೀರದಿ ನಿಂತ ಸುಯತಿವರನ್ಯಾರೆ ಪೇಳಮ್ಮಯ್ಯ ಪೇಳಮ್ಮಯ್ಯಾ।।ಪ।। ಸಂಗೀತಪ್ರಿಯ ಮಂಗಳ ಸುಗುಣಿ ತರಂಗ ಮುನಿಕುಲೋತ್ತುಂಗ ಕಾಣಮ್ಮ ಕಾಣಮ್ಮ ।।ಅ.ಪ.।। ಚಲುವ ಚೆನ್ನಿಗ ಫಣೆಯಲಿ ತಿಲಕನಾಮಗಳು ನೋಡಮ್ಮಯ್ಯ। ನೋಡಮ್ಮಯ್ಯ। ಜಲಜ ಮಣಿಯು ಕೊರಳೊಳು ತುಳಸಿ ಮಾಲೆಗಳು। ಪೇಳಮ್ಮಯ್ಯ ಪೇಳಮ್ಮಯ್ಯ। ಸುಲಲಿತ ದಂಡಕಮಂಡಲ ಧರಿಸಿಹನ್ಯಾರೇ ನೋಡಮ್ಮಯ್ಯ ನೋಡಮ್ಮಯ್ಯ। ಖೂಳ ಹಿರಣ್ಯಕನಲ್ಲಿ ಜನಿಸಿದ ಪ್ರಹ್ಲಾದನು ತಾನಿಲ್ಲಿಹನಮ್ಮ ।।1।। ಸುಂದರ ಚರಣಾರವಿಂದಕೆ ಸುಭಕುತಿಯ ಪೊಂದಿ ಪೇಳಮ್ಮಯ್ಯ ಪೇಳಮ್ಮಯ್ಯ।। ವಂದಿಸಿ ಸ್ತುತಿಸಲು ಬಂದ ಭೂಸುರರಿಂದ ನೋಡಮ್ಮಯ್ಯ। ನೋಡಮ್ಮಯ್ಯ।। ಚಂದದಲಂಕೃತಿಯಿಂದ ಶೋಭಿಪಾನಂದ ನೋಡಮ್ಮಯ್ಯ। ನೋಡಮ್ಮಯ್ಯ। ಹಿಂದೆ ವ್ಯಾಸರಾಯಮುನಿಯೆಂದೆನಿಪ ಕರ್ಮೇಂದ್ರಿಯಗಳ ಸುರಯತೀಂದ್ರ ಕಾಣಮ್ಮ ಕಾಣಮ್ಮ ।।2।। ಅಭಿನವ ಜನಾರ್ಧನ ವಿಠಲನ ಪದಧ್ಯಾನಿಸುವರು ನೋಡಮ್ಮಯ್ಯ। ನೋಡಮ್ಮಯ್ಯ।।

ಅಭಿವಂದಿತರಿಗೆ ಅಖಿಲಾರ್ಥಗಳ ಸಲ್ಲಿಸುವ ಕಾಣಮ್ಮಯ್ಯ। ಕಾಣಮ್ಮಯ್ಯ।। ನಭಮಣಿಯಂದದಿ ಬಹುವಿಧದಿಂದಲಿ ರಾಜಿಸುವವನು ನೋಡಮ್ಮಯ್ಯ। ನೋಡಮ್ಮಯ್ಯ।। ಶುಭಗುಣ ಗಣನಿಧಿ ರಾಘವೇಂದ್ರಗುರು ಅಬ್ಜಭವಾಂಡದಿ ಪ್ರಬಲ ಕಾಣಮ್ಮ।।3।।

ಮಂಗಳ ಶ್ರೀರಾಘವೇಂದ್ರಗೆ

ಮಂಗಳ ಶ್ರೀ ರಾಘವೇಂದ್ರಗೆ ಶುಭ। ಮಂಗಳ ಸುಜನಾಂಬುಧಿ ಚಂದ್ರಗೆ।।ಪ।। ಶ್ರೀ ಸುಧೀಂದ್ರ ಕುಮಾರಗೆ ಮಂಗಳ। ಭೂಸುರನುತ ಮಹಿಮಗೆ ಮಂಗಳ। ದೇಶಿಕ ಕುಲವನ ಜಾತನಿಗೆ ಮಂಗಳ। ಭಾಸುರ ಕೀರ್ತಿಯ ಪಡೆದವಗೆ।।1।। ವೃಂದಾವನ ದಿವಿಯೊಳಗೆ ಸುರದ್ರುಮ। ದಂದದಿ ರಾಜಿಸುವವಗೆ ಮಂಗಳ। ಅಂಧ ಪಂಗು ಮೂಕ ಬಧಿರರೀಪ್ಸಿತ। ಸಂದೋಹ ಸಲಿಸುವ ಮುನಿಗೆ।।2।। ಭೂತ ಪ್ರೇತ ಬೇತಾಳ ವಿಪಿನ ಭಯ। ವೀತಿಹೋತ್ರನಿಗೆ ಮಂಗಳ। ವಾತ ಜನಕ ಜಗನ್ನಾಥ ವಿಠಲನ। ದೂತರ ಸಲಹುವ ದಾತನಿಗೆ।।3।।

❖ ❖ ❖

ವಂದಿಪೆ ಚರಣಾರವಿಂದಕೆ

ವಂದಿಪೆ ಚರಣಾರವಿಂದಕೆ ಸದ್ಗುರುವಾದಿರಾಜ। ಮಂದಮತಿಯ ಬಿಡಿಸಿ ಇಂದಿರೇಶನ ತೋರೋ ವಾದಿರಾಜ। ದುರುಳಬುದ್ಧಿಯಲಿಂದ ಮರೆತು ಬಿಟ್ಟೆನಿನ್ನ ವಾದಿರಾಜ। ಧರಣಿಮಂಡಲದೊಳು ಪಾಪಿಷ್ಠ ನಾನಾದೆ ವಾದಿರಾಜ। ಪರಮಪುರುಷ ಭಾವಿ ಮರುತ ನೀನೆಂತೆಂದು ವಾದಿರಾಜ। ಹಿರಿಯರ ಮುಖದಿಂದ ನಿಶ್ಚೈಸಿದೆ ವಾದಿರಾಜ।।1।। ಶಿರದೊಳು ಹೂರಣದ್ದರಿವಾಣ। ಧರಿಸುತ ವಾದಿರಾಜ। ವರಭಕ್ತಿಯಿಂದಲಿ ತುರಗಾಶ್ಯಗೆ ಉಣಿಸಿದ ವಾದಿರಾಜ। ಗುರುಜಗನ್ನಾಥದಾಸರ ಸ್ವಪ್ನದೊಳು ಬಂದುವಾದಿರಾಜ। ಹರಿಕಥಾಮೃತಸಾರ ವಿರಚಿಸೆಂದರುಹಿದ ವಾದಿರಾಜ।।2।। ಶ್ರೀಮಧ್ವಾರ್ಯರ ಮತ ಸಮ್ರಾಜ್ಯಧ್ವಜವೆತ್ತಿ ವಾದಿರಾಜ। ವ್ಯೋಮಕ್ಕೆ ಹಾರಿಸಿ ಭೂಮಿಯೊಳು ಮೆರೆಸಿದ ವಾದಿರಾಜ। ಶ್ಯಾಮಸುಂದರಕೃಷ್ಣನಾಮದ ಮಹಿಮೆಯ ವಾದಿರಾಜ। ಪಾಮರರಿಗೆ ಪೇಳಿ ಪ್ರೇಮದಿ ಸಲಹಿದ ವಾದಿರಾಜ।।3।।

ವಾದಿರಾಜಧೀರ ವಾದದಲ್ಲಿ ಶೂರ

ವಾದಿರಾಜಧೀರ ವಾದದಲ್ಲಿ ಶೂರ।।ಪ।। ರಾಗಸರ್ವೋತ್ತಮ ಮಂಗಳ ಮಹಿಮನೆಂದು। ಶೃಂಗೇರಿ ಮಠದಲ್ಲಿ ಜಯಕೇತನ ಹಾರಿಸಿದೆ।।1।। ಕಡಲೆ ಪೂರಣಮಾಡಿ ಕಡಲ ಶಯನನಿಗೆ। ಅಡಿಗಡಿಗವನ ಪಾದ ಬಿಡದೆ ಆರಾಧಿಸುವ।।2।। ಅಜಪದಕೆ ಅರುಹಾ ಋಜುಗಣ ಜೀವೋತ್ತಮನ। ನಿಜಪದವಿಗೆ ಬರುವ ವಿಜಯವಿಠ್ಠಲನ ದಾಸ।।3।।

ವಾದಿರಾಜ ಮುನಿಪ ಹಯಮುಖಪಾದ — ರಾಗ: ಸುರಟಿ-ಆದಿತಾಳ

ವಾದಿರಾಜ ಮುನಿಪ ಹಯಮುಖಪಾದ ಕಮಲ ಮಧುಪಾ।।ಪ।। ನೀದಯದಲಿ ತವ ಪಾದಧ್ಯಾನವನು। ಆದರದಲಿ ಕೊಟ್ಟಾದರಿಸೆನ್ನನು।।ಅ.ಪ.।। ಮೂಷಕ ಬಿಲದಿಂದಾ, ಉದರ ಪೋಷಕೆ ಬರಲಂದು। ವಾಸುಕಿಭಯದಿ ನಮ್ಮಾಸನದೆಡೆ ಬರೆ ಕ್ಲೇಶಕಳೆದು ಸಂತೋಷವ ಗೈಸಿದೆ।।1।। ಮುಂದೆ ಭೂತವರನಾ, ಪ್ರೇರಿಸೆ ಹಿಂದೆ ಒಬ್ಬ ವರನಾ। ನಿಂದರಿಸ್ಯತಿ ಆನಂದದಿಂದ ಜನವೃಂದ ನೋಡುತಿರೆ ಅಂದಣನಡಿಸಿದ್ಯೋ।।2।। ಶಾಸ್ತ್ರಪ್ರಸಂಗದಲಿ ನಾರಾಯಣ ಭೂತನ ಗೆಲಿದಿಲ್ಲಿ। ಖ್ಯಾತಿಯಿಂದ ಬಹುಮಾತನಾಡಿ ಶ್ರೀನಾಥಮಂದಿರ ಪ್ರೀತಿಲಿತರಿಸಿದ್ಯೋ।।3।। ತುರಗವದನ ಪಾದಾ ಭುಜದಲಿ ಧರಿಸಿಕೊಂಡ ಮೋದ। ವರಕಡಲೆಯ ಮಡ್ಡಿಯನು ಕರದಿಂದ ಧರಿಸಿ ಉಣಿಸಿದೆ ಗುರುವರ ಶುಭಕರ।।4।। ಆ ಮಹಾಗೋಪಾಲ ವಿಠಲನ ಪ್ರೇಮಪೂರ್ಣ ಪಾತ್ರ। ಧೀಮಂತರಿಗೆ ಸುಕಾಮಿತಾರ್ಥಿಗಳ ನೇಮದಿಂದೀಯುವ ಪಾವನಚರಿತಾರ್ಥ।।5।।

❖ ❖ ❖

ಮಾಡೋ ವಂದನೆಗಳ ಬೇಡೋ

ಮಾಡೋ ವಂದನೆಗಳ ಬೇಡೋ ವರಗಳ। ನೋಡು ನೋಡುಟೀಕಾರಾಯರಾ। ನೋಡು ನೋಡು ಜಯರಾಯರ।।ಪ।। ದುರ್ಮಾಯಿಮತಗಳ ಮರ್ಮ ಭೇದಿಸಿ। ಸುಧಾ ನಿರ್ಮಾಣ ಮಾಡಿದ ಸನ್ಮಾನ್ಯರಾ।।1।। ಲಲಿತೋರ್ಧ್ವಪುಂಡ್ರ ಶ್ರೀ ತುಳಸಿಭೂಷಿತ ಕರ್ಮ। ವಿಲಸಿತ ಕಾಷಾಯ ಧಾರ್ಯರಾ।।2।। ಯಾವಾಗಲೂ ವಾಸುದೇವ ವಿಠ್ಠಲನ ಸೇವಿಸಿ ಭಜಿಸುವರಾ ಗುರುವರಾ।।3।।

ಸಾರಿ ಭಜಿಸಿರೋ ಟೀಕಾರಾಯರಂಘ್ರಿಯ

ಸಾರಿ ಭಜಿಸಿರೋ ಟೀಕಾರಾಯರಂಘ್ರಿಯ। ಘೋರಪಾತಕಾಂಬುಧಿಯ ಪಾರಮಾಳ್ಪರಾ।।ಪ।। ಮೋದತೀರ್ಥರಾ ಮತವಸಾಧಿಸುವರಾ। ಪಾದಸೇವ್ಯರಾ ದುರ್ಬೋಧ ಕಳೆವರಾ।।1।। ಭಾಷ್ಯತತ್ತ್ವವ ವಿಸ್ತಾರಮಾಳ್ಪರಾ। ದೋಷ ದೂರರಾ ಆದಿಶೇಷವೇಶರಾ।।2।। ಕಾಮಗೆದ್ದರಾ ಹರಿಗೆ ಪ್ರೇಮಪೂರ್ಣರಾ। ನೇಮನಿತ್ಯರಾ ನಿಷ್ಕಾಮನಾಪರಾ।।3।। ಮೋಕ್ಷದಾತರಾ ಅಕ್ಷೋಭ್ಯತೀರ್ಥರಾ। ಸಾಕ್ಷಿಲಿಪ್ತರಾ ಅಪೇಕ್ಷೆರಹಿತರಾ।।4।। ವಿಜಯವಿಠಲನಾ ಅಂಘ್ರಿ ಭಜನೆಮಾಳ್ಪರಾ। ಕುಜನ ಭಂಜರಾ ದಿಗ್ವಿಜಯರಾಯರಾ।।5।।

ಟೀಕಾಚಾರ್ಯರ ಪಾದ ಸೋಕಿದ ಕೊನೆ

ಟೀಕಾಚಾರ್ಯರ ಪಾದ ಸೋಕಿದ ಕೊನೆ ಧೂಳಿ ತಾಕಿದ ಮನುಜರಿಗೆ।।ಪ।। ಕಾಕುಗೊಳಿಸುವ ಅನೇಕ ಪಾಪಂಗಳ ಬೀಕಿ ಬೀಸಾಟೋದು ತಾಕುವ ಮನುಜಗೆ।।ಅ.ಪ.।। ಮಧ್ವಮತವೆಂಬೋ ದುಗ್ಧಾಬ್ಧಿಯೊಳು। ಉದ್ಭವಿಸಿದ ಚಂದ್ರನೋ। ಅದ್ವೈತ ಮತ ವಿಪಿನ ಭೇದನ ಕುಠಾರಾ। ವಿದ್ಯಾ ರಣ್ಯನ ಗರ್ವಕ್ಕೆ ಪರಿಹಾರಾ।।1।। ತತ್ತ್ವವ ನುಡಿಸಲು ತತ್ತ್ವ ಸುಧಾಭಾಷ್ಯ। ವಿಸ್ತರಿಸಿದ ಚಂದ್ರನೋ। ಚಿತ್ತವಿಟ್ಟು ಮಾಡಿ ಟೀಕಾವನ್ನೇ ಬರೆದು ಸುತ್ತೇಳು ಜಗಕೆಲ್ಲಾ ಪ್ರಕಟಿಸಿ ಮೆರೆದಂಥಾ।।2।। ಎಂದಿಗಾದರೂ ಅಜ್ಞಾನ ನಾಶನ। ಸಂದೇಹವಿಲ್ಲವಯ್ಯ ಸ್ಮರಣೆಮಾಡಿದ ಮೇಲೆ।।3।। ಜ ಎಂದು ನುಡಿಯಲು ಜಯಶೀಲನಾಗುವ। ಯ ಎಂದು ನುಡಿಯಲು ಯಮ ನಂಜುನಾ। ತೀ ಎಂದು ನುಡಿಯಲು ತಿಮಿರ ಪಾತಕ ಹಾನಿ। ರ್ಥ ಎಂದು ನುಡಿಯಲು ತಾಪತ್ರಯ ಪರಿಹಾರಾ।।4।। ಯೋಗಿ ಅಕ್ಷೋಭ್ಯರ ಕರಕಮಲ ಸಂಜಾತಾ। ಭಾಗವತರ ಪ್ರೀಯನೆ। ಯೋಗಿಗಳರಸನೆ ಮಳಖೇಡ ನಿವಾಸಾ। ಕಾಗಿಣತಟವಾಸಾ ವಿಜಯ ವಿಠ್ಠಲ ದಾಸಾ।।5।।

❖ ❖ ❖

ಆನಂದತೀರ್ಥರೆಂಬೋ ಅರ್ಥಿಯ — ರಾಗ:ಸೌರಾಷ್ಟ್ರ-ಆದಿತಾಳ

ಆನಂದತೀರ್ಥರೆಂಬೋ ಅರ್ಥಿಯ ಪೆಸರುಳ್ಳ ಗುರುಮಧ್ವಮುನಿರಾಯಾ। ಏನೆಂಬೆ ನಾ ನಿನ್ನ ಕರುಣಕ್ಕೆ ಎಣೆಗಾಣೆ ಗುರುಮಧ್ವಮುನಿರಾಯಾ।।ಪ।। ಬೇಸರಾದೆ ಸರ್ವರೊಳು ಶ್ವಾಸ ಜಪಗಳ ಮಾಡಿ। ಗುರುಮಧ್ವಮುನಿರಾಯ। ಶ್ರೀಶಗರ್ಪಿಸುತ ನಿನ್ನದಾಸರನ್ನು ಸಲಹಿದೆ। ಗುರುಮಧ್ವ ಮುನಿರಾಯಾ।।1।। ಅಂದುಹನುಮಂತನಾಗಿ ಬಂದು ಸುಗ್ರೀವಗೇ। ಗುರುಮಧ್ವ ಮುನಿರಾಯಾ। ಅಂದವಾದ ಪದವಿತ್ತಾ ನಂದದಿಂದ ಸಲಹಿದ ಗುರುಮಧ್ವ ಮುನಿರಾಯಾ।।2।। ಕುಂತಿಯ ಕುಮಾರನಾಗಿ ಹಂತ ಕೌರವರಕೊಂದೆ। ಗುರುಮಧ್ವಮುನಿರಾಯಾ ನಂತ ಪುಣ್ಯವಗಳಿಸಿ ಶ್ರೀಕಾಂತನಿಗರ್ಪಿಸಿದೆ। ಗುರುಮಧ್ವಮುನಿಕಾಯ।।3।। ಅದ್ವೈ ್ತತರನ್ನು ಕಾದಿಗೆದ್ದು ನಿನ್ನ ಭಕ್ತರಿಗೆ। ಗುರುಮಧ್ವ ಮುನಿರಾಯಾ। ಶುದ್ಧತಾತ್ಪರ್ಯ ವಾಕ್ಯ ಪದ್ಧತಿಯ ತೋರಿಸಿದಿ। ಗುರುಮಧ್ವ ಮುನಿರಾಯಾ।।4।। ಗುರುಪ್ರಾಣೇಶ ವಿಠಲ ಪರನೆಂದು ಡಂಗುರವ ಗುರು ಮಧ್ವಮುನಿರಾಯಾ। ಸಾರಿ ಸಜ್ಜನರಿಗೆ ಹರಿಯ ಲೋಕ ತೋರಿಸಿದಿ ಗುರುಮಧ್ವ ಮುನಿ ರಾಯಾ।।5।।

ಒಂದು ಬಾರಿ ಸ್ಮರಣೆಸಾಲದೆ — ರಾಗ: ಮಿಶ್ರತೋಡಿ

ಒಂದು ಬಾರಿ ಸ್ಮರಣೆಸಾಲದೆ। ಆನಂದ ತೀರ್ಥರ। ಪೂರ್ಣಪ್ರಜ್ಞರ। ಸರ್ವಜ್ಞಾಚಾರ್ಯರ। ಮಧ್ವರಾಯರ॥ಅ.ಪ.॥ ಪ್ರಕೃತಿ ಬಂಧದಲ್ಲಿ ಸಿಲುಕಿ ಸಕಲ ವಿಷಯಗಳಲಿ ನೊಂದು। ಅಕಳಂಕ ಚರಿತ ಹರಿಯ ಪಾದ। ಭಕುತಿ ಬೇಕೆಂಬುವರಿಗೆ॥1॥ ಘೋರಸಂಸಾರಾಂಬುಧಿಗೆ ಪರಮ ಜ್ಞಾನವೆಂದು ಪಾಡೆ। ಸೇರಿಮೆಲ್ಲನೆ ಹರಿಯಪಾದ। ಸೇರಬೇಕೆಂಬುವರಿಗೆ॥2॥ ಹಿಂದನೇಕ ಜನ್ಮದಲ್ಲಿ। ನೊಂದು ಯೋನಿಯಲ್ಲಿ ಬಂದು। ಇಂದಿರೇಶನ ಪಾದವನ್ನು। ಹೊಂದ ಬೇಕೆನ್ನುವರಿಗೆ॥3॥ ಆರುಮಂದಿ ವೈರಿಗಳನ್ನು। ತೀರಿಸಿದಂತೆ ನೂಕಿ। ಧೀರನಾದ ಹರಿಯಪಾದ ಸೇರಬೇಕೆನ್ನುವರಿಗೆ॥4॥ ಹೀನ ಬುದ್ಧಿಯಿಂದ। ಶ್ರೀಹಯವದನನ್ನ ಜರಿದು। ತಾನು ಬದುಕಲಾರ ದಿರಲು। ತೋರಿ ಕೊಟ್ಟ ಮಧ್ವಮುನಿಯ॥5॥

ಅಪರಾಧವೆಣಿಸದಲೆ ಕಾಯಬೇಕೋ

ಅಪರಾಧವೆಣಿಸದಲೆ ಕಾಯಬೇಕೋ। ಕೃಪಣವತ್ಸಲನೆ ಶ್ರೀ ಮಧ್ವಮುನಿ ಗುರುರಾಯಾ॥ಪ॥ ನೀ ಮಾಡಿದುಪಕಾರ ನಾ ಮರೆವೆನೆಂದು। ಲಕ್ಷ್ಮೀ ಮನೋಹರ ನಿಜದಾಸಾಗ್ರಣಿ। ಪಾಮರನ ಲೋಕದೊಳು ಧೀಮಂತನೆನಿಸಿದ। ಮಹಾ ಮಹಿಮ ನಿನ್ನ ಕರುಣಾರಸಕೆ ಎಣೆಗಾಣೆ॥1॥ ಅವಿನೀತ ನಾನು ನಿನ್ನವನೆಂದು ತಿಳಿದು। ಎನ್ನವಗುಣಗಳೆಣಿಸದೆ ನಿತ್ಯದಲ್ಲಿ। ಸುವಿವೇಕಿಯನೆ ಮಾಡು ಕವಿರಾಜ ತವ। ಮನೋತ್ಸವಕೆಣೆಗಾಣೆ ನಾನವನಿಯೊಳಗಾವಲ್ಲಿ॥2॥ ಏನರಿಯದ ಮೂಢಮಾನವನು ನಾನು। ಸುಜ್ಞಾನವರ್ಯನೆ ನೀನು ಕಾಯಬೇಕೋ। ಮಾನನಿಧಿ ಜಗನ್ನಾಥ ವಿಠಲನ್ನ ಪದಯುಗಳ। ಧ್ಯಾನಮಾಡುವ ಧೀರ। ಪ್ರಾಣ ಪಂಚಕರಾಯ॥3॥

❖ ❖ ❖

ಸತ್ಯ ಜಗತಿದು ಪಂಚ ಭೇದವು ನಿತ್ಯ — ರಾಗ: ಸೌರಾಷ್ಟ್ರ-ಝಂಪೆತಾಳ

ಸತ್ಯ ಜಗತಿದು ಪಂಚ ಭೇದವು ನಿತ್ಯ ಶ್ರೀ ಗೋವಿಂದನ। ಕೃತ್ಯ ತಿಳಿದು ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ॥ಪ॥ ಜೀವ ಈಶಗೆ ಭೇದ ಸರ್ವತ್ರ ಜೀವಜೀವಕೆ ಭೇದವು। ಜೀವ ಜಡರೊಳ್ ಜಡಜಡಕ್ಕೆ ಭೇದ ಜೀವ ಜಡ ಪರಮಾತ್ಮಗೆ॥1॥ ಮಾನುಷೋತ್ತಮಗಧಿಕ ಕ್ಷಿತಿಪರು ಮನುಷ್ಯ ದೇವ-ಗಂಧರ್ವರು। ಜ್ಞಾನಿ-ಪಿತ್ರಾಜಾನ ಕರ್ಮಜ ದಾನವಾರಿ ತತ್ವಾತ್ಮರು॥2॥ ಗಣಪಮಿತ್ರರು ಸಪ್ತಋಷಿಗಳು ವಹ್ನಿನಾರದ ವರುಣನು। ಇನಜಗೆ ಸಮ ಚಂದ್ರಸೂರ್ಯರು ಮನುಸುತೆಯು ಹೆಚ್ಚು ಪ್ರವಾಹನು॥3॥ ದಕ್ಷ ಸಮ ಅನಿರುದ್ಧ ಗುರು ಶಚಿ ರತಿ ಸ್ವಾಯಂಭುವರಾರ್ವರು। ಪಕ್ಷ ಪ್ರಾಣನಿಂದಧಿಕ ಕಾಮನು ಕಿಂಚಿದಧಿಕನು ಇಂದ್ರನು॥4॥ ದೇವೇಂದ್ರನಿಂದಧಿಕ ಮಹಾರುದ್ರ ರುದ್ರಸಮ ಶೇಷ ಗರುಡರು। ಕೇವಲಧಿಕರು ಗರುಡ ಶೇಷಗೆ ದೇವಿ ಭಾರತಿ ಸರಸ್ವತಿ॥5॥ ವಾಯುವಿಗೆ ಸಮರಿಲ್ಲ ಜಗದೊಳು ವಾಯುದೇವರೆ ಬ್ರಹ್ಮರು। ವಾಯುಬ್ರಹ್ಮಗೆ ಕೋಟಿಗುಣದಿಂದಧಿಕ ಶಕ್ತಳು ಶ್ರೀರಮಾ॥6॥ ಅನಂತ ಗುಣದಿಂದ ಲಕುಮಿಗಿಂತ ಅಧಿಕ ಪುರಂದರವಿಠ್ಠಲನು। ಘನಸಮರು ಇವಗಿಲ್ಲ ಜಗದೊಳು ಹನುಮಹೃತ್ ಪದ್ಮವಾಸಿಗೆ॥7॥

❖ ❖ ❖

ಗಜವದನ ಬೇಡುವೆ — ರಾಗ: ಹಂಸಧ್ವನಿ-ಆದಿತಾಳ

ಗಜವದನ ಬೇಡುವೆ ಗೌರಿತನಯ॥ಪ॥ ತ್ರಿಜಗವಂದಿತನೆ ಸುಜನರ ಪೊರೆವನೆ॥ಅ.ಪ॥ ಪಾಶಾಂಕುಶಧರ ಪರಮಪವಿತ್ರ। ಮೂಷಕವಾಹನ ಮುನಿಜನ ಪ್ರೇಮ॥1॥ ಮೋದದಿ ನಿನ್ನಯ ಪಾದವ ತೋರೋ। ಸಾಧುವಂದಿತನೆ ಆದರದಿಂದಲಿ॥2॥ ಸರಸಿಜನಾಭ ಶ್ರೀ ಪುರಂದರ ವಿಠಲನ। ನಿರುತ ನೆನೆಯುವಂತೆ ದಯಮಾಡೋ ॥3॥

ವಂದಿಪೆ ನಿನಗೆ ಗಣನಾಥ — ರಾಗ: ಕಲ್ಯಾಣಿ

ವಂದಿಪೆ ನಿನಗೆ ಗಣನಾಥ ಮೊದಲ್ ವಂದಿಪೆ ನಿನಗೆ ಗಣನಾಥಾ॥ಪ॥ ಬಂದ ವಿಘ್ನಗಳ ಕಳೆ ಗಣನಾಥಾ॥ಅ.ಪ॥

ಶಂಕರೀ ತನಯನೆ ಸಿಂಧೂರ ವರ್ಣನೆ ಶಂಕರಾಂಶ ಗಣನಾಥ॥1॥ ಹಿಂದೆ ರಾವಣನು ಮದದಿಂದ ನಿನ್ನ ಪೂಜಿಸದೆ ಸಂದ ರಣದಲ್ಲಿ ಗಣನಾಥಾ॥2॥ ಆದಿಯಲಿ ನಿನ್ನ ಪಾದ ಪೂಜಿಸಿದ ಧರ್ಮರಾಯ ಸಾಧಿಸಿದ ರಾಜ್ಯವನು ಗಣನಾಥ॥3॥ ಮಂಗಳ ಮೂರುತಿ ಗುರು ರಂಗವಿಠಲನ ಪಾದ ಭೃಂಗನ ಪಾಲಿಸೋ ಗಣನಾಥಾ॥4॥

ಗಾಯಿಯೇ ಗಣಪತಿ ಜಗವಂದನ (ಹಿಂದಿ) ರಾಗ: ಯಮನ್‌ಕಲ್ಯಾಣಿ-ಆದಿತಾಳ

ಗಾಯಿಯೇ ಗಣಪತಿ ಜಗವಂದನ। ಶಂಕರ ಸುವನ ಭವಾನೀ ನಂದನ॥ ಸಿದ್ಧಿಸದನ ಗಜವದನ ವಿನಾಯಕ। ಕೃಪಾಸಿಂಧು ಸುಂದರ್ ಸಬ್‌ಲಾಯಕ್॥1॥ ಮೋದಕಪ್ರಿಯ ಮುದಮಂಗಳ ದಾತಾ। ವಿದ್ಯಾವಾರಿಧಿ ಬುದ್ಧಿ ವಿಧಾತಾ॥2॥ ಮಾಂಗತ ತುಲಸೀದಾಸ ಕರ ಜೋರೇ। ಬಸಹಿ ರಾಮಸಿಯ ಮಾನಸಮೋರೇ॥3॥

❖ ❖ ❖

ಪಾರ್ವತಿ ಪಾಲಿಸೆನ್ನ ರಾಗ: ನಾದನಾಮ ಕ್ರಿಯೆ-ಆದಿತಾಳ

ಪಾರ್ವತಿ ಪಾಲಿಸೆನ್ನ ಮಾನಿನಿರನ್ನೆ ಪಾರ್ವತಿ ಪಾಲಿಸೆನ್ನ॥ಪ॥ ಪಾರ್ವತಿ ಭಕುತರ ಸಾರಥಿ ವಂದಿಪೆ। ಸುರಪತಿ ಗಜಮುಖ ಮೂರುತಿ ಮಾತೆ॥ಅ.ಪ॥ ಮನದಭಿಮಾನಿಯೆ ನೆನೆವೆನು ನಿನ್ನನು। ಅನುಗ್ರಹಿಸೆನ್ನನು ಅಂಬುಜಪಾಣಿ॥1॥ ಮಂಗಳೆ ಮೃಡನಂತರಂಗಳೆ ಹರಿಪದ। ಭೃಂಗಳೆ ತುಂಗಳೆ ಪನ್ನಗವೇಣಿ॥2॥ ಗುಣಪೂರ್ಣ ವೇಣುಗೋಪಾಲ ವಿಠ್ಠಲನ ಕಾಣಿಸಿ ಕೊಡುವಂಥ ಶೂಲಿಯ ರಾಣಿ॥3॥

ಪಾಲಿಸೆ ಎನ್ನನು ಗೌರಿ

ಪಾಲಿಸೆ ಎನ್ನನು ಗೌರಿ॥ಪ॥ ಪಾಲಿಸೆ ಎನ್ನನು ನಿನ್ನಯ ಪಾಲಿಗೆ ಬಂದೆನು। ಬೀಳುವೆ ಸರ್ವದಾ ಕಾಲಿಗೆ ಕರುಣದಿ॥ಅ.ಪ.॥ ಶರಣೆಂದವರನು ಪೊರೆವಳು ಎಂಬುವ। ಬಿರುದು ನಿನ್ನದು ಎಂದರಿದೆನು ಕರುಣದಿ॥1॥ ಸನ್ನತ ಪುರುಷನ ಇನ್ನೆಲ್ಲಿ ಕಾಣೆನು। ಮನ್ಮಥನೆಂಬುವ ಬನ್ನ ಬಡಿಪ ಬಲು॥2॥ ಕಾಣೆನು ಶಾಂತಿಯ ಏನೆಂದು ಹೇಳಲು। ಪ್ರಾಣೇಶ ವಿಠ್ಠಲನು ತಾನೇ ಬಲ್ಲನು ತಾಯೇ॥3॥

ಅನಂತ ರೂಪಿಣಿ ಅನಂತ ಭಗವತಿ

ಅನಂತ ರೂಪಿಣಿ ಅನಂತ ಭಗವತಿ ಅನಂತ ನಾಮ್ನಿ ಗಿರಿಜೇ ಮಾ। ಶಿವ ಹೃನ್ಮೋಹಿನಿ ವಿಶ್ವವಿಲಾಸಿನಿ। ರಾಮಕೃಷ್ಣ ಜಯ ದಾಯಿನಿಮಾ॥1॥ ಜಗಜ್ಜನನಿ ತ್ರಿಲೋಕ ಪಾಲಿನಿ। ವಿಶ್ವಸುವಾಸಿನಿ ಶುಭದೇಮಾ॥ ದುರ್ಗತಿ ನಾಶಿನಿ ಸನ್ಮತಿ ದಾಯಿನಿ। ಭೋಗಮೋಕ್ಷ ಸುಖ ಕಾರಿಣಿಮಾ॥2॥ ಪರಮೇ ಪಾರ್ವತಿ ಸುಂದರಿ ಭಗವತಿ। ದುರ್ಗೇ ಭಾಮತಿ ತ್ವಂ ಮೇ ಮಾ॥ ಪ್ರಸೀದ ಮಾತರ್ ನಗೇಂದ್ರ ನಂದಿನಿ। ಚಿರಸುಖ ದಾಯಿನಿ ಜಯದೇ ಮಾ॥3॥

ನ ತಾತೋ ನ ಮಾತಾ ನ ಬಂಧುರ್ನ ದಾತಾ (ಭವಾನ್ಯಷ್ಟಕಮ್)

ನ ತಾತೋ ನ ಮಾತಾ ನ ಬಂಧುರ್ನ ದಾತಾ। ನ ಪುತ್ರೋ ನ ಪುತ್ರೀ ನ ಭೃತ್ಯೋ ನ ಭರ್ತಾ। ನ ಜಾಯಾ ನ ವಿದ್ಯಾ ನ ವೃತ್ತಿ ರ್ಮಮೈವ ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ॥1॥ ಭವಾ ಬ್ಧಾವಪಾರೇ ಮಹಾದುಃಖಭೀರುಃ ಪ್ರಪಾತ ಪ್ರಕಾಮೀ ಪ್ರಲೋಭೀ ಪ್ರಮತ್ತ। ಕುಸಂಸಾರ ಪಾಶಪ್ರಬದ್ಧ ಸದಾಹಂ ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ॥2॥ ನ ಜಾನಾಮಿ ದಾನಂ ನ ಚ ಧ್ಯಾನಯೋಗಂ ನ ಜಾಮಿ ತಂತ್ರಂ ನ ಚ ಸ್ತೋತ್ರಮಂತ್ರಮ್। ನ ಜಾನಾಮಿ ಪೂಜಾಂ ನ ಚ ನ್ಯಾಸಯೋಗಂ ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ॥3॥ನ ಜಾನಾಮಿ ಪುಣ್ಯಂ ನ ಜಾನಾಮಿ ತೀರ್ಥಂ ನ ಜಾನಾಮಿ ಮುಕ್ತಿಂ ಲಯಂ ವಾ ಕದಾಚಿತ್। ನ ಜಾನಾಮಿ ಭಕ್ತಿಂ ವ್ರತಂ ವಾಪಿ ಮಾತ-ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ॥4॥ ಕುಕರ್ಮೀ ಕುಸಂಗೀ ಕುಬುದ್ಧಿಃ ಕುದಾಸಃ ಕುಲಾಚಾರಹೀನಃ ಕದಾಚಾರಲೀನಃ। ಕುದೃಷ್ಟಿಃ ಕುವಾಕ್ಯಪ್ರಬಂಧಃ ಸದಾಹಂ

ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ।।5।। ಪ್ರಜೇಶಂ ರಮೇಶಂ ಮಹೇಶಂ ಸುರೇಶಂ ದಿನೇಶಂ ನಿಶೀಥೇಶ್ವರಂ ನ ಕದಾಚಿತ್। ನ ಜಾನಾಮಿ ಚಾನ್ಯತ್ ಸದಾಹಂ ಶರಣ್ಯೇಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ।।6।। ವಿವಾದೇ ವಿಷಾದೇ ಪ್ರಮಾದೇ ಪ್ರವಾಸೇ ಜಲೇ ಚಾನಲೇ ಪರ್ವತೇ ಶತ್ರು ಮಧ್ಯೆ। ಅರಣ್ಯೇ ಶರಣ್ಯೇ ಸದಾಮಾಂ ಪ್ರಪಾಹಿ ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ।।7।। ಅನಾಥೋ ದರಿದ್ರೋ ಜರಾರೋಗಯುಕ್ತೋ ಮಹಾಕ್ಷೀಣದೀನಃ ಸದಾ ಜಾಡ್ಯವಕ್ತ್ರಃ। ವಿಪತ್ತೌ ಪ್ರವಿಷ್ಟಃ ಪ್ರಣಷ್ಟಃ ಸದಾಹಂ ಗತಿಸ್ತ್ವಂ ಗತಿಸ್ತ್ವಂ ತ್ವಮೇಕಾ ಭವಾನಿ।।8।। ಶ್ರೀ ಶಂಕರಾಚಾರ್ಯ ಕೃತ ಭವಾನ್ಯಷ್ಟಕಂ ಸಂಪೂರ್ಣಂ।।

❖ ❖ ❖

ವೃಂದಾವನವೇ ಮಂದಿರವಾಗಿಹ **ರಾಗ: ಶಿವರಂಜನಿ**

ವೃಂದಾವನವೇ ಮಂದಿರವಾಗಿಹ ಇಂದಿರೆ ಶ್ರೀ ತುಲಸಿ।।ಪ।। ನಮ್ಮ ನಂದನ ಮುಕುಂದಗೆ ಪ್ರಿಯವಾದ ಚಂದಾದ ಶ್ರೀತುಲಸೀ।।ಅ.ಪ।। ತುಲಸಿ ವನದಲಿ ಹರಿ ಇಹನೆಂಬೋದು। ಶೃತಿ ಸಾರುತಿದೆ ಕೇಳಿ। ತುಲಸೀ ದರ್ಶನದಿಂದ ದುರಿತಗಳೆಲ್ಲ। ಹರಿದು ಹೋಗೋದು ಕೇಳಿ। ತುಳಸಿ ಸ್ಪರ್ಶದಿಂದ ದೇಹ ಪಾವನವೆಂದು। ನೀವೆಲ್ಲ ತಿಳಿದು ಕೇಳಿರಿ। ತುಲಸೀ ಸ್ಮರಣೆ ಮಾಡಿ। ಸಕಲೇಷ್ಟವ ಪಡೆದು। ಸುಖದಲಿ ನೀವು ಬಾಳಿರಿ।।1।। ಮೂಲ ಮೃತ್ತಿಕೆಯನು ಧರಿಸಿದ ಮಾತ್ರದಿ। ಮೂರು ಲೋಕ ವಶವಹುದು। ಮಾಲೆಗಳನೆ ಕೊರಳಲ್ಲಿಟ್ಟ ಮನುಜಗೆ। ಮುಕ್ತಿ ಮಾರ್ಗವ ನೀವುದು। ಕಾಲಕಾಲಗಳಲ್ಲಿ ಮಾಡಿದ ದುಷ್ಕರ್ಮ। ಕಳೆದು ಬಿಸುಟು ಹೋಹುವು। ಕಾಲನ ದೂತರು ಅಟ್ಟಿ ಕೈವಲ್ಯವ। ಲೀಲೆಯ ತೋರುವುದು।।2।। ಧರೆಯೊಳು ಸುಜನರ ಮರೆಯದೆ ಸಲಹುವ। ವರಲಕ್ಷ್ಮೀ ಶ್ರೀ ತುಲಸಿ। ಪರಮ ಭಕ್ತರ ಪಾಪಗಳೆಲ್ಲ ತರಿದು। ಪಾವನ ಮಾಡಿದಳು ತುಲಸಿ। ಸಿರಿ ಆಯು ಪುತ್ರಾದಿ ಸಂಪತ್ತುಗಳನ್ನಿತ್ತು ಹರುಷವೀವಳು ತುಲಸಿ। ಪುರಂದರ ವಿಠಲನ್ನ ಚರಣ ಕಮಲದ ಸ್ಮರಣೆ ಕೊಡುವಳು ತುಲಸಿ।।3।।

ತುಳಸಿ ಮಧ್ಯದಿ ಇರುವ ಕೃಷ್ಣನ **ರಾಗ: ಅಭೇರಿ**

ತುಳಸಿ ಮಧ್ಯದಿ ಇರುವ ಕೃಷ್ಣನ ಬಳಸಿ ನೋಡುವ ಬನ್ನಿರೆ।।ಪ।। ಗೊಲ್ಲ ಸತಿಯರ ಗಲ್ಲ ಪಿಡಿದು। ಎಲ್ಲ ನಟನೆಯ ತೋರುವ। ಪುಲ್ಲನಾಭನ ಮೆಲ್ಲಮೆಲ್ಲನೆ। ಎಲ್ಲ ಹೆಂಗಳು ನೋಡಿರೆ।।1।। ಕಾಮಿಜನರಿಗೆ ಕಾಮಿತಾರ್ಥವ। ಪ್ರೇಮದಿಂದಲಿ ಕೊಡುತಿಹ। ಕಾಮನಯ್ಯನ ಚರಣ ಕಮಲವ। ನಂಬಿ ಬದುಕುವ ಬನ್ನಿರೆ।।2।। ಅಂಗರಾಗ ಶ್ರೀರಂಗ ಮಂಗಳ। ಸಿಂಗರದಿ ತಾ ನಿಂತಿಹ। ಮಂಗಳಾಂಗನ ಮಂಗಳಾರತಿ। ಹೆಂಗಳೆಲ್ಲರು ನೋಡಿರೆ।।3।। ಒಂದು ಕೈಯಲ್ಲಿ ಗಂಧ ಪುಷ್ಪ। ಮತ್ತೊಂದು ಕೈಯಲಿ ರಂಗನು। ಮಂದಹಾಸದಿ ಇಂದುಮುಖಿಯರಿಗೊಂದಿಸುವನತಿ ಚಂದದಿ।।4।। ಶುಕ್ರವಾರದಿ ಪೂಜೆಗೊಂಬುವ। ಚಕ್ರಧರ ಶ್ರೀ ಕೃಷ್ಣನು। ನಕ್ರಹರ ತ್ರಿವಿಕ್ರಮನು। ಮನವಾಕ್ರಮಿಸಿ ಸುಖ ಕೊಡುತಿಹ।।5।।

ಒಲ್ಲನೋ ಹರಿ ಕೊಳ್ಳನೋ **ರಾಗ: ದುರ್ಗ–ಆದಿತಾಳ**

ಒಲ್ಲನೋ ಹರಿ ಕೊಳ್ಳನೋ।।ಪ।। ಎಲ್ಲ ಸಾಧನವಿದ್ದು ತುಳಸಿಯಿಲ್ಲದ ಪೂಜೆ।।ಅ.ಪ।। ಸಿಂಧು ಶತಕೋಟಿ ಗಂಗೋದಕವಿದ್ದು। ಗಂಧ ಸುಪರಿಮಳ ವಸ್ತ್ರವಿದ್ದು।। ಚಂದುಳ್ಳ ಆಭರಣ ಧೂಪದೀಪಗಳಿದ್ದು। ಬೃಂದಾವನ ಶ್ರೀತುಳಸಿಯಿಲ್ಲದ ಪೂಜೆ।।1।। ದಧಿಕ್ಷೀರ ಮೊದಲಾದ ಅಭಿಷೇಕಗಳಿದ್ದು। ಮಧುಪರ್ಕ ಪಂಚೋಪಚಾರವಿದ್ದು।। ಮುದದಿಂದ ಮುದ್ದು ಶ್ರೀಕೃಷ್ಣನ ಪೂಜೆಗೆ। ಸದಮಲಳಾದ ಶ್ರೀ ತುಳಸಿಯಿಲ್ಲದ ಪೂಜೆ।।2।। ಮಂತ್ರ ಮಹಾಮಂತ್ರ ಪುರುಷಸೂಕ್ತಗಳಿದ್ದು। ತಂತು ತಪ್ಪದೆ ತಂತ್ರಸಾರವಿದ್ದು।। ಸಂತತ ಸುಖಸಂಪೂರ್ಣನ ಪೂಜೆಗೆ। ಅತ್ಯಂತ ಪ್ರಿಯಳಾದ ತುಳಸಿಯಿಲ್ಲದ ಪೂಜೆ।।3।। ಕಮಲ ಮಲ್ಲಿಗೆ ಜಾಜಿ ಸಂಪಿಗೆ ಕೇದಿಗೆ। ವಿಮಲ ಘಂಟೆ ಪಂಚವಾದ್ಯವಿದ್ದು।। ಅಮಲ ಪಂಚಭಕ್ಷ್ಯ ಪರಮಾನ್ನಗಳಿದ್ದು। ಕಮಲನಾಭನು ಶ್ರೀ ತುಳಸಿಯಿಲ್ಲದ ಪೂಜೆ।।4।। ಪೂಜೆಯ ಮಾಡದೆ ತುಳಸಿಮಂಜರಿಯಿಂದ। ಮೂಜಗ ದೊಡೆಯ ಮುರಾರಿಯನು।। ರಾಜಾಧಿರಾಜನೆಂಬ ಮಂತ್ರಪುಷ್ಪಗಳಿಂದ।

ಪೂಜಿಸಿದರು ಒಲ್ಲ ಪುರಂದರವಿಠಲನು॥5॥

❖ ❖ ❖

ನಮಃ ಪಾರ್ವತಿ ಪತಿನುತ ಜನಪರ **ರಾಗ: ಮೋಹನ**

ನಮಃ ಪಾರ್ವತಿ ಪತಿನುತ ಜನಪರ। ನಮೋ ವಿರೂಪಾಕ್ಷ....ಆ॥ಪ॥ ರಮಾರಮಣನಲ್ಲಿ। ಅಮಲ ಭಕುತಿ ಕೊಡು। ನಮೋ ವಿಶಾಲಾಕ್ಷ ॥ಅ.ಪ॥ ನೀಲಕಂಠ ತ್ರಿಶೂಲ ಢಮರು ಹಸ್ತಾಲಂಕೃತರಕ್ಷಾ॥ ಫಾಲನೇತ್ರ ಕಪಾಲ ರುಂಡ ಮಣಿ ಮಾಲಾಧೃತವಕ್ಷ। ಶೀಲರಮ್ಯವಿಶಾಲ ಸುಗುಣ ಸಲ್ಲೀಲ-ಸುರಾಧ್ಯಕ್ಷಾ॥ ಶ್ರೀಲಕುಮೀಶನ ಓಲೈಸುವ। ಭಕ್ತಾವಳಿಗಳಪಕ್ಷ॥1॥ ವಾಸವನುತ ಹರಿದಾಸ ಈಶ। ಕೈಲಾಸ ವಾಸುದೇವ। ದಾಶರಥಿಯ ಔಪಾಸಕ। ಸುಜನರ ಪೋಷಿಪ ಪ್ರಭಾವ। ಭಾಸಿಸುತಿಹುದು ಅಶೇಷ। ಜೀವರಿಗೆ ಈಶನೆಂಬ ಭಾವ। ಶ್ರೀಶನಲ್ಲಿ ಕೀಲಿಸು ಮನವ ಗಿರಿಜೇಶ ಮಹಾದೇವ॥2॥ ಮೃತ್ಯುಂಜಯ ನಿನ್ನುತ್ತಮ ಪದಯುಗ ಭೃತ್ಯನೊ ಸರ್ವತ್ರ। ಹತ್ತಿರ ಕರೆದು ಆಪ್ತಾನಂದದಿ ಪೊರೆಯುತ್ತಿರೋ ನೇತ್ರ। ತೆತ್ತಿಗನಂತೆ ಕಾಯುತಿಹೆ ಬಾಣನ ಸತ್ಯದಿ ಸುಚರಿತ್ರ। ಉಡುಪಿ ಸರ್ವೋತ್ತಮ ಕೃಷ್ಣನ ಪಾತ್ರ ಕೃಪಾಪಾತ್ರ॥3॥

ವೃಷಭನೇರಿದ ವಿಷಧರನ್ಯಾರೆ **ರಾಗ: ಮೋಹನ-ಆದಿತಾಳ**

ವೃಷಭನೇರಿದ ವಿಷಧರನ್ಯಾರೆ ಪೇಳಮ್ಮಯ್ಯ॥ಪ॥ ಹಸುಳೆ ಪಾರ್ವತಿಯ ತಪಸ್ಸಿಗೆ ಮೆಚ್ಚಿದ। ಜಟಾಮಂಡಲಧಾರಿ ಕಾಣಮ್ಮ ॥ಅ.ಪ॥ ಕೈಲಾಸಗಿರಿಯ ದೊರೆಯಿವನಮ್ಮ - ಅದು ಅಲ್ಲದೆ ಕೇಳೆ। ಬೈಲು ಸ್ಮಶಾನದಿ ಮನೆಯಿವಗಮ್ಮ - ಸಂಕರ್ಷಣನೆಂದು। ಕೇಳೆ ಮಹಿಯೊಳು ಜನ ಪೊಗಳುವರಮ್ಮ - ಇದು ನಿಜವಮ್ಮ॥ ನಾಲಿಗೆ ಸಾಸಿರ ಫಣಿ ಭೂಷಣ ನಮ್ಮ। ರಮೆಯರಸಗೆ ಇವ ಮೊಮ್ಮಗನಮ್ಮ॥1॥ ಬಾಲೆ ದಾಕ್ಷಾಯಿಣಿ ಪತಿ ಇವನಮ್ಮ - ಮಾವನ ಯಾಗದಲಿ। ಬ್ಯಾಳ ಕೃತ್ಯಗಳನು ನಡೆಸಿದನಮ್ಮ - ಸಾಗರದಲಿ ಹುಟ್ಟಿದ ಕಾಳ ಕೂಟವ ಭಕ್ಷಿಸಿದನಮ್ಮ - ರಾಮನ ದಯವಮ್ಮ। ಮೇಲೆ ಉಳಿಯಲು ಶೇಷಗರಳವು ನೀಲಕಂಠನೆಂದೆನಿಸಿದನಮ್ಮ॥2॥ ಹರನೊಂದಿನ ವೈಕುಂಠಕೆ ಬರಲು - ತಾತಗೆ ವಂದಿಸಲು ತರುಣೀರೂಪವ ನೋಡುವೆನೆನಲು - ಹರಿ ತಾ ನಸುನಗಲು। ಕರೆದು ಸೈರಿಸಲಾರೆ ನೀ ಎನಲು - ಹಠದಿ ಕುಳ್ಳಿರಲು। ಕರುಣೆಗಳರಸನು ಹರನ ಮನವ ನೋಡಿ। ಅರುಣೋದಯಕೆ ಬಾರೆಂದು ಕಳುಹಿದ॥3॥ ಅರುಣೋದಯಕೆ ಗಂಗಾಧರ ಬರಲು - ಹದಿನಾರು ವರ್ಷದ ತರುಣೀ ರೂಪದಿ ಹರಿ ವನದೊಳಗಿರಲು - ಚರಣನಖಾಗ್ರದಿ ಧರಣೀ ಬರೆಯುತ್ತ ನಿಂತಿರಲು - ಸೆರಗಪಿಡೆಯೆ ಬರಲು॥ ಕರದಿ ಶಂಖಗದೆ ಚಕ್ರ ತೋರಲು। ಹರನು ನಾಚಿ ತಲೆತಗ್ಗಿಸಿ ನಿಂತ॥4॥ ಮಂಗಳಾಂಗನೆ ಮಾರಜನಕ - ನಾ ಮಾಡಿದ ತಪ್ಪು ಹಿಂಗದೆ ಕ್ಷಮಿಸೊ ಯದುಕುಲ ತಿಲಕ - ವಕ್ಷದಲೊಪ್ಪುವ। ನಿನ್ನಂಗನೆ ಅರಿಯಳು ನಖಮಹಿಮಾಂಕ - ಹೀಗೆನುತಲಿ ತವಕ। ರಂಗ ವಿಠಲನ ಪದಂಗಳ ಪಿಡಿದು। ಸಾಷ್ಟಾಂಗವೆರಗಿ ಕೈಲಾಸಕೆ ನಡೆದ॥5॥

ವಿಶ್ವೇಶ್ವರ ದರುಶನ್ ಕರ್ (ಹಿಂದಿ) **ರಾಗ: ಸಿಂಧುಭೈರವಿ-ರೂಪಕತಾಳ**

ವಿಶ್ವೇಶ್ವರ ದರುಶನ ಕರ್। ಚಲ್‌ಮನ್‌ತುಮ್ ಕಾಶೀ॥ಪ॥ ವಿಶ್ವೇಶ್ವರ್ ದರುಶನ್ ಜಬ್‌ಹಿ। ಕಿನೋ ಬಹು ಪ್ರೇಮ್‌ಸತತ। ಕಾಟೇ ಕರುಣಾನಿಧಾನ। ಜನನ ಮರಣ ಫಾಸ್ಸೀ॥1॥ ಪದ್ಮಸುಮ ನಾಭ ಕಮಲನಯನ। ತ್ರಿನಯನ ಶಂಭೋಮಹೇಶ। ಭಜಲೋ ಇಂದೂ ಸ್ವರೂಪ। ರಹೀಯೇ ಅವಿನಾಶೀ॥2॥

ಶಿವದರುಶನ ನಮಗಾಯಿತು **ರಾಗ: ಮಧ್ಯಮಾವತಿ-ಆದಿತಾಳ**

ಶಿವದರುಶನ ನಮಗಾಯಿತು ಕೇಳಿ। ಶಿವರಾತ್ರಿಯ ಜಾಗರಣೆ॥ಪ॥ ಪಾತಾಳಗಂಗೆಯ ಸ್ನಾನವ ಮಾಡಲು। ಪಾತಕವೆಲ್ಲ ಪರಿಹಾರವು॥ ಜ್ಯೋತಿರ್ಲಿಂಗನ ಧ್ಯಾನವ ಮಾಡಲು। ದ್ಯೂತಗಳಿಲ್ಲ ಅನುದಿನವು॥1॥ ಬೇಡಿದ ವರಗಳ ಕೊಡುವನು।

ತಾಯಿ ಬ್ರಹ್ಮನ ರಾಣಿಯ ನೋಡುವನು॥ ಆಡುತ ಪಾಡುತ ಏರುತ ಬಸವನ। ಆನಂದದಲಿ ನಲಿದಾಡುವನು॥2॥ ಹರನನು ಕಂಡೆನು ಪುರಂದರವಿಠಲನ। ಹರಿನಾರಾಯಣ ಧ್ಯಾನದಲಿ॥3॥

ದಾಸನಾಗಬೇಕು ಸದಾಶಿವನ ದಾಸನಾಗಬೇಕು

ದಾಸನಾಗಬೇಕು ಸದಾಶಿವನ ದಾಸನಾಗಬೇಕು॥ಪ॥ ದಾಸನಾಗಬೇಕು ಕ್ಲೇಶ ಪಂಚಕವಳಿದು। ಆಸೆಯಲಿ ಮನ ಸೂಸದೆ ಸರ್ವದಾ॥ಅ.ಪ.॥ ಮನದ ಕಲ್ಮಶ ಕಳೆದು ಮಹೇಶನ। ಮಹಿಮೆಯ ತಿಳಿದು। ಇನಿತು ಜಗವೆಲ್ಲ ಈಶ್ವರಮಯವೆಂದು। ಘನವಾದ ಮೋಹದ ಗಡಿಯನು ದಾಟುತ॥1॥ತನುವು ಅಸ್ಥಿರವೆಂದು ತಿಳಿದು ಶಂಕರನ। ಹೃದಯವ ಕಾಣುತ। ಘನವಾದ ಇಂದ್ರ ಜಾಲದ ಮಾಯೆಯೆನುತ। ಬಿನುಗು ಸಂಸಾರದ ಮಮತೆಯ ಬಿಡುತ॥2॥ ಆರು ಚಕ್ರದಿ ಮೆರೆವಾ ಅಖಂಡನ। ಮೂರು ಗುಣವ ತಿಳಿದು। ಆರು ಮೂರು ಹದಿನಾರು ತತ್ತ್ವರ ಮೀರಿ। ತೋರುವ ಕಾಗಿನೆಲೆಯಾದಿ ಕೇಶವನಡಿ॥3॥

❖ ❖ ❖

ಯೋಗಿಗಳ ಹೃದಯಕೆ ನಿಲುಕ

ಯೋಗಿಗಳ ಹೃದಯಕೆ ನಿಲುಕ ನಿಗಮಾಗಮೈಕವಿನುತನ ಪರಮನುರಾಗದಲಿ ದ್ವಿಸಹಸ್ರ ಜಿಹ್ವೆಗಳಿಂದ ವರ್ಣಿಸುವ। ಭೂ ಗಗನ ಪಾತಾಳ ವ್ಯಾಪ್ತನ। ಯೋಗ ನಿದ್ರಾಸ್ಪದನೆನಿಪ ಗುರು। ನಾಗರಾಜನ ಪದಕೆ ನಮಿಸುವೆ ಮನದೊಳನವರತ॥

ಶೇಷದೇವ ವಾರುಣಿಪತಿ

ಶೇಷದೇವ ವಾರುಣಿಪತಿ ಪಾಹಿ॥ಪ॥ ಶೇಷದೇವ ತ್ರಯಿಘೋಷನ ಮುಖಪರಿ। ಪೋಷಿಸು ಎಮ್ಮಭಿಲಾಷೆಯ ಸಲಿಸಿ॥ಅ.ಪ.॥ ಭಜಿಸುವೆ ಸರ್ವದಾ ಸುಜನಾಭೀಷ್ಟದ। ತ್ರಿಜಗಧಾರಕ ಭುಜಗೋತ್ತಂಸಾ॥1॥ ಪುಣ್ಯಚರಿತ ಸುಶರಣ್ಯನೆ ಸುಬ್ರಹ್ಮಣ್ಯದೇವ ಕಾರುಣ್ಯ ಮೂರುತಿ॥2॥ ಅಸಿತ ವಸನ ಹಲ ಮುಸಲಾಯುಧ ಧರ। ದ್ವಿಸಹಸ್ರೇಕ್ಷಣ ಸುಶರಣರ ಪಾಲಾ॥3॥ ವಾರುಣಿಸುಮುಖ ಸರೋರುಹ ದಿನಕರ। ತೋರು ತವಾಂಘ್ರಿ ಮಹೋರಗರಾಜಾ॥4॥ ಪಾತಾಳ ಪುರುಹೂತ ಜಗನ್ನಾಥ ವಿಠಲನ ಪ್ರೀತಿ ವಿಷಯನೆ॥5॥

ಪೋಷಿಸೆನ್ನನು ನಿರುತ ಶೇಷದೇವ

ಪೋಷಿಸೆನ್ನನು ನಿರುತ ಶೇಷದೇವ। ದೋಷನಾಶನಗೊಳಿಸಿ ಲೇಸಾಗಿ ಪಿಡಿ ಕರವ॥ಪ॥ ವನದಿಶಯನಗೆ ತಲ್ಪ ಅನುಜಪೂರ್ವಜನಾಗಿ। ಘನಸೇವೆಯನುಗೈದ ಫಣಿರಾಜನೆ। ವಿನಯದಲಿ ಬಿನ್ನೈಪೆ ನಿನಗಶನವಾದಾತ। ಎನಗೊಲಿದು ಪೊರೆವಂತೆ ಅನುಗ್ರಹಿಸಿ ಅನುದಿನದಿ॥1॥ ಭೂಗಗನಪಾತಾಳಸಾಗರವ ವ್ಯಾಪಿಸಿದ। ಯೋಗಸಾಧನಶೂರ ನಾಗನಾಥ। ಬಾಗಿಬೇಡುವೆ ಭವದ ರೋಗಕೌಷಧವಾದ। ಭಾಗವತ ಶ್ರವಣ ಸುಖರಾಗದಲಿ ನೀ ಕೊಟ್ಟು॥2॥ ಸಾಸಿರಾಂ ಬಕ ನಮಿತ ಸಾಸಿರಾನನನಾದ ವಾಸುಕೀವರ ವಾರುಣೇಶ ನಿನ್ನ॥ ಹಾಸಿಗೆಯಗೈದಂಥ ಶ್ರೀಶ್ಯಾಮಸುಂದರನ ದಾಸರಾದವರು ಸಹವಾಸ ಪಾಲಿಸಿ ನಿತ್ಯ॥3॥

ಬಲು ರಮ್ಯವಾಗಿದೆ ಶ್ರೀಹರಿಯ ಮಂಚ

ಬಲು ರಮ್ಯವಾಗಿದೆ ಶ್ರೀಹರಿಯ ಮಂಚ। ಯಲರುಣಿ ಕುಲರಾಜ ರಾಜೇಶ್ವರನ ಮಂಚ॥ಪ॥ ಪವನ ತನಯನೆನಿಪ ಪಾವನತರ ಮಂಚ। ಭುವನತ್ರಯವ ಪೊತ್ತ ಭಾರಿಮಂಚ॥ ಕಿವಿಗಳಿಲ್ಲದ ಮಂಚ ಶ್ರೀನಿಕೇತನ ಮಂಚ। ಶಿವರೂಪದಲ್ಲಿ ಶ್ರೀಹರಿಯ ಒಲಿಸಿದ ಮಂಚ॥1॥ ನೀರಾಂಬರವ ನುಟ್ಟು ನಳನಳಿಸುವ ಮಂಚ। ನಾಲಿಗೆ ಎರಡುಳ್ಳ ನೈಜ ಮಂಚ। ನಾಲ್ವತ್ತು ಕಲ್ಪದಿ ತಪವ ಮಾಡಿದ ಮಂಚ। ತಾಲ ಮುಸಲ ಹಲವ ಪಿಡಿದಿಹ ಮಂಚ॥2॥ ರಾಮನನುಜನಾಗಿ ರಣವ

ಜಯಿಸಿದ ಮಂಚ। ತಾಮಸ ರುದ್ರನ ಪಡೆದ ಮಂಚ।। ಭೀಮನನುಜನೊಳು ಆವೇಶಿಸಿದ ಮಂಚ। ಜೀಮೂತ ಮಲ್ಲರನು ಕುಟ್ಟಿದ ಮಂಚ।।3।। ಜೀವ ನಾಮಕನಾದ ವ್ಯಾಪ್ತನಾದ ಹರಿಯ। ಸೇವಿಸಿ ಸುಖಿಸುವ ದಿವ್ಯಮಂಚ।। ಸಾವಿರ ಮುಖದಿಂದ ತುತಿಸಿ ಹಿಗ್ಗುವ ಮಂಚ। ದೇವಕಿಯ ಜಠರದಿ ಜನಿಸಿದ ಮಂಚ।।4।। ವಾರುಣಿ ದೇವಿಗೆ ವರನೆನಿಸಿದ ಮಂಚ। ಸಾರುವ ಭಕ್ತರ ಪೊರೆವ ಮಂಚ। ಕಾರುಣ್ಯನಿಧಿ ಜಗನಾಥ ವಿಠ್ಠಲನ ವಿಹಾರಕ್ಕೆ ಯೋಗ್ಯವಾದ ಶೇಷಮಂಚ।।5।।

❖ ❖ ❖

ಜಗದುದರನ ಸುರೋತ್ತಮನ

ಜಗದುದರನ ಸರೋತ್ತಮನ ನಿಜ-। ಪೆಗಲೊಳಾಂತು ಕರಾಬ್ಜದೊಳು ಪದ। ಯುಗ ಧರಿಸಿ ನಖ ಪಂಕ್ತಿಯೊಳು ರಮಣೀಯತರವಾದ।। ನಗಧರನ ಪ್ರತಿಬಿಂಬ ಕಾಣುತ। ಮಿಗೆ ಹರುಷದಿಂ ಪೊಗಳಿ ಹಿಗ್ಗುವ। ಖಗಕುಲಾಧಿಪ ಕೊಡಲಿ ಮಂಗಳ ಸಕಲ ಸುಜನರಿಗೆ।।

ರಕ್ಷಿಸೆನ್ನನ್ನು ಪಕ್ಷೀಂದ್ರನೆ

ರಕ್ಷಿಸೆನ್ನನ್ನು ಪಕ್ಷೀಂದ್ರನೆ ನೀನು।।ಪ।। ರಕ್ಷಿಸು ಎನ್ನನು ಪಕ್ಷಿಪ ಕರುಣಕಟಾಕ್ಷದಿಂದೀಕ್ಷಿಸುತೀಕ್ಷಣ ಬಿಡದೆ।।ಅ.ಪ.।। ತಂದೆಯನುಜ್ಞದಿ ಸಿಂಧೂರ ಕೂರ್ಮ। ದ್ವಂದ್ವಪ್ರಾಣಿಗಳ ತಿಂದ ಮಹಾತ್ಮ।।1।। ಅಂದು ಪೀಯೂಷವ ತಂದು ಮಾತೆಯ। ಬಂಧನ ಬಿಡಿಸಿದ ಬಂದುರ ಮಹಿಮ।।2।। ಗಗನಗಮನ ಪನ್ನಪಗೆ ಪ್ರಾರ್ಥಿಪೆ। ಮಿಗೆ ಕರುಣದಿ ಎನ್ನಘದೂರೋಡಿಸಿ।।3।। ಧಾರುಣಿ ಯೊಳಗವತಾರರಹಿತ ಶೃಂಗಾರವಾದ ಭಂಗಾರಶರೀರ।।4।। ವಂದಿಪೆ ವಿನತಾನಂದನ ಶ್ಯಾಮಸುಂದರ ವಿಠ್ಠಲನ ಶ್ಯಂದನ ಶೂರ।।5।।

ಅತಿ ಶೋಭಿಸುತಿದೆ ಶ್ರೀಪತಿಯ ವಾಹನಾ **ರಾಗ: ಕಾಂಬೋಧಿ-ಝಂಪೆತಾಳ**

ಅತಿ ಶೋಭಿಸುತಿದೆ ಶ್ರೀಪತಿಯ ವಾಹನಾ। ಚತುರ್ದಶ ಲೋಕಕೆ ಪ್ರತಿಮವಾಹನಾ।।ಪ।। ಕಾಲನಾಮಕನಾಗಿ ಕಮಲಭವನಲಿ ಜನಿಸಿ। ಕಾಲಾತ್ಮ ಹರಿಯ ಸೇವಿಪ ವಾಹನ। ಕಾಳಗದಿ ಕಪಿವರರ ಕಟ್ಟಿ ಬಿಡಿಸಿದ ವಾಹನಾ। ವಾಲಖಿಲ್ಯರ ವರವ ಪಡೆದಿಹಾ ವಾಹನಾ।।1।। ವಿನುತ ಕಶ್ಯಪ ಋಷಿಯ ತನಯ ನೆನಿಸಿದ ವಾಹನಾ। ಅನುಜರ ಕದ್ದೊಯ್ದು ಅಧ್ಯವಾಹನಾ। ವನದ ಮಧ್ಯದಿ ಅವುತರಿಭಕ್ಷಿಸಿದ ವಾಹನಾ। ಕನಕನಾಜ್ಞದಿ ಕೂರ್ಮ ಗಜ ನುಂಗಿದ ವಾಹನಾ।।2।। ಕೂಪರದೆಡೆಗೆ ಮಂದಾ ಒಯ್ದು ವಾಹನಾ। ನಿಜರೂಪದಿ ಹರಿಸೇವೆಗೈವ ವಾಹನಾ। ಸಾಪತ್ನಿಯರಿಗೆ ಅಮೃತಪ್ರಾಪ್ತ ಮಾಡಿದ ವಾಹನಾ। ಸೌಪರ್ಣಿಪತಿಯೆಂಬ ಪೊಂಬಣ್ಣ ವಾಹನಾ ।।3।। ಕುಲಶಪಾಣಿಯರೊಡನೆ ಕಲಹಮಾಡಿದ ವಾಹನಾ। ಒಳಪೊಕ್ಕು ಪೀಯೂಷ ತಂದ ವಾಹನಾ। ಮಲತಾಯಿ ಮಕ್ಕಳನು ಮರುಳುಗೊಳಿಸಿದ ವಾಹನಾ। ಬಲಿರಾಜನೊಯ್ದ ಮಕುಟವ ತಂದ ವಾಹನಾ।।4।। ಪನ್ನಗಾಶನವಾದ ಪತಿತಪಾವನ ವಾಹನಾ। ಸನ್ನುತಿಪ ಸಜ್ಜನರ ಪೊರೆವ ವಾಹನಾ।। ಪನ್ನಗಾಚಲವಾಸ ಜಗನ್ನಾಥ ವಿಠಲಗೆ। ಉನ್ನತ ಪ್ರಿಯವಾದ ಗರುಡ ವಾಹನಾ।।5।।

❖ ❖ ❖

ಭಾರತಿದೇವಿಯ ನೆನೆ **ರಾಗ: ಹಂಸಾನಂದಿ-ಆದಿತಾಳ**

ಭಾರತಿದೇವಿಯ ನೆನೆ ನೆನೆ। ನಿರುತ ಭಕುತಿಗಿದು ಮನೆ ಮನೆ।।ಪ।। ಮಾರುತನರ್ಧಾಂಗಿ ಸುಚರಿತ ಕೋಮಲಾಂಗಿ। ಸಾರಸಾಕ್ಷಿ ಕೃಪಾಂಗಿ ಅಪಾಂಗಿ।।1।। ಕಿಂಕಿಣಿ ಕಿಣಿಪಾದ ಪಂಕಜನೂಪುರ। ಕಂಕಣ ಕುಂಡಲಾಲಂಕೃತ ದೇಹ।।2।। ಶಂಕರ ಸುರವರ ವಂದಿತ ಚರಣೆ। ಕಿಂಕರಿ ಪುರಂದರ ವಿಠ್ಠಲ ಕರುಣೆ।।3।।

ಏನು ಮರುಳಾದೆಯಮ್ಮ ಎಲೆ ಭಾರತಿ

ಏನು ಮರುಳಾದೆಯಮ್ಮ ಎಲೆ ಭಾರತಿ। ನೀನರಿಯೆ ಪವನ ನಿಂಥವನೆಂದು॥ಪ॥ ಕಲ್ಲು ಹೊರುವನು ಮತ್ತೆ ಯಾರಿಂದಲಾಗದವು। ಎಲ್ಲರಂತಲ್ಲ ಕಪಿರೂಪನೋಡು। ಖುಲ್ಲ ಫಲಪುಷ್ಪ ಯುಕ್ತ ವನವನು ಕೆಡಿಸಿದನು। ಎಲ್ಲಿಂದ ಒದಗಿದನು ಈ ಪತಿಯು ನಿನಗೆ॥1॥ ರಕುತವ ಪಾನಮಾಡಿದ ನಂತೆ ಕೇಳಿದೆಯಾ। ರಕ್ಕಸೊಬ್ಬಳು ನಿನಗೆ ಸವತಿ ಇಹಳು। ಮಕ್ಕಮಾರಿ ಮಗನುಂಟು ಗಂಡನು ಒಗರಕ್ಕೆ। ಗತಿಯಿಲ್ಲದೆಲೆ ಭಿಕ್ಷೆ ಬೇಡುವನಿಗೆ॥2॥ ಹುಟ್ಟುಬಡವ ತಾನಾದರೇನಾಗಲಿ। ನಿನ್ನ ಬಿಟ್ಟು ತುರ್ಯಾಶ್ರಮವ ಧರಿಸಿಕೊಂಡು। ದೃಷ್ಟಿಗೋಚರನಾಗದೆ ನರರಿಗೆ ಪ್ರಾಣೇಶ। ವಿಠ್ಠಲನ ಬಳಿಯಲ್ಲಿ ಬದರಿಯೊಳು ಸೇರಿದವನಿಗೆ॥3॥

ಏನು ಮರುಳಾದೆಯೆ ಎಲೆ ಭಾರತೀ — ರಾಗ: ಕಾಂಬೋಧಿ-ಝಂಪೆತಾಳ

ಏನು ಮರುಳಾದೆಯೆ ಎಲೆ ಭಾರತೀ॥ಪ॥ ವಾನರರಕುಲದೊಳಗೆ ಶ್ರೇಷ್ಠನಾದವಗೇ॥ಅ.ಪ॥ ಕಣ್ಣಿಲ್ಲದವಳ ಗರ್ಭದಲಿ ಜನಿಸಿ ಬಂದು। ನಿನ್ನ ತೊರೆದು ಬ್ರಹ್ಮಚಾರಿಯಾದ। ಹೆಣ್ಣಾಗಿ ಪೋಗಿ ವನವಕಿತ್ತೀಡಾಡಿ। ಉಣ್ಣ ಕರೆದೆರ ಎಂಜಲೆಡೆಯನೊಯ್ದವಗೆ॥1॥ ಹುಟ್ಟಿದನು ಗುರುತಲ್ಪ ಗಾಮಿಯಾ ವಂಶದಲಿ। ನಟ್ಟಿರುಳೊಳೊಬ್ಬ ಅಸುರಿಯ ಕೂಡಿದ। ಹೊಟ್ಟೆಗೆಂತಲೆ ಹೋಗಿ ಭಿಕ್ಷದನ್ನವನುಂಡು। ಅಟ್ಟುಹಾಕುವನಾಗಿ ದಿನವಕಳೆದವಗೆ॥2॥ ಮಂಡೆ ಬೋಳಾಗಿ ಭೂಮಂಡಲವ ತಿರುಗಿದ। ಕಂಡವರು ಯಾರು ಈತನ ಗುಣಗಳ। ಪುಂಡರೀಕಾಕ್ಷ ಶ್ರೀ ಪುರಂದರವಿಠ್ಠಲನ ಕೊಂಡಾಡುತ ಬೋರೆ ಮರದ ಕೆಳಗಿದ್ದವಗೆ॥3॥

❖ ❖ ❖

ಒಂದೇ ಮನದಿ ಭಜಿಸು ವಾಗ್ದೇವಿಯ

ಒಂದೇ ಮನದಿ ಭಜಿಸು ವಾಗ್ದೇವಿಯ॥ಪ॥ ಇಂದುಮತಿ ಕೊಡುವಳು ಹರಿಯ ಧ್ಯಾನವನು॥ಅ.ಪ.॥ ಹಿಂದೆ ಪ್ರಹ್ಲಾದನು ಕಮಲಜನ ಸತಿಗೆರಗಿ। ನಿಂದು ಆರಾಧಿಸಲು ಹರಿ ವಿಶ್ವಮಯನೆಂದು॥ ಬಂದ ವಿಘ್ನವ ಕಳೆದು ಭಾವ ಶುದ್ಧಿಯನಿತ್ತು। ಪೊಂದಿಸಿದಳಾಗ ಶ್ರೀಹರಿಯ ಚರಣದಲಿ॥1॥ ಅಂದು ದಶಮುಖನನುಜ ವಂದಿಸದೆ ವಾಣಿಯನು। ನಿಂದು ತಪವನು ಗೈಯ್ಯೆ ಬಹುಕಾಲವು॥ ಅಂದದಿಂದಜ ಮೆಚ್ಚಿ ವರಧಿಕ ಬೇಡೆನಲು। ನಿಂದು ಜಿಹ್ವೆಯಲಿ ನಿದ್ರೆಯ ಬೇಡಿಸಿದಳು॥2॥ ಅರಿತು ಭಜಿಸಲುಬಿಡದೆ ಅಜನ ಅರಸಿಯನಿತ್ಯ। ಗುರುತರವಾದ ವಾಕ್ಶುದ್ಧಿಯನಿತ್ತು॥ ತ್ವರಿತದಿ ಪುರಂಧರ ವಿಠ್ಠಲನ ಸೇವೆಯೊಳಿರಿಸಿ। ಪರತತ್ವದ ಕಥಾಮೃತ ನುಡಿಸುವಳು॥3॥

ಸೇವಿಸುವೆನು ಸರಸ್ವತಿ ತಾಯೆ

ಸೇವಿಸುವೆನು ಸರಸ್ವತಿ ತಾಯೆ॥ಪ॥ ವಾಗಭಿಮಾನಿ ವರಬ್ರಹ್ಮಾಣಿ। ಸುಂದರ ವೇಣಿ ಸುಚರಿತ್ರಾಣಿ॥1॥ ಸಭೆಯೊಳು ನಾ ನಿನಗೊಂದನೆಗೈವೆನು। ವಿಭುಜೆಯ ಕಾಮಿಸಿ ನಿನ್ನಭಯ ಬೇಡುವೆನು॥2॥ ಪಾಡುವೆ ಶ್ರುತಿಯ ಬೇಡುವೆ ಮತಿಯ। ಉಡುಪಿಯ ಕೃಷ್ಣನ ಮೋಹದ ಸೊಸೆಯ॥3॥

ಕೊಡು ಬೇಗ ದಿವ್ಯಮತಿ ಸರಸ್ವತಿ — ರಾಗ: ಹಂಸಧ್ವನಿ-ಆದಿತಾಳ

ಕೊಡು ಬೇಗ ದಿವ್ಯಮತಿ ಸರಸ್ವತಿ। ಕೊಡು ಬೇಗ ದಿವ್ಯಮತಿ॥ಪ॥ ಮೃಡಹರಿಹಯಮುಖ ರೊಡೆಯಳೆ ನಿನ್ನಯ। ಅಡಿಗಳಿಗೆರಗುವೆ ಅಮ್ಮ ಬ್ರಹ್ಮನ ರಾಣಿ॥ಅ.ಪ.॥ ಇಂದಿರಾರಮಣನ ಹಿರಿಯ ಸೊಸೆಯು ನೀನು। ಬಂದೆನ್ನ ವದನದಿ ನಿಂದು ನಾಮವ ನುಡಿಸೆ॥1॥ ಅಖಿಳ ವಿದ್ಯಾಭಿಮಾನಿ ಅಜನ ಪಟ್ಟದ ರಾಣಿ। ಸುಖವಿತ್ತು ಪಾಲಿಸೆ ಸುಜನಶಿರೋಮಣಿ॥2॥ ಪತಿತಪಾವನೆ ನೀ ಗತಿಯೆಂದು ನಂಬಿದೆ। ಸತತ ಪುರಂದರವಿಠಲನ ತೋರೆ॥3॥

ಕರುಣಿಸು ತಾಯೆ ಸಾರಸಭವಸತಿ

ಕರುಣಿಸು ತಾಯೆ ಸಾರಸಭವಸತಿ ಶ್ರೀ ಭಾರತೀ। ಸರಸ್ವತಿ॥ಪ॥ ನಿರುತ ನಿನ್ನ ಪದ ಸರಸಿಜ ಯುಗಳಿಗೆ। ಅರಿಯದನಾ

ಶಿರವನು ಬಾಗಿ ಬೇಡುವೆ॥ಅ.ಪ.॥ ವರಮತಿಯನು ಕರುಣಿಸು ಮಾತೆ। ಸುರವರ ಮುನಿನುತೆ। ಸುಗುಣ ಯುತೆ। ಧರಣಿಯೊಳು ನಿನಗೆ ಸಮಪರದೇವತೆ। ಅರಿಯೆನು ನಾ ಮೂಜಗನ್ಮಾತೆ॥1॥ ಜಯಜಯ ಸರಸಿಜ ಭವರಮಣಿ। ಜಯಜಯಸುರನುತೆ ಸಗುಣಮಣಿ। ಜಯಜಯ ಸರಸೀರುಹಸಮಪಾಣಿ। ಜಯಜಯ ಪನ್ನಗವೇಣೀ ಶ್ರೀವಾಣಿ॥2॥

❖ ❖ ❖

ಸಾರಿಬಂದನೆ ಪ್ರಾಣೇಶ **(ಜಾನಪದ ಧಾಟಿ)**

ಸಾರಿಬಂದನೆ ... ಪ್ರಾಣೇಶ ಬಂದನೆ॥ಪ॥ ಸಾರಿ ಬಂದ ಲಂಕಾಪುರವ ಮೀರಿದ। ರಾವಣನ ಕಂಡು ಧೀರನು ವಯ್ಯಾರದಿಂದ॥ಅ.ಪ॥ ವಾಯುಪುತ್ರನೆ। ಶ್ರೀರಾಮನ ದೂತನೆ। ಪ್ರೀಯದಿಂದ ಸೀತಾಂಗನೆಗೆ ಮುದ್ರಿಕೆಯ ತಂದಿತ್ತವನೇ॥1॥ ಭೀಮಸೇನನೆ ಕುಂತಿ ತನಯನೆ। ವಿರಾಟನ ಮನೆಯಲ್ಲಿ ನಿಂತು ಕೀಚಕನ ಸಂಹರಿಸಿದವನೆ॥2॥ ಮದ್ವರಾಯನೆ ಸರ್ವಜ್ಞಶ್ರೇಷ್ಠ। ಅದ್ವೈತವ ಗೆದ್ದು ಪುರಂದರವಿಠಲನ ಮುಂದೆ ನಿಂತವನೆ॥3॥

ವೀರ ಹನುಮನು ಬಹು ಪರಾಕ್ರಮಿ **ರಾಗ: ಆನಂದಭೈರವಿ**

ವೀರ ಹನುಮನು ಬಹು ಪರಾಕ್ರಮಿ॥ಪ॥ ಸುಜ್ಞಾನವಿತ್ತು ಪಾಲಿಸೆನ್ನ ಜೀವರೋತ್ತಮ॥ಅ.ಪ.॥ ರಾಮದೂತ ನೆನಿಸಿಕೊಂಡೇ ನೀ ರಾಕ್ಷಸರ। ವನವನೆಲ್ಲ ಕಿತ್ತು ಬಂದೆ ನೀ। ಜಾನಕಿಗೆ ಮುದ್ರೆಯಿತ್ತು ಜಗತ್ತಿಗೆಲ್ಲ ಹರುಷವಿತ್ತು। ಚೂಡಾಮಣಿಯ ರಾಮಗಿತ್ತು ಲೋಕಕೆ ಮುದ್ದೆನಿಸಿ ಮೆರೆದೆ॥ವೀರ1॥ ಮೂರ್ತಿಸುತನ ಪಾದ ಪೂಜಿಸಿ ಗಧೆಯ ಧರಿಸಿ। ಬಕಾಸುರನ ಸಂಹರಿಸಿದೆ ॥ದ್ರೌಪದಿಯ ಮೊರೆಯನು ಕೇಳಿ ಮತ್ತೆ ಕೀಚಕನ್ನ ಕೊಂದು ಭೀಮನೆಂಬ ನಾಮ ಧರಿಸಿ ಸಂಗ್ರಾಮಧೀರನಾಗಿ ಜಗದಿ॥ವೀರ॥2॥ ಮಧ್ಯಗೇಹನಲ್ಲಿ ಜನಿಸಿ ನೀ ಬಾಲ್ಯದಲ್ಲಿ। ಮತ್ಸ್ವರೀಯ ರೂಪುಗೊಂಡೆ ನೀ। ಸತ್ಯವತಿಯ ಸುತನ ಭಜಿಸಿ ಸನ್ಮುಖದಿ ಭಾಷ್ಯಮಾಡಿ। ಸಜ್ಜನರ ಪೊರೆವ ಮುದ್ದು ಪುರಂದರವಿಠಲದಾಸ॥ವೀರ॥3॥

ಎಂಥಾ ಬಲವಂತನೋ ಕುಂತಿಯ **ರಾಗ: ಶಹನ-ಆದಿತಾಳ**

ಎಂಥಾ ಬಲವಂತನೋ ಕುಂತಿಯ ಸಂಜಾತನೋ॥ಪ॥ ಭಾರತಿಗೆ ಕಾಂತನೋ। ನಿತ್ಯ ಶ್ರೀಮಂತನೋ॥ಅ.ಪ॥ ರಾಮಚಂದ್ರನ ಪ್ರಾಣನೋ। ಅಸುರ ಹೃದಯ ಬಾಣನೋ। ಖಳರ ಗಂಟಲ ಗಾಣನೋ। ಜಗದೊಳಗೆ ಪ್ರವೀಣನೋ॥1॥ ಕುಂತಿಯ ಕಂದನೊ। ಸೌಗಂಧಿಕವ ತಂದನೋ। ಕುರುಕ್ಷೇತ್ರಕೆ ಬಂದನೋ ಕೌರವರ ಕೊಂದನೋ॥2॥ ಬಂಡಿ ಅನ್ನವನುಂಡನೋ। ಬಕನಪ್ರಾಣವ ಕೊಂದನೋ। ದ್ರೌಪದಿಗೆ ಗಂಡನೋ। ಭೀಮ ಪ್ರಚಂಡನೋ॥3॥ ವೈಷ್ಣವಾಗ್ರಗಣ್ಯನೋ। ಸಂಚಿತಾಗ್ರ ಪುಣ್ಯನೋ। ದೇವವರೇಣ್ಯನೋ। ದೇವಶರಣ್ಯನೋ॥4॥ ಮದ್ವ ಶಾಸ್ತ್ರ ರಚಿಸಿದನೋ। ಸದ್ವೈಷ್ಣವರ ಸಲಹಿದನೋ। ಉಡುಪಿಲಿ ಕೃಷ್ಣನ ನಿಲಿಸಿದನೋ। ಪುರಂದರ ವಿಠಲನ ಒಲಿಸಿದನೋ॥5॥

ಈತನೇ ಲೋಕಗುರು ವೇದವಿಖ್ಯಾತ

ಈತನೇ ಲೋಕಗುರು ವೇದವಿಖ್ಯಾತ। ಭೂತಳದೊಳು ರಾಮದೂತನೆಂಬಾತ॥ಪ॥ ಅಂದು ಹನುಮಂತನಾಗಿ ಅಖಿಲದಿಕ್ಕುಗಳನು। ಒಂದು ನಿಮಿಷಕೆ ಪೋಗಿ ಉಧದಿ ಲಂಘಿಸುತ। ಇಂದೀವ ಉದಧಿ ರಾಕ್ಷಿಗೆ ವಂದಿಸಿ ಮುದ್ರೆಯನಿತ್ತು। ಬಂದು ರಾಮರ ಪಾದಕೆರಗಿ ನಿಂದಾತ॥1॥ ಅರ್ಜುನನ ಅಣ್ಣನಾಗಿ ಅಂದು ದುರ್ಯೋಧನನ। ಲಜ್ಜೆಯನು ಕೆಡಿಸಿಬಹುಖಳರ ಮುರಿದ। ಮೂರ್ಜಗವ ನಾಳುವ ಮಗಧಾಧಿಪನ ಸೀಳ್ದ। ಸಜ್ಜನ ಪ್ರಿಯ ಭೀಮಸೇನೆಂಬಾತ॥2॥ ಮೂರಾರು ಎರಡೊಂದು ಮೂಢಮತಗಳ ಜರಿದು। ಸಾರಶಾಸ್ತ್ರಗಳ ಸಜ್ಜನರಿಗೊರೆದು।

ವಾರಿಜನಾಭ ಶ್ರೀಹಯವದನ ರಾಯನಿಗೆ। ಯಾರು ಸರಿಯಿಲ್ಲೆಂದು ಸ್ಥಾಪಿಸಿ ಮೆರೆದಾತಾ॥3॥

ಅಂಜಿಕೆ ಇನ್ಯಾತಕಯ್ಯಾ **ರಾಗ: ಕೇದಾರ-ಆದಿತಾಳ**

ಅಂಜಿಕೆ ಇನ್ಯಾತಕಯ್ಯಾ ಸಜ್ಜನರಿಗೆ। ಭಯವು ಇನ್ಯಾತಕಯ್ಯಾ॥ಪ॥ ಸಂಜೀವರಾಯರ ಸ್ಮರಣೆ ಮಾಡಿದಮೇಲೆ॥ಅ.ಪ.॥ ಕನಸಿಲಿ ಮನಸಿಲಿ ಕಳವಳವಾದರೆ। ಹನುಮನ ನೆನೆದರೆ ಹಾರಿಹೋಗದೆ ಭೀತಿ॥1॥ ರೋಮ ರೋಮಕೆ ಕೋಟಿ ಲಿಂಗವುದುರಿಸಿದ। ಭೀಮನ ನೆನೆದರೆ ಬಿಟ್ಟು ಹೋಗದೆ ಭೀತಿ॥2॥ ಪುರಂದರವಿಠಲನ ಪೂಜೆಯ ಮಾಡುವ। ಗುರು ಮಧ್ವರಾಯರ ಸ್ಮರಣೆ ಮಾಡಿದಮೇಲೆ॥3॥

ಎಂತು ವರ್ಣಿಪೆನಮ್ಮಮ್ಮಾ

ಎಂತು ವರ್ಣಿಪೆನಮ್ಮಮ್ಮಾ ಎಂತು ವರ್ಣಿಪೆನಮ್ಮಮ್ಮಾ। ಯಂತ್ರೋದ್ಧಾರಕನಾಗಿ ಮೆರೆದವನಾ॥ಪ॥ ಕೋತಿರೂಪದಲಿ ಬಂದು। ಭೂತಳಕೆ ಬೆಡಗು ತೋರಿ॥ ಈ ತುಂಗ ಭದ್ರೆಯಲ್ಲಿ। ಖ್ಯಾತಿಯಾಗಿಪ್ಪಯತಿಯಾ॥1॥ ಸುತ್ತಲು ವಾನರ ಬದ್ಧ। ಮತ್ತೆ ವಲಯಾಕಾರ ಮಧ್ಯ॥ ಚಿತ್ರಕೋಣ ಆದರೊಳು। ನಿತ್ಯದಲಿಯಿಪ್ಪ ಯತಿಯಾ॥2॥ ವ್ಯಾಸಮುನಿ ರಾಯರಿಂದ। ಈ ಶಿಲೊಯೊಳು ನಿಂದು॥ ಶ್ರೀಶ ವಿಜಯ ವಿಠ್ಠಲನ್ನ। ಏಸು ಬಗೆ ತುತಿಪನ್ನ॥3॥

ಮಂಗಳಂ ಭಾರತಿರಮಣಗೆ (ಮಂಗಳ)

ಮಂಗಳಂ ಭಾರತಿರಮಣಗೆ ಜಯ। ಮಂಗಳಂ ನಿಜಭಕ್ತ ಪರಿಪಾಲಗೆ॥ಪ॥ ಅಂಜನಾ ಕೇಸರಿ ತನಯಗೆ ಮಂಗಳ। ಕಂಜಾಪ್ತಜನ ಕಾಯ್ದಗೆ ಮಂಗಳ। ಅಂಜನಾದ್ರಿ ತಂದಾತಗೆ ಮಂಗಳ। ಸಂಜಯವಂತ ಶ್ರೀ ಹನುಮನಿಗೆ॥1॥ ಕುಂತಿ ಪಾಂಡವಜನಾಗಿ ಕಮಲಯದೊಳು ಬಲ। ವಂತ ರಾಯರಾ ತರಿದಗೆ। ದಂತಿಪುರವ ಬೇಡಿ ಕೊಡದಿರೆ ಕೌರವರ ಸಂತತಿ ಸವರಿದ ಸುಖ ಪೂರ್ಣಗೆ॥2॥ ಮೂರವತಾರ ಮಾಡಿದಗೆ ಮಂಗಳ। ಮೂರೇಳು ಮತಗಳ ಮುರಿದವಗೆ ಮಂಗಳ। ಕಾರುಣ್ಯ ಸಿಂಧು ಜಗನ್ನಾಥ ವಿಠಲನ ಆರಾಧಿಸಿದ ಮಧ್ವ ಮುನಿರಾಯಗೆ॥3॥

❖ ❖ ❖

ನಿರುಪಮಾನಂದಾತ್ಮ ಭವ ನಿರ್ಜರ

ನಿಪುರಮಾನಂದಾತ್ಮ ಭವ ನಿರ್ಜರ ಸಭಾಸಂಸೇವ್ಯ ಋಜುಗಣ। ದರಸೆ ಸತ್ವ ಪ್ರಚುರವಾಣೀ ಮುಖಸರೋಜೇನ॥ ಗರುಡ ಶೇಷ ಶಶಾಂಕ ದಳ। ಶೇಖರರ ಜನಕ ಜಗದ್ಗುರುವೆ ತ್ವ-। ಚ್ಚರಣಗಳಿಗಭಿವಂದಿಸುವೆ ಪಾಲಿಪುದು ಸನ್ಮತಿಯ॥

ಕರುಣಿಸು ಕೋಮಲಾಂಗನೆ

ಕರುಣಿಸು ಕೋಮಲಾಂಗನೆ। ನಾರಾಯಣನ ಸುತನೆ॥ಪ॥ ಕರುಣಿಸು ಎನ್ನನು ಸುರಸೇವಿತ ಪಾದ। ಪರಮೇಷ್ಠಿಯೇ ನಿನ್ನ ಶರಣು ಬಂದಿಹೆನು॥ಅ.ಪ.॥ ವಾಣಿ ರಮಣ ನಿನ್ನ ಗಾನ ಮಾಡುವೆ ಸಿರಿ। ಮಾನಿನಿ ಅರಸರ ಧ್ಯಾನ ದೊಳಿರಿಸೋ॥1॥ ಶಿವ ಜನಕನೆ ನಿನ್ನ ಕವನ ಮಾಡುವೆ ಹೃದ್-। ಭುವನದೊಳಗೆ ಮಾಧವನ ತೋರಿಸೋ॥2॥ ಇಂದಿರೇಶನ ಮನದಿಂದು ಬೋಧಿಸಿ ಭವ। ಬಂಧನ ಬಿಡಿಸೆಮ್ಮ ವೃಂದಾಸನ ಗುರು॥3॥

ವಾಣಿಯರಸ ಪರಮೇಷ್ಠಿ ನಿರುತದಿ **ರಾಗ: ತೋಡಿ-ಅಟ್ಟತಾಳ**

ವಾಣಿಯರಸ ಪರಮೇಷ್ಠಿ ನಿರುತದಿ ನಿಷ್ಠಿ। ಮಾಣದೆ ಕೊಡೊ ಮನಮುಟ್ಟಿ॥ಪ॥ ನಾನಾ ನಾಡಿನೊಳು ನೀನೇ ಪ್ರಿಯನೆಂದು। ಆನಂದ ಮತಿಯಿಂದ ಗಾನ ಮಾಡುವೆ॥ಅ.ಪ.॥ ಪುರುಷನಾಮಕಾ ವಿಧಾತಾ ಪೂರ್ವ ಮಾರುತಾ। ತಾರತಮ್ಯದೊಳು ಉನ್ನತಾ। ಹರಿಸಿರಿ ದೇವಿಯ ಚರಣರಜವನು। ಪರಮಾಣು ಪ್ರದೇಶ ವರಶಬ್ದ ಪಿಡಿದು।

ತರುವಾಯ ಬಹುವಿಧ ಪರಿಪರಿ ಬಗೆಯಿಂದ। ಸ್ಮರಿಸಿಕೊಳ್ಳುತ ಮೈಮರೆವ ಶತಾನಂದಾ॥1॥ ಜಗವ ಪುಟ್ಟಿಸುವ ಮಹಾಧೀರ ಸತ್ವಶರೀರ। ಮಗುಳೆ ಅನಿರುದ್ಧ ಕುಮಾರಾ। ಝಗಝಗಿಸುವ ಮುಕುಟಧರಾ ಜೀವರಾಧಾರ। ನಿಗಮಾಭಮಾನಿ ಚತುರಾ। ಮೊಗನೆ ಪ್ರಬಲ ಅಹಿಗರುಡಾ ದ್ಯರಿಗೆಲ್ಲ। ಮಿಗಿಲಾಗಿಪ್ಪ ಅಗಣಿತ ಮಹಿಮನೆ। ಹಗಲಿರುಳು ಮನಸಿಗೆ ಸುಖವಾಗುವ। ಬಗೆ ಕರುಣಿಸುವುದು ಹಗೆಗಳ ಬಿಡಿಸಿ॥2॥ ವಾರಿಜಾಸನ ಲೋಕೇಶಾ, ಭಕುತಿ ವಿಲಾಸಾ। ಚಾರುಸತ್ಯ ಲೋಕಾಧೀಶಾ। ಸಾರಹೃದಯ ವಿಶೇಷಾ, ಮಹಿಮ ನಿರ್ದೋಷಾ। ದೂರ ನಿರ್ಮಲ ಪ್ರಕಾಶಾ। ಧಾರುಣಿಯೊಲಗವತಾರ ಮಾಡಿದ ದೇವ। ಸಾರಿದೆ ನಿನ್ನಂಘ್ರಿ ವಾರಿಜದಳವನು। ಸಾರಿ ಸಾರಿ ನಮ್ಮ ವಿಜಯವಿಠ್ಠಲನಂಘ್ರಿ। ಆರಾಧನೆಗೆ ವಿಸ್ತಾರದ ಜ್ಞಾನವಕೊಡು॥3॥

ಬೊಮ್ಮನೆ ಎನ್ನಯ ದುಮ್ಮನ ಬಿಡಿಸಿ

ಬೊಮ್ಮನೆ ಎನ್ನಯ ದುಮ್ಮನ ಬಿಡಿಸಿ। ಸುಮ್ಮನ ನೀಡು ಇಮ್ಮನ ಮಾಡದೆ। ಒಮ್ಮನವಿತ್ತು ಘಮ್ಮನೆ ಬಾ ರುಜೋ। ತ್ತುಮ್ಮನೆ ಎನ್ನಯ ಹುಮ್ಮನು ಕಳಿ ನ ಮ್ಮಮ್ಮನುದರದಿ ಮತ್ತೊಮ್ಮೆ ಜನಿಸಿದಂತೆ। ರಮ್ಯನ ಮಾಳ್ಪುದಧಮ್ಮನು ನಾನೋ। ಶಮ್ಮದಮ್ಮ ಗುಣ ಇಮ್ಮಡಿಮಾಡ್ಯನು। ಪಮ್ಮ ಚರಿತ ಪರಬೊಮ್ಮನ ತೋರಿಸು। ನಿಮ್ಮವನಲ್ಲವೆ ಸುಮ್ಮನಸರೊಡೆಯ। ಗುರುಜಗನ್ನಾಥವಿಠ್ಠಲ ಸಮ್ಮೊಗನಾಗಿರುವಂತೆ ಮಾಡೋ॥

ಬ್ರಹ್ಮ ಕಡಿಗಿನ (ಶೃಂಗಾರ ಕೀರ್ತನಾಲು) ರಾಗ: ಮುಖಾರಿ-ಆದಿತಾಳ

ಬ್ರಹ್ಮ ಕಡಿಗಿನ ಪಾದಮು ಬ್ರಹ್ಮಮು ದಾನೇ ನೀ ಪಾದಮು॥ ಚೆಲಗಿ ವಸುಧ ಗೊಲಚಿನನೀ ಪಾದಮು ಬಲಿ ತಲಮೋಪಿನ ಪಾದಮು ತಲಗಕ ಗಗನಮು ದನ್ನಿನ ಪಾದಮು ಬಲರಿಪು ಗಾಚಿನ ಪಾದಮು॥ ಕಾಮಿನಿ ಪಾಪಮು ಗಡಿಗಿನ ಪಾದಮು -ಪಾಮುತಲ ನಿಡಿನ ಪಾದಮು ಪ್ರೇಮಪು ಶ್ರೀಸತಿ ಪಿಸಿಕೇಟಿ ಪಾದಮು ಪಾಮಿಡಿ ತುರಗಪು ಪಾದಮು॥ ಪರಮ ಯೋಗುಲಕು ಪರಿಪರಿ ವಿಧಮುಲ ವರಮೊಸಗೆಡಿ ನೀ ಪಾದಮು ತಿರುವೆಂಕಟಗಿರಿ ತಿರುಮನಿ ಚೂಪಿನ ಪರಮ ಪದಮು ನೀ ಪಾದಮು॥

ಚಾಲದಾ ಬ್ರಹ್ಮಮಿಡಿ ಸಂಕೀರ್ತನಂ

ಚಾಲದಾ ಬ್ರಹ್ಮಮಿಡಿ ಸಂಕೀರ್ತನಂ ಮೀಕು। ಜಾಲೆಲ್ಲ ನಡಗಿಂಚು ಸಂಕೀರ್ತನಂ॥ಪ॥ ಸಂತೋಷಕರ ಮೈನ ಸಂಕೀರ್ತನಂ। ಸಂತಾಪ ಮಣಗಿಂಚು ಸಂಕೀರ್ತನಂ।ಜಂತುವುಲ ರಕ್ಷಿಂಚು ಸಂಕೀರ್ತನಂ। ಸಂತತಮು ದಲಚುಂಡೀ ಸಂಕೀರ್ತನಂ॥1॥ ಸಾಮಜಮು ಗಾಚಿನದಿ ಸಂಕೀರ್ತನಂ। ಸಮಮುನ ಕೆಕ್ಕುಡೀ ಸಂಕೀರ್ತನಂ। ಸಾಮೀಪ್ಯ ಮಿಂದರಿಕಿ ಸಂಕೀರ್ತನಂ। ಸಾಮಾನ್ಯಮಾಂ ವಿಷ್ಣು ಸಂಕೀರ್ತನಂ॥2॥ ಜಮುಬಾರಿ ವಿಡಿಪಿಂಚು ಸಂಕೀರ್ತನಂ। ಸಮಬುದ್ಧಿ ಪೊಡಮಿಂಚು ಸಂಕೀರ್ತನಂ। ಜಮಿಳಿ ಸೌಖ್ಯಮು ಲಿಚ್ಚು ಸಂಕೀರ್ತನಂ॥ ಶಮದಮಾಮಾದುಲಜೇಯು ಸಂಕೀರ್ತನಂ॥3॥

❖ ❖ ❖

ಬಾರೇ ವೆಂಕಟರಮಣೀ ಶ್ರೀದೇವಿ ರಾಗ: ಪೂರ್ವಿಕಲ್ಯಾಣಿ-ಛಾಪುತಾಳ

ಬಾರೇ ವೆಂಕಟರಮಣೀ। ಶ್ರೀದೇವಿ ಬಾರೆ ವೆಂಕಟರಮಣೀ॥ಪ॥ ಬಾರೆ ವೆಂಕಟರಮಣಿ ಪಾರಾಯಣ ಕೇಳೀ ಚಾರು ವದನೆ ಉಪಹಾರ ಕಾಲಕೆ ನಿತ್ಯ॥ಅ.ಪ॥ ಏನು ಪುಣ್ಯವೆ ಎನ್ನದು ಪಾರಾಯಣ ನೀನೆ ಕೇಳುವೆ ಬಂದು। ಹೀನ ಮಾನವನರಿಯ ನೀನು ಬರುವಿ ಎಂದೂ ಜ್ಞಾನವಿಲ್ಲವೊ ಉಚ್ಚ ಸ್ಥಾನದೊಳಗೆ ಬಾ॥1॥ ಸ್ವಪ್ನದೊಳಗೆ ಬರುವಿ ಶ್ರೀ ಶ್ರೀದೇವಿ। ಕ್ಷಿಪ್ರ ತನದಿ ಪೋಗುವಿ। ಸರ್ಪಶಯನ ನಮ್ಮಪ್ಪ ಗೋಕುಲ। ಬಾಲನಪ್ಪಿಕೊಂಬುವ ಸುಖವೊಪ್ಪಿಸು ಬೇಗನೆ॥2॥ ಮಂಗಳಾಂಗಿಯೆ ನಿನ್ನ ಕಾಣದೆ। ಬಹು ಭಂಗ ಪಡುವೆನಮ್ಮ। ಗಂಗಜನಕ ಸಿರಿ ರಂಗನಂಕದಿ ಕೂತು। ಭೃಂಗ

ಕುಂತಳೆ ಹೃದಯಾಂಗಣದೊಲಾಡೆ॥3॥ ಎಲ್ಲ ದೇವತೆಗಳನೇ ಪಡೆದೆಯೆ। ಫುಲ್ಲ ವಾರಿಜನಯನೇ। ಗೊಲ್ಲ ಬಾಲನ ಪಾದ ಪಲ್ಲವನೋಡದೆ। ನಿಲ್ಲಲ್ಲೊಲ್ಲದು ಮನ ಸೊಲ್ಲ ಲಾಲಿಸೆ ಲಕ್ಷ್ಮೀ॥4॥ ಇಂದಿರೇಶನ ರಾಣಿ ಎನ್ನಯ। ಮನಮಂದಿರದೊಳು ಬಾ ನೀ। ನಂದಗೋಕುಲ ಬಾಲನಿಂದು ಕರದೊಳೆತ್ತಿ। ತಂದು ತೋರಿಸೆ ಅರವಿಂದನಯನೆಲಕ್ಷ್ಮೀ॥5॥

ಬಂದಾಳು ಮಹಾಲಕುಮಿ — ರಾಗ: ಮೋಹನ

ಬಂದಾಳು ಮಹಾಲಕುಮಿ। ನಮ್ಮ ಮನೆಗೆ ಸಂಜೆಯ ಹೊತ್ತಿನಲ್ಲಿ। ಬಂದಳು ನಮ್ಮ ಮನೆಗೆ ನಿಂತಾಳು ಗೃಹದಲ್ಲಿ।ನಂದಕಂದನ ರಾಣಿ ವೃಂದಾವನದಿಂದ॥ಪ॥ ಹೆಜ್ಜೆಯ ಮೆಲೊಂದ್ಹೆಜ್ಜೆಯ ನಿಕ್ಕುತ। ಕಾಲುಗೆಜ್ಜೆ ಘಲ್ ಎಂದು ನಾದ ತೋರುತ। ಸಜ್ಜನ ಭಕ್ತರಿಗೆ ಸಾಯುಜ್ಯ ಕೊಡುವಂಥ। ಮೂರ್ಜಗದೊಡೆಯನ ಮುದ್ದು ಮೋಹದರಾಣಿ॥1॥ ಶ್ರಾವಣ ಮಾಸ ಸಂಪತ್ತು ಶುಕ್ರವಾರದ। ಪೂರ್ಣಿಮೆದಿವಸದಲ್ಲಿ। ಭೂಸರರೆಲ್ಲರೂ ಸಾಸಿರನಾಮಪಾಡಿ। ವಾಸವಾಗಿರಲಿಕ್ಕೆ ವಾಸುದೇವನ ರಾಣಿ॥2॥ ಕನಕವಾಯಿತು ಮಂದಿರ ದೇವಿಯು ಬರಲು। ಜಯಜಯ ಜಯವೆನ್ನಲು। ಸನಕಾದಿ ಯೋಗಿಗಳ ಸೇವೆಮಾಡುವಳಾಗಿ। ಕನಕವಲ್ಲಭೆ ತನ್ನ ಕಾಂತನ ಕರೆದುಕೊಂಡು॥3॥ ಉಟ್ಟ ಪೀತಾಂಬರ ಹೊಳೆಯುತ। ಕರದಲ್ಲಿ ಘಟ್ಟಿಕಂಕಣ ಹಿಡಿಯುತ್ತ। ಸೃಷ್ಟಿಗೊಡೆಯ ನಮ್ಮ ಪುರಂದರವಿಠ್ಠಲನ। ಪಟ್ಟದರಸಿ ನಮಗಿಷ್ಟಾರ್ಥಕೊಡಲಿಕ್ಕೆ॥4॥

ನಿಲ್ಲೆ ನಿಲ್ಲೆ ಕೊಲ್ಹಾಪುರದೇವಿ — ರಾಗ: ಮೋಹನ-ಆದಿತಾಳ

ನಿಲ್ಲೆ ನಿಲ್ಲೆ ಕೊಲ್ಹಾಪುರದೇವಿ ಇಲ್ಲೆ ಬಾರೆ ಗೆಜ್ಜೆ ಘಿಲ್ ಘಿಲ್ ಎನುತಾ॥ಪ॥ ಕರುಣಸಾಗರೆ ಹರಿ ತರುಣಿಯೆ ನೀ ಕೋಟಿ ಅರುಣ ಕಿರಣ ರತ್ನಾಭರಣವಿಟ್ಟು। ಮಣಿಕೌಸ್ತುಭ ವಕ್ಷಸ್ಥಳದ ಲೊಪ್ಪುವ ಸುಪರ್ಣವಾಹನೆ ಲಕ್ಷ್ಮಿ ಶರಣು ವಂದಿತಳೆ॥1॥ ಪಂಕಜಾಕ್ಷಿ ಪಂಕಜೋದ್ಭವನ ಜನನಿ ಪಂಕಜಮುಖಿ ಪಾಲಿಸೆ। ಎನ್ನ ಪಂಕಜನಾಭನ ಅಂಕದೊಳೊಪ್ಪುವ ಪಂಕಜೆ ನಿನ್ನ ಪದಪಂಕಜಕೆರಗುವೆ॥2॥ ಮುಗುಳು ನಗೆಯ ಮುತ್ತುಗಳ ಜಡಿತ ಕರ್ಣಗಳೆ ವಾಲೆಯು ಕದಪಿನೊಳ್। ಹೊಳೆಯೇ ಬಗೆ ಬಗೆ ಸರಬಂಗಾರವನಿಟ್ಟು ಮೂರ್ಜಗವ ಮೋಹಿಸುವ ಜಗದಾಧಿಪತಿಯ ರಾಣಿ॥3॥ ಸಾಗರದೊಳಗುಟ್ಟ್ಯಾಗ ಶ್ರೀ ರಂಗನ ಬೇಗ ನೋಡಿ। ಪರಮೋತ್ಸವದಿ। ನಾಗಶಯನ ನಾಗಾರಿವಾಹನನರ್ಧಾಂಗಿ ಎನಿಸಿದ ಅನಂತ ಮಹಿಮಳೆ॥4॥ ಶೇಷಗಿರಿಯ ಶ್ರೀನಿವಾಸನ ಎದೆಯಲಿ ವಾಸವಾಗಿರಲತಿ ಪ್ರೇಮದಲಿ। ಈಶ ನಾರದ ಬ್ರಹ್ಮಾಸುರರೊಡೆಯ ಭೀಮೇಶಕೃಷ್ಣನ ನಿಜದಾಸರಿಗ್ವರ ನೀಡೆ॥5॥

ಹೊಸ ಕಣ್ಣು ಎನಗೆ ಹಚ್ಚಲಿಬೇಕು

ಹೊಸ ಕಣ್ಣು ಎನಗೆ ಹಚ್ಚಲಿಬೇಕು ಜಗದಂಬಾ। ವಸುದೇವ ಸುತನ ಕಾಂಬುದಕೆ॥ಪ॥ ಘಸಣೆಯಾಗಿದೆ ಭವ ವಿಷಯ ವಾರಿಧಿಯೊಳು। ಶಶಿಮುಖಿ ಕರುಣದಿ ಕಾಯೇ॥ಅ.ಪ.॥ ಪರರ ಅನ್ನವನುಂಡು ಪರರ ಧನವ ಕಂಡು। ಪರಿಪರಿ ಕ್ಲೇಶಗಳಿಂದ। ವರಮಹಾಲಕುಮಿ ನಿನ್ನ ಚರಣವ ಮೊರೆಹೊಕ್ಕೆ। ಕರುಣದಿ ಕಣ್ಣೆತ್ತಿ ನೋಡೇ॥1॥ ಮಂದಹಾಸಿನಿ ಭವ। ಸಿಂಧುವಿನೊಳಗಿಟ್ಟು। ಛಂದವೇ ಅಮ್ಮ ನೋಡುವದು। ಕಂದನೆಂತೆಂದೆನ್ನ ಕುಂದುಗಳೆಣಿಸದೆ। ಮಂದರೋದ್ಧರನ ತೋರಮ್ಮ॥2॥ ಅಂದಚೆಂದಗಳೊಲ್ಲೆ ಬಂಧುಬಳಗವನೊಲ್ಲೆ। ಬಂಧನಕ್ಕೆಲ್ಲ ಕಾರಣವೋ। ಇಂದಿರೇಶನ ಪಾದ ದ್ವಂದ್ವವ ತೋರಿ। ಹೃನ್ಮಂದಿರದೊಳು ಬಂದು ನಿಲ್ಲೆ॥3॥

ಮರುಳು ಮಾಡಿಕೊಂಡೆಯಲ್ಲೆ — ರಾಗ: ಶ್ರೀರಾಗ-ಆದಿತಾಳ

ಮರುಳು ಮಾಡಿಕೊಂಡೆಯಲ್ಲೆ ಮಾಯಾದೇವಿಯೆ॥ಪ॥ ಇರುಳು ಹಗಲು ಏಕವಾಗಿ ಹರಿಯು ನಿನ್ನ ಬಿಡದಿಪ್ಪಂತೆ॥ಅ.ಪ॥ ಜ್ಞಾನಿಗಳು ನಿತ್ಯ ಅನ್ನ ಪಾನಾದಿಗಳನ್ನು ಬಿಟ್ಟು। ನಾನಾವಿಧ ತಪವಿದ್ದರು ಧ್ಯಾನಕ್ಕೆ

ಸಿಲುಕದವನ॥1॥ ಸರ್ವ ಸಂಗವನು ಬಿಟ್ಟು ಸನ್ಯಾಸಿಯಾದ ಕಾಲಕ್ಕು। ಸರ್ವದಾ ತನ್ನೆದೆಯ ಮೇಲೆ ಬಿಡದೆ ನಿನ್ನ ಧರಿಸಿಪ್ಪಂತೆ॥2॥ ಪ್ರಳಯಕಾಲದಲ್ಲಿ ಆಲದೆಲೆಯ ಮೇಲೆ ಮಲಗಿದ್ದಾಗ। ಹಲವು ಆಭರಣಗಳು ಜಲವು ಆಗಿ ಜಾಣತನದಿ॥3॥ ರಂಗನು ಭೂಲೋಕದಿ ಭುಜಂಗಗಿರಿಯೊಳಲಮೇಲು ಮಂಗಪತಿಯಾಗಿ। ನಿನ್ನ ಅಂಗೀಕರಿಸುವಂತೆ ಮರುಳು ಮಾಡಿಕೊಂಡೆಯಲ್ಲೆ॥4॥ ಮಕ್ಕಳ ಪಡೆದರೆ ನಿನ್ನ ಚೊಕ್ಕತನವು ಪೋಪುದೆಂದು। ಪೊಕ್ಕುಳೊಳು ಮಕ್ಕಳ ಪಡೆದು ಕಕ್ಕುಲಾತಿಪಡುವಂತೆ॥5॥ ಎಡಕೆ ಭೂಮಿ ಬಲಕೆ ಶ್ರೀಯು ಎದುರಿನಲ್ಲಿ ದುರ್ಗಾದೇವಿ। ತೊಡೆಯಮೇಲೆ ಲಕುಮಿಯಾಗಿ ಬಿಡದೆ ಮುದ್ದಾಡಿಸುವಂತೆ॥6॥ ಎಂದೆಂದಿಗೂ ಮರೆಯೆ ನಿನ್ನಾನಂದದಿ ಜನರಿಗೆಲ್ಲ। ತಂದು ತೋರೆ ಸ್ವಾಧೀನ ಪುರಂದರ ವಿಠಲರಾಯನ॥7॥

❖ ❖ ❖

ವೇದ ಪೀಠ ವಿರಿಂಚಿ ಭವ

ವೇದ ಪೀಠ ವಿರಿಂಚಿ ಭವ ಶಕ್ರಾದಿ ಸುರವಿಜ್ಞಾನದಾಯಕ। ಮೋದ ಚಿನ್ಮಯ ಗಾತ್ರ ಲೋಕ ಪವಿತ್ರ ಸುಚರಿತ್ರ॥ ಭೇದ ಭೇದ ವಿಷಾದ ಕುಟಿಲಾಂತಾದಿ ಮಧ್ಯ। ವಿದೂರ ಆದಾನಾದಿ ಕಾರಣ ಬಾದರಾಯಣ ಪಾಹಿಸತ್ರಾಣ॥

ವೇದವ್ಯಾಸರ ದಿವ್ಯಪಾದ ಪದುಮಯುಗಳ

ವೇದವ್ಯಾಸರ ದಿವ್ಯಪಾದ ಪದುಮಯುಗಳ। ಆರಾಧಿಸುತಿರು ಮನುಜಾ॥ಪ॥ ವೇದಗಳಿಗೆ ಸಮ್ಮತವಾದ ಪುರಾಣಗಳ। ಸಾದರದಲಿ ರಚಿಸಿ ಮೋದವಬೀರಿದ॥ಅ.ಪ.॥ ಧರೆಯೊಳಗೆ ಸುಜನರಿಗೆ ವರಧರ್ಮತಿಳಿಸೆಂದು ಸುರುಮುನಿ ಪ್ರಾರ್ಥನದಿ। ಪರಮಮಂಗಲ ವೀರವರ ಭಾಗವತಗ್ರಂಥ। ವಿರಚಿಸಿ ಶುಕಮುನಿಗೆ ಕರುಣದಿಂದರುಹಿದ॥1॥ ವಾಸಿಪ ಮುನಿಗಣ ಭೂಷಿತ ಬದರಿಯೊಳ್। ತೋಷತೀರ್ಥರ ಕರೆದು। ಭೂಸುರಜನರಿಗೆ ಮೋಕ್ಷದಾಯಕ ಸೂತ್ರ। ಭಾಷ್ಯರಚಿಸೆಂದಾದೇಶವನೀಡಿದ॥2॥ ಅರಿದರಾಜ್ಯಯುಧಧರಿಸಿ ಷೋಡಶ ಸಂಖ್ಯ। ಕರಗಳಿಂದಲಿ ಶೋಭಿತ ಶರಣುಜನಕೆ ಸುರತರುವೆನಿಸಿ ಧರೆಯೊಳು। ಮೆರೆವ ಕಾರ್ಪರ ನರಹರಿ ರೂಪಾತ್ಮಕನಾದ॥3॥

❖ ❖ ❖

ಎಂದಿಗಾಹುದೋ ನಿನ್ನ ದರುಶನ

ಎಂದಿಗಾಹುದೋ ನಿನ್ನ ದರುಶನ। ಇಂದಿರೇಶ ಮುಕುಂದ ಕೇಶವ॥ಪ॥ ಗಾನಲೋಲನೆ ದೀನವತ್ಸಲ। ಮಾನದಿಂದಲಿ ನೀನೇ ಪಾಲಿಸೋ॥1॥ ಯಾರಿಗೆ ಮೊರೆ ಇಡುವೆ ಶ್ರೀ ಹರಿ। ಸಾರಿ ಬಂದು ನೀ ಈಗಲೆ ಪೊರಿ॥2॥ ಗಜವ ಪಾಲಿಸೊ ಗರುವದಿಂದಲಿ। ಭುಜಗಶಯನ ಶ್ರೀ ವಿಜಯವಿಠ್ಠಲಾ॥3॥

ಎಷ್ಟು ನಾ ಪ್ರಾರ್ಥಿಸಲಿ

ಎಷ್ಟು ನಾ ಪ್ರಾರ್ಥಿಸಲಿ ಶಿಷ್ಟಜನ ಪರಿಪಾಲ। ದೃಷ್ಟಿಗೆ ದೃಷ್ಟವಾಗೋ ಮುಟ್ಟಿ ಭಜಿಸುವಂತೆ। ಕೊಟ್ಟು ಭಕುತಿಯನಿತ್ತು ಶಿಷ್ಟಜನಸಂಗವಿತ್ತು। ಸೃಷ್ಟಾದಿ ಅಷ್ಟಕರ್ತ ಮಹಿಮನ ಸ್ವರೂಪವನೆ ತೋರೋ। ಶ್ರೇಷ್ಠ ಗುರುತಂದೆ ಗೋಪಾಲವಿಠಲ। ನಿನ್ನ ಪಟ್ಟಣದೊಳಿಟ್ಟು ಸಲಹೋ॥

ಎಂದಿಗೆ ನಿನ್ನ ಪದ ಕಾಂಬೆ ರಂಗ

ಎಂದಿಗೆ ನಿನ್ನ ಪದ ಕಾಂಬೆ ರಂಗ॥ಪ॥ ಎಂದಿಗೆ ನಿನ್ನ ಪಾದ ಕಾಂಬೆ ಭಕುತಿಯಿಂದ। ಅಂದಿಗೆ ಭವಪಾಶ ತುಂಡೆ ರಂಗ॥ಅ.ಪ.॥ ಇಂದಿರಾ ದೇವಿ ನಿನ್ನ ಪೊಂದಿದ್ದ ಕಾರಣ। ದ್ವಂದ್ವೌಘವನು ಕಾಣಲಿಲ್ಲವೋ ರಂಗ॥1॥ ಬೊಮ್ಮನು ನಿನ್ನ ಮಗ ನಮ್ಮಿಸಿ ತುತಿಸುವ। ಮೊಮ್ಮಗ ಕುಣಿಕುಣಿದಾಡುವ ರಂಗ॥2॥ ನಿನ್ನನೆ ವಾಸುದೇವ ವಿಠ್ಠಲ ಎನ್ನ। ಮನದಿ

ಭಜಿಸೋದು ಬಲ್ಲೆಲ್ಲೋ ರಂಗ॥2॥

❖ ❖ ❖

ಲಕ್ಷ್ಮೀಕಾಂತನೆ ಬಾರೋ ರಾಗ: ಆನಂದಭೈರವಿ-ಆದಿತಾಳ

ಲಕ್ಷ್ಮೀಕಾಂತನೆ ಬಾರೋ ಶುಭ ಲಕ್ಷಣವಂತ ಬಾರೋ। ಪಕ್ಷಿವಾಹನ ಬಾರೋ ಪಾವನ ಮೂರ್ತಿ ಬಾರೋ॥ಪ॥ ಆದಿ ಮೂಲ ವಿಗ್ರಹ ವಿನೋದಿ ನೀನೆ ಬೇಗ ಬಾರೋ। ಸಾಧು ಸಜ್ಜನ ನಿತ್ಯಯೋಗಿ ದಾನಿ ನೀನೆ ಬೇಗ ಬಾರೋ॥1॥ ಗಾಡಿಕಾರ ಕೃಷ್ಣ ನಿನ್ನ ಬೇಡಿಕೊಂಬೆ ಬೇಗ ಬಾರೋ। ರೂಢಿ ಮಾತನಾಡಿ ಸರ್ವರೂಢಿಗೊಡೆಯ ಬೇಗ ಬಾರೋ॥2॥ ನಿನ್ನ ಪಾದಂಗಳ ನಾನು ಬಣ್ಣಿಸಿ ಕರೆವೆ ಬೇಗ ಬಾರೋ। ಪನ್ನಗಶಯನ ಸಿರಿ ಪುರಂದರವಿಠಲ ಬೇಗ ಬಾರೋ॥3॥

ಬಾರೋ ಮನೆಗೆ ಗೋವಿಂದಾ

ಬಾರೋ ಮನೆಗೆ ಗೋವಿಂದಾ। ನಿನ್ನಂಘ್ರಿ ಕಮಲವ। ತೋರೋ ಎನಗೆ ಮುಕುಂದಾ। ನಲಿದಾಡು ಮನದಲಿ। ಮಾರಪಿತ ಆನಂದ। ಆನಂದ ಕಂದಾ॥ಪ॥ ಚಾರುತರ ಶರೀರ ಕರುಣಾ ವಾರಿನಿಧಿ ಭವ ಘೋರ ನಾಶನ। ವಾರಿಜಾಸನವಂದ್ಯ ನೀರಜ ಸಾರ ಸದ್ಗುಣ ಹೇ ರಮಾಪತೇ॥ಅ.ಪ.॥ ನೋಡೋ ದಯದಿಂದೆನ್ನ ಕರಪದುಮ ಶಿರದಲಿ ನೀಡು ಭಕ್ತ ಪ್ರಸನ್ನ। ನಲಿದಾಡು ಮನದಲಿ ಬೇಡಿಕೊಂಬೆನೊ ನಿನ್ನ ಆನಂದ ಘನ್ನ। ಮಾಡದಿರು ಅನುಮಾನವನು ಕೊಂಡಾಡುವೆನು ತವ ಮಹಿಮೆಗಳನು। ಜೋಡಿಸುವೆಕರಗಳನು ಚರಣಕೆ। ಕೂಡಿಸೋತವ ದಾಸಜನರೊಳು॥1॥ ಹೇಸಿ ವಿಷಯಗಳಲ್ಲಿ ತೊಳಲಾಡಿ ನಾ ಬಲು। ಕ್ಲೇಶಪಡುವುದು ಬಲ್ಲಿ। ಘನ ಯುವತಿಯರ ಸುಖ ಲೇಸು ಎಂಬುದು ಕೊಲ್ಲಿ, ಆಸೆ ಬಿಡಿಸಿಲ್ಲಿ। ಏಸು ಜನುದ ದೋಷದಿಂದಲಿ ಈಸುಮೆ ಇದರೊಳಗೆ ಇಂದಿಗೆ। ಮೋಸವಾಯಿತು ಆದುದಾಗಲಿ। ಶ್ರೀಶ ನೀ ಕೈಪಿಡಿದು ರಕ್ಷಿಸು॥2॥ ನೀನೇ ಗತಿ ಎನಗಿಂದು। ಉದ್ಧರಿಸೋ ದೇವನೇ ದೀನಜನರಿಗೆ ಬಂಧು। ನಾನ ನಿನ್ನ ಸೇವಕ ಶ್ರೀನಿವಾಸ ಎಂದೆಂದೂ ಕಾರುಣ್ಯ ಸಿಂಧು॥ ಪ್ರಾಣಪತಿ ಹೃದಯಾಬ್ಜ ಮಂಟಪ। ಸ್ಥಾನದೊಳಗಭಿವ್ಯಾಪ್ತ ಚಿನ್ಮಯ ಧ್ಯಾನ ಗೋಚರನಾಗು ಕಣ್ಣಲಿ। ಕಾಣುವನು ಶ್ರೀರಂಗವಿಠ್ಠಲ॥3॥

ಬೇಗ ಬಾರೋ ಬೇಗ ಬಾರೋ ನೀಲಮೇಘವರ್ಣ

ಬೇಗ ಬಾರೋ ಬೇಗ ಬಾರೋ ನೀಲಮೇಘವರ್ಣ। ಬೇಗಬಾರೋ ಬೇಗ ಬಾರೋ ಬೇಲಾಪುರದ ಚೆನ್ನ॥ಪ॥ ಇಂದಿರೆರಮಣ ಗೋವಿಂದಾ ಬೇಗಬಾರೋ। ನಂದನಕಂದ ಮುಕುಂದಾ ಬೇಗಬಾರೋ॥1॥ ರಂಗ ಉತ್ತುಂಗ ನರಸಿಂಗ ಬೇಗಬಾರೋ। ಗಂಗೆಯಪಡೆದ ಪಾಂಡುರಂಗ ಬೇಗಬಾರೋ॥2॥ ಶುದ್ಧ ಅಘರುದ್ಧಅನಿರುದ್ಧ ಬೇಗಬಾರೋ। ಹದ್ದನೇರಿದ ಪ್ರಸಿದ್ಧ ಬೇಗ ಬಾರೋ॥3॥ ಧೀರ ಉದಾರಾ ಗಂಭೀರಾ ಬೇಗಬಾರೋ। ಹಾರಾಲಂಕೃತ ರಘುವೀರ ಬೇಗಬಾರೋ॥4॥ ಅಯ್ಯಾ ಸಹಯ್ಯಾ ವಿಜಯ್ಯಾ ಬೇಗ ಬಾರೋ। ಉರಗಾದ್ರಿವಾಸ ಹಯವದನ ಬೇಗ ಬಾರೋ॥5॥

ಊರಿಗೆ ಬಂದರೆ ದಾಸಯ್ಯ ರಾಗ: ಸಿಂಧೂಭೈರವಿ-ಅಟ್ಟತಾಳ

ಊರಿಗೆ ಬಂದರೆ ದಾಸಯ್ಯ, ನಮ್ಮ ಕೇರಿಗೆ ಬಾ ಕಂಡ್ಯ ದಾಸಯ್ಯ॥ಪ॥ ಕೇರಿಗೆ ಬಂದರೆ ದಾಸಯ್ಯ। ಗೊಲ್ಲ ಕೇರಿಗೆ ಬಾ ಕಂಡ್ಯ ದಾಸಯ್ಯ॥ಅ॥ ಕೊರಳೊಳು ವನಮಾಲೆ ಧರಿಸಿದವನೆ, ಕಿರು ಬೆರಳಲಿ ಬೆಟ್ಟವನೆತ್ತಿದನೆ। ಇರುಳು ಹಗಲು ನಿನ್ನ ಕಾಣದೆ ಇರಲಾರೆ ಮರುಳು ಮಾಡಿದಂಥ ದಾಸಯ್ಯ॥1॥ ಕಪ್ಪು ವರ್ಣದ ದಾಸಯ್ಯ, ಕಂದರ್ಪನ ಪಿತನೆಂಬೊ ದಾಸಯ್ಯ। ಅಪ್ಪಿಕೊಂಡು ನಮ್ಮ ಮನಸಿಗೆ ಬಂದರೆ ಅಪ್ಪವ ಕೊಡುವೆನು ದಾಸಯ್ಯ॥2॥ ಮುಂದೇನು ದಾರಿ ದಾಸಯ್ಯ, ಚೆಲ್ವ ಪೊಂಗೊಳಲೂದುವ ದಾಸಯ್ಯ। ಹಾಂಗೇ ಪೋಗದಿರು ದಾಸಯ್ಯ ಹೊನ್ನುಂಗುರ ಕೊಡುವೆನು ದಾಸಯ್ಯ॥3॥

ಸಣ್ಣ ನಾಮದ ದಾಸಯ್ಯ, ನಮ್ಮ ಸದನಕೆ ಬಾ ಕಂಡ್ಯ ದಾಸಯ್ಯ। ಸದನಕೆ ಬಂದರೆ ದಾಸಯ್ಯ, ಮಣಿ ಸರವನು ಕೊಡುವೆನು ದಾಸಯ್ಯ।।4।। ಸಿಟ್ಟು ಮಾಡದಿರು ದಾಸಯ್ಯ, ಸಿರಿ ಪುರಂದರವಿಠ್ಠಲ ದಾಸಯ್ಯ। ರಟ್ಟು ಮಾಡದಿರು ದಾಸಯ್ಯ ತಂಬಿಟ್ಟು ಕೊಡುವೆನು ದಾಸಯ್ಯ।।5।।

❖ ❖ ❖

ರಾಜಬೀದಿಯೊಳಗಿಂದ ಕಸ್ತೂರಿರಂಗ **ರಾಗ: ಮೋಹನ**

ರಾಜಬೀದಿಯೊಳಗಿಂದ ಕಸ್ತೂರಿರಂಗ। ತೇಜ ನೇರಿ ಮೆರೆದು ಬಂದ।।ಪ।। ಸುತ್ತುಮುತ್ತಲು ಸಾವಿರಾರು ಸಾಲುದೀವಿಗೆ। ಹತ್ತು ದಿಕ್ಕಲಿ ಬೆಳಗುತಿಹ ಹಗಲು। ಬತ್ತಿಯು ವಿಸ್ತಾರದಿ ಭೂಸುರರು ಸುತ್ತಗಟ್ಟಿ। ನಿಂತಿರಲು ಮತ್ತೆ ನಮ್ಮೊಳೆಂತು ತೇಜಿ ಮೆಲ್ಲನೆ ನಡೆಸುತ್ತ ಜಾಣ।।1।। ತಾಳ ಶಂಖಭೇರಿ ತಂಬೂರಿ ಮೊದಲಾದ। ಮೇಲು ಪಂಚಾಂಗಗಳಲ್ಲಿ ಹೊಗಳಿ ಹೊಗಳಲು। ಗಾಳಿ ಗೋಪುರದ ಮುಂದೆ ಧೂಳಿಯನ್ನು ಎಬ್ಬಿಸಿ। ಮೈ ಅರಳಿಸಿ ಕಾಲ ನಿಕ್ಕುತ ಜಾಣ ಧಾಳಿಯಿಡುತ್ತಿತ್ತಂತೆ।।2।। ವೇದಶಾಸ್ತ್ರ ಪುರಾಣಗಳ ವಂದಿಸಿ ಪೊಗಳಲು। ಮೋದದಿಂದ ಗಾಯಕರು ಮೌಲಿ ಪಾಡಲು।ಹಾದಿ ಬೀದಿಯಲ್ಲಿ ನಿಂತು ಭೂಸುರ ಜನರೆಲ್ಲಾ। ಆದರದಿಂದ ಅಷ್ಟ ಅಮೃತಾನ್ನವನಿಕ್ಕುತ ಜಾಣ।।3।। ರಂಭಾ ಮೊದಲಾದ ಸುತರ ರಮಣಿಯರು। ತುಂಬಿದಾರತಿಯ ಪಿಡಿದು ಕೂಡಿ ಪಾಡಲು। ಶಂಭು ಮುಖ ನಿರ್ಜರನೆ ಪರಾಕೆನುತಲಿ। ಅಂಭುದೀ ಭವಾದಿಗಳ ಶ್ರೀರಂಗನಾಥ ಆಳಿದ।।4।। ಹಚ್ಚನೆ ಹೆಸರು ಬೇಳೆ ಹಾಲು ಕೆನೆಗಳು। ಮುಚ್ಚಿತಂದ ಕೆನೆಮೊಸರು। ಮೀಸಲುಬೆಣ್ಣೆಯು। ಅಚ್ಚ ತುಪ್ಪದಿ ಪಕ್ವವಾದ ಅತಿರಸ ಹುಗ್ಗಿಯನ್ನು। ಮೆಚ್ಚಿ ಉಂಡು ಪಾನಕ ನೀರ್ ಮಜ್ಜಿಗೆಗಳ ಸವಿದುಬೇಗ।।5।। ಸಣ್ಣ ಮುತ್ತು ಕೆತ್ತಿಸಿದ ಸಕಲಾಂಗಳ। ಹೊನ್ನು ಹೊಸ ಜಾನುಜಂಘಗಳ। ಹೊಳೆವ ಸೊಬಗಿನ ಉನ್ನತ ಪರಾಯಣ। ಉತ್ತಮ ರಾಜಾಶ್ವವೇರಿ ಎನ್ನ ಹಯವದನ। ರಂಗ ಎಲ್ಲರಿಗಿಷ್ಟಾರ್ಥ ಕೊಡುತಾ।।6।।

ರಾಮಕೃಷ್ಣರು ಮನೆಗೆ ಬಂದರು **ರಾಗ: ಅಭೇರಿ-ಆದಿತಾಳ**

ರಾಮಕೃಷ್ಣರು ಮನೆಗೆ ಬಂದರು ಬಾಗಿಲು ತೆರೆಯಿರೆ।।ಪ।। ಕಾಮಧೇನು ಬಂದಂತಾಯಿತು ವರವ ಬೇಡಿರೆ।।ಅ.ಪ।। ಚೆಂಡು ಬುಗರಿ ಚೆಣ್ಣೆ ಕೋಲು ಗಜ್ಜುಗವಾಡುತ। ದುಂಡುಮಲ್ಲಿಗೆ ಮುಡಿದು ಕೊಳಲನೂದಿ ಪಾಡುತ। ಹಿಂಡು ಪೆಣ್ಗಳ ಮುದ್ದು ಮುಖದ ಸೊಬಗ ನೋಡುತ। ಭಂಡುಮಾಡಿ ಬಾಲೆಯರೊಡನೆ ಸರಸವಾಡುತ।।1।। ಮಕರ ಕುಂಡಲ ನೀಲ ಮುತ್ತಿನ ಬಾವುಲಿಡುತಲಿ। ಕಂಕಣಹಾರ ತೋಳಬಂದಿ ತೊಡಿಗೆ ತೊಡುತಲಿ। ಸುಕುಮಾರ ಸುಂದರವಾದ ಉಡಿಗೆಉಡುತಲಿ। ಮುಖದ ಕಮಲ ಮುಗುಳು ನಗೆಯ ಸುಖವ ಕೊಡುತಲಿ।।2।। ಪೊಕ್ಕುಳಲ್ಲಿ ಅಜನ ಪಡೆದ ದೇವ ದೇವನು। ಚಿಕ್ಕ ಅಂಗುಷ್ಟದಲ್ಲಿ ಗಂಗೆಯ ಪಡೆದನು। ಮಕ್ಕಳ ಮಾಣಿಕ್ಯನವ ಪುರಂದರವಿಠಲನು। ಅಕ್ಕರೆಯಿಂದಲಿ ಮುಕುತಿ ಕೊಡುವ ರಂಗನಾಥನು।।3।।

ಬಂದನೋ ಗೋವಿಂದ **ರಾಗ: ಶಿವರಂಜನಿ-ಆದಿತಾಳ**

ಬಂದನೋ ಗೋವಿಂದ ಚಂದದಿ ಆನಂದ। ಸುಂದರಿಯ ಮಂದಿರಕೆ ನಂದನ ಕಂದ।।ಪ।। ಸುಂದರಾಕಾರ ನಂದ ಕಂದ ಗಂಭೀರ। ಇಂದುವದನೆಯರ ಮುಖಗಳಂದ ನೋಡಿದ। ಗಂಧ ಕುಸುಮಾ ಕರದಿಂದ ಮುಡಿಸಿದ। ಬಂದನೋ ಗೋವಿಂದ ಅರವಿಂದ ನಯನ।।1।। ಕಾನನದಲ್ಲಿ ಬಲು ದೀನ ನಾನಲ್ಲಿ। ವೇಣುನಾದವೋ ತಾಕೂಡಿ ಮೋದವೋ। ಜಾಣನಿವನೋ ಸುಮ ಬಾಣ ಪಿತನೋ। ಮಾನಿನಿ ಮನಗಳೊಲಿಯುವ ಗಾನ ಮಾಡುತ್ತಾ।।2।। ಓಡಿ ಬಂದರೋ ಬಲು ಬೇಡಿಕೊಂಬರೋ। ಗಾರುಡಿಕಾರ ಅವನ ನೋಡಿ ಮೆರೆದರೋ। ಮಾಡಿದ ಜಾಲ ವಾಸುದೇವ ವಿಠಲ। ಮಾಡಿದ ಮನ ಮಾಡಿದ ತಾ ಕೂಡಿದನಾಗ।।3।।

ತಪ್ಪು ನೋಡದೆ ಬಂದೆಯಾ

ತಪ್ಪು ನೋಡದೆ ಬಂದೆಯಾ ಎನ್ನಯ ತಂದೆ। ಅಪ್ಪ ತಿರುವೇಕಟೇಶನೆ ನಿರ್ದೋಷನೆ॥ಪ॥ ಆಪಾದಮೌಳಿ ಎನ್ನೊಳು ಅಘ ಬಹಳ ಶ್ರೀಪತಿ ಕ್ಷಮಿಸಿ ಕಾಯಿದೆಯ ಉದಧಿಶಯ್ಯ॥1॥ ಜಗದಘಹರನೆಂಬುದು ನಿನ್ನ ಬಿರುದು। ತ್ರಿಗುಣಾತೀತನೆ ರಾಮನೆ ಗುಣಧಾಮನೆ॥2॥ ಎನ್ನೆನ್ನ ಕುಲುಷವಾರಿಸೊ ಭವತಾರಿಸೋ ಪ್ರಸನ್ನ ವೇಂಕಟರಮಣ ಭವಶಮನ॥3॥

❖ ❖ ❖

ಕಂಡೆನಾ ಗೋವಿಂದನ — ರಾಗ: ಹಂಸಾನಂದಿ-ಆದಿತಾಳ

ಕಂಡೆನಾ ಗೋವಿಂದನ। ಪುಂಡರೀಕಾಕ್ಷ ಪಾಂಡವ ಪಕ್ಷ ಕೃಷ್ಣನ॥ಪ॥ ಕೇಶವ ನಾರಾಯಣ ಶ್ರೀಕೃಷ್ಣನ। ವಾಸುದೇವ ಅಚ್ಯುತಾನಂತನ॥ ಸಾಸಿರನಾಮನ ಶ್ರೀಹೃಷಿಕೇಶನ। ಶೇಷಶಯನ ನಮ್ಮ ವಸುದೇವ ಸುತನ॥1॥ ಮಾಧವ ಮಧುಸೂಧನ ತ್ರಿವಿಕ್ರಮ। ಯಾದವ ಕುಲಜನ ಮುನಿವಂದ್ಯನ। ವೇದಾಂತವೇದ್ಯನ ಇಂದಿರಾರಮಣನ। ಆದಿ ಮೂರುತಿ ಪ್ರಹ್ಲಾದವರದನ॥2॥ ಪುರುಷೋತ್ತಮ ನರಹರಿ ಶ್ರೀ ಕೃಷ್ಣನ ಶರಣಾಗತ ವಜ್ರಪಂಜರನ॥ ಕರುಣಾಕರ ನಮ್ಮ ಪುರಂದರವಿಠಲನ ನೆರೆನಂಬಿದೆ ಬೇಲೂರ ಕೇಶವನ॥3॥

ಕಣ್ಣಾರೆ ಕಂಡೆನಚ್ಯುತನ — ರಾಗ: ಷಣ್ಮುಖಪ್ರಿಯ-ಅಟ್ಟತಾಳ

ಕಣ್ಣಾರೆ ಕಂಡೆನಚ್ಯುತನ। ಕಂಚಿ ಪುಣ್ಯಕೋಟಿ ಕರಿರಾಜ ವರದನ॥ಪ॥ ವರಮಣಿ ಮುಕುಟ ಮಸ್ತಕನ, ಸುರವರ ಸನಕಾದಿ ವಂದಿತ ಪಾದಯುಗನ। ತರುಣಿ ಲಕ್ಷ್ಮೀ ಮನೋಹರನ ಪೀತಾಂಬರದುಡಿಗೆಯಲಿ ರಂಜಿಸುವ ವಿಗ್ರಹನ॥1॥ ಕಸ್ತೂರಿ ತಿಲಕ ನೊಸಲನ ತೋರ ಮುತ್ತಿನಹಾರ ಪದಕ ಧರಿಸುವನ। ಎತ್ತಿದಾಭಯ ಹಸ್ತದವನ ತನ್ನ ಭಕ್ತರ ಸ್ತುತಿಗೆ ಹಾರೈಸಿ ಹಿಗ್ಗುವನ॥2॥ ನೀಲಮೇಘಶ್ಯಾಮನ ದೇವಲೋಲ ಮಕರಕುಂಡಲ ಧರಿಸುವನ। ಭೂಲೋಕದೊಳು ಚೆನ್ನಿಗನ ಶ್ರೀ ಕಮಲಾಲಯಪತಿ ವೈಕುಂಠವಲ್ಲಭನ॥3॥ ಭಾನುಕೋಟಿ ತೇಜದವನ ಭವಕಾನನಕೆ ದೀಪ್ತ ಹವ್ಯವಾಹನನ। ದಾನವರೆದೆದಲ್ಲಣನ, ಮುನಿಮಾನಸ ಹಂಸಯೆಂದೆನಿಸಿ ಮೆರೆವನ॥4॥ ತುಂಗ ಚತುರ್ಭುಜದವನ, ಶುದ್ಧ ಮಂಗಳರೇಖೆಯಂಗದಲಿ ಒಪ್ಪುವನ। ಶೃಂಗಾರ ಕಂಬು ಕಂಧರನ, ದೇವಗಂಗೆಯ ಪಿತ ಪುರಂದರವಿಠ್ಠಲನ॥5॥

❖ ❖ ❖

ಎಂದು ಕಾಂಬೆನೊ ನಿನ್ನ ಹೇ ಶ್ರೀನಿವಾಸ

ಎಂದು ಕಾಂಬೆನೊ ನಿನ್ನ ಹೇ ಶ್ರೀನಿವಾಸ ಎಂದು ಕಾಂಬೆನೊ ನಿನ್ನ॥ಪ॥ ಎಂದು ಕಾಂಬೆನೊ ನಿನ್ನ। ನಗೆ ಮೊಗದ ನತಜನ ಬಂಧು ನೀ ಬಾರೆನ್ನ। ಸದಾ ಸುಪ್ರಸನ್ನ। ಮುಂದೆ ಗತಿ ಎನ್ನಯ್ಯ, ಭಕುತರ ಹಿಂದುಳಿದುದಲ್ಲದಲೆ। ತನುಸಂಬಂಧಿಗಳ ವಶನಾಗಿ ದುರ್ವಿಷಯಾಂಧ ಕೂಪದಿ ಮುಳುಗಿದವ ನಾ॥ಅ.ಪ.॥ ಹಲವು ಜನ್ಮದ ನೋವಾ। ನಾನ್ಹೇಳಿಕೊಳಲೆನ್ನಳವೆ ದೇವರ ದೇವಾ। ಭೂವಲಯದೊಳು ನಂಬಿದ ಭಕುತರ ಕಾವಾ ಮಹಾನುಭಾವ॥ ಸುಲಭರಲಿ ಅತಿ ಸುಲಭನೆಂದು ಅಲವ ಬೋಧಾಮತಾನುಗರು। ಎನಗೊಲಿದು ಪೇಳಿದ್ದದಲೆ ಮನದಲಿ ತಿಳಿದು ಧೇನಿಸುವವನನೆ। ಕಲುಷ ಸಂಸ್ಕಾರಗಳ ವಶದಿಂ ಹೊಲಬುಗಾಣದೆ ಹಲುಬುತಿರುವೆನೊ। ಹೊಲೆಯ ಮನದರಿ ದಾಟ ತಪ್ಪಿಸಿ, ನೆಲೆಗೆ ನಿಲಿಸದಿರ್ದ ಬಳಿಕಿನ್ನೆಂದು ಕಾಂಬೆನೊ ನಿನ್ನ॥1॥ಭಾರತಿ ಪತಿ ಪ್ರೀಯ, ಎಂದೆಂದು ಭಕುತರ। ಭಾರ ನಿನ್ನದು ಜೀಯಾ, ಜಗವರಿಯೆ ಕರುಣಾ ವಾರಿನಿಧಿ ಪಿಡಿ ಕೈಯ್ಯಾ। ಫಣಿರಾಜ ಶಯ್ಯಾ। ತಾರಕನು ನೀನೆಂದು ತಿಳಿಯದ ಕಾರಣದಿ, ಸುಖ ದುಃಖಮಯ ಸಂಸಾರ ದುಸ್ತರ ವಾರಿಧಿಯೊಳು ಪಾರುಗಾಣದೆ ಪರಿದು ಪೋಪೆನೊ। ದೂರ ನೋಳ್ಪದು ಧರ್ಮವಲ್ಲವೋ। ದ್ವಾರಕಾಪುರ ನಿಲಯ ಪರಮೋದಾರ ಕರುಣದಿ ರಕ್ಷಿಸುವಾ ಭಾರ ನಿನ್ನದು

ಭವವಿಮೋಚಕ॥2॥ ವಿಖಿನ ಸಾರ್ಚಿತ ಪಾದ ವಿಶ್ವೇಶ ಜನ್ಮಾದ್ಯಖಿಳ ಕಾರಣ ನಾದ॥ ನಿರ್ದೋಷ ಚಿತ್ ಸುಖ ಗುಣಗುಣಾರ್ಣವ ಶ್ರೀದವಿಠ್ಠಲ ಪ್ರಸೀದ॥ ಸಕಲ ಸತ್ಕೃತು ಯಾಗಗಳು ಬಂಧಕವು ತತ್ವರವಿಲ್ಲದಿರಲೆನೆ। ನಿಖಿಳ ಜೀವರು ಭಿನ್ನ ನಿನ್ನಯ ಶಕುತಿಗೆ ನಮೋ ಎಂಬೆನಲ್ಲದೆ। ಯುಕುತ ಯುಕುತಿಗಳೊಂದನರಿಯದೆ ಅರ್ಭಕನ ಬಿನ್ನಪವಹಿಸಿ ನವವಿಧ ಭಕುತಿ ಭಾಗ್ಯವನಿತ್ತು ತವಸೇವಕರ ಸೇವಕನೆನಿಸದಿರ್ದೊಡೆ॥3॥

ಎಂದು ಕಾಂಬೆನು ಎನ್ನ ಸಲಹುವ

ಎಂದು ಕಾಂಬೆನು ಎನ್ನ ಸಲಹುವ। ಬಂಧುಬಳಗ ನಮ್ಮಪ್ಪನ ತಿರುಪತಿಲಿಪ್ಪನ। ವರಾಹ ತಿಮ್ಮಪ್ಪನ॥ಪ॥ದಂಡಿಗೆಯ ಬಾರಿಸುತಶ್ರುತಿಗೂಡಿ। ಕೊಂಡು ಪಾಡುತ ಮನದಿ ಲೋಲ್ಯಾಡುತ। ಕುಣಿಕುಣಿದಾಡುತ॥1॥ ಬೆಟ್ಟದೊಡೆಯನ ಚರಣಕಮಲಕೆ ಶಿರ ವಿಟ್ಟು ಕರಗಳ ಮುಗಿವೆ ನಾ ಅಲೆ ಅವಗೆ ಮಣಿವೆ ನಾ। ಎನ್ನೊಡೆಯನ ಪೊಗಳಿ ನಾ॥2॥ ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ। ನೇಮವ ಮಾಡುವೆ। ಪುಣ್ಯಕ್ಷೇತ್ರವ ನೋಡುವೆ। ಹಯವದನನ ಕೊಂಡಾಡುವೆ ॥3॥

ವೆಂಕಟೇಶ ದಯಮಾಡೋ

ವೆಂಕಟೇಶ ದಯಮಾಡೋ ವೇದವೇದ್ಯನೆ॥ಪ॥ ಪಂಕಜಾಕ್ಷ ಅಭಯವಿತ್ತು ಬೇಗೆನ್ನ ರಕ್ಷಿಸಯ್ಯ॥ಅ.ಪ.॥ ಚಿತ್ತ ಚಂಚಲವ ಬಿಡಿಸೋ ಮತ್ತೆ ಕ್ರೋಧವ ಓಡಿಸೊ। ಭ್ರಾಂತಿ ವಿಷಯಂಗಳು ಬೇಡ ಕಂತುಪಿತ ನಾರಾಯಣ॥1॥ ಸೃಷ್ಟಿ ಮೂರರೊಳಗೆ ನೀನೆ ಕಷ್ಟ ಬಡಿಸುವ ರೇನೋ। ನಷ್ಟ ತನ್ನ ನೋಡಬೇಡೋ ದೃಷ್ಟಿಸಿ ನೋಡೋ ದಯಾಳೊ॥2॥ ಭಾಳ ಅಪರಾಧಿ ನಾನು ನಿನ್ನ ಬಳಿಗೆ ಬಂದೆ ನಾನು। ಒಲಿದು ಎನ್ನರಕ್ಷಿಸಯ್ಯ ಮೇಲುಗಿರಿ ಪುರಂದರ ವಿಠಲ॥3॥

ಬಾರಯ್ಯ ವೆಂಕಟರಮಣ ಭಕ್ತರ ನಿಧಿಯೆ

ಬಾರಯ್ಯ ವೆಂಕಟರಮಣ ಭಕ್ತರ ನಿಧಿಯೆ॥ಪ॥ ತೋರೋ ನಿನ್ನದಯ ತೋಯ ಜಾಂಬಕನೆ॥ಅ.ಪ॥ ವೇದ ಗೋಚರ ಬಾರೋ। ಆದಿಕಚ್ಛಪ ಬಾರೋ। ಮೋದ ಸೂಕರ ಬಾರೋ। ಸದಯಾನರಸಿಂಹ ಬಾರೋ॥1॥ ವಾಮನ ಭಾರ್ಗವ ಬಾರೋ। ರಾಮ ಕೃಷ್ಣನೇ ಬಾರೋ। ಪ್ರೇಮದ ಬುದ್ಧನೇ ಬಾರೋ ಸ್ವಾಮಿ ಕಲ್ಕಿನೀ ಬಾರೋ॥2॥ ಅರವಿಂದ ನಾಭನೆ ಬಾರೋ। ಸುರರ ಪ್ರಭುವೇ ಬಾರೋ। ಪುರುಹೂತ ವಂದ್ಯಬಾರೋ। ಪುರಂದರ ವಿಠಲಬಾರೋ॥3॥

ವೇಂಕಟರಮಣನೆ ಬಾರೊ ರಾಗ: ಸಿಂಧೂಭೈರವಿ-ಅಟ್ಟತಾಳ

ವೇಂಕಟರಮಣನೆ ಬಾರೊ। ಶೇಷಾಚಲವಾಸನೆ ಬಾರೊ॥ಪ॥ ಪಂಕಜನಾಭ ಪರಮ ಪವಿತ್ರ। ಶಂಕರಮಿತ್ರನೆ ಬಾರೊ॥ಅ.ಪ॥ ಮುದ್ದು ಮುಖದ ಮಗುವೆ ನಿನಗೆ ಮುದ್ದು ಕೊಡುವೆನು ಬಾರೊ। ನಿರ್ದಯವೇಕೋ ನಿನ್ನೊಳಗೆ ನಾನು ಪೊಂದಿದ್ದೇನು ಬಾರೊ॥1॥ ಮಂದರಗಿರಿಯನೆತ್ತಿದಾನಂದ ಮೂರ್ತಿಯೆ ಬಾರೊ। ನಂದನ ಕಂದ ಗೋವಿಂದ ಮುಕುಂದ ಇಂದಿರೆಯರಸನೆ ಬಾರೊ॥2॥ ಕಾಮನಯ್ಯ ಕರುಣಾಳೊ ಶ್ಯಾಮಲವರ್ಣನೆ ಬಾರೊ। ಕೋಮಲಾಂಗ ಶ್ರೀ ಪುರಂದರವಿಠಲನೆ ಸ್ವಾಮಿರಾಯನೆ ಬಾರೊ॥3॥

ಇಂದು ನಾನೇನು ಸುಕೃತವಾಮಾಡಿದೆನೊ

ಇಂದು ನಾನೇನು ಸುಕೃತವಾ ಮಾಡಿದೆನೊ। ಪುಣ್ಯವ ಮಾಡಿದೆನೋ ಪನ್ನಂಗಶಯನ ವೇಂಕಟ ಬಂದ ಮನೆಗೆ॥ಪ॥ ಹಾರ ಕೇಯೂರ ಹೊನ್ನುಂಗುರ ಬೆರಳ। ಹಾರದ ನಡುವೆ ಹಾಕಿದ ಏಳು ಪದಕ। ತೋರ ಮುತ್ತಿನ ಕಂಠ ಮಾಲೆ ಮಾಲಿಕೆಯು। ಮೇಲು ಗಿರಿವಾಸ ವೇಂಕಟ ಬಂದ ಮನೆಗೆ॥1॥ ಎಸಳು ಸುತ್ತಿದ ಪಟ್ಟೆ ಎಸೆವ ಕಸ್ತೂರಿಯು। ಹಸನಾದ ಸಣ್ಣ ನಾಮ ಸಾಧು ತಿಲಕವು। ಕುಸುಮ ಮಲ್ಲಿಗೆ ಎಲೆವ ಸಂಪಿಗೆಯ। ವಸುಧೇಶ ಸೊಬಗ ವೇಂಕಟ ಬಂದ ಮನೆಗೆ॥2॥ ಬಿಗಿದು ಸುತ್ತಿದ ಓಲೆ ಬಿಡಿ ಮುತ್ತಿನ ಉಂಡೆ। ಬಗೆ ಬಗೆ ಉಂಗುರ ಝುಗಝುಗಿಸುತಲಿ। ಅಗಣಿತ ಹಸ್ತ

ಕಂಕಣವ ಹೊಳೆಯುತಲಿ। ಜಗದೊಳಧಿಕನು ವೇಂಕಟ ಬಂದ ಮನೆಗೆ।।3।। ಪಿಡಿದು ಸುದರ್ಶನ ಎಡಗೈಯಲಿ ಶಂಖ। ಪಿಡಿದಿದ್ದ ಖಡ್ಗದಿ ಜಡರ ಮರ್ದಿಸುತ। ಉಡುದಾರ ನಡುವೆ ಮಧ್ಯ ಹೃದಯದೊಳು ಲಕ್ಷ್ಮೀ। ಭಕುತರ ದೇವಾ ವೇಂಕಟ ಬಂದ ಮನೆಗೆ।।4।। ಇಂದಿರೆ ರಮಣ ನೀ ಎನ್ನ ಕುಲತಿಲಕ। ನಂದನ ಕಂದ ಮುಕುಂದ ಗೋವಿಂದ। ಬಂದೆನ್ನ ಪಾಪ ಬಂಧನವ ಪರಿಹರಿಸೋ। ಕಂದರ್ಪ ಜನಕ ವೇಕಂಟ ಬಂದ ಮನೆಗೆ।।5।। ಬಾಲಕೃಷ್ಣನ ಪೋಲ್ವ ಓಲೆ ಕುಂಡಲವು। ಮೇಲು ಮಾಣಿಕ್ಯ ನವರತ್ನ ದುಂಗುರವು। ಕಾಲಲಂದುಗೆಯು ನವರತ್ನದ್ಹಾವಿಗೆಯು। ಮೇಲುಗಿರಿವಾಸ ವೇಂಕಟ ಬಂದ ಮನೆಗೆ।।6।। ಪಾಷಾಣ ರೂಪದ ಅಹಲ್ಯಾ ಶಾಪವನು। ಶೋಷಣೆ ಮಾಡಿದ ಸೊಬಗ ರೂಪಿನಲಿ। ಶೇಷಾಚಲಾಧೀಶ ಮಹಾಶೇಷಶಯನ। ದಾಸಪಾಲಕನು ವೇಂಕಟ ಬಂದ ಮನೆಗೆ।।7।। ಪೊಳೆವ ಪೀತಾಂಬರ ಉಡುಗೆ ಕಠಾರಿ। ಪೊಳೆವ ಕಂಗಳ ನೋಡ ಹೊಸ ಪಂಚಬಾಣ। ವೀಳ್ಯದ ಬಾಯಿ ಕರ್ಪೂರ ಕರಡಿಗೆಯ। ಚೆಲುವ ಶರೀರ ವೇಂಕಟ ಬಂದ ಮನೆಗೆ।।8।। ಗರುಡನ ಏರಿ ಮೂರ್ಜಗವ ಮೋಹಿಸುತ। ಪರಮ ವೈಷ್ಣವರ ಪಾವನ ಪಾಲಿಸುತ। ಪರಿಪರಿಯ ತನ್ನ ಬಿರುದು ಪೊಗಳಿಸುತ। ಪುರಂದರ ವಿಠಲ ವೇಂಕಟ ಬಂದ ಮನೆಗೆ।9।।

ನಿನ್ನ ನೋಡಿ ಧನ್ಯನಾದೆನೊ ಹೇ ಶ್ರೀನಿವಾಸ **ರಾಗ: ಕಾಮವರ್ಧಿನಿ-ರೂಪಕತಾಳ**

ನಿನ್ನ ನೋಡಿ ಧನ್ಯನಾದೆನೊ ಹೇ ಶ್ರೀನಿವಾಸ।।ಪ।। ನಿನ್ನ ನೋಡಿ ಧನ್ಯನಾದೆ ಎನ್ನ ಮನೋನಯನಕೀಗಲಿನ್ನು ದಯಮಾಡು ಸುಪ್ರಸನ್ನ ಸ್ವಾಮಿ ಪಾಂಡುರಂಗ।।ಅ.ಪ।। ಪಕ್ಷಿವಾಹನ ಲಕ್ಷ್ಮೀರಮಣ ಲಕ್ಷ್ಮಿ ನಿನ್ನ ವಕ್ಷದಲ್ಲಿ। ರಕ್ಷ ಶಿಕ್ಷಣದಕ್ಷ ಪಾಂಡವ ಪಕ್ಷ ರಕ್ಷ ಕಮಲಾಕ್ಷ।।1।। ದೇಶದೇಶ ತಿರುಗಿ ನಾನು ಆಶಾಬದ್ಧನಾದೆ ಸ್ವಾಮಿ। ದಾಸನು ನಾನಲ್ಲವೆ ಜಗದೀಶ ಶ್ರೀಶ ಶ್ರೀನಿವಾಸ।।2।। ಕಂತುಜನಕ ಕೇಳೊ ನೀ ನಿರಂತರದಿ ನಿನ್ನ ಸೇವೆ। ಅಂತರಂಗದಿ ಪಾಲಿಸಯ್ಯ ಹೊಂತಕಾರಿ ಪುರಂದರವಿಠಲ।।3।।

ಕನಸು ಕಂಡೇನೆ ಮನದಲ್ಲಿ ಕಳವಳಗೊಂಡೇನೆ **ರಾಗ: ಮಧ್ಯಮಾವತಿ-ಆದಿತಾಳ**

ಕನಸು ಕಂಡೇನೆ ಮನದಲ್ಲಿ ಕಳವಳಗೊಂಡೆನೆ। ಏನು ಹೇಳಲಿ ತಂಗಿ ತಿಮ್ಮಯ್ಯನ ಪಾದವನು ಕಂಡೆ।।ಪ।। ಪೊನ್ನದ ಕಡಗವಿಟ್ಟು ತಿಮ್ಮಯ್ಯ ತಾ। ಪೋಲ್ವ ನಾಮವ ಇಟ್ಟು। ಅಂದುಗೆ ಘಲುಗೆನ್ನುತ ಎನ್ನ ಮುಂದೆ ಬಂದು ನಿಂತಿದ್ದನಲ್ಲೆ।।1।। ಮಕರಕುಂಡಲವನಿಟ್ಟು ತಿಮ್ಮಯ್ಯ ತಾ ಕಸ್ತೂರಿ ತಿಲಕವನಿಟ್ಟು। ಗೆಜ್ಜೆ ಘಲುರೆನ್ನುತ ಸ್ವಾಮಿ ತಾ ಬಂದು ನಿಂತಿದ್ದನಲ್ಲೆ।।2।। ಮುತ್ತಿನ ಪಲ್ಲಕ್ಕಿ ಯತಿಗಳು ಹೊತ್ತು ನಿಂತಿದ್ದರಲ್ಲೆ। ಛತ್ರ ಚಾಮರದಿಂದ ರಂಗಯ್ಯನ ಉತ್ಸವ ಮೂರುತಿಯ।।3।। ತಾಮರ ಕಮಲದಲಿ ಕೃಷ್ಣಯ್ಯ ತಾ ಬಂದು ನಿಂತಿದ್ದನಲ್ಲೆ। ವಾಯು ಬೊಮ್ಮಾದಿಗಳು ರಂಗಯ್ಯನ ಸೇವೆಯ ಮಾಡುವರೆ।।4।। ನವರತ್ನ ಕೆತ್ತಿಸಿದ ಸ್ವಾಮಿ ಎನ್ನ ಹೃದಯಮಂಟಪದಲ್ಲಿ। ಸರ್ವಾಭರಣದಿಂದ ಪುರಂದರವಿಠಲನ ಕೂಡಿದೇನೆ।।5।।

ಭೂಷಣಕೆ ಭೂಷಣವು **ರಾಗ: ಸಾರಂಗ-ಖಂಡಛಾಪುತಾಳ**

ಭೂಷಣಕೆ ಭೂಷಣವು ಇದು ಭೂಷಣ।।ಪ।। ಶೇಷಗಿರಿವಾಸ ಶ್ರೀವರವೆಂಕಟೇಶ।। ಭೂಷಣಕೆ।।ಅ.ಪ.।। ನಾಲಿಗೆಗೆ ಭೂಷಣ ನಾರಾಯಣ ನಾಮ। ಕಾಲಿಗೆ ಭೂಷಣ ಹರಿಯಾತ್ರೆಯು। ಆಲಯಕೆ ಭೂಷಣ ತುಲಸಿ ವೃಂದಾವನ। ವಿಶಾಲಕರ್ಣಕೆ ಭೂಷಣ ವಿಷ್ಣುಕಥೆಯು।।1।। ದಾನವೇ ಭೂಷಣ ಎರಡು ಹಸ್ತಂಗಳಿಗೆ। ಮಾನವೇ ಭೂಷಣ ಮಾನವರಿಗೆ। ಜ್ಞಾನವೇ ಭೂಷಣ ಮುನಿಯೋಗಿಗಳಿಗೆ। ಮಾನಿನಿಗೆ ಭೂಷಣ ಪತಿಭಕ್ತಿಯು।।2।। ರಂಗನನು ನೋಡುವುದೆ ಕಂಗಳಿಗೆ ಭೂಷಣ। ಮಂಗಳಾಂಗಗೆ ಮಣಿವ ಶಿರಭೂಷಣ। ಶೃಂಗಾರ ತುಳಸಿಮಣಿ ಕೊರಳಿಗೆ ಭೂಷಣ। ರಂಗವಿಠಲ ನಿನ್ನ ನಾಮ ಅತಿ ಭೂಷಣ।।3।।

ಸಾರಿದೆನೋ ನಿನ್ನ ವೆಂಕಟರನ್ನ

ಸಾರಿದೆನೋ ನಿನ್ನ ವೆಂಕಟರನ್ನ।।ಪ।। ನೀರಜ ನಯನನೇ ನಿರ್ಮಲ ಗುಣರನ್ನ।।ಅ.ಪ.।। ಎನ್ನ ಕುಂದುಗಳನ್ನು

ಎಣಿಸಲಾಗದೋ ದೇವಾ। ಪನ್ನಗಾಚಲ ವಾಸ ನಿ ಕಾಯೋ ನಿರ್ದೋಷಾ॥1॥ ಅನಾಥನೋ ನಾನು ನನಗೆ ಬಂಧವು ನೀನು। ನಿನ್ನವನೆಂದು ನೋಡೋ ನೀನಾಗಿ ದಯಮಾಡೋ॥2॥ ದೇಶ ದೇಶದವರ ಪೊರೆವಂತೆ ಪೊರೆ ಎನ್ನ ಶೇಷಾಚಲ ಘನ್ನ (ರನ್ನ) ಶ್ರೀಶಾ ಸಿರಿ ಹಯವದನ॥3॥

ಶ್ರೀನಿವಾಸ ನೀನೆ ಪಾಲಿಸೊ **ರಾಗ: ಆನಂದಭೈರವಿ-ಆದಿತಾಳ**

ಶ್ರೀನಿವಾಸ ನೀನೆ ಪಾಲಿಸೊ ಶ್ರಿತಜನಪಾಲ ಗಾನಲೋಲ ಶ್ರೀ ಮುಕುಂದನೆ॥ಪ॥ ಧ್ಯಾನಮಾಳ್ಪ ಸಜ್ಜನರ ಮಾನದಿಂ ಪರಿಪಾಲಿಸುವ। ವೇಣುಗೋಪಾಲ ಗೋವಿಂದ ವೇದವೇದ್ಯ ನಿತ್ಯಾನಂದ॥ಅ.ಪ॥ ಎಷ್ಟುದಿನ ಕಷ್ಟಪಡುವುದೋ ಯಶೋದೆ ಕಂದ। ದೃಷ್ಟಿಯಿಂದ ನೋಡಲಾಗದೆ॥ ಮುಟ್ಟಿ ನಿನ್ನ ಭಜಿಸಲಾರೆ, ಕೆಟ್ಟ ನರಜನ್ಮದವ। ದುಷ್ಟಕಾರ್ಯ ಮಾಡಿದಾಗ್ಯೂ ಇಷ್ಟನಾಗಿ ಕೈಯ ಪಿಡಿಯೋ॥1॥ ಎಂದಿಗೆ ನಿನ್ನ ಪಾದಾಬ್ಜವ ಪೊಂದುವ ಸುಖ। ಎಂದಿಗೆ ಲಭ್ಯವೊ ಮಾಧವ॥ ಅಂಧಕಾರಣ್ಯದಲಿ ನಿಂದು ತತ್ತರಿಸುತಿಹೆನೊ। ಅಂದದಿಂ ಭವಾಬ್ಧಿಯೊಳು ನಿಂದು ನೊಂದೆನೊ ಗೋವಿಂದ॥2॥ ಅನುದಿನ ಅನೇಕ ರೋಗಗಳ ಅನುಭವಿಸಿದೆನು। ಘನ ಮಹಿಮನೆ ಕೇಳಯ್ಯ॥ ತನುವಿನಲ್ಲಿ ಬಲವಿಲ್ಲ ನೆನೆದ ಮಾತ್ರದಿ ಸಲಹೊಯೆನ್ನ। ಹನುಮದೀಶ ಪುರಂದರವಿಠ್ಠಲನೆ ಕೈಯ ಪಿಡಿದು॥3॥

ಇಂದು ನಿನ್ನ ಮೊರೆಯ ಹೊಕ್ಕೆ ವೆಂಕಟೇಶನೆ **ರಾಗ: ಶಂಕರಾಭರಣ**

ಇಂದು ನಿನ್ನ ಮೊರೆಯ ಹೊಕ್ಕೆ ವೆಂಕಟೇಶನೆ। ಎಂದಿಗಾದರೆನ್ನ ಕಾಯೋ ಶ್ರೀನಿವಾಸನೆ॥ಪ॥ ಶೇಷಗಿರಿಯವಾಸ ಶ್ರೀಶ ದೋಷರಹಿತನೆ। ಏಸುದಿನಕು ನಿನ್ನ ಪಾದದಾಸನು ನಾನೆ। ಕ್ಲೇಶಗೈಸದಿರು ಎನ್ನ ಸ್ವಾಮಿಯು ನೀನೆ॥1॥ ಕಮಲನಯನ ಕಾಮಜನಕ ಕರುಣವಾರಿಧೇ। ರಮೆಯನಾಳ್ವ ಕಮಲನಾಭ ಹೇ ದಯಾನಿಧೇ। ಯಮನ ಪುರದಿ ಶಿಕ್ಷಿಸದಿರು ಪಾರ್ಥಸಾರಥೇ॥2॥ ಉರಗಶಯನ ಸುರರಿಗೊಡೆಯ ಸಿರಿಯ ರಮಣನೆ। ಶರಣಪಾಲ ಬಿರುದು ತೋರಿ ಪೊರೆವ ದೇವನೆ। ಕರುಣಿಸೆನಗೆ ಮುಕುತಿಯ ಪುರಂದರವಿಠಲನೆ॥3॥

ನಾನಾಟಿ ಬತುಕು ನಾಟಕಮು

ನಾನಾಟಿ ಬತುಕು ನಾಟಕಮು। ಕನಕ ಕನ್ನತಿ ಕೈವಲ್ಯಮು॥ಪ॥ ಪುಟ್ಟುಟಯು ನಿಜಮು ಪೋವುಟಯು ನಿಜಮು। ನಟ್ಟನಟಿಮಿ ಪನಿ ನಾಟಕಮು। ಯೆಟ್ಟನೆಡುಟಗಲದೀ ಪ್ರಪಂಚಮು। ಕಟ್ಟಗಟಪಟಿತಿ ಕೈವಲ್ಯಮು॥1॥ ಕುಟಿಚೇಡೆನ್ನಮು ಶೋಕ ಚುಟ್ಟೇಡಿದಿ। ನಾಟು ಮಂತ್ರಪು ಪನಿ ನಾಟಕಮು। ವೊಡಿಗಟ್ಟು ಕೊನಿನ ಉಭಯ ಕರ್ಮುಲು। ಗಟಿದಾಟಿನಪುಡೆ ಕೈವಲ್ಯಮು॥2॥ ತೆಗೆದು ಪಾಪಮು ತೀರದು ಪುಣ್ಯಮು। ನಗಿನಗಿ ಕಾಲಮು ನಾಟಕಮು। ಯೆಗುವನೆ ಶ್ರೀವೆಂಕಟೇಶ್ವರು ಡೇಲಿಕ ಗಗನಮು ಮೀದಿದಿ ಕೈವಲ್ಯಮು॥3॥

ನಿನ್ನ ದರುಶನಕೆ ಬಂದವನಲ್ಲವೋ

ನಿನ್ನ ದರುಶನಕೆ ಬಂದವನಲ್ಲವೋ। ಪುಣ್ಯವಂತರ ದಿವ್ಯಚರಣ ನೋಡಲು ಬಂದೆ॥ಪ॥ ಎಲ್ಲಿ ನೋಡಲು ನೀನೇ ವ್ಯಾಪ್ತನಾಗಿರಲಿಕ್ಕೆ। ಇಲ್ಲಿಗೆ ಬಾಹ ಕಾರಣವಾವುದೋ। ಸೊಲ್ಲಿಗೆ ಕಂಭದೊಳು ತೋರಿದ ಮಹಾಮಹಿಮ। ಅಲ್ಲಿ ಇಲ್ಲೇನಯ್ಯ ಬಲ್ಲ ಭಕುತ ಜನರಿಗೆ। ಕರೆದಾಗಲೇ ಓಡಿ ಬಂದೊದಗು ಓ ದೇವ। ಮರಳಿಗಾವುದವೆಣಿಸಿ ಬರಲ್ಯಾತಕೋ। ನೆರೆನಂಬಿದವರಿಗಾವಲ್ಲಿ ಆದರೆ ಏನು। ಅರಿತವರ ಮನದಲ್ಲಿ ನಿಂದಾಡುವೋ ಚೆಂದವಾ॥1॥ ಧ್ಯಾನಕ್ಕೆ ಸಿಲುಕುವೆ ನಿನ್ನಕಾಣಲಿಬಹುದು। ಜ್ಞಾನಿಗಳು ಎನಿಸುವರು ವರವಲ್ಲಿಗೆ। ಅನಂತ ಜನುಮದಲಿ ಜಪತಪ ವ್ರತಹೋಮ। ಏನು ಮಾಡಿದರಿಷ್ಟು ಜನ ಕೂಡುವುದೋ ದೇವ। ನೀನಿದ್ದ ಸ್ಥಾನದಲಿ ಸರ್ವಪುಣ್ಯಕ್ಷೇತ್ರ। ನೀನಿದ್ದ ಸ್ಥಾನದಲಿ ಸಕಲತೀರ್ಥ। ನೀನಿದ್ದ ಸ್ಥಾನದಲಿ ಸಮಸ್ತ ಸಾತ್ವಿಕರು। ನಾನಿದ್ದ ಬರುವದೊ ನಿನಗೆ ಒಳ್ಳೆಯದೆ ಸ್ವಾಮಿ॥2॥ ಇದನೆ ಲಾಲಿಸು ಜೀಯ ನಿನ್ನದೊಂದೇ ಮೂರ್ತಿ। ನಿನ್ನ ದರುಶನವಲ್ಲದೆ ಮಿಗಿಲಾವುದೋ। ಪದೇ ಪದೇ ಮದ್ವಮತ ಪೊಂದಿದ ಸುಜನರ।

ಹೃದಯದಲಿ ಒಂದೊಂದು ಪರಿ ನಿನ್ನ ರೂಪಂಗಳು। ಭಳಿರೆ ತಿರುಮಲರಾಯ ನಿನ್ನ ಕರುಣಾರಸಕೆ। ನೆಲೆಗಾಣೆ ನೆಲೆಗಾಣೆ ನೆರೆಹೊರೆಯಲಿ। ಬಲಿದು ಭಕುತರಿಗಾಗಿ ಮಗುವೆ ಹವಣಿಸಿ ಕೊಂಡೆ। ಸುಲಭದೇವರ ದೇವ ವಿಜಯವಿಠ್ಠಲವೇಂಕಟ।।3।।

❖ ❖ ❖

ಎಂದು ಕಾಂಬೆನೋ ಪಾಂಡುರಂಗ ಮೂರುತಿಯ

ಎಂದು ಕಾಂಬೆನೋ ಪಾಂಡುರಂಗ ಮೂರುತಿಯ। ಇಂದು ಭಾಗ ನಿವಾಸ ನರನ ಸಾರಥಿಯ।।ಪ।। ಅರುಣಾಬ್ಜೋಪಮ ಚಾರು ಚರಣಾಂಗುಲಿ ನಖರ। ತರುಣೇಂದುಚ್ಛವಿ ತಿರಸ್ಕರಿಸುವ ಪ್ರಖರ। ಕಿರುಗೆಜ್ಜೆ ಖಡೆಯ ನೂಪುರ ಪೆಂಡೆ ಶಫರ। ತೆರೆಜಂಘ ಜಾನು ಭಾಸ್ಕರ ರತ್ನ ಮುಕುರ।।1।। ರಂಭಾ ಪೋಲುವ ಊರು ಪೊಂಬಣ್ಣಾಂಬರವ। ಕುಂಭಿ ಮಸ್ತಕವೋಲ್ ನಿಂತಂಬಾದಿ ಪೊಳೆವ। ಕಂಬು ಮೇಖಳ ಕಂಜ ಗಂಭೀರ ನಾಭಿ। ಅಂಬುಧಿಶಾಯಿ ವಿಧಿ ಶಂಭು ಪೂಜಿತನ।।2।। ಲವ ಕುಕ್ಷಿ ತ್ರಿವಳಿ ಭಾರ್ಗವಿ ವಕ್ಷ ಉದ್ಯ-। ದ್ರವಿ ಪೋಲುವ ಕೌಸ್ತುಭ ನವ ವೈಜಂಯತೀ। ಸುವಿಶಾಲ ವಕ್ಷದೋಳ್ ವಿವಿಧ ಹಾರಗಳು। ನವನೀತ ಚೋರ ಶ್ರೀಪವಮಾನ ಪಿತನ।।3।। ಪದಕ ಸರಿಗೆಯು ಜಂಬುನದ ಕಂಬು ಕಂಠ। ರಜ ನಿಖರ ತೆರೆಬಾಹು ಚದುರ ಭುಜಕೀರ್ತಿ। ಬದರ ಸಂಕಾಶ ಅಂಗದ ರತ್ನ ಪದಕ। ಪದುಮಾರುಣ ಕರವ ಮತ್ ಕಟ್ಟಿಯಲ್ಲಿಟ್ಟವ।।4।। ವಿಧು ಬಿಂಬೋಪಮ ಚಾರುವದನ ಕೆಂದುಟಿಯ। ಬದರಾಭ ದ್ವಿಶಪಲ್ಗಳ ಪೊಳೆವ ಕಿರುನಗೆಯ। ಕದಪು ಕನ್ನಡಿ ನಾಸಾತುದಿ ಚಂಪಕಾನನೆಯ। ಉದಕೇಜಾಯತ ನೇತ್ರಯದು ವಂಶೋದ್ಭವನ।।5।। ಕಲಿತ ಕುಂಡಲ ಕರ್ಣ ಸುಲತಾ ಭ್ರೂಯಗಳು। ಲಲಿತ ಬಾಲ ಶಶಾಂಕ ತಿಲಕಾಂಕಿತ ಫಾಲ। ಅಳಿಜಾಲವೆನಿಪ ಕುಂತಲ ರತ್ನ ಖಚಿತ। ಕಲಧೌತ ಮುಕುಟ ದಿಗ್ವಲಯ ಬೆಳಗುವನ।।6।। ಝುಟ ಕೂರ್ಮ ರೂಪಿಯ ಕಿಟಿಮಾನವ ಹರಿಯ। ವಟು ಭಾರ್ಗವ ಕಾಕುಸ್ಥ ಶಟ ಕಂಸ ದ್ವೇಷಿಯ। ನಿಟಲಾಂಬಕ ಸಹಯ್ಯಾ ಖಳಕಟಕಾರಿ ಭೀಮಾ। ತಟವಾಸ ಜಗನ್ನಾಥ ವಿಠಲ ಮೂರುತಿಯ।।7।।

ಎಂದು ಕಾಂಬೆನೊ ತಂದೆ ಪಂಡರಿ ವಿಠಲರಾಯನೆ

ಎಂದು ಕಾಂಬೆನೊ ತಂದೆ ಪಂಡರಿವಿಠಲರಾಯನೆ। ಬಂದು ನಿನ್ನಯ ಸುಂದರಾಕೃತಿ। ಎಂದು ನೋಡುವೆ।।ಪ।। ದಾಸ ಜನರು। ಕ್ಲೇಶ ಹರಿಪಾ। ದೋಷ ದೂರನೇ। ದೋಷಿ ಎನ್ನನು। ಪೋಷಿಸೂವುದು। ಸಹಸ್ರನಾಮನೇ।।2।। ಶ್ರೇಷ್ಠಭಕ್ತನು। ಕೊಟ್ಟ ಇಟ್ಟಿಯ ಮೆಟ್ಟಿ ನಿಂತಾನೇ। ಪುಟ್ಟನಾಗುತ। ಮೆಟ್ಟಿ ಬಲಿಯನು। ಕಷ್ಟ ಕಳೆದಾನೆ।।2।. ಕಾವಕೊಲ್ಲುವ ಬೋವಬಂಡಿಗೆ। ಯಾವನೀತನೇ। ಓವಿ ಭಜಿಸಲು। ಕಾಮಗುರು ಗೋವಿಂದವಿಠಲನೆ।।3।।

ಬಾರೋ ಬಾರೋ ಪಾಂಡುರಂಗ ರಾಗ: ಬೃಂದಾವನಿ-ಛಾಪುತಾಳ

ಬಾರೋ ಬಾರೋ ಪಾಂಡುರಂಗ ನೀನೇ ಗತಿ। ತೋರೊ ತೋರೊ ನಿನ್ನ ಮುಖವ ರುಕುಮಿಣೀ ಪತಿ।।ಪ।। ಚಂದ್ರಭಾಗ ತೀರದಲ್ಲಿ ವಾಸವಾಗಿರುವಿ। ಮಂಧರ ಗಿರಿಧರ ಸಿಂಧುಶಯನ ಅಂದವಾಗಿರುವಿ।।1।। ಶಂಖ ಚಕ್ರವನ್ನು ನೀನು ಎಲ್ಲಿ ಇಟ್ಟಿರುವಿ। ಟೊಂಕದ ಮೇಲೆ ಕೈಯನ್ನಿಟ್ಟು ಏಕೆ ನಿಂತಿರುವಿ।।2।। ಭಕ್ತರನ್ನೆಲ್ಲ ಉದ್ಧರಿಸುವ ನೀನೇ ದೊರೆ। ಭಕ್ತವತ್ಸಲ ನಾರಸಿಂಹ ವಿಠ್ಠಲ ಹರೇ।।3।।

ಡಂಗುರವ ಸಾರಿರಯ್ಯ ರಾಗ: ಪೂರ್ವಿಕಲ್ಯಾಣಿ-ಆದಿತಾಳ

ಡಂಗುರವ ಸಾರಿರಯ್ಯ ಡಿಂಗರಿಗರೆಲ್ಲರು। ಭೂ ಮಂಡಲಕ್ಕೆ ಪಾಂಡುರಂಗವಿಠ್ಠಲ ಪರದೈವವೆಂದು।।ಪ।। ಹರಿಯು ಮುಡಿದ ಹೂವು ಹರಿವಾಣದೊಳಗಿಟ್ಟುಕೊಂಡು। ಹರುಷದಿಂದ ಹಾಡಿ ಪಾಡಿ ಕುಣಿದು ಚಪ್ಪಾಳಿಕ್ಕುತ।।1।। ಒಡಲ ಜಾಗಟೆಯ ಮಾಡಿ ನುಡಿವ ನಾಲಿಗೆಯ ಪಿಡಿದು। ಢಂಢಂ ಢಣಾ ಢಣಾರೆಂದು ಹೊಡೆದು ಚಪ್ಪಾಳಿಕ್ಕುತ।।2।। ಇಂತು

ಜಗಕೆಲ್ಲ ಲಕ್ಷ್ಮೀಕಾಂತನಲ್ಲದಿಲ್ಲವೆಂದು। ಸಂತತ ಶ್ರೀ ಪುರಂದರವಿಠ್ಠಲ ಪರದೈವವೆಂದು॥3॥

ಬಂದು ನಿಂತಿಹ ನೋಡಿ

ಬಂದು ನಿಂತಿಹ ನೋಡಿ। ರುಕ್ಮಿಣಿಯ ವಿಠಲ॥ಪ॥ ಬಂದುನಿಂತಿಹ ಎಮ್ಮ ಮನೆಯೊಳು। ತಂದೆ ಶ್ರೀಪತಿ ಸುಂದರಾಂಗನು। ಇಂದು ಕರಗಳನಿಟ್ಟು ಕಟಿಯೊಳು। ಮಂದಹಾಸದಿ ಮುದ್ದು ಮುಖದವ॥ಅ.ಪ.॥ ದಾಸದಾಸರ ಸ್ವಾಮಿ। ಮಹಿದಾಸ ಶ್ರೀಹರಿ ವಾಸವಾದ್ಯರ ಪ್ರೇಮಿ। ಶ್ರೀನಾಥ ಈ ಭವ ಪಾಶಮುಕ್ತರ ಮಾಡಿ। ಸಾಕುವನು ನೋಡಿ॥ ಏಸುಜನ್ಮದ ಪುಣ್ಯದಿಂದಲಿ। ದೋಷರಹಿತನು ಬಂದು ನಿಂತನು। ಶ್ರೀಶ ಶ್ರೀಹರಿ ಈ ದಾಸದಾಸನ ತೋಷದಿಂದಲಿ ಸೇವೆಗೊಳ್ಳಲು॥1॥ ಚಂದ್ರಭಾಗದ ತೀರ। ನಿಂದಿರುವ ವಿಠ್ಠಲ ಬಂದ ಪ್ರೇಮ ಅಪಾರ। ತನ್ನವರ ಬಿಡದಲೆ ತಂದೆ ಸಲಹುವ ಧೀರ। ಕರುಣಾಪಾರ॥ ಇಂದ್ರವೀಂದ್ರ ಭವಾದ್ಯಮುಖನುತ। ಚಂದ್ರಕಾಂತಿಯ ಮೀರ್ಪಸುಂದರ। ಎಂದು ಎಂದಿಗೆ ತಂದೆ ನೀಗತಿ। ಎಂದು ನಂಬಿದ ಮೇಲೆ ಮನೆಗೆ॥2॥ ಮಂಡೆಯೊಡೆದನ ಮಾವ। ಉದ್ದಂಡ ವಿಕ್ರಮ ಕಂಡು ಕರುಣವ ಬೀರ್ಪ। ಬಿಡದಂತೆ ದಾಸರ ಹಿಂಡು ಹಿಂಡನು ಪೊರೆವ। ಅಪರೋಕ್ಷ ಕೊಡುವ। ಹೆಂಡತಿದ್ದರು ತಾ ಮತ್ತೊಬ್ಬಳ। ಕಂಡು ಮೋಹಿಸಿ ಲಗ್ನವಾದನು। ಹಿಂಡಿ ಭಕ್ತರ ಪಕ್ವಮಾಡುವ ಪಂಡರೀನಾಥ ವಿಠಲ ದೇವನು॥3॥

❖ ❖ ❖

ಬಾಗಿಲನು ತೆರೆದು ಸೇವೆಯನು ಕೊಡು — ರಾಗ: ಅಠಾಣ-ಝಂಪೆತಾಳ

ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ। ಕೂಗಿದರು ಧ್ವನಿ ಕೇಳಲಿಲ್ಲವೇ ನರಹರಿಯೆ॥ಪ॥ ಪರಮಪದದೊಳಗೆ ವಿಷಧರನ ತಲ್ಪದಲಿ ನೀ। ಸಿರಿ ಸಹಿತ ಕ್ಷೀರವಾರಿಧಿಯೊಳಿರಲು॥ ಕರಿರಾಜ ಕಷ್ಟದಲಿ ಆದಿಮೂಲಾ ಎಂದು। ಕರೆಯಲಾಕ್ಷಣ ಬಂದು ಒದಗಿದೆಯೊ ನರಹರಿಯೆ॥1॥ ಕಡುಕೋಪದಿಂ ಖಳನು ಖಡುಗವನು ಪಿಡಿದು ನಿನ್ನೊಡೆಯನೆಲ್ಲಿಹನೆಂದು ನುಡಿಯೆ॥ ದೃಢಭಕುತಿಯಲಿ ಶಿಶುವು ಬಿಡದೆ ನಿನ್ನನು ಭಜಿಸೆ। ಸಡಗರದಿ ಕಂಬದಿಂದೊಡೆದೆ ನರಹರಿಯೆ॥2॥ ಯಮಸುತನ ರಾಣಿಗಕ್ಷಯವಸನವನಿತ್ತೆ। ಸಮಯದಲಿ ಅಜಮಿಳನ ಪೊರೆದೆ। ಸಮಯಾಸಮಯವುಂಟೆ ಭಕ್ತವತ್ಸಲ ನಿನಗೆ। ಕಮಲಾಕ್ಷ ಕಾಗಿನೆಲೆಯಾದಿಕೇಶವನೆ॥3॥

ಸಿಂಹರೂಪನಾದ ಶ್ರೀ ಹರಿ ನಾಮ — ರಾಗ: ಮಧ್ಯಮಾವತಿ

ಸಿಂಹರೂಪನಾದ ಶ್ರೀ ಹರಿ ನಾಮಗಿರೀಶನೆ॥ಪ॥ ಒಮ್ಮನದಿಂದಲಿ ನಿಮ್ಮನು ಭಜಿಸೇ। ಸಮ್ಮತದಿಂದಲಿ ಕಾಯ್ವ ನರಹರೇ॥ಅ.ಪ॥ ತರಳನು ಕರೆಯೇ ಸ್ಥಂಭವು ಬಿರಿಯೇ। ತುಂಬ ಉಗ್ರವನು ತೋರಿದನು। ಕರುಳನು ಬಗೆದು ತನ್ನ ಕೊರಳೊಳಗಿಟ್ಟು। ತರಳನ ಸಲಹಿದ ಶ್ರೀ ನರಸಿಂಹನೇ॥1॥ ಭಕ್ತರೆಲ್ಲ ಕೂಡಿ ಬಹುದೂರ ಓಡಿ। ಪರಮ ಶಾಂತಿಯನು ಬೇಡಿದರು। ಕರೆತಂದು ಸಿರಿಯನು ತೊಡೆಯಮೇಲ್ ಕುಳ್ಳಿರಿಸಿ। ಪರಮ ಹರುಷವನು ಪೊಂದಿದ ಶ್ರೀಹರಿ॥2॥ ಜಯ ಜಯ ಜಯವೆಂದು ಹೂವನೆ ತಂದು। ಹರಿ ಹರಿ ಹರಿ ಎಂದು ಸುರರೆಲ್ಲ ಸುರಿಯೆ। ಭಯನಿವಾರಣ ಭಾಗ್ಯ ಸ್ವರೂಪನೆ। ಪರಮ ಪುರುಷ ಶ್ರೀ ಪುರಂದರ ವಿಠಲನೆ॥2॥

ಮಹದಾದಿದೇವ ನಮೋ — ರಾಗ: ಪೂರ್ವೀಕಲ್ಯಾಣಿ-ಆದಿತಾಳ

ಮಹದಾದಿದೇವ ನಮೋ॥ಪ॥ ಮಹದಾದಿದೇವ ನಮೋ। ಮಹಾಮಹಿಮ ನಮೋ। ಪ್ರಹ್ಲಾದವರದ ಅಹೋಬಲ ನಾರಸಿಂಹ॥ಅ.ಪ॥ ಧರಣಿಗುಬ್ಬಸವಾಗೆ ತಾರಾಪಥವು ನಡುಗೆ। ಸುರರು ಕಂಗೆಟ್ಟೋಡೆ ನಭವ ಬಿಟ್ಟು॥ ತರುಗಿರಿಗಳಲ್ಲಾಡೆ ಶರಧಿಗಳು ಕುದಿದುಕ್ಕೆ। ಉರಿಯನುಗುಳುತ ಉದ್ಭವಿಸಿದೆ ನರಸಿಂಹ॥1॥ ಸಿಡಿಲಿನಂತೆ ಗರ್ಜಿಸುತ ಕುಡಿಯನಾಲಗೆ ಚಾಚಿ। ಅಡಿಗಡಿಗೆ ಲಂಘಿಸುತ ಕಡುಕೋಪದಿಂದ॥ ಮುಡಿ ಪಿಡಿದು ರಕ್ಕಸನ ಕೆಡಹಿ ನಖದಿಂದೊತ್ತಿ।

ಕಡು ಉದರ ಬಗಿದೆ ಕಡುಗಲಿ ನಾರಸಿಂಹ॥2॥ ಸರಸಿಜೋದ್ಭವ ಹರ ಪುರಂದರಾದಿ ಸಮಸ್ತ। ಸುರರು ಅಂಬರದಿ ಪೂಮಳೆಯ ಕರೆಯೆ॥ ಸಿರಿಸಹಿತ ಗರುಡಾದ್ರಿಯಲಿ ನಿಂತು ಭಕುತನ॥ ಕರುಣಿಸಿದೆ ಪುರಂದರ ವಿಠಲ ನರಸಿಂಹ॥3॥

ಅಪಮೃತ್ಯು ಪರಿಹರಿಸೋ ನಾರಸಿಂಹ

ಅಪಮೃತ್ಯು ಪರಿಹರಿಸೋ ನಾರಸಿಂಹ। ಕೃಪಣವತ್ಸಲ ಹರಿಯೆ ಬಿನ್ನವಿಪೆ ನಿನಗೆ॥ಪ॥ ಅನ್ಯರಿಗೆ ಮೊರೆ ಇಡೆನೊ। ನಿನ್ನೊರತು ಇನ್ನಿಲ್ಲ। ಮನ್ಯುಸೂಕ್ತೋದಿತನೇ। ಎನ್ನ ಶಿಷ್ಯನಿಗೆ। ಬನ್ನ ಬಡಿಸುವ ರೋಗವನ್ನು ಮೋಚಿಪುದಯ್ಯ। ಅನ್ನಂತ ಮಹಿಮ ಹರಿ ನಿನ್ನ ಕೃಪೆ ತೋರೋ॥1॥ ತಂದೆ ತಾಯಿಯು ನೀನೇ। ಬಂಧು ಬಳಗವು ನೀನೇ। ಇಂದು ಅಂದಿಗೂ ನೀನೇ। ಎಂದೆಂದು ನೀನೇ। ಕಂದನನು ಸಲಹೆಂದು ಸಿಂಧುಶಯನನೆ ಬೇಡ್ವೆ। ಇಂದಿರಾಪತಿ ಗುರು ಗೋವಿಂದವಿಠಲಾ॥2॥

❖ ❖ ❖

ಕಾದಿರುವಳು ಶಬರಿ

ರಾಗ: ಸಾರಂಗ

ಕಾದಿರುವಳು ಶಬರಿ ರಾಮಬರುವನೆಂದು ತನ್ನ ಪೂಜೆಗೊಳುವನೆಂದು॥ಪ॥ ವನವನವ ಸುತ್ತಿಸುಳಿದು ತರುತರುವಲೆದು ತಿರಿದು ಬಿರಿಹೂಗಳಾಯ್ದು ತಂದು ತನಿವಣ್ಗಳಾಯ್ದು ತಂದು॥1॥ ಕೊಳದಲ್ಲಿ ಮುಳುಗಿ ಮಿಂದು ಬಿಳಿ ನಾರುಮಡಿಯನುಟ್ಟು ತಲೆವಾಗಿಲಿಂಗೆ ಬಂದು ಹೊಸತಿಲಲಿ ಕಾದು ನಿಂದು॥2॥ ಎಳಗಾಳಿ ತೀಡುತಿರಲು ಕಿವಿಯೆತ್ತಿ ಆಲಿಸುವಳು ಎಲೆಯಲುಗೆ ಗಾಳಿಯಲ್ಲಿ ನಡೆ ಸಪ್ಪಳೆಂದು ಬಗೆದು॥3॥ ದೂರಕ್ಕೆ ನೋಳ್ಪೆನೆಂದು ಮರವೇರಿ ದಿಟ್ಟಿಸುವಳು ಗಿರಿಮೇಲಕೈದಿಕೈಯ ಮರೆಮಾಡಿ ನೋಡುತಿಹಳು॥4॥ ಬಾ ರಾಮ ರಾಮ ಎಂದು ಬರುತಿಹನು ಇಹನು ಎಂದು ಹಗಲಿರುಳು ತವಕಿಸಿಹಳು ಕಳೆದಿಹವು ವರುಷ ಹಲವು॥5॥ ಶಬರಿವೊಲು ಜನವು ದಿನವು ಯುಗಯುಗವು ಕಳೆಯುತಿಹವು ಕರೆ ಇಳೆಗಳೇಳಲರಸಿ ತವಕದಲಿ ತಪಿಸುತಿಹಳು॥6॥ ಭರವಸೆಗಳಳಿಯವಾಗಿ ಮನವೆಲ್ಲ ಬಯಕೆಯಾಗಿ ಹಗಲೆಲ್ಲ ಕಾದು ಕೂಗಿ ಇರುಳೆಲ್ಲ ಜಾಗರಾಗಿ॥7॥ ಬಂದಾನೋ ಬಾರನೋ ಓ ಕಂಡಾನೋ ಕಾಣನೋ ಓ ಎಂದೆಂದು ತಪಿಸಿ ಜಪಿಸಿ ಶಂಕಾತುರಂಗಳೂರಿ॥8॥ ಬಾ ರಾಮ ಬಾರ ಬಾರಾ ಬಡವರನು ಕಾಯುಬಾರಾ ಕಂಗಾಣದವರ ಪ್ರೇಮ ನುಡಿಸೋತ ಮೂಕಪ್ರೇಮ॥9॥

ರಾಮ ರಾಜೀವಾಕ್ಷ ಬೇಗ ಬಾರೋ

ರಾಮ ರಾಜೀವಾಕ್ಷ ಬೇಗ ಬಾರೋ॥ಪ॥ ಕಾಮಿತ ವರಗಳನು ಬೀರೋ॥ಅ.ಪ.॥ ದಶರಥ ನೃಪ ಸುಕುಮಾರ। ದಶ ವಿಧಿ ದಿವ್ಯ ಶರೀರ॥1॥ ಸೀತಾದೇವಿ ಹೃದಯಾಬ್ಜ ಮಿತ್ರ। ಚೇತೋ ಹರನುತಿ ಪಾತ್ರ॥2॥ ಗುರು ರಾಮವಿಠಲೇಶ ನೀನೇ। ಶರಣರ ಪರಿಪಾಲಕನೆ॥3॥

ಸುಮ್ಮನೆ ದೊರಕುವುದೇ ಶ್ರೀರಾಮನ

ಸುಮ್ಮನೆ ದೊರಕುವುದೇ ಶ್ರೀರಾಮನ ದಿವ್ಯನಾಮವು॥ಪ॥ ಜನ್ಮ ಜನ್ಮಾಂತರದ ದುಷ್ಕರ್ಮ ಹೋದವಗಲ್ಲದೆ॥ಅ.ಪ.॥ ಭಕ್ತಿರಸದಲ್ಲಿ ತನ್ನ ಚಿತ್ತ ಪರವಶವಾಗಿ। ಅಚ್ಯುತನ ನಾಮವ ಬಿಚ್ಚಿಟ್ಟು ಕೊಂಡವಗಲ್ಲದೆ॥1॥ ಕಂತುಪಿತನ ದಿವ್ಯನಾಮ ಅಂತರಂಗದೊಳಿಟ್ಟು। ಚಿಂತೆಯೆಲ್ಲವ ಬಿಟ್ಟು ನಿಶ್ಚಿಂತನಾದವಗಲ್ಲದೆ॥2॥ ಕಣ್ಣೊಳಗಿದ್ದ ಮೂರುತಿ ತನ್ನೊಳಗೆ ತಂದು। ಘನ್ನ ಪೂರ್ಣ ಪುರಂದರ ವಿಠಲನ ಭಜಿಸದೆ॥3॥

ಈಗ ಮಾಡೆಲೋ ರಾಮಧ್ಯಾನವ

ಈಗ ಮಾಡೆಲೋ ರಾಮಧ್ಯಾನವ। ನೀ ಮೂಕನಾಗಿರಬೇಡ ಎಲೆ ಮಾನವ।।ಪ।। ಕಾಲನ ದೂತರು ಕರೆವಾಗ। ನೀ ಕಾಲಗೆಟ್ಟು ಕಣ್ಣು ಬಿಡುವಾಗ। ನಾಲಿಗೆ ಸೆಳೆದುಕೊಂಡು ಜ್ಞಾನಗೆಟ್ಟಿ ರುವಾಗ। ನೀಲ ವರ್ಣನ ಧ್ಯಾನ ಬರುವುದೇನಯ್ಯ।।1।। ಸತಿ ಸುತರೆಂಬ ಸಂದಣಿಯೊಳು। ನೀ ಮತಿಭ್ರಷ್ಟನಾಗಿ ಮನದೊಳು। ಸತತ ಶ್ರೀ ಲಕ್ಷ್ಮೀಯ ಪತಿಯನ್ನು ನೆನೆದರೆ ಸದ್ಗತಿಯ ಸನ್ಮಾರ್ಗ ಪರಮಪದವಿ ಈವನಯ್ಯ।।2।। ಯಮದೂತರು ಬಂದು ಎಳೆವಾಗ। ನೀ ನರಳುತ್ತ ಹೊತ್ತು ಕಳೆವಾಗ। ಗುರು ಪುರಂದರ ವಿಠಲನ್ನ ನಾಮವು। ಕಾಲವಾಗೋ ಸಮಯಕ್ಕೆ ಬರುವುದೇ ನಯ್ಯ।।3।।

ರಾಮರಾಮ ಎಂಬೆರಡಕ್ಷರ ಪ್ರೇಮದಿ

ರಾಮರಾಮ ಎಂಬೆರಡಕ್ಷರ ಪ್ರೇಮದಿ ಸಲಹಿತು ಸುಜನರನು।।ಪ।।ಹಾಲಾಹಲವನ್ನೇ ಪಾವನ ಮಾಡಿದ। ನೀಲಕಂಠನೇ ಬಲ್ಲವನು। ಅಲಾಪಿಸುತ ಶಿಲೆಯಾಗಿದ್ದ। ಬಾಲೆ ಅಹಲ್ಯೆಯ ಕೇಳೇನು।।1।। ಅಂಜಿಕೆ ಇಲ್ಲದೆ ಗಿರಿ ಹಾರಿದ ಕಪಿ। ಕುಂಜರ ರವಿಸುತ ಬಲ್ಲವನು।। ಎಂಜಲ ಫಲಗಳ ಹರಿಗರ್ಪಿಸಿದ। ಕಂಜಲೋಚನೆಯ ಕೇಳೇನು।।2।। ಕಾಲವರಿತು ಸೇವೆಯ ಮಾಡಿದ। ಲೋಲ ಲಕ್ಷ್ಮಣನೇ ಬಲ್ಲವನು। ಲೋಲ ಶ್ರೀ ವಿಜಯವಿಠ್ಠಲರಾಯನ ಲೀಲೆಯ ಶರಧಿಯ ಕೇಳೇನು।।3।।

ರಾಮನಾಮ ಪಾಯಸಕ್ಕೆ ರಾಗ: ತಿಲಂಗ್-ಆದಿತಾಳ

ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ।।ಪ।। ವಿಠಲನಾಮ ತುಪ್ಪವ ಬೆರೆಸಿ ಬಾಯಿ ಚಪ್ಪರಿಸಿರೊ।।ಅ.ಪ।। ಒಮ್ಮನ ಗೋಧಿಯ ತಂದು ವೈರಾಗ್ಯ ಕಲ್ಲಲಿ ಬೀಸಿ। ಸುಮ್ಮನ ಸಜ್ಜಿಗೆ ತೆಗೆದು ಸಣ್ಣ ಸೇವೆಗೆ ಹೊಸೆದು।।1।। ಹೃದಯವೆಂಬೊ ಪಾತ್ರೆಯೊಳಗೆ ಭಾವವೆಂಬೊ ಎಸರು ಇಟ್ಟು। ಬುದ್ಧಿಯಿಂದ ಪಕ್ವವ ಮಾಡಿ ಹರಿವಾಣದೊಳಗೆ ನೀಡಿ।।2।। ಆನಂದ ಆನಂದವೆಂಬೊ ತೇಗು ಬಂದ ಪರಿಯಲಿ। ಆನಂದಮೂರುತಿ ನಮ್ಮ ಪುರಂದರವಿಠಲನ ನೆನೆಯಿರೊ।।3।।

ರಾಮ ಮಂತ್ರವ ಜಪಿಸೊ ರಾಗ: ಜೋನ್‌ಪುರಿ-ಆದಿತಾಳ

ರಾಮ ಮಂತ್ರವ ಜಪಿಸೊ ಏ ಮನುಜಾ। ರಾಮ ಮಂತ್ರವ ಜಪಿಸೊ।।ಪ।। ಆ ಮಂತ್ರ ಈ ಮಂತ್ರ ನೆಚ್ಚಿ ನೀ ಕೆಡಬೇಡ। ಸೋಮಶೇಖರ ತನ್ನ ಸತಿಗೆ ಪೇಳಿದ ಮಂತ್ರ।।ಅ.ಪ।। ಕುಲಹೀನನಾದರೂ ಕೂಗಿ ಜಪಿಸುವ ಮಂತ್ರ। ಜಲಜಪಾಣಿ ನಿತ್ಯ ಜಪಿಪ ಮಂತ್ರ। ಕಲುಷಪರ್ವತಕಿದು ಕುಲಿಶವಾಗಿಹ ಮಂತ್ರ। ಸುಲಭದಿಂದಲಿ ಮೋಕ್ಷ ಸೂರೆಗೊಂಬುವ ಮಂತ್ರ।।1।। ಸ್ನಾನ ಮೌನಂಗಳಿಗೆ ಸಾಧನದ ಮಂತ್ರ। ಜ್ಞಾನಿಗಳು ಮನದಿ ಧ್ಯಾನಿಪ ಮಂತ್ರ। ಹೀನಗುಣಂಗಳ ಹಿಂಗಿಸುವ ಮಂತ್ರ। ಏನೆಂಬೆ ವಿಭೀಷಣಗೆ ಪಟ್ಟಗಟ್ಟಿದ ಮಂತ್ರ।।2।। ಸಕಲ ವೇದಂಗಳಿಗೆ ಸಾರವೆನಿಪ ಮಂತ್ರ। ಮುಕುತಿ ಮಾರ್ಗಕೆ ಇದೇ ಮೂಲಮಂತ್ರ। ಭಕುತಿರಸಕೆ ಬಟ್ಟೆ ಒಮ್ಮೆ ತೋರುವ ಮಂತ್ರ। ಸುಖನಿಧಿ ಪುರಂದರವಿಠಲನ ಮಹಾ ಮಂತ್ರ।।3।।

ಪಾಹಿ ರಾಮಪ್ರಭೋ ಪಾಹಿ

ಪಾಹಿ ರಾಮಪ್ರಭೋ ಪಾಹಿ ರಾಮಪ್ರಭೋ। ಪಾಹಿ ಭದ್ರಾದ್ರಿ ವೈದೇಹಿ ರಾಮ ಪ್ರಭೋ ।।ಪ।। ಶ್ರೀಮಾನ್ ಮಹಾಗುಣ ಸ್ತೋಮಾಭಿ ರಾಮ। ಮೀ ನಾಮ ಕೀರ್ತನಲು ವರ್ಣಿಂತು ರಾಮಪ್ರಭೋ। ಸುಂದರಾಕಾರ ಮನ್ಮಂದಿರೋದ್ಧಾರ ಸೀತೇಂದಿರಾ। ಸಂಯುತಾನಂದ ರಾಮಪ್ರಭೋ।।1।। ಇಂದಿರಾ ಹೃದಯಾರವಿಂದಾಧಿರೂಢಾ। ಇಂತಿರಾಕಾರ ಸಾನಂದ ರಾಮ ಪ್ರಭೋ। ಎಂದುನೇ ಜೂಡ ಮೀ ಸುಂದರಾನಂದಮುಲ್। ಕಂದುನೋ ಕನ್ನುಲಿಂಪುದ ರಾಮಪ್ರಭೋ।।2।। ಪಾಡುದುನು ಮಿಮ್ಮುಕೊನಿಯಾಡುದುನು ಮೋದಮುನ। ವೇಡುದುನು ನನ್ನು ಕಾಪಾಡು ರಾಮಪ್ರಭೋ। ವೇಡುಕೋಗಾನೇ ನೀ ಜೋಡುಕಾಡುನು ನೀವು ಕೂಡಿ। ರಾರಯ್ಯ ನಾತೋಡ ರಾಮಪ್ರಭೋ।।3।। ನೀದು ಬಾಣಂಬುಲನು ನಾದು ಶತ್ರುಲ ಬಿಟ್ಟು ಬಾಧಿಂಪಕುನ್ನ ವದೇಮಿ ರಾಮ ಆದಿಮಧ್ಯಾಂತ ಬಹಿರಂತರಾತ್ಮುಡ ವನುಚು ವಾದಿಂತು ನೇ ಜಗನ್ನಾಥ ರಾಮ।।4।। ಜ್ಞಾನಯೋಗಾಭ್ಯಾಸ ಮುಲನು ನುಂಡೆಡಿವಾರಿ ಆನಂದಮಯುಂಡ

ವೈನಾವು ರಾಮ ಭಾನುವಂಶಮುಂದು ಮಾನವಾದಿಪುಡವೈ ದಾನವುನಿ ಬರಿಮಾರ್ಚಿನಾವು ರಾಮ॥5॥ ಅಣುರೇಣುಪೂರ್ಣಮೌ ಹೃದಿವಾಸ ನಾಮವನಿ ವಿನು ದೇವ ದೇವಕೀತನಯ ರಾಮ ಮಾನ್ಯಮೈ ಯಶ್ರಿತವದಾನ್ಯಮೈ ಸುಜನ ಸಮ್ಮಾನ್ಯಮೈ ವೆಲುಗು ಮೂರ್ದನ್ಯ ರಾಮ ॥6॥ ಪಾಹಿ ಶ್ರೀರಾಮ ನೀಪಾದ ಪದ್ಮಾಶ್ರಯುಡ ಪಾಲಿಂಪುಮೀ ಭದ್ರಶೈಲ ರಾಮಪ್ರಭೋ ಪಾಹಿ ರಾಮಪ್ರಭೋ ಪಾಹಿ ರಾಮ ಪಾಹಿ ಭದ್ರಾದಿ ವೈದೇಹಿ ರಾಮಪ್ರಭೋ॥7॥

ಕ್ಷೀರಸಾಗರ ವಿಹಾರ — ರಾಗ: ಆನಂದಭೈರವಿ-ಝಂಪೆತಾಳ

ಕ್ಷೀರಸಾಗರ ವಿಹಾರ ಅಪರಿಮಿತ ಘೋರ ಪಾತಕ ವಿದಾರ ಕ್ರೂರ ಜನಗಣ ವಿದೂರ ನಿಗಮ ಸಂಚಾರ ಸುಂದರ ಶರೀರ॥ಪ॥ ಶತಮುಖಾಹಿತ ವಿಭಂಗ ಶ್ರೀರಾಮ ಶಮನರಿಪು ಸನ್ನುತಾಂಗ ಶ್ರೀತಮಾನವಾಂತರಂಗ ಜನಕಜಾ ಶೃಂಗಾರ ಜಲಜ ಭೃಂಗ॥1॥ ರಾಜಾಧಿರಾಜ ವೇಶ ಶ್ರೀರಾಮ ರಮಣೀಯ ಕರ ಸುಭೂಷ ರಾಜನುತ ಲಲಿತ ಭಾಷಾ ಶ್ರೀ ತ್ಯಾಗರಾಜಾಧಿ ಭಕ್ತ ಪೋಷ॥2॥

ಶ್ರೀರಾಮನ ಪೂಜಿಸಲಿಲ್ಲಾ ಮೈ ಮರೆತನಲ್ಲ

ಶ್ರೀರಾಮನ ಪೂಜಿಸಲಿಲ್ಲಾ। ಮೈ ಮರೆತನಲ್ಲ॥ಪ॥ ಬಾಲತ್ವದಲಿ ಬಲು ಲೀಲೆಯಿಂದಲಿ ನಾನು। ಕಾಲವ ಕಳೆದೆನಲ್ಲ। ಮೈ ಮರೆತೆನಲ್ಲ॥1॥ ಸತಿಸುತರೇ ಎನಗೆ ಗತಿ ಎಂತು ತಿಳಿದು ನಾ। ಮತಿಗೆಟ್ಟು ಭ್ರಾಂತನಾದೆನಲ್ಲ ಮೈ॥2॥ ಹೊನ್ನು ಗಳಿಸಿ ನಾನು ಅನ್ನವನಿಕ್ಕಲಿಲ್ಲ। ಚೆನ್ನ ಆದಿಕೇಶವನ ನಂಬಲಿಲ್ಲ ಮೈ॥3॥

❖ ❖ ❖

ಜಗದುದ್ಧಾರನ ಆಡಿಸಿದಳೆಶೋದೆ — ರಾಗ: ಹಿಂದೂಸ್ಥಾನಿಕಾಪಿ-ಆದಿತಾಳ

ಜಗದುದ್ದಾರನ ಆಡಿಸಿದಳೆಶೋದೆ॥ಪ॥ ಜಗದುದ್ದಾರನ ಮಗನೆಂದು ತಿಳಿಯುತ। ಸುಗುಣಾಂತ ರಂಗನ ಆಡಿಸಿದಳೆಶೋದೆ ॥ಅ.ಪ॥ ನಿಗಮಕೆ ಸಿಲುಕದ ಅಗಣಿತ ಮಹಿಮನ। ಮಗುಗಳ ಮಾಣಿಕ್ಯನ ಆಡಿಸಿದಳೆಶೋದೆ ॥1॥ ಅಣೋರಣೀಯನ ಮಹತೋಮಹೀಯನ। ಅಪ್ರಮೇಯನ ಆಡಿಸಿದಳೆಶೋದೆ॥2॥ ಪರಮಪುರುಷನ ಪರವಾಸುದೇವನ। ಪುರಂದರ ವಿಠಲನ ಆಡಿಸಿದಳೆ ಶೋದೆ॥3॥

ಎಂದು ಕಾಂಬೆನೊ ನಂದಗೋಪನ

ಎಂದು ಕಾಂಬೆನೊ ನಂದಗೋಪನ ಕಂದ ಶ್ರೀ ಗೋವಿಂದನ। ಮಂದರಾಚಲಧರ ಯದುಕುಲ ಚಂದ್ರ ಗುಣಗಣಸಾಂದ್ರನ॥ಪ॥ ವಿಜಯಸೂತನ ವಿಶ್ವಪಾಲನ ಭುಜಗವರ ಪರ್ಯಂಕನ। ರಜನಿಚರರಳಿದ ಜನಕನ ತ್ರಿಜಗಪತಿ ದ್ವಿಜಗಮನನ॥1॥ ಪಾಲ ದಧಿ ನವನೀತ ಚೋರನ ಬಾಲಕೃಷ್ಣ ಗೋಪಾಲನ। ಶೈಲಬೆರಳಲಿ ತಾಳಿ ಗೋಕುಲಪಾಲಿಸಿದ ಪರಮಾತ್ಮನ॥2॥ ಭಾಮೆರುಕ್ಮಿಣಿ ರಮಣ ರಂಗನ ಸಾಮಗಾನವಿಲೋಲನ। ಶ್ರೀಮದಾನಂದ ಮುನಿ ಕರಾರ್ಚಿತ ಶ್ಯಾಮಸುಂದರವಿಠಲನ॥3॥

ಎಂದು ಕಾಂಬೆನೋ ಎನ್ನ ಸಲಹುವ — ರಾಗ: ಶ್ರೀರಾಗ-ತ್ರಿಪುಟ

ಎಂದು ಕಾಂಬೆನೋ ಎನ್ನ ಸಲಹುವ। ತಂದೆ ಉಡುಪಿಯ ಜಾಣನ। ಮಂದಹಾಸ ಪ್ರವೀಣನಾ। ಇಂದಿರಾ ಭೂರಮಣನಾ॥ಪ॥ ಕಡಲ ದಡದೊಳು ಎಸೆವರಂಗನ। ಕಡಗೋಲ್ನೇಣನು ಪಿಡಿದನ। ಮೃಡ ಪುರಂದರೊಡೆಯನ। ಈರಡಿಗಳಲಿ ಶಿರವಿಡುವೆನಾ॥1॥ ದೇವಕಿಯ ಜಠರದಲಿ ಬಂದನ। ಆವ ಪಳ್ಳಿಲಿ ನಿಂದನಾ। ಮಾವ ಕಂಸನ ಕೊಂದನಾ। ಕಾವನಯ್ಯ ಮುಕುಂದನಾ॥2॥ ಪೂರ್ಣಪ್ರಜ್ಞರಿಗೊಲಿದು ದ್ವಾರಕೆ। ಮಣ್ಣಿನೊಳು ಪ್ರಕಟಿಸಿದನಾ। ಭವಾರ್ಣವಕೆ ಪ್ಲವನಾದನ ಪ್ರಸನ್ನ ವೆಂಕಟ ಕೃಷ್ಣನಾ॥3॥

ಇಂದು ಎನಗೆ ಗೋವಿಂದ **ರಾಗ: ಭೈರವಿ-ತ್ರಿಪುಟತಾಳ**

ಇಂದು ಎನಗೆ ಗೋವಿಂದ। ನಿನ್ನಯ ಪಾದಾರವಿಂದವ। ತೋರೋ ಮುಕುಂದನೆ॥ಪ॥ ಸುಂದರ ವದನನೇ ನಂದಗೋಪನ ಕಂದ। ಮಂದರೋದ್ಧಾರ ಆನಂದ ಇಂದಿರಾರಮಣ॥ಅ.ಪ.॥ ನೊಂದೆನಯ್ಯ ಭವಬಂಧನದೊಳು ಸಿಲುಕಿ। ಮುಂದೆ ದಾರಿಕಾಣದೆ ಕುಂದಿದೆ ಜಗದೊಳು ॥ಕಂದನು ಎಂದೆನ್ನ ಕುಂದುಗಳೆಣಿಸದೆ। ತಂದೆ ಕಾಯೋ ಕೃಷ್ಣ। ಕಂದರ್ಪಜನಕನೆ ॥1॥ ಮೂಢತನದಿ ಬಹು ಹೇಡಿ ಜೀವ ನಾನಾಗಿ। ದೃಢಭಕುತಿಯನು ಮಾಡಲಿಲ್ಲವೋ ಹರಿಯೇ॥ ನೋಡಲಿಲ್ಲವೋ ನಿನ್ನ ಪಾಡಲಿಲ್ಲವೋ। ಮಹಿಮೆ ಗಾರುಡಿಗಾರ। ಕೃಷ್ಣ ಬೇಡಿಕೊಂಬೆನೋ ನಿನ್ನ॥2॥ ಧಾರುಣಿಯೊಳು ಭೂಭಾರ। ಜೀವ ನಾನಾಗಿ ದಾರಿತಪ್ಪಿ ನಡೆದೆ ಸೇರಿದೆ ಕುಜನರ॥ ಆರೂ ಕಾಯುವರಿಲ್ಲ। ಸಾರಿದೆ ನಿನಗಯ್ಯಾ। ಧೀರ ವೇಣುಗೋಪಾಲ ಪಾರುಗಾಣಿಸೋ ಹರಿಯೇ॥3॥

ಓಡಿ ಓಡಿ ಬಾ

ಓಡಿ ಓಡಿ ಬಾ। ಅಂಕದೊಳಾಡುವಕೂಸೇ ಬಾ। ನೋಡುವೆ ನಿನ್ನಯ ಮುಖವನು ರಾಮನ। ಕೂಡಿ ಕರುಣಿ ಬಾ॥ಪ॥ ಚೆಂಡನು ಕೊಡುವೆ ಬಾ। ಗೋಲಿ ಗುಂಡನು ಕೊಡುವೆನು ಬಾ। ದುಂಡು ಕರದಲಿ ಗುಂಡು ಬಿಂದುಲಿ ಉಂಗುರನಿಡಿಸುವೆ ಬಾ॥1॥ ಚಿಣ್ಣಿ ಕೊಡುವೆನು ಬಾ। ಬಾಳೆ ಹಣ್ಣನು ಕೊಡುವೆ ಬಾ। ಸಣ್ಣ ಸಣ್ಣ ಹೆಜ್ಜೆಯನಿಕ್ಕುತ। ಮನ್ಮಥ ಪಿತನೆ ಬಾ॥2॥ ನಾರೀವತ್ಸ ಬಾ। ಮುತ್ತಿನ ಹಾರವನ್ಹಾಕುವೆ ಬಾ। ಪಾರಿಜಾತ ಮುಡಿಸಿದ ರುಕ್ಮಿಣಿ ವೀರ ಕೃಷ್ಣನೇ ಬಾ॥3॥ ಮುರಳಿ ಧರನೆ ಬಾ। ಮುಂಗುರುಳ ಭೂಷಿತ ಬಾ। ಪರಿಪರಿ ವಸ್ತ್ರಗಳಿಟ್ಟು ನೋಡುವೆ। ಮರುಳು ಮಗುವೆಬಾ॥4॥ ನಂದ ಸುತನೆ ಬಾ। ಮನಕಾನಂದ ಬಡಿಸು ಬಾ। ನಿಂದಿರಲಾರೆನೊ ನಿನ್ನ ತೊರೆದು। ಇಂದಿರೇಶನೆ ಬಾ॥5॥

ಯಾದವ ನೀ ಬಾ **ರಾಗ: ಷಣ್ಮುಖಪ್ರಿಯ-ಆದಿತಾಳ**

ಯಾದವ ನೀ ಬಾ ಯದುಕುಲನಂದನ। ಮಾಧವ ಮಧುಸೂದನ ಬಾರೊ॥ಪ॥ ಸೋದರಮಾವನ ಮಧುರೆಲಿ ಮಡುಹಿದ। ಯಶೋದೆ ನಂದನ ನೀ ಬಾರೊ॥ಅ.ಪ.॥ ಕಣಕಾಲಂದಿಗೆ ಘಲುಘಲುರೆನುತಲಿ। ಝುಣಝುಣ ವೇಣುನಾದದಲಿ॥ ಚಿಣಿಕೋಲ್ ಚೆಂಡು ಬುಗರಿಯನಾಡುತ। ಸಣ್ಣ ಸಣ್ಣ ಗೋವಳರೊಡಗೂಡಿ॥1॥ ಶಂಖಚಕ್ರವು ಕೈಯಲಿ ಹೊಳೆಯುತ। ಬಿಂಕದ ಗೋವಳ ನೀ ಬಾರೋ। ಅಕಳಂಕಚರಿತನೆ ಆದಿನಾರಾಯಣ। ಬೇಕೆಂಬ ಭಕ್ತರಿಗೊಲಿ ಬಾರೊ॥2॥ ಖಗವಾಹನನೆ ಬಗೆಬಗೆಯಿಂದಲಿ। ನಗೆಮೊಗದರಸನೆ ನೀ ಬಾರೊ। ಜಗದೊಳು ನಿನ್ನಯ ಮಹಿಮೆಯ ಪೊಗಳುವೆ। ಪುರಂದರವಿಠ್ಠಲ ನೀ ಬಾರೊ॥3॥

ಕೃಷ್ಣಮೂರ್ತಿ ಕಣ್ಣ ಮುಂದೆ **ರಾಗ: ಕಾಂಬೋಧಿ-ಆದಿತಾಳ**

ಕೃಷ್ಣಮೂರ್ತಿ ಕಣ್ಣ ಮುಂದೆ ನಿಂತಿದ್ದಂತಿದೆ॥ಪ॥ ಕಷ್ಟಗಳೆಲ್ಲವ ಪರಿಹರಿಸಿ ಮನ। ದಿಷ್ಟಾರ್ಥಗಳನ್ನೆಲ್ಲ ಕೊಟ್ಟು ರಕ್ಷಿಸುವಂಥ॥ಅ.ಪ.॥ ಮಸ್ತಕದಲಿ ಮಾಣಿಕದ ಕಿರೀಟ। ಕಸ್ತೂರಿ ತಿಲಕದಿ ಹೊಳೆವ ಲಲಾಟ॥ ಶಿಸ್ತಲಿ ಕೊಳಲನೂದುವ ಓರೆನೋಟ। ಕೌಸ್ತುಭ ಎಡಬಲದಲ್ಲಿ ಓಲಾಟ॥1॥ ಮಘಮಘಿಸುವ ಸೊಬಗಿನ ಸುಳಿಗುರುಳು। ಚಿಗುರು ತುಳಸಿ ವನಮಾಲೆಯ ಕೊರಳು॥ ಬಗೆಬಗೆ ಹೊನ್ನುಂಗುರವಿಟ್ಟ ಬೆರಳು। ಸೊಬಗಿನ ನಾಭಿಯ ತಾವರೆಯರಳು॥2॥ ಉಡುದಾರ ವಡ್ಯಾಣ ಸಕಲಾಭರಣ। ಬೆಡಗು ಪೀತಾಂಬರ ಶತರವಿ ಕಿರಣ॥ ಕಡಗ ಗಗ್ಗರ ಪೆಂಡೆಯನಿಟ್ಟ ಚರಣ। ಒಡೆಯ ಪುರಂದರವಿಠಲನ ಕರುಣ॥3॥

ಕೃಷ್ಣನ ನೋಡಿದೇ ಸರ್ವೋತ   ಷ್ಟನ ಪಾಡಿದೆ **ರಾಗ: ಮಧ್ಯಮಾವತಿ**

ಕೃಷ್ಣನ ನೋಡಿದೇ ಸರ್ವೋತ್ಕೃಷ್ಟನ ಪಾಡಿದೆ॥ಪ॥ ಕೃಷ್ಣನ ನೋಡಿ ಸಾಷ್ಟಾಂಗವ ಮಾಡಿದೆ। ಕಷ್ಟವ ಪರಿಹರಿಸೀಷ್ಟವ ನೀವನ ॥ಅ.ಪ॥ ಶಿಷ್ಟನ ನೋಡಿದೆ ವರ ನಿರ್ದುಷ್ಟನ ನೋಡಿದೆ। ಹೃಷ್ಟಿ ಪುಷ್ಟಿ ಸಂತುಷ್ಟನ ಶ್ರೇಷ್ಠನ। ಶಿಷ್ಟರ ಕಷ್ಟವ ಪರಿಹರಿಸಿಷ್ಟವನೀವನ॥1॥ ರಂಗನ ನೋಡಿದೆ ದೇವೋತ್ತುಂಗನ ನೋಡಿದೆ। ಅಂಗಸಿಂಗ ಕಾಳಿಂಗಮರ್ದನನ। ಮಂಗಳಾಂಗ ಭವಭಂಗನ ನೋಡಿದೆ॥2॥ ಜಾಣನ ನೋಡಿದೆ ಬಲು ವಿನೋದನ ನೋಡಿದೆ। ಗುಣಗಣ ಅಗಣಿತ ಪ್ರಾಣರ ಪ್ರಾಣನ। ವೇಣುಗೋಪಾಲ ವಿಠ್ಠಲ ಕಲ್ಯಾಣನ॥3॥

ನೋಡಿದೆನೋ ಕೊಂಡಾಡಿದೆನೋ

ನೋಡಿದೆನೋ ಕೊಂಡಾಡಿದೆನೋ॥ಪ॥ ಜೋಡಿಸಿ ಕರಗಳ ಬೇಡಿದೆ ಕೃಷ್ಣನ॥ಅ.ಪ.॥ ಮೂಡಲು ಸೂರ್ಯನು ಹಿಮದ ಕಣಗಳಂತೆ। ಓಡಿತು ಮೋಹವು ಕೂಡಿತು ಧೈರ್ಯವು। ನೋಡಲು ಕೃಷ್ಣನ ಮಂಗಳ ಮೂರ್ತಿಯ। ಈಡೇರಿತು ಮನದಾಸೆಯು ಕೃಷ್ಣನ॥1॥ ಕಳೆಯಿತು ದುರಿತವು ಬೆಳೆಯಿತು ಸುಕೃತವು। ಸೆಳೆದನು ಮನವ ತನ್ನಡಿಗಳಲಿ। ಬಳಿಯಲಿ ರುಕ್ಮಿಣೀ ಭಾಮೆಯರೊಡಗೂಡಿ। ಕೊಳಲೂದುವ ಮಂಗಳಕರ ದೃಶ್ಯವ॥2॥ ಉಕ್ಕಿತು ಹರುಷವು ಪರಮ ದರುಶನದಿ। ನಕ್ಕನು ನೋಡುತ ಕರುಣಾಪಾಂಗದಿ। ಭಕ್ತ ಪ್ರಸನ್ನನು ತಕ್ಕವನೆಂದೆನ್ನ। ಅಕ್ಕರೆಯಿಂದಲಿ ಕರೆಯುವಂತಿರುವುದು॥3॥

ಸ್ಮರ ಕೃಷ್ಣಂ ಭಜ ಹರಿಂ ನಮ

ಸ್ಮರ ಕೃಷ್ಣಂ ಭಜ ಹರಿಂ ನಮ ವಿಷ್ಣುಂಶ್ರಯಾಚ್ಯುತಂ। ತ್ಯಜಕಾಮಂ ಜಹಿ ಕ್ರೋಧಂ ಜಹಿ ಮೋಹಂ ಭವಾಲಯಂ॥ ಶೃಣು ಶೌರಿಕಥಾಃ ಪುಣ್ಯಾಃ ಪಶ್ಯ ಶ್ರೀಪತಿವಿಗ್ರಹಮ್। ಜಿಘ್ರ ಶ್ರೀಪಾದ ತುಲಸೀಃ ಸ್ಪೃಶ ವೈಕುಂಠವಲ್ಲಭಮ್। ಭುಂಕ್ಷ್ವ ಕೇಶವ ನೈವೇದ್ಯಂ ತಿಷ್ಠ ಮಾಧವ ಮಂದಿರೇ। ಜಪ ನಾರಾಯಣಮನುಂ ಪಠ ತನ್ನಮ ಮಂಗಲಂ। ಪಾಹಿ ಪ್ರಪನ್ನ ಜನತಾಂ ಬ್ರೂಹಿ ತಥ್ಯಂ ಹಿತಂ ನೃಣಾಂ। ದೇಹಿಕಾಂಕ್ಷಿತಮರ್ಥಿಭ್ಯೋ ಯಾಹಿ ಸಜ್ಜನಸಂಗತಿಮ್। ಕುರು ಭೂತದಯಾಂ ನಿತ್ಯಂ ಚರ ಧರ್ಮಮಹರ್ನಿಶಮ್। ಜಾನೀಹಿ ನಿತ್ಯಮಾತ್ಮಾನಂ ಅವೇಹ್ಯನ್ನದ್ದಿನಶ್ವರಮ್। ಪಂಚಶ್ಲೋಕೀಮಿಮಾಂ ಶಶ್ವತ್ ಪಠ ಧಾರಯ ಚಿಂತಯ। ಏತಾವಾನ್ ಸರ್ವವೇದಾರ್ಥಃ ಸಮಾಸೇನ ನಿರೂಪಿತಃ। ನಾಸ್ತಿ ನಾರಾಯಣ ಸಮಂನ ಭೂತಂ ನಭವಿಷ್ಯತಿ। ಏತೇನ ಸತ್ಯವಾಕ್ಯೇನ ಸರ್ವಾರ್ಥಾನ್ ಸಾಧಯಾಮ್ಯಹಮ್॥

ರಂಗ ಕುಣಿದ ವ್ಯಾಸರಾಜರೆದುರಿನಲಿ

ರಂಗ ಕುಣಿದ ವ್ಯಾಸರಾಜರೆದುರಿನಲಿ। ಶೃಂಗಾರದಾಭರಣ ಇಟ್ಟ ಗೋವಿಂದ॥ಪ॥ ಅಂದುಶ್ರೀಪಾದರಾಜರು ಶಿಷ್ಯಗೆ। ಚಂದದಿಂದಲಿ ಪೇಳಿ ಹರಿ ಪೂಜೆಗೆ॥ ಸುಂದರ ಸಂಪುಟದಿ ಅಡಗಿದ ಮಾಧವನ। ಮಂದಹಾಸದಿ ತೆರೆಯೆ ನಂದಗೋಪನ ಸುತನು॥1॥ ದುಂಡು ಸಂಪುಟದಿ ಹೊರಬಂದಹರಿಯನ್ನು। ಕಂಡು ಸಂತಸದಿಂದ ಕೀರ್ತನೆಯ ಮಾಡೆ। ಬಂದು ನೋಡಿದ ಗುರುವು ಅದ್ಭುತವನೇ ಕಂಡು। ಒಂದೇ ಮನದಲಿ ಹರಸಿ ಬೆರಗಾಗಲು॥2॥ ಹರಿಕರುಣ ನಿನಗಿಹುದು ವರಯತಿಯ ಕೇಳೆಂದು। ಪರಮ ಸಂತೋಷದಲಿ ಹರಸುತಾ। ಗುರುಶಾಮಸುಂದರನ ದರುಶನವ ಮಾಡಿಸಿದ। ನಿರುತ ಹೊಗಳುತ ನಿಂದ ಶ್ರೀಪಾದಯತಿ॥3॥

ಸಂಬಳಕೆ ಇಟ್ಟುಕೊಳ್ಳೋ ಕೃಷ್ಣಾ

ಸಂಬಳಕೆ ಇಟ್ಟುಕೊಳ್ಳೋ ಕೃಷ್ಣಾ ಕೃಪಾಳೋ॥ಪ॥ ಸಂಬಳಕೆ ಇಟ್ಟುಕೋ ನಿನ್ನಂಬಲದಲ್ಲಿರ। ಬೇಕೆಂಬುದೇ ಎನಗೆ ತುಂಬಿ ತುಳುಕುತಿದೆ॥ಅ.ಪ.॥ ಅರೆಕವಡಿ ಒಲ್ಲೆ ಸಂಬಂಳ। ನಿನ್ನೆಸರ್ ಹೇಳಿ ಮಾಡುವೆ ಗೋಪಾಳ। ಪರಟೆ ತಂಬೂರಿ ಹಿಡಿದು ತಿರಿದುಂಡುಕೊಂಡು ಬಂದು। ಕರೆದಾ ಕೆಲಸಕ್ಕೆ ಸಿದ್ದನಾಗುವೆ ಈಕ್ಷಣ॥1॥ ಮಧ್ವರಾಯರ ಮನೆಯೊಳು। ಅನುಗಾಲ ಇದ್ದೇ ಕೇಳಿಕೋ ಗುಣಗಳ। ಪ್ರದ್ಯುಮ್ನ ಇವು ನಿನ್ನ ಬುದ್ಧಿಗೆ ಬಂದರೆ। ಇದ್ದರೆ ಇರಲಿ ಎಂದು ಇಟ್ಟರೆ ಈ

ಕ್ಷಣ॥2॥ ಬಲು ಮಂದಿನ್ ನಾ ನೋಡಿದೆ। ನಿನ್ನಂಥವರ ಎಲ್ಲಿ ನಾ ನೋಡಲಿಲ್ಲ। ಲೋಲ ಶ್ರೀ ವೇಣುಗೋಪಾಲ ವಿಠ್ಠಲ ನಿನ್ನ। ತೂಲಿ ಬಂದಾಗ್ಯೂ ರಾಜ್ಯವಾಳಿದಂತೆ॥3॥

ಮನೇ ಚಾಕರ್ ರಾಖೋ ಜೀ

ಮನೇ ಚಾಕರ್ ರಾಖೋ ಜಿ॥ ಚಾಕರ ರಹಸೂ ಬಾಗಲ ಗಾಸೂ। ನೀತ ಉರಠೀ ದರಶನ ಪಾಸೂ। ಬೃಂದಾವನ ಕಿ ಕುಂಜಗಲೀನ ಮೈ। ತೇರಿ ಲೀಲಾ ಗಾಸೂ॥ಮನೆ ಚಾಕರ॥ ಹರೇಹರೇ ಸಬ್ ವನ್ನ ಬನಾಯೇ। ಬಿಚ್ ಬಿಚ್ ರಾಖೋ ಬಾರೀ। ಸಾವಲಿಯಾಕೇ ದರ್ಶನ ಪಾಸೂ। ಪಹನ ಕುಸುಮ್ಮೀ ಸಾರೀ॥ಮನ್ ಚಾಕರ್॥ ಯೋಗೀ ಆಯಾ ಯೋಗ ಕರನ ಕೋ। ತಪಕರನೇ ಸನ್ಯಾಸೀ। ಹರೀ ಭಜನ್ ಕೋ ಸಾಧೂ ಆಯಾ। ಬೃಂದಾವನ ಕೇ ವಾಸಿ॥ಮನೆ ಚಾಕರ್॥ ಮೀರಾಕೇ ಪ್ರಭು ಗಾಹಿರ ಗಂಭೀರಾ। ಹೃದಯರಹೋ ಜೀ ಧೀರಾ। ಆಧೀರಾತ್ ಪ್ರಭುದರ್ಶನ ದೇಹ್ಯೆ। ಪ್ರೇಮ ನದೀಕೆ ತೀರಾ॥ಮನ್ ಚಾಕರ್॥

ಕೃಷ್ಣ ಎನಬಾರದೆ ಕೃಷ್ಣನ್ನ — ರಾಗ: ಖರಹರಪ್ರಿಯ-ಆದಿತಾಳ

ಕೃಷ್ಣ ಎನಬಾರದೆ। ಕೃಷ್ಣನ್ನ ನೆನೆದರೆ ಕಷ್ಟ ಒಂದಿಷ್ಟಿಲ್ಲ॥ಪ॥ ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣ ಎನಬಾರದೆ॥ಅ.ಪ.॥ ಮಲಗಿದ್ದು ಮೈ ಮುರಿದೇಳುತ್ತಲೊಮ್ಮೆ ಕೃಷ್ಣ ಎನಬಾರದೆ। ಸುಳಿದಾಡುತ ಮನೆಯೊಳಗಾದರು ಒಮ್ಮೆ ಕೃಷ್ಣ ಎನಬಾರದೆ॥1॥ ಸ್ನಾನ ಪಾನ ಜಪ ತಪಗಳ ಮಾಡುತ ಕೃಷ್ಣ ಎನಬಾರದೆ। ಶಾಲ್ಯಾನ್ನ ಷಡುರಸ ತಿಂದು ತೃಪ್ತನಾಗಿ ಕೃಷ್ಣ ಎನಬಾರದೆ॥2॥ ಗಂಧವ ಪೂಸಿ ತಾಂಬೂಲವ ಮೆಲುವಾಗ ಕೃಷ್ಣ ಎನಬಾರದೆ। ಚಂದುಳ್ಳ ಹಾಸಿಗೆಯೊಳು ಕುಳಿತೊಮ್ಮೆ ಕೃಷ್ಣ ಎನಬಾರದೆ॥3॥ ಕಂದನ್ನ ಬಿಗಿ ಬಿಗಿದಪ್ಪಿ ಮುದ್ದಾಡುತ ಕೃಷ್ಣ ಎನಬಾರದೆ। ಮಂದಗಾಮಿನಿಯೊಳು ಸರಸವಾಡುತಲೊಮ್ಮೆ ಕೃಷ್ಣ ಎನಬಾರದೆ॥4॥ ಮೇರೆ ತಪ್ಪಿ ಮಾತನಾಡುವಾಗಲೊಮ್ಮೆ ಕೃಷ್ಣ ಎನಬಾರದೆ॥ ದಾರಿಯ ನಡೆವಾಗ ಭಾರವ ಹೊರುವಾಗ ಕೃಷ್ಣ ಎನಬಾರದೆ॥5॥ ಪರಿಹಾಸ್ಯದ ಮಾತನಾಡುತಲೊಮ್ಮೆ ಕೃಷ್ಣ ಎನಬಾರದೆ॥ ಪರಿಪರಿ ಕೆಲಸದೊಳೊಂದು ಕೆಲಸವೆಂದು ಕೃಷ್ಣ ಎನಬಾರದೆ॥6॥ ದುರಿತ ರಾಶಿಗಳನು ತರಿದು ಬಿಸಾಡುವ ಕೃಷ್ಣ ಎನಬಾರದೆ॥ ಗರುಡಗಮನ ನಮ್ಮ ಪುರಂದರವಿಠಲನ ಕೃಷ್ಣ ಎನಬಾರದೆ॥7॥

ನಿನ್ನನಗಲಿ ಪೋಗಲಾರೆವೋ ನೀರಜಾಕ್ಷ

ನಿನ್ನನಗಲಿ ಪೋಗಲಾರೆವೋ ನೀರಜಾಕ್ಷ। ನಿನ್ನ ಸೇರಿ ಸುಖಿಸ ಬಂದೆವೋ॥ಪ॥ ಮನ್ನಿಸದೆ ಮಮತೆಯಿಂದ। ಭಿನ್ನನುಡಿಗಳಾಡಿ ಎಮಗೆ। ಹಣ್ಣು ತೋರಿ ಕಾಳಕೂಟವನ್ನು ಕೊಡುವರೇನೊ ಸ್ವಾಮಿ॥ಅ.ಪ.॥ ಐದುವದಕೆ ಶಕ್ಯವಲ್ಲದ ಆದಿ ಪುರುಷ। ಅಪ್ರಮೇಯ ಆದಿಮಾನದ। ಶ್ರೀದ ನಮ್ಮ ಕೈಯ ಬಿಡದೆ। ಆದರಿಸಬೇಕೋ ಪೊರೆವ।ರಾದರೇನು ನಿಮಗೆ ಶರಣಾರಾದ ಮೇಲೆ ಬಿಡುವುದುಂಟೆ॥1॥ ಮೋಕ್ಷ ಇಚ್ಛೆಯಿಂದ ನಿನ್ನನು। ಭಜಿಪ ಜನರ ಪಕ್ಷ ವಹಿಸಿದಂತೆ ಎನ್ನನು। ರಕ್ಷಿಸದೆ ಬಿಡುವರೇ ಕಟಾಕ್ಷದಿಂದ ವೀಕ್ಷಿಸದೆ। ಲಕ್ಷ್ಮೀದೇವಿ ನಿನಗೆ ಬಹಳ ಅಪೇಕ್ಷೆಯಿಂದ ಮೋಹಿಸಿದಳೋ॥2॥ ಅನಘಾ ನಿನ್ನ ನೋಡಿ ಮೋಹಿಸಿ। ಅಂತರಾತ್ಮ ತನು ಮನವ ನಿನಗೆ ಒಪ್ಪಿಸಿ। ಜನನ ಮರಣದಿಂದ ಜನರ ದಣಿಪರೇನೋ ಕಾಂತ ನಮ್ಮ। ಮನಸಿನಂತೆ ಒಲಿದು ಸಲಹೋ ವನಜನಾಭ ವಿಜಯವಿಠ್ಠಲ॥3॥

ನೆನೆವೆನನುದಿನ ನೀಲನೀರದ ವರ್ಣನ (ಲಾಲಿ)

ನೆನೆವೆನನುದಿನ ನೀಲನೀರದ ವರ್ಣನ ಗುಣರನ್ನನ॥ಪ॥ ಮುನಿಜನಪ್ರಿಯ ಮುದ್ದು ಉಡುಪಿಯ ರಂಗನ ದಯಾಪಾಂಗನ॥ಅ.ಪ.॥ ದೇವಕಿ ಜಠರಉದಯಂಬುಧಿಕ ಚಂದ್ರನ ಗುಣಸಾಂದ್ರನ। ಗೋವ್ರಜಕೆ ಘನ ಯಮುನೆ ದಾಟಿ ಬಂದನ ಅಲ್ಲಿ ನಿಂದನ। ಮಾವ ಕಳುಹಿದ ಮಾಯಾ ಶಟವಿಯ ಕೊಂದನ। ಚಿದಾನಂದನ। ದೇವರಿಪು ದೈತ್ಯೇಂದ್ರ

ಶಕಟನ ಒದ್ದನ ಶೃತಿಸಿದ್ಧನ॥1॥ ಗೋಕುಲದ ಗೋಪಿಯರ ವಂಚಕ ಚೋರನ ಬಹು ಧೀರನ। ಅನೇಕ ನಾರಿಯರ ವಸನವನು ಕದ್ದೊಯ್ದನ ತುರುಗಾಯ್ದನ। ನಾಲಿಧೇನುಕವತ್ಸ ವಿಘಾತನ ವಿಖ್ಯಾತನ। ಕಾಕುಮತಿ ಕಾಳಿಂಗನ ಫಣ ತುಳಿದನ ಅವಗೊಲಿದನ॥2॥ ಶೈಲವನು ಅಹಿಶಯನ ಬೆರಳಲಿ ಆಂತನ ಬಲವಂತನ। ಸೋಳಾಸಾಸಿರ ಬಾಲೆಯರ ಕರ ಪಿಡಿದನ ಸುಧೆಗುಡಿದನ। ಬಾಲೆ ಭಾಮೆಯರೊಡನೆ ಜಲಕ್ರೀಡೆಗಿಳಿದನ ಅಲ್ಲಿ ನಲಿದನ। ಲೀಲೆಯಲಿ ಲಲನೆಯರಿಗಿಷ್ಟವ ಕೊಟ್ಟನ ಸಂತುಷ್ಟನ॥3॥ ಕ್ರೂರ ಬಕ ಕೇಶಿಗಳನೆಲ್ಲ ಸೀಳ್ದನ ಸುರನಾಳ್ದನ। ಅಕ್ರೂರ ಕರೆಯಲಿ ಹರುಷದಿಂದಲಿ ಬಂದನ ಸುರವಂದ್ಯನ। ನಾರಿ ಕುಬುಜೆಗೆ ಭೂರಿ ಸಂತಸವಿತ್ತನ ಅತಿ ಶಕ್ತನ। ವಾರಣವನು ಕೆಡಹಿದ ಪ್ರತಿಮಲ್ಲನ ಅತಿ ಚೆಲ್ವನ॥4॥ ಸುಲಭದಿಂದಲಿ ಶಿವನ ಧನುವ ಮುರಿದನ ನೆರೆಮೆರೆದನ। ಮಲೆತ ಮಲ್ಲರ ಕೆಡಹಿ ರಂಗದಿ ನಿಂತನ ಜಯವಂತನ। ಖಳಕುಲಾಗ್ರಣಿ ಕಂಸನೆಂಬನ ಹೊಡೆದನ ಹಿಡಿಗೆಡೆದನ ಬಲದಿ ತಾಯ್ತಂದೆಯರ ಬಂಧನ ಕಡಿದನ ಯಶ ಪಡೆದನ॥5॥ ಭುವನ ಪಟ್ಟವನುಗ್ರಸೇನಗೆ ಕೊಟ್ಟನ ಅತಿ ಶ್ರೇಷ್ಠನ। ಯುವತಿಯರಿಗುದ್ಧವನ ಕಳುಹಿದ ಜಾಣನ ಸುಪ್ರವೀಣನ। ವಿವಿಧ ವಿದ್ಯಾಕಲೆಗಳೆಲ್ಲವನರಿತನ ಶುಭಚರಿತನ। ಜವನ ಶಿಕ್ಷಿಸಿ ದ್ವಿಜನ ಕಂದನ ತಂದನ ಆನಂದನ॥6॥ ಕುಮತಿ ಖಳ ಮಾಗಧನ ಯುದ್ಧದಿ ಗೆದ್ದನ ಅನವದ್ಯನ। ದ್ಯುಮಣಿ ಸಮ ದ್ವಾರಕೆಯ ರಚಿಸಿದುದಾರನ ಗಂಭೀರನ। ಸುಮತಿ ಮುಚಕುಂದನೊದ್ದ ಯವನನ ಸುಟ್ಟನ ಅತಿ ದಿಟ್ಟನ। ವಿಮಲ ಸುಚರತ್ರನಾ ಮಹಿಷೆಯರಾಳ್ದನ ನೆರೆ ಬಾಳ್ದನ॥7॥ ಮುರನರಕ ಮುಖ್ಯರನು ಚಕ್ರದಿ ತರಿದನ ಕರಿವರದನ। ಸುರತರುವ ಸತಿಗಾಗಿ ತಂದ ಸಮರ್ಥನ ಜಗತ್ಕರ್ತನ। ದುರುಳ ಶಿಶುಪಾಲಾದಿ ದೈತ್ಯ ಸಂಹಾರನ ಬಹುಶೂರನ। ಕುರುಕುಲಕೆ ಲಯವಿತ್ತ ಪಾಂಡವ ಪ್ರೀಯನ ಕವಿಗೇಯನ॥8॥ ಇಂತು ಸಲಹುವ ಇಳೆಸುಜನರನ ಕಾಂತನ ಸಿರಿವಂತನ। ಪಂಥವುಳ್ಳ ಪ್ರಸನ್ನ ಹಯವದನನ್ನನ ಮುನಿಮಾನ್ಯನ। ಸಂತಸದೊಳಿಸಾರಕಥೆಯನು ಕೇಳ್ದರ ನೆರೆ ಬಾಳ್ವರ। ಕಂತುಪಿತ ಕಾರುಣ್ಯದಿಂದಲಿ ಪೊರೆವನು ಸುಖಗರೆವನು॥9॥

ವಟಪತ್ರದೆಲೆ ಮೇಲೆ ಶಿಶುವಾಗಿ ಮಲಗಿ

ವಟಪತ್ರದೆಲೆ ಮೇಲೆ ಶಿಶುವಾಗಿ ಮಲಗಿ। ಉಂಗುಷ್ಟ ಬಾಯಿಯೊಳಗಿಟ್ಟು ಚಪ್ಪರಿಸಿ। ಜಠರದೊಳು ಸರ್ವಲೋಕ ಇಂಬಿಟ್ಟು। ವಟಪತ್ರದಲಿ ಯೋಗ ನಿದ್ರೆಮಾಡಿದನು ಜೋಜೋ॥1॥ ಕೆಲವು ದಿವಸ ಯೋಗ ನಿದ್ರೆಯೊಳಗಿದ್ದು। ಇಳೆಯ ಸೃಷ್ಟಿಪೆನೆಂದು ತಿಳಿದು ಯೋಚಿಸಲು। ಲಲನೆ ಲಕುಮಿ ದೇವಿಯ ಸ್ತುತಿ ಕೇಳಿದಾಕ್ಷಣ। ಜಲಜನಾಭಿಯಿಂದ ಸುತನ ಪಡೆದನು॥ ಜೋಜೋ॥ ॥2॥ ಕ್ಷೋಣಿಭಾರವನೆಲ್ಲ ಇಳಿಯಲವತರಿಸಿ ಪ್ರಾಣಿಮಾತ್ರರಿಗೆಲ್ಲ ಸುಖವ ನಿಶ್ಚಯಿಸಿ। ಜಾಣೆ ಯಶೋದೆಯ ಕಂದನೆಂದೆಣಿಸಿ। ವಾಣಿಯ ಮಾವ ಗೋಕುಲದಲ್ಲಿ ಜನಿಸಿ॥ಜೋಜೋ॥3॥ ಮಥುರ ಪಟ್ಟಣದಲ್ಲಿಟ್ಟು ಬಿಲ್ಲ ಹಬ್ಬಕ್ಕೆ। ಮುದದಿ ಕಂಸ ಕೃಷ್ಣನ ಕರೆಸಿದನು। ಒದಗಿ ಅಕ್ರೂರ ಬರಲುಕಂಡು ಶ್ರೀಧರನು। ಚದುರ ಗೋಕುಲದಿಂದ ತೆರಳಿನಡೆದನು॥ಜೋಜೋ॥ ॥4॥ ಅರಸನೊಸ್ತ್ರವನು ಒಯ್ವ ರಜಕಾನು। ಬರಿಸಿದಾಕ್ಷಣ ಉಟ್ಟ ವಸ್ತ್ರವನು। ಸರಸಿಜಾಕ್ಷ ಕುಬ್ಜೆಯ ಮಾಲೆಗಂಧವನು। ಧರಿಸಿ ಅವಳ ಟೊಂಕ ತಿದ್ದಿದ ಕರುಣ॥ಜೋಜೋ॥ 5॥ ಕುವಲಯ ಪೀಡನೆಂಬೊ ಆನೆಯ ಕೊಂದ। ಶಿವನಿತ್ತ ಬಿಲ್ಲು ಮುರಿದನು ಗೋವಿಂದ। ಜವನ ಪುರಕೆ ಮಲ್ಲರನಟ್ಟಿದ ಆನಂದ। ಹವಣೆಯಿಂದಲಿ ಕಂಸಗೆ ಎದುರಾಗಿನಿಂದ ॥ಜೋಜೋ॥ ॥6॥ ಕ್ಷೀರಸಾಗರವೆಂಬೋ ತೊಟ್ಟಿಲನು ಮಾಡಿ। ಚಾರುವೇದವೆಂಬೊ ಸರಪಳಿಯ ಹೂಡಿ। ಧೀರಶೇಷನು ಬಂದು ಹಾಸಿಗೆ ಯಾಗೆ। ನಾರಿಯು ನಮಿಸೆ ಮಲಗಿದ ಹಯವದನ॥ಜೋಜೋ॥ ॥7॥

❖ ❖ ❖

ವಾದಿರಾಜರಿಗೊಲಿದು ಬಂದ

ವಾದಿರಾಜರಿಗೊಲಿದು ಬಂದ ಸೋದೆಯ ಪುರದಲಿನಿಂತಾ ಕುದುರೆ। ಕುದುರೆಯ ಕಂಡಿರಾ ಬಿಳಿಕುದುರೆಯ ಕಂಡಿರಾ॥ಪ॥ಮಧ್ವರಾಯರಿಗೆ ಒಲಿವಾ ಕುದುರೆ। ವಾದಿರಾಜರ ಪೊರೆವಾಕುದುರೆ। ಸೋದೆಯ ಪುರದೊಳು ನಿಂತಾಕುದುರೆ। ಮೋದದಿಂದಲಿ ಮೆರೆದಾ ಕುದುರೆ॥1॥ ಮಂದರಗಿರಿಯ ನೆತ್ತಿದ ಕುದುರೆ। ಚಂದಿರನಂತೆ ಪೊಳೆವಾ ಕುದುರೆ। ಇಂದಿರಾದೇವಿಯ ನಪ್ಪಿದ ಕುದುರೆ। ಬಂದರೆ ನರರಿಗೆ ಬೆದರದ ಕುದುರೆ॥2॥ ಸುರರಿಗೆ ಅಮೃತವ ನಿತ್ತಾ ಕುದುರೆ। ನರನಾರಥವನೇರಿದ ಕುದುರೆ। ಸ್ಮರನ ತಾತಾ ಎನಿಪ ಕುದುರೆ। ಸುರತರು ಭೂಮಿಗೆ ತಂದ ಕುದುರೆ॥3॥ ಕಡಲೆ ಹೂರಣ ಮೆಲುವಾ ಕುದುರೆ। ಸುಂದರಪುರದೊಳು ಮೆರೆವಾ ಕುದುರೆ। ಪುಂಡಲೀಕನಿಗೆ ಒಲಿದಾ ಕುದುರೆ। ಪಾಂಡವರನ್ನು ಪೊರೆದಾ ಕುದುರೆ॥4॥ ರಾಜನಾಥನಾ ನೆನೆವಾ ಕುದುರೆ। ಭಜಿಪ ವದುನನ ನೆನೆವಾ ಕುದುರೆ। ಕಂಜ ಶೃತಿಗೆ ಯಾಗಿಪಕುದುರೆ। ಕಂಜನಾದ ಹಯವದನನ ಕುದುರೆ॥5॥

ಕುದುರೆಯ ಕಂಡೀರಾ

ಕುದುರೆಯ ಕಂಡೀರಾ ಬಿಳಿ ಕುದುರೆಯ ಕಂಡಿರಾ(ಕುದುರೆ ಬಂದಿದೆ ಚಲ್ವ)॥ಪ॥ ವಾದಿರಾಜರಿಗೊಲಿದು ಬಂದು। ಸೋದೆಯ ಪುರದಲಿ ನಿಂತಕುದುರೆ॥ಅ.ಪ॥ ಮುಂಗಾಲು ಕೆದರಿಕುಣಿವ ಕುದುರೆ। ಹಿಂಗಾಲಲಿ ಅಸುರರ ಒದೆವ ಕುದುರೆ॥ ರಂಗ ಎಂದರೆ ಸಲಹುವಕುದುರೆ। ತುಂಗಹಯವದನನೆಂಬ ಕುದುರೆ॥1॥ ಹಲ್ಲಣದೊಳಗೆ ನಿಲ್ಲದು ಕುದುರೆ। ಬೆಲ್ಲ ಕಡಲೆಯ ಮೆಲುವ ಕುದುರೆ। ಪುಲ್ಲನಾಭನಿಗೆ ಒಲಿವ ಕುದುರೆ। ಚೆಲ್ವ ಹಯವದನನೆಂಬ ಕುದುರೆ॥2॥ ಸುತ್ತ ಮುತ್ತಲು ಆಡುವ ಕುದುರೆ। ಮತ್ತವಾದಿಯ ಗೆಲುವ ಕುದುರೆ। ಶತ್ರುಗಳೆಲ್ಲರ ಬಡಿವ ಕುದುರೆ। ತತ್ವ ಹಯವದನನೆಂಬ ಕುದುರೆ॥3॥

ಜಯಪ್ರದನು ಜಗಕೆ ಶ್ರೀಹಯವದನ

ಜಯಪ್ರದನು ಜಗಕೆ ಶ್ರೀಹಯವದನ ಮೂರ್ತಿ ಇರೆ। ಭಯವ್ಯಾಕೆಭಕ್ತ ಜನಕೆ॥ಪ॥ ನಯನದಿಂ ಗೆಲಿಸುವನ ನಾಲ್ದಿಕ್ಕಿನೊಳಗಿದ್ದ ಮಾಯವಾದಿಗಳನ್ನು॥ಅ.ಪ॥ ಆದಿಯಲಿ ಬ್ರಹ್ಮನಿಗೆ ಭೀತಿಯನುಬಿಡಿಸಿದ। ನಾದಮಯನಾದ ದೇವ ಭೇದವಿಲ್ಲದೆ ಎಲ್ಲಾ ಭೇದವೆಂಬುವರನ್ನು। ಕಾದ ಬಾಣಲೆಗೆ ತಟ್ಟಿ ಮೋದಿಸಿ ಕೊಲ್ಲುವ॥1॥ ಉದಯದಲಿ ಎದ್ದು ನರಸದಮಲಾತ್ಮಕನಾಗಿ। ಹೃದಯದೊಳಗೆ ಹರಿಯತಂದು ಮುಂದು। ಸದಯನು ನೀನೆನುತ ಸದ್ವ ೃತ್ತಿ ಉದಯನು ನೀನೆನುತ।ದಧಿಚೋರಕೃಷ್ಣನ್ನ ಮುದದಿ ಭಜಿಪರಿಗೆ॥2॥ ದುಷ್ಟಮಲ್ಲರ ಎದೆಮೆಟ್ಟಿ ಮೆರೆವ ಜಗಜಟ್ಟಿ ಮಧ್ವರಾಯರ ಮುಟ್ಟಿ ಭಜಿಸುತ ನಿತ್ಯ। ಇಷ್ಟವನು ಬೇಡಿದರೆ ಕಷ್ಟಗಳನು ಕಳೆವ। ಉತ್ಕೃಷ್ಟ ಹಯವದನ ಧೊರೆ॥3॥

ಆವಕಡೆಯಿಂದ ಬಂದೆ

ಆವಕಡೆಯಿಂದ ಬಂದೆ ವಾಜಿವದನನೆ। ಭಾವಿಸುತ ವಾದಿರಾಜ ಮುನಿಯ ಕಾಣುತ॥ಪ॥ ನೇವರಿಸಿ ಮೈಯ ತೆಡವಿ ನೇಹದಿಂದಲಿ। ಮೇಲು ನೈವೇದ್ಯವನ್ನು ಇತ್ತು ಭಜಿಸುವೆ॥ಅ.ಪ.॥ ಭಕುತಿ ಕಡಲೆ ಜ್ಞಾನ ವೈರಾಗ್ಯ ಬೆಲ್ಲದ। ಮುಕುತಿ ಆನಂದ ಸುಖದ ಕ್ಷೀರ ಲಡ್ಡಿಗೆ। ಯುಕುತಿ ಧ್ಯಾನಕೊಟ್ಟು ನೀನು ಎಲ್ಲ ಮಾತಲಿ। ಶಕುತಿ ಸಂತೋಷ ಮಹಿಮೆ ತೋರ ಬಂದೆಯ॥1॥ ಹೆರ್ತತುಪ್ಪಸಕ್ಕರೆಯ ಮಾಡಿ। ಮುದ್ದೆಯ। ತುತ್ತು ಮಾಡಿಕೊಡಲು ಅದನು ಮೆಲುತ ಮೆಚ್ಚುತ। ಅತ್ಯಂತ ಸಂತೋಷ ನೀನು ಆಟ ತೋರುತ ಭೃತ್ಯ ವಾದಿರಾಜ ಮುನಿಯ ಸಲಹಬಂದೆಯ॥2॥ ಫಲವ ಕೊಟ್ಟು ರಕ್ಷಿಸಿದಿ ವಾಜಿವದನನೆ। ನಿಲುವೋ ಜ್ಞಾನ ಭಕ್ತಿಯನ್ನು ನೀಡಬಂದೆಯ। ಸುಲಭ ಸುಮುಖ ಸುಪ್ರಸನ್ನ ಹಯವದನನೆ। ಚೆಲುವ ಚಿನ್ಮಯಮೂರ್ತಿ ನಮ್ಮ ಸಲಹ ಬಂದೆಯ॥3॥

❖ ❖ ❖

ಕೆಂಪೇರಿ ತಂಬರದಿ ತಂಪಿಳಿತು ಸಂಭ್ರಮದಿ

ಕೆಂಪೇರಿ ತಂಬರದಿ ತಂಪಿಳಿತು ಸಂಭ್ರಮದಿ। ಕಂಪನಾಗಿದೆ ಚಿತ್ತ ಕಾಯೋ ಕೃಷ್ಣ॥ಪ॥ ಶಶಿಮುಖಿ ವಿತ್ತಾಸೆ ಹೇಸಿ ಜೀವನದಾಸೆ। ಮೋಸಮಾಡದೆ ಎನ್ನ ಕಾಯೋ ಕೃಷ್ಣಾ। ಪಶುಪತಿ ಸಖ ನಿನ್ನ ಹಸನಾಗಿ ಭಜಿಪಾಸೆ। ವಸುಧೆಯೋಳು ಎನಗಿತ್ತು ಕಾಯೋ ಕೃಷ್ಣಾ॥1॥ಊರೊಳಗೆ ವ್ಯಾಪಿಸಿಹ ಘೋರಾಂಧಕಾರವನು। ಪಾರುಗಾಣಿಸಿ ಎನ್ನ ಕಾಯೋ ಕೃಷ್ಣಾ॥ ಮೇರು ಬೆನ್ನಲಿ ಹೊತ್ತ ಸರಸಿಜೋದ್ಭವಜನಕ। ಭಾರವೇ ನಾ ನಿನಗೆ ಕಾಯೋ ಕೃಷ್ಣಾ॥2॥ ಅನ್ನ ವಸನಾಕ್ಕಾಗಿ ಅನುದಿನವು ಯಾಚಿಸುತ। ಅನ್ಯರಾ ಮನೆದ್ವಾರ ಕಾಯ್ದೆ ಕೃಷ್ಣಾ। ದೀನರಕ್ಷಕ ನಿನ್ನ ತೋಂಡರೋಳಿರಿಸಯ್ಯ। ದಾನವಾಂತಕನಂದ ವಿಠಲ ಶ್ರೀಕೃಷ್ಣ॥3॥

ಈ ಪರಿಯ ಸೊಬಗಾವ — ರಾಗ: ಹಂಸಾನಂದಿ-ಝುಂಪೆತಾಳ

ಈ ಪರಿಯ ಸೊಬಗಾವ ದೇವರಲಿ ಕಾಣೆ॥ಪ॥ ಗೋಪೀಜನಪ್ರಿಯ ಗೋಪಾಲ ಗಲ್ಲದೆ॥ಅ.ಪ.॥ ದೊರೆಯತನದಲ್ಲಿ ನೋಡೆ ಧರಣಿದೇವಿಗೆ ರಮಣ। ಸಿರಿಯತನದಲಿ ನೋಡೆ ಶ್ರೀಕಾಂತನು॥ ಹಿರಿಯತನದಲಿ ನೋಡೆ ಸರಸಿಜೋದ್ಭವನಯ್ಯ। ಗುರುವುತನದಲಿ ನೋಡೆ ಜಗದಾದಿ ಗುರುವು॥1॥ ಪಾವನತ್ವದಿ ನೋಡೆ ಅಮರಗಂಗಾಜನಕ। ದೇವತ್ವದಲಿ ನೋಡೆ ದಿವಿಜರೊಡೆಯ॥ ಲಾವಣ್ಯದಲಿ ನೋಡೆ ಲೋಕಮೋಹಕನಯ್ಯ। ಆವ ಧೈರ್ಯದಿ ನೋಡೆ ಅಸುರಾಂತಕ॥2॥ ಗಗನದಲಿ ಸಂಚರಿಪ ಗರುಡದೇವನೆ ತುರಗ ಜಗತೀಧರ ಶೇಷ ಪರಿಯಂಕ ಶಯನ। ನಿಗಮಗೋಚರ ಪುರಂದರವಿಠಲಗಲ್ಲದೆ। ಮಿಗಿಲಾದ ದೈವಗಳಿಗೀ ಭಾಗ್ಯವುಂಟೆ॥3॥

ಏನ್ ಸವಿ ಏನ್ ಸವಿ ಹರಿನಾಮ — ರಾಗ: ಮೋಹನ

ಏನ್ ಸವಿ ಏನ್ ಸವಿ ಹರಿನಾಮ ಮನಸು ತೃಪ್ತಿಯಾಗದು ಪ್ರೇಮ। ಜನರಿಗೆ ತಿಳಿಯದು ಇವರ ಮಹಿಮೆ ಘನ್ನ ಮಹಿಮ ಶ್ರೀ ವಿಷ್ಣುನಾಮ॥ಪ॥ ಅಮೃತದ ರುಚಿಯನು ನೋಡಿದವರು ತುಂಬುರು ನಾರದರು ಹರಿದಾಸರು। ಅಂಬರೀಶಗೊಲಿದರು ದೂರ್ವಾಸರು ತುಂಬಿಕೊಂಡಿಹರು ವೇದವ್ಯಾಸರು ಆಹಾ॥1॥ ಹರಿಹರಿ ನಾಮಸ್ಮರಣೆ ಮಾಡಬೇಕು ಆರು ಗುಣಗಳ ತಿಳಿಯಬೇಕು। ಬಿರುದುಗಳು ಸಾರುತಿವೆ ವೇದಾ ನಾಲ್ಕು ರಾಮಭಕ್ತ ಭೀಮಸೇನ ಸರ್ವಜನಕ॥ಆಹಾ॥2॥ ಅಮೃತದ ರುಚಿ ಉಂಡ ವಾಲ್ಮೀಕಿ ಸ್ಮರಿಸುವರು ನರಹರಿ ನಾಮ ಕಲ್ಮಶ। ಪ್ರೇಮದಿಂದ ಹರಿಭಕ್ತ ಪುಂಡರೀಕ ರಾಮ ರಾಮ ರಾಮ ರಾಮ ಸರ್ವಜನಕ॥ಆಹಾ॥3॥ ರಕ್ಷಣೆಯ ಮಾಡುವುದು ಹರಿನಾಮ ಮೋಕ್ಷ ಪದವಿಯ ಕೊಡುವುದು ನೇಮ। ಸೃಷ್ಟಿಗೆ ಕರ್ತೃ ಸರ್ವೋತ್ತಮ ಸಾಕ್ಷಾತ್ ಪುರಂದರವಿಠಲ ನಾಮ॥ಆಹಾ॥4॥

ಕಲ್ಲುಸಕ್ಕರೆ ಕೊಳ್ಳಿರೋ — ರಾಗ: ಕಲ್ಯಾಣಿ-ಅದಿತಾಳ

ಕಲ್ಲುಸಕ್ಕರೆ ಕೊಳ್ಳಿರೋ ನೀವೆಲ್ಲರು ಕಲ್ಲುಸಕ್ಕರೆ ಕೊಳ್ಳಿರೋ॥ಪ॥ ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು। ಫುಲ್ಲಲೋಚನ ಶ್ರೀ ಕೃಷ್ಣನಾಮವೆಂಬ॥ಅ.ಪ.॥ ಎತ್ತು ಹೇರುಗಳಿಂದ ಹೊತ್ತು ಮಾರುವುದಲ್ಲ। ಒತ್ತೊತ್ತಿ ಗೋಣಿಯೊಳು ತುಂಬುವುದಲ್ಲ। ಎತ್ತ ಹೋದರು ಬಾಡಿಗೆ ಸುಂಕವಿದಕಿಲ್ಲ। ಉತ್ತಮ ಸರಕಿದು ಅತಿ ಲಾಭ ಬರುವಂಥ॥1॥ ನಷ್ಟ ಬೀಳುವುದಲ್ಲ ನಾತ ಹುಟ್ಟುವುದಲ್ಲ। ಎಷ್ಟು ಒಯ್ದರು ಬೆಲೆ ರೊಕ್ಕವಿದಕಿಲ್ಲ। ಕಟ್ಟಿರುವೆಯು ತಿಂದು ಕಡಿಮೆಯಾಗುವುದಲ್ಲ। ಪಟ್ಟಣದೊಳಗೆ ಪ್ರಸಿದ್ಧವಾಗಿರುವಂಥ॥2॥ ಸಂತೆ ಸಂತೆಗೆ ಹೋಗಿ ಶ್ರಮಪಡಿಸುವುದಲ್ಲ। ಸಂತೆಯೊಳಗೆ ಇಟ್ಟು ಮಾರುವುದಲ್ಲ। ಸಂತತ ಭಕ್ತರ ನಾಲಗೆ ಸವಿಗೊಂಬ। ಕಾಂತ ಪುರಂದರವಿಠಲ ನಾಮವೆಂಬ॥3॥

ಕಲಿಯುಗದೊಳು ಹರಿನಾಮವ — ರಾಗ: ಜುಂಜೋಟಿ-ಆದಿತಾಳ

ಕಲಿಯುಗದೊಳು ಹರಿನಾಮವ ನೆನೆದರೆ। ಕುಲಕೋಟಿಗಳುದ್ಧರಿಸುವುವು॥ಪ॥ ಸುಲಭದ ಮುಕ್ತಿಗೆ ಸುಲಭನೆಂದೆನಿಸುವ। ಜಲರುಹನಾಭನ ನೆನೆಮನವೆ॥ಅ.ಪ॥ ಸ್ನಾನವನರಿಯೆನು ಮೌನವ ನರಿಯೆನು ಧ್ಯಾನವನರಿಯೆನೆಂದೆನಬೇಡ। ಜಾನಕಿವಲ್ಲಭ ದಶರಥನಂದನ ಗಾನವಿನೋದನ ನೆನೆಮನವೆ॥1॥ ಅರ್ಚಿಸಲರಿಯೆನು

ಮೆಚ್ಚಿಸಲರಿಯೆನು ತುಚ್ಛನು ನಾನೆಂದೆನಬೇಡ। ಅಚ್ಯುತಾ ನಂತ ಗೋವಿಂದ ಮುಕುಂದನ ಇಚ್ಛೆಯಿಂದ ನೀ ನೆನೆ ಮನವೆ॥2॥ ಜಪವೊಂದ ರಿಯೆನು ತಪವೊಂದರಿಯೆನು ಉಪದೇಶವಿಲ್ಲೆಂದೆನಬೇಡ। ಅಪಾರ ಮಹಿಮ ಶ್ರೀ ಪುರಂದರವಿಠಲನ ಉಪಾಯದಿಂದಲಿ ನೆನೆ ಮನವೆ॥3॥

ಅಂತರಂಗದಲಿ ಹರಿಯ ಕಾಣದವ — ರಾಗ: ಕಲ್ಯಾಣಿ-ಆದಿತಾಳ

ಅಂತರಂಗದಲಿ ಹರಿಯ ಕಾಣದವ ಹುಟ್ಟು ಕುರುಡನೋ॥ಪ॥ ಸಂತತ ಶ್ರೀಕೃಷ್ಣ ಚರಿತೆ ಕೇಳದವ ಜಡಮತಿ ಕಿವುಡನೋ ಎಂದೆಂದಿಗು॥ಅ.ಪ.॥ ಹರುಷದಿಂದಲಿ ನರಹರಿಯ ಪೂಜೆಯ ಮಾಡದವನೆ ಕೈ ಮುರಿದವನೊ। ಕುರುವರಸೂತನ ಮುಂದೆ ಶ್ರೀಕೃಷ್ಣಾ ಎಂತೆಂದು ಕುಣಿಯದವನೆ ಕುಂಟನೊ॥1॥ ನರಹರಿ ಚರಣೋದಕ ಧರಿಸದ ಶಿರ ನಾಯಿಮುಂಡ ಹೆಂಚು ಕಾಣೋ। ಸಿರಿವರಗರ್ಪಿಸದಲೆ ಮಾಡಿದ ಊಟ ಸೂಕರಭೋಜನವೊ ಎಂದೆಂದಿಗು॥2॥ ಅಮರೇಶ ಕೃಷ್ಣಗರ್ಪಿತವಲ್ಲದ ಕರ್ಮ ಅಸತಿಯ ವ್ರತನೇಮವೊ। ರಮೆಯರಸನ ಪ್ರೀತಿಪಡಿಸದ ವಿತರಣೆ ರಂಡೆ ಕೊರಳ ಸೂತ್ರವೊ॥3॥ ಕಮಲನಾಭನ ಪೊಗಳದ ಸಾರಸಂಗೀತ ಗಾರ್ದಭರೋದನವೊ। ಮಮತೆಯಿಂದಲಿ ಕೇಶವಗೆ ನಮಸ್ಕಾರ ಮಾಡದವನೆ ಖಳನೊ ಎಂದೆಂದಿಗು॥4॥ ಜರೆ ಹುಟ್ಟು ಮರಣ ತೊಡೆವ ಸುಧೆಯ ಬಿಟ್ಟು ಸುರೆಯ ಸೇವಿಸಬೇಡವೊ। ಸುರಧೇನು ಇರಲಾಗಿ ಸೂಕರ ಮೊಲೆಹಾಲು ಕರೆದು ಕುಡಿಯಬೋಡವೋ॥5॥ ಕರಿರಥ ತುರಗವಿರಲು ಬಿಟ್ಟು ಕೆಡಹುವ ಕತ್ತೆಯೇರಲು ಬೇಡವೊ। ಪರಮಪದವೀವ ಸಿರಿಕೃಷ್ಣನಿರಲಾಗಿ ನರರ ಭಜಿಸಬೇಡವೊ ಎಂದೆಂದಿಗೂ॥6॥

ಕಂಡು ಕಂಡು ನೀಯೆನ್ನ — ರಾಗ: ಶಹನ-ಝಂಪೇತಾಳ

ಕಂಡು ಕಂಡು ನೀಯೆನ್ನ ಕೈಬಿಡುವರೆ ಪುಂಡರೀಕಾಕ್ಷ ಪುರುಷೋತ್ತಮ ಹರೇ॥ಪ॥ ಬಂಧುಗಳು ಎನಗಿಲ್ಲ ಬದುಕಿನಲಿ ಸುಖವಿಲ್ಲ। ನಿಂದೆಯಲಿ ನೊಂದೆನೈ ನೀರಜಾಕ್ಷ। ತಂದೆತಾಯಿಯು ನೀನೆ ಬಂಧುಬಳಗವು ನೀನೆ। ಎಂದೆಂದಿಗೂ ನಿನ್ನ ನಂಬಿದೆನೋ ಕೃಷ್ಣ॥1॥ ಕ್ಷಣವೊಂದು ಯುಗವಾಗಿ ತೃಣಕಿಂತ ಕಡೆಯಾಗಿ। ಎಣಿಸಲಾರದ ಭವದಿ ನೊಂದಿಹೆ ನಾನು॥ ಸನಕಾದಿ ಮುನಿವಂದ್ಯ ವನಜಸಂಭವ ಜನಕ। ಫಣಿಶಾಯಿ ಪ್ರಹ್ಲಾದಗೊಲಿದ ಶ್ರೀಕೃಷ್ಣ॥2॥ ಭಕ್ತವತ್ಸಲನೆಂಬ ಬಿರುದ ಪೊತ್ತಾ ಮೇಲೆ ಭಕ್ತರಾಧೀನನಾಗಿರಬೇಡವೆ॥ ಮುಕ್ತಿದಾಯಕ ನೀನು ಹೊನ್ನೂರುಪುರವಾಸ ಶಕ್ತಗುರು ಪುರಂದರವಿಠಲ॥3॥

ತಾಳುವಿಕೆಗಿಂತನ್ಯ ತಪವು ಬೇರಿಲ್ಲ

ತಾಳುವಿಕೆಗಿಂತನ್ಯ ತಪವು ಬೇರಿಲ್ಲ। ಕೇಳ ಬಲ್ಲವರಿಗೆ ಹೇಳುವೆನು ಸೊಲ್ಲ॥ಪ॥ ದುಷ್ಟ ಮನುಜರ ಪೇಳ್ವ ನಿಷ್ಠುರದ ನುಡಿ ತಾಳು। ಕಷ್ಟ ಬಂದರೆ ತಾಳು। ಕಂಗೆಡದೆ ತಾಳು। ನೆಟ್ಟ ಸಸಿ ಫಲ ಬರುವತನಕ ಶಾಂತಿಯ ತಾಳು। ಕಟ್ಟು ಬುತ್ತಿಯ ಮುಂದೆ ಉಣಲುಂಟು ತಾಳು॥1॥ ಹಳಿದು ಹಂಗಿಸುವಂಥ ಹಗೆಯ ಮಾತನು ತಾಳು। ಸುಳಿನುಡಿ ಕುಹಕ ಕುಮಂತ್ರವನು ತಾಳು। ಅಲುಕತಲೆ ಬಿರಿಸು ಬಿಂಕದ ನುಡಿಯ ನೀ ತಾಳು। ಹಲಧರಾನುಜನನ್ನು ಹೃದಯದಲಿ ತಾಳು॥2॥ ನಕ್ಕು ನುಡಿವರ ಮುಂದೆ ಮುಕ್ಕರಿಸದೆ ನೀ ತಾಳು। ಅಕ್ಕಸವ ಮಾಡುವರ ಅಕ್ಕರದಿ ತಾಳು। ಉಕ್ಕೋ ಹಾಲಿಗೆ ನೀರು ಇಕ್ಕುವಂದದಿ ತಾಳು। ಲಕ್ಷ್ಮೀಶ ಹಯವದನ ಶರಣೆಂದು ತಾಳು॥3॥

ಸಾಧನದ ಚಿಂತೆ ಎನಗ್ಯಾಕೋ ದೇವ

ಸಾಧನದ ಚಿಂತೆ ಎನಗ್ಯಾಕೋ ದೇವ। ಮಾಧವನೆ ಮನ್ನಾಮಧರಿಸಿ ಮಾಡುವೆ ನೀನೇ॥ಪ॥ ನಡೆಯುವುದೇ ಹರಿ ಯಾತ್ರೆ। ನುಡಿಯುವುದೇ ಸ್ತೋತ್ರಗಳು। ಬಿಡದೆ ನೋಡುವುದೆಲ್ಲ ನಿನ್ನ ಮೂರ್ತಿ॥ ಒಡೆಯ ಕೇಳುವ ಶಬ್ದ ದಿವ್ಯ ಮಂಗಳ ಕೀರ್ತಿ। ಪಡುವ ಭೋಗಗಳೆಲ್ಲಾ ನಿನ್ನ ಉಪಚಾರ॥1॥ ನಿನ್ನ ಚಿತ್ತಕೆ ಬಂದ ಅನುಭವವೇ ಸಾಧನವು। ಅನ್ಯಥಾ

ಬೇಕಿಲ್ಲ ದೋಷರಹಿತ। ಎನ್ನ ತನುಮನ ಕರಣವನು ನೀ ಮಾಳ್ಪೆ। ಅನ್ಯ ಸಾಧನವೇಕೆ ಪಾವನ್ನ ಚರಿತ॥2॥ ಪಾಪ ತಡೆವುದಕಿನ್ನು ದುಃಖ ಪ್ರಾಯಶ್ಚಿತ್ತ। ಪಾಪ ಯೋಚನೆಗಳು ತಪಸ್ಸು ವಿಭವು॥ ಗೋಪ ಚೂಡಾರತ್ನ ಜಯೇಶವಿಠಲಸ್ವಾಮಿ। ಈ ಪಾತ್ರದೊಳಗಿದ್ದು ನೀ ಮಾಳ್ಪೆ ಸಾಧನ॥3॥

ತನು ನಿನ್ನದು ಜೀವನ ನಿನ್ನದು — ರಾಗ: ಕೇತಾರಗೌಳ

ತನು ನಿನ್ನದು ಜೀವನ ನಿನ್ನದು ರಂಗ॥ಪ॥ ಅನುದಿನದಲಿ ಬಾಹೊ ಸುಖದುಃಖ ನಿನ್ನದಯ್ಯ॥ಅ.ಪ॥ ಸವಿನುಡಿ ವೇದ ಪುರಾಣ ಶಾಸ್ತ್ರಂಗಳ। ಕಿವಿಗೊಟ್ಟು ಕೇಳುವ ಕಥೆ ನಿನ್ನದು। ನವ ಮೋಹನಾಂಗೇರ ರೂಪವ ಕಣ್ಣಲಿ ಎವೆಯಿಕ್ಕದೆ ನೋಡುವ ನೋಟ ನಿನ್ನದಯ್ಯ॥1॥ ಒಡಗೂಡಿ ಗಂಧ ಕಸ್ತೂರಿ ಪರಿಮಳಂಗಳ ಬಿಡದೆ ಲೇಪಿಸಿಕೊಂಬ ಈದೇಹ ನಿನ್ನದು। ಷಡುರಸದನ್ನಕ್ಕೆ ನಲಿದಾಡುವ ಜಿಹ್ವೆ। ಕಡುರುಚಿಗೊಂಡರೆ ಆ ರುಚಿ ನಿನ್ನದಯ್ಯ॥2॥ ಮಾಯಾಪಾಶದ ಬಲೆಯೊಳಗೆ ಸಿಲುಕಿರುವ। ಕಾಯ ಪಂಚೇಂದ್ರಿಯಂಗಳು ನಿನ್ನವು। ಕಾಯಜಪಿತ ಕಾಗಿನೆಲೆಯಾದಿ ಕೇಶವರಾಯ ನೀನಿಲ್ಲದೆ ನರರು ಸ್ವತಂತ್ರರೆ॥3॥

ಇದಕೊಳ್ಳಿ ಭವರೋಗಕೌಷಧವನು

ಇದಕೊಳ್ಳಿ ಭವರೋಗಕೌಷಧವನು॥ಪ॥ ಇಂದ್ರಿಯವ ಜಯಿಸುವುದೆ ಇದಕೆ ಇಚ್ಛಾಪಥ್ಯ ॥ಅ.ಪ.॥ ವಾಸುದೇವ ನಾಮ ವಾತ ವಿಧ್ವಂಸಿನಿ। ಜನಾರ್ಧನನ ನಾಮ ಜ್ವರಾಂಕುಶ॥ ಮಾಧವನ ನಾಮವೇ ಮನಗಂಡ ಮಂಡೂರ। ಮಂಗಳಾತ್ಮನ ನಾಮ ಮೌಲ್ಯಾವಸಂತ॥1॥ ಚಿಂತಾಯಕನನಾಮ ತ್ರೈಲೋಕ್ಯ ಚಿಂತಾಮಣಿ। ಭುಜಗಶಯನನ ನಾಮ ಭೂಪತಿ ಮಾತ್ರೆ। ರಾಜೀವಲೋಚನನ ನಾಮರಸ ಕರ್ಪೂರ। ಸೀತಾಪತಿಯ ನಾಮ ದಿವ್ಯಸಿಂಧೂರ॥2॥ ನಾರಾಯಣನ ನಾಮ ದಿವ್ಯ ತಾಮ್ರ ಭಸ್ಮ। ಲೋಕದೊಡೆಯನ ನಾಮ ಲೋಹಭಸ್ಮ। ವೈಕುಂಠ ಪತಿಯೆಂಬ ವಂಗ ಭಸ್ಮವಕೊಳ್ಳಿ। ಶ್ರೀನಿವಾಸನ ನಾಮ ಸ್ವರ್ಣಭಸ್ಮ॥3॥ ರಾಮಚಂದ್ರನೆಂಬ ಪೂರ್ಣಚಂದ್ರೋದಯವು। ಕೃಷ್ಣ ಕೃಷ್ಣನೆಂಬ ಶ್ಲೇಷ್ಮ ಕುಠಾರ। ವಾರಿಜಾಂಬಕ ನೆಂಬ ವಸಂತಕುಮಾರ। ಕಮಲನಾಭನೆಂಬ ಕರ್ಣಚೂರ್ಣವಿದಕೋ॥4॥ ಇದನು ಕೊಂಡವರ ಪೆಸರನು ಹೇಳುವೆನುಕ್ಕೇಳಿ। ಮುದದಿ ಪ್ರಲ್ಹಾದ ಮುಚಕುಂದ ಧ್ರುವನು। ಸದಮಲೆ ದ್ರೌಪತಿಯು ಅಜಮಿಳನು ಬದುಕಿದನು। ಪದುಮಾಕ್ಷ ಪುರಂದರ ವಿಠಲನೆಂಬೌಮಧುವು॥5॥

ಸದಾ ಎನ್ನ ಹೃದಯದಲ್ಲಿ — ರಾಗ: ಹಿಂದೋಳ-ರೂಪಕತಾಳ

ಸದಾ ಎನ್ನ ಹೃದಯದಲ್ಲಿ ವಾಸಮಾಡೋ ಶ್ರೀಹರಿ॥ಪ॥ ನಾದಮೂರುತಿ ನಿನ್ನ ಪಾದ ಮೋದದಿಂದ ಭಜಿಸುವೆನು॥ಅ.ಪ॥ ಜ್ಞಾನವೆಂಬೋ ನವರತ್ನದ ಮಂಟಪದ ಮಧ್ಯದಲ್ಲಿ। ಗಾನ ಲೋಲನ ಕುಳ್ಳಿರಿಸಿ ಧ್ಯಾನದಿಂದ ಭಜಿಸುವೆನು॥1॥ ಭಕ್ತಿರಸವೆಂಬ ಮುತ್ತು ಮಾಣಿಕ್ಯದ ಹರಿ ವಾಣದಲ್ಲಿ। ಮುಕ್ತನಾಗಬೇಕು ಎಂದು ಮುತ್ತಿನಾರತಿ ಎತ್ತುವೆನು॥2॥ ನಿನ್ನ ನಾನು ಬಿಡುವನಲ್ಲ ಎನ್ನ ನೀನು ಬಿಡಲುಸಲ್ಲ। ಘನ್ನಮಹಿಮ ವಿಜಯವಿಠ್ಠಲ ಕೇಳೋ ನಿನ್ನ ಭಕ್ತರ ಸೊಲ್ಲ॥3॥

ನಂಬಿ ನೆಚ್ಚದಿರೆಲೋ ನರಲೋಕ

ನಂಬಿ ನೆಚ್ಚದಿರೆಲೋ ನರಲೋಕ ಸ್ಥಿರವೆಂಬೋ ಅಂಬಲಿ ಪರಮಾನ್ನ। ಹಂಬಲಿಸುತಲಿರು ಹರಿಲೋಕ ನಂದವೆಂಬೋ ಪೀಯೂಷ ಪಾನ॥ಪ॥ ದುರುಳ ಜನರ ಸಂಗವೆಂಬೋದೆ ಎಂದಿಗೂ ನೊಣ ಬೆರಸಿದ ಊಟ। ಪರಮ ಭಾಗವತರ ಪದಸಂಗವೆಂಬೋದೇ ಮಸ್ತಕ ಮಣಿ ಮಕುಟ। ಮರೆ ಮೋಸಗೊಳಿಸುವ ಸತಿ ಸುತರೆಂಬೋರೆ ಕೇವಲ ಯಮ ಕಾಟಾ। ಪರತತ್ವನಾದ ಶ್ರೀಹರಿಯನೇ ಭಜಿಸೋದೇ ವೈಕುಂಠಕೆ ಓಟ॥1॥ ಬಿದ್ದ ಕಾಳಿಗೆ ಕಾಳು ಕೂಡಿ ಹಾಕುವುದೆಲ್ಲ ಹಾರಿ ಹೋಗುವ ಹೊಟ್ಟು। ಇದ್ದಾಗ ದಾನ ಧರ್ಮಗಳ ಮಾಡೋದು ಕೈವಲ್ಯಕೆ ಮೆಟ್ಟು।

ಹೊದ್ದಿರುವರ ಕಂಡು ಆಸೆಯ ಪಟ್ಟರೆ ಹೋಗುವಿ ನೀ ಕೆಟ್ಟು। ಬುದ್ಧಿಹೀನರಿಗೆ ಪೇಳದಿರೆಲೋ ತತ್ವ ಸಾರ ಸುಂದರ ಗುಟ್ಟು।।2।। ಅಲ್ಪಾಯುಷ್ಯವೇ ಈ ಶರೀರವು ಗಾಳಿಗಿಕ್ಕಿದ ದೀಪ। ಅಲ್ಪ ಸಂತೋಷಿಯಾಗು ಅದು ನಿನಗೆ ನೋಡೋ ಹಾಲು ಸಕ್ಕರೆ ತುಪ್ಪ।। ಬಲು ಪಂಥ ಮಾಡದಿರು ಜನುಮ ಜನುಮಗಳಲಿ ಬಿಡದೀ ಸಂತಾಪ। ಸ್ವಲ್ಪ ಕಾಲಾದರೂ ಮಧ್ವ ಮತವೇ ಪೊಂದು ಭವವೇನಿರ್ಲೇಪ।।3।। ಹರಿಗರ್ಪಿಸಿದ ಕರ್ಮ ಅವಾವುದಾದರೂ ಸೂಳೆಗಿಕ್ಕಿದ ವಿತ್ತ। ಹರಿಗೆ ವಿಶ್ವಾಸದಿ ಅಣುಮಾತ್ರ ಅರ್ಪಿಸೆ ಅವನೇ ನಿರ್ಮಲ ಚಿತ್ತ। ನಿರುತ ಗ್ರಾಸಕೆ ಚಿಂತೆಮಾಡಲು ಒದಗುವುದು ಪುಣ್ಯವು ನಿನಗೆತ್ತ। ಅರೆಮನವಿಲ್ಲದೆ ದೃಢಮನದಿಪ್ಪುದೆ ಸಂಪಾದನೆ ಭತ್ಯ।।4।। ಭಾವ ವಿರಕುತಿಯ ಧರಿಸದಿದ್ದರೆ ನೋಡು ಆಗುವುದು ಖೇದ। ಸಾವಿರಕ್ಕೊಂದು ಮಾತು ಹರಿದಾಸನೆನಿಸೋದೆ। ಪರಿಪರಿಯಲಿ ಸ್ವಾದಾ।। ದೇವಕಿ ಸುತ ನಮ್ಮ ವಿಜಯ ವಿಠ್ಠಲನಂಘ್ರಿ ತೀರ್ಥ ಪ್ರಸಾದ। ಸೇವಿಸದ ನರ ನಿತ್ಯನರಕವಾಸಿ ಎನ್ನುತಲಿದೆ ವೇದ।।5।।

ನಾ ನಿನ್ನೊಳಗನ್ಯ ಬೇಡುವುದಿಲ್ಲ **ರಾಗ: ಪೂರ್ವಿಕಲ್ಯಾಣಿ-ಆದಿತಾಳ**

ನಾ ನಿನ್ನೊಳಗನ್ಯ ಬೇಡುವುದಿಲ್ಲ। ಎನ್ನ ಹೃದಯಕಮಲದೊಳು ನಿಂದಿರು ಹರಿಯೆ।। ನಾ ನಿನ್ನೊಳನ್ಯ ಬೇಡುವುದಿಲ್ಲ।।ಪ।। ಶಿರ ನಿನ್ನ ಚರಣಕೆ ಎರಗಲಿ ಎನ್ನ ಚಕ್ಷುಸದಾ ನಿನ್ನ ನೋಡಲಿ ಹರಿಯೆ।। ಕರ್ಣ ಗೀತಂಗಳ ಕೇಳಲಿ ನಿನ್ನ ನಿರ್ಮಾಲ್ಯವ ನಾಸವಾಘ್ರಾಣಿಸಲಿ ಹರಿಯೆ।।1।। ನಾಲಿಗೆ ನಿನ್ನ ಕೊಂಡಾಡಲಿ ಎನ್ನ ಕರಗಳೆರಡು ನಿನ್ನನರ್ಚಿಸಲಿ ಹರಿಯೆ।। ಚರಣ ತೀರ್ಥಯಾತ್ರೆ ಮಾಡಲಿ ಎನ್ನ ಮನ ಅನುದಿನ ನಿನ್ನ ಸ್ಮರಿಸಲಿ ಹರಿಯೆ।।2।। ಬುದ್ಧಿ ನಿನ್ನೊಳು ಬೆರೆತ್ಹೋಗಲಿ ಎನ್ನ ಚಿತ್ತ ನಿನ್ನೊಳು ಸ್ಥಿರವಾಗಲಿ ಹರಿಯೆ।। ಭಕ್ತಜನರ ಸಂಗವಾಗಲಿ ರಂಗವಿಠಲನೆ ಇಷ್ಟೆ ದಯಮಾಡು ಹರಿಯೆ।।3।।

ದೃಷ್ಟಿ ನಿನ್ನ ಪಾದದಲ್ಲಿ ನೆಡೊ ಹಾಂಗೆ **ರಾಗ: ಶಿವರಂಜನಿ-ಆದಿತಾಳ**

ದೃಷ್ಟಿ ನಿನ್ನ ಪಾದದಲ್ಲಿ ನೆಡೊ ಹಾಂಗೆ। ದುಷ್ಟ ಜನ ಸಂಗಗಳ ಬಿಡೊ ಹಾಂಗೆ।।ಪ।। ಕೆಟ್ಟ ಮಾತು ಕೇಳೆ ಕಿವಿ ಕೊಡದ್ಹಾಂಗೆ। ಮನ ಕಟ್ಟಿಸಯ್ಯ ನಿನ್ನ ಪಾದ ಬಿಡದ್ಹಾಂಗೆ।।ಅ.ಪ।। ಧಿಟ್ಟನಾಗಿ, ಕೈಯನೆತ್ತಿ ಕೊಡೊ ಹಾಂಗೆ। ಶ್ರೀ ಕೃಷ್ಣ ನಿನ್ನ ಪೂಜೆಗಳ ಮಾಡೊ ಹಾಂಗೆ। ಭ್ರಷ್ಟನಾಗಿ ನಾಲ್ವರೊಳಗೆ ತಿರುಗದ್ಹಾಂಗೆ। ಶಿಷ್ಟಜನ ಸೇವೆಯನು ಮಾಡೊ ಹಾಂಗೆ।।1।। ಪುಟ್ಟಿಸಿದ ತಾಯಿತಂದೆಯಲ್ಲೊ ನೀನು। ಹೊಟ್ಟೆಗಾಗಿ ದೈನ್ಯ ಪಡಲಾರೆ ನಾನು। ಪಟ್ಟೆ ಪಟ್ಟವಾಳಿ ಬೇಡಲಿಲ್ಲ ನಾನು। ಗುಟ್ಟು ಅಭಿಮಾನಿಗಳ ಕಾಯೊ ನೀನು।।2।। ನಟ್ಟ ನೀರೊಳಗೆ ಈಸಲಾರೆ ನಾನು। ಕಟ್ಟೆ ಸೇರಿಸಬೇಕಯ್ಯ ನೀನು। ಕಟ್ಟೆ ಕಾಣದೆ ಅಲ್ಲಾಡುವೆನು ನಾನು। ಕೈಯ ಬಿಟ್ಟು ನೋಡುವರೆ ಪುರಂದರವಿಠಲ ನೀನು।।3।।

ಕಂಗಳಿವ್ಯಾತಕೋ ಕಾವೇರಿ **ರಾಗ: ತೋಡಿ**

ಕಂಗಳಿವ್ಯಾತಕೋ ಕಾವೇರಿ ರಂಗನ ನೋಡದ।।ಪ।। ಜಗಂಗಳೊಳಗೆ ಮಂಗಳ ಮೂರುತಿ। ರಂಗನ ಶ್ರೀಪಾದಂಗಳ ನೋಡದ।।ಅ.ಪ।। ಎಂದಿಗಾದರೊಮ್ಮೆ ಜನರು। ಬಂದು ಭೂಮಿಯಲ್ಲಿ ನಿಂದು।। ಚಂದ್ರಪುಷ್ಕರಣಿ ಸ್ನಾನವ ಮಾಡಿ। ಆನಂದದಿಂದಲಿ ರಂಗನ ಕಾಣದ।।1।। ಹರಿ ಪಾದೋದಕ ಸಮ ಕಾವೇರಿ। ವಿರಜಾನದೀಲಿ ಸ್ನಾನವ ಮಾಡಿ। ಪರಮ ವೈಕುಂಠ ರಂಗ ಮಂದಿರ। ಪರವಾಸುದೇವನ ನೋಡದ।।2।। ಹಾರ ಹೀರ ವೈಜಯಂತಿ। ತೋರ ಮುತ್ತಿನ ಹಾರ ಪದಕ। ತೇರನೇರಿ ಬೀದೀಲಿ ಬರುವ। ರಂಗವಿಠಲ ರಾಯನ ನೋಡದ ।।3।।

ಕರುಣಾಕರ ನೀನೆಂಬುವುದ್ಯಾಕೋ **ರಾಗ: ಷಣ್ಮುಖಪ್ರಿಯ**

ಕರುಣಾಕರ ನೀನೆಂಬುವುದ್ಯಾಕೋ ಭರವಸೆ ಇಲ್ಲನಗೆ।।ಪ।। ಪರಿ ಪರಿಯಲಿ ನರಜನ್ಮವನಿತ್ತು। ತಿರುತಿರುಗಿ ಮನಕರಗಿಸುವುದ ಕಂಡು।।ಅ.ಪ.।। ಕರಿ ಧ್ರುವ ಬಲಿ ಪಾಂಚಾಲಿ ಅಹಲ್ಯೆಯ ಪೊರೆದವ ನೀನಂತೆ। ಅರಿತು ವಿಚಾರಿಸಿ ನೋಡಲದೆಲ್ಲವು ಪರಿಪರಿ ಕಂತೆಗಳಂತಿದೆ ಕೃಷ್ಣಾ।।1।। ಕರುಣಾಕರ ನೀನಾದರೆ ಈಗಲೇ ಕರ ಪಿಡಿದೆನ್ನನು ಹರಿ ಕಾಯೊ।

ಸರಸಿಜಾಕ್ಷನೆ ಸರಸ ನೀನಾದರೆ ದುರಿತಗಳೆನ್ನನು ಪೀಡಿಪುದುಂಟೆ॥2॥ ಮರಣ ಕಾಲದಲಿ ಅಜಾಮಿಳಗೊಲಿದೆ ಗರುಡಧ್ವಜನೆಂಬ ಬಿರುದಿನಿಂದ। ವರ ಬಿರುದುಗಳು ಉಳಿಯಬೇಕಾದರೆ ತ್ವರಿತದಿ ಕಾಯೋ ಪುರಂದರವಿಠಲ॥3॥

ಕರುಣಿಸೋ ರಂಗ ಕರುಣಿಸೋ **ರಾಗ: ಕಲ್ಯಾಣಿ-ಆದಿತಾಳ**

ಕರುಣಿಸೋ ರಂಗ ಕರುಣಿಸೋ॥ಪ॥ ಹಗಲು ಇರುಳು ನಿನ್ನ ಸ್ಮರಣೆ ಒದಗುವಂತೆ॥ಅ.ಪ.॥ ರುಕ್ಮಾಂಗದನಂತೆ, ವ್ರತವ ನಾನರಿಯೆ। ಶುಕ ಮುನಿಯಂತೆ, ಸ್ತುತಿಸಲು ಅರಿಯೇ। ಬಕವೈರಿಯಂತೆ ಧ್ಯಾನವಮಾಡಲರಿಯೆ। ದೇವಕಿಯಂತೆ ಮುದ್ದಿಸಲರಿಯನೋ ಕೃಷ್ಣ ॥1॥ ಗರುಡನಂತೆ ಪೊತ್ತುತಿರುಗ ಲರಿಯೆನೋ। ಕರೆಯಲರಿಯೇ, ಕರಿರಾಜನಂತೆ। ವರಕಪಿಯಂತೆ ಸೇವೆಯ ಮಾಡಲರಿಯೆನೋ। ಸಿರಿಯಂತೆ ನೆರೆದು ಮೋಹಿಸಲರಿಯನೋ ಕೃಷ್ಣಾ ॥2॥ ಬಲಿಯಂತೆ ದಾನವ ಕೊಡಲರಿಯೆನೋ। ಭಕ್ತಿ ಛಲವನರಿಯೆ ಪ್ರಹ್ಲಾದನಂತೆ। ಒಲಿಸಲರಿಯೆ ಅರ್ಜುನನಂತೆ ಸಖನಾಗಿ। ಸಲಹಿಕೊಳ್ಳಯ್ಯ। ಶ್ರೀ ಪುರಂದರವಿಠಲಾ॥3॥

ನಂದೇನದೋ ಇಲ್ಲಿ ನಿಂದೇ ಇದೆಲ್ಲವೂ **ರಾಗ: ಭೈರವಿ-ಆದಿತಾಳ**

ನಂದೇನದೋ ಇಲ್ಲಿ ನಿಂದೇ ಇದೆಲ್ಲವೂ। ನಂದನಂದನ ಗೋವಿಂದ ಹರೇಕೃಷ್ಣ॥ಪ॥ ಹಿಂದಿನ ಜನ್ಮವು ಹೇಗಾದರಾಗಲಿ। ಮುಂದೆನ್ನ ಕಾಯೋ ಮುಕುಂದಾ ಶ್ರೀಹರೇ ಕೃಷ್ಣ॥ಅ.ಪ.॥ ಜನನ ಮರಣ ನಿಂದೆ ಜನುಮ ಸಾಗರ ನಿಂದೆ। ಅನುಕೂಲಾದರವು ನಿನ್ನದಯ್ಯ। ತನುಮನವು ನಿಂದೆ ಕಾಯದೊರೆವುದು ನಿಂದೆ। ಚಿನುಮಯ ರೂಪನೆ ಅನುಮಾನ ವ್ಯಾತಕಯ್ಯಾ॥1॥ ಕಾಯ ಕಷ್ಟವು ನಿಂದೇ ದೇಹದ ಬಲನಿಂದೆ। ನ್ಯಾಯ ಅನ್ಯಾಯವು ನಿನ್ನದಯ್ಯ॥ ಬಾಯಿ ಮಾತು ನಿಂದೆ ಬರುವ ಭಾಗ್ಯವು ನಿಂದೆ। ಕಾಯಜ ಪಿತ ನಿನ್ನ ಮಾಯೆ ತಿಳುಯದಯ್ಯಾ॥2॥ ಯಾತ್ರೆ ತೀರ್ಥವು ನಿಂದೆಕ್ಷೇತ್ರದ ಬಲನಿಂದೆ। ಸತ್ಪಾತ್ರ ದಾನ ನೇಮನಿಂದೇ॥ ಧಾತ್ರಿಯೊಳ್ ಪರಿಪೂರ್ಣ ಕ್ಷೇತ್ರ ವೆಂಕಟ ವಿಠಲ। ಸ್ತೋತ್ರ ಮಾಡುವುದು ವಿಚಿತ್ರ ನಿನ್ನದಯ್ಯಾ॥3॥

ಯಾಕೆ ಬಂದಿ ಜೀವ

ಯಾಕೆ ಬಂದಿ ಜೀವ ನೀ। ಸಾರರಹಿತವಾದ ಈ ಪ್ರಪಂಚಕೆ॥ಪ॥ ಮೇರು ಪರ್ವತದಲ್ಲಿ ವಾರಣವಂತನಾಗಿ। ಶ್ರೀರಮಣನ ಧ್ಯಾನ ಆರಾಧನೆಯ ಬಿಟ್ಟು॥1॥ ಉಡಿಗೆ ತೊಡಿಗೆ ಇಟ್ಟು ಅಡಿಗಡಿಗೆ ಸುಖ। ಬಡುವೆನೆಂಬುದಕೆ। ಈ ಪಾಡುಬಡಲು ನೋಡು॥2॥ ಉಣ್ಣು ಉಣ್ಣು ಉಣ್ಣು ಉಣ್ಣು ಮತ್ತೆ ಉಣ್ಣು। ಹೆಣ್ಣು ಹೊನ್ನು ಮಣ್ಣು ನಿನ್ನಾಧೀನವೆಂಬೀ॥3॥ ಅಲ್ಲಿಗಲ್ಲಿಗೆ ಜ್ಞಾನ ಬಲ್ಲವರ ಕೂಡ। ಎಲ್ಲ ಕಾಲದಲಿ ನಲಿದಾಡೋದು ಬಿಟ್ಟು॥4॥ ಆದದ್ದಾಯಿತು ಹೋದ ಮಾತುಗಳೇಕೆ। ಶ್ರೀಧರ ವಿಜಯವಿಠಲನ ಮರೆಯದಿರು॥5॥

ತೊರೆದು ಜೀವಿಸಬಹುದೆ **ರಾಗ: ಹಿಂದೋಳ**

ತೊರೆದು ಜೀವಿಸಬಹುದೆ ಹರಿ ನಿಮ್ಮ ಚರಣಗಳ। ಮರೆಯ ಬರಿದೆ ಮಾತೇಕಿನ್ನು ಅರಿತು ಪೇಳುವೆನಯ್ಯಾ॥ಪ॥ ತಾಯಿ ತಂದೆಯ ಬಿಟ್ಟು ತಪವು ಮಾಡಲುಬಹುದು। ದಾಯಾದಿ ಬಂಧುಗಳ ಬಿಡಲುಬಹುದು। ರಾಯ ತಾ ಮುನಿದರೆ ರಾಜ್ಯವನು ಬಿಡಬಹುದು। ಕಾಯಜಪಿತ ನಿನ್ನಡಿಯ ಬಿಡಲಾಗದು॥1॥ ಒಡಲು ಹಸಿದರೆ ಅನ್ನವಿಲ್ಲದಲೆ ಇರಬಹುದು। ಪಡೆದ ಕ್ಷೇತ್ರವ ಬಿಟ್ಟು ಹೊರಡಲೂಬಹುದು। ಮಡದಿ ಮಕ್ಕಳ ಕಡೆಗೆ ತೊಲಗಿಸಿಯೆ ಬಿಡಬಹುದು। ಕಡಲೊಡೆಯ ನಿನ್ನಡಿಯ ಘಳಿಗೆ ಬಿಡಲಾಗದು॥2॥ ಪ್ರಾಣವನು ಬೇಡಿದರೆ ಕೈಯೆತ್ತಿ ಕೊಡಬಹುದು। ಮಾನಾಭಿಮಾನವ ತಗ್ಗಿಸಬಹುದು। ಪ್ರಾಣದಾಯಕನಾದ ಆದಿಕೇಶವರಾಯ। ಜಾಣ ಶ್ರೀ ಕೃಷ್ಣ ನಿಮ್ಮಡಿಯ ಬಿಡಲಾಗದು॥3॥

ಏನೆಂದು ಕೊಂಡಾಡಿ ಸ್ತುತಿಸುವೆನೊ **ರಾಗ: ಶಹನ-ಝಂಪೆತಾಳ**

ಏನೆಂದು ಕೊಂಡಾಡಿ ಸ್ತುತಿಸುವೆನೊ ದೇವ। ನಾನೇನು ಬಲ್ಲೆ ನಿಮ್ಮ ಮಹಿಮೆಗಳ ಮಾಧವ॥ಪ॥ ಹರಿ ಮುಕುಂದನು

ನೀನು ನರಜನ್ಮ ಹುಳು ನಾನು। ಪರಮಾತ್ಮ ನೀನು ಪಾಮರನು ನಾನು। ಗರುಡಗಮನನು ನೀನು ಮರುಳು ಪಾಪಿಯು ನಾನು। ಪರಮಜ್ಯೋತಿಯು ನೀನು ದುರುಳ ತಿರುಕನು ನಾನು॥1॥ ಅಣುರೇಣು ತೃಣಗಳಲಿ ಪರಿಪೂರ್ಣನೈ ನೀನು। ಕ್ಷಣ ಕ್ಷಣಕೆ ಅವಗುಣದ ಕುಕರ್ಮಿ ನಾನು। ವಾಣಿಯರಸನ ಪೆತ್ತ ವೈಕುಂಠಪತಿ ನೀನು। ತನುನಿತ್ಯವಲ್ಲದಾ ಗೊಂಬೆ ನಾನು॥2॥ ಕಂಬದಲಿ ಬಂದ ಆನಂದಮೂರುತಿ ನೀನು। ನಂಬಿಗೆಯು ಇಲ್ಲದ ಪ್ರಪಂಚಕನು ನಾನು। ಅಂಬರೀಷಗೆ ಒಲಿದ ಅಕ್ರೂರಸಖ ನೀನು। ಡಂಬಕರ್ಮಿಯು ನಾನು ನಿರ್ಜಿತನು ನೀನು॥3॥ ವಾರಿಧಿಶಯನನಾದ ಕಾರುಣ್ಯನಿಧಿ ನೀನು। ಘೋರದಿಂದಿಹ ಕಾಮಿ ಕ್ರೋಧಿ ನಾನು। ಈರೇಳು ಭುವನದೊಳು ಇರುವ ಮೂರುತಿ ನೀನು। ದೂರಿ ನಿನ್ನನು ಬಯ್ವ ದುಷ್ಟ ನಾನು॥4॥ ತಿರುಪತಿಯ ವಾಸ ಶ್ರೀವೆಂಕಟೇಶನೆ ನಿನ್ನ। ಚರಣ ಸೇವಕರ ಸೇವಕನು ನಾನು। ಬಿರುದುಳ್ಳವನು ನೀನು ಮೊರೆಹೊಕ್ಕೆನೈ ನಾನು। ಸಿರಿ ಕಾಗಿನೆಲೆಯಾದಿಕೇಶವನು ನೀನು॥5॥

ನಾನೇಕೆ ಪರದೇಶಿ — ರಾಗ: ಬೇಹಾಗ್-ಆದಿತಾಳ

ನಾನೇಕೆ ಪರದೇಶಿ ನಾನೇಕೆ ಬಡವನೊ। ಶ್ರೀನಿಧೇ ಹರಿ ಎನಗೆ ನೀನಿರುವ ತನಕ॥ಪ॥ ಪುಟ್ಟಿಸಿದ ತಾಯಿ ತಂದೆ ಇಷ್ಟಮಿತ್ರನು ನೀನೆ। ಅಷ್ಟ ಬಂಧು ಸರ್ವ ಬಳಗ ನೀನೆ॥ ಪೆಟ್ಟಿಗೆಯೊಳಗಿನ ಅಷ್ಟಾಭರಣ ನೀನೆ। ಶ್ರೇಷ್ಠಮೂರುತಿ ಕೃಷ್ಣ ನೀನಿರುವತನಕ॥1॥ ಒಡಹುಟ್ಟಿದವ ನೀನೆ। ಒಡಲಹೊರೆವವ ನೀನೆ। ಉಡಲು ಹೊದೆಯಲು ವಸ್ತ್ರ ಕೊಡುವವ ನೀನೆ। ಮಡದಿ ಮಕ್ಕಳನೆಲ್ಲ ಕಡೆಹಾಯಿಸುವವ ನೀನೆ। ಬಿಡದೆ ಸಲಹುವ ಒಡೆಯ ನೀನಿರುವತನಕ॥2॥ ವಿದ್ಯೆ ಹೇಳುವವ ನೀನೆ ಬುದ್ಧಿ ಕಲಿಸುವವ ನೀನೆ। ಉದ್ಧಾರಕರ್ತ ಮಮಸ್ವಾಮಿ ನೀನೆ। ಮುದ್ದು ಶ್ರೀ ಪುರಂದರವಿಠಲ ನಿನ್ನಡಿಮೇಲೆ। ಬಿದ್ದುಕೊಂಡಿರುವತನಕ ಏತರ ಭಯವೊ॥3॥

ಪರದೇಶಿ ನೀನು ಸ್ವದೇಶಿ ನಾನು

ಪರದೇಶಿ ನೀನು ಸ್ವದೇಶಿ ನಾನು। ಪರಮ ಭಾಗವತರಲ್ಲಿ ಬಾ ಹೋಗಿ ಕೇಳೋಣ॥ಪ॥ ಎನಗೆ ಜನಕನು ನೀನು ನಿನಗಾವ ಜನಕನೋ। ಜನನಿ ಇಂದಿರದೇವಿ ನಿನಗಾವ ಜನನಿ॥ ವನಜ ಪಿತನು ಭ್ರಾತ ನಿನಗಾವ ಭ್ರಾತನೋ। ಇನ ಸೋಮ ಮಾತುಳರು ನಿನಗಾವ ಮಾತುಳರೋ॥1॥ ಸುರನಿಧಿ ಅಗ್ರಜಳು ನಿನಗೆ ಅಗ್ರಜಳಾರೋ। ಶರನಿಧಿ ಭಾವ ನಿನಗಾರೋ ಭಾವ॥ ಸ್ಮರನೆನ್ನ ಸಹಭವನು ನಿನಗೆ ಸಹಭವನ್ಯಾರೋ। ಸುರರು ಬಂಧುಗಳೆನಗೆ ನಿನಗಾರು ಬಾಂಧವರೋ॥2॥ ವರ ಇಳಾ ಸಾಮಾತೆ ನಿನಗೆ ಸಾಮಾತೆ ಯಾರು। ಮರುತ ದೇವರೆ ಗುರುವು ನಿನಗಾವ ಗುರುವು॥ ಸಿರಿಯರಸ ವಿಜಯ ವಿಠಲ ರಾಯನೇ ನಿನ್ನ। ಚರಣ ಸೇವಕ ನಾನು ನೀನಾರ ಸೇವಕನೋ॥3॥

ಪಾಲಿಸುವುದು ಶ್ರೀ ಹರಿಯೇ

ಪಾಲಿಸುವುದು ಶ್ರೀ ಹರಿಯೇ। ಪರದೇಶಿಯನು ಸಿರಿಧೋರೆಯೇ॥ಪ॥ ಪಾಲಿಸುವುದು ವಿಶಾಲ ಮತಿಯನಿತ್ತು। ಕಾಲಕಾಲಕೆ ನಿನ್ನ ಊಳಿಗವನೆ ಕೊಟ್ಟು ॥ಅ.ಪ॥ ಹೃದಯಾಂಬುಜದೊಳು ಮೆರೆವೇ ನಿನ್ನ। ಪದಗಳ ನೆನೆವರ ಪೊರೆವೇ। ಮದ ಮೋಹಗಳನು ತರಿವೇ। ಸದನದೊಳಾಡುತಲಿರುವೇ। ಸದಮನನಾಗಿ ಮುದದಿ ಮಥಿಸಿದೆ। ಮುದದಿ ಸುಧೆಯ ತಂದು ತ್ರಿದಶರಿಗುಣಿಸಿದೆ॥1॥ ಗಂಗೆ ಯಮುನೆ ನಡುವೇ ವರ। ರಂಗ ಮಂಟಪದೊಳಿರುವೇ ನಿನ್ನ। ಡಿಂಗರಿಗರುಷವ ಕೊಡುವೇ। ಲಿಂಗ ಶರೀರವ ಸುಡುವೇ। ಅಂಗಜ ಪಿತಸಾರಂಗನಾಥನ ದಯ। ಮಂಗಳ ಪ್ರದನ ಮಂಗಳ ನುಡಿಸೋ॥2॥ ನರಹರಿ ತರಳನ ಕಾಯೇ ಕರಿ। ಕರೆಯಲು ಬೇಗನೆ ಬಂದೇ। ನರನಿಗೆ ಸಾರಥಿಯಾದೇ ವರ। ತರುಣಿಯ ಮಾನ ರಕ್ಷಿಸಿದೇ। ಧರೆಯೊಳು ಶೇಷಾಚಲ ಜಯ ವಿಠ್ಠಲ। ಅರಿವರ ಮನದಲಿ ನಲಿದಾಡುವ ಪ್ರಭು॥3॥

ದಾಸನಾಗು ವಿಶೇಷನಾಗು

ದಾಸನಾಗು ವಿಶೇಷನಾಗು॥ ಏಸು ಕಾಯಂಗಳ ಕಳೆದು ಎಂಭತ್ನಾಲ್ಕು ಲಕ್ಷ ಜೀವ। ರಾಶಿಯನುದಾಟಿ ಬಂದ ಈ ಶರೀರ।

ತಾನಲ್ಲ ತನ್ನದಲ್ಲ। ಆಸೆ ತರವಲ್ಲ। ಮುಂದೆ ಬಾಹೋದಲ್ಲಾ ।।ಪ।। ಆಶಾ ಕ್ಲೇಶ ದೋಷವೆಂಬ ಅಬ್ಧಿಯೊಳು ಮುಳುಗಿ ಯಮನ। ಪಾಕಶಕೊಳಗಾಗದೆ ನಿರ್ದೋಷಿಯಾಗು ಸಂತೋಷಿಯಾಗು। ಕಾಶಿ ವಾರಣಾಸಿ ಕಂಚಿ ಕಾಳಹಸ್ತಿ ರಾಮೇಶ್ವರ। ಏಸು ದೇಶ ತಿರುಗಿದರೆ ಬಾಹೋದೇನೋ। ಅಲ್ಲಿ ಹೋದೋನೋ। ದೋಷನಾಶ ಕೃಷ್ಣವೇಣಿ ಗಂಗೆ ಗೋದಾವರಿ ಭವ। ನಾಶಿ ತುಂಗಭದ್ರೆ ಯಮುನೆ ವಾಸದಲ್ಲಿ। ಉಪವಾಸದಲ್ಲಿ। ಮೀಸಲಾಗಿ ಮಿಂದು ಜಪ ತಪ ಹೋಮನೇಮಗಳ। ಏಸುಬಾರಿ ಬಾರಿ ಮಾಡಿದರೂ ಫಲವೇನು। ಈ ಛಲವೇನೋ।।1।। ಅತ್ತಲೋ ಇತ್ತಲೋ ಎತ್ತಲೋ ಈ ಸಂಸಾರ। ಬತ್ತಲೆಗೆ ಬತ್ತಲೆ ನಿತ್ಯವಲ್ಲ। ಪರಿಮಿತಿಯಿಲ್ಲ। ಕತ್ತಲೆಕಾವುಳದೊಳು ಕಾಣಬಾರದೆ ನೀನು। ಸತ್ಯವೆಂಬ ದಾರಿಯನು ಸೇರಲಿಲ್ಲ। ಲೇಸು ತೋರಲಿಲ್ಲ। ಉತ್ತ 'ಅ-ವು-ಮ' ಎಂಬ ಓಂಕಾರ ಬೀಜಾಕ್ಷರ। ಚಿತ್ತದಲಿ ಗ್ರಾಹಿಸು ನೀ ಬಿಡಬೇಡ। ಬಿಟ್ಟು ಕೆಡಬೇಡ। ಹೊತ್ತಾರೆಯೋ ಬೈಗಿನೊಳು। ಆಗಲೋ ಈಗಲೋ ಕಾಯ। ನಿತ್ಯವೆಂದು ಸ್ಥಿರವೆಂದು ನಂಬಬೇಡ। ನಿನಗೆ ಡಂಬ ಬೇಡ।।2।। ಆಯಿತೋ ಹೋಯಿತೋ ಏನಾಯಿತೋ ಈ ದೇಹಕ್ಕೆ। ತಾಯಿ ಯಾರೋ ಇನ್ನು ತಂದೆಯಾರೋ। ಮಾಯದೊಳು ಸಿಲುಕಿ ಬಲು ಕಾಲದಿಂದ ಶ್ರೀರಘು। ರಾಯನೆಂಬ ದೇವನ ಸ್ಮರಣೆ ಬಿಟ್ಟು। ಭವದಿ ಮಮತೆ ಇಟ್ಟು। ನಾಯ ಬಾಯ ಅರಿವೆಯಂತೆ ನಾನಾ ಕೋಟಲೆಯಲ್ಲಿ ಬಿದ್ದು। ಬಾಯಬಾಯ ಬಿಡುತಲಿ ಸಾವುದೇನೋ। ನೀ ನೋವುದೇನೋ। ತ್ರಾಹಿ ತ್ರಾಹಿ ತ್ರಾಹಿ ಎಂದು ತ್ರೈಲೋಕ್ಯದೊಡೆಯನ। ಪುಣ್ಯದಾಯಕನ ಹೊಂದಿ ಧನ್ಯನಾಗೋ। ಮುಕ್ತಮಾನ್ಯನಾಗೋ।।3।। ಅಂದಿಗೂ ಇಂದಿಗೂ ಒಮ್ಮೆ ಸಿರಿಕಮಲೇಶನನ್ನು। ಒಂದು ಬಾರಿಯೂ ಹಿಂದೆ ನೆನಯಲಿಲ್ಲ ಮನ ದಣಿಯಲಿಲ್ಲ। ಬಂದುಬಂದು ಭ್ರಮೆಗೊಂಡು ಮಾಯಾ ಲೋಕಕ್ಕೆ ಸಿಕ್ಕಿ। ನೊಂದು ಬೆಂದು ಒಂದರಿಂದ ಉಳಿಯಲಿಲ್ಲ। ಬಂಧ ಕಳೆಯಲಿಲ್ಲ। ಸಂದೇಹವ ಮಾಡದಿರು ಅರಿವು ಎಂಬ ದೀಪ ಇಟ್ಟು। ಇಂದು ಕಂಡ್ಯ ದೇಹದಲ್ಲಿ। ಪಿಂಡಾಂಡ ಹಾಗೆ ಬ್ರಹ್ಮಾಂಡ। ಇಂದು ಹರಿಯ ಧ್ಯಾನವನ್ನು ಮಾಡಿ ವಿವೇಕದಿ। ಮುಕುಂದನಿಂದ ಮುಕ್ತಿ ಬೇಡು ಕಂಡ್ಯ। ನೀ ನೋಡು ಕಂಡ್ಯ।।4।। ಮೂರುಬಾರಿ ಶರಣು ಮಾಡಿ। ನೀರ ಮುಳಗಲ್ಹಾಕೆ ಪರ। ನಾರಿಯರ ನೋಟಕೆ ಗುರಿಯ ಮಾಡಿದಿ। ಮನಸೆರೆಯ ಮಾಡಿದಿ। ಸುರೆಯೊಳು ಸುರೆ ತುಂಬಿ ಮೇಲೆ ಹೂವಿನ ಹಾರ। ಗೀರು ಗಂಧ ಅಕ್ಷತೆಯ ಧರಿಸಿದಂತೆ। ನೀ ಮರೆಸಿದಂತೆ।। ಗಾರುಡಿಯ ಮಾತ ಬಿಟ್ಟು ನಾದಬ್ರಹ್ಮನ ಪಿಡಿದು। ಸಾರಿಸೂರಿ ಮುಕ್ತಿಯನು ಶಮನದಿಂದ। ಮತ್ತೆ ಸುಮನದಿಂದ। ನಾರಾಯಣ। ಅಚ್ಯುತ ಅನಂತ ಆದಿಕೇಶವನ। ಸಾರಾಮೃತವನ್ನುಂಡು ಸುಖಿಸೋ ಲಂಡ ಜೀವವೇ। ಎಲೋ ಭಂಡ ಜೀವವೇ।।5।।

ಸಾಕು ಈ ಭವ ಭಂಗ

ಸಾಕು ಈ ಭವ ಭಂಗ ಸಾಕು ಈ ಮಾನಭಂಗ। ಸಾಕಬೇಕೆಲವೋ ರಂಗ।।ಪ।। ಸಾಕಲಾರದೆ ತಂದೆ ಯಾಕಿಲ್ಲಿ ಕರೆತಂದೆ। ವ್ಯಾಕುಲದಲಿ ನೊಂದೆ ದಿಕ್ಕು ತೋಚದು ಮುಂದೆ।।ಅ.ಪ।। ಹಲವು ಜನುಮಗಳಲ್ಲಿ ತೊಳಲಿ ಬಳಲಿ। ಇಲ್ಲಿ ಪುಟ್ಟಿದೆ ನೀಗ। ನರಜನುಮದಲ್ಲಿ। ಎಲ್ಲಿ ಪೋದರು ಸುಖವಿಲ್ಲ ಈ ಲೋಕದಲ್ಲಿ। ಕಾಲವ ಕಳೆಯುತಲಿರುವೆನೊ। ಭೀತಿಯಲ್ಲಿ।।1।। ಆಡಬಾರದ ಆಟ ನೋಡಬಾರದ ನೋಡ। ಕೂಡಬಾರದ ಕೂಟದೊಳಗೆನ್ನ ನಲಿದಾಟ। ಒಡಲಿಗೋಸುಗ ಪರರ ಮನೆಗಳಿಗೆ ತಿರುಗಾಟ। ಬಾಹ್ಯವೆಂದರು ಬಿಡದು ಇವೆಲ್ಲ ನಿನ್ನಾಟ।।2।। ನಿನ್ನವ ನೆಂದೆಣಿಸೊ ಮನವ ನಿನ್ನೊಳು ನಿಲಿಸೋ। ನಿನ್ನ ಭಕುತರ ಸಂಗದೊಳಗೆನ್ನ ನಿರಿಸೊ। ಎನ್ನಂಥ ಪತಿತರು ಇನ್ನಿಲ್ಲ ಸಟೆಯಲ್ಲ। ಮನ್ನಿಸಿ ಸಲಹಯ್ಯ ಪ್ರಾಣೇಶವಿಠಲ।।3।।

ಸಾಧನಕೆ ಬಗೆಗಾಣೆ ಎನ್ನಬಹುದೇ

ಸಾಧನಕೆ ಬಗೆಗಾಣೆ ಎನ್ನಬಹುದೇ। ಸಾದರರದಿ ಗುರುಕರುಣೆ ತಾ ಪಡೆದ ಬಳಿಕ।।ಪ।। ಕಂಡಕಂಡದ್ದೆಲ್ಲ ಕಮಲನಾಭನ ಮೂರ್ತಿ। ಉಂಡು ಉಟ್ಟದ್ದೆಲ್ಲ ವಿಷ್ಣುಪೂಜೆ। ತಂಡತಂಡದ ವಾರ್ತೆ ಕಮಲನಾಭನ ಕೀರ್ತಿಹಿಂಡು ದೈವಗಳೆಲ್ಲ ಹರಿಯ ವಿಹಾರ।।1।। ವಾಗತ್ಯಪಡುವುದೇ ವಿಧಿ ನಿಷೇಧಾಚರಣೆ। ರೋಗಾಣು ಭಯವೆಲ್ಲ ಉಗ್ರತಪವೋ। ಆಗರವರಾಡಿಕೊಂಬುವುದೇ ವೈರಾಗ್ಯ। ಬೀಗರುಪಚಾರವೇ ಭೂತ ದಯವು।।2।। ಹಿಡಿದ ಹಠ ಪೂರೈಸಲದು ಹರಿಯ

ಸಂಕಲ್ಪ। ನಡೆದಾಡುವುದೆಲ್ಲ ತೀರ್ಥಯಾತ್ರೆ। ಬಡತನವು ಬರಲದೇ ಭಗವದ್ ಭಜನೆಯ ಯೋಗ। ಸಡಗರದಲ್ಲಿಪ್ಪುದೇ ಶ್ರೀಶನಾಜ್ಞೆ॥3।. ಬುದ್ಧಿ ಸಾಲದೇ ಸುಮ್ಮನಿರುವುದೇ ಸಮ್ಮತವು। ಯದೃಚ್ಛಾ ಲಾಭವು ಸುಖವು ಎನಲು। ಮಧ್ವಾಂತರ್ಗತ ಶ್ರೀ ವಿಜಯವಿಠ್ಠಲರೇಯಾ। ಹೃದ್ಗತಾರ್ಥವ ತಿಳಿದು ಒಪ್ಪಿಕೊಳ್ಳನೇ॥4॥

ನಿನಗರ್ಪಿತ ಪ್ರಭುವೆ **ರಾಗ: ಮೋಹನ**

ನಿನಗರ್ಪಿತ ಪ್ರಭುವೆ ನಿನಗರ್ಪಿತ। ಅನುದಿನವು ನಾಗೈವ ಪಾಪ ಪುಣ್ಯಫಲವು॥ಪ॥ ಪರರೆನ್ನ ನಿಂದಿಸಲು ನಿನಗರ್ಪಿತ। ಪರರೆನ್ನ ವಂದಿಸಲು ಅದು ಅರ್ಪಿತ। ಪರರೊಳಗೆ ನೀತೋರಿ ಪರಮಾದರದಿಂದ। ಪಾಮರಳ ಪಾಲಿಸಲು ಅದು ಅರ್ಪಿತ॥1॥ ಎನ್ನಯ ತನುಮನವು ನಿನಗರ್ಪಿತ। ಎನ್ನಯ ನಡೆನುಡಿಯು ಅದು ಅರ್ಪಿತ। ಎನ್ನೊಡಲ ಉಸಿರು ತಾ ನಿನಗರ್ಪಿತ। ಎನ್ನಯ ಸರ್ವಸ್ವ ನಿನಗರ್ಪಿತ॥2॥ ಅನುದಿನವು ನಿನ್ನ ಸ್ಮರಣೆ ನಿನಗರ್ಪಿತ। ಅದು ಬಿಟ್ಟು ವ್ಯವಹರಿಸೆ ಅದು ಅರ್ಪಿತ। ಅಂಬೆ ಶಾರದದಾಸಿ ವಂದಿತ ಅಚ್ಯುತ। ಅನಂತ ಗೋವಿಂದ ಮುಕುಂದ ನಿನಗರ್ಪಿತ॥3॥

ಸುಲಭ ಪೂಜೆಯ ಮಾಡಿ **ರಾಗ: ಮಧುವಂತಿ-ಝಂಪೇತಾಳ**

ಸುಲಭ ಪೂಜೆಯ ಮಾಡಿ ಬಲವಿಲ್ಲದವರು॥ಪ॥ ನಳಿನನಾಭನ ಪಾದ ನಳಿನ ಸೇವಕರು॥ಅ॥ ಇರುಳು ಹಚ್ಚುವ ದೀಪ ಹರಿಗೆ ನೀರಾಜನವು। ಮರೆಮಾಡುವ ವಸ್ತ್ರ ಪರಮ ಮಡಿಯು। ತಿರುಗಾಡಿ ದಣಿಯುವುದೆ ಹರಿಗೆ ಪ್ರದಕ್ಷಿಣೆಯು। ಹೊರಳಿ ಮಲಗುವುದೆಲ್ಲ ಹರಿಗೆ ವಂದನೆಯು॥1॥ ನುಡಿವ ಮಾತುಗಳೆಲ್ಲ ಕಡಲಶಯನನ ಜಪವು। ಮಡದಿ ಮಕ್ಕಳು ಮತ್ತೆ ಒಡನೆ ಪರಿವಾರ। ನಡುಮನೆಯು ಅಂಗಳವು। ಉಡುಪಿ ವೈಕುಂಠಗಳು। ಎಡಬಲದ ಮನೆಯವರು ಕಡುಭಾಗವತರು॥2॥ ಹೀಗೆ ಅನುದಿನ ತಿಳಿದು ಹಿಗ್ಗುವ ಜನರ। ಭವರೋಗ ಪರಿಹರವು ಮೂಜಗದಿ ಸುಖವು। ಹೋಗುತಿದೆ ಈ ಆಯು ಬೇಗದಿಂದಲಿ ನಮ್ಮ। ಯೋಗೇಶ ಪುರಂದರವಿಠಲನ ನೆನೆನೆನೆದು॥3॥

ಬಡತನದ ಪೂಜೆಯನು ಬಿಡದೆ **ರಾಗ: ಕಾಂಬೋಧಿ**

ಬಡತನದ ಪೂಜೆಯನು ಬಿಡದೆ ಸ್ವೀಕರಿಸು। ಕಡುತರದ ಮಮತೆಯಲಿ ಎನ್ನ ಕೈ ಬಿಡದೇ॥ಪ॥ ನಿನ್ನ ಪಾದವ ಪಿಡಿದು। ಜ್ಞಾನ ತೀರ್ಥದಿ ತೊಳೆದು। ಧ್ಯಾನದರಿವೆಯೊಳೊರೆಸಿ ಮಂತ್ರವನು ಜಪಿಸಿ ಕಣ್ಣು ಕಮಲದಿ ರಚಿಸಿ ಹೃದಯ ಸಂಪುಟದಲ್ಲಿರಿಸಿ। ನಿನ್ನೊಳಗೆ ಐಕ್ಯವನು ಮಾಡೆನ್ನ ತಾಯೆ॥1॥ ಚಂದನದ ಚಕ್ಕೆಯಂತೆನ್ನ ದೇಹವನರೆದು। ಸೇವೆಯಾ ಸಾಣೆಯಲಿ ಗಂಧವನು ತೆಗೆದು। ಇಂದೀವರಾಕ್ಷಿಯ ಅಂದದಾ ಹಣೆಯಲ್ಲಿ। ಚಂದಿರನ ಪೋಲುವ ಒಂದು ತಿಲಕವಾನಿಡುವೆ॥2॥ ಬಡವಳಾ ಪೂಜೆಯನು ಕಡಿಮೆ ತಾ ಕಸವೆಂದೂ। ಕಡೆಗಣ್ಣ ನೋಟದಲಿ ನೋಡದಿರು ತಾಯೇ। ನಿನ್ನ ಕೃಪಾ ತೀರ್ಥದಲಿ ಎನ್ನ ಬಿನ್ನಪವೊತ್ತಿ। ನಿನ್ನೊಳಗೆ ಐಕ್ಯವನು ಮಾಡಮ್ಮ ತಾಯೆ॥3॥ ಸರ್ವಸ್ವವೆಂಬುವ ನಮಸ್ಕಾರವನ್ನೆಸಗಿ। ರಾಮನಾಮವು ಎನ್ನ ನಾಲಿಗೆಯೊಳಿರಿಸಿ। ನಿನ್ನ ಪಾದದ ಬಳಿಗೆ ಎನ್ನ ಜೀವವ ಸೆಳೆದು ನಿನ್ನೊಳಗೆ ಐಕ್ಯವನು ಮಾಡಮ್ಮ ತಾಯೇ॥4॥ ಜೀವನದ ಭಕ್ತಿಯಲೀ ಅರಿವಿನಾ ಕರ್ಪೂರ ಭಕ್ತಿಯಾ ಕಿಡಿಯಲ್ಲಿ ಹೊತ್ತಿಸುವೆನೀಗಾ ಅಂತರಗದಿ ಬಂಧು ಆರತಿಯನೆತ್ತುವೆನು। ಅರ್ಪಿಸುವೆ ನೈವೇದ್ಯವಾಗಿ ಮನವಾ॥5॥

ಬೆಲ್ಲದ ಕಟ್ಟೆಯ ಕಟ್ಟಿ ಬೇವಿನ ಬೀಜವ ಬಿತ್ತಿ **ರಾಗ: ಸಿಂಹೇಂದ್ರಮಧ್ಯಮ-ಆದಿತಾಳ**

ಬೆಲ್ಲದ ಕಟ್ಟೆಯ ಕಟ್ಟಿ ಬೇವಿನ ಬೀಜವ ಬಿತ್ತಿ। ಜೇನು ಮಳೆಗಾರೆದರೆ ವಿಷ ಹೋಗುವುದೇನಯ್ಯಾ॥ ಏನು ನೋಡಿದರೇನು ಏನು ಕೇಳಿದರೇನು। ಮನದೊಳಗಿನ ತಾಮಸ ಮಾಣದನ್ನಕ॥ ಕೊಳಲ ದನಿಗೆ ಸರ್ಪ ತಲೆದೂಗುವಂದದಿ। ಇದಕೇನು ಮದ್ದು ಶ್ರೀ ಪುರಂದರ ವಿಠ್ಠಲಾ॥

ಇನಿತಾದರೂ ನಿನಗೆ ಮತಿಯಿಲ್ಲವೇ ಮನವೇ ರಾಗ: ಮೋಹನ-ಝಂಪೆತಾಳ

ಇನಿತಾದರೂ ನಿನಗೆ ಮತಿಯಿಲ್ಲವೇ ಮನವೆ। ಹೀನಾಯ ಮಾಡದಿರು ಪರದೋಷಗಳ ನೆಣಿಸಿ।।ಪ।। ಅವನ ಬಯ್ಯುವೆ ಯಾಕೆ ಅವನ್ಯಾರು ನೀನ್ಯಾರು। ಅವನ ಪಾಪಕೆ ನೀನು ಭಾಗಿಯಾದೆ। ಅವನು ಉತ್ತಮನಾದರವನು ಬದುಕಿದ ಕಾಣೊ। ಅವ ಪುಣ್ಯ ಮಾಡಿದರೆ ಅವನ ಕುಲ ಉದ್ಧಾರ।।1।। ನೀನು ಪಡೆವುದರಲ್ಲಿ ಬೇಡಬಂದವನಲ್ಲ। ನಿನಗು ಅವನಿಗು ಏನು ಸಂಬಂಧವೋ। ಮನೆ ಒಡವೆ ವಸ್ತ್ರಗಳ ಭಾಗಕೇಳುವುದಿಲ್ಲ। ಕ್ಷಣಕ್ಷಣಕೆ ಸಂದೇಹ ಮಾಡಿಕೊಂಬುದು ಸಲ್ಲ।।2।। ನಿನ್ನ ಗತಿ ಮಾರ್ಗಕ್ಕೆ ಅವ ನಡೆದು ಬರುವನೇ। ನಿನ್ನಿಂದ ಪರಲೋಕ ಅವಗೆ ಉಂಟೆ। ನಿನ್ನೊಳಗೆ ನೀ ತಿಳಿದು ಶ್ರೀವಿಜಯವಿಠ್ಠಲನ್ನ। ಸನ್ನುತಿಸಿ ಭವ ರೋಗವನು ಕಳೆದುಕೊಳ್ಳಯ್ಯ।।3।।

❖ ❖ ❖

ಬಿನ್ನಹಕ್ಕೆ ಬಾಯಿಲ್ಲವಯ್ಯ ರಾಗ: ಹಿಂದೋಳ-ಝಂಪೆತಾಳ

ಬಿನ್ನಹಕ್ಕೆ ಬಾಯಿಲ್ಲವಯ್ಯ। ಅನಂತ ಅಪರಾಧ ಎನ್ನಲ್ಲಿ ಇರಲಾಗಿ।।ಪ।। ಅಸುರಾರಿ ನಿನ್ನ ಮರೆತೆನೊ ಕಾಯೊ ಹರಿಯೆ।।ಅ।। ಶಿಶು ಮೋಹ ಸತಿ ಮೋಹ ಜನನಿ ಜನಕರ ಮೋಹ। ರಸಿಕ ಭ್ರಾಂತಿಯ ಮೋಹ ರಾಜಮನ್ನಣೆ ಮೋಹ।। ಪಶು ಮೋಹ ಭೂ ಮೋಹ ಬಂಧುವರ್ಗದ ಮೋಹ। ಹಸನುಳ್ಳ ಆಭರಣಗಳ ಮೋಹದಿಂದ।।1।। ಅನ್ನಮದ ಅರ್ಥಮದ ಅಖಿಳ ವೈಭವದ ಮದ। ಮುನ್ನ ಪ್ರಾಯದ ಮದವು ರೂಪಮದವು।। ತನ್ನ ಸತ್ವದ ಮದ ಧಾತ್ರಿ ವಶವಾದ ಮದ। ಇನ್ನು ತನಗೆದುರಿಲ್ಲವೆಂತೆಂಬ ಮದದಿಂದ।।2।। ಇಷ್ಟು ದೊರೆಕಿದರೆ ಮತ್ತಿಷ್ಟು ಬೇಕೆಂಬಾಸೆ। ಅಷ್ಟು ದೊರಕಿದರು ಮತ್ತಷ್ಟರಾಸೆ।। ಕಷ್ಟ ಬೇಡೆಂಬಾಸೆ ಕಡುಸುಖವ ಕಾಂಬಾಸೆ। ನಷ್ಟ ಜೀವನದಾಸೆ ಪುರಂದರವಿಠಲ।।4।।

ನಿನ್ನನೇ ನಂಬಿದೆನೋ ನೀ ಎನ್ನ ಸಲಹಯ್ಯ

ನಿನ್ನನೇ ನಂಬಿದೆನೋ ನೀ ಎನ್ನ ಸಲಹಯ್ಯ। ಎನ್ನ ಗುಣ ದೋಷಗಳ ಎಣಿಸಬೇಡಯ್ಯ ಕೃಷ್ಣಾ।।ಪ।। ಬಾಲ್ಯದಲಿಕೆಲವು ದಿನ ಬರಿದೆ ಹೋಯಿತು ಹೊತ್ತು। ಮೇಲೆ ಯೌವನ ಮದದಿ ಮುಂದರಿಯದಿದ್ದೆ। ಜಾಲ ಸಂಸಾರದಲ್ಲಿ ಸಿಲುಕಿ ಬಳಲಿದೆನಯ್ಯ। ಪಾಲಿಸೋ ಪರಮಾತ್ಮ ಭಕ್ತಿಯನೆ ಕೊಟ್ಟು।।1।। ಆಸೆಯೆಂಬುದು ಅಜನ ಲೋಕಕ್ಕೆ ಮುಟ್ಟುತಿದೆ। ಬೇಸರದ ಸ್ತ್ರೀಯರೊಳು ಬುದ್ಧಿಯೆನಗೆ। ವಾಸುದೇವನ ಸ್ಮರಣೆ ಒಮ್ಮೆ ಮಾಡ್ದವನಲ್ಲ। ಕೇಶವನೆ ಕ್ಲೇಶಗಳ ಪರಿಹರಿಸಿ ಕಾಯೋ।।2।। ಈ ತೆರದಿ ಕಾಲವನು ಇಂದಿರೇಶನೆ ಕಳೆದೆ। ಭೀತಿ ಇಲ್ಲದೆ ಜ್ಞಾನ ರಹಿತನಾಗಿ। ಮಾತೆ ತನ್ನಯ ಶಿಶುವ ಮನ್ನಿಸುವ ತೆರನಂತೆ। ದಾತ ಪುರಂದರ ವಿಠಲ ದಯಮಾಡಿ ಸಲಹೋ।।3।।

ಕ್ಷಮಿಸೆನ್ನ ದೋಷಗಳ ಕ್ಷಿಪ್ರದಿ ಹರಿ

ಕ್ಷಮಿಸೆನ್ನ ದೋಷಗಳ ಕ್ಷಿಪ್ರದಿ ಹರಿ।।ಪ।। ಕ್ಷಮೆಯನ್ನುಧರಿಸಿದ ಕಮಲಾ ನಿವಾಸನೆ।।ಅ.ಪ.।। ಕರಣ ತ್ರಯದಿ ಕಾಲ ಹರಣವಿಲ್ಲದೆ ಪಾಪಾ। ಚರಣೆಯಿಂದೋಷದ ಭರಣೆಯಾದು। ಹರಿ।।1।। ಮಾಡಬಾರದ ಪಾಪ ಮಾಡುವೆನನುದಿನ। ಮೂಢನ ಸುಕೃತವ ನಾಡಿ ತೋರಿಸಲೇಕೆ।।2।। ಹರಿಗುರುಹಿರಿಯರ ಜರಿದು ಸಜ್ಜನರನು। ತೊರೆದು ದುರ್ಜನರೊಳು ಬೆರೆದು ಪಾಮರನಾದೆ ।।3।। ಸರ್ವಸಂಹಾಧಿಪ ಸರ್ವಚೇತನ ದೀಪ। ಸರ್ವಾಪರಾಧವ ನಿರ್ವಹಿಸುಫ ಭೂಪ।।4।। ದುರಿತ ವೈರಿಯೆ ನಿನ್ನ-ಮೊರೆಹೊಕ್ಕ ಮನುಜಗೆ। ದುರಿತದುಃಖಗಳುಂಟೆ-ವರದ ವಿಠಲರಾಯ ।।5।।

ಕ್ಷಮಿಸು ನಾ ಮಾಡಿದ ಅಪರಾಧ

ಕ್ಷಮಿಸು ನಾ ಮಾಡಿದ ಅಪರಾಧ ಕೃಪೆಯಿಂದ। ನಮಿಸಿ ಬೇಡುವೆ ಹರಿಯೇ ವಿಮಲ ಪದಕೆ। ಸುಮನಸರೊಳಿರಿಸೆನ್ನ ಕರುಣಿಸಿ ಸಲಹಯ್ಯ। ಕಮಲಾಕ್ಷ ನಿನ್ನ ನಂಬಿ ಮೊರೆಹೊಕ್ಕೆ ಶ್ರೀರಾಮ।।

ಸಿರಿರಮಣ ತವಚರಣ

ಸಿರಿರಮಣ ತವಚರಣ ದೊರಕುವುದು ಹ್ಯಾಂಗಿನ್ನು। ಪರಮ ಪಾಪಿಷ್ಟ ನಾನು।।ಪ।। ನರಹರಿಯೆ ನಿನ್ನ ನಾಮಸ್ಮರಣೆ ಮಾಡದೆ। ನರಕಕ್ಕೇ ಗುರಿಯಾದೆನೋ।।ಅ.ಪ.।। ಕೆರೆ ಭಾವಿ ದೇವ ಮಂದಿರಗಳನು ಕೆಡಹಿ ನಾ ಹಿರಿದಾಗಿ ಮನೆ ಕಟ್ಟಿದೆ। ನೆರೆನಡೆವ ಮಾರ್ಗದಾ ಅರವಟ್ಟಿಗೆಗಳನ್ನು ಥರಥರದಿ ಬಿಚ್ಚಿ ತೆಗೆದೆ।। ಪರಮ ಸಂಭ್ರಮದಿಂದ ಅರಳಿಯ ಮರಕಡಿಸಿ ಕೊರಿಸಿ ಬಾಗಿಲ ಮಾಡಿದೆ। ಮರಮಂದಿರವ ಮುಗಿಸಿ ಹರುಷ ಚಿತ್ರವ ತೆಗೆಸಿ ಪರಿಪರಿಯ ಸೌಖ್ಯ ಸುರಿದೆ। ಮೆರೆದೆ।।1।। ಹೊಸಮನೆಯ ಕಂಡು ಬಲು ಹಸಿದು ಭೂಸುರರು ಬರೆ ಕೊಸರಿ ಹಾಕುತ ದಬ್ಬುತ್ತಾ। ಶಶಿ ಮುಖಿಯೇ ಬಾರೆಂದು ಅಸುವನೆ ಬಣ್ಣಿಸುತ ಹಸನಾಗಿ ಅವಳೊಲಿಯುತ। ದಶಮಿ ಏಕಾದಶಿ ದ್ವಾದಶಿ ದಿನತ್ರಯದಿ ಅಶನವೆರಡ್ಹೊತ್ತುಣ್ಣುತಾ। ಘಸಘಸನೆ ತಾಂಬೂಲ ಪಶುವಿನಂದದಿ ಮೆದ್ದು ಕುಸುಮಗಂಧಿಯ ರಮಿಸುತಾ। ಸತತಾ।।2।। ಸ್ನಾನ ಸಂಧ್ಯಾನ ಅತಿಮೌನ ಗಾಯತ್ರಿಜಪ ಭಾನುಗರ್ಘ್ಯವನು ಕೊಡದೆ। ಶ್ರೀನಿವಾಸನೆ ನಿನ್ನ ಜ್ಞಾನಪೂರ್ವಕ ಪೂಜೆ ನಾನೊಂದು ಕ್ಷಣ ಮಾಡದೆ। ಬೇನೆ ಬಂದಂತಾಗಿ ಹೀನ ಸಕೇಶಿಯ ಕೈಲಿ ನಾನಾ ವಿಧಾನ್ನ ಉಂಡೆ। ಜೀನತ್ವದಲಿ ದುಡ್ಡು ದಾನ ಧರ್ಮವ ಕೊಡದೆ ಶ್ವಾನನಂದದಿ ಚರಿಸಿದೆ। ಬರಿದೆ।।3।। ಸಾಕಲ್ಯದಿಂದ ಶಾಲಿಗ್ರಾಮದಭಿಷೇಕ ಅಕಳ್ವಾಲಲಿ ಮಡದೆ। ನಾಕೆಂಟು ನಾಯಿಗಳ ಸಾಕಿ ಮನೆಯೊಳು ಬದುಕಬೇಕೆಂದು। ಹಾಲು ಹೊಯ್ದೆ।। ಕಾಕುಬುದ್ಧಿಗಳಿಂದ ಗುಡಗುಡಿ ನಶ್ಯಪುಡಿ ಹಾಕಿ ಭಂಗಿಯ ಸೇದಿದೆ। ಲೋಕ ನಿಂದಕನಾಗಿ ಪಾತಕವನೆಚ್ಚಿ ಅನೇಕ ಜೂಜುಗಳಾಡಿದೆ। ಹರಿಯೇ।।4।। ಉತ್ತಮ ಬ್ರಾಹ್ಮಣರ ವೃತ್ತಿಯನೆ ಕೆಡೆಸಿ ಬ್ರಹ್ಮತ್ಯಾಗಾರನು ಎನಿಸಿದೆ। ಮತ್ತೆ ಮುಂಜೀ ಮದುವೆ ಮನೆಯೊಳಗೆ ನಾ ಪೋಗಿ ಸತ್ತ ಸುದ್ದಿಯ ಪೇಳಿದೆ। ವಿತ್ತವಿದ್ದವರ ಬೆನ್ಹತ್ತಿ ದೂತರ ಕಳುಹಿ ಕುತ್ತಿಗೆಯ ನಾ ಕೊಯಿಸಿದೆ। ಹತ್ತು ಜನ ಎನ್ಹೆಣಿಕೆ ನಿತ್ಯ ಕಲ್ಹೊಡೆಯುತಿರೆ ಮೃತ್ಯುದೇವತೆ ಎನಿಸಿದೆ। ಬಿಡದೇ।।5।। ಬಾದರಾಯಣ ಕೃತ ಭಾಗವತ ಕೇಳ್ವಲ್ಲಿ ಆದರವು ಪುಟ್ಟಲಿಲ್ಲ। ವಾದಿಗಳ ಮತವಳಿದು ಮಧ್ವಸಿದ್ಧಾಂತದ ಹಾದಿಗೇ ಪೋಗಲಿಲ್ಲ। ಶೋಧಿಸಿದ ಚಿನ್ನಕ್ಕೆ ಸಮರಾದ ವೈಷ್ಣವರ ಪಾದಕ್ಕೆ ಬೀಳಲಿಲ್ಲ। ವೇದ ಬಾಹಿರನಾಗಿ ಅಪಸವ್ಯಮನನಾಗಿ ಓದಿಕೊಂಡೆನೋ ಇದೆಲ್ಲ। ಸುಳ್ಳಾ।।6।। ಕ್ಷಿತಿಯೊಳಗೆ ಇನ್ನಾರು ಹಿತವ ಬಯಸುವರೆನಗೆ ಗತಿಯೇನು ಪೇಳೋ ಕೊನೆಗೆ। ಸತತ ತವ ಧ್ಯಾನದಲಿ ರತನಾಗಿ ಇರುವ ಸನ್ಮತಿಯನೆ ಪಾಲಿಸೀಗ।। ಪತಿತ ಪಾವನನೆಂಬೊ ಬಿರುದು ಅವನಿಯ ಮೇಲೆ ಶೃತಿಸಾರುತಿದೆಯೋ ಹೀಗೆ। ಶಿತಿಕಂಠನುತ ಜಗನ್ನಾಥವಿಠ್ಠಲ ನಿನ್ನ ತುತಿಸಿ ಮೊರೆಹೊಕ್ಕೆ ಹರಿಯೇ। ದೊರೆಯೆ।।7।।

ತಪ್ಪುಗಳೆಲ್ಲಾ ಪರಿಹರಿಸುವ ನಮ್ಮಪ್ಪನಲ್ಲವೇ — ರಾಗ: ಶಂಕರಾಭರಣ-ಆದಿತಾಳ

ತಪ್ಪುಗಳೆಲ್ಲಾ ಪರಿಹರಿಸುವ ನಮ್ಮಪ್ಪನಲ್ಲವೇ ನೀನು।।ಪ।। ಒಪ್ಪಿದ ಬಳಿಕ ಅವಗುಣವೆಣಿಸದೆ ತಿಮ್ಮಪ್ಪ ಸಲಹೊ ನೀನು।।ಅ.ಪ।। ಬೆಳಗಿನ ಝಾವದಿ ಹರಿ ನಿಮ್ಮ ಸ್ಮರಣೆಯ ಹಲುಬಿಕೊಳ್ಳದ ತಪ್ಪು। ಮಲಮೂತ್ರ ವಿಸರ್ಜನೆ ಮೃತ್ತಿಕೆಯಲಿ ನಾ ಮಲಿನವ ತೊಳೆಯದ ತಪ್ಪು। ತುಲಸಿ ಗೋ ವೃಂದಾವನ ಸೇವೆಗೆ, ಅಲಸವ ಮಾಡಿದ ತಪ್ಪು। ನಳಿನಸಖೋದಯಗರ್ಘ್ಯವ ನೀಡದ ಕಲಿವ್ಯಾಸಂಗದ ತಪ್ಪು।।1।। ಅನುದಿನ ವ್ರತನೇಮಗಳನು ಮಾಡದ ತನುವಂಚನೆಯ ತಪ್ಪು। ಕ್ಷಣಲವ ಹರಿಗುಣ ಜಿಜ್ಞಾಸಿಲ್ಲದ ಮನವಂಚನೆಯ ತಪ್ಪು। ಮುನಿಸುರ ಭೂಸುರರಾರಾಧಿಸದ, ಧನವಂಚನೆಯ ತಪ್ಪು। ವನಜಾಕ್ಷನೆ ನಿನ್ನ ಪಾದವಿಮುಖ ದುರ್ಜನ ಸಂಸರ್ಗದ ತಪ್ಪು।।2।। ಕಣ್ಣಲಿ ಕೃಷ್ಣಾಕೃತಿ ನೋಡದೆ ಪರ ಹೆಣ್ಣಿನ ನೋಡುವ ತಪ್ಪು। ನಿನ್ನ ಕಥಾಮೃತ ಕೇಳದೆ ಹರಟೆಯ ಮನ್ನಿಸುವ ಕಿವಿ ತಪ್ಪು ಅನ್ನವ ನಿನಗರ್ಪಿಸದಜ್ಞಾನದಿ ಉಣ್ಣುವ ನಾಲಿಗೆ ತಪ್ಪು। ಚಿನ್ಮಯ ಚರಣಕ್ಕೆರಗದೆ ಇಹ ಉನ್ಮತ್ತರ ನಮಿಸುವಶಿರ ತಪ್ಪು।।3।। ಆನಂದದಿ ಸತ್ಕೀರ್ತನೆ ಮಾಡದ ಹೀನ ವಿವಾದದ ತಪ್ಪು। ಶ್ರೀನಾಥಾರ್ಚನೆ ಅಲ್ಲದೆ ನಾನಾ ಊಳಿಗಮಾಡುವ ಕರ ತಪ್ಪು। ಶ್ರೀ ನಿರ್ಮಾಲ್ಯದಿ ವಿರಹಿತ ಸುರಭಿಯ ಘ್ರಾಣಿಪ ನಾಸಿಕ ತಪ್ಪು। ಶ್ರೀನಾರಾಯಣ ಯಾತ್ರೆಯ ಮಾಡದ ನಾ ನಡೆಯುವ ಪಾದದತಪ್ಪು।।4।।

ಯಜ್ಞಾತ್ಮಗೆ ಯಜ್ಞರ್ಪಿಸದೆ ಕಾಮಾಗ್ನಿಯೊಳ್ಪೊರಳುವ ತನು ತಪ್ಪು। ಅಜ್ಞಾನಜ್ಞಾನದಿ ಕ್ಷಣಲವ ಶತವೆಗ್ಗಳ ಗಳಿಸುವ ಮನಸಿನ ತಪ್ಪು। ಯಜ್ಞದಿ ಕರ್ಮವ ಶೌಚವ ಜರಿದು ಸಮಗ್ರಗುಹ್ಯದ ಕೃತಿ ತಪ್ಪು। ಯಜ್ಞೇಶ್ವರ ಪ್ರಸನ್ನವೆಂಕಟ ಕೃಷ್ಣನ ನಾಮಾಗ್ನಿಗೆ ಭವತೃಣ ತಪ್ಪು॥5॥

ತಪ್ಪುಗಳೆಲ್ಲ ನಾನೊಪ್ಪಿಕೊಂಬೆ **ರಾಗ: ಮುಖಾರಿ-ಆದಿತಾಳ**

ತಪ್ಪುಗಳೆಲ್ಲ ನಾನೊಪ್ಪಿಕೊಂಬೆ ನಮ್ಮಪ್ಪ ಕಾಯಬೇಕು ತಿಮ್ಮಪ್ಪ ನೀನೆ॥ಪ॥ ಸತಿಸುತರಿಗೆ ಸಂಸಾರ ಬಲೆಗೆ ಅತಿ। ಮತಿಹೀನನಾಗಿ ಸಿಕ್ಕೆ ಆಸೆಗಳಿಗೆ॥ ಮಿತಿಗಾಣೆನಯ್ಯ ಎನ್ನ ಪಾಪಗಳಿಗೆ ಮುಂದೆ। ಗತಿ ಯಾವುದಯ್ಯ ಶ್ರೀಪತಿ ಎನಗೆ॥1॥ ಬಿಸಿಲು ಮಳೆ ಬಿರುಗಾಳಿಯೊಳು ಬಲು। ದೆಸೆಗೆಟ್ಟು ತಿರುಗಿ ದೇಶ ದೇಶಗಳು॥ ಹಸಿವು ತೃಷೆಗಳು ಬಹು ಬಾಧಿಸಲು। ಬಹು ಹುಸಿಯನಾಡಿದೆನಯ್ಯ ಹುಟ್ಟು ಮೊದಲು॥2॥ ಸ್ನಾನ ಸಂಧ್ಯಾನವನೊಂದರಿಯೆ। ಅನ್ನ ಪಾನಗಳನು ನಾನೊಮ್ಮೆ ಮರೆಯೆ॥ ಹೀನರ ಸಂಗ ಎಂದೆಂದು ತೊರೆಯೆ । ಸುಜ್ಞಾನಿಗಳನಿತ್ತ ಬಾ ಎಂದು ಕರೆಯೆ॥3॥ ಜಪತಪದಲ್ಲಿ ರೀತಿ ಭಾಷೆಯಿಲ್ಲ। ಎನ್ನಪರಾಧಗಳಿಗಿನ್ನು ಎಣಿಕೆಯಿಲ್ಲ॥ ಚಪಲತನದಿ ಕಾಲ ಕಳೆದೆನಲ್ಲ। ಸ್ವಾಮಿ ಕಪಟನಾಟಕ ನೀನೆ ಬಲ್ಲೆಯಲ್ಲ॥4॥ ಗಂಗೆ ಅಗ್ರೋದಕಗಳ ತಂದು ಸ್ನಾನಂಗಳ। ಮಾಡಿಸಲಿಲ್ಲ ಎಂದೂ ಹೊಂಗ್ಯಾದಿಗೆ ಪುಷ್ಪವನೊಂದು ಶ್ರೀ ರಂಗಗರ್ಪಿಸಲಿಲ್ಲ ಕಾಯೊ ಬಂದು॥5॥ ಗಂಧಾಕ್ಷತೆ ಪುಷ್ಪಗಳಿಂದ ದಿವ್ಯ ಒಂದು ದಳ ಶ್ರೀ ತುಳಸಿಯಿಂದ ॥ ಇಂದಿರೇಶನ ಅರ್ಚಿಸಿದನೆಂದೂ। ಬಹುನೊಂದು ದೂರಾದೆ ಸದ್ಗತಿಯಿಂದ॥6॥ ಪೀತಾಂಬರಾದಿ ವಸ್ತ್ರಗಳಿಂದ ದಿವ್ಯ ನೂತನವಾದ ಆಭರಣದಿಂದ। ಪ್ರೀತಿಪಡಿಸಲಿಲ್ಲಾದ್ದರಿಂದ। ಹೇ ಸೀತಾಪತೇ ಕೃಷ್ಣ ಹರಿ ಮುಕುಂದ॥7॥ ಧೂಪಾರತಿಯ ನಾ ಮಾಡಲಿಲ್ಲ। ಒಂದು ದೀಪವನಾದರು ಹಚ್ಚಲಿಲ್ಲ॥ ಈ ಪರಿ ಕಳೆಯಿತೀ ಜನ್ಮವೆಲ್ಲ। ದೇವ ಆಪದ್ಬಾಂದವ ಕಾಯೋ ಲಕ್ಷ್ಮೀನಲ್ಲ॥8॥ ಸೋಪಸ್ಕರವನು ಒಂದು ಮಾಡದೆ। ಎಲ್ಲ ಗೋಪಾಲ ಕೃಷ್ಣಗೆ ಅರ್ಪಿಸದೆ॥ ಪಾಪಕಾರ್ಯಕ್ಕೆ ನಾ ಗುರಿಯಾದೆ।ಸ್ವಾಮಿ। ಶ್ರೀಪತಿ ಕಾಯೋ ಎನ್ನ ಕೈಯ ಬಿಡದೆ॥9॥ ಪಾಯಸ ಪಂಚಭಕ್ಷ್ಯಗಳಿಂದ। ಬಲು ಆಯತವಾದ ಶಾಕಗಳಿಂದ॥ ತೋಯ ಶಾಲ್ಯಾನ್ನ ಗೋಘೃತದಿಂದ। ಕೃಷ್ಣರಾಯನನರ್ಚಿಸಲಿಲ್ಲ ಭಕ್ತಿಯಿಂದ॥10॥ ಮಂಗಳಾರತಿಯನು ಮಾಡಲಿಲ್ಲ। ಜಯಮಂಗಳ ವೆಂದು ನಾ ಪಾಡಲಿಲ್ಲ। ಕಂಗಳಿಂದಲಿ ನಿನ್ನ ನೋಡಲಿಲ್ಲ। ಮುದ್ದು ರಂಗನೆ ಬಾ ಎಂದು ಬೇಡಲಿಲ್ಲ॥11॥ ಹರಿಯ ಪ್ರದಕ್ಷಿಣೆ ಮಾಡಲಿಲ್ಲ। ನರ ಹರಿಯ ಪಾದಕೆ ನಾ ಬೀಳಲಿಲ್ಲ। ಹರಿದಿನದುಪವಾಸ ಮಾಡಲಿಲ್ಲ। ಶ್ರೀಹರಿದಾಸರೊಡನೆ ನಾ ಕೂಡಲಿಲ್ಲ॥12॥ ಅತಿಥಿಗಳೆಂದು ಬಂದರೆ ಮನೆಗೆ ನಾ ಗತಿಯಿಲ್ಲ ಕೂಡದು ಎಂದೆ ಯತಿಗಳಕೂಡ ನಿಂದಿಸಿದೆ ಕೊನೆಗೆ। ಶ್ರೀಪತಿ ದೃಷ್ಟಿಯಿಡು ಈ ಪಾಪಿ ಕಡೆಗೆ॥13॥ ಹೋಮಾರ್ಚನೆ ಔಪಾಸನೆಯೆಲ್ಲ। ಎಂದೂ ನೇಮದಿಂದಲಿ ನಾ ಮಾಡಲಿಲ್ಲ॥ ಕಾಮಾತುರದಿ ಕಂಡಕಂಡಲ್ಲೆಲ್ಲ। ರಾಮ ಭ್ರಾಮಕ ನಾಗಿ ತಿರುಗಿದೆನಲ್ಲ॥14॥ ಎಷ್ಟು ಹೇಳಲಿ ಅವಗುಣಗಳೆಲ್ಲ। ಅವು ಅಷ್ಟು ಇಷ್ಟು ಎಂದು ಎಣಿಕೆಯಿಲ್ಲ॥ ದೃಷ್ಟಿಯಿಂದಲಿ ನೋಡೋ ದೀನವತ್ಸಲ ಸರ್ವ। ಸೃಷ್ಟಿಗೊಡೆಯ ಪುರಂದರವಿಠ್ಠಲ॥15॥

ಪರಾಕು ಮಾಡಿದೆ **ರಾಗ: ಸಾವೇರಿ-ಆದಿತಾಳ**

ಪರಾಕು ಮಾಡಿದೆ ಪರಾಂಬರಿಸಿ। ಎನ್ನ ಅಪರಾಧಂಗಳ ಕ್ಷಮಿಸೋ॥ಪ॥ ಧರಾರಮಣ ಫಣಿಧರಾಮರಾರ್ಚಿತ। ಸುರಾಧಿಪತಿ ವಿಧಿ ಹರಾದಿ ವಂದಿತ॥ಅ.ಪ॥ ನರರೊಳಗೆ ಪಾಮರನು ನಾನಿಹಪರಕೆ ಸಾಧನವರಿಯೆ ಶ್ರೀಹರಿಯೆ। ಶರಣು ಹೊಕ್ಕೆ ನಿನ್ನ ಚರಣ ಕಮಲಕೆ ಕರುಣದಿಂದ ನಿನ್ನ ಸ್ಮರಣೆ ಎನಗಿತ್ತು॥1॥ ಜಪವನರಿಯೆನು ತಪವನರಿಯೆನು ಉಪವಾಸ ವ್ರತಗಳನರಿಯೆ ಶ್ರೀ ಹರಿಯೇ। ಕೃಪಾವಲೋಕನದಿ ಆ ಪಾಪಗಳನ್ನೆಲ್ಲ ಅಪಹೃತವ ಮಾಡೊ ಅಪಾರ ಮಹಿಮನೆ॥2॥ ಕರಿರಾಜನುದ್ಧರಿಸಿ ದ್ರೌಪದಿಯ ಮೊರೆ ಲಾಲಿಸಿ ತರಳನಿಗೊಲಿದು ನೀ ಪೊರೆದೆ। ಸಿರಿಯರಸ ನಿನ್ನ ಸರಿ ಯಾರ ಕಾಣೆ ಪುರಾರಿನುತ ಸಿರಿ ಪುರಂದರವಿಠಲ॥3॥

ದಾಸನೆನಿಸೋ ನಿನ್ನ ಶ್ರೀನಿವಾಸ ಕ್ಷಮಿಸೋ

ದಾಸನೆನಿಸೋ ನಿನ್ನ ಶ್ರೀನಿವಾಸ ಕ್ಷಮಿಸೋ ಎನ್ನ॥ಪ॥ ಆಶಾ ಪಾಶಗಳಲ್ಲಿ ಘಾಸಿ ಬಿದ್ದೆನೋ ರಂಗ। ದೋಷರಹಿತ ಪರಮೇಶ ರಕ್ಷಿಸೋ ಎನ್ನ॥ಅ.ಪ॥ ತರಳ ಪ್ರಲ್ಹಾದನ ಸರಳ ಭಕ್ತಿಗೆ ಮೆಚ್ಚಿ। ದುರುಳ ದೈತ್ಯನ ಪಿಡಿದು ಕರಳ ಬಗೆದ ಹರಿ॥1॥ ಎಲ್ಲಭಕ್ತರ ಮನ ಸಲ್ಲಿಸಿ ಸಲಹುವ ಮಲ್ಲಿನಾಥ ಪುರದ ಚೆಲ್ವ ಶ್ರೀಕೃಷ್ಣನ॥2॥

ಸರ್ವಾಪರಾಧವ ಕ್ಷಮಿಸಯ್ಯ ಎನ್ನ

ಸರ್ವಾಪರಾಧವ ಕ್ಷಮಿಸಯ್ಯ ಎನ್ನ। ಗರ್ವಾಂಧಕಾರವ ಬಿಡಿಸಿ ರಕ್ಷಿಸು॥ಪ॥ ಎಂದೆಂದು ಹಿರಿಯ ನಿಂದಿಸಿದೆನೊ ಚೆಲ್ವ। ಚಂದನಗಂಧಿಯರೊಳು ಸರಸವಾಡಿದೆನು। ಬಂಧು ಬಂದರೆ ಎನ್ನ ಬಿಗುವ ಬಿಂಕವ ತೋರೆ। ಬಂದೋಡ್ವರೈ ಎನ್ನ ಬೇಕೆಂದು ಕೋರದೆ। ಕುಂದಕುಡ್ಮಲದಂತ ಚಂದರವನದ। ಗೋವಿಂದನ ಪಾದಾರವಿಂದವ ಸ್ಮರಿಸೆನು। ಒಂದು ದಿನವು ನಾನು ಮಿಂದು ಮಡಿಯನುಟ್ಟು। ಗಂಧ ಪುಷ್ಪಾರ್ಚನೆಗಳ ಮಾಡೆನು ಎನ್ನ॥1॥ ಅನ್ನ ದಾನವ ಮಾಡಲರಿಯೆನು ನಾ ಮುನ್ನ। ಸ್ವರ್ಣದಾನದ ಮಾತು ಸೊಗಸದು ಕಿವಿಗೆ। ಕನ್ಯಾದಾನದ ಮಾತು ಕನಸಿನಲಿ ನಾ ಕೇಳೆ। ಮುನ್ನ ವರಿಯದ ಮಹಾ ಮುಗ್ಧ ಕಾಣಯ್ಯ। ಉನ್ನತ ಗೋದಾನಭೂದಾನ ಮೊದಲಾದದ್ದು। ಸನ್ಮತಿ ಯಲಿ ಕೊಟ್ಟು ಸುಖಿಸುವುದರಿಯೆನು। ಅನ್ಯಾಯವ ಮಾಡಿ ಹರಿ ನಿನ್ನ ಮೊರೆಹೊಕ್ಕೆ। ಬೆಣ್ಣೆ ಕಳ್ಳನೆ ಮುದ್ದು ಚೆನ್ನ ಕೃಷ್ಣಯ್ಯ॥2॥ ಪಾಪಿಯರೊಳು ಅತಿ ಪಾಪಿಯೆಂತೆಂಬರು । ಕೋಪಿಯ ರೊಳು ಉಗ್ರ ಕೋಪಿ ನಾನೇ। ಕೋಪತಾಪದ ವ್ಯಾಧಿಯನೆಲ್ಲ ಗುಣಮಾಡಿ। ಶ್ರೀಪತಿಯೇ ನೀ ಸಲಹೋ ಕರುಣದಿ। ಈ ಪರಿಯಲಿ ಮೇಲುಕೋಟೆ ಇಂದಿರೆವರ। ಅಪದ್ಬಂಧುವೆ ಭಕ್ತರಘಹರನೆ। ತಾಪತ್ರಯಗಳ ಬಿಡಿಸಿ ಚೆಲ್ವರಾಯ। ಗೋಪಾಲ ಮೂರುತಿ ಪುರಂದರವಿಠಲ ॥3॥

ನಿನ್ನ ನಂಬಿದೆನಯ್ಯ ಶ್ರೀರಾಘವೇಂದ್ರ

ನಿನ್ನ ನಂಬಿದೆನಯ್ಯ ಶ್ರೀ ರಾಘವೇಂದ್ರ। ಮಾನಾಪಮಾನ ನಿನ್ನದಯ್ಯ ನೀ ಸಲಹಯ್ಯ॥ಪ॥ ಘನ್ನ ಮಹಿಮನೆ ಜಗದಿ ನಿನ್ನಂತೆ ಭಕ್ತರನು ಚೆನ್ನಾಗಿ ಪೊರೆಯುವರು ಇನ್ನಿಲ್ಲವಯ್ಯಾ। ಪನ್ನಗಾದ್ರೀಶ ಪ್ರಿಯ ಪಾವನ ಚರಿತ। ಎನ್ನನೀ ಪೊರೆ ಇಂದು ಭೂವಿನುತ ಭೂಜನಕ॥1॥ ಒಂದು ದಿನ ನಿನ್ನಪದ ದ್ವಂದ್ವವನು ಮರೆಯದೆಲೆ। ಹಂದಿಯಂತಂಡಲೆದೆ ಹೇಸಿ ವಿಷಯಗಳೊಳಗೆ। ಮಂದಮತಿನಿಂದಿಹೆನೊ ಮಂದಾರು ಗತಿ ಎನಗೆ। ಕಂದನೆಂದೆಣಿಸೆನ್ನ ಕುಂದುಗಳನೆಣಿಸದೆಲೆ॥2॥ ಭೂಸುರರ ಜೇಷ್ಠೆಯಿಂ ಘಾಸಿ ಗೊಳಿಸುತ ನಿರುತ। ಈಶ ನಾನೆಂದರಿತು ಮೋಸ ಹೋದೆನೋ ಗುರುವೇ। ಈಸು ಪಾಪಂಗಳನು ಲೇಸಾಗಿ ಪರಿಹರಿಸಿ। ಶ್ರೀಷ ಶ್ರೀ ಕಮಲೇಶದಾಸ ಭಕ್ತರ ಪೋಷ॥3॥

ಫಲವಿದು ಬಾಳ್ದುದಕೆ ಸಿರಿ — ರಾಗ: ಪಂತುವರಾಳಿ-ಏಕತಾಳ

ಫಲವಿದು ಬಾಳ್ದುದಕೆ ಸಿರಿ। ನಿಲಯನ ಗುಣಗಳ ತಿಳಿದು ಭಜಿಸುವದೆ॥ಪ॥ ಸೋಚಿತ ಕರ್ಮಗಳಾಚರಿಸುತ ಬಲು। ನೀಚರಲ್ಲಿಗೆ ಪೋಗ್ಯಾಚಿಸದೆ॥ ಖೇಚರವಾಹ ಚರಾಚರ ಬಂಧಕ। ಮೋಚಕನಹುದೆಂದ್ಯೋಚಿಸುತಿಪ್ಪೊದೆ॥1॥ ನಿಚ್ಚಸುಭಕುತಿಯೊಳಚ್ಯುತನಂಘ್ರಿಗೆ-। ಆರ್ಚಿಸಿ ಮೆಚ್ಚಿಸುತ್ತೆಚ್ಚರದಿ॥ ತುಚ್ಛವಿಷಯಗಳನಿಚ್ಛಿಸದಲೆ ಯ-। ದೃಚ್ಛಾ ಲಾಭದಿಂ ಪ್ರೋಚ್ಛನಾಗುವದೆ॥2॥ ಮನೋವಾಕ್ಕಾಯದೊಳನುಭವಿಸುವ ದಿನ-। ದಿನದಿ ವಿಷಯ ಸಾಧನಗಳನು॥ ಅನಿಲಾಂತರ್ಗತ ವನರುಹದಳಲೋ-। ಚನಗರ್ಪಿಸಿ ದಾಸನು ನಾನೆಂಬೋದೆ॥3॥ವಾಸವಮುಖವಿಬುಧಾಸುರ ನಿಚಯಕೆ। ವಾಸುದೇವನೇ ಶುಭಾಶುಭದಾ॥ ಈ ಸಮಸ್ತ ಜಗಕೀಶ ಕೇಶವಾ-। ನೀಶ ಜೀವರೆಂಬೀ ಸುಜ್ಞಾನವೇ॥4॥ ಪಂಚಭೇದಯುತ ಪ್ರಪಂಚ ಸುಸತ್ಯವಿ-।ರಿಂಚಿಮುಖರು ಬಲಿವಂಚಕಗೆ॥ ಸಂಚಲ ಪ್ರತಿಮೆಯ ಚಂಚಲ ಪ್ರಕೃತಿಲಿ। ಸಂಚಿಂತಿಸಿ ಮುದಲಾಂಚ ನಾಗುವದೆ॥5॥ ಪಂಚ ಕತ್ತುಗಳಲಿ ಪಂಚಾಗ್ನಿಗಳಲಿ। ಪಂಚಪಂಚರೂಪವ ತಿಳಿದು। ಪಂಚ ಸುಸಂಸ್ಕಾರರಾಂಚಿತನಾಗಿ ದ್ವಿ-। ಪಂಚಕರಣದಲಿ ಪ್ರಪಂಚವನರಿವುದೆ॥6॥ ಪಾತ್ರರ ಸಂಗಡ ಯಾತ್ರೆಯ ಚರಿಸಿ ವಿ-। ಧಾತೃಪಿತನ ಗುಣಸ್ತೋತ್ರಗಳ॥ ಶ್ರೋತ್ರದಿ ಸವಿದು ವಿಚಿತ್ರಾನಂದದಿ। ಗಾತ್ರವ ಮರೆದು ಪರತ್ರವ ಪಡೆವುದೆ॥7॥

ಹೃದಯದಿ ರೂಪವು ವದನದಿ ನಾಮವು। ಉದರದಿ ನೈವೇದ್ಯವು ಶಿರದಿ॥ ಪದಜಲನಿಮಾಲ್ಯವನೆ ಧರಿಸಿ ಕೋ-। ವಿದರ ಸದನ ಹೆಗ್ಗದವ ಕಾಯುವದೆ॥8॥ ಹಂಸಮೊದಲು ಹದಿನೆಂಟು ರೂಪಗಳ। ಸಂಸ್ಥಾನವ ತಿಳಿದನುದಿನದಿ॥ ಸಂಸೇವಿಸುವ ಮಹಾಪುರುಷರ ಪದ-। ಪಾಂಸುವ ಧರಿಸಿ ಅಸಂಶಯನಪ್ಪುದೆ॥9॥ ವರಗಾಯತ್ರಿನಾಮಕ ಹರಿಗಿ-।ರೆರಡಂಘ್ರಿಗಳ ವಿವರ ತಿಳಿದು॥ ತರುವಾಯದಿ ಷಡ್ ವಿಧರೂಪವ ಸಾ-।ದರದಲಿ ಧ್ಯಾನಿಸಿ ನಿರುತ ಜಪಿಸುವದೆ॥10॥ ಬಿಗಿದ ಕಂಠದಿಂ ದೃಗ್ ಭಾಷ್ಪಗಳಿಂ। ನಗೆಮೊಗದಿಂ ರೋಮಗಳೊಗೆದು॥ ಮಿಗೆ ಸಂತೋಷದಿ ನಗೆದಾಡುತ ನಾ-। ಲ್ಮೊಗನಯ್ಯನ ಗುಣ ಪೊಗಳಿ ಹಿಗ್ಗುವುದೆ॥11॥ ಗೃಹಕರ್ಮವ ಬ್ಯಾಸರದಲೆ ಪರಮೋ-। ತ್ಸಹದಲಿ ಮಾಡುತ ಮೂಜಗದ॥ ಮಹಿತನ ಸೇವೆಯಿದೆನುತಲಿ ಮೋದದಿ। ಅಹರಹರ್ಮ ನದಿಸಮರ್ಪಿಸುತಿಪ್ಪುದೆ॥12॥ ಕ್ಲೇಶಾನಂದಗಳೀಶಾಧೀನ ಸ-। ಮಾಸಮ ಬ್ರಹ್ಮ ಸದಾಶಿವರು॥ ಈಶಿತವ್ಯರು ಪರೇಶನಲ್ಲದೆ। ಶ್ವಾಸಬಿಡುವ ಶಕ್ತಿಲೇಶವಿಲ್ಲೆಂಬೋದೆ॥13॥ ಆ ಪರಮಾತ್ಮಗೆ ರೂಪದ್ವಯವು ಪ-। ರಾಪರ ತತ್ತ್ವಗಳಿದರೊಳಗೆ॥ ಸ್ತ್ರೀಪುಂಭೇದದಿ ಈ ಬ್ರಹ್ಮಾಂಡವ। ವ್ಯಾಪಿಸಿ ಇಹನೆಂದೀಪರಿತಿಳಿವುದೆ ॥14॥ ಏಕೋತ್ತರ ಪಂಚಾಶತ್ ವರ್ಣಗ-।ಳೇಕಾತ್ಮನ ನಾಮಂಗಳಿವು॥ ಮಾಕಮಲಾಸನ ಮೊದಲಾದಮರರು। ಸಾಕಲ್ಯದಿ ಇವನರಿಯ ರೆಂತೆಂಬುದೆ॥15॥ ಒಂದು ರೂಪದೊಳಗನಂತ ರೂಪಗಳ್। ಪೊಂದಿಪ್ಪುವು ಗುಣಗಣಸಹಿತ॥ ಹಿಂದೆ ಮುಂದೆ ಎಂದೆಂದಿಗೂ ಶ್ರೀ ಗೋ-।ವಿಂದಗೆ ಸರಿಮಿಗಿಲಿ ಲ್ಲೆಂತೆಂಬುದೆ॥16॥ ಮೇದಿನಿ ಪರಮಾಣ್ವಂಬು ಕಣಂಗಳು। ಐದಬಹುದು ಪರಿಗಣತಿಯನು-। ಮಾಧವನಾನಂದಾದಿ ಗುಣಂಗಳ-। ನಾದಿಕಾಲದಿಂದಗಣಿತ ವೆಂಬುದೆ॥17॥ ಮೂಜಗ ದೊಳಗಿಹ ಭೂಜಲಖೇಚರ। ಈ ಜೀವರೊಳು ಮಹೌಜಸನ॥ ಸೋಜಿಗ ಬಹುವಿಧ ನೈಜ ವಿಭೂತಿಯ। ಪೂಜಿಸುತನುದಿನ ರಾಜಿಸುತಿಪುದೆ॥18॥ ಹರಿಕಥೆ ಪರಮಾದರದಲಿ ಕೇಳುತ। ಮರೆದು ತನುವ ಸುಖಸುರಿಸುತಲಿ॥ ಉರುಗಾಯನ ಸಂದರುಶನ ಹಾರೈ-। ಸಿರಳು ಹಗಲು ಜರಿಜರಿದು ಬಳಲುವದೆ॥19॥ ವಿಷಯೇಂದ್ರಿಯಗಳಲಿ ತದಭಿಮಾನಿ ಸುಮ-। ನರಸೊಳು ನಿಂದು ನಿಯಾಮಿಸುವ॥ ಶ್ವಸನಾಂತರ್ಗತ ವಾಸುದೇವ ತಾ। ವಿಷಯಗಳನು ಭೋಗಿಸುವಂದ ರಿವುದೆ॥20॥ ಗುಣಕಾಲಾಹ್ವಯ ಆಗಮಾರ್ಣವ ಕುಂ-। ಭಿಣಿ ಪರಮಾಣ್ವಂಬುಧಿಗಳಲಿ॥ ವನಗಿರಿನದಿ ಮೊದಲಾದದರೊಳಗಿಂ-।ಧನಗತ ಪಾವಕನಂತಿಹನೆಂಬುದೆ॥21॥ ಅನಲಂಗಾರ ದೊಳಿಪ್ಪೋಪಾದಿಲಿ। ಅನಿರುದ್ಧನು ಚೇತನರೊಳಗೆ॥ ಕ್ಷಣ ಬಿಟ್ಟಗಲದೆ ಏಕೋ ನಾರಾ ಯಣಶ್ರುತಿಪ್ರತಿಪಾದ್ಯನು ಇಹನೆಂಬುದೆ॥22॥ ಪಕ್ಷಗಳಕ್ಷಿಗಳಗಲದಲಿಪ್ಪಂ-। ತಕ್ಷರಪುರುಷನ ಪೇಕ್ಷೆಯಲಿ॥ಕುಕ್ಷಿಯೊಳಬ್ಜ ಜತ್ರ್ಯಕ್ಷಾದ್ಯಮರರ। ಈಕ್ಷಿಸಿ ಕರುಣದಿ ರಕ್ಷಿಪನೆಂಬುದೆ॥23॥ ಕಾರಣ ಕಾರ್ಯಾಂತರ್ಗತ ಅಂಶವ-। ತಾರಾವೇಶ ವಿಹಿತ ಸಹಜ॥ ಪ್ರೇರಕ ಪ್ರೇರ್ಯಾಹ್ವತ ಸರ್ವತ್ರ ವಿ-। ಕಾರವಿಲ್ಲದಲೆ ತೋರುವನೆಂಬುದೆ॥24॥ ಪ್ರತಿದಿವಸ ಶ್ರುತಿಸ್ಮೃತಿಗಳಿಂದ ಸಂ-।ಸ್ತುತಿಸುತ ಲಕ್ಷ್ಮೀಪತಿಗುಣವ॥ ಕೃತಿಪತಿ ಸೃಷ್ಟಿಸ್ಥಿತಿಲಯಕಾರಣ। ಇತರ ಸರ್ವದೇವತೆ ಗಳಲ್ಲಲ್ಲೆಂಬುದೆ॥25॥ ಪವನಮತಾನುಗರವನಾನೆಂತೆಂದವನಿಯೊಳಗೆ ಸತ್ ಕವಿಜನರ॥ ಭವನಗಳಲಿ ಪ್ರತಿದಿವಸದಿ ಸುಕಥಾ-। ಶ್ರವಣಮಾಡುತಲಿ ಪ್ರವರನಾಗುವದೆ॥26॥ ಪ್ರಸನ್ನಗಾಚಲಸನ್ನಿವಾಸ ಪಾ-। ವನ್ನಚರಿತ ಸದ್ ಗುಣಭರಿತ॥ ಜನ್ಯಜನಕ ಲಾವಣ್ಯ ಗುಣನಿಧಿ ಜ-। ಗನ್ನಾಥವಿಠಲಾನನ್ಯಪನೆಂಬೋದೆ॥27॥

❖ ❖ ❖

ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ

ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ। ಸಂಗಸುಖವಿತ್ತು ಕಾಯೋ ಕರುಣ ಸಾಗರಾ॥ಪ॥ ಅರಿಯರೋ ನೀನಲ್ಲದೇ ಮತ್ತನ್ಯದೈವರ। ಮರೆಯರೋ ನೀ ಮಾಡಿದ ಅನಿಮಿತ್ತೋಪಕಾರ। ತೊರೆಯರೋ ನಿನ್ನಂಘ್ರಿ ಸೇವೆ ಪ್ರತಿವಾಸರ। ಅರಿಯರೋ ಪರತತ್ತ್ವವಲ್ಲದೆ ಇತರ ವಿಚಾರ॥1॥ ಮೂಕಬಧಿರರಂತಿಪ್ಪೋರೋನೋಳ್ಪ ಜನಕೆ।ಕಾಕುಯುಕುತಿಯನು ತಾರರೋ ಮನಕೆ। ಸ್ವೀಕರಿಸರನರ್ಪಿತ ಒಂದು ಕಾಲಕೆ। ಆ ಕೈವಲ್ಯ ಭೋಗಸುಖ ಅವರಿಗೆಬೇಕೇ॥2॥ ಜಯಜಯ

ಲಾಭಾಲಾಭಾ ಮಾನಾಪಮಾನ। ಭಯಾಭಯ ಸುಖದುಃಖ ಲೋಷ್ಟಕಾಂಚನಾಪ್ರಿಯಪ್ರಿಯ ನಿಂದ್ಯಸ್ತುತಿಗಳನನು ದಿನ। ಶ್ರೀಯರಸನ ಚಿಂತಿಸುವರೋ ನಿನ್ನ ಅಧೀನ॥3॥ ಈಶಿತವ್ಯರೆಂತಿಪ್ಪ ರೇಕಾಂತಭಕ್ತರು। ದೇಶಕಾಲೋಚಿತ ಧರ್ಮಕರ್ಮಾಸಕ್ತರು। ಆಶಾಕ್ರೋಧ ಲೋಭಮೋಹ ಪಾಶ ಮುಕ್ತರೋ। ಈ ಸುಜನರೇ ಶಾಪಾನುಗ್ರಹ ಶಕ್ತರು॥4॥ ಕಂಡಕಂಡಲ್ಲಿ ವಿಶ್ವರೂಪ ಕಾಂಬೊರೋ। ಉಂಡು ಉಣಿಸಿದ್ದೆಲ್ಲ ನಿನ್ನಯಜ್ಞವೆಂಬರು। ಬಂಡುಣುಯಂದದಿ ನಾಮಾಮೃತವ ಸವಿಯುವರೋ। ಹೆಂಡರುಮಕ್ಕಳು ನಿನ್ನ ತೋಂಡರೆಂಬರೋ॥5॥ ಬಿಡರು ತಮ್ಮ ಸ್ವಧರ್ಮಗಳೇನು ಬಂದರೂ। ಬಿಡರು ದೈನ್ಯ ಒಬಬ್ರಿಗೂ ಲೋಕ ವಂದ್ಯರೂ। ಪಿಡಿತರು ನಿನ್ನ ದ್ವೇಷಿಗಳಿಂದೇನು ಬಂದರು। ಕೊಡುವರು ಬೇಡಿದಿಷ್ಟಾರ್ಥ ನಿತ್ಯಾನಂದರು॥6॥ ನಗುವ್ರೋರೋ ರೋದಿಸುವರೋ ನಾಟ್ಯವಾಡುವರೋ। ಬಗೆಯರ್ರೋ ಬಡತನ ಭಾಗ್ಯ ಭಾಗವತರು। ತೆಗೆಯರೋ ನಿನ್ನಲ್ಲಿ ಮನವ ಒಮ್ಮೆಯಾದರೂ। ಜಗನ್ನಾಥ ವಿಠಲ ನಿನ್ನವರೇನು ಧನ್ಯರೋ॥7॥

ನೆರೆ ನಂಬಿದೆ ಮದ್ ಹೃದಯ ಮಂಟಪದೊಳು — **ರಾಗ: ಕೇದಾರ**

ನೆರೆ ನಂಬಿದೆ ಮದ್ ಹೃದಯ ಮಂಟಪದೊಳು ಪರಿಶೋಭಿಸುತಿರು ಪಾಂಡುರಂಗ॥ಪ॥ ಶರಣಜನರ ಸಂಸಾರ ಮಹಾಭಯ। ಹರಣ ಕರುಣ ಸಿರಿ ಪಾಂಡುರಂಗ॥ಅ.ಪ॥ ನೆರದಿಹ ಬಹುಜನರೊಳಗಿದ್ದರೂ ಮನಸ್ಥಿರವಿಡು ನಿನ್ನಲಿ ಪಾಂಡುರಂಗ। ಪರಿಪರಿ ಕೆಲಸವು ನಿನ್ನ ಮಹಾಪೂಜೆ ನಿರುತ ಎನಗೆ ಕೊಡು ಪಾಂಡುರಂಗ॥1॥ ಪರದೇವನೆ ನಿನ್ನ ಲಾಲಿಸ್ಮೃತಿಯನು ನಿರುತ ಎನಗೆ ಕೊಡು ಪಾಂಡುರಂಗ। ಪರರಾಪೇಕ್ಷೆಯ ಬಿಡಿಸಿ ನಿರಂತರ ಪರಗತಿ ಪಥತೋರೋ ಪಾಂಡುರಂಗ॥2॥ ಸುಖವಾಗಲಿ ಬಲು ದುಃಖವಾಗಲಿ ಸಖನೀನಾಗಿರು ಪಾಂಡುರಂಗ। ನಿಖಿಳಾಂತರ್ಗತ ವ್ಯಾಸವಿಠಲ ತವ ಮುಖ ಪಂಕಜ ತೋರೋ ಪಾಂಡುರಂಗ॥3॥

ದಾಸನ್ನ ಮಾಡಿಕೊ ಎನ್ನ ಸ್ವಾಮಿ — **ರಾಗ: ನಾದನಾಮಕ್ರಿಯ-ಆದಿತಾಳ**

ದಾಸನ್ನ ಮಾಡಿಕೊ ಎನ್ನ ಸ್ವಾಮಿ॥ಪ॥ಸಾಸಿರನಾಮದ ವೆಂಕಟರಮಣ ॥ಅ.ಪ॥ ದುರುಳ ಬುದ್ಧಿಗಳೆಲ್ಲ ಬಿಡಿಸೋ ನಿನ್ನ ಕರುಣ ಕವಚವೆನ್ನ ಹರಣಕ್ಕೆ ತೊಡಿಸೊ। ಚರಣ ಸೇವೆ ಎನಗೆ ಕೊಡಿಸೊ॥ ಅಭಯಕರಪುಷ್ಪ ಎನ್ನಯ ಶಿರದೊಳು ಮುಡಿಸೊ॥1॥ ದೃಢಭಕ್ತಿ ನಿನ್ನಲ್ಲಿ ಬೇಡಿ ದೇವ ಅಡಿಗೆರಗುವೆನಯ್ಯ ಅನುದಿನ ಪಾಡಿ॥ ಕಡೆಗಣ್ಣಿಲೇಕೆನ್ನ ನೋಡಿ ಬಿಡುವೆ। ಕೊಡು ನಿನ್ನ ಧ್ಯಾನವ ಮನ ಶುಚಿ ಮಾಡಿ॥2॥ ಮೊರೆ ಹೊಕ್ಕವರ ಕಾಯ್ವ ಬಿರುದು ನೀ ಮರೆಯದೆ ರಕ್ಷಣೆ ಮಾಡೆನ್ನ ಪೊರೆದು॥ ದುರಿತ ರಾಶಿಗಳೆಲ್ಲ ತರಿದು ಸ್ವಾಮಿ ಪುರಂದರವಿಠಲ ಕರುಣದಿ ಕರೆದು॥3॥

ದಾಸೋಹಂ ತವ ದಾಸೋಹಂ

ದಾಸೋಹಂ ತವ ದಾಸೋಹಂ॥ಪ॥ ವಾಸುದೇವ ವಿಗಾತಾಘ ಸಂಘತವ॥ಅ.ಪ॥ ಜೀವಾಂತರ್ಗತ ಜೀವನಿಯಾಮಕ ಜೀವವಿಲಕ್ಷಣ ಜೀವನದ। ಜೀವಾಧಾರಕೆ ಜೀವರೂಪ ರಾಜೀವ ಭವಜನ ಜೀವೇಶ್ವರತವ॥1॥ ಕಾಲಾಂತರ್ಗತ ಕಾಲನಿಯಾಮಕ ಕಾಲಾತೀತ ತ್ರಿಕಾಲಜ್ಞ। ಕಾಲಪ್ರವರ್ತಕ ಕಾಲನಿವರ್ತಕ ಕಾಲೋತ್ಪಾದಕ ಕಾಲಮೂರ್ತಿತವ॥2॥ ಕರ್ಮಕರ್ಮಕೃತ ಕರ್ಮಕೃತಾಗಮ ಕರ್ಮಫಲಪ್ರದ ಕರ್ಮಜಿತ। ಕರ್ಮ ಬಂಧ ಮಹಕರ್ಮ ವಿಮೋಚಕ ಕರ್ಮನಿಗ್ರಹ ವಿಕರ್ಮನಾಶತವ॥3॥ ಧರ್ಮರೂಪ ಮಹಧರ್ಮ ವಿವರ್ಧನ ಧರ್ಮವಿದುತ್ತಮ ಧರ್ಮನಿಧೇ। ಧರ್ಮಸೂಕ್ಷ್ಮ ಮಹ ಧರ್ಮಸಂರಕ್ಷಕ ಧರ್ಮಸಾಕ್ಷಿಯಮ ಧರ್ಮಪುತ್ರ ತವ॥4॥ ಮಂತ್ರ ಯಂತ್ರ ಮಹಮಂತ್ರ ಬೀಜ ಮಹ ಮಂತ್ರರಾಜಗುರು ಮಂತ್ರಜಿತ। ಮಂತ್ರ ಮೇಯ ಮಹಮಂತ್ರ ನಿಯಾಮಕ ಮಂತ್ರ ದೇವ ಜಗನ್ನಾಥ ವಿಠಲ ತವ॥5॥

❖ ❖ ❖

ಲಾಲಿ ಲಾಲಿ ನಮ್ಮ ಹರಿಯೆ ಲಾಲಿ — **ರಾಗ: ಆರಭಿ-ಆದಿತಾಳ**

ಲಾಲಿ ಲಾಲಿ ನಮ್ಮ ಹರಿಯೆ ಲಾಲಿ, ಸುರ॥ಪ॥ ನರರಿಗೆ ಒಲಿದು ಕರುಣವ ಬೀರುವ ದೊರೆಯೆ ಲಾಲಿ॥ಅ.ಪ.॥ ರಾಮ ಲಾಲಿ ಮೇಘಶ್ಯಾಮ ಲಾಲಿ। ರಮಾಮನೋಹರ ಅಮಿತ ಸದ್ಗುಣಧಾಮ ಲಾಲಿ॥1॥ ಕೃಷ್ಣಲಾಲಿ ಸರ್ವೋತ್ಕೃಷ್ಟ ಲಾಲಿ। ದುಷ್ಟರ ಶಿಕ್ಷಿಸಿ ಶಿಷ್ಟರ ಪೊರೆವ ಸಂತುಷ್ಟ ಲಾಲಿ॥2॥ ರಂಗ ಲಾಲಿ ಮಂಗಳಾಂಗ ಲಾಲಿ।

ಗಂಗೆಯ ಪಡೆದ ತುಂಗಮಹಿಮ ನರಸಿಂಗ ಲಾಲಿ।।3।। ನಂದ ಲಾಲಿ ಗೋಪಿಕಂದ ಲಾಲಿ। ಮಂದರಗಿರಿಧರ ಮಧುಸೂದನ ಮುಕುಂದ ಲಾಲಿ।।4।। ಶೂರ ಲಾಲಿ ರಣಧೀರ ಲಾಲಿ। ಮಾರನಯ್ಯ ನಮ್ಮ ವರ ಪುರಂದರವಿಠಲ ಲಾಲಿ।।5।।

ಆನಂದಮಯಗೆ ಚಿನ್ಮಯಗೆ **ರಾಗ: ಸುರಟಿ-ಆದಿತಾಳ**

ಆನಂದಮಯಗೆ ಚಿನ್ಮಯಗೆ ಶ್ರೀ ನಾರಾಯಣಗಾರತಿಯೆತ್ತಿರೆ।।ಪ।। ವೇದವ ತಂದು ಬೆಟ್ಟವ ಪೊತ್ತು। ಧರಣಿಯ ಸಾಧಿಸಿ ಕಂಬದೊಳೊಡೆದಗೆ। ಭೂದಾನವ ಬೇಡಿ ನೃಪರ ಸಂಹರಿಸಿದ। ಆದಿ ಮೂರುತಿಗಾರತಿಯೆತ್ತಿರೆ।।1।। ಇಂದುವದನೆ ಸಹಿತಾರಣ್ಯದೊಳು ನಿಂದು। ನಂದಗೋಕುಲ ದೊಳು ಬೆಳದವಗೆ। ಮಂದ ಗಮನೆಯರ ಮುಂದೆ ನಿರ್ವಾಣದಿ। ನಿಂದ ಮೂರುತಿ ಗಾರತಿಯೆತ್ತಿರೆ।।2।। ತುರುಗವನೇರಿ ದೈತ್ಯರ ಸೀಳಿ। ಭಕ್ತರ ಪೊರೆದ ಮಂಗಳ ಹಯವದನನಿಗೆ। ವರವೇಲಾಪುರ ಚೆನ್ನಿಗಾರಾಯನ। ಚರಣಕಮಲಕಾರತಿಯೆತ್ತಿರೆ।।3।।

ಚರಿಸುವ ಜಲದಲ್ಲಿಮತ್ಸ್ಯಾವತಾರಗೆ **ರಾಗ: ಆನಂದಭೈರವಿ**

ಚರಿಸುವ ಜಲದಲ್ಲಿ ಮತ್ಸ್ಯಾವತಾರಗೆ ಗಿರಿಯ ಬೆನ್ನಲಿ ಪೊತ್ತ ಕೂರ್ಮನಿಗೆ। ಧರೆಯನುದ್ಧರಿಸಿದ ವರಾಹವತಾರಗೆ ತರಳನ ಕಾಯ್ದ ನರಸಿಂಹಗೆ।।ಜಯಮಂಗಳಂ।। ಭೂಮಿಯ ದಾನವ ಬೇಡಿದಗೆ। ಮಹಾಕ್ಷತ್ರಿಯರ ಗೆಲಿದವಗೆ। ರಾಮಚಂದ್ರನೆಂಬ ಸ್ವಾಮಿಗೆ। ಸತ್ಯಭಾಮೆಯರಸ ಗೋಪಾಲಕೃಷ್ಣಗೆ।।ಜಯಮಂಗಳಂ।। ಬೆತ್ತಲೆ ನಿಂತಿದ್ದ ಬೌದ್ಧನಿಗೆ। ಉತ್ತಮ ಹಯವೇರಿದ ಕಲ್ಕಿಗೆ। ಹತ್ತವತಾರದಿ ಭಕ್ತರ ಸಲಹುವ ಕರ್ತೃ ಶ್ರೀ ಪುರಂದರವಿಠಲಗೆ।।ಜಯಮಂಗಳಂ।।

ಮಂಗಳಂ ಮಂಗಳಂ ದಯಾನಿಧೇ **ರಾಗ: ಸುರುಟಿ-ರೂಪಕತಾಳ**

ಮಂಗಳಂ ಮಂಗಳಂ ದಯಾನಿಧೇ ಮಂಗಳಂ ಮಂಗಳಂ।।ಪ।। ನಂದ ನಂದನ ಶ್ಯಾಮ ಸುಂದರ ಶುಭಕಾಯ।। ಇಂದೀವರಾಕ್ಷಮುಕುಂದ ಮುರಾರೇ। ಮಂಗಳಂ ಮಂಗಳಂ।।1।। ದೇವ ದೇವೇಶನೆ ದೇಹಿ ಕಲ್ಯಾಣಂ।। ಶ್ರೀಧರ ಶ್ರೀಕರ ಶ್ರೀನಿವಾಸಾ। ಮಂಗಳಂ ಮಂಗಳಂ।।2।। ರಾಜಿತ ವರದ ಗೋಪಾಲ ವಿಠಲ। ಮಹಾ ರಾಜ ಭಕುತ। ಕಲ್ಪಭುಜ ಸುತೇಜಾ। ಮಂಗಳಂ ಮಂಗಳಂ।।3।।

❖ ❖ ❖

ಹರಿಯ ನೆನಿಸಿದ ದಿವಸ ಶುಭಮಂಗಳ

ಹರಿಯ ನೆನಿಸಿದ ದಿವಸ ಶುಭಮಂಗಳ। ಹರಿಯ ನೆನೆಸದ ದಿವಸ ಅವಮಂಗಳ।। ಹರಿಯ ನೆನೆಸಿದ ನಿಮಿಷ ಆವಾಗಲೂ ಹರುಷ। ಹರಿಯ ನೆನೆಸದ ನಿಮಿಷ ದುರ್ಮಾನಸ। ಹರಿಯ ನೆನೆಸಿದ ಘಳಿಗೆ ಮುಕ್ತಿಗೆ ಬೆಳವಳಿಗೆ।ಹರಿಯ ನೆನೆಸದ ಘಳಿಗೆ ಯಮನ ಬಳಿಗೆ।।1।। ಹರಿಯ ನೆನೆಸಿದ ನರನು ಅವನೇನೆ ಕೃತಕೃತ್ಯ। ಹರಿಯ ನೆನೆಸದ ನರನ ಜನುಮವ್ಯರ್ಥ। ಪುರಂಧರನ ಪ್ರೀತಿಯಶ್ರೀ ವಿಜಯವಿಠಲನಂಘ್ರಿ। ಮರೆಯದೆ ಅನುದಿನವು ನೆನೆದವನೆ ಮುಕ್ತ।।2।।

ಶ್ರೀಪತಿಯು ನಮಗೆ ಸಂಪದವೀಯಲಿ **ರಾಗ: ರೀತಿಗೌಳ**

ಶ್ರೀಪತಿಯು ನಮಗೆ ಸಂಪದವೀಯಲಿ। ವಾಣಿ ಪತಿ ನಮಗೆ ದೀರ್ಘಾಯುಕೊಡಲಿ।। ವರವಿಭುದರನು ಪೊರೆಯೆ ವಿಷವಕಂಠದೊಳಿಟ್ಟಹರ ನಿತ್ಯ ನಮಗೆ ಸಹಾಯವಾಗಲಿ।। ನರರೊಳುನ್ನತವಾದ ನಿತ್ಯಭೋಗಂಗಳನುಪುರಹೂತ ಪೂರ್ಣಮಾಡಿಸಲಿ ಬಿಡದೇ।।1।। ವಿನುತ ಸಿದ್ಧಿಪ್ರದನು ವಿಘ್ನೇಶನ ದಯದಿಂದ ನೆನೆದ ಕಾರ್ಯಗಳೆಲ್ಲ ನೆರವೇರಿಸಲಿ। ದಿನದಿನದಿ ಧನ್ವಂತ್ರಿ ಆಪತ್ತುಗಳ ಕಳೆದು। ಮನಕೆ ಹರುಷವಿತ್ತು ಮನ್ನಿಸಲಿ ಬಿಡದೇ।।2।। ನಿರುತ ಸುಜ್ಞಾನವನು ಈವ ಗುರುಮಧ್ವರಾಯ। ಗುರುಗಳಾಶೀರ್ವಾದ ನಮಗಾಗಲಿ। ಪುರಂದರವಿಠಲನ ಕರುಣದಿಂದಲಿ ನಿತ್ಯ ಸುರರೊಲುಮೆ ನಮಗೆ ಸುಸ್ಥಿರವಾಗಲಿ।।3।। ಹಗಲು ನಿನ್ನ ನೆನೆಯಲಿಲ್ಲ ಹಸಿವು ತೃಷೆಯಿಂದ। ಇರುಳು ನಿನ್ನ ನೆನೆಯಲಿಲ್ಲ ನಿದ್ರೆ

ಭರದಿಂದ। ಈ ಎರಡರ ಬಾಧೆಗೆ ನಾನೊಳಗಾದೆನೊ। ಸಲಹೋ ಪುರಂದರವಿಠಲ।।4।। ಇಂದಿನ ದಿನ ಶುಭ ದಿನ। ಇಂದಿನ ವಾರ ಶುಭವಾರ। ಇಂದಿನ ತಾರೆ ಶುಭತಾರೆ। ಇಂದಿನ ಕರಣ ಶುಭಕರಣ। ಇಂದಿನ ಯೋಗ ಶುಭಯೋಗ। ಇಂದಿನ ಲಗ್ನ ಶುಭಲಗ್ನ। ಇಂದು ಪುರಂದರ ವಿಠಲರಾಯನ ಪಾಡಿದ ದಿನವೇ ಶುಭದಿನವು।।5।।

❖ ❖ ❖

ಶರಣು ಸರಣಿ

ಶರಣು ಸಿದ್ಧಿವಿನಾಯಕ **ರಾಗ: ಹಂಸಧ್ವನಿ-ಛಾಪುತಾಳ**

ಶರಣು ಸಿದ್ಧಿವಿನಾಯಕ। ಶರಣು ವಿದ್ಯಾ ಪ್ರದಾಯಕ।।ಪ।। ಶರಣು ಪಾರ್ವತಿತನಯ ಮೂರುತಿ। ಶರಣು ಮೂಷಕವಾಹನ।।ಶರಣು।।ಅ.ಪ।। ನಿಟಿಲನೇತ್ರನ ದೇವಿ ಸುತನೆ। ನಾಗಭೂಷಣ ಪ್ರೀಯನೆ। ಕಟಿಕಟಾಂಗದ ಕೋಮಲಾಂಗನೆ। ಕರ್ಣಕುಂಡಲಧಾರನೆ।।1।। ಬಟುವ ಮುತ್ತಿನಹಾರ ಪದಕನೆ। ಬಾಹು ಹಸ್ತ ಚತುಷ್ಟನೇ। ಇಟ್ಟತೊಡುಗೆಯು ಹೇಮಕಂಕಣ। ಪಾಶದಂಕುಶಧಾರನೆ।।2।। ಕುಕ್ಷಿಮಹಾಲಂಬೋದರನೆ। ಇಕ್ಷುಚಾಪನ ಗೆಲಿದನೆ।। ಪಕ್ಷಿವಾಹನನಾದ ಪುರಂದರವಿಠಲನ ನಿಜದಾಸನೆ।।3।।

ಶರಣು ಗಜಮುಖ ಆಖುವಾಹನ

ಶರಣು ಗಜಮುಖ ಆಖುವಾಹನ ಶರಣು ಸುರಗಣಸೇವಿತ। ಶರಣು ಸಕಲಾಭೀಷ್ಟದಾಯಕ। ಶರಣು ವಿಘ್ನ ವಿನಾಯಕ।।1।। ಹೇಮಖಚಿತ ಕಿರೀಟ ಕುಂಡಲ। ಕಾಮಿತಾ ಫಲದಾಯಕ। ಅಮಿತ ಸೌಲಭ್ಯ ಪ್ರಭಲ ಶಾಸ್ತ್ರೋದ್ದಾಮ ವಿದ್ಯಾಶರನಿಧೆ।।2।। ಪಾಶ ಮೋದಕ ಪರಶುಧರ ಫಣಿಭೂಷ ಪಾರ್ವತಿನಂದನ। ವಾಸವಾರ್ಚಿತ ವಿಜಯವಿಠ್ಠಲ ದಾಸ ಭೋ ಗಣನಾಯಕ।।3।।

ಶರಣು ಶರಣು ಶರಣು ಸಿದ್ಧಿ ವಿನಾಯಕ **ರಾಗ: ಶಿವರಂಜನಿ**

ಶರಣು ಶರಣು ಶರಣು ಸಿದ್ಧಿ ವಿನಾಯಕ। ಶರಣು ಸಿದ್ಧಿ ಪ್ರದಾಯಕ।।ಪ।। ಸ್ಕಂಧ ಅನುಜನೆ ಬಂದು ಈಗಲೇ। ಅಂದದಿ ಎನ್ನ ಪಾಲಿಸೋ। ರಕ್ತವರ್ಣ ಸುರೇಶ್ಮಿ ವಸನನೆ।।1।। ಉದಯ ಭಾಸ್ಕರ ತೇಜನೇ। ಅಜನ ತಾತ ಪ್ರಸನ್ನ ಶ್ರೀನಿವಾಸನಿಗೆ। ನಿಜದಾಸ ಗಜಮುಖ।।2।।

ಶರಣು ಶರಣು 'ಶರಣು ಬೆನಕನೆ ಕನಕರೂಪನೆ **ರಾಗ: ಸೌರಾಷ್ಟ್ರ-ಛಾಪುತಾಳ**

ಶರಣು ಶರಣು।।ಪ।। ಶರಣು ಬೆನಕನೆ ಕನಕರೂಪನೆ ಕಾಮಿನೀಸಂಗದೂರನೆ। ಶರಣು ಶರಣು।।ಪ।। ಶರಣು ಸಾಂಬನ ಪ್ರೀತಿಪುತ್ರನೆ, ಶರಣು ಜನರಿಗೆ ಮಿತ್ರನೆ।।ಅ.ಪ।। ಏಕದಂತನೆ ಲೋಕಖ್ಯಾತನೆ, ಏಕವಾಕ್ಯ ಪ್ರವೀಣನೆ ಏಕ ವಿಂಶತಿ ಪತ್ರಪೂಜಿತ ಅನೇಕ ವಿಘ್ನವಿನಾಯಕ।।1।। ಲಂಬಕರ್ಣನೆ ನಾಸಿಕಾಧರನೆ ಗಾಂಭೀರ್ಯಯುತ ಗುಣಸಾರನೆ। ಕಂಬುಕಂಧರ ಇಂದುಮೌಳಿಜ ಚಂದನ ಚರ್ಚಿತಾಂಗನೆ।।2।। ಚತುರ್ಬಾಹು ಚರಣತೊಡವಿನ ಚತುರ ಆಯುಧಧಾರನೆ ಮತಿಯವಂತನೆ ಮಲಿನಜನಿತನೆ ಅತಿಯ ಮಧುರಾಹಾರನೆ।।3।। ವಕ್ರತುಂಡನೆ ಮಹಾಕಾಯನೆ ಅರ್ಕಕೋಟಿ ಪ್ರದೀಪನೆ। ಚಕ್ರಧರ ಹರಬ್ರಹ್ಮ ಪೂಜಿತ ರಕ್ತ ವಸ್ತ್ರಾಧಾರನೆ।।4।। ಮೂಷಿಕಾಸನ ಶೇಷಭೂಷಣ ಅಶೇಷ ವಿಘ್ನ ವಿನಾಯಕ। ದಾಸ ಪುರಂದರವಿಠ್ಠಲೇಶನ ಈಶಗುಣಗಳ ಪೊಗಳುವೆ।।5।।

ಶರಣು ಸಿದ್ಧಿ ವಿದ್ಯಾಪ್ರದಾಯಕ ಶರಣು ಸಿದ್ಧಿವಿನಾಯಕ **ರಾಗ: ಹಂಸಧ್ವನಿ**

ಶರಣು ಸಿದ್ಧಿ ವಿದ್ಯಾಪ್ರದಾಯಕ। ಶರಣು ಸಿದ್ಧಿವಿನಾಯಕ।।ಪ।। ಮಾತೆವಾಕ್ಯವನೇ ಕೇಳಿ ಸಂಭ್ರಮದಿಂದ ಮೂಶಿಕವೇರಿ ಬರುತಿರಲೂ। ಶೇಷನಾಗ ಕಂಡು ಬೆದರಿಬೀಳಲೂ ಉರುಗಸುತ್ತೆ। ಮೋದಕ ಚೆಲ್ಲೆ ತೆಗೆದು ತುಂಬಿದ। ಉರುಗಸುತ್ತೇ ಗಗನದಲಿ ಚಂದ್ರನೋಡಿ ನಕ್ಕನು ।।1।। ಚಂದ್ರನಕ್ಕನೆಂದೆನುತಾ। ದಂತವಮುರಿದು ಬಾಣಬಿಟ್ಟಂತೆ ಎಸೆದಾನು। ಇವತ್ತಿನಲಿ ನಿನ್ನ ತಂದಜನರಿಗೆ। ಬಾರು ಚೋರವುಬರಲಿ ಎಂದು। ಪೂರ್ಣಚಂದ್ರಗಜಾನನಯನನು। ಕ್ಷೀಣನಾಗೆಂದು ಶಾಪಕೊಟ್ಟನು।।2।। ಕೊಟ್ಟ ಶಾಪವನೆ ಕೇಳಿ। ಚಂದ್ರನು ಕಂಗೆಟ್ಟು ಬಾಯ್ ಬಿಡುತಿರಲೂ ನಿತ್ಯದಲಿ ಅಪವಾದಬಂದರೆ। ಮತ್ತೆಎನಗೆ ಗತಿಯಾರಿನ್ನು। ಇವತ್ತಿನಲಿ ನಿನ್ನ ಕಂಡ ಜನರಿಗೆಕೊಟ್ಟ ಶಾಪವುತಪ್ಪ ಬಾರದು।।3।।

ಶರಣು ಶರಣೆನ್ನಿರೆ ಗಣಪಗೆ ರಾಗ: ದುರ್ಗ

ಶರಣು ಶರಣೆನ್ನಿರೆ ಗಣಪಗೆ ಶರಣು ಶರಣೆನ್ನಿರೆ॥ಪ॥ ಮಿಂದು ನಾ ಬಂದೀವ್ನಿ ನಾರ್ ಮುಡಿ ಉಟ್ಟೀವ್ನಿ। ಚೆಂದದಿಂದಲಿ ನಿನ್ನ ಪೂಜೆಯ ಮಾಡಲು॥1॥ ದೀಪಾವ ಬೆಳಗೀವ್ನಿ ಹೂವ್ಗಳ ಏರ್ಸಿವ್ನಿ ಅರಿಶೀಣ ಕುಂಕುಮಾ ಹಾಕೀವ್ನಿಗಣಪ॥2॥ ವೀಳೇಯ ಜೋಡ್ಸಿವ್ನಿ ಹಣ್ ಕಾಯಿ ಇಟ್ಟೀವ್ನಿ ನಮ್ಮೀ ಭಕುತೀಯ ಸ್ವೀಕರಿಸು ಗಣಪ॥3॥ ಸುಳಿಬಾಳೆ ಹಾಸೀವ್ನಿ ಮೋದಕವ ಮಡಿಗೀವ್ನಿ। ನಮ್ಮ ಕಾರ್ಯಕ್ಕೆ ನಿರುವಿಘ್ನ ಹರಸಪ್ಪ।.4॥ ಧೂಪಾನ ಹಚ್ಚೀವ್ನಿ ಆರುತಿ ಮಾಡೀವ್ನಿ ಲೋಕ್‌ದಾಗೆಲ್ಲರಿಗೂ ಹರಸಪ್ಪ ಗಣಪ॥5॥

ಶರಣು ಶರಣಯ್ಯಾ ಶರಣು ಬೆನಕಾ ರಾಗ: ದುರ್ಗ

ಶರಣು ಶರಣಯ್ಯಾ ಶರಣು ಬೆನಕಾ। ನೀಡಯ್ಯ ಬಾಳೆಲ್ಲಾ ಬೆಳಗುವಾ ಬೆಳಕ। ನಿನ್ನ ನಂಬಿದ ಜನಕೆ ಇಹುದಯ್ಯ ಎಲ್ಲ ಸುಖ। ತಂದೆ ಕಾಯೊ ನಮ್ಮ ಕರಿಮುಖ॥1॥ ಎಲ್ಲಾರೂ ಒಂದಾಗಿ ನಿನ್ನ ನಮಿಸಿ ನಲಿಯೋದು ನೋಡೋಕ್ಕೆ ಚೆನ್ನ। ಗರಿಕೆ ತಂದರೆ ನೀನು ಕೊಡುವೆ ವರವನ್ನು। ಗತಿನೀನೆ ಗಣಪನೆ ಕೈ ಹಿಡಿಯೋ ಮುನ್ನ॥2॥ ಸೂರ್ಯನೆದುರಲಿ ಮಂಜು ಕರಗುವಾ ರೀತಿ। ನಿನ್ನ ನೆನೆದರೆ ಒಡನೆ ಓಡುವುದು ಭೀತಿ। ನೀಡಯ್ಯ ಕಷ್ಟಗಳ ಗೆಲ್ಲುವಾ ಶಕುತಿ। ತೋರಯ್ಯ ನಮ್ಮಲ್ಲಿ ನಿನ್ನಯಾ ಪ್ರೀತಿ॥3॥ ಬೆನಕ ಬೆನಕ ಏಕದಂತ। ಪಚ್ಚೆಕಲ್ಲು ಪಾಣಿಮೆಟ್ಟು। ಒಪ್ಪುವಾ ವಿಘ್ನೇಶ್ವರ ನಿನಗೆ। ಇಪ್ಪತ್ತೊಂದು ನಮಸ್ಕಾರಗಳು॥4॥

ಶರಣು ಶರಣುವಯ್ಯ ಗಣನಾಯಕ (ಕೋಲಾಟದ ಮಟ್ಟು)

ಶರಣು ಶರಣುವಯ್ಯ ಗಣನಾಯಕ ನಮ್ಮ ಕರುಣದಿಂದಲಿ ಕಾಯೊ ಗಣನಾಯ್ಕ॥ಪ॥ ಎಳ್ಳುಂಡೆ ಜೇನುತುಪ್ಪ ಗಣನಾಯ್ಕ ನಮಗೆ ವಿದ್ಯಾವ ಕಲಿಸಯ್ಯ ಗಣನಾಯ್ಕ। ಉದ್ದು ಹೋಳಿಗೆ ತುಪ್ಪ ಗಣನಾಯ್ಕ ನಿಮ್ಗೆ ತಪ್ಪದೆ ಒಪ್ಪಿಸುವೆ ಗಣನಾಯ್ಕ॥1॥ ಗೊನೆಮೇಗ್ಲ ಬಾಳೆಹಣ್ಣು ಗಣನಾಯ್ಕ ನಿಮ್ಗೆ ಕಳಿಅಡಿಕೆ ಚಿಗುರೆಲೆ ಗಣನಾಯ್ಕ। ಕೊಂಬೆಮೇಗ್ಲ ನಿಂಬೆಹಣ್ಣು ಗಣನಾಯ್ಕ ನಿಮ್ಗೆ ಈಡುಗಾಯಿ ಜೋಡುಗಾಯಿ ಗಣನಾಯ್ಕ॥2॥ ಕರ್ಪೂರ ಸಾಂಬ್ರಾಣಿ ಗಣನಾಯ್ಕ ನಿಮ್ಗೆ ಮರುಗ ಮಲ್ಲಿಗೆ ಜಾಜಿ ಗಣನಾಯ್ಕ। ಹಸುರಂಗಿ ಕಾಲ್ಗಡಗ ಗಣನಾಯ್ಕ ನಿಮ್ಗೆ ಕಳಸದ ಮೇಲ್ಕಟ್ಟು ಗಣನಾಯ್ಕ॥3॥ ಮೂಷಕವಾಹನ ಗಣನಾಯ್ಕ ನಮ್ಮ ಶಿವನ ಕುಮಾರನಯ್ಯ ಗಣನಾಯ್ಕ। ನಿನ್ಗೆ ಹೆಂಡ್ತಿಲ್ಲ ಮಕ್ಳಿಲ್ಲ ಗಣನಾಯ್ಕ ನೀಎದ್ದು ಬಾರಯ್ಯ ಸಿದ್ಧಿ ಗಣನಾಯ್ಕ॥4॥ ಬಿಲ್ಪತ್ರೆ ವನದಲ್ಲಿ ಗಣನಾಯ್ಕ ನಿನ್ನ ಧ್ಯಾನ ಮಾಡಿ ನೆನ್ದೇವಯ್ಯ ಗಣನಾಯ್ಕ। ಕಂಟಕಹರ ನೀನು ಗಣನಾಯ್ಕ ನಮ್ಗೆ ವರವನು ಪಾಲಿಸಯ್ಯ ಗಣನಾಯ್ಕ॥5॥

ಶರಣು ಶರಣು ಶರಣು ದೇವಾಧಿಗಳೊಂದಿತ

ಶರಣು ಶರಣು ಶರಣು ದೇವಾಧಿಗಳೊಂದಿತ। ನಹುದು ಸ್ವಾಮಿ ಗಣನಾಥ ಶರಣು॥ಪ॥ ಅಖಿಳ ಭವನದೊಳು ಪೂಜಿತ। ಭಕುತ ಜನಕೆ ನೀ ಸಾಕ್ಷಾತ್। ಸಕಲ ವಿದ್ಯಾವರದಾತ। ಶಕುತನ ಹುದಯ್ಯ ಪ್ರಖ್ಯಾತ॥1॥ ಶುದ್ಧ ಬುದ್ಧರ ಸಹಕಾರ। ಬುದ್ಧಿನೀವ ಘನ ಉದಾರ। ರಿದ್ಧಿ ಗ್ಯಾಗೀಹ ನೀ ಆಧಾರ। ಸಿದ್ಧಿದಾಯಕ ವಿಘ್ನಹರ॥2॥ ಜನಕೆ ಮಾಡುವೆ ದೋಷನಾಶ। ಅನುದಿನವೆ ಮತಿ ಪ್ರಕಾಶ। ದೀನ ಮಹಿಪತಿಯ ಮನೋಭಾವಪೂರಿತ। ಗಣಾಧೀಶ ಶರಣು ಶರಣು ॥3॥

ಶರಣು ಶರಣೆಂಬೆ ನಾ ಶರಣಜನಪಾಲಗೆ

ಶರಣು ಶರಣೆಂಬೆ ನಾ ಶರಣಜನಪಾಲಗೆ॥ಪ॥ ವರದೇಂದ್ರ ಮುನಿ ಬಳಿ ಕಲಿತ ವಿಖ್ಯಾತಗೆ। ಹರಿಕಥಾಮೃತಸಾರ ಬರೆದ ಭೂಪನಿಗೆ॥1॥ ಪ್ರಾಣೇಶದಾಸರಿಗೆ ಪ್ರಾಣಪ್ರಿಯನಾದವಗೆ। ಕಾಣೆ ಜಗದೊಳು ಇವರ ಕಾರುಣ್ಯ ಗುಣಗಳಿಗೆ॥2॥ ರಾಘವೇಂದ್ರರ ದಿವ್ಯಚರಣಕಮಲಗಳನ್ನು। ರಾಗದಿಂದಲಿ ಭಜಿಸಿ ಮೇಣು ಮೆರೆದಾ॥3॥ ಮಾನವೀ ಕ್ಷೇತ್ರದಲಿ ಮಾನದಿಂ ಭಕುತರನು। ಜ್ಞಾನಿಗುರು ಶಾಮಸುಂದರ ಭಕುತರನು ಕಾಯ್ದ॥4॥

ಶರಣು ಶರಣು ಅಸ್ಮದ್ಗುರುವೆ ವಿಜಯರಾಯಾ ರಾಗ: ಕಲ್ಯಾಣಿ-ಅಟ್ಟತಾಳ

ಶರಣು ಶರಣು ಅಸ್ಮದ್ಗುರುವೆ ವಿಜಯರಾಯಾ॥ಪ॥ ದುರಿತವಾರಿವಾಹ ಜಂಝಾನಿಲ॥ ಆಗಾಮಿ ಸಂಚಿತಾಖಿಳ ಕರ್ಮವಿದೂರ। ರಾಗ ದ್ವೇಷಾದಿ ದುರ್ಗುಣ ವರ್ಜಿತ। ಭೋಗ ಪ್ರಾರಬ್ಧವ ಭುಂಜಿಪ ಭೂದೇವ। ಭಾಗವತರು ನಿನ್ನ ಬಿಡದೆ ಕೊಂಡಾಡುವರು॥1॥ ಈಷಣ ತ್ರಯದೂರ ಇಳಿಯೊಳಿದ್ದ ಪುಣ್ಯ। ದೇಶ ಸಂಚಾರ ಪಾವನ ಶರೀರ। ದಾಸಜನರ ಪ್ರಿಯ ಶಮದಮಸಾಧನ। ಕೋಶಭರಿತ ನಿತ್ಯ ಕೊಂಡಾಡುವ ಜನಕೆ॥2॥ ಕಾಮಾರಿ ರಿಪುಗಳನು ಜಯಿಸಿ ನೀ ಹೃದಯ। ವ್ಯೋಮದೊಳಗೆ ನಿತ್ಯ ಹರಿಯ ಪಾದ। ತಾಮರಸವ ಭಜಿಸಿ ಮೆರೆವ ಮಹಾಮಹಿಮ। ನೇಮದಿಂದಲಿ ನಿತ್ಯದಲಿ ಸ್ಮರಿಸುವರ॥3॥ ಆಧ್ಯಾತ್ಮಾಖಿಲ ಗೋಪ್ಯ ತತ್ತ್ವವಿಚಾರ। ಸ್ವಾಧ್ಯಾಯ ನಿಪುಣ ಸಕಲ ಜನ್ಮದಿ। ಅದ್ವೈತ ಕೋಲಾಹಲ ರಿಪುಶೂಲ। ಸಿದ್ಧಾಂತ ಜ್ಞಾನನಿಧಿಯೆ ನಿಜಾರ್ಚಕರ॥4॥ ಭುವನಮಂಡಲದಲಿಹ ಕವಿಗಳ ಶಿರೋರನ್ನ। ಭವದೂರಜ್ಞಾನಿ ಭಕ್ತರನಿಧಿಯೆ। ಪವನಾಂತರ್ಗತ ಗುರುಗೋಪಾಲವಿಠ್ಠಲನ್ನ। ಸುವನಜ ಚರಣ ಸೇವೆಯನಿತ್ತ ಗುರುವರ॥5॥

ಶರಣು ಶರಣು ಶ್ರೀ ವ್ಯಾಸಮುನಿ (ಶ್ರೀಪುರಂದರದಾಸರ ಚರಿತ್ರೆ)

ಶರಣು ಶರಣು ಶ್ರೀ ವ್ಯಾಸಮುನಿ ಚರಣಾಬ್ಜಭೃಂಗ ಜಯ ಶರಣು ಸುಜ್ಞಾನ ಭಕುತಿ ವೈರಾಗ್ಯ ಪರನೆ॥ಪ॥ ಜಯ ಶರಣು ದಾಸೋತ್ತಮರ ಮಣಿಯೆ ನಿಮಗಾರಣೆಯೆ ಗುರು ಪುರಂದರ ದಾಸರೆ ॥ಅ॥ ಪಾಕಶಾಸನಪುರದ ಚಿನಿವಾರ ವರದಪ್ಪನಾ ಕುಮಾರಕನಾಗಿ ಜನಿಸಿ ಸಂಸಾರದೊಳನೇಕ ಬಗೆಯಿಂದ ವಿಷಯಾನಂತ ಸಂಚರಿಸಿ ಲೌಕಿಕದ ಮಾರ್ಗ ತೊರೆದು ಈ ಕಲಿಯುಗದಲಿ ತುಂಗಾತೀರ ಪಂಪಾರ ರಾಕಾಬ್ಜನಂತೆ ಪೊಳೆವೋ ನಿಧಿಗೆ ಬಂದು ನಿರಾಕರಿಸಿ ದುಸ್ಸಂಗ ಸದ್ವೇಷ್ಣವರಾಗಿ ಪತಿಕರಿಸಿ ಹರಿಭಕುತಿಯ ಕಾಮಕ್ರೋಧ ಲೋಭ ಮೋಹ ಮತ್ಸರ ಡಂಭ ಈ ಮರ್ಯಾದೆಗಳ ಮರ್ಮಗಳಕಡಿದು ನಿಷ್ಕಾಮದಲಿ ಸಿರಿ ರಂಗನಾಮವನೆ ಕೈಕೊಂಡು ಆ ಮಹಾರಚನೆಯಲ್ಲಿ ಸೀಮೆಯೊಳು ಪ್ರಾಕೃತದ ಗೀತೆಯಲಿ ಕೊಂಡಾಡಿ ತಾಮಸರ ಸದೆಬಡಿದು ಮಧ್ವಸಿದ್ಧಾಂತದೊಳು ಆ ಮಹಾ ಬಿರುದೆತ್ತಿ ಸಾರಿ ಡಂಗುರ ಹೊಯಿಸಿ ಕಾಮನಯ್ಯನ ಕುಣಿಸುವ॥2॥ ಶುದ್ಧಭಕುತಿಯಲಿ ಸಿರಿವಿಠಲನ್ನ ಸಿರಿಪಾದ ಪದ್ಮಗಂಧವ ಮಧುಪನಂದದಿಂ ಸೇವಿಸುತ ತದ್ಧಿಮೀಧಿಮಿಕೆಂದುಕುಣಿಸಿ ಕುಣಿದಾಡುತ್ತ ಬುದ್ಧಿ ಪೂರ್ವಕದಿಂದಲಿ ಶುದ್ಧಮಂದರಿಗೆಲ್ಲ ಎಂದೆಂದಿಗೂ ಬಿಡದೆ ಹೊದ್ದಿದ್ದ ಪಾಪಗಳ ತಿರುಗಗೊಡದಲೆ ಕಾಲಿಲೊದ್ದು ಕಡೆಗೇ ನೊಕಿ ಸುಜ್ಞಾನ ಮಾರ್ಗದಾ ಪದ್ಧತಿಯ ಸ್ಥಿತಿ ಪೇಳಿದ॥3॥ ವರದಪ್ಪನೇ ಸೋಮ, ಗುರುರಾಯ ದಿನಕರನು, ಗುರುಮಧ್ವಪತಿಯೆ ಭೃಗು, ಅಭಿನವನೆ ಜೀವ, ಈ ವರತನಯನಾಲ್ವರನು ಪಡೆದು ಉಪದೇಶಿಸಿ ಪರಮಜ್ಞಾನಿಗಳ ಮಾಡಿ। ಶರಧಿ ತೆರೆಯಂತೆ ಹರಿಗುಣಗಳನು ಪೊಗಳುತಿಹ। ತರಳರನು ನೋಡಿ ಗುರುವ್ಯಾಸ ಮುನಿರಾಯರಿಗೆ। ಹಿರಿದಾಗಿ ಮನವುಬ್ಬಿ ಎರಗಿದಂತಃಕರಣ ಚರಿತೆಯಲಿ ನಲಿದಾಡಿದ ॥4॥ ಘೃತದ ಬಿಂದಿಗೆ ತಂದ ತಿಥಿಯವೋಗರವುಂಡ ರತಿಯಳೆಂದಾ ನುಡಿಗೆ ಚತುರಭಾಗ್ಯವನಿತ್ತ ಪಥದಲ್ಲಿ ತಾಕಾಯ್ದ ಪಥತಪ್ಪಿ ನಡೆಯಲಾ ಹಿತನಾಗಿ ದೃಢನೋಡಿದ ಕ್ಷಿತಿಪ ಶೋಧಿಸೆ ಅಪರಿಮಿತವಾಗಿ ಉಣ್ಣಿಸಿದ ಯತಿಯ ಪಂಕ್ತಿಗೆ ಭಾಗೀರಥೀ ನದಿಯ ತರಿಸಿದ ಸುತನಾಗಿ ನೀರನತಿ ಹಿತದಲ್ಲಿ ತಂದ, ಅಪ್ರತಿದೈವದ ಕಿಂಕರರೊ॥5॥ ದುರ್ಜನರ ಮಸ್ತಕಾದ್ರಿಗೆ ವಜ್ರಪ್ರಹರವಿದು ಸಜ್ಜನರ ದಿವ್ಯಚರಣಾಬ್ಜಕ್ಕೆ ಭೃಂಗವಿದು ನಿರ್ಜರರ ಮೆಚ್ಚು ಮೂರ್ಜಗದೊಳಗೆ ಬಲು ಹೆಚ್ಚು ಲಜ್ಜೆಯನು ತೊರೆದು ನಿತ್ಯ ಹೆಜ್ಜೆ ಹೆಜ್ಜೆಗೆ ಬಿಡದೆ ದಾಸರ ಕರುಣವೆಂಬ ವಜ್ರ ಕವಚವ ತೊಟ್ಟು ನುಡಿದವನ ನುಡಿ ಸತ್ಯ ಅರ್ಜುನಾಗ್ರಜ ಒಲಿದು ಸಾಗಿಸುವ ಕರುಣದಲಿ ಅಬ್ಜಭವನೊಡನೆ ಗತಿಗೆ॥6॥ ಎಂತು ವರ್ಣಿಸಲಿ ಎನಗಳವಲ್ಲ ಧರೆಯೊಳಗೆ ಸಂತತಿ ನೆಲಸುವಂತೆ ಕಾವ್ಯವನೆ ಸ್ಥಾಪಿಸಿದ ಸಂತಾನದೊಳಗೆ ಗುರುಮಧ್ವಪತಿದಾಸರನು ಸಂತೈಸಿಧರೆಗೆ ತೋರಿ ಅಂತ್ಯಕಾಲದಲಿ ಸಿರಿ ವಿಠ್ಠಲನ ಸ್ಮರಿಸುತ್ತ ಸುಪಂಥವನು ಹಿಡಿದು ಸದ್ಗತಿಯಲ್ಲಿ ಸೇರಿದಾ ಸಂತರ ದಾಸರಪ್ರೀಯ ವಿಜಯ ವಿಠಲನಂಘ್ರಿ ಚಿಂತೆಯೊಳಗಿಟ್ಟ ಗುರುವೆ॥7॥

ಸುಶರಣಸುರಪಾದಪ ಸುಶೀಲೇಂದ್ರಸನ್ಮುನಿಪ ರಾಗ: ಅಠಾಣ

ಸುಶರಣಸುರಪಾದಪ ಸುಶೀಲೇಂದ್ರಸನ್ಮುನಿಪ॥ಪ॥ ಚಾರುಶ್ರೀತುಳಸಿಸಾರಕ್ಷಮಣಿ। ಹಾರಶೋಭಿತ ಜಿತವಾರಿಜ ಚಾಪ॥1॥ ಸಲೆ ಮಂತ್ರಾಲಯನಿಲಯರ ಒಲಿಸಿದ। ಅಲವಬೋಧಮತಜಲಧಿಗೆ ಉಡುಪ॥2॥ ಕ್ಷಿತಿದೇವತತಿನುತ ವರದಾತಟ ಸ್ಥಿತ। ಯತಿಪತಿಪದವ್ರತತಿಜಮಧುಪ॥3॥ ಕೋದವಿಜನಸಂಸೇವಿತ ವರವ್ಯಂ। ದಾವನಮಂದಿರ ಪಾವನರೂಪ॥4॥ ವರದಶ್ಯಾಮಸುಂದರರಘರಾಮನ। ಚರಣಾರಾಧಕ ದುರಿತನಿರ್ಲೇಪ॥5॥

ಶರಣು ಹೊಕ್ಕೆನು ನಿನ್ನ ಚರಣ ಕಮಲಕೆ

ಶರಣು ಹೊಕ್ಕೆನು ನಿನ್ನ ಚರಣ ಕಮಲಕೆ। ನಾ ಗುರು ಸತ್ಯ ಬೋಧರಾಯಾ। ಕರುಣೆಗಳರಸನೆ ತರಳನ ಮೊರೆ ಕೇಳಿ। ಪೊರೆವುದು ಎನ್ನ ಜೀಯ ಗುರುರಾಯಾ॥ಪ॥ ಬೇಡಿಕೊಳ್ಳಲು ಬಾಯಿಬಾರದೋ ನಾ ಹಿಂದೆ ಮಾಡಿದ ಅಪರಾಧವ। ನೋಡದೆ ಎನ್ನವಗುಣ ಕೈಯ ಪಿಡಿದು ಕಾ।ಪಾಡಲು ನಿನಗೇಡೆ। ದಯಮಾಡೇ॥1॥ ಪುಟ್ಟದ ಪುಟಕ್ಕಿಕಿದ ಚಿನ್ನದಂತಿಹ। ಶ್ರೇಷ್ಠ ವೈಷ್ಣವ ಕುಲದಿ। ಭ್ರಷ್ಟಮಾಡಿದೆ ಬಾಳು ಪೇಳಲೇನು। ದಯದೃಷ್ಟಿ ಇಡುವುದೆನ್ನೊಳು ದಯಾಳು॥2॥ ಮರತ ಮತವ ನಂಬಿ ನಡೆವರ ಪದಧೂಳಿ। ಧರಿಸುವ ಭಾಗ್ಯವನೇ। ಗುರುವರ್ಯ ಕರುಣಸೋ ಹನುಮಯ್ಯನ ಪಾದ।ಸರಸಿಜ ಭೃಂಗ ನೀನು। ಸುರದೇನು॥3॥

ಶರಣು ಶುಕಮುನಿರಾಯ ಶರಣು ಮಾಂಪಾಹಿ

ಶರಣು ಶುಕಮುನಿರಾಯ ಶರಣು ಮಾಂಪಾಹಿ॥ಪ॥ ಕಾರ್ತಿಕ ಸಿತತದಿಗೆ ಗುರುಬ್ರಾಹ್ಮಿ ಶ್ರವಣದಲಿ। ಅತಿವಿಮಲ ತವರೂಪ ತೋರಿದಿಯೋ ಕರುಣಿ॥1॥ ಬಲಿ ಶಕ್ರವರದ ಬಲಿ ಫಲಿಯ ನೀಕಂಡೆನ್ನ। ಪಾಲಿಪುದಕೆ ದಯದಿ ಬಲದಿಂದ ಬಂದ್ಯಾ॥1॥ ವೇದಪಿತ ಪ್ರಸನ್ನ ಶ್ರೀನಿವಾಸನ ಗುಣಗಾನ। ಸ್ವಾದು ಸುಧೆ ಸುರಿಸುತ್ತ ಶ್ರೀ ವಿಜಯ ಕೊಡುತಿ॥3॥

ಶರಣರ ಸುರಭೋಜ ಗುರುರಾಜ

ಶರಣರ ಸುರಭೋಜ ಗುರುರಾಜ॥ಪ॥ ವರ ಮಂತ್ರಾಲಯ ಪುರಮಂದಿರತವ। ಸುಂದರ ಮುನೀಂದ್ರ ಭಾಸ್ಕರ ಸಮತೇಜ॥1॥ ಕಾಮಿತಾರ್ಥಗಳ ಕಾಮಧೇನುವಿನ। ಸೀಮಾಮೀರಿ ಕೊಡುವ ಮಹಾರಾಜ॥2॥ ಭೇಷ ಕೋಟಿ ಸಂಕಾಶನಾದ। ಕಮಲೇಶ ವಿಠಲನ ದಾಸನೇ ಸಹಜ॥3॥

ಶರಣು ಶ್ರೀ ಗುರುರಾಘವೇಂದ್ರಗೆ ಶರಣು ಯತಿಕುಲ ತಿಲಕಗೆ

ಶರಣು ಶ್ರೀ ಗುರುರಾಘವೇಂದ್ರಗೆ। ಶರಣು ಯತಿಕುಲತಿಲಕಗೆ॥ಪ॥ ಶರಣು ಶರಣರ ಪೊರೆವ ಕರುಣೆಗೆ। ಶರಣು ಹರಿಗುಣ-ಲೋಲಗೆ॥ಅ.ಪ.॥ ಮೋದಮತ ಶುಭವಾರುಧಿಚಂದ್ರಗೆ। ಭಾಧಿತಾದ್ವೈತಾಂಧಕಾರಗೆ। ಮೋದಿತಾಮರ ನಿಕರ ಕಮಲಗೆ। ಆದಿತೇಯನ ತೆರದಿ ಮೆರೆವಗೆ॥1॥ ನಿತ್ಯ ನಿರ್ಮಲ ಪುಣ್ಯಗಾತ್ರಗೆ। ಭೃತ್ಯಪಾಲಕ ಸುಗುಣ ಪಾತ್ರಗೆ। ಸತ್ಯಜ್ಞಾನ ಸುಮೋದ ನೇತ್ರಗೆ। ಸ್ತುತ್ಯಯತಿವರ ಸುಜನಮಿತ್ರಗೆ ಶರಣು॥2॥ ಮೋದದಾಯಕ ಭೇದ ಸಾಧಕ। ಮೇದಿನೀಸುರಜಾಲನಾಯಕ। ಮೋದತೀರ್ಥರ ಚರಣಸೇವಕ। ಆದಿ ಗುರುಜಗನ್ನಾಥವಿಠಲಗೆ ಶರಣು॥3॥

ಶರಣು ಶ್ರೀಗುರುರಾಘವೇಂದ್ರಗೆ ಶರಣು ಭಕುತಸುರೇಂದ್ರಗೆ ರಾಗ: ನಾಟ

ಶರಣು ಶ್ರೀಗುರುರಾಘವೇಂದ್ರಗೆ ಶರಣು ಭಕುತಸುರೇಂದ್ರಗೆ ಶರಣು ಶರಣರ ಪೊರೆವ ಕರುಣೆಗೆ। ಶರಣು ಸುರವರಧೇನುಗೆ॥ಪ॥ ಮದ್ವಮತ ಶುಭವಾರ್ಧಿ ಚಂದ್ರಗೆ। ಸಿದ್ದಿಸಾಧನ ಮೂರ್ತಿಗೆ। ಬದ್ಧ ಶ್ರೀಹರಿ ದ್ವೇಷಿ ಮಾಯಿಗಳ। ಗೆದ್ದ ರಘುಕುಲ ರಾಮದೂತಗೆ॥1॥ ನಿತ್ಯ ನಿರ್ಮಲ ಪುಣ್ಯಗಾತ್ರಗೆ। ಭೃತ್ಯಜನ ಪರಿಪಾಲಗೆ। ಸತ್ಯ ಸಂಕಲ್ಪಾನುಸಾರಗೆ। ನಿತ್ಯ ಕರ್ಮವ ಮಾಳ್ಪದೂರೆಗೆ॥2॥ ಪಾತಕಾಂಬುಧಿ ಕುಂಭಸಂಭವ ಆರ್ತಜನ ಪರಿಪಾಲಗೆ ದಾತ ಗುರುಜಗನ್ನಾಥವಿಠಲನ ಪ್ರೀತ ಸುಖಮಯ ದಾತಯತಿಗೆ॥3॥

ಶರಣು ಶರಣು ರಾಘವೇಂದ್ರ ಶರಣು ಭಕ್ತವತ್ಸಲ

ಶರಣು ಶರಣು ರಾಘವೇಂದ್ರ ಶರಣು ಭಕ್ತವತ್ಸಲ। ಶರಣು ಶರಣು ರಾಘವೇಂದ್ರಾ ಶರಣು ದೀನ ಕಂಪಿತ॥ಪ॥ ಶರಣು ಶರಣು ಮಂತ್ರ ಸಿದ್ಧ ಶರಣು ಮಹಾ ಮಹಿಮನೆ। ಶರಣು ಶರಣು ಮಂಗಳಾಂಗ। ಶರಣು ಭ್ರಾಂತಿ ಭಂಗನೆ॥ಅ.ಪ॥ ಶರಣು ಶರಣು ಪುಣ್ಯ ಮೂರ್ತಿ ಶರಣು ಪಾಪನಾಶಕ। ಶರಣು ಶರಣು ಪಾವನಾತ್ಮ ಶರಣು ಪತಿತ ಪಾವನ॥ ಶರಣು ಶರಣು ಭಾಗ್ಯದಾತ ಭವ್ಯ ರೂಪನೆ। ಶರಣು ಶರಣು ಯೋಗಿರಾಜ ಶರಣು ದಿವ್ಯ ತೇಜನೆ॥1॥ ಪುಣ್ಯ ಚರಿತ ಪುಣ್ಯ ನಿರತ ಪುಣ್ಯದಾತ ರಾಘವೇಂದ್ರ। ವ್ಯಸನಹಾರಿ ದೂಷದೂರಿ ಸ್ವಪ್ನದರ್ಶಿ ರಾಘವೇಂದ್ರ॥ ಸ್ವಾಮಿ ತಿರುಮಲೇಶ ಹರಿವಿಠಲದಾಸ ರಾಘವೇಂದ್ರ। ಶರಣ ಜನರ ಮರಣ ನಾಶಿ ಕರುಣಿ ಕರುಣಿ ರಾಘವೇಂದ್ರ॥2॥

ಶರಣು ಶರಣು ರಾಘವೇಂದ್ರ ಗುರುರಾಯಾ

ಶರಣು ಶರಣು ರಾಘವೇಂದ್ರ ಗುರುರಾಯಾ। ಶರಣು ಶರಣು ಕವಿಗೇಯ। ಶರಣು ಮಾರುತಮತಶರಧಿ ಅತ್ರಿತನಯ। ಧರಣಿ ವಿಬುಧ ಜನಪ್ರೀಯಾ॥ಪ॥ ಅನಾದಿಕಾಲದಿ ಎನಗೆ ಶ್ರೀ ಹರಿ ತಾನು। ನಾನಾ ದೇಹ ದೇಶ ಕಾಲದಲಿ। ತಾನೆ ಇಚ್ಛಿಸಿ ಮಾಡಿದ ಮರಿಯಾದಿ ಯು ನಾನರಿತವನಲ್ಲ ಗುರುವೆ। ಏನೇನು ವಿಘ್ನಗಳುಂಟು ಪರಿಹರಿಸಿ। ನೀನೇ ಪಾಲಿಸಬೇಕು ಕರುಣಿ॥1॥ ಹಸ್ತಿಮಜ್ಜನದಂತೆ ಕರ್ಮಾದಿ ಕರ್ಮನಿ। ರಸ್ತವಾದುದು ಅಬಲರಿಗೆ। ಗ್ರಸ್ತವಾಗಿದೆ ಮನ ವಿಷಯದಿ ಮೊದಲಿಂದು। ದುಸ್ತರವವನಿಗೆ ಗೆಲಲೊಶವೆ। ವಿಸ್ತಾರಮಹಿಮ ನೀನೊಲಿದು ಕರುಣಿಸಲು। ದುಸ್ತರವೆಲ್ಲ ಸುಲಭವೋ। ಹಸ್ತಿ ವರದನಂಘ್ರಿಯಲಿ ಭಕ್ತಿಯನಿತ್ತು। ಸ್ವಸ್ಥಚಿತ್ತನ ಮಾಡೊ ಕರುಣಿ॥2॥ ಗುರುವೆ ಕಾಮಿತ ಕಲ್ಪತರುವೆ ತ್ರಿಕಾಲಜ್ಞ। ವರಯೋಗಿ ಅನಘ ನಿಸ್ಸಂಗ। ದುರಿತ ಅಕಾಲಮೃತ್ಯುವಿನ ಗಂಟಲಗಾಣ। ಪರಮಹಂಸರ ಕುಲತಿಲಕ। ಮರುತಾಂತರ್ಗತ ಗುರುಗೋಪಾಲವಿಠ್ಠಲನ್ನ। ಸರುವಸ್ಥಾನದಿ ಸಮದರ್ಶಿ। ಕರಮುಗಿದು ಬಿನ್ನೆಸುವೆಲಾಲಿಸಿ ವೇಗದಿ। ಪೊರೆವರ ನಿನ್ನದೊ ಕರುಣಿ॥3॥

ಶರಣಂ ಶರಣಂ ಪಾಲಯಮಾಂ ಶ್ರೀ ಗುರುರಾಘವೇಂದ್ರ — ರಾಗ: ಮಧ್ಯಮಾವತಿ,-ಆದಿತಾಳ

ಶರಣಂ ಶರಣಂ ಪಾಲಯಮಾಂ। ಶ್ರೀ ಗುರುರಾಘವೇಂದ್ರ ಕೃಪಾಂಬುದೇ ಪಾಲಯಮಾಂ ॥ಪ॥ ಸುಧೀಂದ್ರಯತಿವರ ಕರಕಮಲಜ ವರ। ಯೋಗೀಂದ್ರ ಹಸ್ತ ಸರೋರುಹಪೂಜಿತ ಪಾಲಯಮಾಂ॥1॥ ತಾರಕಸುಖದ ಸುಮಧ್ವಮತಾರ್ಣವ। ದುಗ್ಧತರಂಗಪ್ರವರ್ಧಕ ಚಂದ್ರ ಪಾಲಯಮಾಂ॥2॥ ಸುಂದರಸ್ತಂಭಜ ರಾಮ ದೇವಕೀಸುತ। ಸೈಂಧವಮುಖದ್ವೈಪಾಯನಾರಾಧಕ ಪಾಲಯಮಾಂ॥3॥ ಪರಿಮಳ ವಿವೃತ್ತಿ ಮುಕ್ತಾವಲಿ ಬಹು। ತಾರಕಗ್ರಂಥ ಸುಕರ್ತೃ ಸುಮೇಧ ಭೋ ಪಾಲಯಮಾಂ॥4॥ ಮಂದಜಭವಪಿತ ಪ್ರಸನ್ನಶ್ರೀನಿವಾಸ। ಸಿಂಧುಜಾಪತಿ ಸಿಂಧೂರವರದ ಪ್ರಿಯ ಪಾಲಯಮಾಂ॥5॥

ಶರಣಾಗಿರೋ ಗುರುರಾಘವೇಂದ್ರರ — ರಾಗ: ಶಂಕರಾಭರಣ-ಖಂಡಛಾಪುತಾಳ

ಶರಣಾಗಿರೋ ಗುರುರಾಘವೇಂದ್ರರ ಶರಣಾಗಿರೋ॥ಪ॥ ಶರಣಾಗಿ ಚರಣದಲಿ ಗುರುರಾಜ ಎಂದರೆ। ಪರಿಹರಿಸಿಪಾಪಗಳ ಪೊರೆವಂಥ ಗುರು ಕಾಣಿರೋ। ಪ್ರಭು ಕಾಣಿರೋ॥ಅ.ಪ॥ ಅಂದು ಬಾಲಕನಾಗಿ ನರಹರಿಯಕರೆದು। ಮುಂದೆ ಶ್ರೀ ಕೃಷ್ಣನ ದರುಶನವ ಪಡೆದು। ಬಂದು ನೆಲಸಿಹರಯ್ಯ ತುಂಗೆ ತಟದಲಿ ಇಂದು। ಒಂದಾಗಿ ನಮಿಸಿರೋ ಚರಣಕಮಲಕೆ ಮಿಂದು॥1॥ ಹರಿಪದವ ಪಡೆದಿದ್ದ ಕರಿಯಕಲ್ಲಲಿ ಕಡೆದ। ಪರಮ ಮಂಗಳವಾದ ಬೃಂದಾವನದಲಿ। ಅಭಿಷೇಕವನು ಕೊಳುವ ಅತಿ ರಮ್ಯನೋಟದಲಿ। ನೇತ್ರ ಪಾವನಗಳಿಸಿರೋ ಜನ್ಮಗಳ ಹೊರೆ ಇಳಿಸಿರೋ॥2॥ ಕಲಿಯುಗಳ ಕಲ್ಪತರು

ಶರಣು ಶರಣು ಶ್ರೀ ರಾಘವೇಂದ್ರ — ರಾಗ: ಸಾರಂಗ-ಛಾಪುತಾಳ

ಶರಣು ಶರಣು ಶ್ರೀ ರಾಘವೇಂದ್ರ॥ಪ॥ ಮೊರೆಹೊಕ್ಕವರ ನಿರುತ ಕರುಣದಿಂದಲಿ ಕಾಯ್ವ ಸರಸತಿಯ ವರಪುತ್ರ

ಪರಮಪವಿತ್ರ॥ಅ.ಪ॥ ಪರಿಪರಿಯ ದುಃಖದಿಂ ಬಳಲಿ ಬೆಂಡಾಗಿಹರ। ಭರದಿಂದ ಸಂತೈಸಿ ದುಃಖಗಳನೀಡಾಡ್ವೆ। ಕರಮುಗಿದು ಬೇಡುವರಭೀಷ್ಟಗಳನೀವ ನಿಜ। ವರದ ಕಮಲೇಶ ಪ್ರಿಯ ಕರಪಿಡಿದು ಪೊರೆಯಯ್ಯ॥ಚರಣ॥

ಶರಣು ಶರಣು ಗುರುರಾಯ ನಿನಗೆ **ರಾಗ: ಅಭೋಗಿ-ಆದಿತಾಳ**

ಶರಣು ಶರಣು ಗುರುರಾಯ ನಿನಗೆ। ಸಚ್ಚಿದಾನಂದ ಸ್ವರೂಪ॥ಶರಣು॥ ಸಕಲ ಶಾಸ್ತ್ರವೇದಸಾರ। ಸಜ್ಜನ ಪರಿಪಾಲ ಗುರು। ರಾಘವೇಂದ್ರ॥ಶರಣು॥ ಸತ್ವ ತತ್ವ ಬೋದಸಾರ। ಸಂಗೀತಾಮೃತ ಪಾನಚತುರ। ಸುರಸ ಮಾಧುರ್ಯ ವಾಗ್ವಿಲಾಸ। ಸುರನರಸೇವಿತ ರಾಘವೇಂದ್ರ॥ಶರಣು॥ ಶೃಂಗೇರಿ ವರ ಶಾರದಾಂಬೆಯ। ದಾಸಿ ವಂದಿತ ಶ್ರೀ ರಾಘವೇಂದ್ರ॥ ತುಂಗಾತೀರ ನಿವಾಸ ಯಂತೀಂದ್ರ। ಅಂಗ ಪ್ರದಕ್ಷಿಣಾ ಪಾಂಗ ಕೃಪಾಂಗ॥ಶರಣು॥

ಶರಣು ಬಂದೆ ಗುರುವೆ ನಿನ್ನಡಿಗೆ

ಶರಣು ಬಂದೆ ಗುರುವೆ ನಿನ್ನಡಿಗೆ ನಮಿಪೆ ಪ್ರಭುವೆ॥ಪ॥ ಮಂಚಾಲಯದಿ ನೆಲೆಸುತ ನೀನು। ಭಕ್ತಿಮಾರ್ಗವನುತೋರುತ ನೀನು। ದೀನಸಂರಕ್ಷಣೆ ಮಾಡುತ ನೀನು। ಅಂತಃಕರಣವ ಬೆಳಗುವೆ ನೀನು॥1॥ ತುಂಗಾನದಿಯಲ್ಲಿ ಮಿಂದು ಭಕುತರು। ಜನ್ಮ ಸಾಫಲ್ಯವ ಹೊಂದುತಲಿಹರು। ಬೃಂದಾವನವ ಸುತ್ತುತಲಿಹರು। ಅನುಪಮ ಶಾಂತಿ ಪಡೆಯುತಲಿಹರು॥2॥ ಮಂದಸ್ಮಿತನಾಗಿ ದರುಶನ ನೀಡುವೆ। ಮಂಗಳವನು ನೀ ಕರುಣಿಸುವೆ। ಭಕ್ತರಾಭೀಷ್ಟವ ಪೂರೈಸುತ್ತಿರುವೆ। ಚೈತನ್ಯದಾಸನ ಪೊರೆಯುತಲಿರುವೆ॥3॥

ಶರಣು ಗುರುರಾಜ ಶರಣು ರವಿತೇಜ

ಶರಣು ಗುರುರಾಜ ಶರಣು ರವಿತೇಜ। ನಂಬಿದವರ ಬೇಡಿಕೆಗಳ ನೀಡುವಂಥಾ ಯೋಗಿರಾಜ॥ಪ॥ ತುಂಗಾನದಿಯ ತೀರವಾಸಿ। ವರಮಂತ್ರಾಲಯತಾಪಸೀ। ಬೃಂದಾವನದಾ ಜ್ಯೋತಿರೂಪ। ನೀನೇ ನಮಗೆ ದಾರಿದೀಪ॥1॥ ಗುರುವು ನೀನೆ ತಂದೆ ನೀನೇ ನಮ್ಮ ಕಾಯುವ ದೈವ ನೀನೆ। ನಿನ್ನ ನಾಮಮೃತವ ಜಪಿಸಿ। ಚಿಂತೆಗಳನು ಮರೆವೆನಾನು॥2॥

ಶರಣು ಪೊಕ್ಕೆನೋ ನಿನ್ನ ಕರುಣಾಸಾಗರಾ **ರಾಗ: ಅಠಾಣ-ರೂಪಕತಾಳ**

ಶರಣು ಪೊಕ್ಕೆನೋ ನಿನ್ನ ಕರುಣಾಸಾಗರಾ॥ಪ॥ ಶರಣು ಪೊಕ್ಕೆ ಚರಣ ಯುಗಕೆ ಕರುಣೆಸೆನ್ನ ಶರಣನೆಂದು। ಗುರುವೆ ತ್ವರದಿ ಪೊರೆಯೊ ಸ್ವಾದಿ-ದ್ವರಿಯೆ ಕರವ ಪಿಡಿದು ನಿರುತ॥ಅ.ಪ॥ ಎನ್ನ ಬಿನ್ನಪ ಕೇಳೋ ಆಪನ್ನ ಪಾಲಕಾ। ಘನ್ನ ಮಹಿಮ ನಿನ್ನ ಬಿಟ್ಟ-ರನ್ಯ ಪಾಲಕರಿನ್ನು ಇಲ್ಲ। ಘನ್ನಜ್ಞಾನವಿತ್ತು ಮುನ್ನ - ಮನ್ನಿಸೋ ಯತಿರನ್ನನೇ॥1॥ ತಾತನೆಂದೆನೋ ಎನ್ನ ಮಾತು ಲಾಲಿಸೊ। ದಾತ ನಿನ್ನ ಪೋತ ನಾನು ಮಾತು ಕೇಳನಾಥ ಪೇಳ್ವೆ। ಪ್ರೀತಿ ಮನದಿ ಭೀತಿ ಬಿಡಿಸಿ-ದೂತನೆನಿಸೊ ಖ್ಯಾತ ಮಹಿಮನೆ॥2॥ ಪರಮ ಕರುಣೆಸೋ ನಿನ್ನ-ಶಿರದಿ ನಮಿಸುವೆ। ಸರಸಪಾದಸರಸಿರುಹಕೆ-ಎರಗಿ ಅರಿಕೆ ಮಾಡಿದ್ಯನ್ನ।ಪರಿಯ ತಿಳಿದು ಪೊರೆಯೊ ಸ್ವಾಮಿ। ಸರಸ ಗುರುಜಗನ್ನಾಥ ವಿಠಲ ದೂತ॥3॥

ಶರಣು ಪೊಕ್ಕೆ ಮೊರೆಯ ಕೇಳೋ ಪರಮ ಕರುಣ ನಿಲಯ

ಶರಣು ಪೊಕ್ಕೆ ಮೊರೆಯ ಕೇಳೋ ಪರಮ ಕರುಣ ನಿಲಯ ನಿನ್ನ। ಚರಣಕಮಲಯುಗಕೆ ನಮಿಪೆ ಕರುಣೆಸೆನ್ನನು॥ಪ॥ ವಾದಿರಾಜ ಗುರುವೆ ನಿನ್ನ ಪಾದಯುಗಳದಲ್ಲಿ ನಿತ್ಯ। ಆದರಾತಿಶಯವನಿತ್ತು ಮೋದ ಬಡಿಸಯ್ಯಾ। ಸ್ವಾದಿನಿಲಯ ಮನದ ವಿಷಾದ ಕಳೆದು ಮೋಹ ಭವದ। ಖೇದ ಕೊಡುವ ಮಹತ್ತಾದ ಬಾಧೆ ಬಿಡಿಸಯ್ಯಾ॥1॥ ದೇವ ಸ್ತೋಮ ವಂದ್ಯ ನಿನ್ನ ಸೇವೆಗಾಗಿ ಬಂದ ಎನ್ನ। ಭಾವ ತಿಳಿದು ಶೀಘ್ರ ಫಲವ ಭಾವಿಸುವುದು ಕೋವಿದಾಢ್ಯ। ದೇವ ದೇವ ನಿನ್ನ ಬಿಟ್ಟು ಆವ ದಾತನಿಲ್ಲವೆಂದು। ಭಾವದಿಂದ ಭಜಿಪೆನಯ್ಯ ಭಾವಿಧಾತನೇ॥2॥ ಸೀತರಮಣ ಗುರುಜಗನ್ನಾತವಿಠಲ ಪಾದಪದುಮ। ದೂತನೆನಿಸಿ ಖ್ಯಾತನಾಗಿ ಮಾತೆ ಜನಕರಂತೆ ನಿತ್ಯ। ದೂತಜನರ ಪೊರೆವೊ ಗುರುವೇ

ಪ್ರೀತನಾಗಲೊಲ್ಯಾ ಸ್ವಾಮಿ। ದೂತ ನಾನು ನಿನಗೆ ಎನ್ನ ಮಾತುಲಾಲಿಸೋ॥3॥

ಶರಣು ಶ್ರೀ ಗುರು ವಾದಿರಾಜಗೆ **ರಾಗ: ಹಂಸಧ್ವನಿ-ಆದಿತಾಳ**

ಶರಣು ಶ್ರೀ ಗುರು ವಾದಿರಾಜಗೆ। ಶರಣು ಸುರಗಣ ಮಾನ್ಯಗೆ॥ಪ॥ ಶರಣು ಶರಣರ ಪೊರೆವ ಕರುಣಿಗೆ। ಶರಣು ಹರಿಗುಣ ಲೋಲಗೆ॥ಅ.ಪ॥ ಮದ್ವಮತ ಶುಭ ವಾರಿಧಿ ಚಂದ್ರಗೆ। ಸಿದ್ಧ ಸಾಧನ ಮೂರ್ತಿಗೆ। ಬದ್ಧ ಶ್ರೀಹರಿ ದ್ವೇಷ ಮಾಳ್ಪರ। ಗೆದ್ದ ಹಯಮುಖ ದಾಸಗೆ॥1॥ ನಿತ್ಯ ನಿರ್ಮಲ ನಿಗಮ ಸ್ತೋತ್ರಗೆ। ಭೃತ್ಯಪಾಲಕ ಸುಗುಣ ಗಾತ್ರಗೆ। ಸತ್ಯಲೋಕ ಸುಮುಖ್ಯ ಪಾತ್ರಗೆ। ಸತ್ಯಯತಿವರ ಸುಜನ ಮಿತ್ರಗೆ॥2॥ ಮೋದದಾಯಕ ಭೇದ ಸಾಧಕ। ಸೋದಿಕ್ಷೇತ್ರಾಧೀಶಗೆ। ವೇದವೇದ್ಯ ಯತೀಶುತಾತಗೆ। ಗುರು ಜಗನ್ನಾಥ ವಿಠ್ಠಲ ದಾಸಗೆ॥3॥

ಶರಣು ಶರಣು ಜಯಮುನಿರಾಯ ಸ್ವಾಮಿ

ಶರಣು ಶರಣು ಜಯಮುನಿರಾಯ ಸ್ವಾಮಿ ಶರಣಾಗತತಾತ್ವಿಕಪ್ರಿಯ॥ಪ॥ ಶ್ರೀಮದ್ವಗುರು ದಯವನು ಪಡೆದು ಅದೇ ಮಹಿಮನ ಮನೆಯೊಳು ಬಂದು ನೇಮದಿ ತುರ್ಯಾಶ್ರಮ ಒಲಿದೆ ಈ ಭೂಮಿಯಲಿ ಇಂದ್ರನ ಪರಿಯಲಿ॥1॥ ಅಶ್ರುತಪ್ರತಿಭೆ ಬುಧರೊಳು ಬೀರಿ ನಾನಾ ಶ್ರುತಿಯರ್ಥ ಪ್ರಕಟದೋರಿ ಶಾಶ್ವತಕ್ವಾದಿತ್ರಿ ಪ್ರಮಾಣವನು ನಿಜಾಶ್ರೀತರಿಗೆ ಪೇಳಿದೆ ಅನುವ ಸ್ವಾಮಿ ॥2॥ ವೇದಾಂಬುಧಿಯೊಳು ಸುಧೆದೆಗೆದೆ ರಾಮಪಾದ ಕರ್ಪಿಸಿ ಬುಧಜನಕೆರೆದೆ ಕೈದುಗಳಂತೆ ಪ್ರಮೇಯಾರ್ಥವಿಡಿದೆ ಜಯನಾದದಿಂ ದುರ್ವಾದಿಗಳನೆಸೆದೆ ಸ್ವಾಮಿ॥3॥ ಮರುತಮತದ ವಿಬುಧರ ನೆರಹಿಸಿ ಮೂರೇಳರಿಬಲವ ಜರಿದಟ್ಟಿದ್ಯದರ ಬಿರುದು ಸೆಳೆದೆ ಈ ಧರೆಯ ವೈಷ್ಣವರ ಭಯವ ಕಳೆದೆ ಸ್ವಾಮಿ॥4॥ ಈ ಕ್ಷೋಣಿಯೊಳು ಪ್ರತಿವರ್ಜಿತನೆ ಶ್ರೀ ಅಕ್ಷಯಪ್ರಾಜ್ಞಕೃಪಾನ್ವಿತನೆ ಅಕ್ಷೋಭ್ಯತೀರ್ಥರ ತನಯನೆ ವಿಸ್ವಕುಕ್ಷಿಪ್ರಸನ್ನ ವೆಂಕಟ ಪ್ರಿಯನೆ॥5॥

ಶರಣು ಶ್ರೀ ಪಾರ್ವತಿದೇವಿಗೆ

ಶರಣು ಶ್ರೀ ಪಾರ್ವತಿದೇವಿಗೆ। ಶರಣು ಶಾಂಭವಿಗೌರಿಗೆ। ಶರಣು ಭಕ್ತರ ಪೊರೆವ ಕರುಣಿಗೆ ಶರಣು ನಮ್ಮ ಶರ್ವಾಣಿಗೆ॥ಪ॥ ಲಂಬ ಕರ್ಣನ। ಬಿಂಬಛಿದ್ರನ ಸಂಭ್ರಮದಿ ಪಡೆದಮ್ಮಗೆ। ಶಂಬರಾರಿಯ ಅಂಬಿಗಾಹರ ನಂಬಿದಾ ಪಟ್ಟದರಸಿಗೆ॥1॥ ಅಮಿತ ಮಹಿಮಳೆ ಜ್ಯೋತಿ ಆದಿಶಕ್ತಿ ದುರ್ಗಾಂಬೆಗೆ। ಹೇಮ ಗಿರಿಸುತೆಯಾದ ನಮ್ಮ ಹೇಮವರ್ಣ ಭವಾನಿಗೆ॥2॥ ತಂದು ದಕ್ಷನ ಶಿರವ ಮಹಿಷಾಸುರನ। ಹೊಡೆವ ಮೃಡಾಣಿಗೆ। ಕರುಣಾನಿಧಿ 'ಹೆನ್ನೆ ವಿಠಲನ' ಮುನ್ನ ಸ್ಮರಿಸದವರನ ಕಾಯ್ವಳೆ॥3॥

ಶರಣು ಶರಣು ದುರ್ಗೆ ಸರ್ವಶಕ್ತಿ

ಶರಣು ಶರಣು ದುರ್ಗೆ ಸರ್ವಶಕ್ತಿ ಜಗನ್ಮಾತೆ। ಶರಣು ಶರಣು ಶಿವ ಗೌರಿ ರಕ್ಷಿಸೆಮ್ಮ ಸುಖದಾತೆ॥ಪ॥ ಮಂಗಳವಾರ ಸುಮಂಗಲೆಯರು ನಿನ್ನಯ ನಾಮವ ಭಜಿಸಿಹರು। ಒಂಭತ್ತುವಾರ ವ್ರತವಿರಲು ಕೂಡುವುದು ಇಷ್ಟಾರ್ಥಗಳು॥1॥ ರಕ್ಷಿಸುವವಳು ನೀನೆ ಶಿಕ್ಷಿಸುವವಳು ನೀನೆ। ಅಣು ಅಣುವೆಲ್ಲಾ ತುಂಬಿಹೆ ನೀನು। ತೋರಿಸಿ ಕರುಣೆಸು ಕಾಮಧೇನು॥2॥ ಜಯ ಶಿವಶಂಕರಿ ಜಯ ಅಭಯಂಕರಿ। ಜಯಜಯ ಶಕ್ತಿ ಜಯ ಪ್ರಳಯಂಕರಿ। ಜಯಜಯ ಶಿವ ಶಾಂಭವಿ ಜಯ ನಟ ಭೈರವಿ। ಜಯಕಾದಂಬರಿ ಜಯ ಶ್ವೇತಾಂಬರಿ॥2॥ ಜಯ ಮಾತಂಗಿನಿ ಆನಂದದಾಯಿನಿ। ಜಯ ಜಗದಂಬೆ ಪುಣ್ಯ ಸ್ವರೂಪಿಣಿ। ಓಂ ಜಗಜ್ಜನನಿ ಮಾತಾ ಭವಾನಿ। ಓಂಕಾರೇಶ್ವರಿ ಚಿತ್ತನಿವಾಸಿನಿ॥4॥

ಶರಣೆಂಬೆ ನಿನಗೆ ಜಗದೀಶ್ವರಿ **ರಾಗ: ಕಲ್ಯಾಣಿ**

ಶರಣೆಂಬೆ ನಿನಗೆ ಜಗದೀಶ್ವರಿ। ಸ್ಮರಿಸುವೆ ನಿನ್ನನು ಶ್ರೀ ಭುವನೇಶ್ವರಿ॥ಪ॥ ಕಾತ್ಯಾಯನಿದೇವಿ ಕಾಮಿತಫಲದಾತೆ। ಮುನಿಜನವಂದ್ಯೆ ಸುಜನಪೂಜಿತೆ॥ ಚಂದ್ರಕಳಾಧರೆ ಸರಸಿಜನೇತ್ರೆ। ಗೌರಿಮನೋಹರಿ ರಾಜರಾಜೇಶ್ವರಿ॥1॥

ಪ್ರೇಮಪೂರಿತಮನದಿ ನಿನ್ನ ಪೂಜೆಯಗೈವೆ। ಪರಿಪರಿ ಪುಷ್ಪವ ನಿನಗೆ ಅರ್ಪಿಸುವೆ। ಕನಕವೃಷ್ಟಿಯ ತಾರೆ ಕನಕಾಂಬರಿತಾಯೆ। ಚೈತನ್ಯದಾಸನಿಗೆ ಸುಮನವ ನೀ ತಾರೆ॥2॥

ಶರಣರ ಕಾಯ್ಯೆ ಚಾಮುಂಡೇಶ್ವರಿ **ರಾಗ: ಕಾಮವರ್ಧಿನಿ**

ಶರಣರ ಕಾಯ್ಯೆ ಚಾಮುಂಡೇಶ್ವರಿ ಶಂಕರಿ ಶಾರ್ವರಿ ಶ್ರೀಭುವನೇಶ್ವರಿ॥ಪ॥ ಮಂಗಳದಾತೆ ಮಹಿಷಮರ್ಧಿನಿ। ಗಂಗಾಧರ ಮನಮೋಹಿನಿ। ಶೂಲಧಾರಿಣಿ ವಿಶ್ವಕಾರಿಣಿ ಸರ್ವಮಂಗಳೆ ಶಾಪವಿಮೋಚಿನಿ॥1॥ ಕಾತ್ಯಾಯಿನಿ ಕಲ್ಯಾಣಿ। ಸರ್ವಾತ್ಮಿಕೆ ಸುರಪೂಜಿತೆ। ಮಾಹೇಶ್ವರಿ ವಿಜಯಾಂಬಿಕೆ ಸರ್ವಸಂಪದೆ ನಾರಾಯಣಿ॥2॥

ಶರಣು ಶರಣು ಶರಣು ಮೃತ್ಯುಂಜಯ

ಶರಣು ಶರಣು ॥ಪ॥ ಶರಣು ಮೃತ್ಯುಂಜಯ ಶರಣು ಸಜ್ಜನರ ಭಯ। ಪರಿಹರಿಸು ಕರುಣಾಳು॥ಅ.ಪ॥ ವಾಸವಾದ್ಯಮರನುತ ವನಜಸಂಭವನ ಸುತ। ನೀ ಸಲಹೊ ಕೈಲಾಸವಾಸ ಈಶ। ಕ್ಲೇಶ ಮೋದಾದಿ ಸಮ ತಿಳಿಸು ಅಶ್ವತ್ಥಾಮ। ಶ್ರೀಶುಕ ದೂರ್ವಾಸ ಸ್ಫಟಿಕಸಮಭಾಸ॥1॥ ವೈತಾರಿಕಾದಿ ತ್ರೈರೂಪ ನಿನ್ನಯ ಕೋಪ। ಶೋಕಕೊಡುವುದು ದೈತ್ಯಜನಕೆ ನಿತ್ಯ। ಲೌಕಿಕಗಳೆಲ್ಲ ವೈದಿಕವಾಗಲೆನಗೆ ಮೈ। ನಾಕಿ ಹೃತ್ಕುಮುದೇಂದು ಭಕ್ತಜನ ಬಂಧು॥2॥ ಪವಮಾನತನಯ ನಿನ್ನವರಲ್ಲಿ ಕೊಡು ವಿನಯ। ದಿವಸ ಸವನಗಳಲ್ಲಿ ಎನ್ನಿವರ ನೀ ಬಲ್ಲಿ। ಪವನ ದ್ವಿತಿಯರೂಪಸತತ ಎನ್ನಯ ಪಾಪ। ಅವಲೋಕಿಸದಲೆನ್ನ ಸಲವೊ ಸುರಮಾನ್ಯ॥3॥ ಶೇಷನಂದನ ಶೇಷಭೂಷಣನೆ ನಿಶ್ಶೇಷ। ದೋಷರಹಿತನ ತೋರು ಕರುಣವನು ಬೀರು। ಶ್ರೀ ಷಣ್ಮುಖನ ತಂದೆ ಸತತ ನೀ ಗತಿಯೆಂದೆ। ಶೋಷಿಸು ಭವಾಮಯವ ಬೇಡುವೆನು ದಯವ॥4॥ ಗರ್ಗ ಮುನಿಕರಪದುಮ ಪೂಜ್ಯಚರಣಾಬ್ಜ ಮಮ। ದುರ್ಗುಣಗಳೆಣಿಸದಲೆ ಜಗದ ಮೇಲೆ। ನಿರ್ಗತಾಶನ ಜಗನ್ನಾಥವಿಠ್ಠಲನ ಸ। ನ್ಮಾರ್ಗವನೆ ತೋರು ಈ ದೇಹ ನಿನ ತೇರು॥5॥

ಶರಣಾಗತಿಯೆಂದು ನಿನ್ನ ನಂಬಿದೆ **ರಾಗ: ಶಂಕರಾಭರಣ-ಆದಿತಾಳ**

ಶರಣಾಗತಿಯೆಂದು ನಿನ್ನ ನಂಬಿದೆ। ಬೇರೆ ಗತಿ ಕಾಣೆನೆ ಶಂಕರ॥ಶರಣಾ॥ ಭವಭಯ ಹರನೆ। ಭವ ತಾರಕನೇ। ಭವಬಂಧನವ ಬಿಡಿಸುವಶಿವನೇ॥ಶರಣಾ॥ ಕಲಿಯುಗದೀ ನೀನ್ನ ಭಜಿಸುವ ಮನುಜಗೆ। ಭಕ್ತಿಯ ಸಾರವ ನೀಡುವ ಶಿವನೇ। ಭಕ್ತಿಯ ಭಾವದಿ ಭಜನೆಯ ಮಾಡುವ। ಭಕ್ತಗೆ ತ್ವರಿತದಿ ದರುಶನ ನೀಡುವೆ॥ಶರಣಾ॥ ಒಬ್ಬರಿಗೆ ಶಿವನಾಗಿ ಒಬ್ಬರಿಗೆ ದತ್ತನಾಗಿ। ಮತ್ತೊಬ್ಬರ ಭಾವಕೆ ರಾಮಕೃಷ್ಣ ಗುರುವಾಗಿ। ಭಕ್ತರ ಮನಗಳಲಿ ಒಂದೊಂದು ತೆರನಾಗಿ। ತೋರುವ ಶಾರದ ದಾಸಿ ವಂದಿತನೆ॥ಶರಣಾ॥

ಶರಣ ನಾನು ಶರಣು ಬಂದೆ **ರಾಗ: ಆನಂದಭೈರವಿ**

ಶರಣ ನಾನು ಶರಣು ಬಂದೆ। ಚರಣ ನೀಡು ಶಿವನೆ। ಶಶಿಯಕಿರಣ ಎನ್ನಮೇಲೆ। ಬೀಳುವಂದದಿ ಮಾಡು ಹರನೆ॥1॥ ನಿನ್ನ ನಾಮ ಸವಿಯೆ ಸವಿಯು। ನಿನ್ನ ಲೀಲೆ ಅನಂತ ಅನಂತ। ನಿನ್ನ ಕರುಣೆ ಕಡಲ ರೀತಿಯು। ನಿನ್ನ ರೂಪ ಚಂದವೊ ಚಂದ॥2॥ ಉಮಾಕಾಂತ ಕೈಲಾಸನಾಥ। ದಿವ್ಯತೇಜ ಸೂರ್ಯಪ್ರಕಾಶ। ಬಿಲ್ವಪ್ರಿಯ ಚಂದ್ರಶೇಖರ। ಚೈತನ್ಯದಾಸ ನಿನ್ನಯ ದಾಸ॥3॥

ಶರಣು ವಿರೂಪಾಕ್ಷ ಶಶಿಶೇಖರ

ಶರಣು ವಿರೂಪಾಕ್ಷ ಶಶಿಶೇಖರ। ಪಂಪಾವತಿ ಪ್ರಣಯ ಪರಮೇಶ್ವರ॥ಪ॥ ಸಾರಂಗ ಭೃಂಗಾ ವಿಹಗಾದಿ ಕಾಂತಾರ। ತುಂಗಭದ್ರಾ ತೀರ್ಥಕ್ಷೇತ್ರವಿಹಾರ। ಸಂಗೀತ ಸಾಹಿತ್ಯ ರತ್ನಾಕರ। ಶೃಂಗಾರ ರಸನಾಟ್ಯ ನಟಶೇಖರ॥1॥ ಓಂಕಾರ ನಾದಮಯ

ಮಧುರಾಕ್ಷರ। ಝೇಂಕಾರ ಗಾನಪ್ರಿಯ ಗಂಗಾಧರ। ಧರ್ಮಾದಾ ಸಾರ ದಯಾಸಾಗರ। ಧರೆಯೊಳಗೆ ದೊರೆನೀನು ಕರುಣಾಕರ।।2।।

ಶರಣು ಶಂಕರ ಶಂಭೋ

ಶರಣು ಶಂಕರ ಶಂಭೋ ಓಂಕಾರ ರೂಪಾ। ಮೊರೆಯ ನೀ ಆಲಿಸಿ। ಪಾಲಿಸು ಸರ್ವೇಶಾ। ಶಿವಪ್ಪ ಕಾಯೊ ತಂದೆ ಮೂರು ಲೋಕ ಸ್ವಾಮಿ ದೇವ। ಹಸಿವೆಯನ್ನು ತಾಳಲಾರೆ ಕಾಪಾಡೆಯಾ ಹರನೇ।।ಪ।। ಭಕ್ತಿಯಂತೆ ಪೂಜೆಯಂತೆ ಒಂದೂ ಅರಿಯೆನಾ। ಪಾಪವಂತೆ ಪುಣ್ಯವಂತೆ ಕಾಣೆನಯ್ಯನಾ। ಹರನೇ।।1।। ಶುದ್ಧನಾಗಿ ಪೂಜೆಗೈಯ್ಯೆ ಒಲಮೆಯಂತೆ ನೀ। ಶುದ್ಧವೋ ಅಶುದ್ಧವೋ ನಾಕಾಣೆ ದೇವನೆ। ನಾದವಂತೆ ವೇದವಂತೆ ಒಂದು ತಿಳಿಯೆನಾ। ಬೆಂದ ಜೀವ ನೊಂದು ಕೂಗೇ ಬಂದು ನೋಡೆಯಾ। ಹರನೇ।।2।। ಏಕಚಿತ್ತದಿ ನಂಬಿದವರ ನೀ ಸಾಕಿಸಲಹುವೆಯಂತಪ್ಪಾ। ಶೋಕವ ಹರಿಸುವದೇವ ನೀನಾದೊಡೆ ಬೇಟೆಯ ತೋರೋ ಎನ್ನಪ್ಪಾ। ಲೋಕವನಾಳುವ ನೀನಪ್ಪಾ। ಬೇಟೆಯ ತೋರೋ ಎನ್ನಪ್ಪ।।3।।

ಶರಣು ಶರಣು ಗುರು ಶಂಕರಾ

ಶರಣು ಶರಣು ಗುರು ಶಂಕರಾ। ಶರಣು ಶರಣು ಶಿವ ಶಂಕರಾ।। ದೀನದಯಾಕರ ಶಂಕರ। ದೀನ ಜನಪ್ರಿಯ ಶಂಕರಾ।। ದೇವ ದೇವ ಜಗದೀಶ ಮಹೇಶ್ವರ। ಜಗದ್ಗುರು ಶಿವಶಂಕರ ಜಗದ್ಗುರು ಶಿವಶಂಕರಾ।।1।। ಅಗಣಿತ ಗುಣ ಗಣಶಂಕರಾ। ಅಕಳಂಕ ರೂಪ ಶಂಕರಾ। ಆಸ್ತಿಕ ಜನಪ್ರಿಯ ಶಂಕರಾ। ಆತ್ಮೋದ್ಧಾರಕ ಶಂಕರಾ ದೇವ।।2।। ಇಹಪರ ಗುರು ಶಿವ ಶಂಕರಾ। ಇಂದು ಕಳಾಧರ ಶಂಕರಾ। ಈಶ ಮಹೇಶ್ವರ ಶಂಕರಾ। ಉಗ್ರ ತಪೋನಿಧಿ ಶಂಕರಾ।।ದೇವ।।3।। ಉದಾರ ಗುಣ ಶಿವ ಶಂಕರಾ। ಊರ್ಜಿತ ಪ್ರಸನ್ನ ಶಂಕರಾ। ಋಗ್ವೇದ ಪ್ರಿಯ ಶಂಕರಾ। ಏಕಾಂತ ಪ್ರಿಯ ಶಂಕರಾ।।ದೇವಾ।।4।। ಐಶ್ವರ್ಯ ವರ್ಜಿತಶಂಕರಾ। ಓಂಕಾರ ಪ್ರಿಯ ಶಂಕರಾ। ಔಪಾಸನ ಪ್ರಿಯ ಶಂಕರಾ। ಅಂಬಾ ಅರ್ಚಿತ ಶಂಕರಾ।।ದೇವಾ।।5।। ಅಹಂ ವಿ ವರ್ಜಿತ ಶಂಕರಾ। ದೇವಿ ಶಾರದ ದಾಸಿ ವಂದಿತ। ದೇವ ದೇವ ಜಗದೀಶ ಮಹೇಶ್ವರ। ಜಗದ್ಗುರು ಶಿವ ಶಂಕರಾ।।ದೇವಾ।।6।।

ಶರಣೆಂಬೆ ಗುರುವಿಗೆ ಶರಣೆಂಬೆ ಶಿವನಿಗೆ — ರಾಗ: ಮೋಹನ

ಶರಣೆಂಬೆ ಗುರುವಿಗೆ ಶರಣೆಂಬೆ ಶಿವನಿಗೆ।। ಶರಣೆಂಬೆ ಶಿವನ ಮಡದಿಗೆ ಗೌರಮ್ಮಗೆ ಶರಣೆಂದು ಕಲ್ಲ ಹಿಡಿದೇವು।।ಪ।। ಎದ್ದೊಂದು ಘಳಿಗೇಲಿ ಯಾರ್‍ಯಾರ ನೆನೆಯಾಲಿ। ಎಳ್ಳು ಜೀರಿಗೆ ಬೆಳೆಯೋಳ ಭೂಮಿತಾಯ। ಎದ್ದೊಂದು ಘಳಿಗೆ ನೆನೆದೇವ।।1।। ಕಲ್ಲವ್ವ ನನತಾಯಿ ಮೆಲ್ಲವ್ವ ರಾಗೀಯ। ಜಲ್ಲು ಜಲ್ಲನೆ ಉದುರವ್ವ ನಾ ನಿನಗೆ ಬೆಲ್ಲಾದಾರತಿಯ ಬೆಳಗೇನ।।2।। ಕಲ್ಲು ಕೊಟ್ಟವ್ವಗೆ ಎಲ್ಲಾ ಭಾಗ್ಯವು ಬರಲಿ। ಪಲ್ಲಕ್ಕಿ ಮ್ಯಾಲೆ ಮಗ ಬರಲಿ ಆ ಮನೆಗೆ ಮಲ್ಲಿಗೆ ಮುಡಿಯೋ ಸೊಸೆ ಬರಲಿ।।3।। ತಾಯಿದ್ರೆ ತವರ್‍ಹೆಚ್ಚು। ತಂದಿದ್ರೆ ಬಳಗ್ಹೆಚ್ಚು। ಸಾವಿರಕೆ ಹೆಚ್ಚು ಪತಿಪುರುಷ ಹೊಟ್ಟೀಯ। ಮಾಣಿಕದ ಹರಳು ಮಗಹೆಚ್ಚು।।4।। ಅತ್ತೀಗೆ ಹಡೆಯಾಲಿ ಹತ್ತೆಮ್ಮೆ ಕರೆಯಾಲಿ। ಹಿತ್ತೀಲ ಬಾಳೆ ಚಿಗುರಾಲಿ ಅತ್ತ್ಯೆಂದು ಅತ್ತೀಗೆ ಮಗಳು ಕರೆಯಾಲಿ।।5।। ಕಲ್ಲು ಬಿಟ್ಟೇನೆಂದು ಸಿಟ್ಯಾಕೆ ಸರಸತಿಯೆ। ಕುಕ್ಕೇಲಿ ರಾಗಿ ಬೆಳೆಯಾಲಿ ತಕ್ಕೊಂಡು ಮತ್ತೆ ರಾತ್ರೀಗೇ ಬರುತೇನೆ।।6।।

ಶರಣು ಭಾರತಿದೇವಿಗೆ

ಶರಣು ಭಾರತಿದೇವಿಗೆ ಶರಣು ವಾಯುರಮಣಿಗೆ।।ಪ।। ಶರಣು ಶರಣರ ಪೊರೆವ ಕರುಣಿಗೆ। ಶರಣು ಸುರವರದೇವಿಗೆ।।ಅ.ಪ।। ಸುರರು ಮೊದಲಾದವರಿಗೆಲ್ಲ। ಪರಮ ಮಂಗಳ ವೀವಳೆ। ಚರಣಕಮಲಕೆ ಮರೆಯ ಹೊಕ್ಕೆನು। ಕರುಣಿಸೆನಗೆ ಸುಮತಿಗಳ।।1।। ಪಿಂಗಳರೂಪಳೆ ಮಂಗಳಮಹಿಮಳೆ। ಹಿಂಗದೆ ಕೊಡು ಹರಿಭಕುತಿಯ।। ರಂಗನಾಥ ಪದಾಬ್ಜಭೃಂಗಳೆ। ಅಂತರಂಗದ ಪ್ರೀಯಳೆ।।2।। ಪಕ್ಷಿವಾಹನ ಲಕ್ಷ್ಮೀರಮಣನ। ದಕ್ಷ ಪುರಂದರವಿಠ್ಠಲನೆ। ಅಕ್ಷಯದಿಂದಲಿ ಭಜಿಸುವಳೆ। ರಕ್ಷಿಸೆನ್ನನು ಅನುದಿನ।।3।।

ಶರಣ ಜನರನೆಲ್ಲ ಪೊರೆವ ಭಾರತೀ

ಶರಣ ಜನರನೆಲ್ಲ ಪೊರೆವ ಭಾರತೀ ನಿನ್ನ ಚರಣಕೆ ಕೈಮುಗಿವೆ॥ಪ॥ ಕರೆಕರೆಗೊಳಿಸುವ ಕಠಿಣ ಭವವನೆಲ್ಲ ಪರಿಹಾರಮಾಡಬೇಕು। ಪರಾಕು॥ಅ.ಪ॥ ತುತಿಸಬಲ್ಲನೆ ನಿನ್ನ ಸುತನ ಬಿನ್ನಪವನ್ನು। ಅತಿಶಯದೇ ಕೇಳಬೇಕು ಈ ವಾಕು॥ ಮತಿವಂತ ಜನರನ್ನು ಮಾನವಗೊಳಿಸುವಂಥ। ಚಿತವಾದ ಭಾಗ್ಯಯೀವೆ। ನೀತಾಯಿ॥1॥ ಕಾಮಾದಿಗಳನೆಲ್ಲ ನೇಮದಿ ಗೆಲುವಂಥ। ಪ್ರೇಮಕವಚ ತೊಡಿಸಿ ಉದ್ಧರಿಸೇ॥ ಹೇಮಕಾಮಿನಿಭೂಮಿ ಹೇಯವೆಂದೆನಿಸೆನ್ನ। ಸೋಮಶೇಕರ ಜನನಿ ಸುಜ್ಞಾನಿ॥2॥ ಮಾತೆಯನ್ನಯ ಒಂದು ಮಾತು ಲಾಲಿಸುವುದು ವಾತನ ನಿಜದಯತೆ ಪ್ರಖ್ಯಾತೆ॥ ದಾತ ಶ್ರೀವರದಗೋಪಾಲವಿಠಲನ್ನ। ಆತುಮದೊಳು ನಿಲಿಸೇ ಸುಮನಸೇ॥3॥

ಶರಣು ಶ್ರೀ ಮಾರುತನ ರಾಣಿಯೆ — ರಾಗ: ಭೈರವಿ

ಶರಣು ಶ್ರೀ ಮಾರುತನ ರಾಣಿಯೆ। ಶರಣುಮಂಗಳ ಶ್ರೋಣಿಯೇ। ಶರಣು ಸ್ಥಿತಮುಖ ಉರಗ ವೇಣಿಯೇ। ಶರಣರ ಸರಸಿಜ ವಾಣಿಯೇ॥ಪ॥ ಇಂದ್ರಸೇನೆ ಪುರಂದರಾರ್ಚಿತೆ। ಇಂದಿರಾಪತಿ ಕೃಷ್ಣನಾ। ನಂದದಲಿ ಸೇವಿಸುವ ಭಕುತಿಯ। ಇಂದುಧರನಿಗೆ ಕೊಡುವಳೇ॥1॥ ಗರುಡ ನುತ ಪದ ಸರಸಿರುಹೆ ವೃಕೋ ದರನ ಪ್ರೀತಿಗೆ ಯೋಗ್ಯಳೇ। ತರುಣಿ ಶಿರೋಮಣಿ ದುರ್ಮತಿಯ ಕಳೆದು। ಕರುಣದಲಿಕರ ಪಿಡಿವುದೇ॥2॥ ವಿದ್ಯುನ್ನಾಮಕ ಧಾತಜಾತಳೆ। ಶ್ರದ್ಧೆದಾತೆ ನಿರಂತರ। ತಿದ್ದಿಯನ್ನಯ ವಕ್ರಮತಿಯ ದ್ರುಹಿಣವಿದ್ಯೆ ಪಾಲಿಸೆ ಭಾರತೀ॥3॥ ಕಾಳಿ ದ್ರೌಪದಿ ಸ್ಥಾಣು ಕನ್ಯಾ। ಶೈಲಜಾದಿ ನಮಸ್ಕೃತೇ। ಕಾಲಿಗೆರಗುವೆ ಯೆನ್ನ ಬಿನ್ನಪ। ಕೇಳಿ ಜ್ಞಾನವ ಪ್ರೇರಿಸೆ॥4॥ ಗಜಮುಖನೆ ನಳನಂದಿನಿ ಅನಘೆ। ಸುಜನ ಹೃದಯ ನಿಕೇತನೆ। ತ್ರಿಜಗಪತಿ ಪ್ರಾಣೇಶ ವಿಠಲನ। ಭಜನೆಯೊಳು ಮನ ನಿಲ್ಲಿಸೇ॥5॥

ಶರಣು ಶರಣು ಶಾರದಾಂಬಾ — ರಾಗ: ಕಾನಡ-ಆದಿತಾಳ

ಶರಣು ಶರಣು ಶಾರದಾಂಬಾ॥ಪ॥ ಕರುಣಾರಸಕಲಿತಾನಬಿಂಬಾ॥ಅ.ಪ.॥ ಜಲದಾಲಕ ನಿರ್ಜಿತ ರೋಲಂಬಾ। ಸುಲಲಿತಾಯತ ಪುಳಿನ ನಿತಂಬಾ॥1॥ಜಲಜಭವೇಪ್ಸಿತ ಸದಾದರ ಬಿಂಬಾ। ವಿಲಸಿತ ಮಣಿಗನ ಹಾರಕದಂಬಾ॥2॥ ಸುಮಹಿತ ಗುಣಗಣ ಭವ್ಯ ಹೇರಂಬ ಕಮಲೇಶವಿಠಲನ ಕರುಣ ಪ್ರದಾಂಬಾ॥3॥

ಶರಣಂ ವಿಜಯ ಸರಸ್ವತಿ ಮಾಯೆ — ರಾಗ: ವಿಜಯಸರಸ್ವತಿ-ಆದಿತಾಳ

ಶರಣಂ ವಿಜಯ ಸರಸ್ವತಿ ಮಾಯೆ ಸರ್ವಭೂತದಯಪರಿಬ್ರಹ್ಮ ಜಾಯಾ॥ಪ॥ ನಿರವಧಿ ಸುಖದಾಯಕಿ ನೀರಜಾಕ್ಷಿ ಸರಸೀರುಹಾಕ್ಷಿ ಸರ್ವಸಾಕ್ಷಿ॥ಅ.ಪ॥ ಚರಾಚರಾದಿ ಸರ್ವವಸ್ತು ವ್ಯಾಪಿ ಸರ್ವಯಂತ್ರ ಮಂತ್ರ ತಂತ್ರ ಸ್ವರೂಪಿ ವರಲಕ್ಷ್ಮಿ ಸಖೀ ವಾಗೀಶ್ವರಿ ಹರಿಕೇಶದಾಸ ಅಲಂಕಾರಿ ರಾಣಿ॥ಚ॥

ಶರಣೆಂಬೆ ವಾಣಿ ಪೊರೆಯೆ ಕಲ್ಯಾಣಿ — ರಾಗ: ನಾಟ-ಆದಿತಾಳ

ಶರಣೆಂಬೆ ವಾಣಿ ಪೊರೆಯೆ ಕಲ್ಯಾಣಿ॥ಪ॥ ವಾಗಭಿಮಾನಿ ವರ ಬ್ರಹ್ಮಾಣಿ। ಸುಂದರವೇಣಿ ಸುಚರಿತ್ರಾಣಿ॥ಅ.ಪ॥ ಜಗದೊಳು ನಿಮ್ಮ ಪೊಗಳುವೆನಮ್ಮ। ಹರಿಯ ತೋರಿಸೆಂದು ಪ್ರಾರ್ಥಿಪೆನಮ್ಮ ॥1॥ ಪಾಡುವೆ ಶೃತಿಯ ಬೇಡುವೆ ಮತಿಯ। ಪುರಂದರವಿಠಲನ ಸೋದರಸೊಸೆಯ॥2॥

ಶರಣು ಶರಣು ದಶರಥರಾಮದೂತಗೆ — ರಾಗ: ನಾಟ-ಝಂಪೆತಾಳ

ಶರಣು ಶರಣು ದಶರಥರಾಮದೂತಗೆ॥ಪ॥ ಶರಣು ಕುರುಕುಲಾಧೀಶಗೆ। ಶರಣು ವೈಷ್ಣವ ಮತ ವಿಲಾಸಗೆ। ಶರಣು ಮುಖ್ಯಪ್ರಾಣಗೆ॥ಅ.ಪ.॥ ವಾರಿಧಿಯನು ವೇಗದಿ ದಾಟಿ ವನವ ಕಿತ್ತಿದಾತಗೆ। ಮೇರೆಯಿಲ್ಲದೆ ಅಸುರರ ಸಂಹರಿಸಿದ ರಣಶೂರಗೆ। ವಾರಿಜಾಕ್ಷಿ ಸೀತಾದೇವಿಗೆ ವರದ ಮುದ್ರಿಕೆಯನಿತ್ತಗೆ। ಧೀರತನದಲಿ ಅಕ್ಷಕುಮಾರನ ಪ್ರಾಣವನು

ಕೊಂಡಗೆ॥1॥ ರಾಜಸೂಯವ ರಚಿಸಬೇಕೆಂದು ರಾಜರ ಸೀಳಿದಾತಗೆ। ರಾಜಮುಖಿಯಳ ರಕ್ಷಿಸಿ ಮೃಗರಾಜಗೆ ಒಲಿದಾತಗೆ। ತ್ರಿಜಗ ವಂದಿತ ದೇವಗೆ ಸಜ್ಜನ ಪ್ರಿಯ ಎನಿಪಗೆ। ರಾಜಧರ್ಮಗೆ ಅನುಜನಾದಗೆ ರಾಜಪೂಜಿತ ರಾಜಗೆ॥2॥ ಧಾರಿಣಿಯೊಳು ದುರ್ವಾದಿ ದೈತ್ಯರ ಗಂಟಲಗಾಳವಾದಗೆ। ಮೂರೇಳು ಮತವನೆಲ್ಲ ಮುರಿದ ಧೀರ ಮಧ್ವರಾಯಗೆ। ಸಾರ ತತ್ವಗಳನೆಲ್ಲ ಶೋಧಿಸಿ ಸೂರೆ ಮಾಡಿದಾತಗೆ। ಊರ್ವಿಯೊಳು ವರ ದೇವತಾದಿಕೇಶವ ದೊರೆ ದಾಸಗೆ॥3॥

ಶರಣು ಶರಣು ಮಹಾಂಜನೇಯನೆ **ರಾಗ: ಹಿಂದೋಳ**

ಶರಣು ಶರಣು ಮಹಾಂಜನೇಯನೆ। ಶರಣು ಸುರಮುನಿ ಗೇಯನೆ। ಶರಣು ನಿರುಪಮ ಭಾಗದೇಯನೆ। ಶರಣು ಶುಭ ಸಮುದಾಯನೆ॥1॥ ರಾಮ ಕಾರ್ಯಾಂಭೋಜ ಮಿತ್ರನೆ। ರಮಣೀಯ ಚರಿತ್ರನೆ। ಹೇಮಕುಧರಸ ಮಾನಗಾತ್ರನೆ। ಸ್ವಾಮಿ ಮಾರುತ ಪುತ್ರನೆ॥2॥ ವನಧಿಯನು ಲಂಘಿಸಿದ ಧೀರನೆ। ಧನುಜ ನಗರ ವಿಹಾರನೆ। ಜನಕಜಾಶೋಕಾಪಹಾರನೆ। ವಿನುತ ಪ್ಲವಗಾಕಾರನೆ॥3॥ ಅದ್ರಿಧರವರ ಮಂದಹಾಸನೆ। ಕ್ಷುದ್ರ ದೈತ್ಯ ವಿನಾಶನೆ। ಭದ್ರದಾಯಕ ಚಿದ್ವಿಲಾಸನೆ ಖಾದ್ರಿ ನೃಹರಿಯ ದಾಸನೆ॥4॥

ಶರಣಾಗಿ ನಮಿಸುವೆ ಭಕ್ತ ಹನುಮ **ರಾಗ: ಖರಹರಪ್ರಿಯ**

ಶರಣಾಗಿ ನಮಿಸುವೆ ಭಕ್ತ ಹನುಮ। ಶರಣರ ಪಾಲಿಪ ಧೀರ ಹನುಮ॥ಪ॥ ಸರ್ವಾಪರಾಧವ ಮನ್ನಿಸು ಹನುಮ। ಶಾರದ ದಾಸಿ ವಂದಿತ ಹನುಮ॥ಅ.ಪ.॥ ಸಜ್ಜನ ಸೇವಾ ನಿರತ ಶ್ರೀ ಹನುಮ। ಪಾವನ ಗೊಳಿಸು ಈ ಎನ್ನ ಜನುಮ। ಜಾನಕಿ ರಾಮನ ಭಂಟ ತಾ ಹನುಮ। ಇಳೆಯೊಳೆನ್ನ ನೆಂಟ ತಾ ಹನುಮ॥1॥

ಶರಣು ವಾಯುತನುಜ ಶರಣು

ಶರಣು ವಾಯುತನುಜ ಶರಣು ಭಾಸ್ಕರ ತೇಜ। ಶರಣು ರಾಜಾಧಿರಾಜ ಶರಣು ಭೋ ಸಹಜ। ಶರಣರ ಸುರಭೂಜ॥ಪ॥ ರಾಮಚಂದ್ರನ ದೂತ ಸೌಮಿತ್ರಿ ಪ್ರಾಣದಾತ। ರೋಮರೋಮಕೆ ಕೋಟಿ ಕಾಮಸಂಹಾರನೆ। ಭೂಮಂಡಲಧರನೆ ಭೀಮಸೇನ ಭೀಮರಿಪುಗಂಟಲಗಾಣ। ತಮಸಾಕಳೆ ಜ್ಞಾನವ ನೀವುದೆನಗೆ ಬಂದು ಸುಳಿ ಶ್ರೀಮದಾನಂದ ತೀರ್ಥ॥1॥ ರುಸಪುತ ಕುಜನರ ಆಧ್ಯಮುನಿಭೂಜ ಭಾಸುರ ಕೀರ್ತಹಾರ। ದೋಷನಾಶೀದೂರ ತ್ರಾಸವಿಲ್ಲದ ಮಹಿಮ ಶ್ರೀವಿಜಯವಿಠಲನಾ। ದಾಸರೊಳು ನಿನ್ನ ಲೇಶವಾದರು ಬಿಡೆ ನಾ ಸರ್ವತಾಕರೆ ತೋಷದಲ್ಲಿ ಡುವ ನಿನ್ನ॥2॥

ಶರಣು ಶರಣು ವೇದಶಾಸ್ತ್ರನಿಪುಣ ನೀಕು

ಶರಣು ಶರಣು ವೇದಶಾಸ್ತ್ರನಿಪುಣ ನೀಕು। ಅರುದ್ಯೆನ ರಾಮಕಾರ್ಯಧುರಂಧರಾ॥ ಪಹನುಮಂತ ರಾಯ ಅಂಜನಾತನಯಾ। ಘನವಾಯುಸುತ ದಿವ್ಯ ಕಾಮರೂಪ। ಅನುಪಮ ಲಂಕಾದಹನ ವಾರ್ಧಿ ಲಂಘನ। ಜನಸುರತ ಕಲಶಾಪುರ ನಿವಾಸ॥1॥ ರವಿತನಯ ಸಬಿತ ರಾವಣ ವನಾಪಹಾರಿ। ಪವನವೇಗ ಬಲಾಢ್ಯ ಭಕ್ತಸುಲಭ। ಭುವನ ಪೂರ್ಣದೇವಾ ಬುದ್ಧಿ ವಿಶಾರದ। ಜವಸತ್ವವೇಗ ಕಲಶಾಪುರನಿವಾಸ॥2॥ ಸೀತಾಶೋಕನಾಶನ ಸಂಜೀವ ಶೈಲಾಕರ್ಷಣ। ಆತಕಪ್ರತಾಪಶೌರ್ಯ ಅಸುರಾಂತಕ। ಕೌತುಕ ಶ್ರೀವೇಂಕಟೇಶು ಕರುಣಾಸಮೇತ। ಶಾತಕುಂಭವರ್ಣ। ಕಲಶಾಪುರ ನಿವಾಸ॥3॥

ಶರಣು ಭಾರತಿರಮಣ ಶಮಲವರ್ಜಿತ

ಶರಣು ಭಾರತಿರಮಣ ಶಮಲವರ್ಜಿತ ಚರಣ। ಕೆರಗಿ ಬೇಡುವೆ ವರವ ಪಿಡಿಯೆನ್ನ ಕರವಾ॥ಪ॥ ಇಪ್ಪತ್ತೊಂದು ಸಾವಿರದಾರುನೂರು ಜಪ। ತಪ್ಪದಲೆ ಸಕಲ ಜೀವರೊಳು ಜಪಿಸಿ। ಮುಪ್ಪಿಲ್ಲದ ಜನ ಪದವಿಯನ್ನೈದಿ ಭಜಕರಿಗೆ। ಸುಪ್ತಿ

ಸ್ವಪ್ನವ ಬಿಡಿಸಿ ಮುಕ್ತರನು ಮಾಳ್ಪೆ॥1॥ ಪವಮಾನರಾಯ ನೀ ಸಲಹದಿರೆ ಪಾಲಿಸುವ। ದಿವಿಜನರಿನ್ನುಂಟೇನೋ ಲೋಕದೊಳಗೆ। ಯವನರಿಂದಲಿ ಬಂದ ಭಯವ ಪರಿಹರಿಸಿ ನಿ। ನ್ನವರ ಸಂತೈಸು ಸರ್ವಕಾಲದೀ॥2॥ ಲೋಗರಿಗೆ ಬೇಡಿದಿಷ್ಟಾರ್ಥಗಳ ಕೊಟ್ಟ ಚ। ನ್ನಾಗಿ ಸಂತೈಪೆನೆಂದನುದಿನದಲೀ। ಭೋಗಪುರದಲಿ ಬಂದು ನೆಲೆಸಿದೆಯೆ ನೀ ಪರಮ। ಭಾಗವತ ತಿಲಕ ಪಾಲಕ ವೀತಶೋಕ॥3॥ ಭಾನುನಂದನಗೆ ನೀ ಒಲಿದ ಮಾತ್ರದಲಿ ರಘು। ಸೂನು ಸಂರಕ್ಷಿಸಿದ ಸುರಪತನಯಾ। ವಾನರೋತ್ತಮ ವಾಲಿಯನು ಸದದೆ ನಿನ್ನ ದಯ। ಕೇನೆಂಬೆ ಕಮಲ ಸಂಭವನ ಪದಕೆ ಯೋಗ್ಯ॥4॥ ಶುಚಿನಾಮಕನೆ ಎನಗೆ ಹರಿಕಥಾ ಶ್ರವಣದಲಿ। ರುಚಿಪುಟ್ಟುವಂತೆ ಮಾಡನುಗಾಲದೀ। ಮುಚುಕುಂದ ವರದ ಜಗನ್ನಾಥವಿಠಲನ ಗುಣ। ರಚನೆಗೈವ ಸಮರ್ಥ ನೀನೇ ಸುಕೃತಾರ್ಥ॥5॥

ಶರಣು ನಿನ್ನ ಚರಣಗಳಿಗೆ ಭಾರತೀಶನೆ — ರಾಗ: ಸುರಟಿ

ಶರಣು ನಿನ್ನ ಚರಣಗಳಿಗೆ ಭಾರತೀಶನೆ। ಕರವಪಿಡಿದು ಸಲಹೋ ಬಿಡದೆ ಭಾರತೀಶನೇ॥ಪ॥ ಎಲ್ಲ ಕಡೆಗೆ ವ್ಯಾಪ್ತ ನೀನೇ ಭಾರತೀಶನೆ। ಅಲ್ಲಿ ವಿಷವ ಕುಡಿದೆಯೆಂದು ಗೆಲ್ಲಿಸಿದೆಯೋ ಎಲ್ಲಾ ಸುರರ ಬಲ್ಲಿದ ನಿನಗೆಣೆಯಾರೋ ಭಾರತೀಶನೇ॥ಅ.ಪ॥ ಅಂಜನಾಕುಮಾರನಾಗಿ। ಕಂಜನಾಭ ನಂಘ್ರೀ ಭಜಿಸೆ। ಅಂಜದುಧದಿ ದಾಟಿಪೋದಿ ಭಾರತೀಶನೆ। ಪೊಂದಿ ಜಠರದಿಂದ ಬಂದೆ। ಕುಂತಿ ಜಠರದಿಂದ ಬಂದ್ಯೋ ಹಂತ ಕೌರವರ ಕೊಂದಿ ಭಾರತೀಶನೆ॥1॥ ಯತಿರೂಪ ಧರೆ ಇಳೆಯೊಳಗೆ। ಮತಿಯ ಸರ್ವಬುಧರಿಗಿತ್ತೆ। ಸತತ ನಿನ್ನ ಪೂಜಿಪರಿಗೆ। ಗತಿಯ ಕೊಡುವ ದೋಷಕಳೆದು। ಮುನ್ನ ಪ್ರಾಣೇಶ ವಿಠಲನಾಣೆ ಬಿನ್ನಪವನು ಲಾಲಿಸುವುದು ನಿನ್ನ ದಾಸನೆನಿಸಬೇಕೂ... ಅನ್ಯ ವಿಷಯ ಒಂದನೊಲ್ಲೆ॥2॥

ಶರಣೆಂಬೆ ಶರಣೆಂಬೆ ಶ್ರೀಮಹಾಲಕ್ಷ್ಮೀ

ಶರಣೆಂಬೆ ಶರಣೆಂಬೆ ಶ್ರೀ ಮಹಾಲಕ್ಷ್ಮೀ। ಶ್ರೀ ಗೊರವನಳ್ಳಿಯ ಶ್ರೀ ಮಹಾಲಕ್ಷ್ಮಿ॥ಪ॥ ಶ್ರೀ ಲಕ್ಷ್ಮಿ ಜಯಲಕ್ಷ್ಮಿ ಧನಲಕ್ಷ್ಮಿ ವರಲಕ್ಷ್ಮಿ। ಶ್ರೀ ಧಾನ್ಯಲಕ್ಷ್ಮಿ ಶರಣು॥ಅ.ಪ.॥ ಗಜಲಕ್ಷ್ಮಿ ಶುಭಲಕ್ಷ್ಮಿ ಶ್ರೀಗೊರವಪುರಲಕ್ಷ್ಮಿ। ಶರಣಮ್ಮ ಶರಣು ಶರಣು॥ ಶ್ರೀಹರಿಯ ಮೋಹಿನಿ ಶ್ರೀಚಿದ್ವಿಲಾಸಿನಿ ಐಶ್ವರ್ಯ ಸಂದಾಯಿನಿ। ಶ್ರೀಕಮಲ ವಾಸಿನಿ ಶ್ರೀಕಮಲ ಲೋಚನಿ ಸಂತಾಪ ಸಂಹಾರಿಣಿ॥ ಕಡಲಲ್ಲಿ ಹುಟ್ಟಿದ ಸಿರಿ ಒಡತಿ ಕಷ್ಟಗಳ ಕಡಲನ್ನು ನೀ ದಾಟಿಸು। ಕಮಲದಲ್ಲಿ ನೆಲೆಸಿದ ಮಾತೆಯೆ ನನ್ನೆದೆಯ ಕಮಲದಲಿ ನೀ ಶೋಭಿಸು॥ ಚಂದಿರನ ಸೋದರಿ ಈ ಮನದ ತಾಪವ ನಂದಿಸುತ ಹಿತನೀಡು ಬಾ। ಕಿರುನಗೆಯ ಬೀರುತ ನಮ್ಮ ಈ ಜೀವನದ ಹೊರೆಯನ್ನು ನೀ ಇಳಿಸು ಬಾ॥ ಶರಣು ಶರಣು ಶರಣು ದೇವಿ ಶರಣು ಶರಣು ಶರಣು। ಜಯಮಂಗಲಾ ನದಿಯ ಲಜದಿಂದ ಅಭಿಷೇಕ ಪಡೆಯುವಾ ಶ್ರೀಲಕ್ಷ್ಮಿಯೇ। ಜಯವನ್ನು ನೀಡುತಾ ಶುಭವನ್ನು ನೀಡುತಾ ನಮ್ಮನ್ನು ಹರಸು ತಾಯೇ॥ ಹರಕೆಯನ್ನು ಸಲ್ಲಿಸಿ ಚರಣಕ್ಕೆ ವಂದಿಸಿ ನಿಂತಿರುವೆ ನಿನ್ನ ಮುಂದೆ। ನೀ ನಲಿವ ಮನೆಯಲ್ಲಿ ನೋವಿಲ್ಲವೆನ್ನುತ ನಾ ನಿನ್ನ ನಂಬಿ ಬಂದೆ। ಹಲವಾರು ಜನುಮಾದ ಪುಣ್ಯದ ಫಲವಾಗಿ ನಾ ಪಡೆದೆ ನಿನ್ನ ದರುಶನ। ನಿನ್ನನ್ನು ಪೂಜಿಸುವೆ ನಿನ್ನನ್ನೇ ಧ್ಯಾನಿಸುವೆ ನೀಡೆನಗೆ ಶುಭ ಜೀವನ॥ ಗುಣವೆಂಬ ಸಿರಿಯನ್ನು ಕುಲವೆಂಬ ಸಿರಿಯನ್ನು ನೀಡಿ ಪಾಲಿಸು ನನ್ನನ್ನು॥ ದಯೆ ಎಂಬ ಸಿರಿಯನ್ನು ದಾನದ ಸಿರಿಯನ್ನು ನೀಡು ನಂಬಿದೆ ನಿನ್ನನ್ನು। ಶರಣು ಶರಣು ಶರಣು ಶರಣು ದೇವಿ ಶರಣು ಶರಣು ಶರಣು॥ ಧನವೆಂಬ ಮದವನ್ನು ಗುಣವೆಂಬ ಮದವನ್ನು ನೀ ನೀಡಬೇಡ ತಾಯೆ॥ ಮಮತೆಯ ನಿಧಿಯನ್ನು ಸಮತೆಯ ನಿಧಿಯನ್ನು ನೀ ನೀಡಿ ಹರಸು ತಾಯೆ॥ ಅತಿಯಾದ ಆಸೆಯಲಿ ನಾನಿನ್ನ ಬಳಿ ಇಂದು ಬರಲಿಲ್ಲವಮ್ಮಾ ನಾನು। ಮಿತಿಯಾದ ಕಾಮಿತವ ನೀಡಿ ಸಲಹೆನ್ನುತಾ ಬೇಡಿದೆ ನಾನಿನ್ನನ್ನು॥ ಕರುನಾಡನು ನೀನು ತಿಳಿಹಾಡ ಹಾಡಲೆನೆ ವೈಕುಂಠ ತೊರೆದು ಬಂದೆ। ಶ್ರೀ ಗೊರವನ್ಹಳ್ಳಿಯಲಿ ನೀ ನೆಲೆಸುತಾ ಜನರ ಪೊರೆಯುತಾ ನೀನು ನಿಂದೆ॥ ಅವರವರ ಭಕುತಿಗೆ ಅವರವರ ಭಾವಕ್ಕೆ ಸಮನಾದ ಶುಭವ ತರುವೆ। ಈ ನನ್ನ ಭಕ್ತಿಯಲಿ ಲೋಪವಿದ್ದರು ನೀನುಕಡೆಗಣಿಸಿ ಸಲಹೆಂಬೆ॥ ಶರಣು ಶರಣು ಶರಣು ಲಕ್ಷ್ಮಿ ಶರಣು ಶರಣು ಶರಣು॥

ಶರಣು ಮಹಾಲಕ್ಷ್ಮೀ ಶರಣು ವರಮಹಾಲಕ್ಷ್ಮೀ

ಶರಣು ಮಹಾಲಕ್ಷ್ಮೀ ಶರಣು ವರಮಹಾಲಕ್ಷ್ಮೀ।।ಪ।। ನಿನ್ನ ಪಾದ ಕಮಲದೊಳು ನಾ ಬಂದು ಬೇಡುವೆನು। ನಿನ್ನ ಬೇಡಿಕೊಂಬೆ ಎನ್ನ ನೀ ಕಾಯ ಬೇಕಮ್ಮ। ಕಮಲದ ಹೂವಿನ ನನ್ನ ಮನಸ್ಸಿನಲ್ಲಿ ನೀ ನೆಲಸಬೇಕಮ್ಮ। ಎನ್ನ ಕಣ್ಣೀರು ನಿನ್ನ ಪಾದ ಸೋಕುವುದು ಎನ್ನ ನೀ ಕಾಯಬೇಕಮ್ಮ।।1।। ಅಷ್ಟಸಿದ್ಧಿಯನ್ನುತೋರುತ್ತಾ ಬಾರೇ ಅಷ್ಟ ಲಕ್ಷ್ಮೀ ನೀನು। ಭಾಗ್ಯವನ್ನು ನೀಡುತ್ತಾ ಬಾರೇ ಭಾಗ್ಯಲಕ್ಷ್ಮೀ ನೀನು। ಸಂತಸವನ್ನು ಕರುಣಿಸುತ್ತಾ ಬಾರೇ ಸಂತಾನ ಲಕ್ಷ್ಮೀ ನೀನು ವರಗಳ ಸರಮಾಲೆ ನೀಡುತ್ತಾ ಬಾರೇ ವರಮಹಾಲಕ್ಷ್ಮಿ।।2।। ತುಪ್ಪದ ದೀಪವನ್ನು ನಿನಗೆ ಬೆಳಗುವೆನು। ಎನ್ನ ಬಾಳನ್ನು ಬೆಳಗಿಸುತ್ತಾ ಬಾರಮ್ಮ। ನಿನ್ನ ಕುರುಣೆಯ ಸಾರ ನನಗೆ ಇರಲಮ್ಮ। ನೀ ಎಂದು ನನ್ನ ಭಕ್ತಿಗೆ ದಯವನ್ನು ನೀಡಮ್ಮ।।3।।

ಶರಣು ವೇಂಕಟರಮಣ ನಿನ್ನ ಚರಣವ

ಶರಣು ವೇಂಕಟರಮಣ ನಿನ್ನ। ಚರಣವ ನಂಬಿದೆ ನಾನು।।ಪ।। ಕರುಣಾಸಾಗರ ಕಾಮಿತಫಲವೀವ।। ಶರಣ ಭಕ್ತರ ಕಾವ ಗರುಡವಾಹನ ದೇವ।।ಅ।। ಭಕ್ತವತ್ಸಲ ಹರಿಯೇ ನಮ್ಮ। ಭವದುರಿತಪರಿಹಾರನೇ। ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ। ಶರಣ ಭಕ್ತರ ಕಾವ ಸುರಮುನಿಗಳ ದೇವ।।1।। ಪಾಪವಿನಾಶಿನಿ ತೀರ್ಥ। ನಮ್ಮ ಪಾತಕವ ಪರಿಹರನೆ। ಶ್ರೀವೇಂಕಟಗಿರಿ। ಶ್ರೀನಿವಾಸ ಕೋನೇರಿತೀರ್ಥಾದಿವಾಸ ನಿವಾಸ।।2।। ದೇಶಕಧಿಕವಾದ। ನಮ್ಮ ಶೇಷಗಿರಿಯಲ್ಲಿ ವಾಸ।। ಶ್ರೀ ವೆಂಕಟಗಿರಿ ತಿರುಮಲೇಶ। ದಾಸದಾಸರ ಸಲಹುವ ಪುರಂದರವಿಠಲ।।3।।

ಶರಣು ಶೇಷಾಚಲನಿವಾಸಗೆ

ಶರಣು ಶೇಷಾಚಲನಿವಾಸಗೆ। ಶರಣು ವರಹ ತಿಮ್ಮಪ್ಪಗೆ। ಶರಣು ಅಲಮೇಲು ಮಂಗರಮಣಗೆ। ಶರಣು ತಿರುವೆಂಗಟೇಶಗೆ।।ಪ।। ಧರಣೆಧರಗೋವಿಂದ ಮಾಧವ। ನರಹರಿ ಮಧುಸೂದನಾ। ಮುರಹರ ಮುಕುಂದ ಅಚ್ಚುತ। ಗಿರಿಜನುತ ನಾರಾಯಣ।।1।। ಕ್ಷೀರ ವಾರಿಧಿಶಯನ ವಾಮನ। ಮಾರ ಜನಕ ಗೋಪಿ ಜನ। ಜಾರ ನವನೀತ। ಚೋರ ರಿಪು ಸಂಹಾರ ಹರಿ ದಾಮೋದರ।।2।। ಗರುಡಗಮನನೆ ಗರಳ ತಲ್ಪನೆ। ಕರುಣಾಳುಗಳ ಒಡೆಯನೆ। ಉರಗ ಗಿರಿ ಸಿರಿ ವಿಜಯವಿಠ್ಠಲನ। ಚರಣ ಕಮಲಕೆ ನಮೋ ನಮೋ।।3।।

ಶರಣು ವೆಂಕಟನಾಥ ಪೊರೆ ನಿಜ ಕರುಣಿ ಖಗ

ಶರಣು ವೆಂಕಟನಾಥ ಪೊರೆ ನಿಜ। ಕರುಣಿ ಖಗ ವರೂಥ।।ಪ।। ನತಜನ ಕೃತ ಕರುಣಾ ದಿತಿಸುತ। ಮಥನನೆ ತವ ಚರಣಾ। ಸತತ ಎನಗಾಭರಣಾ ಎಂದೆಂಬೆನೊ। ಗತದೋಷ ಜರಾಮರಣ।।1।। ಸನಕಾದಿ ಮುನಿಮಾನ್ಯ ನಿನ್ನವ। ರನುಗನೆನಿಸೋ ಎನ್ನ। ಅನುಪಮ ಗುಣರನ್ನಾ ಬಿಡಿಸು ಕಾಂ। ಚನ ನಗಾಧಿಪ ಬನ್ನಾ।।2।। ಎನ್ನ ದೋಷಗಳೆಲ್ಲಾ ನೋಡದಿರು ಪ್ರಪನ್ನ ವತ್ಸಲ್ಲಾ। ಅನ್ನಿಗ ನಾನಲ್ಲ ಶ್ರೀಗುರು ಜ। ಗನ್ನಾಥವಿಠಲ್ಲಾ।।3।।

ಶರಣು ಶಂಕರ ಭೂಷಣಾದ್ರಿಗೆ

ಶರಣು ಶಂಕರ ಭೂಷಣಾದ್ರಿಗೆ। ಶರಣು ಅಭಯಾಚಲನಿಗೆ।।ಪ।। ಶರಣು ಖಗಮೃಗ ತರು ಲತಾಂಕಗೆ। ಶರಣುವಿಂಶತಿ ನಾಮಗೆ।।ಅ.ಪ।। ವರಹ ನೀಲಾಂಜನ ಕನಕಋಷಿ। ಗರುಡಘನ ನಾರಾಯಣಾ। ಉರಗ ತೀರ್ಥಾನಂದ ಶ್ರೀ ಪುಷ್ಕರ ವೃಷಭ ವೈಕುಂಠಗೆ।।1।। ಜ್ಞಾನ ಪರ್ವತ ಮೇರು ಶೃಂಗಗೆ। ಶ್ರೀನಿವಾಸ ಸುಕ್ರೀಡಗೆ ಪಂ। ಚಾನನಾಹ್ವಯ ವೆಂಕಟಾದ್ರಿಗೆ। ಕ್ಷೋಣಿಯೊಳು ಸುರಮಾನ್ಯಗೆ।।2।। ರತುನ ಕಾಂಚನ ಶ್ರೀನಿವಾಸನ। ಪ್ರತಿಮೆಯಂದದಿ ಪೊಳೆವಗೆ। ಕೃತಿರಮಣ ಜಗನ್ನಾಥವಿಠಲಗೆ। ಅತುಳ ಮಂಗಳ ನೆನಿಪಗೆ।।3।।

ಶರಣನಾದೆ ನಾನು ನಿನಗೆ ಕರುಣಿ ದೇವನೇ

ಶರಣನಾದೆ ನಾನು ನಿನಗೆ। ಕರುಣಿ ದೇವನೇ। ತರಳನನ್ನು ಕಾಯೋ ದಯದಿ। ಪರಮಪುರುಷನೇ।।ಪ।। ಸ್ನಾನ ದಾನ ಮೌನ ಮಂತ್ರ। ನಾನು ಅರಿಯೆನೆ। ಧ್ಯಾನ ದಾನ ತಿಳಿಯೆ ಸಲಹೊ। ಶ್ರೀನಿವಾಸನೆ।।1।। ತರಳ ಧ್ರುವನ ತೆರದಿ ನಿನ್ನ। ಸ್ಮರಿಸಲರಿಯೆನೇ। ಗರುಡನಂತೆ ಹೊತ್ತು ಧರೆಯ। ಚರಿಸಲಾರೆನೆ।।2।। ಚಂದ್ರಧರನ ಸಖನೆ ಕಾಯೋ ಇಂದಿರೇಶನೆ। ಸುಂದರ ಗೋವಿಂದ ದಯದಿ। ಕರವ ಮುಗಿವೆನೆ।।3।।

ನಾರಾಯಣಾದ್ರಿ ಕೃತವಾಸ ಶರಣು

ನಾರಾಯಣಾದ್ರಿ ಕೃತವಾಸ ಶರಣು। ತೋರಯ್ಯ ತವ ರೂಪರವಿಕೋಟಿ ಭಾಸ।।ಪ।। ಆನಕಜನಾಪ್ತ ನೀನೆಂಬೋ ನುಡಿಕೇಳಿಮಿಗೆ। ಸಾನುರಾಗದಲಿ ನಡೆತಂದೆ ನಿನ್ನ ಬಳಿಗೆ। ಮೀನಾಂಕಜನಕ ತವಪದ ಯುಗಾರ್ಚನೆ ಹೀಗೆ। ಜ್ಞಾನಪೂರ್ವಕದಿಂದಲೆನಗೆ ದಯದಿ। ಪಾನೀಯ ಜಾಂಬಕನೆ ಪೊರೆಯೆಂದೆ ನಿನಗೆ।।1।। ವಾಸುಕೀ ತಪಕೆ ಸಲೆಮೆಚ್ಚಿ ಗಿರಿಯಲಿನಿಂದೆ। ಆಸಲಿಲದೊಳು ಮಿಂದು ಕರಿವರ ಕರೆಯೆ ಬಂದೆ ಸ್ವಾಮಿ। ವಾಸವಾತ್ಮಜನು ಬಿನ್ನೈಸೆ ನಿನ್ನಯ ಮುಂದೆ। ಆ ಸಲಿಲ ದೊಳಗೊಲಿವನೆಂದೆ ನಿನಗೆ। ಪಾಸಟಿಯಾರು ನೀರಜಭವನ ತಂದೆ।।2।। ಪೊಗಳಲರಿಯರು ಸುರರು ನಿನ್ನ ಮಹಿಮಾತಿಶಯ। ಬಗೆಯ ನರಿಯಳು ಲಕುಮಿ ಬದರ ಸನ್ನಿಭಕಾಯ। ಮುಗುದ ಮಾನವ ತಿಳಿವನೇನೋ ತಿರುಮಲರಾಯ। ಖಗರಾಜಗಮನ ಕಮನೀಯ ಪಾಹಿ। ಜಗನ್ನಾಥವಿಠ್ಠಲ ವಿಗತಾಘ ಕವಿಗೇಯ।।3।।

ಶರಣು ಶರಣು ಸುರೇಂದ್ರ ಸನ್ನುತ — ರಾಗ: ಜುಂಜೋಟಿ-ಛಾಪುತಾಳ

ಶರಣು ಶರಣು ಸುರೇಂದ್ರ ಸನ್ನುತ। ಶರಣು ಶ್ರೀಸತಿ ವಲ್ಲಭ। ಶರಣು ರಾಕ್ಷಸ ಗರ್ವಸಂಹರ। ಶರಣು ವೇಂಕಟನಾಯಕ।।ಪ।। ಅನಿಮಿಷೇಂದ್ರುಲು ಮುನುಲು ದಿಕ್ಪತುಲು। ಅಮರಕಿನ್ನರ ಸಿದ್ದುಲು। । ಘನತತೊ ರಂಭಾದಿ ಕಾಂತಲು। ಕಾಚಿನಾ ರೆಚ್ಚರಿಕೆಯಾ...।।1।। ಕಮಲ ಗರುಡನು ಕಮಲ ಮಿತ್ರುಡು ಕಮಲ ಶತ್ರುಡು ಪುತ್ರುಡು। ಕ್ರಮಮುತೋ ನೀ ಕೊಲುವು ತೀರ್ಪುಡು ಕಾಚಿನ ರೆಚ್ಚರಿಕೆಯಾ...।।2।। ಎನ್ನಗಲ ಪ್ರಹ್ಲಾದ ಮುಖ್ಯುಲು। ನಿನ್ನ ಕೊಲುವಗ ವಚ್ಚಿರಿ। ವಿನ್ನಪಮು ವಿನವಯ್ಯ ತಿರುಪತಿ। ವೇಂಕಟಾಚಲ ನಾಯಕ....।।3।।

ಶರಣು ನಿನಗೆ ಶರಣೆಂಬೆನು ವಿಠಲ

ಶರಣು ನಿನಗೆ ಶರಣೆಂಬೆನು ವಿಠಲ। ಕರುಣವಾರಿಧಿ ಎನ್ನ ಕಾಯೊ ವಿಠಲ।।ಪ।। ದಶರಥರಾಯನ ಉದರದಿ ವಿಠಲ। ಶಿಶುವಾಗಿ ಉದಿಸಿದ್ಯೋ ಶ್ರೀರಾಮ ವಿಠಲ।। ಶಶಿಮುಖಿ ಗೋಪಿಯ ಕಂದನೆ ವಿಠಲ। ಅಸುರೆ ಪೂತನಿಯ ಕೊಂದ್ಯೋ ಕೃಷ್ಣ ವಿಠಲ।।1।। ಅರಸಿ ರುಗ್ಮಿಣಿಗೆ ನೀನರಸನಾದ್ಯೋ ವಿಠಲ। ಪಿರಿದಾಗಿ ಶಂಖವ ಪಿಡಿದ್ಯೋ ನೀ ವಿಠಲ। ಸರಸಿಜಸಂಭವಸನ್ನುತ ವಿಠಲ। ನಿರತ ಇಟ್ಟಿಗೆ ಮೇಲೆ ನಿಂತ್ಯೋ ನೀ ವಿಠಲ।।2।। ಕಂಡೆ ನಾ ನಿನ್ನ ವೇಂಕಟನೆಂಬ ವಿಠಲ। ಕುಂಡಗೋಳಕರಿಗೊಲಿದು ಬಂದ ವಿಠಲ।। ಪಾಂಡುರಂಗ ಕ್ಷೇತ್ರಪಾಲನೆ ವಿಠಲ। ಪುಂಡರೀಕಾಕ್ಷ ಶ್ರೀ ಪುರಂದರವಿಠಲ।।3।।

ಶರಣು ಶರಣು ಶರಣ್ಯ ವಂದಿತ ಶಂಖ ಚಕ್ರ — ರಾಗ: ರೇವತಿ

ಶರಣು ಶರಣು ಶರಣ್ಯ ವಂದಿತ ಶಂಖಚಕ್ರ ಗಧಾಧರ ।।ಪ।। ಶರಣು ಸರ್ವೇಶ್ವರಗೇ ಅಹೋಬಲಗಿರಿಯ ನೃಸಿಂಹಮೂರ್ತಿಗೆ।।ಅ।। ಶೀಲದಲಿ ಶಿಶು ನಿಮ್ಮ ಕರೆಯಲು। ಕಾಲಿಲೊದ್ದತಿ ಖಳನನು। ಲೀಲೆಯಿಂದಲಿ ಚಿಟಿಲು ಭುಗಿಭುಗಿಲೇಳೆ ಉಕ್ಕಿನ ಕಂಭದಿ।।1।। ತಾಳದಿರ್ಗಡಿ ತೋಳಿನಿಂದೆದೆ। ಸೀಳಿ ಹೊಟ್ಟೆಯ ಕರುಳನು। ಮಾಲೆಯನು ಕೊರಳೊಳಗೆ ಧರಿಸಿದ। ಜ್ವಾಲ ನರಸಿಂಹಮೂರ್ತಿಗೆ। ಕರಾಳ ನರಸಿಂಹಮೂರ್ತಿಗೆ ।।2।। ಮೋರೆ ಕೆಂಗೆರೆ ಕಣ್ಣು ಕಿವಿ। ತೆರೆ ಬಾಯಿ ಮೂಗಿನ ಶ್ವಾಸದಿ। ಮೇರುವಿಗೆ ಮಿಗಿಲೆನಿಸಿ ಮೊರೆಯುತ। ತೋರ ಕಿಡಿಗಳ ಸೂಸುತ।।3।।

ಸ್ವಾಮಿ ನರಸಿಂಹ ಶರಣು

ಸ್ವಾಮಿ ನರಸಿಂಹ ಶರಣು। ಶ್ರೀಮಹಾ ಅಹೋಬಲ ನಿಲಯ ದೇವ ಶರಣು॥ಪ॥ ಭವನಾಶಿನಿಯ ಕೂಲಭವನ ಭಟಪ್ರತಿಪಾಲ। ಭವಸಹಸ್ರಾಂಬಕರ ಭಯವಿದೂರ। ಭುವನ ಕಬ್ಬುತಗಾತ್ರ ಭಜಕಜನತಾಪತ್ರ। ಭವಕರ್ದಮ ಶೋಷ ಬುಧರ ಪರಿತೋಷ॥1॥ ಅಣುರೇಣು ತೃಣ ವ್ಯಾಪ್ತ ಅಖಿಳರೊಳು ನಿರ್ಲಿಪ್ತ। ದನುಜ ಹಿರಣ್ಯಕ ಹರ್ತ ಧೀನನಾಥ। ಕನಕ ಜಠರನ ಜನಕ ಕರುಣಾಂಕ ಕ್ರೂರಮುಖ। ಪುನೀತ ಶುಭ ಚಾರಿತ್ರ ಪ್ರಹ್ಲಾದಮಿತ್ರ॥2॥ ಪದುಮದೇವಿಯ ರಮಣ ಪ್ರದ್ವಿಷಾನ್ವಯದ ಮನ। ಮುದಶಾಂತ ಪರಿಪೂರ್ಣಮೂರ್ತಿ ಪುಣ್ಯ। ಪ್ರದನಾಮ ನವರೂಪ ಪತಂಗಾನಂತಪ್ರದೀಪ ನಿನ್ನ। ಪದವಿಗತಿ ಪೊರೆಯೆನ್ನಪಸನ್ವೆಂಕಟರನ್ನ॥3॥

ಶರಣ ನೀನೆಲೊ ನರಹರಿ

ಶರಣ ನೀನೆಲೊ ನರಹರಿ ಶರಣು ನೀನೆಲೊ ನರಹರಿ ಚರಣ॥ಪ॥ ಶರಣ ನೀನಿರ್ದು ಮರವೆಗೂಡಿ। ಜರಾಮರಣ ಪಡೆವರೇನೊ॥ಅ.ಪ॥ ಯೋಗಮಾರ್ಗ ವಹಿಸಿ ನಿಜವಾದ। ಭಾಗವತರ ಒಲಿಸಿ। ರಾಗರಹಿತನಾಗಿ ನೀಗದ ಸಂಸಾರ। ಭೋಗ ತ್ಯಜಿಸಿ ಭವರೋಗ ಗೆಲಿಯುವಂಥ॥1॥ ಮಿಥ್ಯೆ ಮಾಯ ನೀಗಿ ಸತತ ನೀ। ಸತ್ಯಜನಕೆ ಬಾಗಿ। ಸತ್ಯಸಂಧನಾಗಿ ಚಿತ್ತಜ ತಾತನ। ಭಕ್ತನೆನಿಸಿ ಯಮ ಮೃತ್ಯುಗೆಲಿಯುವಂಥ॥2॥ ಪಾಮರತ್ವ ತೊರೆದು ನಿಜವಾದ। ನೇಮನಿತ್ಯ ಪಿಡಿದು। ಭೂಮಿಗಧಿಕ ಮಮಸ್ವಾಮಿ ಶ್ರೀರಾಮನ। ನಾಮ ಭಜಿಸಿ ಮುಕ್ತಿ ಸಾಮ್ರಾಜ್ಯಪಡೆಯೆಲೊ॥3॥

ಶರಣು ಶರಣು ಶರಣು ಶ್ರೀ ಕೃಷ್ಣರಾಯನಿಗೆ   ರಾಗ: ನಾಟ-ಝಂಪೆತಾಳ

ಶರಣು ಶರಣು ಶರಣು ಶ್ರೀ ಕೃಷ್ಣರಾಯನಿಗೆ। ಶರಣು ಶರಣು ಶರಣು ಗೋಪೀನಾಥನಿಗೆ॥ಪ॥ ಶರಣು ಶರಣು ಶರಣು ಸಲೆ ಕಳ್ಳ ಕೃಷ್ಣನಿಗೆ। ಶರಣು ಶರಣು ಶರಣು ಶ್ರೀ ಲಕ್ಷ್ಮೀಪತಿಗೆ॥ಅ.ಪ॥ ಶ್ರೀಕೃಷ್ಣರಾಯನ ಶಿರದ ಮುಕುಟಕೆ ಶರಣು। ಥಳಥಳನೆ ಪೊಳೆವ ಕರ್ಣಕುಂಡಲಕೆ ಶರಣು। ಹಣೆಯ ಮ್ಯಾಲಿರುವ ಅರಳೆಲೆ ಬಟ್ಟಿಗೆ ಶರಣು। ಕೊರಳ ಮೂರೇಖೆಯ ಮಣಿಗಳಿಗೆ ಶರಣು॥1॥ ಮುಗು ನಗೆಗಳ ಪೋಲ್ವಳು ಮೂಗುತಿಯ ಕೆಳಗಿರುವ ಅರಳಿನಂತೆಸೆವ ಸುಳಿಪಲ್ಲುಗಳಿಗೆ ಶರಣು। ಕೆಳಗೆ ಕಟ್ಟಿದ ಮುತ್ತಿನಹಾರಕೆ ಶರಣು। ಎಳೆತುಳಸಿ ವನಮಾಲೆ ಕೌಸ್ತುಭಕೆ ಶರಣು॥2॥ ಗಜಹಸ್ತವನೆ ಪೋಲ್ವ ಭುಜದ ತೋಳಿಗೆ ಶರಣು। ಕಡಗ ಕಂಕಣ ತಾಯ್ತಿಕಣೆಗಳಿಗೆ ಶರಣು। ಬಿಡದೆ ಸ್ವರಗೈವ ಪೊಂಗೊಳಲ ಬಾಯಿಗೆ ಶರಣು। ಬೆರಳ ಮುದ್ರಿಕೆಯ ಹೊನ್ನುಂಗುರಕೆ ಶರಣು॥3॥ ನೀಲವರ್ಣನ ಮೈಯ ಹೂವು ತುಲಸಿಗೆ ಶರಣು। ಮೇಲೆ ಹಾಕಿದ ಬ್ರಹ್ಮಸೂತ್ರಕ್ಕೆ ಶರಣು। ಜೋಲುಹಾರದ ಕೆಳಗಿನ ವಡ್ಯಾಣಕ್ಕೆ ಶರಣು। ತಳಲಗಾವಿಯ ಧೋತ್ರ ನೆರಿಗಳಿಗೆ ಶರಣು॥4॥ ಘಲುಘಲು ಘಲುರೆಂಬ ಕಾಲಕಡಗಕೆ ಶರಣು। ಘಿಲಿಘಿಲಿಘಿಲಿರೆಂಬ ಗೆಜ್ಜೆಗೆ ಶರಣು। ಎಳೆಯ ಕ್ಯಾದಿಗೆಯಂತೆ ಹೊಳೆವ ಪಾದಕೆ ಶರಣು। ಚೆಲುವ ಶ್ರೀಕೃಷ್ಣನ ಉಂಗುಷ್ಠಗಳಿಗೆ ಶರಣು॥5॥

ಶರಣರ ಪರಿಪಾಲಾ ಶ್ರೀಲೋಲಾ

ಶರಣರ ಪರಿಪಾಲಾ ಶ್ರೀಲೋಲ। ಪರಮಸುಂದರ ಬಾಲಾ॥ಪ॥ ರುಕ್ಮಿಣಿ ರಮಣಾ ರಕ್ಕಸ ಹರಣಾ। ಶಕ್ರಾದಿನುತ ಚರಣಾಭರಣಾ॥1॥ ಮಧ್ವ ಮುನೀಶಾ ಶುದ್ಧ ಪ್ರಕಾಶಾ। ಪದ್ಮನಾಭ ಮನಶುದ್ಧಿಯ ನೀಡೋ॥2॥ ಕಾಮಿತ ಫಲದಾ ಕೋಮಲ ಪಾದ। ಶ್ರೀ ಮನೋಹರ ಸುರ ಕಾಮ್ಯ ಪ್ರದಾತಾ॥3॥ ಉಡುಪಿಯ ನಿಲಯಾ ಮೃಡಸುರ ಪ್ರೀಯಾ। ಧೃಡಮನ ಕೊಡು ನಿನ್ನಡಿಯಲಿ ಜೀಯಾ॥4॥ ಗೋಪಿಯ ತನಯಾ ನೀ ಪಿಡಿ ಕೈಯ್ಯಾ। ಗೋಪಾಲಕೃಷ್ಣವಿಠಲ ಹೇ ಜೀಯ್ಯಾ॥5॥

ಶ್ರೀರಂಗವಿಠ್ಠಲನ ಶ್ರೀಮುಕುಟಕೇ ಶರಣು

ಶ್ರೀರಂಗವಿಠ್ಠಲನ ಶ್ರೀಮುಕುಟಕೇ ಶರಣು॥ಪ॥ ಶಿರದಲೊಪ್ಪುವ ನೀಲಕುಂತಳಕೆ ಶರಣು। ಸಿರಿ ಸಹೋದರನರ್ಧದವಳಿಗೆ ಶರಣು॥ಅ.ಪ.॥ ಸೊಂಪು ನೋಟದ ಚೆಲುವ ಸೋಗೆಗಣ್ಣಿಗೆ ಶರಣು। ಸಂಪಿಗೆಯ

ಕುಸುಮ ಸಮನಾಸಿಕಕೆ ಶರಣು। ಗುಂಪುರತ್ನದ ಕರ್ಣಕುಂಡಲಗಳಿಗೆ ಶರಣು। ಇಂಪುದರ್ಪಣ ನಿಭ ಕಪೋಲಗಳಿಗೆ ಶರಣು॥1॥ ಕುಂದ ಕುಟ್ಮಲಪೋಲ್ವ ದಂತ ಪಂಕ್ತಿಗೆ ಶರಣು। ಅಂದವಾಗಿರುವ ಬಿಂಬೋಷ್ಠಕೆ ಶರಣು। ಚಂದ್ರಿಕಾನಿಭ ಮುದ್ದು ಮಂದಹಾಸಕೆ ಶರಣು।ನಂದಗೋಪನ ಮುದ್ದು ಕಂದನಿಗೆ ಶರಣು॥2॥ ಅಬ್ಜನಾಭನ ದಿವ್ಯ ಕಂಬು ಕಂಠಕೆ ಶರಣು। ಅಬ್ಜ ಮುಖಿಯಿರುವ ವಕ್ಷಸ್ಥಳಕೆ ಶರಣು। ಕುಬ್ಜೆಯನು ಡೊಂಕು ತಿದ್ದಿದ ಭುಜಗಳಿಗೆ ಶರಣು। ಅಬ್ಜಜಾಸನನ ಪೆತ್ತ ನಾಭಿಗೆ ಶರಣು॥3॥ ರನ್ನ ಗಂಟೆಗಳಿರುವ ನಿನ್ನ ಕಟಿದೆ ಶರಣು ಪೊನ್ನ ಕದಳೀ ಪೋಲ್ವ ತೊಡೆಗಳಿಗೆ ಶರಣು। ಪುನ್ನಾಗಕೆರಗೆತ್ತ ದ್ವಯನಿತಂಬಕೆ ಶರಣು। ಚೆನ್ನಾಗಿ ಕುಣಿವ ಸಮ ಜಾನುವಿಗೆ ಶರಣು॥4॥ ಮಂಗಳ ವೈಭೋಗಂಗಳ ಅಂಘ್ರಿದ್ವಯಕೆ ಶರಣು। ತುಂಗ ಕುಚಗಳ ಪಿಡಿದ ಕರಗಳಿಗೆ ಶರಣು। ಪೊಂಗಳಲನೂದುವಾ ಅಂಗುಲಿಗಳಿಗೆ ಶರಣು। ರಂಗವಿಠ್ಠಲನ ಸರ್ವಾಂಗಕೆ ಶರಣು॥5॥

ಶರಣು ದೇವರ ದೇವ ಶರಣು ಸುರವರ ಮಾನ್ಯ

ಶರಣು ದೇವರ ದೇವ ಶರಣು ಸುರವರ ಮಾನ್ಯ ಶರಣು ಶತಕೋಟಿ ಲಾವಣ್ಯ। ಲಾವಣ್ಯ ಮೂರುತಿಯೆ ಶರಣೆಂಬೆ ಸ್ವಾಮಿ ಕರುಣೀಸೊ॥1॥ ಆದಿನಾರಾಯಣನು ಭೂದೇವಿ ಮೊರೆ ಕೇಳಿ ಯಾದವರ ಕುಲದಲ್ಲಿ ಜನಿಸೀದ। ಜನಿಸಿದ ಕೃಷ್ಣ ಪಾದಕ್ಕೆ ಶರಣೆಂಬೆ ದಯವಾಗೊ॥2॥ ನಿನ್ನ ವಿಸ್ಮೃತಿ ದೋಷ ಜನ್ಮ ಜನ್ಮಕ್ಕೆ ಕೊಡದಿರು ಎನ್ನ ಕುಲ ಬಂಧು ಎಂದೆಂದು। ಎಂದೆಂದು ನಿನಗಾನು ಬಿನ್ನೈಪೆ ಬಿಡದೆ ಸಲಹಯ್ಯ॥3॥ ವಸುದೇವನಂನದನನ ಹಸುಗೂಸು ಎನಬೇಡಿ ಶಿಶುವಾಗಿ ಕೊಂದ ಶಕಟನ್ನ। ಶಕಟನ್ನ ವತ್ಸಾಸುರನ ಅಸುವಳಿದು ಪೊರೆದ ಜಗವನ್ನ॥4॥ ವಾತರೂಪಿಲಿ ಬಂದ ಆ ತೃಣಾವರ್ತನ್ನ ಪಾತಾಳಕಿಳುಹಿ ಮಡುಹೀದ। ಮಡುಹಿ ಮೊಲೆಕ ಯುಣಿಸಿದಾ ಪೂತನಿಯ ಕೊಂದ ಪುರುಷೇಶ॥5॥ ನಿನ್ನ ಸ್ಮೃತಿಗಿಂತಧಿಕ ಪುಣ್ಯ ಕರ್ಮಗಳಿಲ್ಲ ನಿನ್ನ ವಿಸ್ಮ ೃತಿಗಿಂತ। ಅಧಿಕವಾದ ಮಹಾಪಾಪಗಳು ಇನ್ನಿಲ್ಲ ಲೋಕತ್ರಯ ದೊಳು॥6॥ ಅಂಬುಜಾಂಬಕಿಗೊಲಿದ ಜಂಭಾರಪುರದಿಂದ ಕೆಂಬಣ್ಣದ ಮರ ತೆಗೆದಂಥ। ತೆಗೆದಂಥ ಕೃಷ್ಣನ ಕರಾಂಬುಜವೆ ನಮ್ಮ ಸಲಹಲಿ॥7॥ ದೇವಕೀಸುತನಾಗಿ ಗೋವುಗಳ ಕಾದದೆ ಪಾವಕವ ನುಂಗಿ ನಲಿವೋನೆ। ನಲಿವೋನೆ ಮೂರ್ಲೋಕ ಓವ ದೇವೆಂದ್ರ ತುತಿಪೋನೆ॥8॥ ಜಗದುದರ ನೀನಾಗಿ ಜಗದೊಳಗೆ ನೀನಿಪ್ಪೆ ಜಗದಿ ಜೀವರನ್ನ ಸೃಜಿಸುವಿ। ಸೃಜೀಸಿ ಜೀವರೊಳಿದ್ದು ಜಗದನ್ಯನೆಂದು ಕರೆಸುವಿ॥9॥ ಕರುಣನೀಯಾಮಕನೆ ಕರುಣಾಳು ನೀನೆಂದು ಮೊರೆಹೊಕ್ಕೆ ನಾನಾ ಪರಿಯಲ್ಲಿ। ಪರಿಯಲ್ಲಿ ಮದ್ವೇಶ ಮರುಳು ಮಾಡುವರೆ ನೀಯೆನ್ನ॥10॥ ಕುವಲಯಾಪೀಡನನು ಲವ ಮಾತ್ರದಿ ಕೊಂದು ಶಿವನ ಚಾಪವನು ಮುರಿದಿಟ್ಟಿ। ಮುರಿದಿಟ್ಟಿ ಮುಷ್ಟಿಕನ ಬವರದಲಿ ಕೆಡಹಿ ಬಲಿಗೈದೆ॥11॥ ಗಂಧವಿತ್ತಬಲೆಯೊಳ ಕುಂದನೆಣಿಸದೆ ಪರಮ ಸುಂದರಿಯ ಮಾಡಿ ವಶವಾದಿ। ನಮ್ಮ ಗೋವಿಂದ ನೀನೆಂಥ ಕರುಣಾಳು॥12॥ ವಂಚಿಸಿದ ಹರಿಯೆಂದು ಪರಚಿಂತೆಯಲಿ ಕಂಸ ಮಂಚದ ಮ್ಯಾಲೆ ಕುಳಿತಿದ್ದ। ಕುಳಿತಿದ್ದ ಮದಕರಿಗೆ ಪಂಚಾಸ್ಯನಂತೆ ಎರಗೀದೆ॥13॥ ದುರ್ಧರ್ಷ ಕಂಸನ್ನ ಮಧ್ಯರಂಗದಿ ಕೆಡಹಿ ಗುದ್ದಿಟ್ಟ ತಲೆಯ ಜನನೋಡೆ। ಜನನೋಡೆ ದುರ್ಮತಿಯ ಮರ್ದಿಸಿದ ಕೃಷ್ಣ ಸಲಹೆಮ್ಮ॥14॥ ಮಣಿಕುಂದಣಗಳು ಕಂಕಣದಿ ಶೋಭಿಸುವಂತೆ ತೃಣದಿ ನಿನ್ನಖಿಳ ಶ್ರೀದೇವಿ ಸಹಿತ ನಿರ್ಗುಣನು ಶೋಭಿಸುವ ಒಪ್ಪಿಡಿ ಪ್ರತಿದಿನ॥15॥ ಉಗ್ರಸೇನನಿಗೆ ಪಟ್ಟ ಶೀಘ್ರದಲಿ ಕಟ್ಟಿ ಕಾರಾಗೃಹಿಲ್ಲಿದ್ದ ಜನನಿಯ। ಜನನಿಯ ಜನಕರ ಬಿಡಿಸಿ ಅಗ್ರಜನ ಕೂಡ ಹೊರವಂಟ॥16॥ ಕಪ್ಪ ಕೊಡಲಿಲ್ಲೆಂದು ದರ್ಪದಲಿ ದೇವೇಂದ್ರ ಗುಪ್ಪಿದನು ಮಳೆಯ ವ್ರಜದೊಳು। ವ್ರಜದೊಳು ಪರ್ವತವ ಪುಷ್ಪದಂತೆತ್ತಿ ನೀ ಸಲಹೀದಿ॥17॥ ಜ್ಞಾನ ಸುಜ್ಞಾನ- ವಜ್ಞಾನ ವಿಜ್ಞಾನಮಯ ಮಾಣವಕರೂಪ ವಸುದೇವ। ವಸುದೇವತನಯ ಸುಜ್ಞಾನವನು ಕೊಟ್ಟು ಕರುಣೀಸೊ॥18॥ ರಂಗರಾಯನೆ ಕೇಳು ಶೃಂಗಾರ ಗುಣಪೂರ್ಣ ಭಂಗಪಡಲಾರೆ ಭವದೊಳು। ಭವಬಿಡಿಸಿ ಎನ್ನಂತರಂಗದಲಿ ನಿಂತು ಸಲಹಯ್ಯ॥19॥ ತಾಪತ್ರಯಗಳು ಮಹದಾಪತ್ತು ಪಡಿಸೋದು ಕಾಪಾಡು ಕಂಡ್ಯ ಕಮಲಾಕ್ಷ। ಕಮಲಾಕ್ಷ ಮೊರೆಯಿಟ್ಟ ದ್ರೌಪದಿಯ ಕಾಯ್ದೆ ಅಳುಕಾದೆ॥20॥ ಸ್ವಚ್ಛ ಗಂಗೆಯೊಳಗೆ ಅಚ್ಯುತನ ಸ್ಮರಿಸಿದರೆ ಸ್ವಚ್ಛ ಮುಡಿಯೆಂದು ಕರೆಸೋದು। ಕರೆಸೋದು ಕೈವಲ್ಯ ನಿಶ್ಚಯ ಕಂಡ ಎನಗಿನ್ನು॥21॥ ಶ್ವಾನಸೂಕರ ನೀಚ ಯೋನಿಯೊಳು ಬರಲಂಜೆ ಶ್ರೀನಿಧಿಯೆ ನಿನ್ನ ಸ್ಮೃತಿಸ್ವರ್ಗ। ಸ್ಮೃ ೃತಿಸ್ವರ್ಗ ಸುಖವ

ನಿನಗಾನು ಬೇಡುವೆನೊ ಎಂದೆಂದು।।22।। ಕನಸಿಲಾದರು ವಿಷಯ ನೆನೆಹನೀಯದೆ ಎನ್ನ ಮನದಲ್ಲಿ ನೀನೆ ನೆಲೆಗೊಳ್ಳೊ। ನೆಲೆಗೊಳ್ಳೊ ಲೋಕ ಪಾವನಚರಿತ ಪಾರ್ಥಸಖ ಶ್ರೀಕೃಷ್ಣ।।23।। ವಾಸುದೇವನ ಬಿಟ್ಟು ಲೇಸು ಹರಿಸಿಕೊಂಡೇಸು ದೈವಗಳ ಭಜಿಸಲು। ಭಜಿಸಲು ಬರಿದೆ ಆಯಾಸವಲ್ಲದಲೆ ಸುಖವಿಲ್ಲ।।24।। ಉಂಡು ಉಟ್ಟದ್ದೆಲ್ಲ ರಂಗನ ಸೇವೆಯೆನ್ನಿ ಕಂಡ ಕಂಡದ್ದು ಹರಿಪ್ರೀತಿಯೆನ್ನಿ। ಹರಿಪ್ರೀತಿಯೆನ್ನಿಮೂರ್ಲೋಕಕ್ಕೆ ಪಾಂಡವಪ್ರಿಯನೆ ದೊರೆಯೆನ್ನಿ ।।25।। ಮತದೊಳಗೆ ಮಧ್ವ ಮತ ವ್ರತದೊಳಗೆ ಹರಿದಿನವು ಕಥೆಯೊಳಗೆ ಭಾಗವತ ಕಥೆಯೆನ್ನಿ।।26।। ಕಥೆಯೆನ್ನಿ ಮೂರ್ಲೋಕ ಕತಿಶಯ ಶ್ರೀ ಕೃಷ್ಣ ಪ್ರತಿಮೆಯನ್ನಿ ನೀನಲ್ಲದನ್ಯರಿಗೆ ನಾನಮಿಸೆನಲೊ ಹರಿಯೆ ದೀನರಕ್ಷನೆ ದಯವಂತ। ದಯವಂತ ನಮ್ಮ ಅನುಮಾನವಿಲ್ಲದಲೆ ಪೊರೆ ಕಂಡ್ಯ।।27।। ನರರ ಕೊಂಡಾಡಿ ದಿನ ಬರಿದೆ ಕಳೆಯಲು ಬೇಡ ನರನ ಸಖನಾದ ಸಿರಿಕೃಷ್ಣ। ಸಿರಿಕೃಷ್ಣ ಮೂರುತಿಯ ಚರಿತೆ ಕೊಂಡಾಡೊ ಮನವುಬ್ಬಿ।।28।। ಪಾಹಿ ಪಾಂಡವಪಾಲ ಪಾಹಿ ರುಕ್ಮಿಣಿ ಲೋಲ ಪಾಹಿ ದ್ರೌಪದಿಯ ಅಭಿಮಾನ। ಅಭಿಮಾನ ಕಾಯ್ದ ಹರಿ ದೇಹಿ ಕೈವಲ್ಯ ನಮಗಿಂದು।।29।। ಪಾಹಿ ಕರುಣಾಕರನೆ ಪಾಹಿ ಲಕ್ಷ್ಮೀರಮಣ ಪಾಹಿ ಗೋಪಾಲ ಗುಣಶೀಲ। ಗುಣಶೀಲ ಪಾಪ ಸಂದೋಹಹ ಕಳೆದೆನ್ನ ಸಲಹಯ್ಯ।।30।। ನಗಧರನ ಸ್ಮರಿಸದೆ ಅಘಮರಕ್ಷಣ ಮಾಡೆಣಿಸೆ ನಗರೇನು ಇದರ ಅಮರಾರು। ಅಮರಾರು ಇದಕಿನ್ನ ಜಗನ್ನಾಥವಿಠಲಾ ಒಲಿದಾನೆ।।31।। ಏಕಾಂತಿಗಳ ಒಡೆಯ ಲೋಕೈಕರಕ್ಷಕನೆ ನಾಕಜಾ ವಂದ್ಯ ನಳಿನಾಕ್ಷ। ನಳಿನಾಕ್ಷ ನಿನ್ನ ಪಾದಕೆ ಕೈಮುಗಿವೆ ದಯವಾಗೊ।।32।। ಏಕಾದಶೇಂದ್ರಿಯಗಳು ಏಕಪ್ರಕಾರದಲ್ಲಿ ಲೋಕೈಕನಾಥ ನಿನ್ನಲ್ಲಿ। ನಿನ್ನಲ್ಲಿ ಸ್ಮೃತಿ ಕೊಡಲು ವೈಕುಂಠಲೋಕ ನಾನೊಲ್ಲೆ।।33।। ಲೋಕ ನಾಯಕನಾಗಿ ಲೋಕದೊಳು ನೀನಿದ್ದು ಲೋಕಗಳ ಸೃಜಿಸಿ ಸಲುಹುವಿ। ಸಲಹಿ ಸಂಹರಿಸುವ ಲೋಕೇಶ ನಿನಗೆ ಎಣೆಗಾಣೆ।।34।। ಎಂದು ಕಾಂಬೆನು ನಿನ್ನ ಮಂದಸ್ಮಿತಾನನವ ಕಂದರ್ಪನಯ್ಯ ಕವಿರೇಯ। ಕವಿ ಗೇಯ ನಿನ್ನಂಥ ಬಂಧಗಳು ನಮಗಿರಲೊ ಅನುಗಾಲ।।35।। ಏಸುಜನ್ಮದ ಪುಣ್ಯ ತಾ ಸಮನಿಸಿತೊ ಎನಗೆ ವಾಸುಕೀಶಯನ ಜನರೆಲ್ಲ। ಜನರೆಲ್ಲ ವೈಕುಂಠ ದಾಸನೆಂದು ತುತಿಪೋರೊ।।36।। ಈತನ ಪಾದಾಂಬುಜ ವಿಧಾತೃ ಮೊದಲಾದ ಸುರವ್ರಾತ ಪೂಜಿಪುದೊ ಪ್ರತಿದಿನ। ಪ್ರತಿದಿನದಿ ಶ್ರೀ ಜಗನ್ನಾಥವಿಠಲನ ನೆನೆ ಕಂಡ್ಯ।।37।।

ಶರಣೆನ್ನಿರೊ ನಮ್ಮ ರಘುಕುಲ ತಿಲಕಗೆ

ಶರಣೆನ್ನಿರೊ ನಮ್ಮ ರಘುಕುಲತಿಲಕಗೆ ಶರಣು ಶರಣು ರಾಮ ರಘುಕುಲ। ಶರಣು ಪೂರಣ ಸೋಮ। ಕರುಣಾಪಾಂಗದಿ ಶರಣಾಗತರ ಭಯ। ಹರಣಾಹಲ್ಯೋದ್ಧರಣ ಕಾರಣ ಸುಚರಣ।।ಪ।। ದಂಡಕದನುಜನ ದಂಡಿಸಿದಗಣಿತ। ಚಂಡ ರುಚಿರಕೋದಂಡಕರ। ಕುಂಡಲ ಮಂಡಿತ ಗಂಡ ಸುತಂಡ ಬ್ರೊ। ಮ್ಹಾಂಡ ಕೋಟಿರಕ್ಷಾ ಪುಂಡರೀಕಾಕ್ಷ।।1।। ದೂಷಣ ಖರಾಂತಕ ದಶಶಿರದಮನ ತ್ರಿ। ದಶರ ಪೊರೆದ ಜಗದೀಶವರದ। ಬಿಸಜಭವ ಸಮೀರ ಪಶುಗಮನಾದಿ ಸು। ರೇಶನುತಪದನೆ ಅಶೇಷದುರಿತಾರಿ।।2।। ದುಷ್ಟಜನರ್ಮದನ ಜಠರಜನ ನರಸಿಂಹ। ಚಟುಲ ದ್ವಿಜಾರ್ಚಿತಪಟುದೇವ। ತ್ರುಟಿಯೊಳು ನೆನೆವರು ಕುಟಿಲವಾರಕ ವಿಶ್ವ। ನಾಟಕ ಪ್ರಸನ್ನವೆಂಕಟ ರಘುರಾಮ।।3।।

ಶರಣ ಜನರ ಪಾಲ ಹರಿ ದಯಾ ಸಿಂಧುವೆ

ಶರಣ ಜನರ ಪಾಲ ಹರಿ ದಯಾ ಸಿಂಧುವೆ ವೆಂಕಟೇಶ। ಮರೆಯದೆ ಸಲಹೆನ್ನ ದೀನನಾಪ್ತನೆ ವೆಂಕಟೇಶ।।ಪ।। ಕರಿ ಧ್ರುವ ಪ್ರಹ್ಲಾದ ಪಾಂಚಾಲಿ ಪಾಲನೆ ವೆಂಕಟೇಶ। ದುರುಳ ರಕ್ಕಸಹರ ಹರಸುರವಿನಮಿತನೆ ವೆಂಕಟೇಶ। ಪರಮ ಪಾವನ ಸಿರಿಯ ಸಖಜೀವನೆ ವೆಂಕಟೇಶ। ದುರುಳಮಾತ ನೀನಳಿದು ಗೋವಳರ್ಪೊರೆದನೆ ವೆಂಕಟೇಶ।।1।। ವಸುದೇವದೇವಕಿ ಬಸಿರೊಳು ಬಂದನೆ ವೆಂಕಟೇಶ। ಕುಶಲದಿ ವಸುಧೇಯಲಸಮಮಹಿಮೆ ತೋರ್ದನೆ ವೆಂಕಟೇಶ। ಅಸುರ ಕಂಸನ ಕುಟ್ಟಿ ಗೋಕುಲದಲಿರೆ ವೆಂಕಟೇಶ। ಶಶಿಮುಖಿ ಗೋಪಿಯರಾನಂದಲೀಲನೆ ವೆಂಕಟೇಶ।।2।। ಮಂದರೋಧಾರ ಗೋವಿಂದ ಮುಕುಂದನೆ ವೆಂಕಟೇಶ। ಸಿಂಧುಶಯನ ಆ ನಂದನ ಕಂದನೆ ವೆಂಕಟೇಶ। ಇಂದಿರೆಯರ ಬಿಟ್ಟು ಭೂಲೋಕಕ್ಕಿಳಿದನೆ ವೆಂಕಟೇಶ। ಸುಂದರಗಿರಿಯ ಭೂವೈಕುಂಠವೆನಿಸಿದೆ ವೆಂಕಟೇಶ ।।3।। ಬಣಗರ ಸೊಕ್ಕಿನು ಕ್ಷಣಕ್ಷಣಕೆ ಮುರಿದನೆ ವೆಂಕಟೇಶ। ಮನಮುಟ್ಟಿ ಬೇಡ್ವರ ಮನದಿಷ್ಟವಿತ್ತನೆ ವೆಂಕಟೇಶ। ಎಣಿಕೆಗೆ ಮೀರಿದ ದ್ರವ್ಯ ಕೂಡಿಟ್ಟನೆ ವೆಂಕಟೇಶ।

ಘನಘನ ಮಹಿಮೆಯ ಭುವನದಿ ತೋರ್ದನೆ ವೆಂಕಟೇಶ॥4॥ ನಂಬಿದೆ ನಿನ್ನ ಪಾದಾಂಬುಜಗಳನ್ನು ವೆಂಕಟೇಶ। ಬೆಂಬಲವಿರ್ದು ನೀ ಸಂಭ್ರಮದಿ ಸಲಹೆನ್ನ ವೆಂಕಟೇಶ। ನಂಬಿದ ದಾಸರ ಭವಾಂಬುಧಿ ಗೆಲಿದನೆ ವೆಂಕಟೇಶ। ಅಂಬುಜಮುಖಿ ಸೀತಾಪತಿ ಶ್ರೀರಾಮನೆ ವೆಂಕಟೇಶ॥5॥

ಶರಣು ಭಾಸ್ಕರ ಕುಲಶರಧಿ ಪೂರ್ಣಸೋಮ

ಶರಣು ಭಾಸ್ಕರ ಕುಲಶರಧಿ ಪೂರ್ಣಸೋಮ। ಕರುಣಾಮೃತ ಪೂರ್ಣರಾಮ॥ಪ॥ ನೃಪದಶರಥನ ತ್ಯಜಿಸಿ ಸೌಮಿತ್ರನ ಕೂಡಿ। ವಿಪಿನದಿ ಸೀತೆ ಕಾಣದೆ ನೀ। ಕಪಿಗಳ ನೆರಹಿ ಅಂಬುಧಿಗೆ ದಾರಿಯ ಬಲಿದೆ। ಕಪಟರಾವಣನ ಸವರಿಗೆ॥1॥ ನಿಜ ರಾಣಿಯ ಯಜ್ಞಿಯ ಮುಖದಲಿ ಕೈಕೊಂಡು। ಸುಜನ ವಿಭೀಷಣನ ಹೊರೆದೆ। ತ್ರಿಜಗವಂದಿತ ಪುಷ್ಪಕವನೇರಿ ಬಂದು ಅನುಜ ಭರತನ ಕಾಯ್ದೆ ಅಂದು॥2॥ ಹಲವು ಸಾಸಿರ ಆಬ್ದ ಅಯೋಧ್ಯೆಯನಾಳ್ದೆ ಅ। ನಿಲತನಯನ ಸೇವೆಗೊಲಿದೆ। ಸುಲಭದಿ ಮುಕ್ತಿ ತೋರಿದೆ ಪ್ರಸನ್ವೆಂಕಟ। ನಿಲಯ ಭಕ್ತರಿಗೆ ಇತ್ತೆ ತುಷ್ಟಿ॥3॥

ಶರಣು ಸಹಜಭಾವ ಸಿರಿಯರ ಜೀವ

ಶರಣು ಸಹಜಭಾವ ಸಿರಿಯರ ಜೀವ। ಶರಣು ಶರಣು ದೇವ ದೇವ॥ಪ॥ ಶರಣು ನಿನ್ನ ಚರಣಸೇವೆ ಕರುಣಿಸೆನಗೆ। ನಿರುತದಭವ ಪರಮಪಾವನ ನಿಮ್ಮ। ಚರಿತ ಕರುಣಿಸೆನ್ನುದಯಕ್ಕೆ ಸತತ। ಪೊರೆಯೊ ಪ್ರೇಮದಿ ದುರಿತಪರ್ವತ। ತರಿದು ತೋರಿಸಿ ಜಗದಿ ಮಮತೆ॥ಅ.ಪ॥ ಸಾರ ಸುರಸಮೂಹಸೇವಿತ ಮಾರಾರಿವಿನುತ। ಕ್ಷೀರವಾರಿಧಿ ಸುತೆಯ ಪ್ರಿಯನಾಥ ಸನಕಾದಿನಮಿತ। ಸೇರಿ ಭಕ್ತರಗಡಣದಲಿ ಗುಪ್ತ ನಲಿಯುವಿ ಮಮತೆ। ತೋರಿ ಎನ್ನನ್ನು ಮಾಡು ಪಾವನ। ಮೀರಿದ ಸಂಸಾರಬಂಧನವಾರಿಧಿಯ ದಾಂಟಿಸುಯೀಕ್ಷಣ। ಸೇರಿಸದೆ ಎನ್ನ ಮಾಯಾಜಾಲದಿಂ। ಸೇರಿಸು ನಿಜಜ್ಞಾನ ದಯದಿ॥1॥ ವೇದವೇದಂಗಳಿಗೆ ಅಗೋಚರ ವೇದಂಗಳಾಧಾರ। ವೇದವೇದ್ಯಮಳೈಕ್ಯ ಪರತರ। ವೇದಂಗ್ಹಳಿತಕರ ವೇದವೇದಾಂಗ ಶ್ಯಾಮಸುಂದರ। ವೇದಾದಿ ಮನೋಹರ ವೇದವಿದ್ಯೆ ಬೋಧಿಸಯ್ಯ। ವೇದಸಾಧನ ತೋರಿಸಯ್ಯ ವೇದಮಂತ್ರ ಸಿದ್ಧಿಸಯ್ಯ। ವೇದವೇದಾಂತದೊಳು ಗೌಪ್ಯವಾದ ತತ್ವದ ಮೂಲ ತಿಳುಹಿ। ವಾದಬುದ್ಧಿಯ ನೀಗಿಸಿ ನಿಮ್ಮ ಪಾದಭಕ್ತಿಯ ಕರುಣಿಸಭವ॥2॥ ಭುವನತ್ರಯದ ಪರಮ ಸುಸೂತ್ರ ವಾರಿಜನೇತ್ರ। ಭುವನತ್ರಯದ ಪಾವನ ಸ್ತೋತ್ರ ಪರಮಪವಿತ್ರ। ಭುವನಜಾತೆಯ ಮೋಹದ ಮಿತ್ರ ವನರುಹ ಗಾತ್ರ। ಭುವನದ್ದತ್ತವತಾರ ದೇವ ಭುವನವೀರೇಳು ಹೊತ್ತು ಆಳುವ। ಭುವನ ಭಾರವನಿಳುಹಿ ಕಾವ ಭುವನಯಾತ್ರದಿ ಜಯವ ಪೊಂದಿಸಿ। ಭುವನಕೆ ತಿರುಗಟ್ಟದೆ ನನ್ನನ್ನು ಜವದಿ ನಿಮ್ಮಯ ಕರುಣದೊರಕಿಸಿ। ದಯದಿ ಮುಕ್ತಿಯ ಕೊಡು ಶ್ರೀರಾಮ॥3॥

ಶರಣು ಶರಣನಚು ಮೊರಲಿಡಿನ ನಾ

ಶರಣು ಶರಣನಚು ಮೊರಲಿಡಿನ ನಾ। ಗಿರಿ ಮುಲನ್ನಿ ಪರಿಯಾಚಕಮು ಲೋನಾ॥ಪ॥ ಶರಜನಯನ ಪರಮ ಪುರುಷ ನಿನ್ನನು। ಸರಣತೋ ಕರುಣತೋ ಮರಿಮರಿ॥ಅ.ಪ.॥ ಶರಮುತರಮು ತರಮುಗಾಕ ಕಾಕಾ। ಸುರುಡು ಸುರುಲ ನರಯ ವೇಡಗಾನು ದ। ಶರಥ ವರಕುಮಾರುನಿ ಬಾಣ ಮನುಚುನು। ವೆರಚಿ ಜರಗ ಮರಲ ತಾನುಗನಿಗಾ। ಬರಪಡಿ ಸರಗುನ ಶರಣನು ಮಾತ್ರಮುನ। ಇರುವು ಗನು ರಜತಗಿರಿ ನಾಥ ದುಲು। ವರಮಗು ಬಿರುದುನ ಸರಸತ ಮೆಚ್ಚನು। ಕರುಣನು ಸ್ಥಿರಮುಗ ವರಸುಚ್ಚಿನ ನಿನು॥1॥ ಮುನುವು ಮನಸುನನಸೂಯಲನು ತಪೋ। ಧನುಡು ವಿನಯಮುನನು ದ್ರೌಪದಿನಿ ಶೋ। ಧನಮು ಘನಮುಗ ನಿಜಮುನಸೇಯ ಧೃಡ। ಮುನನು ತನ ಮದಿನಿ ಶರಣನ ಗಾನೇ। ಕನಿಕರಮುನ ವೇಗನ ನೀವೆಂತೋ ಚನು। ವುನ ಮುನುಲು ಸುಜನುಲು ಸುರಾಸುರ। ಗುಣಮುಲವನಿಪಾಲ ನರುಲ ಬೊಗಡನು। ವನಜನಯನ ಲಘುವುನ ಬ್ರೋಚಿನ ನಿನು॥2॥ ಮದಿನಿ ಬೆದರು ಸುದತಿನಿ ಗನಿ ನೀದು। ಪದಮುಲು ದಯನು ಧರಲೋನು ಬ್ರೋಚೀ। ಗದರ ಮದುಜನದಳ ನಾಪ ಘನಜಿತ। ಮದನ ಬುಧಜನ ಧನ ತ್ಯಾಗರಾಜ ಹೃದಯ ಕುಮುದಜಲಜಧರ ಸಂಹರಣಾ। ರಿ ದಮನ ಸದಮಲ ರದನ ಮುನಿ ಮನೋ। ಸದನ ಶುಭದ ನನು ಮದಮುನ ಬ್ರೋವುಮು। ಸದಯುಡ ಕೊದವಲ ನದಲಿಂಪುಮು ನಿನು॥3॥

ಶರಣಾಗ್ರಣಿ ರಾಮ ಚರಣಾಂಬುಜ

ಶರಣಾಗ್ರಣಿ ರಾಮ ಚರಣಾಂಬುಜ ಬಿಡೆ। ತರುಳ ನಳಿನ ।ಷಟ್ ಚರಣ ಬಿಡಬಲ್ಲದೆ।।ಪ।। ಹನುಮನ ಭಜನೆಂಬ ಘನವಾರಿ ಪೂರಿತೆ। ಮನ ಸರೋವರ ಅಯನವಾಗಿಪ್ಪ। ಜನಕಸುತೆ ಹಂಸಿ ಮನಸಾಪ ಹಾರಿ। ದಿನಕರನ್ವದಿಂದ ಮಿನುತವಾಗಿಪ್ಪ।।1।। ಅಮರರೋತ್ತಮರೆಂಬ ಭ್ರಮರರಾರವಗಳ। ಸಮಯೋಚಿತ ಸಾಮಭಿ ಸೇವಿತ। ವಿಮಲಾತಮದಿಂದ ಸಾಂದ್ರ ಶಮಲಾತಿ ದೂರ। ಕಮಲಾಸನ ಪ್ರಿಯ ಕಮಲೋತ್ತಮ ಪಾದ।।2।। ಶಿಲೆಯ ಬಾಲೆಯ ಮಾಡಿ ಮಲವಳಿದು ಮುನಿ। ಕುಲವಗೆಡಿಸಿ ಸತ್ಕುಲನೆನಿಸಿದೆ। ಜಲಧಿಯೊಳಗೆ ಸೇತು ನಿಲಿಸಿ ಸಜ್ಜನರನಗೆ। ನೆಲೆ ವಾಸುದೇವವಿಠಲದೇವ ಪಾದಪದುಮ।।3।।

ಶರಣು ಸಕಲೋದ್ಧಾರ — ರಾಗ: ಶಹನ

ಶರಣು ಸಕಲೋದ್ಧಾರ। ಅಸುರ ಕುಲ ಸಂಹಾರ। ಅರಸು ದಶರಥ ಬಾಲ। ಜಾನಕೀ ಲೋಲ ।।ಪ।। ವಾಲಿ ಸಂಹಾರ। ವಾರಿಧಿಗೆ ನಟುಗಾರ। ಏಕಪತ್ನಿಯ ಶೀಲ ತುಳಸಿ ವನಮಾಲ।।1।। ಈ ಮುದ್ದು ಈ ಮುಖವು। ಈತನುವಿನ ಕಾಂತಿ, ಈ ಬಿಲ್ಲು ಈ ಬಾಣ ಈ ನಿಂತ ಭಾವ। ಈತಮ್ಮ ಈ ಸೀತೆ ಈ ಭಂಟರೀ ಭಾಗ್ಯ। ಆವ ದೇವರಿಗುಂಟು ಮೂರ್ಲೋಕ ದೊಳಗೆ। ಉಟ್ಟ ಪೀತಾಂಬರವು ಉಡಿಗೆಜ್ಜೆ ಮಾಣಿಕವು। ಕೊಟ್ಟು ನವರತ್ನ ಸರ ಕರುಣ ವಿರಲು। ಕೊಟ್ಟ ನಂಬಿಕೆ ತಪ್ಪ। ತನ್ನ ಭಕುತರಿಗೆಲ್ಲ। ಸೃಷ್ಟಿಯೊಳಗೆಣೆ ಕಾಣೆ ಕೌಸಲ್ಯ ರಾಮ।।2।। ಭಾವಿಸಲು ಅಯೋಧ್ಯ ಪಟ್ಟಣದಲಿ ವಾಸ। ಬೇಡಿದಿಷ್ಟಾರ್ಥಗಳ ಕೊಡುವೆನೆನುತಿರಲು। ರೂಢಿಯೊಳಗಧಿಕ ಚುಂಚನ ಕಟ್ಟೆಯಲಿ ನೆಲೆಸಿದ ಸ್ವಾಮಿ ಶ್ರೀ ಹಯವದನ ಪಾಲಿಸೋ ನಿಸ್ಸೀಮಾ।।3।।

ಶರಣು ಶ್ರೀ ವೈಕುಂಠನಾಯಕ — ರಾಗ: ಕಾಂಬೋಧಿ

ಶರಣು ಶ್ರೀ ವೈಕುಂಠನಾಯಕ। ಶರಣು ಶ್ರೀ ಪುರುಷೋತ್ತಮ।।ಪ।। ಶರಣು ಶ್ರೀಧರ ಗರುಡವಾಹನ। ಶರಣು ವೆಂಕಟನಾಯಕ।।ಅ.ಪ.।। ಆದಿದೇವ ಮುನೀಂದ್ರವಂದಿತ ಅಖಿಲ ಸುರಗಣ ಸೇವಿತ। ವೇದ ವೇದ್ಯ ವಿರಿಂಚಿ ಸನ್ನುತ ವೆಂಕಟೇಶ ನಮೋ ನಮೋ।।1।। ಶರಣು ಸುರಮುನಿ ಹೃದಯ ಪಾಲಕ ಶರಣು ಭಕ್ತರ ರಕ್ಷಕ। ಶರಣು ಶ್ರೀ ಹಯವದನ ಮುಕ್ತಿದಾ ಶರಣು ಓಂಕಾರ।।2।।

ಶರಣು ಶ್ರೀ ವೈಕುಂಠನಾಯಕ — ರಾಗ: ಕಾಂಬೋಧಿ

ಶರಣು ಶ್ರೀ ವೈಕುಂಠನಾಯಕ। ಶರಣು ಶ್ರೀ ಪುರುಷೋತ್ತಮ।।ಪ।। ಶರಣು ಶ್ರೀಧರ ಗರುಡವಾಹನ। ಶರಣು ವೆಂಕಟನಾಯಕ।।ಅ.ಪ.।। ಪರಮಪದ ಗೋವಿಂದ ಮಾಧವ। ಪದುಮನಾಭ ಜನಾರ್ದನ। ಧರಣಿಧರ ಕರಿವರನ ವಾಮನ। ವೈರಿಹರ ಬಲಿಭಂಜನ।।1।। ಜಲಜನೇತ್ರ ಮುಕುಂದ ಮುರಹರ। ಜ್ವಲಿತ ಚಕ್ರ ಗದಾಧರ। ಜಲಧಿಶಯನ ಉಪೇಂದ್ರ ಅಚ್ಯುತ। ಶೈಲಧರ ನಾರಾಯಣ।।2।। ಆದಿಯೋಗಿ ಮುನೀಂದ್ರ ವಂದಿತ। ನಿಖಿಲ ಸುರಗಣ ಸೇವಿತ। ವೇದವೇದ್ಯ ವಿರಿಂಚಿ ಸನ್ನುತ। ವಿಜಯ ವಿಠ್ಠಲ ನಮೋ ನಮೋ।।3।।

ಶರಣು ಶರಣ್ಯರ ಸುರತರುವೆ ನಿನ್ನ

ಶರಣು ಶರಣ್ಯರ ಸುರತರುವೆ ನಿನ್ನ। ಚರಣಶರಣರಿಗೆ ಭಯವಿಲ್ಲ।।ಪ।। ದ್ರುಪದಾತ್ಮಜೆಯನಸುರ ಪಿಡಿದೆಳೆ ತಂ। ದಪಮಾನಕಾಗಿ ಉಡುಗೆ ಸೆಳೆಯೆ। ಅಪುಶಯನ ಮುಕುಂದ ಅಪಹಾಸ ವಾಯಿತೆಲ ಪರ। ಮಪೀತಾಂಬರ ಒದಗಿತಂದು ದೇವಾ।।1।। ಮುದದೊಳಂತ್ಯಜ ತರುಣಿಗೆ ಸೋತು ಪರ। ಮಾಧಮಜಾಮಿಳ ತನ್ನಂತ್ಯಕಾಲದಿ। ಮುದದಿ ಕಡೆಯ ಸುತನ ನಾರಗ ಬಾರೆಂ। ದೊದರಲು ಪೊರೆದೆ ದಾಸನ ಮರಳಿ।।2।। ವಿಗಡ ಮುನಿಶಾಪಕೆ ಇಂದ್ರದ್ಯುಮ್ನ ಮದ। ನಾಗನಾಗಿ ನೆಗಳ ಬಾಯಿಗೆ ಸಿಲುಕೆ। ಅಘಹರ ಸಲಹೆಂದರೆ ವಾಮಕರದಿಂದ। ನೆಗಹಿದ ಪ್ರಸನ್ನ ವೆಂಕಟರನ್ನ।।3।।

ಶರಣು ಶ್ರೀ ಗುರುನಾಥ ಸುರಮುನಿಜನದಾತ

ಶರಣು ಶ್ರೀ ಗುರುನಾಥ ಸುರಮುನಿಜನದಾತ। ಮೂರು ಲೋಕೊಂದಿತ ಪರಮ ಹಿತ॥1॥ ನಿನ್ನುಪಕಾರಪೂರ್ಣ ಏನಾದರುತ್ತೀರ್ಣ। ನೀನೆ ದಯಾಕರಣ ದೀನೋದ್ಧಾರಣ॥2॥ ಮನದ ಮಂಗಳ ನೀನು ನೆನೆವರ ಕಾಮಧೇನು। ದೀನ ಮಹಿಪತಿಗಿನ್ನು ನೀನೆ ನೀನು॥3॥

ಶರಣರ ಕಾಯಕವೇ ಮಾಡಿ

ಶರಣರ ಕಾಯಕವೇ ಮಾಡಿ। ಗುರುಧರ್ಮ ಕಾಯಕವನೆ ಮಾಡಿ॥ಪ॥ ಕಂದೋಪ ಮನ್ಯಾನಂದನ ಪಡೆದಾ॥1॥ ಐದು ವರುಷದ ಮಗವಿಡಿದ ದೃಢಾ॥2॥ ಇಳೆಯೊಳು ಕರಿರಾಜ ನೆಲೆಗೊಂದು ವಿಡಿದಾ॥3॥ ಐವರಂಗನೆ ಭಾವದಿ ನುಡಿದಾ॥4॥ಭಾರವಪ್ಪಿಸಿ ಕೊಟ್ಟಾ ಕೀರಿಟಿ ಜಡಿವಾ॥5॥ ಅಂದಿಗಿಂದಿಗೆ ಸಾಧುವೃಂದವು ನಡದಾ॥6॥ ಮಹಿಪತಿಜ ಹೇಳಿದ ವಿಹಿತಾಪಿಡಿದಾ॥5॥

ಶರಣೆಂಬೆ ಶ್ರೀ ಗುರುವೆ

ಶರಣೆಂಬೆ ಶ್ರೀ ಗುರುವೆ। ಶರಣೆಂಬೆ ವರಗುರುವೆ। ಶರಣು ಶರಣೆಂಬೆ ಶ್ರೀ ಗುರುಸಿದ್ದಲಿಂಗಾ॥ಪ॥ ಶರಣು ಶ್ರೀ ಎಡೆಯೂರ ಗುರುಸಿದ್ದಲಿಂಗಾ॥ಅ.ಪ॥ ಕಾಯಕವ ಮಾಡಿದೆ ಕರ್ಮವನು ಅಡಗಿಸಿದೆ। ಧರ್ಮದೇವತೆಯಂತೆ ನೀನಿಂದು ಮೆರೆದೆ। ಧರ್ಮನೀತಿಯ ನಿಲುವ ನೀನೇರಿಮೆರೆದೆ। ಧರ್ಮಾತ್ಮರನು ಕಂಡು ನೀನವರಿಗೊಲಿದೆ॥1॥ ಯೋಗಿವರ್ಯನು ನೀನು ಪುಣ್ಯಮೂರ್ತಿಯು ನೀನು। ವಿಶ್ವಬಂಧುವು ನೀನು ವಿಶ್ವಪಾಲನು ನೀನು॥ ವಿಶ್ವಜ್ಯೋತಿಯು ನೀನು ವಿಶ್ವಮೂರ್ತಿಯು ನೀನು। ವಿಶ್ವವಂದ್ಯನು ನೀನು ಮುಕ್ತಿದಾತನು ನೀನು॥2॥ ನೀನಾರು ನಾನಾರುಎಂಬುದನು ಅರುಹಿದೆ। ಜನ್ಮಜನ್ಮಾಂತರದ ಮರ್ಮವನು ತಿಳುಹಿದೆ। ಸತ್ಯಧರ್ಮವ ನರುಹಿ ಧರ್ಮಾತ್ಮನೆನಿಸಿದೆ। ವಿಶ್ವಪ್ರೇಮವ ತೋರಿವಿಶ್ವಗುರು ಎನಿಸಿದೆ॥3॥ ದೀನಬಂಧುವು ನೀನು ಪಾವನಾತ್ಮನು ನೀನು। ಕರುಣಾಳು ಎಡೆಯೂರ ಪುಣ್ಯಮೂರ್ತಿಯು ನೀನು। ಶಿವಯೋಗಿ ಸಿದ್ಧಕುಲ ಚಕ್ರವರ್ತಿಯು ನೀನು। ಸರ್ವಲಿಂಗಾಂಗ ಲೀಲಾವಿನೋದನು ನೀನು। ಶರಣು ಶರಣೆಂಬೆ ಶ್ರೀ ಗುರು ಸಿದ್ಧಲಿಂಗಾ॥4॥

ಶರಣು ಜನರ ಕಲ್ಪತರುವೆ ನಿನ್ನ

ಶರಣು ಜನರ ಕಲ್ಪತರುವೆ ನಿನ್ನ। ಕರುಣಾದಿ ಪೊರೆ ಎನ್ನ ಗುರುವೇ॥ಪ॥ ಶರಣರಿಲ್ಲದೆ ಕರುಣೆಸೆಂದು। ಶರಣು ಪೊಕ್ಕೆನೊ ಚರಣ-ಕಮಲಕೆ। ಶರಣನೆಂದೂ ಕರುಣದಿಂದಲಿ। ಕರುಣೆಸೆನ್ನನು ಕರುಣಾಸಾಗರ॥ಅ.ಪ.॥ ತಾಪತ್ರಯದಿ ಬಹು ಬೆಂದೇ ಭವ ಕೂಪಾರದೊಳಗತಿ ನೋಂದೇ। ಪಾಪಮೋಚಕ ನಿಷ್ಪಾರಿ-ಜನರ ಪಾಲ। ಕಾಪಾಡೋ ನೀ ಎನ್ನ ಅಪಾರ-ಮಹಿಮನೆ । ದ್ವಾಪರದಿ ಯದುವರನು ಸಾಂ ದೀಪಪುತ್ರನ ತೋರಿ ಕಾಯ್ದನು। ಭೂಪ ಬಕನಳಿದು ಸಲಹಿದನಾಪರಿಯಲಿ ಎನ್ನ ಸಲಹೋ॥1॥ಕಾಮಿತಫಲದ ನೀನೆಂದೂ ಬಲು-ಪ್ರೇಮಾದಿ ಬಳಿಗೆ ನಾ ಬಂದೂ। ಸ್ವಾಮಿ ನೀ ಗುರುಸಾರ್ವಭೌಮ ನಿನ್ನಂಘ್ರಿಯುಗ- ತಾಮರಸವ ಮನೋ-ಧಾಮಾದಿ ನಿಲಿಸೆಂದೆ। ರಾಮ ಕೌಶಿಕ ಮುಖವ ಕಾಯ್ದನು। ಭೀಮ ವಿಪ್ರರ ಭೀತಿ ಬಿಡಿಸಿದ। ಧೂಮಕೇತನನುಂಡು ಕೃಷ್ಣನು। ಅಮಹದ್ಭಯ ಕಳದ ತೆರದಿ॥2॥ ತಾತ ನಿನ್ನನು ಬಾಧೆ ಬಡಿಸೇ ಶಿರಿ।ನಾಥ ತಾ ಬಂದಾಗ ಬಿಡಿಸೆ। ದಾತ ಗುರುಜಗನ್ನಾಥ ವಿಠಲನತಿ। ಪ್ರೀತಿಯಿಂದಲಿ ನಿನ್ನ ಮಾತು ಕೇಳಿದತೆರ। ಮಾತು ಲಾಲಿಸಿ ಕಾಯೊ ಯತಿಕುಲ ನಾಥ ಎನ್ನಪರಾಧ ನೋಡದೆ ಭೀತಿಯನು ಸದೆದು ಪಾಲಿಸ। ನಾಥ ರಕ್ಷಕನಲ್ಲೆ ಗುರುವರ॥3॥

ಶರಣಜನರ ತನ್ನ ಕರುಣದಿಂದಲಿ ಕಾಯ್ವ

ಶರಣಜನರ ತನ್ನ ಕರುಣದಿಂದಲಿ ಕಾಯ್ವ। ಕರುಣಾಸಾಗರನ ನೋಡಿರೈ॥ಪ॥ ತರುಣಾರ್ಕನಿಭ ಸುಪರಣವಾಹನ ಗುಣ

ವರಣನ ಮಾಡುವ ಕರ್ಮಹೀನಾಂಶನ॥ಅ.ಪ॥ ನಾನಾವಿಧದ ಫಲ ದಾನಮಾಡುವ ಸುರ ಧೇನು ನಿನಗೆ ಸೋತು ಪೋಯಿತಯ್ಯಾ। ಮಾನನಿಧಿಯೆ ಎನ್ನ ನೀನೇ ಕಾಯೋ ಯೆನುತನುರಾಗದಿ ನಂಬಿದೆ। ನಿನ್ನ ಸೇವದಿ ರತನ। ಮಾಡೊ ಗಾದೀ। ನಾ ನಿನ್ನ ಪದಕಭಿನಮಿಸಿ ಬೇಡುವೆನಯ್ಯ ಮಹರಾಯಾ॥ ಕರಪಿಡಿದು ಕಾಯೊ ನೀ ಎನ್ನ ಗುರುರಾಯಾ। ಹೀನ ಭವದೊಳು ಬಾಯಿ ಬಿಡುವೆ ನಾನಯ್ಯಾ ಇದಕೇನುಪಾಯಾ। ನೀನೆ ಚಿಂತಿಸೊ ಸಂತರೊಡಯನೆ ನಾನು ಬಲ್ಲೆನೆ ಮೂಢಮಾನವ। ದೀನ-ಜನ-ಮಂದಾರ-ಶಾಶ್ವತ। ದಾನಿ ನಿನಪದ ಧ್ಯಾನಮಾಡಿಸೋ॥1॥ ಸೇವಕ ಜನರನ್ನ ಕಾವೋನೀತನು ಎಂಬೊ। ಭಾವಪೂರ್ವಕ ನಿನ್ನ ಸೇವಿಪೆನೋ। ಆವಕಾಲದಲಿಂದ ತವ ಪಾದಧ್ಯಾನವ। ಭಾವಿಸಿದ್ಯನ ಕಾರ್ಯ ಮಾಡುವ। ಕರುಣದಲೆನ್ನ ನೋಡುವ। ಸೇವಕನಿಷ್ಟ ನೀಡುವಾ। ನೀನಿರಲು ನಿತ್ಯ ಆವ ಭಯ ಎನಗೇನು ಇಲ್ಲಾ॥ ನಂಬಿದರೆ ಕೈ ಬಿಟ್ಟು ಪೋಗುವವ ನೀನಲ್ಲಾ। ದೇವದಾನವರಂಜಿಕೆಯು ಎನಗಿಲ್ಲಾ। ಈ ಮಾತು ಪುಶಿಯಲ್ಲಾ। ಜೀವರುತ್ತಮ ಮುಖ್ಯವಾಯು। ದೇವನಾವೇಶದಿಂದಲಿ। ದೇವ-ಭಾವವನೈದಿ ಲೋಕದಿ। ಈ ವಿಧದಿ ಮಹಿಮವ ತೋರಿ ಮೆರೆವ॥2॥ ಪಾತಕವನಕುಲ ವೀತಿಹೋತ್ರನು ಎನಿಸೀ। ದಾತ ಜನರಘ ದೂರಗೈಸುವಿ। ದಾತ ಗುರು ಜಗನ್ನಾಥವಿಠ್ಠಲಗತಿ। ಪ್ರೀತನಾಗಿ ಮೆರೆವೋ ದಾತನು। ಎನಗೆ ನಿಜಜೀಯಾನೋ। ದೂತಜನಕತಿ ಪ್ರೇಯಾನೊ। ತಾನೆನಿಸಿ ವೀತಭಯ ಭೂತಾದಿ ಭಾದೆ ಕಳೆವಾ। ಸತಿಯರಿಗೆ ತಾ ಸುತರನ್ನೇ ಕೊಡುವಾ। ಈತ ನೀಡುವನಹಿಕ ಪರಲೋಕ ಸುಖವಾ-ಇದು ಸರ್ವ ಸಮ್ಮತವೋ। ಜಾತರೂಪ ಸುಶಯ್ಯ ತನಯ ದೂತನಾದವಗೇನು ಭಯ ನಿರ್ಭೀತನಾಗಿದ್ದೆಲ್ಲ ಕಾರ್ಯವನೀತೆರದಿ ತಾ ಮಾಡುತಿರುವಾ॥3॥

ಶರಣು ಶರಣು ಗುರುದೇವ ನಾ ನಿನಗೆ — ರಾಗ: ಶುಭಪಂತುವರಾಳಿ

ಶರಣು ಶರಣು ಗುರುದೇವ ನಾ ನಿನಗೆ। ಶರಣು ಶರಣು ಗುರುದೇವ॥ ಕರುಣಾಮೂರ್ತಿಯೇ। ಕರುಣಾ ಸಾಗರನೇ। ಕಲ್ಮಶವು ಕಳೆವ। ಕಮನೀಯಾನನನೆ॥ಶ॥ ಚಿನ್ಮಯ ರೂಪನೆ। ಚಿದ್ಘನ ಮೂರ್ತಿಯೇ। ದಿವ್ಯದಿಗಂಬರ ದತ್ತ ಸ್ವರೂಪನೆ। ನಂಬಿದ ಭಕ್ತರ ಪಾಲಿಸುತಿರುವ। ಶಾರದದಾಸಿ ವಂದಿತ ಗುರುವರನೆ॥ಶರಣು॥ ನಿನ್ನಯ ಪಾದ ಸೇವೆಯ ಕರುಣಿಸು। ನಿನ್ನಯ ನಾಮದ ಸ್ಮರಣೆಯೊಳಿರಿಸು। ಭಕ್ತಿಯ ಭಾವವ ಚಿತ್ತದಿ ನಿಲಿಸು। ಶಾರದದಾಸಿ ವಂದಿತ ಗುರುದತ್ತನೆ ॥ಶರಣು॥

ಶರಣು ಚಿನ್ಮಯರೂಪ ಅತ್ರಿಮುನಿ ಕುಲದೀಪ

ಶರಣು ಚಿನ್ಮಯರೂಪ ಅತ್ರಿಮುನಿ ಕುಲದೀಪ। ಶರಣು ವಿಶ್ವಂಭರನೇದತ್ತ ದಿಗಂಬರನೆ॥ಪ॥ ಶರಣು ನೆನುವರ ಸಾರಿ ಸುಳಿದು ಹೊರೆವ ಉದಾರಿ। ಶರಣು ದುರಿತಾಪಹಾರಿ। ಶರಣು ಸಿಂಹಾದ್ರೀಶ ಯೋಗಮಾರ್ಗ ಪ್ರಕಾಶ। ಶರಣು ಸರ್ವರ ಗುರುವೆ ಎನಿಸಿ ಲೋಕದಿ ಮೆರೆವೆ। ಶರಣು ಮಹಿಪತಿ ನಂದನನ ನೋಡದವೆ ಕುಂದಾ। ಸಲಹು ಪದ ದೋರಿ ದ್ವಂದ್ವಾ॥1॥

ಶರಣು ಶರಣು ಧನ್ವಂತರಿ ತಮೋಗುಣನಾಶಾ

ಶರಣು ಶರಣು ಧನ್ವಂತರಿ ತಮೋ ಗುಣನಾಶಾ। ಶರಣು ಆರ್ತಜನ ಪರಿಪಾಲಕದೇವಾ। ತರುವೆ ಭವ ತಾಪಹರಣ ದಿತಿಸುತ। ಹರಣ ಮೋಹಕ ಲೀಲಾ ಪರಮಪೂರ್ಣಬ್ರಹ್ಮ॥1॥ ಬ್ರಹ್ಮ ಉದ್ಧಾರಕ ಉರುಪರಾಕ್ರಮ। ಉರುಪರಾಕ್ರಮ ಉರಗಶಾಯಿ। ವರಕಿರೀಟ ಮಹಾಮಣಿ ಕುಂಡಲಕರ್ಣ। ಮಿರುಗುವ ಹಸ್ತಕಂಕಣ ಹಾರಪದಕ॥2॥ ತಾಂಬರ ಕಾಂಚೀಪೀತಾಂಬರ ಚರಣಭೂಷಾ। ಸಿರಿವತ್ಸಲಾಂಛನ ವಿಜಯ ವಿಠಲ ರಾಯಾ। ತರುಣಗಾತ್ರರ ಜ್ಞಾನಮುದ್ರಾಂಕಿತ ಹಸ್ತ॥3॥

ಶರಣು ಶರಣು ಮತ್ಸ್ಯಕೂರ್ಮಕ್ರೋಢ — ರಾಗ: ನಾಟಿ-ತ್ರಿಪುಟತಾಳ

ಶರಣು ಶರಣು॥ಪ॥ ಶರಣು ಮತ್ಸ್ಯ ಕೂರ್ಮಕ್ರೋಢ ನರಹರಿ ವಟು ಭಾರ್ಗವ। ಶರಣು ರಾಘವ ಕೃಷ್ಣ ಬುದ್ಧ ಶರಣು ಕಲ್ಕಿ ರೂಪನೆ॥1॥ ನಂಬಿದೆ ನಾ ನಿನ್ನ ಕೇಶವ। ನಾರಾಯಣನೇ ಮಾಧವ। ಅಂಬುಜಾಕ್ಷ ಗೋವಿಂದ ವಿಷ್ಣು। ಸಂಭ್ರಮದಿ

ಮಧುಸೂದನ॥2॥ ಕರುಣದಲಿ ರಕ್ಷಿಸು ತ್ರಿವಿಕ್ರಮ। ವರದ ವಾಮನ ಶ್ರೀಧರ। ಪರಮ ಪಾವನ ಹೃಷೀಕೇಶನೇ। ಪದ್ಮನಾಭ ದಾಮೋದರ॥3॥ ವಾಸವಾರ್ಚಿತ ಸಂಕರುಷಣ। ವಾಸುದೇವ ಪ್ರದ್ಯುಮ್ನನೆ। ಶ್ರೀಷ ಅನಿರುದ್ಧ ಪುರುಷೋತ್ತಮ। ನೀ ಸಲಹೊ ಅಧೋಕ್ಷಜ॥4॥ ಶೃತಿ ಗೋಚರಾ ನಾರಸಿಂಹಾ। ಚ್ಯುತ ಜನಾರ್ಧನುಪೇಂದ್ರನೇ। ಚತುರವಿಂಶತಿ ನಾಮದಲ್ಲಿಹ। ಚತುರ ಹರಿ ಶ್ರೀಕೃಷ್ಣನೇ॥5॥

ಶರಣು ಶರಣು ಶ್ರೀ ಗಜಮುಖನೆ (ಶನಿದೇವರ ಕಥೆ)

ಶರಣು ಶರಣು ಶ್ರೀ ಗಜಮುಖನೆ। ವಿಘ್ನವ ಹರಿಸುವ ಶಿವಸುತನೆ। ಚರಣಕೆ ನಮಿಸುವೆ ಗೀರ್ವಾಣಿ। ವಾಣಿಯ ಕರುಣಿಸು ವೀಣಾಪಾಣಿ। ಗುರುಗಳ ಚರಣಕೆ ನಮಿಸುವೆನು। ಶನಿರಾಜ ಮಹಿಮೆಯ ಬರೆಯುವೆನು। ಗ್ರಹಗಳ ಪಾದಕೆ ಶರಣೆಂದೇ। ಅನುಗ್ರಹ ನೀಡಿರಿ ನಮಗೆಂದೇ॥ ಶರಣು ಶರಣು ಶ್ರೀ ಶನಿರಾಜ। ಶರಣರ ಪಾಲಿಪ ಶನಿರಾಜ। ಪರಶಿವ ರೂಪನೆ ಶನಿರಾಜ। ಪ್ರಳಯದ ನೇತ್ರನೆ ಶನಿರಾಜ। ಕಾರಣ ಪುರುಷನೆ ಶನಿರಾಜ। ಜಗದಿ ಅಜೇಯನೆ ಶನಿರಾಜ। ರವಿಯ ಕುಮಾರನೆ ಶನಿರಾಜ। ಛಾಯಾದೇವಿಯ ಸುತನೆ ಶನಿರಾಜ॥ ಹಿಂದಿನ ಯುಗದಲಿ ಶನಿರಾಜ। ಮಾನ್ಯತೆ ಗ್ರಹಗಳೆ ಶನಿರಾಜ। ಜನರು ಕೂಡಿದರೆ ಶನಿರಾಜ। ಕೋಪದಿ ಗ್ರಹಗಳು ಶನಿರಾಜ। ಲೋಕಕೆ ಬರುವನು ಶನಿರಾಜ। ಜಾಗ್ರತೆ ಒದಗಿಸೆ ಶನಿರಾಜ। ನೊಂದರು ಪ್ರಜೆಗಳು ಶನಿರಾಜ। ಮರೆತು ಗ್ರಹಗಳ ಶನಿರಾಜ॥ ಕಾಮಕೆ ಋಷಿಗಳು ಶನಿರಾಜ। ಅನ್ನಕೆ ಜನಗಳು ಶನಿರಾಜ। ಗೌತಮ ಋಷಿಗಳು ಶನಿರಾಜ। ಆಶ್ರಯ ಪಡೆದರು ಶನಿರಾಜ। ತಪಸಿನ ಬಲದಿಂ ಶನಿರಾಜ। ಋಷಿಗಳು ಧ್ಯಾನದಿಂ ಶನಿರಾಜ। ಜಗದಲಿ ಕ್ಷಾಮಕೆ ಶನಿರಾಜ। ಗ್ರಹಗಳೆಕಾರಣ ಶನಿರಾಜ॥ ಎಂಬುದು ಅರಿಯುತ ಶನಿರಾಜ। ನೊಂದರು ಮನದಲಿ ಶನಿರಾಜ। ಕೋಪದಿ ಗೌತಮರು ಶನಿರಾಜ। ಶಾಂತಿಯ ಮರೆತರು ಶನಿರಾಜ। ಅರಿಯದೆ ಗೈದರು ಶನಿರಾಜ। ಗ್ರಹಗಳ ಅಪಮಾನ ಶನಿರಾಜ। ಅದರಿಂ ಕುಪಿತನು ಶನಿರಾಜ। ಆದೆಯೋ ರವಿಸುತ ಶನಿರಾಜ॥ ಕಲಿಯುಗ ಬರಲು ಶನಿರಾಜ। ಗ್ರಹಗಳ ನಾಯಕ ಶನಿರಾಜ। ಆಗುವೆ ಛಾಯಾಸುತ ಶನಿರಾಜ। ಎನ್ನುತ ಹೇಳಿದೆಯಾ ಶನಿರಾಜ।ಗೌತಮ ಕ್ಷೇತ್ರದಲಿ ಶನಿರಾಜ। ನೆಲೆಸುವೆ ನಾನೆಂದ ಶನಿರಾಜ। ತಪವನು ತಿಳಿಯದೆ ಶನಿರಾಜ। ಜಪವನು ಮಾಡದೆ ಶನಿರಾಜ॥ ಸಾಮಾನ್ಯ ಮಾನವನ ಶನಿರಾಜ। ಶಿಷ್ಯನ ಮಾಡಿಕೊಂಡು ಶನಿರಾಜ। ಏನನ್ನು ಅರಿಯದ ಶನಿರಾಜ। ಶಿಷ್ಯನ ಕಡೆಯಿಂದ ಶನಿರಾಜ। ಅದ್ಭುತ ಕಾರ್ಯವನು ಶನಿರಾಜ। ಅವನಿಂ ಮಾಡಿಸುತ ಶನಿರಾಜ। ಶಿಷ್ಯನ ಕೀರ್ತಿಯನು ಶನಿರಾಜ। ನಿಮ್ಮಯ ಮಹಿಮೆಯ ಶನಿರಾಜ॥ ಜಗದಿ ಬೆಳಗುವೆ ಶನಿರಾಜ। ಎನ್ನುವ ಶಪಥವ ಶನಿರಾಜ। ಮಾಡಿದಿರಿ ನೀವಂದು ಶನಿರಾಜ। ಋಷಿಗಳ ಮುಂದೆಯೆ ಶನಿರಾಜ। ಅದುವೆ ಕಾರಣವು ಶನಿರಾಜ। ನೀವಿಲ್ಲಿ ನೆಲೆಸಲು ಶನಿರಾಜ। ಶಿಷ್ಯನ ವೆಂಕಟೇಶ ಶನಿರಾಜ। ಪಾತ್ರನು ಅನುಗ್ರಹ ಶನಿರಾಜ॥ ನಿಮ್ಮಯ ಭಕುತನು ಶನಿರಾಜ। ನಿಮ್ಮನೆ ಭಜಿಸುವೆ ಶನಿರಾಜ। ಅವನಲಿ ನೆಲೆಸಿ ಶನಿರಾಜ। ಅನುಗ್ರಹ ಮಾಳ್ಪಿರಿ ಶನಿರಾಜ। ಭಕ್ತಿಗೆ ಒಲಿಯುವ ಶನಿರಾಜ। ಬಾಧೆಯ ಬಿಡಿಸುವ ಶನಿರಾಜ। ಗ್ರಹಗಳ ನಾಯಕ ಶನಿರಾಜ। ಗ್ರಹಚಾರ ಕಳೆವ ಶನಿರಾಜ॥ ತಿಲಾಧಾನ್ಯ ಪ್ರಿಯನೆ ಶನಿರಾಜ। ಛಲದಿಂದ ಕಾಯಕ ಶನಿರಾಜ। ಪರೀಕ್ಷಿಸಿ ನೋಡುವ ಶನಿರಾಜ। ಅನುಗ್ರಹ ಮಾಡುವ ಶನಿರಾಜ। ದಕ್ಷಿಣ ಕಾಶಿಯಲಿ ಶನಿರಾಜ। ತಕ್ಷಣ ಒಲಿಯುವ ಶನಿರಾಜ। ಕೂಷ್ಮಾಂಡ ಪ್ರಿಯಕರ ಶನಿರಾಜ। ಬ್ರಹ್ಮಾಂಡ ಚಲಿಸುವ ಶನಿರಾಜ॥ ವೃಷಭಾ ತೀರದಲಿ ಶನಿರಾಜ। ಋಷಿಗಳ ಕ್ಷೇತ್ರದಿ ಶನಿರಾಜ। ನಿಮ್ಮಯ ದೇವಾಲಯ ಶನಿರಾಜ। ಅಂದದಿ ಮೆರೆವುದು ಶನಿರಾಜ। ಸಿದ್ಧಿಯ ಗಣಪತಿ ಶನಿರಾಜ। ಮುದ್ದಾಗಿ ನೆಲೆಸಿಹ ಶನಿರಾಜ। ಗುರುಕಾಲ ಭೈರವ ಶನಿರಾಜ। ಪರಮ ರಕ್ಷಕರು ಶನಿರಾಜ॥ಆದಿದೇವ ಶನಿರಾಜ। ಅಧಿಪತಿ ಸೃಷ್ಟಿಗೆ ಶನಿರಾಜ। ಪ್ರತಿ ಆದಿದೇವನು ಶನಿರಾಜ। ಯಮರಾಜ ಧರ್ಮನು ಶನಿರಾಜ। ಎಡದಲಿ ಬ್ರಹ್ಮನು ಶನಿರಾಜ। ಬಲದಲಿ ಧರ್ಮನು ಶನಿರಾಜ। ಮುಂಗಡೆ ಗಣಪತಿ ಶನಿರಾಜ। ಭೈರವ ಗುರುಗಳು ಶನಿರಾಜ॥ ಮಧ್ಯದಿ ನೆಲಸಿಹ ಶನಿರಾಜ। ಕಾರಣ ಪುರುಷನೆ ಶನಿರಾಜ। ಶ್ರದ್ಧೆಯಿಂ ಪ್ರದಕ್ಷಿಣೆ ಶನಿರಾಜ। ಭಕ್ತಿಯಿಂ ನಮಸ್ಕಾರ ಶನಿರಾಜ। ಮಾಡುವ ಜನರಿಗೆ ಶನಿರಾಜ। ನೀಡುವೆ ವರಗಳ ಶನಿರಾಜ। ಇಷ್ಟಾರ್ಥ ಸಲಿಸುವ ಶನಿರಾಜ। ಕಷ್ಟವ ಹರಿಸುವ ಶನಿರಾಜ॥ ಮಕ್ಕಳ ಫಲವೀವೆ ಶನಿರಾಜ। ದುಃಖವ ಕಳೆಯುವ ಶನಿರಾಜ। ಜೀವನ ಕರುಣಿಪೆ ಶನಿರಾಜ। ಆಯುವ ಕರುಣಿಪೆ ಶನಿರಾಜ। ಶಮಿವೃಕ್ಷ

ನಿವಾಸ ಶನಿರಾಜ। ಶಮಿಪತ್ರ ಪ್ರೀತನು ಶನಿರಾಜ।।। ನಿಮ್ಮಯ ಮಹಿಮೆಯದು ಶನಿರಾಜ। ಯಾರಿಗೂ ತಿಳಿಯದು ಶನಿರಾಜ।। ತಾರೆಯ ಮರೆಯಲಿ ಶನಿರಾಜ। ತಪ್ಪದೆ ನೆಲೆಸುವೆ ಶನಿರಾಜ। ಬನ್ನಿಯ ಮರದಲಿ ಶನಿರಾಜ। ಪ್ರೀತಿಯಿಂ ನೆಲಸುವೆ ಶನಿರಾಜ। ಕಾಗೆಯ ರಥದಲಿ ಶನಿರಾಜ। ಲೋಕವ ಚಲಿಸುವ ಶನಿರಾಜ। ದ್ವಾದಶ ರಾಶಿಯಲಿ ಶನಿರಾಜ। ಸತತ ಚಲಿಸುವ ಶನಿರಾಜ।। ಸಕಲ ಚರಾಚರ ಶನಿರಾಜ। ನಿಮ್ಮಯ ವಶವದು ಶನಿರಾಜ। ನಿಮ್ಮಯ ಮಹಿಮೆಯ ಶನಿರಾಜ। ವರ್ಣಿಪೆ ಅಸದಳ ಶನಿರಾಜ। ಹರಿಹರ ಬ್ರಹ್ಮರ ಶನಿರಾಜ। ಪರೀಕ್ಷಿಸಿ ಕಾಡಿದೆ ಶನಿರಾಜ। ಸುರನರರೆಲ್ಲರೂ ಶನಿರಾಜ। ಪರಾಭವ ಆದರು ಶನಿರಾಜ।। ಸುರಗುರು ದೇವನು ಶನಿರಾಜ। ಗುರಿಯಾದ ಶೂಲಕೆ ಶನಿರಾಜ। ಭೃಗುಸುತ ಶುಕ್ರನು ಶನಿರಾಜ। ನೇತ್ರವು ಕಳೆದೆಯೋ ಶನಿರಾಜ।ಗ್ರಹರೂಪಿ ಚಂದ್ರನು ಶನಿರಾಜ। ಕ್ಷೀಣತೆಯ ಪಡೆದ ಶನಿರಾಜ। ನಾರದ ಮಹಾಮುನಿ ಶನಿರಾಜ। ಮಕ್ಕಳ ಪಡೆದರು ಶನಿರಾಜ।। ಗಿರಿಜೆ ಕುಮಾರನು ಶನಿರಾಜ। ನೀಗಿದ ಶಿರವನು ಶನಿರಾಜ। ಜಗವನು ರಕ್ಷಿಪ ಶನಿರಾಜ। ಯದುಪತಿ ಕೃಷ್ಣನು ಶನಿರಾಜ। ದುಃಖವ ಪಡೆದನು ಶನಿರಾಜ। ರಾಧೆಯ ಮರೆಮಾಡೆ ಶನಿರಾಜ। ಇಂದ್ರನ ಸೃಷ್ಟಿಸಲು ಶನಿರಾಜ। ಹೊಂದಿದ ಯೋನಿಗಳ ಶನಿರಾಜ।। ಹರಿಹರ ಬ್ರಹ್ಮರ ಶನಿರಾಜ। ಮೂವರು ದೇವಿಯರು ಶನಿರಾಜ। ಅನುಸೂಯಾದೇವಿಯಿಂ ಶನಿರಾಜ। ಪರಾಭವ ಆದರು ಶನಿರಾಜ। ನಳ ಮಹಾರಾಜನ ಶನಿರಾಜ। ಸೇವಕನ ಮಾಡಿದೆ ಶನಿರಾಜ। ಹರಿಶ್ಚಂದ್ರ ಭೂಪನು ಶನಿರಾಜ। ಹೆಂಡತಿಯ ಮಾರಿದ ಶನಿರಾಜ।। ಮಗನನು ಮಾರಿದ ಶನಿರಾಜ। ಮಸಣವ ಕಾದನು ಶನಿರಾಜ। ಪುರೂರವ ರಾಜನು ಶನಿರಾಜ। ದಶಕಂಠ ರಾವಣ ಶನಿರಾಜ। ಪಡೆದನು ಮರಣ ಶನಿರಾಜ। ಪಾಂಡು ಕುಮಾರರು ಶನಿರಾಜ। ರಾಜ್ಯವ ಕಳೆದರು ಶನಿರಾಜ। ಹದಿನಾಲ್ಕು ವರ್ಷದ ಶನಿರಾಜ।। ವನವಾಸ ಗೆದ್ದರು ಶನಿರಾಜ। ಚಕ್ರವರ್ತಿ ವಿಕ್ರಮ ಶನಿರಾಜ। ಜರೆಯಲು ಗರ್ವದಿ ಶನಿರಾಜ। ಮೊದಲಲೆ ತಿಳಿಸಿ ಶನಿರಾಜ। ಗುರಿಮಾಡ್ದೆ ದುಃಖಕೆ ಶನಿರಾಜ। ಆರಿಸಿ ಕುದುರೆಯ ಶನಿರಾಜ। ರಾಜ್ಯವ ಬಿಡಿಸಿದೆ ಶನಿರಾಜ। ಮಾಯದ ಕುದುರೆಯಿಂ ಶನಿರಾಜ।। ಬೀರಿದೆ ಛಾಯೆಯ ಶನಿರಾಜ। ವೈಶ್ಯನ ಮನೆಯಲಿ ಶನಿರಾಜ। ಶಿಲ್ಪದ ಹಂಸೆಯಿಂದ ಶನಿರಾಜ। ಮಾಡಿದೆ ನುಂಗುವಂತೆ ಶನಿರಾಜ। ಮುತ್ತಿನ ಹಾರವನು ಶನಿರಾಜ। ಮಹಾರಾಜ ವಿಕ್ರಮ ಶನಿರಾಜ। ಅಪರಾಧಿ ಆದನು ಶನಿರಾಜ। ನಿಜವನು ಹೇಳಲು ಶನಿರಾಜ। ಜಗಕೆಲ್ಲ ಸೋಜಿಗ ಶನಿರಾಜ। ದಂಡಿಸಿ ಅವನನು ಶನಿರಾಜ। ಕೈಕಾಲ್ ಖಂಡಿಸಿದೆ ಶನಿರಾಜ। ಬಹುವಿಧ ಕಷ್ಟವ ಶನಿರಾಜ। ಸಹಿಸಿದ ವಿಕ್ರಮ ಶನಿರಾಜ। ಶರಣಾಗೆ ನಿಮ್ಮನು ಶನಿರಾಜ। ಮನ್ನಿಸಿದೆ ಅವನನು ಶನಿರಾಜ।। ಕೈಕಾಲ್ ಕರುಣಿಸಿ ಶನಿರಾಜ। ಮೆಚ್ಚಿದೆ ವಿಕ್ರಮನ ಶನಿರಾಜ। ರಾಜ್ಯವ ಕೊಡಿಸಿದೆ ಶನಿರಾಜ। ಕೀರ್ತಿಯ ನಿಲಿಸಿದೆ ಶನಿರಾಜ। ನಿನ್ನಯ ಮಹಿಮೆಯ ಶನಿರಾಜ। ಲೋಕದಿ ಬೆಳಗಿದೆ ಶನಿರಾಜ। ಕರಿಯ ರೂಪಿನವ ಶನಿರಾಜ। ಕಸ್ತೂರಿ ತಿಲಕನೆ ಶನಿರಾಜ। ನೀಲವರ್ಣ ಪ್ರಿಯನೆ ಶನಿರಾಜ। ನೀಲಾಂಜನ ಧರನೇ ಶನಿರಾಜ। ಪರಮ ದಯಾನಂದ ಶನಿರಾಜ। ಭಕ್ತರ ಸುರಧೇನು ಶನಿರಾಜ।। ಪರಮ ಭಕುತನು ಶನಿರಾಜ। ನಿನ್ನಯ ವರಶಿಷ್ಯ ಶನಿರಾಜ। ಜೀವನದ ಮೀಸಲು ಶನಿರಾಜ। ನಿಮಗಾಗಿ ಮಾಡಿಹ ಶನಿರಾಜ।। ಅವನಲಿ ನೆಲಸಿಹ ಶನಿರಾಜ। ಅನುಗ್ರಹ ಮಾಳ್ಪಿರಿ ಶನಿರಾಜ। ಚೈತ್ರದ ತಿಂಗಳಲಿ ಶನಿರಾಜ। ನಿಮ್ಮಯ ಜಾತ್ರೆಯದು ಶನಿರಾಜ। ಅಂದಿನ ದಿನದಲಿ ಶನಿರಾಜ। ಅಗ್ನಿಲಿ ಬರುವಿರಿ ಶನಿರಾಜ। ಶ್ರಾವಣ ಮಾಸದಿ ಶನಿರಾಜ। ದ್ವಿತೀಯ ಶನಿವಾರ ಶನಿರಾಜ।। ಆನಂದ ವೈಭವದಿ ಶನಿರಾಜ। ಭಕ್ತರ ಕೂಟದಲಿ ಶನಿರಾಜ। ಗಾವಿನ ಕೆರೆಯಲಿ ಶನಿರಾಜ। ಲೀಲೆಯಿಂ ತೆಪ್ಪದಲಿ ಶನಿರಾಜ। ವಿಹರಿಪ ಧೀರನೆ ಶನಿರಾಜ। ಕಲಿಯುಗ ನಾಯಕ ಶನಿರಾಜ। ಹಿಂದಿನ ವರುಷದಿ ಶನಿರಾಜ। ನಿಮ್ಮಯ ಶಿಷ್ಯರಿಂದ ಶನಿರಾಜ।। ಐದುಕುಂಡ ಹೋಮವ ಶನಿರಾಜ। ಮಾಡಿಸಿದೆ ನೀನಿಂತು ಶನಿರಾಜ। ಮುಂದಿನ ವರುಷದಿ ಶನಿರಾಜ। ನಿಮ್ಮಯ ರಾಶಿಯಲಿ ಶನಿರಾಜ। ಅಷ್ಟಗ್ರಹ ಕೂಟವು ಶನಿರಾಜ। ಮಕರರಾಶಿಯಲಿ ಶನಿರಾಜ। ಗ್ರಹಗಳ ಕೂಟದಿಂ ಶನಿರಾಜ। ಜಗಕೆಲ್ಲ ಹಾನಿಯು ಶನಿರಾಜ।। ಎಂಬುದು ತಿಳಿಯುತ ಶನಿರಾಜ। ಅದನು ತಡೆಯಲು ಶನಿರಾಜ। ಗ್ರಹಗಳ ಶಾಂತಿಗೆ ಶನಿರಾಜ। ಋಷಿಗಳ ಪ್ರೀತಿಗೆ ಶನಿರಾಜ। ದೇವರ್ಗಳ ತೃಪ್ತಿಗೆ ಶನಿರಾಜ। ಲೋಕಗಳ ಕ್ಷೇಮಕೆ ಶನಿರಾಜ। ನವಕುಂಡ ಹೋಮವ ಶನಿರಾಜ। ಹನ್ನೆರಡು ದಿನದಿ ಶನಿರಾಜ।। ಮಾಡುವಂತೆ ಪ್ರೇರಿಸಿ ಶನಿರಾಜ। ಶಿಷ್ಯನ ಮನದಲಿ ಶನಿರಾಜ। ಹೊಣೆಯನು ನೀ ಹೊತ್ತು ಶನಿರಾಜ। ಮೂಡಿಸಿದೆ ಲೀಲೆಯು ಶನಿರಾಜ। ಹೋಮಕೆ ಯಜಮಾನ ಶನಿರಾಜ। ನಿಮ್ಮಯ ವರಶಿಷ್ಯ ಶನಿರಾಜ। ನವಲಕ್ಷ ಹೋಮದಿ ಶನಿರಾಜ।

ದೇವಗಣಗಳು ತೃಪ್ತರು ಶನಿರಾಜ।। ಪಡೆದ ಗುರುತಾಗಿ ಶನಿರಾಜ। ಫಲವ ನೀಡಿದರೆ ಶನಿರಾಜ। ಯಜ್ಞದ ಫಲವನು ಶನಿರಾಜ। ಅಗ್ನಿಯಂ ಕೊಡಿಸಿದ ಶನಿರಾಜ। ಹೃದಯದಿ ನೀನಿಂತು ಶನಿರಾಜ। ಮುದದಿ ಪ್ರೇರಿಸಲು ಶನಿರಾಜ। ಭಜನೆ ಮಾಲೆಯಿಂದ ಶನಿರಾಜ। ಬರೆವ ಸೀತಾರಾಮ ಶನಿರಾಜ।। ಇದರಲಿ ಇರುವ ಶನಿರಾಜ। ತಪ್ಪುಗಳ ಮನ್ನಿಸಿ ಶನಿರಾಜ। ಧರಿಪುದು ಮಾಲೆಯಿಂದ ಶನಿರಾಜ। ಮಾಡುವುದು ಧನ್ಯನ ಶನಿರಾಜ। ಭಜನೆ ಮಾಲೆಯಿಂದ ಶನಿರಾಜ। ಇಷ್ಟಾರ್ಥ ಸಲಿಸುವ ಶನಿರಾಜ। ಭಕ್ತರ ಪೊರೆವುದು ಶನಿರಾಜ।। ಓಂ ಶಾಂತಿಃ ಶಾಂತಿಃ ಶಾಂತಿಃ।।

ಶರಣು ಶರಣು ಸಂಬುದ್ಧ ಗುರುಜ್ಞಾನ

ಶರಣು ಶರಣು ಸಂಬುದ್ಧ ಗುರುಜ್ಞಾನ। ದಯಾಸಮುದ್ರನೆ ಬುದ್ಧ ಗುರು। ಲೋಕನಾಥ ಸಂಬುದ್ಧ ಗುರು ಆರ್ತ್ತ-ತ್ರಾಣಪರಾಯಣ ಬುದ್ಧ ಗುರು। ಶರಣು ಶರಣು ಸಂಬುದ್ಧ ಗುರು।। ದೇಶಕೋಶ ಮನೆ ತಂದೆ ಮಡದಿ ಮಗು। ಸಕಲ ಸುಖದ ಸವಿ ಪರಿವಾರ। ಕಹಿಯೊ ಎಂಬವೊಲು ಕೊಡವಿಕೊಂಡು ನಡು। ರಾತ್ರಿಯೊಳಡವಿಗೆ ನಡೆದೆ ಗುರು।। ಆರುವರುಷದಲೆದಾಟವು ಘೋರ। ಕಡೆಗು ಗೆದ್ದೆ ನೀ ಜಿತಮಾರ। ಬೋಧಿವೃಕ್ಷದಡಿ ಪ್ರಜ್ಞಾಯುಧದಲಿ। ಮಾರಸೇನೆಯನು ಮುರಿದೆ ಗುರು।। ಗೆದ್ದು ಬಂದು ನೀ ವಾರಾಣಸಿಯಲಿ। ಅಮೃತದುಂದುಭಿಯ ಬಾರಿಸಿದೆ। ಧರ್ಮಚಕ್ರವನು ಸ್ಥಾಪಿಸತೊಡಗಿದೆ। ಜಗಗಳ ಹಿತ ಸುಖಕಾಗಿ ಗುರು।। ದಯೆಯೆ ಮೂಲವೈ ಸರ್ವಧರ್ಮಕೂ। ಶೀಲವೆ ಜೀವನಕಡಿಪಾಡ। ಶೀಲವಿಲ್ಲದವಗಾಗದು ಪ್ರಜ್ಞೆ। ಜೋಕೆ ಜೋಕೆ ಎಂದೊರೆದೆ ಗುರು।। ಹೊಸದು ಹೇಳಲಿಕೆ ಬಂದವನಲ್ಲ। ಹೊಸದು ಲೋಕದೊಳಗೇನುಂಟು। ಸತ್ಯಪುರಾತನ ಸತ್ಯವೆ ನೂತನ। ಸತ್ಯ ಚಿರಂತನ ಎಂದೆ ಗುರು।।

ಶರಣೆನ್ನಿರಿ ನೀವು ಶರಣೆನ್ನಿರಿ

ರಾಗ: ಪುನ್ನಾಗವರಾಳಿ

ಶರಣೆನ್ನಿರಿ ನೀವು ಶರಣೆನ್ನಿರಿ। ಕಾಮಧೇನುವಿಗೆ ನೀವು ಶರಣೆನ್ನಿರಿ(2) ಆ ಮಹಾನಂದಿಗೆ ಶರಣೆನ್ನಿರಿ।।ಪ।। ಪರಮ ಪಾವನೆ ತಾಯೇ। ಸುರಭಿ ವೈಷ್ಣವಿ ನೀನು। ಕರುಣೆಯ ತೋರೆಂದು ಶರಣೆನ್ನಿರಿ।।1।। ತಿಳಿನೀರ ತೆಗೆತಂದು ಸ್ನಾನ ಮಜ್ಜನ ಗೈಸಿ। ಮೈದಡವಿ ಮುದ್ದಾಡಿ ಶರಣೆನ್ನಿರಿ।।2।। ಅರಿಶಿನ ಕುಂಕುಮವ ಇಡುತಲೀ ಪರಿಪರಿಯ ಹೂವನು ಮುಡಿಸಿ ಶಿರಬಾಗಿ ಕೈ ಮುಗಿದು ಶರಣೆನ್ನಿರಿ।।3।। ಕರುಣೆಯ ಪ್ರತಿರೂಪ ಸರಸ್ವತಿ ಶ್ರೀಗೌರಿ। ವರಲಕ್ಷ್ಮೀ ನೀನೆಂದು ಶರಣೆನ್ನಿರಿ।।4।। ಹಿಗ್ಗಿ ಹರುಷದಿಂದ ಹಾಡಿ ಕೊಂಡಾಡುತ್ತಾ। ಗೋಗ್ರಾಸಗಳ ನೀಡಿ ಶರಣೆನ್ನಿರಿ।।5।। ಭಗ್ನವಾಗುವ ಬದುಕ। ಬೆಳಗಿ ಸಂತಸವೀವ। ಸುಜ್ಞಾನ ದಾಯಿನಿಗೆ ಶರಣೆನ್ನಿರಿ।।6।। ಮಾರನಯ್ಯನ ಪ್ರೀತಿ। ಪಾತ್ರಳಿಗೆ ನೀವೀಗ। ಆರತಿಯ ಬೆಳಗುತ್ತ ಶರಣೆನ್ನಿರಿ।।7।। ಸೇರಿಕೊಂಡಿರುವ ಸಂಸಾರ ಬಂಧನದಿಂದ। ಪಾರುಗಾಣಿಸೆಂದು ಶರಣೆನ್ನಿರಿ।।8।। ದೇವದೇವನ ಪ್ರೀತೆ। ದೇವಿ ಜಗನ್ಮಾತೆ। ಹೂವ ಪಾಲಿಸಲೆಂದು ಶರಣೆನ್ನಿರಿ।।9।।

ಶರಣಂ ಶರಣಂ ಅಯ್ಯಪ್ಪ

ಶರಣಂ ಶರಣಂ ಅಯ್ಯಪ್ಪ। ಸ್ವಾಮಿ ಶರಣಂ ಅಯ್ಯಪ್ಪ। ಸ್ವಾಮಿಯೇ ಶರಣಂ ಅಯ್ಯಪ್ಪ। ಕರಿಗಿರಿವಾಸ ಅಯ್ಯಪ್ಪ। ವರಮಣಿಕಂಠನೆ ಅಯ್ಯಪ್ಪ। ಗಜಮುಖಾಗ್ರಜ ಅಯ್ಯಪ್ಪ। ಹರಿಹರ ಪುತ್ರನೆ ಅಯ್ಯಪ್ಪ। ಶರಣಂ ಶರಣಂ ಶ್ರೀ ಅಯ್ಯಪ್ಪ। ವ್ಯಾಘ್ರವಾಹನನೆ ಅಯ್ಯಪ್ಪ। ವರದಹಸ್ತನೇ ಅಯ್ಯಪ್ಪ। ರಾಜಾಧಿರಾಜನೆ ಅಯ್ಯಪ್ಪ। ಸ್ವಾಮಿ ಶರಣಂ ಅಯ್ಯಪ್ಪ। ಪಂದಳಾಧೀಶನೆ ಅಯ್ಯಪ್ಪ ವಿಷ್ಣು ಸ್ವರೂಪನೆ ಅಯ್ಯಪ್ಪ। ಈಶ್ವರಾಂಶನೆ ಅಯ್ಯಪ್ಪ। ಶರಣಂ ಶರಣಂ ಅಯ್ಯಪ್ಪ। ಶ್ರೀ ಭಗವಾನನೆ ಅಯ್ಯಪ್ಪ। ಬಾಲಹನುಮ ಪ್ರಭು ಅಯ್ಯಪ್ಪ। ಮೋಹಿನಿ ಪುತ್ರನೆ ಅಯ್ಯಪ್ಪ।ಅಭಿಷೇಕಪ್ರಿಯನೇ ಅಯ್ಯಪ್ಪ। ಭಕ್ತರಾಧಾರನೆ ಅಯ್ಯಪ್ಪ। ಭವಭಯದೂರನೆ ಅಯ್ಯಪ್ಪ। ಶರಣಂ ಶರಣಂ ಅಯ್ಯಪ್ಪ। ಸ್ವಾಮಿ ಶರಣಂ ಅಯ್ಯಪ್ಪ।।

ಶರಣಾಗು ಶರಣಾಗು ಶರಣಾಗು ಮನವೇ **ರಾಗ: ದೇಶ್**

ಶರಣಾಗು ಶರಣಾಗು ಶರಣಾಗು ಮನವೇ। ಶ್ರೀ ಗುರುಚರಣ ಸರೋಜಕೆ ಮಣಿದು॥ಪ॥ ರಾಮಕೃಷ್ಣ ಗುರುಕೃಪೆ ನಿನಗಾದರೆ ಹರಿವುದು ಭವಭಯ। ಚಿಂತಾರುಜಿನ॥ಅ.ಪ.॥ ಶ್ರೀಗುರುನಾಮದ ನೌಕೆಯು ದೊರೆತರೆ ಭವಸಾಗರ ಯಾನವೆ ಮೋದಕರ॥1॥ ಎಲ್ಲ ಧರ್ಮಗಳ ತಿರುಳನು ಸಾರುವ ನೊಂದ ಜೀವರಿಗೆ ಭರವಸೆಯೀಯುವ। ರಾಮಕೃಷ್ಣ ಸಂದೇಶ ಗೀತೆಯು ಸಾಗರದಲೆಗಳು ಹಾಡುತಿವೆ॥2॥ ಭವ್ಯ ಹಿಮಾಲಯ ಪರ್ವತ ರಾಜಿಯು ಮುಳುಗಿರೆ ಧ್ಯಾನ ಸಮಾಧಿಯಲಿ। ರಾಮಕೃಷ್ಣ ಜಯರಾಮಕೃಷ್ಣ ಜಯ ಎಂಬೀ ನಿನಾದವು ಕೇಳುತಿದೆ॥3॥

ಶರಣು ಶರಣು ತಾಯೆ। ಶರಣು ಶರಣು

ಶರಣು ಶರಣು ತಾಯೆ । ಶರಣು ಶರಣು॥ ಜನುಮ ಜನುಮಗಳಲ್ಲಿ ನಿನಗೆ ಶರಣು॥ಅ.ಪ॥ ಎದುರಿಗಿರಲಾಗಲೂ ನಿಮ್ಮ ಚರಣ। ನನ್ನ ಕಂಬನಿ ದುಂಬಿ ಬರಲಿ ಕರುಣ। ಅಪ್ಪಿಕೊಳ್ಳುವಾಗೆನಗೆ ಸರಿ ಬಂದರೂ ಮರಣ। ಶರಣು। ಶರಣು ತಾಯೆ ಶರಣು ಶರಣು॥1॥ ಬೇಕು ಬಯಕೆಗಳೆನಿತೂ ನನಗೆ ಬೇಡ। ಸಾಕುಸೋಕವೆ ನಿನ್ನ ಹರಕೆ ನೋಡಾ। 'ಬಾ ತಾಯೆ' ಎಂದೊಡನೆ ಮರೆಯ ಬೇಡ। ಶರಣು ಶರಣು ತಾಯೆ। ಶರಣು ಶರಣು॥2॥ ಬಾಳ ಬಂಧನದಲ್ಲಿ ದುಃಖ ದುಮ್ಮಾನ। ಎತ್ತಿ ಎದೆ ಬೆಳಗುವಂತಿರಲೆನ್ನ ಕವನ। ಕೈ ಹಿಡಿದು ನಡೆಸಮ್ಮ ಈ ನಿನ್ನ ಮಗನ। ಶರಣು ಶರಣು ತಾಯೆ। ಶರಣು ಶರಣು॥3॥ ಕನಸಿನಲಿ ನನಸಿನಲ್ಲಿ ಕೈ ಮುಗಿವ ಚಿಂತೆ। ಹರಸು ತಾಯೇ ಬೇಡ ಮತ್ತಾವ ಸಂತೆ। ಬೀಳುತೇಳುತ ಸಾಗಿ ಬರುವೆನಂತೆ। ಶರಣು ಶರಣು ತಾಯೆ। ಶರಣು ಶರಣು॥

ಶರಣು ಕಾವೇರಿ ತಾಯೇ **ರಾಗ: ಸಾರಂಗ**

ಶರಣು ಕಾವೇರಿ ತಾಯೇ ಸಿರಿಯೇ ಕರುನಾಡ ಜೀವ ನದಿಯೇ॥ಪ॥ ತೆರೆತೆರೆ ತೆರೆಯಾಗಿ ಬರೆ ಸರಸರವಾಗಿ ನೊರೆ॥ ತುಂತುರು ತುಂತುರು ನೀರು ದನಿ ಕಲಕಲ ಮಾಡಿ ದನಿ॥ ಪುರದ ಪುಣ್ಯವತಿ ಗಂಗೇ ತಾಯೇ॥1॥ ಕರೆದು ಕಣ್ತೆರೆದು ನೋಡಲೆ ನೀನೇ। ಕುರುಡು ಬಾಳಿನಾ ಸಾಗರದೊಂದೇ। ಹರಿಯಾ ನಾಮಾ ಹರಿಗೋಲಿಂದೆ॥2॥ ಅಲೆಯ ಒಂದರಲಿ ಆಸೆಯು ಆರು। ಬಲೆಯು ತಾ ಬೀಳದೆ ಜಾರು। ಮದವು ಮೋಹ ತುಂಬಿದ ಮೇಲೆ। ಬದುಕು ಬಾಳ ಬೀಸೇ ಬೀಳದೆ ಬರಿ ಸಂಕೋಲೆ॥3॥

❖ ❖ ❖

ವಚನದಲ್ಲಿ ನಾಮಾಮೃತ ತುಂಬಿ **ರಾಗ: ಅಭೇರಿ-ತ್ರಿತಾಲ**

ವಚನದಲ್ಲಿ ನಾಮಾಮೃತ ತುಂಬಿ। ನಯನದಲ್ಲಿ ನಿಮ್ಮ ಮೂರುತಿ ತುಂಬಿ॥ ಮನದಲ್ಲಿ ನಿಮ್ಮ ನೆನಹು ತುಂಬಿ। ಕಿವಿಯಲಿ ನಿಮ್ಮ ಕೀರುತಿ ತುಂಬಿ। ಕೂಡಲ ಸಂಗಮ ದೇವ ನಿಮ್ಮ । ಚರಣಕಮಲದೊಳಗಾನು ತುಂಬಿ॥

ಕಳಬೇಡ ಕೊಲಬೇಡ **ರಾಗ: ಅಠಾಣಾ**

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ। ಮುನಿಯ ಬೇಡ ಅನ್ಯರಿಗೆ ಅಸಹ್ಯ ಪಡಬೇಡ। ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ। ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ। ಇದೇ ನಮ್ಮ ಕೂಡಲಸಂಗಮ ದೇವನನೊಲಿಸುವ ಪರಿ॥

ಉಳ್ಳವರು ಶಿವಾಲಯವ **ರಾಗ: ಮಧುವಂತಿ-ತ್ರಿಕಾಲತಾಳ**

ಉಳ್ಳವರು ಶಿವಾಲಯವ ಮಾಡುವರಯ್ಯಾ। ನಾನೇನ ಮಾಡಲಿ ಬಡವನಯ್ಯಾ॥ ಎನ್ನ ಕಾಲೆ ಕಂಬವು ದೇಹವೇ ದೇಗುಲ। ಶಿರವೇಹೊನ್ನ ಕಳಸವಯ್ಯ। ಸ್ಥಾವರಕ್ಕಳಿವುಂಟು ಜಂಗಮಕ್ಕೆ ಅಳಿವಿಲ್ಲ। ಅಯ್ಯಾ ಕೇಳಯ್ಯಾ ಕೂಡಲಸಂಗಮದೇವಾ॥

ಎನಗೆ ಭೋಗ ಭಾಗ್ಯಬೇಡ **ರಾಗ: ದುರ್ಗ-ರೂಪಕತಾಳ**

ಎನಗೆ ಭೋಗ ಭಾಗ್ಯಬೇಡ। ಎನಗೆ ಭೋಗ ಭಾಗ್ಯಬೇಡ।। ಎನಗೆ ಜಪವು ತಪವು ಬೇಡ। ಎನಗೆ ನಿಮ್ಮ ತೊತ್ತು ಸೇವೆ। ನಿತ್ಯವಾಗಲೀ।।ಪ।। ಹಿಂದೆನ್ನ ಬೈದವರಿಗೆ। ಮುಂದೆನ್ನ ಬೈದವರಿಗೆ। ಕುಂದದೆಲ್ಲ ಜನರನಡುವೆ। ಬೈದವರಿಗೆ।। ಇಂದುಧರನ ಕರುಣದಿಂದೆ। ಅಂದಣವನು ಏರುವಂತೆ। ಕುಂದದೊಲಿದು ಅವರಿಗೆಲ್ಲ ಭೋಗವಾಗಲೀ।।1।। ಹಿಂಗದೆನ್ನನಿಂದಿನಿದ। ಜನಗಳೆಲ್ಲ ಸುಖದೊಳಿರುವ। ಹಂಗೆ ಶಿವನು ಅವರಿಗೆಲ್ಲ ಭಾಗ್ಯವೀಯಲೀ।। ಮಂಗಳಾತ್ಮಕ ಷಡಕ್ಷರಿಯ ಲಿಂಗ ನಿಮ್ಮ ತೊತ್ತು ಸೇವೆ। ಸಾಂಗಮಾಗಿ ಧರೆಯೊಳೆನಗೆ ಭೋಗವಾಗಲೀ।।2।।

ಶರಣ ನಿದ್ದೆಗೈದೊಡೆ

ಶರಣ ನಿದ್ದೆಗೈದೊಡೆ ರಾತ್ರಿ ಕಾಣಿರೋ। ಶರಣನೆದ್ದು ಕುಳಿತೊಡೆ ಶಿವರಾತ್ರಿ ಕಾಣಿರೋ।। ಶರಣನಿಂದೆಡೆ ಅದು ಛತ್ರ ಕಾಣಿರೋ। ಶರಣ ಮಿಂದೊಡೆ ಅದು ರ್ಥ ಕಾಣಿರೋ।। ಶರಣ ನಡೆದ ದಾರಿ ಸತ್ಪಥ ಕಾಣಿರೋ। ಶರಣ ನಾಡಿದ ತತ್ವ ಪರತತ್ವ ಕಾಣಿರೋ। ಕೂಡಲಸಂಗಮದೇವಾ।।

ಎನಗಿಂತಾ ಕಿರಿಯರಿಲ್ಲಯ್ಯಾ

ಎನಗಿಂತಾ ಕಿರಿಯರಿಲ್ಲಯ್ಯಾ। ಶಿವಭಕ್ತರಿಗಿಂತ ಹಿರಿಯರಿಲ್ಲಯ್ಯಾ।। ನಿಮ್ಮ ಪಾದ ಸಾಕ್ಷಿ ಎನಗೆ ಎನ್ನ ಮನದ ಸಾಕ್ಷಿಯಯ್ಯಾ ಕೂಡಲಸಂಗಮದೇವಾ ಎನಗಿದೇ ದಿವ್ಯ।।

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ **ರಾಗ: ಶುದ್ಧಧನ್ಯಾಸಿ**

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ। ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ।। ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ। ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ। ಜಗದ ಜಂಗುಳಿಗಳಿಗೆ ಬೆಂಗೋಲನೆತ್ತಿ। ಕಾಡಿತ್ತು ಮಾಯೆ। ಚೆನ್ನಮಲ್ಲಿಕಾರ್ಜುನ ನೀ ನೊಡ್ಡಿದ ಮಾಯೆಯ। ನಾರುಗೆಲ್ಲಲಾರರು।।

ಬೆಟ್ಟದ ಮೇಲೊಂದು ಮನೆಯ **ರಾಗ: ಅಭೇರಿಜ-ತ್ರಿತಾಳ**

ಬೆಟ್ಟದ ಮೇಲೊಂದು ಮನೆಯ ಮಾಡಿ। ಮೃಗಂಗಳಿಗಂಜಿದಡೆಂತಯ್ಯ। ಸಮುದ್ರದ ತಡಿಯೊಳಗೊಂದು ಮನೆಯಮಾಡಿ। ನೊರೆತೆರೆಗಳಿಗಂಜಿದಡೆಂತಯ್ಯ।। ಸಂತೆಯೊಳಗೊಂದು ಮನೆಯಮಾಡಿ। ಶಬ್ದಕ್ಕೆ ನಾಚಿದಡೆಂತಯ್ಯ। ಚೆನ್ನಮಲ್ಲಿಕಾರ್ಜುನಯ್ಯ ದೇವಕೇಳಯ್ಯ। ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿ ನಿಂದೆಗಳು ಬಂದೊಡೆ। ಮನದಲಿ ಕೋಪವ ತಾಳದೆ। ಸಮಾಧಾನಿಯಾಗಿರಬೇಕು।।

ಮನವೆಂಬ ಮರ್ಕಟನು

ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ। ಇಂದ್ರಿಯಗಂಳೆಂಬ ಶಾಖೆ ಶಾಖೆಗೆ ಹಾರಿ। ವಿಷಯಂಗಳೆಂಬ ಫಲಂಗಳ ಗ್ರಹಿಸಿ। ಭವದತ್ತ ಮುಖವಾಗಿ ಹೋಗುತಿದೆ ನೋಡಾ।। (ಈ) ಮನವೆಂಬ ಮರ್ಕಟನ (ನಿಮ್ಮ) ನೆನೆಹೆಂಬ ಪಾಶದಿ ಕಟ್ಟಿ। ಎನ್ನನುಳಿಸಿಕೊಳ್ಳಯ್ಯಾ ಅಖಂಡೇಶ್ವರಾ।।

ಎಲ್ಲಿಂದ ನೀ ಬಂದೆ ಅಲ್ಲಿಂದ ಏನ್ತಂದೆ **ರಾಗ: ಆನಂದಭೈರವಿ**

ಎಲ್ಲಿಂದ ನೀ ಬಂದೆ ಅಲ್ಲಿಂದ ಏನ್ತಂದೆ। ಇಲ್ಲಿಂದ ಏನೋಯ್ವೆ ಮುಂದೆ? ನೀನಾರು ನಾನಾರು ನಿನ್ನವರು ಇನ್ನಾರು। ಇದ ತಿಳಿಯದೆ ಹೋದೆಯಲ್ಲೋ।।1।। ಕೊಟ್ಟವ ತಾ ಜಾಣ ಇಟ್ಟವನು ಕಡುಮೂರ್ಖ। ಕೊಟ್ಟು ನಾ ಕೆಟ್ಟನೆಂದೆನಬೇಡ। ಹೂತಿಟ್ಟ ಹಣವೆಲ್ಲ ಮಣ್ಣಲ್ಲಿ ಹೋದಾಗ। ನಿನಗೇನು ಉಳಿಯಿತಣ್ಣ।।2।। ಮಮತೆಯಲಿ ಮನೆ

ಮಾಡಿ। ಮಡದಿಯನೆ ಒಡಗೂಡಿ। ನಗುನಗುತಲಿರುವೇಕೆ ಅಣ್ಣಾ। ಮನೆಯಲ್ಲಿ ಮಣ್ಣಾಗಿ ಆ ಮಡದಿ ಮರೆಯಾಗಿ। ನೀನಕ್ಕ ನಗುವೆಲ್ಲೋ ಅಣ್ಣಾ॥3॥ ಮಣ್ಣಲ್ಲಿ ಮಣ್ಣಾಗಿ ಮುಗಿಲಲ್ಲಿ ಹೊಗೆಯಾಗಿ। ಬೆರೆವುದು ಈ ದೇಹವಣ್ಣ। ಇದನ್ನೆಲ್ಲಾ ನೀ ಅರಿತು ಇದರಲ್ಲೇ ನಿ ಬೆರೆತಾಗ। ಇನ್ನೇಕೆ ಈ ಮೋಹವಣ್ಣಾ ಇನ್ನೇಕೆ ಈ ದೇಹವಣ್ಣಾ॥4॥

❖ ❖ ❖

ಬ್ರಹ್ಮ ಚೈತನ್ಯ ಗುರು **ರಾಗ: ಮೋಹನ-ಆದಿತಾಳ**

ಬ್ರಹ್ಮ ಚೈತನ್ಯ ಗುರು, ಬ್ರಹ್ಮಾನಂದ ಗುರುವೆ। ನಿನ್ನಯ ಪಾದವನು ನಂಬಿ ಬಂದಿರುವೆ॥ಪ॥ ಪ್ರಾತಃಕಾಲದಿ ಮಿಂದು ಕಕ್ಕಡಾರತಿ ಪಿಡಿದು। ನಿನಗೆ ಆರತಿ ಮಾಡಿ ಪ್ರಾರ್ಥಿಸುತಿರುವರು। ಹಾಡುತ ಪಾಡುತ ಬೇಡುತಲಿರುವರು। ನಮ್ಮಯ ಸೇವೆಯ ಸ್ವೀಕರಿಸು ಗುರುವೆ॥1॥ ತಾಯಿಯ ಇಚ್ಛೆಯಂತೆ ಕಾಶಿಯಾತ್ರೆ ಮಾಡಿಸಿದೆ। ತಾಯ ಮನದಾಸೆಯಂತೆ ಕಾಶಿಯಲ್ಲೆ ಮುಕ್ತಿಕೊಟ್ಟೆ। ತಾಯ ಪ್ರೇಮದಾನಂದ ಎಷ್ಟು ವರ್ಣಿಸಿರುವೆ। ತಾಯಿಯೆ ದೈವವೆಂದು ಜಗಕೆ ತೋರಿದೆ ಗುರುವೆ॥2॥ ಮಾರ್ಗಶಿರ ಮಾಸದಲಿ ಆರಾಧನೆ ನಡೆಯುತಿರಲು। ಭಕ್ತರೆಲ್ಲರೂ ನಿನ್ನ ಭಜನೆಯನ್ನು ಮಾಡುವರು। ಎಲ್ಲಾ ಭಕ್ತಾದಿಗಳು ನಿನ್ನ ಭೋಧನೆಯಿಂದ। ಕುಕ್ಕೆಸ್ವಾಮಿಯಲಿ ರಾಮನಾಮದ ಮಹಿಮೆ ಕಂಡು ಧನ್ಯರಾದರು॥3॥

ಚಿನ್ಮಯ ಸದ್ಗುರು ಚೈತನ್ಯ **ರಾಗ: ಕಾನಡ**

ಚಿನ್ಮಯ ಸದ್ಗುರು ಚೈತನ್ಯ। ನಾ ನಿರತವು ನಿನ್ನನು ಪೂಜಿಸುವೆ। ಮನ್ಮನ ಮಂದಿರ ಮಂಟಪದಿ। ಸಂತತ ನಿನ್ನಯ ಪಾದವಿಡು॥1॥ ಹೃದಯ ಪೀಠವ ತಾ ನಿನಗೆ। ಮಂದಾಸನ ಎಂದು ನೀ ತಿಳಿದೇ। ಮುದದಲಿ ಭಜಿಸುವೆ ಅನುದಿನವೂ। ನೀ ಹರಿಸಯ್ಯ ಆಶೆಯನೂ॥2॥ ಜೀವನವೆಲ್ಲವೂ ನಿನದಯ್ಯಾ। ಗುರು ಸೇವಕ ಮಾತ್ರನು ನಾನಯ್ಯ। ಕಾವುದು ತಾಳ್ಮದ ಹನುಮಯ್ಯ। ನಾ ಮೈ ಮರೆವೆನೊ ನಿನ್ನಲ್ಲೇ॥3॥

ಗೋಂದಾವಳಿನಾಥ ಗುರು ಬ್ರಹ್ಮಚೈತನ್ಯ **ರಾಗ: ಬೃಂದಾವನಸಾರಂಗ**

ಗೋಂದಾವಳಿನಾಥ ಗುರು ಬ್ರಹ್ಮಚೈತನ್ಯ ಗೋಪರಿಪಾಲ ಪರಮಪಾವನ ಚರಿತ॥ಪ॥ ಮಾಣಗಂಗ ತೀರದೊಳು ಕುಲಕರ್ಣಿವಂಶದೊಳು ರಾವುಜಿ ಪಂತರ ಮಗನಾಗಿ ಜನಿಸಿದ। ಗಣಪತಿ ನಾಮದ ಈ ಪುಟ್ಟ ಪೋರನು ಜಪತಪ ಧ್ಯಾನದಲ್ಲಿ ತಲ್ಲೀನನಿರುತ್ತಿದ್ದ॥1॥ ಭಕ್ತಿಯ ಆಗರ ಸುಖಶಾಂತಿ ಸಾಗರ ಮುಗ್ಧ ಜನರ ಬಗ್ಗೆ ಎಲ್ಲಿಲ್ಲದ ಕನಿಕರ। ತಂದೆ ತಾಯಿ ಬಂಧು ವರ್ಗದ ಗೌರವ ಪಂಡರಿನಾಥನಲಿ ಅಚಲ ಭಕ್ತಿಭಾವ॥2॥ ಅಗಣಿತ ಗುಣಮಹಿಮ ಆನಂದರೂಪ ಅಪ್ರಮೇಯ ಗುರು ಗೋಂದಾವಳೀಶ। ಭಕ್ತಜನಮಂದಾರ ಮಾರುತಿ ಅವತಾರ ಚೈತನ್ಯದಾಸನ ಹೃನ್ಮಂದಿರವಾಸ॥3॥

ಕಂಡೆನಾ ಗುರುವರನ ಕರುಣಾಮಯನ **ರಾಗ: ಮೋಹನ**

ಕಂಡೆನಾ ಗುರುವರನ ಕರುಣಾಮಯನ॥ಪ॥ ಕಂಡೆನಾ ಗುರುವರನ ಕಾಮಿತಾರ್ಥವನೀವ ಪ್ರೇಮಾಂತರಂಗನ ಕಂಡೆ ನಾ ಗುರುವರನ॥ಅ.ಪ.॥ ಧಾರಿಣಿಯೊಳು ಬಲು ಕಷ್ಟವ ತಾಳದೆ ಚಡಪಡಿಸುತಲಿ ನೊಂದಿಹ ಮನಕೆ। ಚಿಂತಿಪ ಜೀವಕೆ ಸಾಂತ್ವನ ನೀಡಲು ಗೋಂದಾವಳಿಯಿಂದ ಬಂದ ಗುರುವರನ॥1॥ ವ್ಯಾಧಿಯಿಂದ ಬಳಲಿದ ಜನರ ಪೊರೆದವ ದುರುಳ ಜನರಿಗೆ ಸರಿಮಾರ್ಗ ತೋರಿದವ। ಬಯಸಿದ ಭಕ್ತರಿಗೆ ದರುಶನ ಕೊಟ್ಟವ ಗೋವ್ಗಳ ರಕ್ಷಿಸಿ ಸೇವೆ ಮಾಡಿದವನು॥2॥ ದುರ್ಭಿಕ್ಷಕಾಲದಲಿ ದವಸ ನೀಡಿ ಪೊರೆದವ ರಾಮನಾಮ ಬೋಧಿಸಿ ಜಗಕೆ ಶಾಂತಿ ನೀಡಿದವ। ಚೈತನ್ಯ ದಾಸನಿಗೆ ಸುಮತಿಯ ನೀಡಿದವ ಭಕ್ತರ ಕಣ್ಮಣಿ ಬ್ರಹ್ಮಚೈತನ್ಯ॥3॥

ಹಲವಾರು ಕ್ಷೇತ್ರ ಸುತ್ತಿಬಂದೆನಿಲ್ಲಿಗೆ ಗುರುವೆ ರಾಗ: ಕಲಾವತಿ

ಹಲವಾರು ಕ್ಷೇತ್ರ ಸುತ್ತಿ ಬಂದೆನಿಲ್ಲಿಗೆ ಗುರುವೆ। ನಿನ್ನ ಪಾದಸೇವೆ ಮಾಡಿ ಧನ್ಯನಾಗಲು।। ಪ।। ನಾನೆಲ್ಲು ಕಂಡಿಲ್ಲ ಇಂಥ ಸನ್ನಿಧಾನವ। ಮನವ ಕ್ಲೇಶ ದೂರಮಾಡೊ ಶಾಂತಿಧಾಮವ।। ಅ।। ನಿನ್ನ ದಿವ್ಯರೂಪ ಕಂಡೆ ಎನ್ನ ಕಣ್ಣೊಳು ಗುರುವೆ। ನಿನ್ನ ಪ್ರೇಮದೃಷ್ಟಿ ಕಂಡೆ ನಲಿವ ಜಗದೊಳು। ಎಲ್ಲೆಲ್ಲು ನಿನ್ನ ಗಾನ ಎಲ್ಲೆಲ್ಲು ನಿನ್ನ ಲೀಲೆ। ನಿನ್ನ ದಾಸರಾಗಿ ಬಂದ ಭಕುತರೆಲ್ಲರು।।1।। ಭುವಿಯೊಳಗೆ ಗೋಂದಾವಳಿ ಕ್ಷೇತ್ರ ಧನ್ಯವಾಗಿಹುದು। ಪುಣ್ಯ ಮಾನಗಂಗತೀರ ನಿನ್ನ ಸನ್ನಿಧಾನವು। ಎಲ್ಲೆಲ್ಲು ರಾಮನಾಮ ಎಲ್ಲೆಲ್ಲು ಭಕ್ತರ ವೃಂದ। ಎಲ್ಲೆಲ್ಲು ನಿನ್ನ ಮಹಿಮೆ ಕಾಣಬರುವುದು।।2।। ನಿನ್ನ ದಾಸನಾಗಿ ಎನ್ನ ಮಾಡಿಕೊಳ್ಳೊ ಗುರುವೆ। ನಿತ್ಯ ನೇಮದಿಂದ ನಾನು ನಿನ್ನ ಭಜಿಸುವೆ। ನೀನೆನ್ನ ಸರ್ವಸ್ವ ನೀನೆನ್ನ ಗುರುವರೇಣ್ಯ। ಚೈತನ್ಯದಾಸ ನಾನು ನಮಿಪೆ ಚರಣಕೆ।।3।।

ವೆಂಕಟಾಪುರವಾಸ ಗುರುಬ್ರಹ್ಮಾನಂದ ರಾಗ: ಸಿಂಧೂಭೈರವಿ

ವೆಂಕಟಾಪುರವಾಸ ಗುರುಬ್ರಹ್ಮಾನಂದ। ವೆಂಕಟೇಶನ ಭಕ್ತ ಪತಿತ ಪಾವನ।।ಪ।। ವೇದವೇದಾಂತವ ವೇದ್ಯಮಾಡಿಕೊಂಡವ। ವೇದ ಪಂಡಿತರನು ಸುಲಭದಿ ಜೈಸಿದವ। ಬ್ರಹ್ಮ ಚೈತನ್ಯರ ನಿಜದಾಸನಾದವ। ಬ್ರಹ್ಮಾನಂದವ ಭಕ್ತರಿಗುಣಿಸಿದವ।।1।। ತಾರಕಮಂತ್ರವ ಬಹುವಾಗಿ ಜಪಿಸಿದವ। ತೇರಾ ಕೋಟಿಯಜ್ಞ ವಿಪುಲ ಮಾಡಿಸಿದವ। ಅನ್ನದಾನವ ಗೈದು ಗುರುವ ಮೆಚ್ಚಿಸಿದವ। ನಾಮದ ಮಹಿಮೆಯ ಜಗಕೆ ಸಾರಿದವ।।2।। ನಿತ್ಯ ನಿರ್ಮಲ ನೀನು ಪರಮಾತ್ಮ ಸಖ ನೀನು। ನಿನ್ನ ಧ್ಯಾನವ ಮಾಡಿ ಧನ್ಯನಾಗುವೆ ನಾನು। ನಿನ್ನ ಪಾದ ಸೇವೆಯ ಕರುಣಿಸೊ ಎಂದೆಂದು। ಎನುತ ಬೇಡುವೆನು ಚೈತನ್ಯದಾಸ।।3।।

❖ ❖ ❖

ಶಕ್ತಿ ಸಮುದ್ರ ಸಮುತ್ಥತರಂಗಂ ರಾಗ: ಕಲ್ಯಾಣಿ

ಶಕ್ತಿ ಸಮುದ್ರ ಸಮುತ್ಥತರಂಗಂ। ದರ್ಶತಪ್ರೇಮವಿಜೃಂಭಿತರಂಗಂ। ಸಂಶಯರಾಕ್ಷಸನಾಶ ಮಹಾಸ್ತ್ರಂ। ಯಾಮಿ ಗುರುಂ ಶರಣಂ ಭವವೈದ್ಯಂ।।1।। ಅದ್ವಯತತ್ತ್ವಸಮಾಹಿತ ಚಿತ್ತಂ। ಪ್ರೋಜ್ವಲಭಕ್ತಿಪಟಾವೃತವೃತ್ತಂ। ಕರ್ಮಕಲೇವರ ಮದ್ಭುತಚೇಷ್ಟಂ। ಯಾಮಿ ಗುರುಂ ಶರಣಂ ಭವವೈದ್ಯಂ।।2।।

ಕಮಲವದನ ಕಲುಷ ಹರಣ

ಕಮಲವದನ ಕಲುಷ ಹರಣ। ನಿನಗೆ ನಮನ ರಾಮಕೃಷ್ಣ।। ಧರಮಸ್ಥಾಪನ ನಿನ್ನಾಗಮನ। ಪರಮ ಪಾವನ ನಿನ್ನ ಭಜನ। ಕೊಡುವೆ ನಿನಗೆ ಹೃದಯದಾಸನ। ಕಳೆಯೋ ಎನ್ನ ಜನನ ಮರಣ।।1।। ಜಗದ ಜೀವನ ಪುಣ್ಯ ಕಥನ। ವಿಜಿತ ಮದನ ಕರಮ ದಹನ। ರಚಿಸಿ ನೀನು ವಿಶ್ವಕವನ। ನೀಡುತಿರುವೆ ತವ ದರುಶನ।।2।। ವಿಶ್ವ ಮೋಚನ ತವ ಗುಣಗಾನ। ಚಿತ್ತ ಶೋಧನ ನಿನ್ನನು ಧ್ಯಾನ। ನನ್ನ ದೆನುವ ತನುಮನಧನ। ನಿನಗೆ ಅರ್ಪಣ ಹೇಮಮ ಜೀವನ।।2।।

ಶ್ರೀ ರಾಮ ತೂಹಿ ಶ್ರೀಕೃಷ್ಣ ತೂಹಿ

ಶ್ರೀ ರಾಮ ತೂಹಿ ಶ್ರೀಕೃಷ್ಣ ತೂಹಿ। ಪರಬ್ರಹ್ಮ ನಾರಾಯಣ ತೂಹಿ ಆದಿಶಕುತಿ।। ತೂಹಿ ಸೃಜನಪಾಲನ ಸಂಹರಣಕರ। ಶಾಂತಿ ವಿಧಾರಣ ತೂಹಿ ಬ್ರಹ್ಮಜ್ಯೋತಿ।। ಜಗನ್ನಾಥ ಪ್ರಕಟಹೋ ಯಹ್ ಪುಣ್ಯ ಭೂಮಿ ಮೇ। ಶಿಖಾವತ ಸಬಧರಮ ಸಮ ಜ್ಞಾನ ಪ್ರತೀತಿ। ಧನ್ಯ ರಾಮಕೃಷ್ಣ ತುಮದಯಾಲ ಭಗವಾನ್ ದೇಹು ಪ್ರಭು ಜ್ಞಾನಧನ ಔರ ಶುದ್ಧ ಭಕುತಿ।।

ತುಮಿ ಬ್ರಹ್ಮ ರಾಮಕೃಷ್ಣ

ತುಮಿ ಬ್ರಹ್ಮ ರಾಮಕೃಷ್ಣ। ತುಮಿ ಕೃಷ್ಣ ತುಮಿ ರಾಮ। ತುಮಿ ವಿಷ್ಣು ತುಮಿ ಜಿಷ್ಣು ಪ್ರಭವಿಷ್ಣು ಪ್ರಾಣಾರಾಮ।। ತುಮಿ ಆಧೇಯ ಆಧಾರ ತುಮಿ। ಬ್ರಹ್ಮ ನಿರಾಕಾರ ತುಮಿ ನರರೂಪಧರ ವಿಜಿತ ಕನಕಕಾಮ।। ಅಪಾರ ಕರುಣಾಸಿಂಧು ತುಮಿ ದೇವ ದೀನಬಂಧು। ಯಾಚೇ ಇಂದು ಕೃಪಾ ಬಿಂದು ಚರಣೇ ಕೊರಿ ಪ್ರಣಾಮ।।

ಶುಭಕರ ಸುಂದರ ನಿನ್ನ ದರುಶನ

ಶುಭಕರ ಸುಂದರ ನಿನ್ನ ದರುಶನ। ಶೋಭಿಸುತಿದೆ ಕರುಣಾರುಣ ವದನ।। ನಾನಾ ಭಾವ ಸುಧಾರ್ಣವ ನೀನು। ನಾನಾ ಯೋಗ ಸಮಾಗಮ ನೀನು।। ಕಮಲಾನನ ಕಮಲದಳನಯನ। ಕಲಿಮಲಹರಣ ಸಿರಿ ರಾಮಕೃಷ್ಣ। ರಸಮಯ ನಿನ್ನ ಸುಮಧುರ ವಚನ। ಮನ ತಣಿಸುವ ಮಲಯಾಚಲ ಪವನ। ರಾಮಕೃಷ್ಣ ಜಯ ಜಯ ಧ್ವನಿ ತಾನ। ಪ್ರೇಮಾನಂದ ಮನೋಹರ ಗಾನ।।

ರಾಮಕೃಷ್ಣಪರಮಹಂಸ ಎಮಗೆ — ರಾಗ: ಯದುಕುಲಕಾಂಬೋಧಿ

ರಾಮಕೃಷ್ಣಪರಮಹಂಸ ಎಮಗೆ ವರವ ನೀಡು ನೀ। ನಿನ್ನ ಪಾದಸೇವೆ ಎಮಗೆ ಮೋದದಿಂದ ಕರುಣಿಸು।।ಪ।। ಶಿವನು ನೀನೆ ಹರನು ನೀನೆ ಬ್ರಹ್ಮನೀನೆ ದೇವನು। ರಾಮನೀನೆ ಕೃಷ್ಣ ನೀನೆ ಕಲ್ಕಿ ನೀನೆ ಬುದ್ದನು। ಗುರುವು ನೀನೆ ಬಂಧು ನೀನೆ ದೇವ ನೀನೆ ಮಿತ್ರನು। ಜಗವ ಪೊರೆವ ಒಡೆಯ ನೀನೆ ಎನ್ನಬಾಳ ಜ್ಯೋತಿಯು।।1।। ಕಾಳಿ ನೀನೆ ದುರ್ಗಿನೀನೆ ಚಂಡಿ ನೀನೆ ಮಾತೆಯು। ಶಕ್ತಿ ನೀನೆ ಪುಷ್ಟಿ ನೀನೆ ನಮ್ಮ ಜನ್ಮ ದಾತೆಯು। ನಿನ್ನ ಒಡಲ ಪ್ರೀತಿಯಿಂದ ನಾವು ಇಂದು ಧನ್ಯರು। ಜಗದ ಮಾಯೆ ಹರಿಸುವ ನಿನ್ನ ಕೃಪೆಯು ದೊಡ್ಡದು।।2।। ಲಕ್ಷಲಕ್ಷ ನೊಂದ ಜನರ ಬಾಳ ಬೆಳಗಿದವನು ನೀನು। ನೊಂದ ಜೀವಕೆ ತಂಪನೆರೆದು ತಣಿಸಿದವನು ನೀನು। ನಿನ್ನ ಅಮೃತವಾಣಿಯಿಂದ ಜಗವ ಪೊರೆದೆ ನೀನು। ನಿನ್ನ ಭಜಿಪ ಚೈತನ್ಯದಾಸಗೆ ಜ್ಞಾನದೀವಿಗೆ ನೀನು।।3।।

ಸಿರಿರಾಮಕೃಷ್ಣ ಚರಣದ ತಲದಿ

ಸಿರಿರಾಮಕೃಷ್ಣ ಚರಣದ ತಲದಿ। ಶರಣೆನು ಮನವೇ।। ಸಕಲ ತೀರ್ಥ ಸಕಲ ಶಾಸ್ತ್ರ ಸಾರ ನೀನಹೆ। ನಿಖಿಲ ಭಕುತ ಹೃದಯ ಕಮಲ। ತರಣಿ ನೀನಹೇ। ಎನುತ।।1।। ಪ್ರೇಮ ಭಕುತಿ ಕಲಿಯುಗದಲಿ ತಾರಕಶಕುತಿ। ಪ್ರೇಮ ರೂಪ ಪ್ರೇಮಾನಂದ ಮಂಗಲಮೂರುತಿ। ಎನುತ।।2।। ದಕ್ಷಿಣೇಶ್ವರ ಲೀಲಾಕ್ಷೇತ್ರ ಪರಮ ಪವಿತ್ರ। ಮುಮುಕ್ಷು ಜನರ ಮುದದಿ ಕರೆದೆ ನೀನೇ ಸುಮಿತ್ರ ಎನುತ।।3।।

ಪ್ರೇಮಾನಂದ ಮನರೇ ಕಹೊ (ಬಂಗಾಳಿ)

ಪ್ರೇಮಾನಂದ ಮನರೇ ಕಹೊ ರಾಮಕೃಷ್ಣನಾಮ್। ಭಜೋ ರಾಮಕೃಷ್ಣ ನಾಮ್ ಜಪೋ ರಾಮಕೃಷ್ಣನಾಮ್। ನಾಮಸುಧಾ ಪಾನೇ ರಹೋ ಮತ್ತ ಅವಿರಾಮ್।। ಕಾಮಾರ್ ಪುಕುರ್ ಹೊಲೊ ಪುಣ್ಯ ವಜ್ರಧಾಮ್। ಶೇಥಾ ಸಖಾಗಣ ಲಯೇ ಕೊರೊ ಲೀಲಾಯ್ ಅಭಿರಾಮ್। ಆಮಾರ್ ಮಾನಸ ಮುಕುರೇ ಭಾಶೇ ಶೇಥವಿಸುಥಾವ್।। ನಮೋ ನಮೋ ಚಂದ್ರಮಣಿ ನಮೋ ಖುದಿರಾಮ್। ಕೃಪಾಮಯಿ ಮಾಜನನಿ ಲಹೊ ಗೋ ಪ್ರಣಾಮ್।। ಜಯ ರಾಂಬಾಟೀರ್ ಮಾಟಿ ಚಂದನ ಸಮಾನ್। ಅಮಾರ್ ಮಾಜನನೀರ್ ಜನ್ಮಭೂಮಿ ಮಹಾತೀರ್ಥ ಸ್ಥಾನ್। ಏಕ್ ಬಾರೇ ಚರಣೇ ಶರಣ ನಿಲೇ ಪೂರೇ ಮನಸ್ಕಾಮ್। ಮಾಯೇರ್ ಚರಣೇ ಶರಣ ನಿಲೇ ಪೂರೇ ಮನಸ್ಕಾಮ್।।

ನೀನಲ್ಲದಿನ್ನಾರು ಚಿರಬಂಧು ಎನಗೆ

ನೀನಲ್ಲದಿನ್ನಾರು ಚಿರಬಂಧು ಎನಗೆ। ನಿನ್ನನ್ನೆಕರೆಯುತಿಹೆ ಹೃದಯದೇಗುಲಕೆ।। ಕಾತರದ ಅಳಲಿನಲಿ ಪರಿಪೂತ ಹೃದಯವದು। ಕ್ಷೇತ್ರವೆನೆ ಆಗಿಹುದು ದಕ್ಷಿಣೇಶ್ವರವು। ಜನ್ಮ ಜನ್ಮಾಂತರದ ಸಂಸ್ಕಾರತರುರಾಜಿ। ಪಂಚವಟಿಯಂದದಲಿ

ಮಿಗೆ ಒಪ್ಪುತಿಹುದು।। ಹಗಲಿರುಳು ಎನ್ನೆದೆಯ ಹಂಬಲಿನ ಹೊನಲದುವೆ। ಜಗವ ಪಾವನಗೈವ ಗಂಗೆಯಾಗಿಹುದು। ಜೀವಿಗಳ ಎದೆಯಲ್ಲಿ ಅನವರತ ನೆಲೆಸಿರುವ। ದೇವತೆಯೆ ಇಲ್ಲೀಗ ಮಾತೆ ಭವತಾರಿಣೀ।। ಹೇ ದಿವ್ಯ ಅರ್ಚಕನೆ ಪಂಚವಟಿಯಪ್ರಿಯನೆ। ಭವತಾರಿಣೀತನಯ ಸುರನದಿಯ ಭಕ್ತ। ಬಂದಿಲ್ಲಿ ಎಚ್ಚರಿಸು ಪ್ರೇಮಮಯಿ ಜನನಿಯನು। ಬಂಧನವು ಹರಿಯುವುದು ಮಾತೆಯೊಲುಮೆಯಲಿ।।

❖ ❖ ❖

ಶ್ರೀಶಾರದಾದೇವಿ ಹೇ ಮಹಾಮಾತೆ

ಶ್ರೀಶಾರದಾದೇವಿ ಹೇ ಮಹಾಮಾತೆ। ಶ್ರೀರಾಮಕೃಷ್ಣ ಗುರುದೇವ ಸಂಪ್ರೀತೆ। ಪರಮಪಾವನೆ ಹೃದಯೆ ಕಲಿಯುಗದ ಸೀತೆ। ಭಕ್ತಿಯಿಂದಾರಾಧಿಪೆವು ನಿನ್ನ ನಮ್ಮ ।। ಗಗನದಂತಿಹುದಮ್ಮ ನಿನ್ನ ಗಾಂಭೀರ್ಯ। ನಿನ್ನ ತೇಜದ ಭಾಗವೀ ನಮ್ಮ ಸೂರ್ಯ। ನೀ ಕಾಳಿ ನೀ ಲಕ್ಷ್ಮಿ ನೀ ಬಿಜ್ಜೆಯಮ್ಮ। ಮಕ್ಕಳಾಗಿಹ ನಮ್ಮ ಪೊರೆ ಶಕ್ತಿಯಮ್ಮ।। ಮಹಿಮೆ ಮಹಿಮೆಯ ನರಿವುದೆಂದೆಮ್ಮರಮ್ಮ। ಗುರುವರ್ಯನಂ ತಿಳಿದ ನೀ ಮಹಿಮಳಮ್ಮ। ಪತಿಭಕ್ತಿಯದೆ ಮುಕ್ತಿ ನಿನಗಾಯಿತಮ್ಮ। ಪರಶಕ್ತಿ ನೀನಮ್ಮ ನಮ್ಮ ಸಲಸಮ್ಮ।। ನಿನ್ನ ನಾಮವೆ ಜನನಿ ಸುರನದಿಯು ತೀರ್ಥ। ಎಲೆತಾಯೆ ನೀನೇ ಪವಿತ್ರತಮ ತೀರ್ಥ। ನಿನ್ನ ಪೂಜೆಯೆ ಭಕ್ತಿ ಸಾಧನ ವಿರಕ್ತಿ। ನಿನ್ನ ನೆನೆವುದೆ ನಮಗೆ ಗುರು ತಪಶ್ಶಕ್ತಿ।।

ಜಯಜಯ ಜನನೀ ಜಯ ಸಾರದಾಮಣಿ

ಜಯಜಯ ಜನನೀ ಜಯ ಸಾರದಾಮಣಿ। ಕರುಣಾ ರೂಪಿಣಿ ಜಯಮಾ। ಆದ್ಯಾಶಕುತಿ ಪರಮಾಪ್ರಕೃತಿ। ಅಶರಣಗತಿ ತುಮಿಮಾ।।1।। ಜಯ ಜಗತಾರಿಣೀ ಭವಭಯಹಾರಿಣೀ। ದುರ್ಗತಿ ನಿವಾರಿಣೀಮಾ। ಸಿದ್ಧಿ ಪ್ರದಾಯಿನೀ ಮುಕ್ತಿವಿಧಾಯಿನೀ। ಜೀವಗತಿ ದಾಯಿನೀಮಾ।।2।। ನಿಖಿಲ ಜಗತ ಮಾತಾ ಜೀವ ಕಲ್ಯಾಣರತಾ। ಲಜ್ಜಾಪಟಾವೃತಾಮಾ। ದುರ್ಜನ ಸಜ್ಜನ ಸಂತಾನ ಅಗಣನ। ಪಾಲನ ಕಾರಿಣೀ ಮಾ।।3।। ಜಯ ಸಾರದೇಶ್ವರಿ ಸೀತಾರಾಧಾ ಮಾತಾಮೇರೀ। ಯಶೋಧರ ವಿಷ್ಣುಪ್ರಿಯಾ ಮಾ। ಯುಗದೇವವಂದಿತಾ ಸುರನರ ಸೇವಿತಾ। ನಮೋ ನಾರಾಯಣಿ ಮಾ।।4।।

ದೊರಕಿತು ಧರಣಿಗೆ ಸಿರಿವರ

ದೊರಕಿತು ಧರಣಿಗೆ ಸಿರಿವರ ಇಂದು। ಕರುಣೆಯ ಮೂರುತಿ ಶಾರದೆ ಬಂದು। ಪರಮ ಗುರುವಿನ ಶಕ್ತಿಯ ಸಿಂಧು। ಪೊರೆವಳು ಸರ್ವರ ಹೃದಯದಿ ನಿಂದು।।1।। ಕಲಿಯುಗದಾರ್ತರ ನೋಡುತ ನೊಂದು। ಒಲುಮೆಯ ಸುರನದಿ ತನ್ನಲಿ ಮಿಂದು। ಕಲುಷವ ಕಳೆಯುತ ಬೆಳಗಲಿ ಎಂದು। ಸುಲಭದ ಸಾಧನೆ ಸಾರುವೆ ತಂದು।।2।। ನಿರ್ಮಲ ಮೂರುತಿ ನಿಷ್ಕಲ ಇಂದು। ಕರುಣಿಸು ಒಂದೇ ಪ್ರೇಮದ ಬಿಂದು। ಪರಹಿತ ಜೀವಿತೆ ಸರ್ವರ ಬಂಧು। ಮೊರೆಯುವೆ ನಿನ್ನಲಿ ಕೃಪೆ ತೋರೆಂದು।।3।।

ತವಕೃಪೆ ಬೆಳಗಲಿ — ರಾಗ: ಭೀಮಪಲಾಸಿ

ತವಕೃಪೆ ಬೆಳಗಲಿ ಭವಭ್ರಮೆ ಕಳೆಯಲಿ। ಶಿವೆ ಶ್ರೀ ಶಾರದೆ ತವಕದಿ ಮೊರೆಯುವೆ।। ಇಂದು ಸುವಿಮಲೆ ವಂದಿತ ಪದತಲೆ। ಕುಂದದ ಪ್ರೇಮದ ಮಂದಾಕಿನಿಯೆ।।1।। ತ್ಯಾಗ ವಿಭೂಷಿತೆ ತ್ಯಾಗಿ ಕುಲಾಂಬಿಕೆ। ಯೋಗೀಂದ್ರಾರ್ಚಿತ ಯೋಗ ಪ್ರದಾತೆ।। ನಿನ್ನಡಿದಾವರೆ ಎನ್ನಯ ಆಸರೆ। ಮನ್ನಿಸು ದಾಸನ ಬಿನ್ನಹ ಮಾತೆ।।2।।

ರಾಮಕೃಷ್ಣ ತಪೋಸೂರ್ಯ

ರಾಮಕೃಷ್ಣ ತಪೋಸೂರ್ಯ। ಕಿರಣಬಿಂಬ ಚಂದ್ರಿಕೆ। ಓ ತಾಯಿ ಅಂಬಿಕೆ।। ಗಿರಿಯ ದರಿಯನೆಲವಜಲವ ತಬ್ಬಿನಿಂತ

ಕರುಣೆಯೆ। ವಾತ್ಸಲ್ಯ ವರಣೆಯೆ।। ರಾಮಕೃಷ್ಣ ತಪೋವನದ ಪರ್ಣಕುಟಿಯ ದೀಪವೆ। ಬಳಿಗೆ ಬಂದ ಹಣತೆಗಳಿಗೆ ಬೆಳಕನಿತ್ತ ಕಿರಣವೆ। ಮೌನ ಪ್ರಭಾವಲಯವೇ।।1।। ಸಂಕಟಗಳ ವನವಸನವ। ನುಟ್ಟು ನಿಂತ ಶಿಖರವೆ। ನದಿನದಗಳ ವಾತ್ಸಲ್ಯದ। ಹಾಲೂಡಿದ ತೀರ್ಥವೆ। ದಿವ್ಯ ಕೃಪಾರೂಪವೇ।।2।।

ಅಲೆದಲೆದು ಅತಿ ದಣಿದು

ಅಲೆದಲೆದು ಅತಿ ದಣಿದು ನೆಲೆ ಗಾಣ್ದೆ ನಿನ್ನಡಿಗೆ। ಎಲೆ ತಾಯೆ ಕಡೆಗಿಂದು ಬಂದೆಮ್ಮ ಸಲಹು।। ಕೊನೆಯಿಲ್ಲ ಕೊರೆಯಿಲ್ಲ ಈ ನಮ್ಮ ದುಃಖಕ್ಕೆ। ಮನದಲ್ಲಿ ಬನದಲ್ಲಿ ನೆಮ್ಮದಿಯು ಇನಿತಿಲ್ಲ। ಜನುಮಗಳ ಕಳೆಕಳೆದು ದುಃಖ ಮಿತಿ ಮೀರುತಿದೆ। ಜನನಿ ಮಂಗಳ ಮೂರ್ತಿ ಕಳೆಯೆಮ್ಮ ಕಲುಷಾರ್ತಿ।।1।। ಪರಮ ಹಂಸರ ಕರುಣೆ ರೂಪಿಣಿಯೆ ನೀತಾಯೆ। ಪರತನವನರಿಯದಿಹ ಪ್ರೇಮದಂಬುಧಿ ಜಲವ। ಎರೆದೆಮ್ಮನುದ್ಧರಿಸು ಪತಿತ ಪಾವನೆ ಮಾತೆ। ಸಾರದಾಯಿನಿ ಪರಮೆ ಅಕಳಂಕ ಚರಿತ।।2।।

❖ ❖ ❖

ಸಪ್ತಋಷಿ ಭುವನದಿಂದ — ರಾಗ: ರೇವತಿ

ಸಪ್ತಋಷಿ ಭುವನದಿಂದ। ಇಳೆಗಿಳಿದು ಬಂದ। ಶ್ರೀಗುರು ದೇವರ ಕಂದ ವಿವೇಕಾನಂದ।।ಪ।। ತ್ಯಾಗ ವಿರಾಗದ ಕಡಲು ಭೋಗಗಳ ಸಿಡಿಲು। ಜಗಜನರಿಗೆ ತಾಯ್ಮಡಿಲು ಹರನನರ ನೋಡಲು ।।1।। ಆತ್ಮಜ್ಞಾನದ ಕಾಂತಿ ಮೋಹ ದುಪಶಾಂತಿ। ಬಳಲಿದವರಿಗೆ ವಿಶ್ರಾಂತಿ ನೀಗಿರುವೆ ಭ್ರಾಂತಿ।।2।। ಮಿರುಗುವ ವಿದ್ಯಾಸೂರ್ಯ। ನಿಸ್ಸೀಮ ವೀರ್ಯ। ಮೇರೆಯನರಿಯದ ಧೈರ್ಯ ಎಸೆಗೆ ಕಾರ್ಯ।।3।।

ಉತ್ತಿಷ್ಠತ ಜಾಗ್ರತ ಮನುಜ — ರಾಗ: ಮಿಶ್ರಸಾರಂಗ-ತ್ರಿತಾಳ

ಉತ್ತಿಷ್ಠತ ಜಾಗ್ರತ ಮನುಜ।। ಗುರಿಯನು ಸೇರುವವರೆಗೂ। ನೀ ಅರೆಕ್ಷಣ ನಿಲ್ಲದೆ ಮುನ್ನಡೆ ಸಖನೇ।।ಪ।। ನಿನ್ನಯ ಗುರಿಯು ಆತ್ಮದರುಶನ ನಿನ್ನೊಳಗೆಯೆ ಇದೆ ಆ ರತುನ। ಬನ್ನಪಡುತ ಈ ಕ್ಷುದ್ರ ಜೀವನದಿ ಇನ್ನು ತೊಳಲದಿರು ಮುನ್ನಡೆ ಸಖನೇ।।1।। ಮಮತೆಯ ಈ ದೇಹವೆ ನೀನೆಂದು ಭ್ರಮಿಸದಿರೈ ನೀ ಎಂದೆಂದೂ। ಅಮರ ಆತ್ಮನೀ ಅಮೃತಪುತ್ರನೇ। ಅಮಲಾನಂದದಿ ಪರಿಪೂರ್ಣನು ನೀ।।2।।

ಜಯ ವಿರೇಶ್ವರ ವಿವೇಕಭಾಸ್ಕರ

ಜಯ ವೀರೇಶ್ವರ ವಿವೇಕಭಾಸ್ಕರ। ಜಯ ಜಯ ಶ್ರೀ ವಿವೇಕಾನಂದ।। ಇಂದು ನಿಭಾನನ ಸುಂದರ ಲೋಚನ। ವಿಶ್ವಮಾನವ ಚಿರವಂದ್ಯ।। ಪ್ರೇಮ ಟಲಟಲಕಾಂತಿ ಸುವಿಮಲ। ಅಧಿಗತ ವೇದವೇದಾಂತ। ತ್ಯಾಗತಿತಿಕ್ಷಾತಪಸ್ಯಾ ಉಜ್ವಲ। ಚಿತ್ತ ನಿರಮಲಶಾಂತ।। ಕರ್ಮ ಭಕ್ತಿ ಜ್ಞಾನ ತ್ರಿಶೂಲಧಾರಣ। ಛೇದನ ಜೀವ ಮೋಹ ಬಂಧ। ಬ್ರಹ್ಮಪರಾಯಣ ನಮೋ ನಾರಾಯಣ। ದೇಹಿದೇಹಿ ಚರಣಾರವಿಂದ।।

ಧರಮ ಭೇದ ಭಂಜನ

ಧರಮ ಭೇದ ಭಂಜನ ವಂದಿ ಜಗತ ವಂದನ। ಜ್ಞಾನಭಕುತಿ ವಿತರಣೇ ನರಶರೀರ ಧಾರಣ।। ವಿಗತ ಗೇಹ ಬಂಧನ ವಿಜಿತ ಮೀನ ಕೇತನ। ರೂಪೇ ಕಾಮಗಂಜನ ವಾಣಿ ವೀಣಾ ನಿಂದನ।। ಪ್ರೇಮ ಮತ್ತನರ್ತನ ಅಭೀರಭೀಃ ಗರ್ಜನ। ಭೂಧರ ಸಾಗರ ಲಂಘನ ಜೀವತಾರಣ ಕಾರಣ।। ಕೂಟ ಕಪಟೀ ಮರ್ದನ ಸಜ್ಜನ ಮನೋಮೋಹನ। ವಿಶ್ವಮಾನವ ವಂದಿತೋಮಾಯ್ ರಾಮಕೃಷ್ಣನಂದನ।।

❖ ❖ ❖

ಏಳು ಸಾಯಿನಾಥ (ಉದಯರಾಗ) **ರಾಗ: ಭೂಪಾಳಿ-ಝಂಪೆತಾಳ**

ಏಳು ಸಾಯಿನಾಥ। ಏಳು ಶಿರಡಿವಾಸ। ಏಳು ಭಕ್ತರ ಪೊರೆಯೋ। ಭಕ್ತವತ್ಸಲ। ಏಳಯ್ಯ ಬೆಳಗಾಯಿತು॥ಪ॥ ಅರುಣನುದಿಸಿದನೇಳು। ಇರುಳು ಹರಿದಿದು ಏಳು। ಅರಳಿದುದು ಕಮಲ ಸಂಪಿಗೆ ಪುಷ್ಪ-ಚಯವೆಲ್ಲ। ಸ್ವರಗೈಯ್ಯುತಿವೆ ಭ್ರಮರ ಹಕ್ಕಿಗಳು ಹಾರುತಿವೆ॥ ಪರಿಮಳದ ತಂಗಾಳಿ ಬೀಸುತಿದೆ ಏಳು॥1॥ ಕಾಗೆ ಕೂಗಿತು ಏಳು ಗಿಳಿ ಹಿಂಡು ಹಾರುತಿವೆ॥ ಮೃಗಜಾತಿ ತಿರುಗುತಿವೆ ಮೂಡದೆಶೆ ಬೆಳಗಿತು॥ ಯೋಗಿಗಳ ವಿಮಲ ಹೃತ್ಕಮಲವರಳಿದುದು ನೀ॥ ಯೋಗ ನಿದ್ರೆಯ ಬಿಟ್ಟು। ನೀ ಬೇಗ ಏಳು॥2॥ ದೇಹಿಗಳ ನಿದ್ರೆಯನು ತೊರೆಸಿ ತಿಳುಹಿಸುವ ನಿರ್ವಾಹಕನು ನೀನು ನಿದ್ರೆಯ ತೊರೆದು ಏಳು॥ ಮೋಹಾಂಧಕಾರ ಹರಮಾರ್ತಾಂಡ ಸಾಯಿದೇವ ನಮ್ಮ। ದೇಹ ಬೆಳಗಿಸಿ ಹೃತ್ಕಮಲವರಳಿಸೇಳು॥3॥

ಶಿರಡಿ ಪುರಕೆ ಹೋಗೋಣ **ರಾಗ: ಕಾನಡ-ಆದಿತಾಳ**

ಶಿರಡಿ ಪುರಕೆ ಹೋಗೋಣ। ಬಾಬಾ ದರುಶನ ಮಾಡೋಣ। ಎಲ್ಲರೂ ಒಂದಾಗಿ ಹೋಗೋಣ। ಆಡುತಾ ಪಾಡುತಾ ನಲಿಯೋಣ॥1॥ ದಾರಿ ಕಾಣದು, ಊರು ತಿಳಿಯದು। ಹೇಗಯ್ಯ ಬರಲಿ ನಿಮ್ಮ ಊರಿಗೆ। ದಾರಿಯ ದೀಪ ನೀನಾಗಿ। ನಮ್ಮಲಿ ನೀನು ಒಂದಾಗಿ॥2॥ ತುಪ್ಪದ ದೀಪ ಹಚ್ಚುವೆನು। ಜ್ಞಾನದ ಬೆಳಕು ನೀಡಯ್ಯ। ಹಣ್ಣು ಕಾಯಿ ನೀಡುವೆವು। ಆಶೀರ್ವಾದ ಮಾಡಯ್ಯ॥3॥ ಕರ್ಪೂರದ ಆರತಿ ಬೆಳಗೋಣ। ಶಾಂತಿ ಸಹನೆಯ ಬೇಡೋಣ। ಆರತಿ ಹಾಡು ಹಾಡೋಣ। ಬಾಬಾ ಹಾರೈಸಿ ಆನಂದ ನೀಡಯ್ಯ॥4॥

ಸಾಯಿ ಮನೆಗೆ ಬಂದ **ರಾಗ: ಸಿಂಧೂಭೈರವಿ**

ಸಾಯಿ ಮನೆಗೆ ಬಂದ। ಜಗಜ್ಯೋತಿ ಧರೆಗೆ ತಂದ॥ಪ॥ ಎಲ್ಲರ ಮನವ ಬೆಳಗಲು ಬಂದ। ದಿವ್ಯ ದೀಕ್ಷೆಯ ನೀಡಲು ಬಂದ। ಆವಾವ ಭಾವಕ್ಕೆ ತಕ್ಕಂತೆ ಕಂಡ। ಆದಿಮೂಲನೆ ತಾನು ಎನ್ನುತ ನಿಂದ॥1॥ ಪ್ರೇಮಾನುರಾಗದಿ ದೃಷ್ಟಿಯ ಬೀರುತ। ಭಕ್ತರ ಎಡೆಗೆ ಕೈಯ ಬೀಸುತ। ನೇಮನಿಷ್ಠೆಯಲಿ ಭಜಿಸಿರಿ। ಎನುತ ಕೋರಿದ ವರವ ಕೊಡುವೆ ನಾನೆಂದ॥2॥ ಪಾವನ ವಾಯಿತು ನಮ್ಮಯ ಮನೆಮನ। ಪಾದಧೂಳಿಯಿಂದ ಪಾಪವು ಕಳೆಯಿತು। ಜನುಮದ ಸಾರ್ಥಕ ಇಂದೆ ಆಯಿತು। ಚೈತನ್ಯ ದಾಸಗೆ ದರ್ಶನ ಸಿಕ್ಕಿತು॥3॥

ಬಂದನೊ ಬಾಬಾ **ರಾಗ: ಮೋಹನ-ಆದಿತಾಳ**

ಬಂದನೊ ಬಾಬಾ ಶ್ರೀ ಸಾಯಿಬಾಬಾ। ಬಂದನೋ ಬಂದನೋ ಫಕೀರನ ರೂಪದಲಿ। ಭಕ್ತರನು ರಕ್ಷಿಸಲು ಭರದಿಂದ ಬಂದನು। ಬಂದನೋ ಬಾಬಾ ಶ್ರೀ ಸಾಯಿಬಾಬಾ॥ಪ॥ ನಿನ್ನ ದರುಶನದಿಂದ ಭವರೋಗ ಹರಿಸುವೆ। ನಿನ್ನ ಸನ್ನಿಧಿಯಿಂದ ಸುಖವನ್ನೇ ನೀಡುವೆ। ಮೋಹವನ್ನು ಬಿಡಿಸಿ ಜ್ಞಾನವನ್ನೇ ನೀ ನೀಡೋ। ಧ್ಯಾನ ಮಾಡುವ ದಾರಿ ನೀ ತೋರೋ ಬಾಬಾ॥1॥ ನೀರಿನಲ್ಲಿ ದೀಪ ಹಚ್ಚಿ ಬೆಳಕನ್ನು ನೀಡಿದೆ। ವಿಭೂತಿ ಮಹಿಮೆ ತೋರಿ ಆನಂದ ತುಂಬಿದೆ। ನಿನ್ನ ಚರಿತ್ರೆಯನ್ನು ಪಠಿಸುವ ಭಕ್ತರಿಗೆ। ಕಷ್ಟಗಳ ನಿವಾರಿಸುವ ಕುಕ್ಕೇಸ್ವಾಮಿ ರೂಪದಿ ನೀ ಬಾಬಾ॥2॥

ಸಾಯಿ ನಮೋ ಸಾಯಿ ನಮೋ **ರಾಗ: ಪುನ್ನಾಗವರಾಳಿ-ಏಕತಾಳ**

ಸಾಯಿ ನಮೋ ಸಾಯಿ ನಮೋ। ಸಾಯಿ ನಮೋ ಜೈ ಸಾಯಿ ನಮೋ॥ ಬಾಬಾ ನಮೋ ಬಾಬಾ ನಮೋ। ಬಾಬಾ ನಮೋ ಸಾಯಿಬಾಬಾ ನಮೋ॥ ನಿತ್ಯಾನಂದ ಸಾಯಿ ನಮೋ। ನಿರ್ಮಲರೂಪ ಬಾಬಾ ನಮೋ। ಪ್ರಸನ್ನವದನ ಸಾಯಿ ನಮೋ। ಪ್ರೇಮ ರೂಪ ಬಾಬಾ ನಮೋ॥ ಭಕ್ತವತ್ಸಲ ಸಾಯಿ ನಮೋ। ಪರಮಕೃಪಾಳು ಬಾಬಾ ನಮೋ। ಭಕ್ತ ಬಂಧು ಸಾಯಿ ನಮೋ। ಭಜನ ಪ್ರಿಯ ಬಾಬಾ ನಮೋ॥ ರಾಮ ರೂಪ ಸಾಯಿ ನಮೋ। ಕೃಷ್ಣರೂಪ ಬಾಬಾ ನಮೋ। ಈಶ ರೂಪ ಸಾಯಿ ನಮೋ। ಮಾರುತಿ ರೂಪ ಬಾಬಾ ನಮೋ॥ ದತ್ತಗುರು ಸಾಯಿ ನಮೋ। ತಾರಕ ರೂಪ ಬಾಬಾ ನಮೋ।

ಶಾಶ್ವತ ಮೂರ್ತೇ ಸಾಯಿ ನಮೋ। ಶಾಂತಸ್ವರೂಪ ಬಾಬಾ ನಮೋ।। ನರಸಿಂಹವಂದ್ಯ ಸಾಯಿ ನಮೋ। ರಾಧಕೃಷ್ಣ ಪೂಜ್ಯ ಬಾಬಾ ನಮೋ। ಸಚ್ಚಿದಾನಂದ ಸಾಯಿ ನಮೋ। ಸಮರ್ಥ ಸದ್ಗುರು ಬಾಬಾ ನಮೋ।।

ಶಿರಡಿನಾಥ ಶ್ರೀ ಸಾಯಿನಾಥ **ರಾಗ: ಆರಭಿ**

ಶಿರಡಿನಾಥ ಶ್ರೀ ಸಾಯಿನಾಥ। ಆಪದ್ಬಾಂಧವ ಪ್ರೇಮಸ್ವರೂಪ।।ಪ।। ಮಾನವಧರ್ಮವ ಜಗಕೆಸಾರಿದೆ। ದೀನದಲಿತರಲಿ ಪ್ರೇಮವ ತೋರಿದೆ। ನಿಷ್ಕಾಮ ಸೇವೆಯಿಂ ಜನರ ತಣಿಸಿದೆ। ಭಕ್ತವತ್ಸಲನೆಂಬ ಕೀರ್ತಿಯ ಪಡೆದೆ।।1।। ದ್ವೇಷ ಅಸೂಯೆಯ ದೂರಮಾಡಿದೆ। ಸಾಮರಸ್ಯವ ಜಗದಿ ತುಂಬಿದೆ। ರೋಗರುಜಿನಾದಿಯಿಂ ಪಾರುಮಾಡಿದೆ। ಅನಾಥನಾಥ ನಾಮವ ಪಡೆದೆ।।2।। ಚರಣ ಸೇವೆಯನು ಕರುಣಿಸು ತಂದೆ। ಕರಪಿಡಿದೆನ್ನ ಸಲಹೈ ಮುಂದೆ। ಭಕ್ತರ ಪೊರೆಯೆ ಅವತಾರ ಗೈದೆ। ಚೈತನ್ಯ ದಾಸನ ಮನವಿ ಮನ್ನಿಸಿದೆ।।3।।

ಸಾಯಿಬಾಬ ಶ್ರೀ ಸಾಯಿಬಾಬ **ರಾಗ: ಭೌಳಿ**

ಸಾಯಿಬಾಬ ಶ್ರೀ ಸಾಯಿಬಾಬಾ। ಶಿರಡಿಯಲಿ ಶ್ರೀ ಸಾಯಿಬಾಬಾ। ಸಾಯಿಬಾಬ ಶ್ರೀ ಸಾಯಿಬಾಬಾ। ಪುಟ್ಟಪರ್ತಿಯ ಸತ್ಯ ಸಾಯಿಬಾಬಾ।।1।। ಸಾಯಿಬಾಬ ಶ್ರೀ ಸಾಯಿಬಾಬಾ। ಭಕ್ತರ ಬಾಬ ಸಾಯಿಬಾಬಾ। ಸಾಯಿಬಾಬ ಶ್ರೀ ಸಾಯಿಬಾಬಾ। ಪವಾಡ ಪುರುಷ ಸಾಯಿಬಾಬಾ।।2।। ಸಾಯಿಬಾಬ ಶ್ರೀ ಸಾಯಿಬಾಬಾ। ಶಿವನಾಶೀರ್ವಾದ ಸಾಯಿಬಾಬಾ। ಸಾಯಿಬಾಬ ಶ್ರೀ ಸಾಯಿಬಾಬಾ। ಭಕ್ತರ ಪ್ರಿಯನೆ ಸಾಯಿಬಾಬಾ।।3।। ಸಾಯಿಬಾಬ ಶ್ರೀ ಸಾಯಿಬಾಬಾ। ನಿನ್ನೊಲುಮೆ ನಮಗೆ ಸಾಯಿಬಾಬ ಸಾಯಿಬಾಬ ಶ್ರೀ ಸಾಯಿಬಾಬಾ। ನಮ್ಮನಗಲದಿರು ಸಾಯಿಬಾಬಾ।।4।। ಸಾಯಿಬಾಬ ಶ್ರೀ ಸಾಯಿಬಾಬಾ। ದರುಶನ ತೋರೋ ಸಾಯಿಬಾಬಾ। ಸಾಯಿಬಾಬ ಶ್ರೀ ಸಾಯಿಬಾಬಾ। ದಾರಿಯ ತೋರೋ ಸಾಯಿಬಾಬಾ।।5।। ಸಾಯಿಬಾಬ ಶ್ರೀ ಸಾಯಿಬಾಬಾ। ನಿನ್ನ ಭಜಿಸುವೆವು ಸಾಯಿಬಾಬಾ। ಸಾಯಿಬಾಬ ಶ್ರೀ ಸಾಯಿಬಾಬಾ। ಮುಕುತಿಯ ನೀಡೋ ಸಾಯಿಬಾಬಾ।।6।।

ಶಿರಡಿ ಸಾಯಿಬಾಬಾ **ರಾಗ: ಭೂಪಾಲಿ-ಆದಿತಾಳ**

ಶಿರಡಿ ಸಾಯಿಬಾಬಾ ಶಿರಡಿ ಸಾಯಿಬಾಬಾ।।ಪ।। ಸ್ಥಿರವಾಗಿ ಶಿರಡಿಯಲ್ಲಿ ನೀ ನೆಲೆಸಿರುವೆ। ನಿರುತವೂ ನಿನ್ನ ಸೇವೆ ಮಾಡುವೆನಯ್ಯ। ಸರ್ವರೂ ಆನಂದದಿ ಪಾಡಿ ಪೂಜಿಸುತಲಿ। ಭಜನೆಯ ಮಾಡುತ ಬೇಡುತಲಿರುವರು।।1।। ಅಭಯ ಹಸ್ತವ ತೋರಿ ನೀ ನಿಂತಿರುವೆ। ಹರುಷದಲಿ ನಿನಗೆ ಆರುತಿ ಮಾಡುತಲಿ। ಆದರಿಸಿ ನಿನ್ನನ್ನು ಭಕ್ತಿಯಲಿ ಬೇಡುವರು। ಅಭಯ ಹಸ್ತದಿ ವರವ ನೀ ನೀಡೋ ಬಾಬಾ।।2।। ದತ್ತಾತ್ರೇಯ ರೂಪವ ನೀ ತೋರುತಿರುವೆ। ವಿಭೂತಿ ಮಹಿಮೆಯ ನೀ ನೀಡುತಿರುವೆ। ವಿಭೂತಿ ಧರಿಸಿದವರ ವಿಘ್ನನಾಶ ಮಾಡುವೆ। ನಿನ್ನ ಪವಾಡವು ಕುಕ್ಕೆಸ್ವಾಮಿಯಲಿ ತೋರಿದೆ ಬಾಬಾ।।3।।

ಭಜರೆ ಸಾಯಿಗುರುಂ **ರಾಗ: ಹಿಂದೋಳ**

ಭಜರೆ ಸಾಯಿಗುರುಂ। ಮಾನಸ।।ಪ।। ಭಜಗುರುನಾಥಂ ಭಕ್ತ ವಿಮೋಚಕ। ಪರಬ್ರಹ್ಮ ರೂಪಂ ಶಿರಡೀ ವಾಸಂ।।1।। ಸರ್ವಜನ ರಕ್ಷಕ ಸರ್ವಗುಣೋಪೇತಂ। ಸಾಕ್ಷಾತ್ಕಾರಂ ಜಗದಾಧಾರಂ।।2।। ರಾಮಕೃಷ್ಣಾದಿ ಸರ್ವ ಸ್ವರೂಪಂ। ಶರಣಾಗತ ರಕ್ಷಣ ಶೀಲಂ।।3।।

ಸಾಯಿ ರಾಂ ಪಾಹಿ **ರಾಗ: ನಾದನಾಮಕ್ರಿಯೆ-ಏಕತಾಳ**

ಸಾಯಿ ರಾಂ ಪಾಹಿ ಸಾಯಿರಾಂ ಪಾಹಿ। ಸಾಯಿರಾಂ ಪಾಹಿ ಸಾಯಿ ಪ್ರಭೋ।।ಪ।। ಜೀವನ ಸಾರ ಜಗದೋದ್ಧಾರ। ಪಾವನಮೂರ್ತಿಯೆ ನೀನೆ ಪ್ರಭೋ। ಸುಖಕರದಾತ ಭಾಗ್ಯವಿಧಾತ। ಲೋಕೋದ್ಧಾರಕ ನೀನೆ ಪ್ರಭೋ।।1।।

ಪಂಕಜನೇತ್ರ ಪರಮಪವಿತ್ರ। ಅಂಬುಜನಾಭನೆ ನೀನೆ ಪ್ರಭೋ। ಪುರಾಣ ಪುರುಷ ಶಿರಡಿನಿವಾಸ। ಪರಮ ದಯಾಕರ ನೀನೆ ಪ್ರಭೋ॥2॥ ಸದ್ಗುಣ ಮೂರ್ತಿ ಸತ್ಯಾವತಾರಿ। ನಿರ್ಗುಣ ಬ್ರಹ್ಮನೆ ನೀನೆ ಪ್ರಭೋ। ದೇವಾದಿದೇವ ವೇದಾಂತ ಸಾರ। ಸುರೇಂದ್ರ ಮೂರ್ತಿಯೆ ನೀನೆ ಪ್ರಭೋ॥3॥

ಎಂಥ ಅಂದ ಎಂಥ ಚೆಂದ ಸಾಯಿಬಾಬಾ **ರಾಗ: ಮಧ್ಯಮಾವತಿ-ಆದಿತಾಳ**

ಎಂಥ ಅಂದ ಎಂಥ ಚೆಂದ ಸಾಯಿಬಾಬಾ। ನಿನ್ನ ನೋಡಲೆರಡು ಕಣ್ಣು ನನಗೆ ಸಾಲದಯ್ಯ॥ಪ॥ ಇನ್ನು ಇನ್ನು ನೋಡುವಾಸೆ ತುಂಬಿತಯ್ಯ। ಇನ್ನು ಕೋಟಿ ಜನ್ಮ ಬರಲಿ ನನಗೆ ಸಾಲದಯ್ಯ। ಅಭಯ ಹಸ್ತ ನೋಡಿ ಜೀವ ಕುಣಿಯಿತಯ್ಯ। ನಿನ್ನ ಪಾದ ಕಮಲದಲ್ಲಿ ಶಿರವು ಬಾಗಿತಯ್ಯ॥1॥ ಎಂಥ ಶಕ್ತಿ ನಿನ್ನಲಿದೆಯೋ ಸಾಯಿಬಾಬಾ। ನಿನ್ನ ನೋಡಿ ಹಾಡೋ ಆಸೆ ನನಗೆ ಬಂದಿತಯ್ಯ। ರತ್ನದಂಥ ಮಾತುಗಳನು ಆಡಿಸಯ್ಯ। ಒಳ್ಳೆ ರಾಗ ಭಾವ ಭಕ್ತಿ ತುಂಬಿ ಹಾಡಿಸಯ್ಯ॥2॥ ಅಲ್ಲಿ ಇಲ್ಲಿ ಓಡೋ ಮನಸು ನನ್ನದಯ್ಯ। ನೀನು ಬೇಗ ಬಂದು ಅಲ್ಲಿ ನೆಲಸಯ್ಯ। ಬೇರೆ ಏನು ಬೇಕು ಎಂದು ಬೇಡೆನಯ್ಯ। ನಿನ್ನ ಕರುಣೆಯಿಂದ ಮುಕ್ತಿಯನ್ನು ತೋರಿಸಯ್ಯ॥3॥

ಆಸೆಯ ಬಿಡಲಾರೆ ಶ್ರೀ ಸಾಯಿನಾಥ

ಆಸೆಯ ಬಿಡಲಾರೆ ಶ್ರೀ ಸಾಯಿನಾಥ। ಆಸೆಯ ಪೂರೈಸು ಬಂದು। ಆಸೆಯಿಂದಲಿ ನಿನ್ನ ಸನ್ನಿಧಿಗೆ ನಾ ಬಂದೆ। ಕೈ ಮುಗಿಯುವೆ ಶಿರಬಾಗಿ ನಿಂದು॥1॥ ಕಣ್ಣುಗಳಿಗೆ ನಿನ್ನನ್ನು ಕಾಣುವೆ ಆಸೆ। ಕಿವಿಗಳಿಗೆ ನಿನ್ನ ನಾಮ ಕೇಳುವ ಆಸೆ॥ ನಾಲಿಗೆಗೆ ನಿನ್ನ ನಾಮ ಪಾಡುವ ಆಸೆ। ಕರಗಳಿಗೆ ಗುರು ಪೂಜೆ ಮಾಡುವ ಆಸೆ॥2॥ ಮನಸ್ಸಿನಲ್ಲಿ ನಿನ್ನ ಬೆರೆಯುವ ಆಸೆ। ಕನಸಿನಲ್ಲಿ ನಿನ್ನ ಕಾಣುವ ಆಸೆ। ಬದುಕೆಲ್ಲಾ ನಿನ್ನೊಡನೆ ಬಾಳುವ ಆಸೆ। ಆಸೆಗಳೆಲ್ಲಾ ಹೀಗೆಯೆ ಇರಲೆಂಬ ಆಸೆ॥3॥

ಸಾಯಿನಾಥ ಪ್ರಭು **ರಾಗ: ಶಿವರಂಜಿನಿ**

ಸಾಯಿನಾಥ ಪ್ರಭು। ಸಾಯಿನಾಥ ಪ್ರಭೂ। ಸಾಧುವೆ ನೀ। ಸಲಹೋನೆ। ಬಡವನ ಮೇಲೆ ಕೃಪೆ ತೋರೋ॥ಪ॥ ಶಿರಡಿನಿವಾಸ। ಶ್ರೀಹರಿರೂಪ। ಸಾಧು ಶಿರೋಮಣಿ ದೇವಾದಿದೇವ। ನಿನ್ನ ನಂಬಿದವರ ಕೈ ಬಿಡದಿರಲೋ॥1॥ ನೊಂದು ಬೆಂದು ಬಳಲುತಿಹೆನು ನಾ ದಯೆಯನು ತೋರಿ। ಕಾಪಾಡೋ ದೇವ। ನೀನೇ ಎಮಗೆ ಸದ್ಗತಿ ನೀಡೋ॥2॥

ಢಂ ಢಂ ಢಂ ಢಂ ಢಮರು ಭಜೇ **ರಾಗ: ಕುರಂಜಿ**

ಢಂ ಢಂ ಢಂ ಢಂ ಢಮರು ಭಜೇ। ಭೋಲಾನಾಥ ಶಿವ ಶಂಭೋ ಭಜೇ। ಘಣ್ ಘಣ್ ಘಣ್ ಘಣ್ ಘಂಟಾ ಭಜೇ। ಗೌರೀನಾಥ ಶಿವ ಶಂಭೋಭಜೇ॥ ಭೋಂ ಭೋಂ ಭೋಂ ಭೋಂ ಶಂಖಾಭಜೇ॥ ಉಮಾಮಹೇಶ್ವರ ಶಂಭೋ ಭಜೇ॥

ಸತ್ಯರೂಪನೆ ಚಿತ್ಸ್ವರೂಪನೆ (ಆರತಿ) **ರಾಗ: ಶಂಕರಾಭರಣ**

ಸತ್ಯರೂಪನೆ ಚಿತ್ಸ್ವರೂಪನೆ ಜಗದ ಸಂಭವ ಕಾರಕಾ। ಭಕ್ತರಾಸೆಯ ನೀಡುವಾ ಕಾಮಧೇನುವೆ ವಂದನಮ್॥1॥ ಭವದ ಕತ್ತಲೆ ಕಳೆವ ದೇವನೆ ನಮ್ಮ ಮನವನು ಅರಿತನೇ। ನಿನ್ನ ಪಾದವ ಭಜಿಪೆ ಸಂತತ ಸಾಯಿನಾಥನೆ ವಂದನಮ್॥2॥ ಬೇವಿನಡಿಯಲಿ ವಾಸ ಮಾಡಿ ಕಹಿಯ ಕಳೆದಾ ದೇವನೆ। ಅದನೆ ಕಲ್ಪವೃಕ್ಷ ಮಾಡಿದ ಪರಮಪುರುಷನೆ ವಂದನಮ್॥3॥ ಬೇಡಿ ದಿಷ್ಟವ ಕೊಡುವ ಸಂತನೆ ಸಾಧುವರ್ಯನೆ ಪಾವನ್। ನಮ್ಮ ಕ್ಲೇಶವ ಕಳೆದು ಸಂತತ ಪಾಹಿ ಮಾಂ ಗುರುದೇವನೆ॥4॥ ನಿನಗೆ ತಂದೆ ತಾಯಿ ಯಾರೋ ಯಾರು ಬಲ್ಲರು ಯೋಗಿಯೆ। ಶಿರಡಿಕ್ಷೇತ್ರದಿ ಕಾಣಿಸಿದ ಕಲ್ಪವೃಕ್ಷನೆ ವಂದನಮ್॥5॥ ನಿನ್ನ ನಂಬಿದ ಭಕ್ತಕೋಟಿಯ ಬಿಡದೆ ಸಲಹುವ ಸಾಧುವೆ। ರೋಗಹಾರಕ

ಪಾಪನಾಶಕ ಯೋಗಿರಾಜನೆ ವಂದನಮ್॥6॥ ಜನನ ಮರಣವ ಗೆದ್ದ ಧೀರನೆ ಭಕುತರ ಪ್ರಾಣದಾತನೆ ನಿನ್ನ ಭಕ್ತರ ನೀನೆ ಹುಡುಕಿ ಸಲಹುವ ಗುರುರಾಜನೆ॥7॥ ಸಾಯಿನಾಥರ ಚರಣ ನಂಬಿದ ಜನರಿಗಿಲ್ಲ ಶೋಕವು। ಭಕ್ತರಾ ಹೊಣೆ ಹೊತ್ತಸಂತನೆ ಶಿರಡಿನಾಥನೆ ವಂದನಮ್॥8॥

ಶಿರಡಿವಾಸ ಸಾಯಿ ಪ್ರಭೋ (ಚಾಲೀಸಾ-ಸಾಯಿಬಾಬಾ-ತೆಲುಗು) ರಾಗ: ಮೋಹನ-ಆದಿತಾಳ

ಶಿರಡಿವಾಸ ಸಾಯಿ ಪ್ರಭೋ। ಜಗತಿಕಿ ಮೂಲಂ, ನೀವೇ ಪ್ರಭು। ದತ್ತ ದಿಗಂಬರ ಅವತಾರಂ। ನೀಲೋ ಸೃಷ್ಟಿ ವ್ಯವಹಾರಂ। ತ್ರಿಮೂರ್ತಿ ರೂಪಾ ಓ ಸಾಯಿ। ಕರುಣಿಂಚಿ, ಕಾಪೋಡೋಯಿ। ದರ್ಶನ ಮಿಯ್ಯಗ ರಾವಯ್ಯ। ಮುಕ್ತಿಕಿ, ಮಾರ್ಗಂ ಚೂಪುಮಯಾ॥1॥ ಕಪಿನಿ ವಸ್ತ್ರಂ ಧರಿಂಚಿ। ಭುಜಮುಕು ಜೋಲಿ ತಗಿಲಿಂಚಿ। ನಿಂಬವೃಕ್ಷಪು, ಚಾಯಲೋ। ಪಕೀರು ವೇಷಪು ಧಾರಣಲೋ। ಕಲಿಯುಗ ಮಂದುನ ವೇಲಸಿತಿವಿ। ತ್ಯಾಗಂ ಸಹನಂ ನೇರ್ಪಿತಿವಿ। ಶಿರಡಿ ಗ್ರಾಮಂ ನೀ ನಿವಾಸಂ। ಭಕ್ತುಲ ಮದಿಲೋ ನೀರೂಪಂ॥2॥ ಚಾಂದ ಪಟೇಲನು ಕಲಸುಕೊನಿ। ಆತನಿ, ಬಾದಲು ಕೆಲಸುಕೋನಿ। ಗುರ್ರಮು, ಜಾಡ ತೇಲಿಪಿತಿವಿ। ಪಾಟಿತ ಭಾದನು ತೀರ್ಚಿತಿವಿ। ವೆಲಗಿರ ಚಾವು ಜ್ಯೋಕುಲನು। ನೀ ಉಪಯೋಗಿಂಚಿ ಜಲಮು। ಅಚ್ಚೆರು, ನೋಂದೆಡು ಆ ಗ್ರಾಮಂ। ಚೂಸಿ ವಿಂತೈನ ದೃಶ್ಯಂ॥3॥ ಭಾಯಿಜಾ ಚೇಸೇನು ನಿ ಸೇವ। ಪ್ರತಿಫಲ ಮಿಚ್ಚಾಪೋ ದೇವಾ। ನೀ ಆಯುವುನ ಬದಲಿಚ್ಚಿ। ತಾತ್ಯಾನು ನೀವು ಬ್ರದಿಕಿಂಚಿ। ಪಶುಪಕ್ಷಲನು, ಪ್ರೇಮಿಂಚಿ। ಪ್ರೇಮತೋ, ವಾಟಿನಿ ಲಾಲಿಂಚಿ। ಜೀವುಲ, ಪೈನ ಮಮಕಾರಂ। ಚಿತ್ರಮಯಾ, ನೀ ವ್ಯವಹಾರಂ॥4॥ ನೀ ದ್ವಾರಮುಲೋ, ನಿಲಿಚಿಕೊನಿ। ನಿನ್ನೇ, ನಿತ್ಯಮು, ಕೋರ್ಚಿತಿನಿ। ಅಭಯಮು, ನಿಚ್ಚಿ ಭ್ರೋವುಮಯಾ। ಓ ಶಿರಡೀಶಾ ದಯಾಮಯಾ। ಧನ್ಯಮು ದ್ವಾರಕಾ, ಓಮಾಯಿ। ನೀಲೋ ನಿಲಚೆನು ಶ್ರೀಸಾಯಿ। ನೀದುನಿ ಮಂಟಲ ವೇಡಿಮಿಕಿ। ಪಾಪಮು ಪೋವುನು ತಾಕಿಡಿತಿ॥5॥ ಪ್ರಳಯ, ಕಾಲಂ, ಆಪಿತಿವಿ। ಭಕ್ತಲನು, ನೀವು, ಬ್ರೋಚಿತಿವಿ। ಚೇಸಿ, ಮಹಮಾರಿ, ನಾಶಕಂ। ಕಾಪಾಡಿ ಶಿರಡಿಗ್ರಾಮಂ। ಅಗ್ನಿಹೋತ್ರಿ, ಶಾಸ್ತ್ರಿಕಿ। ಲೀಲಾ ಮಹಾತ್ಯಂ ಚೂಪಿಂಚಿ। ಶ್ಯಾಮಾನು ಬ್ರತಿಕಿಂಚಿತಿವಿ। ಪಾಮು, ವಿಷಮು, ತೋಲಗಿಂಚಿ॥6॥ ಭಕ್ತಭೀಮಾಜೀಕಿ ಕ್ಷಯರೋಗಂ। ನಸಿಯಿಂಚೆ ಆತನಿ ಸಹನಂ। ಊದಿ, ವೈದ್ಯಮ, ಚೇಸಾವು। ವ್ಯಾಧಿನಿ ಮಾಯಂ ಚೇಸಾವು। ಕಾಕಾಜಿಕಿ, ಓ ಸಾಯಿ। ವಿಠ್ಠಲ ದರ್ಶನ ಮಿಚ್ಚಿತಿವಿ। ದಾಮೂಕಿಚ್ಚಿ ಸಂತಾಂನಂ। ಕಲಿಗಿಂಚಿಕಿವಿ ಸಂತೋಷಂ॥7॥ ಕರುಣಾ ಸಿಂಧು ಕರುಣಿಂಚು। ಮಾಪು, ಕರುಣ, ಕುರಿಪಿಂಚು। ಸರ್ವಂ ನಿಕೇ ಅರ್ಪಿತಮು। ಪೆಂಚಮು ಭಕ್ತಿ ಭಾವಮುನು। ಮುಸ್ಲಿಂ ಅನುಕೊನಿ ನಿನು ಮೇಮು। ತೆಲುಸುಕೊನಿ ಆತನಿ। ಭಾದ। ದಾಲ್ಚಿಶಿವ, ಶಂಕರ, ರೂಪಂ। ಇಚ್ಚಾವಯ್ಯಾ ದರ್ಶನಮು॥8॥ ಡಾಕ್ಟರಕು ನೀವು ರಾಮುನಿಗಾ।ಬಲ್ವಂತಕು ಶ್ರೀದತ್ತುನಿಗಾ। ನಿವೋನು ಕರುಕು ಮಾರುತಿಗಾ। ಚಿದಂಬರುಕು, ಶ್ರೀ ಗಣಪತಿಗಾ। ಮಾರ್ತಾಂಡಕು, ಖಂಡೋಭಗಾ, ಗಣಕು। ಸತ್ಯಂ ದೇವುನಿಗಾಷ ನರಸಿಂಹ ಸ್ವಾಮಿಗಾ, ಜೋಷಿಕಿ। ದರ್ಶನ ಮಿಚ್ಚಿನ ಶ್ರೀಸಾಯಿ॥9॥ ರೆಯ್ಯಿ ಪಗಲು ನೀಧ್ಯಾನಮ್। ಲಭಿಂಚನು ಮುಕ್ತಿಕಿ ಮಾರ್ಗಂ। ಪದುಕೊಂದು ನೀ ವಚನಾಲು। ಬಾಬಾ, ಮಾಕವಿ, ವೇದಾಲು। ಶರಣನಿ, ವಚ್ಚಿನ ಭಕ್ತಲನು। ಕರುಣಿಂಚಿ, ನೀವು, ಬ್ರೋಚಿತಿವಿ। ಅಂದರಿಲೋನ ನೀ ರೂಪಂ। ನೀ ಮಹಿಮಾ, ಅತಿಶಕ್ತಿಮಯಂ। ಓ ಸಾಯಿ ಮೇಮು ಮೂಢುಲಮು॥10॥ ವಸಗಮಯಾ, ನೀವು ಜ್ಞಾನಮುನು। ಸೃಷ್ಟಿಕಿ, ಮೂಲಂ ನೀವೆನಯಾ। ಸಾಯಿ ಮೇಮು ಸೇವಕುಲಂ। ಸಾಯಿ ನಾಮಮು ತಲಿಂಚೆದಮು। ನಿತ್ಯಸಾಯಿನಿ ಕೊಲಿಚೆದಮು। ಭಕ್ತಿ ಭಾವನ ತೆಲಸುಕೋನಿ। ಸಾಯಿನಿ, ಮದಿಲೋ, ನಿಲುಪುರೋನಿ। ಚಿತ್ರಮುತೋ ಸಾಯಿಧ್ಯಾನಂ ತೋ॥11॥ ಚೆಯ್ಯಂಡಿ ಇಂಟಿಕಿ ಪ್ರತಿನಿತ್ಯಂ ಬಾಬಾ, ಕಾಲ್ಚಿನ, ದುನಿ ಊದಿ। ನಿವಾರಿಂಚುನು ಅತಿವ್ಯಾದಿ। ಸಮಾಧಿನುಂಡಿ, ಶ್ರೀಸಾಯಿ। ಭಕ್ತುಲನು ಕಾಪಾಡೇ ನೋಯಿ। ಮನಪ್ರಶ್ನಲಕು ಜವಾಬುಲು। ತೆಲಪುನು ಸಾಯಿ ಚರಿತಮುನು। ವಿನಂಡಿ, ಲೇಕ, ಚೆದವಂಡಿ॥12॥ ಸಾಯಿ ನಿತ್ಯಂ ಚೂಡಂಡಿ। ಸಾಯಿ ಸ್ವಪ್ನಮು ಪೊಂದಂಡಿ। ಸತ್ಸಂಗಮುನು ಚೇಯಂಡಿ। ಭೇದ ಭಾವಮುನು ಮಾನಂಡಿ। ಸಾಯಿಮನ ಸದ್ಗುರು ವಂಡಿ। ವಂದನಮಯ್ಯಾ, ಪರಮೇಶಾ। ಆಪತ್ ಬಾಂಧವ ಸಾಯೀಶಾ। ಮಾಪಾಪಮುಲು

ಕಡತೇರ್ಚು॥13॥ ಮಾಮದಿ ಕೋರಿಕ ನೆರವೇರ್ಚು। ಕರುಣಾಮೂರ್ತಿ ಓಸಾಯಿ। ಕರುಣ ತೋ ಮಮುದರಿ ಚೇರ್ಚೋಯಿ। ಮಾಮನಸ್ಸೇ, ನೀ ಮಂದಿರಮು। ಮಾಪಲುಕಲೇ, ನೀಕು ನೈವೇದ್ಯಮು॥14॥

ವಿಘ್ನೇಶ್ವರನ ಪಾದಕ್ಕೆ (ಶಿರಡಿಸಾಯಿಬಾಬಾ ಚರಿತ್ರೆ-ಲಾವಣಿ)

ವಿಘ್ನೇಶ್ವರನ ಪಾದಕ್ಕೆ ವಂದಿಸಿ। ಭಾರತಿದೇವಿಯ ಕರುಣೆಯಲಿ। ಸದ್ಗುರು ಚರಿತೆಯ ಸಂಕ್ಷೇಪದಲಿ। ಪೇಳುವೆ ಶ್ರೀಗುರು ಭಕ್ತಿಯಲಿ॥1॥ ಸದ್ಗುರು ಸಾಯಿಬಾಬಾನ ಚರಿತೆಯ ಸಜ್ಜನರೆಲ್ಲ ಆಲಿಸಿರೀ। ಆತನ ಮಹಿಮೆಯು ವರ್ಣಿಸಲಸದಳ। ಶಕ್ತಿಯ ನಾನು ಬೇಡುವೆನು॥2॥ ಭಾರತ ದೇಶದಿ ಅಹಮದ್ ನಗರದ। ಪವಿತ್ರ ಪತ್ರಿಗ್ರಾಮದಲಿ ಬ್ರಾಹ್ಮಣ ಕುಲದಲಿ ಉದಿಸಿದನೀತನು। ಸೂರ್ಯನ ಕಾಂತಿಯ ಬೆಳಗುತಲಿ॥3॥ ಪಂಚಮ ವರ್ಷಗಳಿತನ ಪೋಷಣೆ। ಫಕೀರರೊಬ್ಬರು ಮಾಡಿದರು। ಗುರುವೆಂಕಟೇಶ ಪೆರುಮಾಳ್ ಎಂಬುವರೀತನ ಸದ್ಗುರುವೆನಿಸಿದರು॥4॥ ಗುರುಶಿಷ್ಯರ ಪ್ರೇಮವ ಏನೆಂದು ಹೇಳಲಿ। ನರನಾರಾಯಣರವರಾಗಿ। ಮಾತೆಯ ಪ್ರೀತಿಯ ತೋರಿದ ಗುರುವಿನ ಚರಣಕೆ ವಂದಿಸಿ ಶಿರಬಾಗಿ॥5॥ ಆನಂದದಿಂದಲಿ ವಿದ್ಯಾಭ್ಯಾಸವ ಗುರುವಿನ ಬಳಿಯಲಿ ಮಾಡಿದರು। ಅದ್ಭುತ ಜ್ಞಾನವಗಳಿಸುತ ಕೀರ್ತಿಯ ಪಡೆದರು ಶಿಷ್ಯರ ವೃಂದದಲ್ಲಿ॥6॥ ದುರ್ಜನ ಶಿಷ್ಯರು ಅಸೂಯೆಯಿಂದಲಿ ಬಾಬನ ಮರಣದ ಬಯಸಿದರು। ಶಿಷ್ಯನ ಕಷ್ಟವ ನೀಗಿಸಲೋಸುಗ ಒಡ್ಡಿದ ಶಿರವನು ಗುರುವರನು॥7॥ ಧಾರೆಯ ನೆರೆದನು ಶಿಷ್ಯಗೆ ಸದ್ಗುರು ತನ್ನಯ ತಪಸ್ಸು ಶಕ್ತಿಯನು। ಅದ್ಭುತ ಸಿದ್ದಿಯಗಳಿಸುತ ಬಾಬನು ಮೆರೆದನು ಶಿರಡಿಯ ಕ್ಷೇತ್ರದಲಿ॥8॥ ಫಕೀರನಂತೆ ವಾಸಿಸುತ್ತಿದ್ದರು ಮಸೀದಿಯೊಳಗೆ ಕೆಲವು ದಿನ। ದೇವರು ಒಬ್ಬನೆ ನಾಮವು ಹಲವು ಎಂಬುದು ತಿಳಿದರು ನಾಡಜನ॥9॥ ಎಣ್ಣೆಯ ಇಲ್ಲದೆ ಹೋಗಲು ಬಾಬನು ನೀರಲಿ ಉರಿಸಿದ ದೀಪವನು। ಪಶ್ಚಾತ್ತಾಪದಿ ದುಷ್ಟರು ಬಿಟ್ಟರು ಸದ್ಗುರುನಾಥನ ದ್ವೇಷವನು॥10॥ ಭಕ್ತರ ಪರಿಪರಿ ರೋಗಗಳೆಲ್ಲಕೆ ಉದಿಯೆ ದಿವ್ಯೌಷಧವಾಯ್ತು। ಭೂತ ಪಿಶಾಚಿಗಳೆಲ್ಲವು ಬಿಡಲು ಉದಿಯ ಮಹಿಮೆಯು ತಾನಾಯ್ತು॥11॥ ಮರಣವನಪ್ಪಿದ ಜನಗಳನೇಕರು ಬಾಬನ ಕರುಣೆಯ ಮಂತ್ರದಲಿ। ಪ್ರಾಣವ ಪಡೆಯುತ ಮನದಲಿ ಸ್ಮರಿಸುತ ಬಿದ್ದರು ಗುರುವಿನ ಪಾದದಲಿ॥12॥ ರಾಮನ ಭಕ್ತಗೆ ರಾಮನೆ ಆದನು ಬಾಬಾನು ತಾನೇ ಕರುಣದಲಿ। ಕೃಷ್ಣನು ಶಿವನು ಮಾರುತಿ ದತ್ತನು ರಂಗನು ಆದನು ರೂಪದಲಿ॥13॥ ಮುಸ್ಲಿಮ್ ಬಾಂಧವರನೇಕ ಜಾತಿಯ ಶಿಷ್ಯರು ಬಾಬಾಗೆ। ಧರೆಯೊಳಗೆ। ಭೇದ ಭಾವನೆ ಓಡಿಸಿ ಗುರುವರ ಪ್ರಸಿದ್ಧಿಯಾದನು ಇಳೆಯೊಳಗೆ॥14॥ ಬಾಬಾನ ಪಾದದಿ ಗಂಗಾ ತೀರ್ಥವು ಹರಿಯಿತು ಭಕ್ತರ ಅಭೀಷ್ಟದಲಿ ತೀರ್ಥಪಾದರು ತಾವೆಂದೆಣಿಸುತ್ತ ತೊಳೆದರು ಪಾಪವ ಯುಕ್ತಿಯಲಿ॥15॥ ಬಗೆಬಗೆ ಭಕ್ತರ ಕಷ್ಟಗಳೆಲ್ಲವ ಪರಿಹರಿಸಿದನು ಸದ್ಗುರುವು। ನಂಬಿದ ಶಿಷ್ಯರಿಗೆ ಅಭಯವ ನೀಡುತ ಇತ್ತನು ಸುಖವನು ಇಹಪರವು॥16॥ ಒಂದು ಸಾವಿರದ ಒಂಬೈನೂರ ಹದಿನೆಂಟನೆಯ ಇಸವಿಯಲಿ। ಆಶ್ವಯುಜ ಶುದ್ಧೇಕಾದಶಿ ದಿನ ಗುರು ಭೌತಿಕ ದೇಹವ ತ್ಯಜಿಸಿದರು॥17॥ ಬಾಬನ ಸಮಾಧಿ ಕಂಗೊಳಿಸುತಲಿದೆ ಪವಿತ್ರ ಶಿರಡೀ ಕ್ಷೇತ್ರದಲಿ। ಯಾತ್ರೆಯ ಮಾಡುತ ಪುಣ್ಯವಗಳಿಸುತ ಭಕ್ತರು ನಡೆಯುತಲಿಹರಿಲ್ಲಿ॥18॥ ಈತನ ಉಪದೇಶಾಮೃತವಾಣಿಯು ಆಶ್ರಯವಾಗಿಹುದೆಲ್ಲ ರಿಗೂ। ಬಾಬಾನ ವಾಗ್ದಾನಂಗಳು ಎಮಗೆ ಭರವಸೆಯನ್ನು ನೀಡುವುವು॥19॥ ಸತತವು ದೃಷ್ಟಿಯು ನನ್ನಯ ಭಕ್ತರ ಮೇಲೆಯೇ ಇರುವುದು ಎನ್ನುವರು। ಏನೇ ಮಾಡಲಿ ಎಲ್ಲೆ ಇರಲಿ ನೋಡುವೆನೆಂಬನು ಕಾರ್ಯವನು॥20॥ ಎಲ್ಲಾ ಕಡೆಯು ಸದ್ಗುರು ತಾನೇ ತುಂಬಿಹೆನೆಂದನು ಶಿಷ್ಯರಿಗೆ। ಸತ್ಯವ ಬಿಡದಿಹ ಸಜ್ಜನರೊಡನೆ ವಾಸಿಪೆನೆಂದನು ಮನದೊಳಗೆ॥21॥ ನಿಶ್ಚಲ ಭಕ್ತಿಗೆ ಒಲಿಯುವೆನೆಂದನು ಬಾಬಾನು ಈಗಲು ಭಕ್ತರಿಗೆ। ದರ್ಶನವೀಯುತ ಕಷ್ಟವ ಕಳೆಯುತ ವಂದ್ಯನು ಆಗಿಹನೆಲ್ಲರಿಗೆ॥22॥ ಪ್ರತಿ ಗುರುವಾರವು ವಿಶೇಷ ಪೂಜೆಯು ನಡೆವುದು ಬಾಬಾಗೆ ಎಲ್ಲೆಡೆಯು। ಶ್ರೀರಾಮ ನವಮಿ ಆಷಾಢ ಮಾಸದ ಗುರು ಪೌರ್ಣಮಿಯಲಿ ಬೆಳಗುವುದು॥23॥ ಪವಿತ್ರ ಭಾರತ ದೇಶದಿ ಮಂದಿರ ಸ್ಥಾಪನೆಯಾಗಿದೆ ಎಲ್ಲೆಲ್ಲೂ। ಪೂಜೆಯ ನಡೆಯುತ ಲೀಲೆಯ ತೋರುತ ಅಭಯನೀವನು ಸದ್ಗುರುವು॥24॥ ಸದ್ಗುರು ಬಾಬಾನ ಪುಣ್ಯಚರಿತೆಯ ಕೇಳಿದ ಆಸ್ತಿಕರೆಲ್ಲರಿಗೂ। ಇಹಪರದಲ್ಲಿ ಕರುಣಿಸಿ ಬಾಬಾನು ಮುಕ್ತಿಯ ಭಾಗ್ಯವ ನೀಯುವನು॥25॥

ಆರತಿ ಶ್ರೀ ಸಾಯಿಗುರುವೇ ಪರಮ ಪಾವನ (ಆರತಿ) ರಾಗ: ಸೌರಾಷ್ಟ್ರ

ಆರತಿ ಶ್ರೀ ಸಾಯಿಗುರುವೇ ಪರಮ ಪಾವನ ಮೂರುತಿ। ಶಿರಡಿವಾಸನೆ ದೋಷದೂರನೆ ಶರಣು ಸಂತತ ಸಾಧುವೆ॥1॥ ಅನಂತ ಭಕ್ತರ ಪೊರೆವ ದೇವನೆ ಆರತಿಯು ನಿನಗರ್ಪಿತಾ। ಸಾಯಿನಾಮವು ದೋಷದೂರವು ಶಿರಡಿವಾಸನೆ ವಂದನೆ॥2॥ ಗುರುಗಳರಸನೆ ಪುಣ್ಯ ಶ್ಲೋಕನೆ ಪಾಹಿಮಾಂ ಪರಮೇಶ್ವರಾ। ಸಾಯಿನಾಮವ ಜಪಿಸೆ ಸಂತತ ಜೀವ ಸಾರ್ಥಕವಾಗಲಿ॥3॥ ಸಾಯಿನಾಥನೆ ಸೌಖ್ಯದಾತನೆ ದೇವದೇವನೆ ವಂದ್ಯನೆ। ನಿನ್ನ ಕರುಣೆಯ ತೋರಿ ಪಾಲಿಸು। ಮಂಗಳಂ ಶುಭ ಮಂಗಳಂ॥4॥

ಸಾಯಿಲಾಲಿ ಶೇಷಶಾಯಿ ಲಾಲಿ (ಲಾಲಿ) ರಾಗ: ಆರಭಿ-ಛಾಪುತಾಳ

ಸಾಯಿಲಾಲಿ ಶೇಷಶಾಯಿ ಲಾಲಿ। ಮಾಯ ದೂರ ದ್ವಾರಕ ಮಾಯಿ ಲಾಲಿ॥1॥ ಬಾಬಲಾಲಿ ಗೋಪಾಲ ಲಾಲಿ। ನೀಲಮೇಘಶ್ಯಾಮ ಗಾನಲೋಲ ಲಾಲಿ॥ ರಾಮಲಾಲಿ ಸತ್ಯಧಾಮ ಲಾಲಿ। ಕೋಮಲಾಂಗ ನಿತ್ಯದಿವ್ಯ ನಾಮಲಾಲಿ॥ ಈಶಲಾಲಿ ಜಗದೀಶಲಾಲಿ। ಕಾಶಿನಾಥ ಸೋಮ ಸಂಕೇಶಲಾಲಿ॥2॥ ಹನುಮಲಾಲಿ ವಾಯು ತನಯಲಾಲಿ। ಇನಕುಲೇಶ ಭಕ್ತ ನಿಸ್ಸೀಮ ಲಾಲಿ॥ ರಾಮಕೃಷ್ಣ ಶಂಭುವಾ ನರೇಂದ್ರ ಲಾಲಿ। ಸಾಮಗಾನ ಲೋಲಾಮಾಂ ಗಿರೀಂದ್ರಲಾಲಿ॥3॥

ತೂಗುವೆ ಬಾಬನ್ನ ತೂಗುವೆ ಸಾಯಿಯ (ಲಾಲಿ) ರಾಗ: ನೀಲಾಂಬರಿ

ತೂಗುವೆ ಬಾಬನ್ನ ತೂಗುವೆ ಸಾಯಿಯ। ತೂಗೀ ಜೋ ಜೋ ಹಾಡುವೆ॥ಪ॥ ಮರದ ಹಲಗೆಯ ಮೇಲೆ ಮಲಗಿರುವವನ। ಇಟ್ಟಿಗೆ ದಿಂಬನ್ನು ಮಾಡಿರುವವನ। ಚಾವಡಿ ಮೆರವಣಿಗೆ ವಿರಾಜಿಸುವವನ। ಶಿರಡಿಯಲಿ ವಾಸಿಸುವ ಶ್ರೀಸಾಯಿಯ॥1॥ ಗಂಗೆಯ ಅಂಗುಷ್ಠದಿ ಹರಿಸಿದವನ। ತುಂಗೆಯ ಕಣ್ಣಲ್ಲಿ ಹರಿಸಿದವನ। ಭಕ್ತರ ಪಾಪವ ತೊಳೆಯುವವನ। ಫಕೀರ ರೂಪದ ಶ್ರೀ ಸಾಯಿಯ॥2॥ ದ್ವಾರಕ ಮಾಯಿಯಲ್ಲಿ ನೆಲಸಿರುವವನ। ದಾರೀ ದೀಪವಾಗಿ ನಿಂತಿರುವವನ। ಧರೆಯನ್ನು ಆಳುವ ಧರಣೀಶನ। ದೈವೀಕ ರೂಪದಿ ಶಿರಡೀಶನ॥3॥

ಸಾಯಿನಾಥ ತವಶರಣಂ ಪತ್ರಿಜಾತ

ಸಾಯಿನಾಥ ತವಶರಣಂ। ಪತ್ರಿಜಾತ ತವಶರಣಂ। ಶೀರ್ಡಿವಾಸ ತವಶರಣಂ। ಸಾಯಿನಾಥ ತವಶರಣಂ॥1॥ ಸರ್ವಶಕ್ತಾ ತವಶರಣಂ। ಸರ್ವಕರ್ತಾ ತವಶರಣಂ। ಸರ್ವಭರ್ತಾ ತವಶರಣಂ। ಸಾಯಿನಾಥ ತವಶರಣಂ॥2॥ ಚಿದಾನಂದ ತವಶರಣಂ। ನಿತ್ಯಾನಂದ ತವಶರಣಂ। ಗೀತಾನಂದ ತವಶರಣಂ। ಸಾಯಿನಾಥ ತವಶರಣಂ॥3॥ ವಿಶ್ವರೂಪಾ ತವಶರಣಂ। ಜ್ಞಾನರೂಪಾ ತವಶರಣಂ। ಪ್ರಾಜ್ಞರೂಪಾ ತವಶರಣಂ। ಸಾಯಿನಾಥ ತವಶರಣಂ॥4॥ ಅಂತರಾತ್ಮ ತವಶರಣಂ। ತೈಜಸಾತ್ಮಾ ತವಶರಣಂ। ನಿರ್ಮಲಾತ್ಮಾ ತವಶರಣಂ। ಸಾಯಿನಾಥ ತವ ಶರಣಂ॥5॥ ಭೇದಾತೀತ ತವಶರಣಂ। ಮುಕ್ತಿದಾತಾ ತವಶರಣಂ। ಗುಣಾತೀತ ತವಶರಣಂ। ಸಾಯಿನಾಥ ತವಶರಣಂ॥6॥ ಇಚ್ಛಾರೂಪಾ ತವಶರಣಂ। ಚಿತ್ಸ್ವರೂಪ ತವಶರಣಂ। ಸತ್ಸ್ವರೂಪಾ ತವಶರಣಂ। ಸಾಯಿನಾಥ ತವಶರಣಂ॥7॥ ಭಕ್ತಪೋಷಾ ತವಶರಣಂ। ಚಿಂತಾನಾಶ ತವಶರಣಂ। ಸ್ವಪ್ರಕಾಶಾ ತವಶರಣಂ। ಸಾಯಿನಾಥ ತವಶರಣಂ॥8॥ ತತ್ವಬೋಧಾ ತವಶರಣಂ। ಪ್ರೇಮಪದಾ ತವಶರಣಂ। ತೀರ್ಥಪಾದಾ ತವಶರಣಂ। ಸಾಯಿನಾಥ ತವಶರಣಂ॥9॥ ಶಬ್ದಬ್ರಹ್ಮಾ ತವಶರಣಂ। ಸರ್ವಬ್ರಹ್ಮಾ ತವಶರಣಂ। ಸತ್ತಾಬ್ರಹ್ಮಾ ತವಶರಣಂ। ಸಾಯಿನಾಥ ತವಶರಣಂ॥10॥ ಸಾಕ್ಷಿಬ್ರಹ್ಮಾ ತವಶರಣಂ। ಪರಬ್ರಹ್ಮಾ ತವಶರಣಂ। ಪಾಚ್ಯಬ್ರಹ್ಮಾ ತವಶರಣಂ। ಸಾಯಿನಾಥ ತವಶರಣಂ॥11॥ ಗುರುಬ್ರಹ್ಮಾ ತವಶರಣಂ। ಗುರುರ್ವಿಷ್ಣು ತವಶರಣಂ। ಗುರ್ವೀಶ್ವರಾ ತವಶರಣಂ। ಸಾಯಿನಾಥ ತವಶರಣಂ॥12॥

ಸದಾ ಸತ್ಸ್ವರೂಪಂ ಚಿದಾನಂದಕಂದಂ(ಶ್ರೀಸಾಯೀಮಹಿಮ್ನಸ್ತೋತ್ರಂ) ರಾಗ: ದುರ್ಗ-ರೂಪಕ

ಸದಾ ಸತ್ಸ್ವರೂಪಂ ಚಿದಾನಂದಕಂದಂ। ಜಗತ್ಸಂಭವಸ್ಥಾನ ಸಂಹಾರಹೇತುಂ। ಸ್ವಭಕ್ತೇಚ್ಛಯಾ ಮಾನುಷಂ ದರ್ಶಯಂತಂ। ನಮಾಮೀಶ್ವರಂ ಸದ್ಗುರುಂ ಸಾಯಿನಾಥಂ॥1॥ ಭವಧ್ವಾಂತ ವಿಧ್ವಂಸ ಮಾರ್ತಂಡಮೀಡ್ಯಂ। ಮನೋವಾಗತೀತಂ ಮುನಿಧ್ಯಾನಗಮ್ಯಂ॥ ಜಗದ್ವ್ಯಾಪಕಂ ನಿರ್ಮಲಂ ನಿರ್ಗುಣಂತ್ವಾಂ। ನಮಾಮೀಶ್ವರಂ ಸದ್ಗುರುಂ ಸಾಯಿನಾಥಂ॥2॥ ಭವಾಂಬೋಧಿ ಮಗ್ನಾರ್ದಿತಾನಾಂ ಜನಾನಾಂ। ಸ್ವಾಪಾದಾಶ್ರೀತಾನಾಂ ಸ್ವಭಕ್ತಿಪ್ರಿಯಾಣಾಂ॥ ಸಮುದ್ಧಾರಣಾರ್ಥಂ ರ್ಥರಂ ಕಲೌ ಸಂಭವಂತಂ। ನಮಾಮೀಶ್ವರಂ ಸದ್ಗುರುಂ ಸಾಯಿನಾಥಂ ॥3॥ ಸದಾ ನಿಂಬವೃಕ್ಷಸ್ಯ ಮೂಲಾಧಿವಾಸಾತ್। ಸುಧಾಸ್ರಾವಿಣಂ ತಿಕ್ತಮಪ್ಯಪ್ರಿಯಂ ತಂ॥ ತರುಂ ಕಲ್ಪವೃಕ್ಷಾಧಿಕಂ ಸಾಧಯಂತಂ। ನಮಾಮೀಶ್ವರಂ ಸದ್ಗುರುಂ ಸಾಯಿನಾಥಂ॥4॥ ಸದಾ ಕಲ್ಪವೃಕ್ಷಸ್ಯ ತಸ್ಯಾಧಿಮೂಲೇ। ಭವದ್ಭಾವಬುಧ್ಯಾ ಸಪರ್ಯಾದಿಸೇವಾಂ॥ ನೃಣಾಂ ಕುರ್ವತಾಂ ಭಕ್ತಿ ಮುಕ್ತಿಪ್ರದಂತಂ। ನಮಾಮೀಶ್ವರಂ ಸದ್ಗುರುಂ ಸಾಯಿನಾಥಂ॥5॥ ಅನೇಕಾಶ್ರುತಾತರ್ಕ್ಯ ಲೀಲಾ ವಿಲಾಸೈಃ। ಸಮಾವಿಷತೇಶಾನ ಭಾಸ್ವತ್ಪ್ರಭಾವಂ॥ ಅಹಂಭಾವಹೀನಂ ಪ್ರಸನ್ನಾತ್ಮ ಭಾವಂ। ನಮಾಮೀಶ್ವರಂ ಸದ್ಗುರುಂ ಸಾಯಿನಾಥಂ॥6॥ ಸತಾಂ ವಿಶ್ರಮಾರಾಮ ಮೇವಾಭಿರಾಮಂ। ಸದಾ ಸಜ್ಜನೈಃ ಸಂಸ್ತುತಂ ಸನ್ನಮದ್ಭಿಃ। ಜನಾಮೋದದಂ ಭಕ್ತಭದ್ರಪ್ರದಂ ತಂ। ನಮಾಮೀಶ್ವರಂ ಸದ್ಗುರುಂ ಸಾಯಿನಾಥಂ॥7॥ ಅಜನ್ಮಾದ್ಯಮೇಕಂ ಪರಬ್ರಹ್ಮ ಸಾಕ್ಷಾತ್। ಸ್ವಯಂಸಂಭವಂ ರಾಮಮೇ ವಾವತೀರ್ಣಂ॥ ಭವದ್ದರ್ಶನಾತ್ಸಂಪುನೀತಃ ಪ್ರಭೋಽಹಂ॥ ನಮಾಮೀಶ್ವರಂ ಸದ್ಗುರುಂ ಸಾಯಿನಾಥಂ॥8॥ ಶ್ರೀ ಸಾಯೀಶ ಕೃಪಾನಿಧೇಽಖಿಲನೃಣಾಂ ಸರ್ವಾರ್ಥಸಿದ್ಧಿಪ್ರದ। ಯುಷ್ಮತ್ಪಾದರಜಃಪ್ರಭಾವಮತುಲಂ ಧಾತಾಪಿ ವಕ್ತಾಽಕ್ಷಮಃ॥ ಸದ್ಭಕ್ತ್ಯಾಶರಣಂ ಕೃತಾಂಜಲಿಪುಟಃ ಸಂಪ್ರಾಪಿತೋಽಸ್ಮಿ ಪ್ರಭೋ ಶ್ರೀ ಮತ್ಸಾಯಿಪರೇಶಪಾದ ಕಮಲಾನ್ನಾನ್ಯಚ್ಛರಣ್ಯಂ ಮಮ॥9॥ಸಾಯಿರೂಪಧರರಾಘವೋತ್ತಮಂ। ಭಕ್ತಕಾಮವಿಬುಧ ದ್ರುಮಂ ಪ್ರಭುಂ॥ ಮಾಯಯೋಪಹತ ಚಿತ್ತಶುದ್ಧಯೇ। ಚಿಂತಯಾಮ್ಯಹಂಮಹರ್ನಿಶಂ ಮುದಾ॥10॥ ಶರತ್ಸುಧಾಂಶು ಪ್ರತಿಮಪ್ರಕಾಶಂ। ಕೃಪಾತಪತ್ರಂ ತವ ಸಾಯಿನಾಥ॥ ತ್ವದೀಯ ಪಾದಾಬ್ಜ ಸಮಾಶ್ರೀತಾನಾಂ। ಸ್ವಚ್ಛಾಯಯಾ ತಾಪಮಪಾಕರೋತು॥11॥ ಉಪಾಸನಾದೈವತಾ ಸಾಯಿನಾಥ। ಸ್ತವೈರ್ಮಯೋ ಪಾಸನೀನಾ ಸ್ತುತಸ್ತ್ವಮ್ ರಮೇನ್ಮನೋಮೇ ತವ ಪಾದಯುಗ್ಮೇ। ಭೃಂಗೋ ಯಥಾಽಬ್ಜೇಮಕರಂದಲುಬ್ಧಃ॥12॥ ಅನೇಕ ಜನ್ಮಾರ್ಜಿತ ಪಾಪ ಸಂಕ್ಷಯೋ। ಭವೇದ್ಭವತ್ಪಾದಸರೋಜ ದರ್ಶನಾತ್॥ ಕ್ಷಮಸ್ವ ಸರ್ವಾನಪರಾಧಪುಂಜ ಕಾನ್। ಪ್ರಸೀದ ಸಾಯೀಶ ಗುರೋ ದಯಾನಿಧೇ॥13॥ ಶ್ರೀ ಸಾಯಿ ನಾಥಚರಣಾಮೃತ ಪೂರ್ತಚಿತ್ತಾ। ಸ್ತತ್ಪಾದಸೇವನರತಾಃ ಸತತಂ ಚ ಭಕ್ತ್ಯಾ॥ಸಂಸಾರಜನ್ಯದುರಿತೌಘವಿನಿರ್ಗತಾ ಸ್ತೇ। ಕೈವಲ್ಯ ಧಾಮಪರಮಂ ಸಮವಾಪ್ನುವಂತಿ ॥14॥ ಸ್ತೋತ್ರಮೇತತ್ಪಠೇದ್ಭಕ್ತ್ಯಾ ಯೋ ನರಃ ಸ್ತನ್ಮದಾಃಸದಾ। ಸದ್ಗುರೋಃ ಸಾಯಿನಾಥಸ್ಯ ಕೃಪಾಪಾತ್ರಂ ಭವೀತ್ ಧೃವಮ್॥15॥ ಸಾಯಿನಾಥ ಕೃಪಾಸ್ವದ್ರು ಸತ್ಪದ್ಯ ಕುಸುಮಾವಳಿಃ। ಶ್ರೇಯಸೇ ಚ ಮನಃ ಶುದ್ಧ್ಯೈ ಪ್ರೇಮಸೂತ್ರೇಣ ಗುಂಫಿತಾ॥16॥ ಗೋವಿಂದಸೂರಿಪುತ್ರೇಣ ಕಾಶೀನಾಥಾಭಿಧಾಯಿನಾ। ಉಪಾಸನೀತ್ಯು ಪಾಖ್ಯೇನ ಶ್ರೀ ಸಾಯಿಗುರುವೇರ್ಪಿತಾ॥17॥

❖ ❖ ❖

ಆತ ಸೂರ್ಯ; ನೀನು ಬೆಳಕು

ಆತ ಸೂರ್ಯ; ನೀನು ಬೆಳಕು। ನಾನರಳುವ ಕಮಲ। ಬಾಳ್ವೆಯಿರಲಿ ಬೃಹತ್ ಪೂರ್ಣ। ರಶ್ಮಿ ಪೂತ ನಿರ್ಮಲ॥

ಸೃಷ್ಟಿಕರ್ತನ ಸಕಲ ಕಲ್ಪನೆಯ ರೂಪಿಸುವ

ಸೃಷ್ಟಿಕರ್ತನ ಸಕಲ ಕಲ್ಪನೆಯ ರೂಪಿಸುವ ಕಾರ್ಯವನ್ನರಿತ ತಾಯೀ। ಚರಾಚರದಲೂ ಚಿಂತನಾ ಜಾಗರೂಕತೆಯನ್ನು ಗೈವ ಮಾಯೀ। ಮೂರ್ಲೋಕಗಳನು ಕಣ್ಣಳವಿನಲ್ಲೇ ಕಾಂಬ ಶ್ರೀದಿವ್ಯ ಆದಿಶಕ್ತೀ। ಜೀವ ಭಾವದಿ ಕಾಂಬ ಮಾತೆ। ಮೀರಾತಾಯಿ

ಶರಣೆಂಬೆ ತುಂಬೆ ಭಕ್ತಿ।। ದೇವಮಾತಾ ಪ್ರಭೆಯೆ ಮಾನವೀ ಮೈಗೊಂಡು ಮೂಡಿಹಳು ದಿವ್ಯಮಾತೆ। ಮಣ್ಣಮಕ್ಕಳ ಕಷ್ಟ ಕಳೆದು ಅಮೃತವನುಣಿಸಿ ಬಂದಿರುವ ದೀಪ್ತೀಪೂತೇ। ತಣ್ಣನ್ನ ತಣಿ ತಣಿವನೀವೆ ಕಣ್ಣೆತ್ತಿದೊಡೆ ನಗೆಯಲ್ಲೆ ನೆರವನೀವೆ। ತಾಪಶಾಂತಿಯಸಾಧಿಕೇ ಓ 'ಮೀರಾಂಬಿಕೆ' ನಿತ್ಯ ನೀ ಶೋಭಿಸಿರುವೆ।। ಬುವಿಯಲ್ಲೆ ಭವ್ಯಜನ್ಮಗಳ ವರ್ಧಿಸಲೆಂದೆ ನೀ ಬಾಹ್ಯ ಧರ್ಮಧಾಯೀ। ಯುಕ್ತಜನರಿಂ ಸೇವೆಗೊಳ್ಳಲೆಂದೇ ಯುಕ್ತರೂಪಧರಿಸಿರುವ ಮಾಯೀ। ನವ್ಯ ದೇಹದ ಶಿಲ್ಪಶಿಕ್ಷಣವನೀಯಲ್ಕೆ ತಾಯೆ ಸಾಧನೆಯನೀವೆ। ನವೋಲ್ಲಾಸದಾಯಿಕೇ ತಾಯಿ 'ಮೀರಾಂಬಿಕೇ' ನೀ ನಿತ್ಯ ಶೋಭಿಸಿರುವೆ।। ಜಯತು ಭಗವಾನ್ ಗುರುವೆ ನಮನ 'ಅರವಿಂದರೇ' ಜಯಜಯತು ಪೂರ್ಣಭಾಗ। ಲೋಕಧಾತ್ರೀ ಜಯತು ಮಾತೆ 'ಮೀರಾಂಬೀಕೇ' ಜಯಜಯತು ಧವಲಶೋಭ। ಪೂರ್ಣಾವತಾರದಲಿ ಬುವಿದುಂಬಿ ಶೋಭಿಸಲಿ ಆ ನಿಮ್ಮ ಪೂರ್ಣಯೋಗ। ಅದನೆ ಅನುಸರಿಸುತಿಹ ಭಾಗ್ಯವಾನ್ ಭ್ರಾತೃವರ್ಗಕ್ಕೆಲ್ಲ ಜಯತು ಲೋಭ।।

ಓಂ ಆನಂದಮಯೀ ಚೈತನ್ಯಮಯೀ

ಓಂ ಆನಂದಮಯೀ, ಚೈತನ್ಯಮಯೀ, ಸತ್ಯಮಯೀ ಪರಮೇ। ಕರುಣಾಮಯಿ ಓಂ, ಓಂ ದಯಾಮಯೀ ತಾಯಿ ವಿಶ್ವಧಾಮೇ। ತಿಳಿವಿಗೆ ಸರಸತಿ, ಲಕುಮಿ ಸಂಪದಕೆ, ಸಕಲೈಶ್ವರ್ಯ ಮಹೇಶ್ವರಿ। ಕ್ರೌರ್ಯಕೆ ಕಾಳಿ, ಕೂಸಿಗೆ ತಾಯೀ, ಓಂ ಮಾತಾ ಪರಮೇಶ್ವರಿ।। ನಿನ್ನ ಕಂದ ನಾ, ನನ್ನ ತಾಯಿ ನೀ, ಸರ್ವೇಶ್ವರೀ ಮಾತೇ। ನನ್ನ ತಪ್ಪು-ತೊದಲುಗಳನೆಣಿಸದಿರು, ಕ್ಷಮಿಸು ನೀನೇ ತ್ರಾತೇ। ನಿನ್ನ ಕಣ್ಣರಿಕೆ-ಕ್ಷೇತ್ರದಲ್ಲಿ ನನ್ನಾಟ-ಮಾಟತಾಯಿ। ಅದನುಳಿದು ಹೊರಗೆ ದಿಗ್-ಭ್ರಮೆಯ ಬೆರಗೆ, ಸರ್ವವೂ ಶೂನ್ಯ ಮಾಯೀ।। ನಿನ್ನ ಸತ್ಯ ನಿನ ಮಿಥ್ಯೆಯಾಟಗಳ ಮಾಟ ಮಹಾಮಾಯೀ। ತಿಳಿಯಲಾರದೆಯೆ ಅಚಿಂತ್ಯಾದ್ಭುತವು ದಿವ್ಯ ಜೀವದಾಯೀ। ನಿನ್ನ ಬಯಕೆಯಂತಾಡಿಸೆನ್ನ, ನಾ ನಿನ್ನ ಕೈಯ ಗೊಂಬೆ। ಕರುಣಾಮಯಿ ಕಾತ್ಯಾಯಿನಿ ಗೌರೀ ಜಯಜಯ ಜಗದಂಬೆ।।

ಪರಮೇ, ಪ್ರಕೃತಿ ಪರಮೇಶ್ವರೀ ತಾಯೀ

ಪರಮೇ, ಪ್ರಕೃತಿ, ಪರಮೇಶ್ವರೀ, ತಾಯೀ, ಪರಮಶರಣಪರಾತ್ಪರೇ। ಅಮರೇ, ಅನಾದ್ಯನಂತರೂಪೇ, ಅವ್ಯಯೇ, ಅಜರಾಕ್ಷರೇ। ನೀ ಮರ್ಮಕೇಂದ್ರದಿ ಧರ್ಮಧಾರಿಣಿ, ಕರ್ಮಕಾರಿಣಿ ನಾಯಿಕೇ। ಶ್ರೀಪಾದ ಪದ್ಮದಿ ಶರಣು ಜನನೀ, ದೇವಜೀವನ ದಾಯಿಕೇ।। ಪಾಪನಾಶಿನಿ ಕರುಣಿ ಎನ್ನೊಳು ನಿನ್ನ ಸುಸ್ಮಿತ ಮುಖ ಸದಾ। ಚಿತ್ತ ಶೋಧಿಸು, ಸತ್ಯ ಭೋದಿಸು, ಸಾಧನೆ ಗೈ ಸಫಲದಾ। ನಿತ್ಯ ಚೇತನ ಚಾರಿ ನೀ, ನೀ ವಿಶ್ವಕೇತನ ಜೀವದಾ। ಶ್ರೀಪಾದ ಪದ್ಮದಿ ಮಹಾಮಾತೇ ಶರಣು ಮೂರ್ತ 'ಮಹೇಶ್ವರೀ'।। ಘನಘೋರ ತಾಮಸ ಅಸುರನಾಶಿನಿ ರುದ್ರ ಮೂರ್ತಿ ಭಯಂಕರೀ। ಬಲವೀರ್ಯ ಶೌರ್ಯದಿ ದಂಡದಾನದಿ ಭೀಷಣೇ ಪ್ರಲಯಂಕರಿ। ಅಭಯಹಸ್ತದಿ ವೀರಭಕ್ತರ ಊರ್ಧ್ವ ಗಮನಕೆ ಶಂಕರಿ। ಶ್ರೀಪಾದ ಪದ್ಮದಿ 'ಮಹಾಕಾಲಿ' ಶರಣು ವಿಜಯ ಪ್ರದಾಯನೀ।। ಸುಕುಮಾರಛಂದದಿ ಮಹಾನಂದದಿ ಲಲಿತ ಲೀಲಾನಂದಿತೇ। ಅಪರೂಪ ಮೋಹನ ಶಾಂತ ಶೋಭನ ಮಾಧುರಿ ರಸಮಂಡಿತೇ। ಶುಚಿಯೇ ಶುಭ್ರೇ ಸೌಮ್ಯೆ ಶ್ರೀಮಯಿ ತಾಯಿ ಸುಷುಮಾಸ್ಪಂದಿತೇ। ಶ್ರೀಪಾದ ಪದ್ಮದಿ 'ಮಹಾಲಕುಮೀ' ಶರಣು ಸಂಪದ್ದಾಯಿನೀ।। ಅವಸಾದ-ಖಿನ್ನತೆ- ತ್ರುಟಿ- ವಿಭಿನ್ನತೆ-ಭ್ರಾಂತಿ-ಭಾರ ವಿಮೋಚನೇ। ಅವಸ್ಥಾಂತರ ವಿಧಿವಿಧಾನದಿ ಪೂರ್ಣ ನಿನ್ನಯ ಯೋಜನೆ। ತವ ಪ್ರಸಾದದಿ ಸಕಲ ಸಿದ್ಧಿಯು ಜ್ಞಾನ ಸುವೀರ್ಯ ಸುಯೋಜನೆ। ಶ್ರೀಪಾದ ಪದ್ಮದಿ 'ಮಹಾಸರಸತಿ' ಶರಣು ವಿದ್ಯಾದಾಯಿನೀ।। ನೀನಂತರಂಗ ಸಮುದ್ರದಾಳದಿ ವಿಶ್ವಮೂಲದಿ ಸಂಸ್ಥಿತೇ। ನೀ ಪರಾಶಕ್ತಿ ಪ್ರದೀಪ್ತ ತೇಜದ ವಹ್ನಿಗರ್ಭದಿ ಸಂವೃತೇ। ನೀ ಚರಿಸು ತಾಯೀ ಸಚ್ಚಿದಾನಂದದಲಿ ಪುರುಷೋತ್ತಮಗತೇ। ಶ್ರೀಪಾದ ಪದ್ಮದಿ ಶರಣು ಧರಣಿಯೆ ಧನ್ಯ ನಿನ್ನಾಗಮನದಿ।।

ಮಾತೆ ನಿಮ್ಮ ಶಕ್ತಿಯು ವಿಸ್ಮಯಕಾರಿ

ಮಾತೆ ನಿಮ್ಮ ಶಕ್ತಿಯು ವಿಸ್ಮಯಕಾರಿ। ಅತಿ ಉಗ್ರವಿದ್ಧೂಮೃದು ಭಾರಿ।।ಪ।। ಜ್ಞಾನ-ಶಕ್ತಿ ಸಂವಾದ-ಸಂಸಿದ್ಧಿ। ನಾ ಕಂಡೆ ನಿಮ್ಮೊಳಗೆ ಸಮೃದ್ಧಿ। ಅಂತೇ ಪೇಳುವೆ ನಾ ಸಾರಿ।।1।। ಮಾಹೇಶ್ವರಿ ಮಾಯಾಳು ಮಾತೆ। ಮಹಾ ಸುಜ್ಯೋತಿ ಜ್ಞಾನ

ಪ್ರದಾತೆ। ಮಾಡಿರುವಿರಿ ಮಹಾ ತಯ್ಯಾರಿ॥2॥ ಅಸುರರ ಇದಿರಿಗೆ ನೀವ್ ಮಹಾಕಾಳಿ। ದುಃಶಕ್ತಿಗಳಿಂ ರಕ್ಷಾಕಾರಿ। ಖಳರಿಗೆ ಕಂಡಿರಿ ಭಯಕಾರಿ॥3॥ ಮಹಾಲಕ್ಷ್ಮಿಯ ಲೀಲೆಯ ತೋರಿ। ಅಹಾ। ವೈಭವದಿ ಜಗ ಕುಣಿಸಿಹಿರಿ। ಕಂಡೇನು ಕಣ್ಣಿಗೆ ತೋರಿ॥4॥ ಮಹಾಸರಸ್ವತಿ ಸುವಿಧಾತೆ ಮಹಾ ಕಲಾ-ಕೌಶಲ್ಯದಾತೆ। ಶರಣಾಗತ ಶಿವಕಾರಿ॥5॥

ಇನ್ನು ತಳಮಳವೇಕೆ ಅಭಯವೊಂದಿರಲು

ಇನ್ನು ತಳಮಳವೇಕೆ ಅಭಯವೊಂದಿರಲು। ಹೃನ್ಮಂದಿರದಿ ಮಾತೆ ಬಂದು ನೀಂದಿರಲು। ಇನ್ನು ಭಯವೆನಗಿಲ್ಲ ಮಾತೆ ಮೀರಾ ಎನ್ನ। ಕೈ ಹಿಡಿದು ನಡೆಸುವಳು ಮುಂದೆ ಮುಂದೆ॥ ಏರಿಳಿತ ಕಗ್ಗಲ್ಲುಮುಳ್ಳು ಬೇಲಿಗಳೆಲ್ಲ। ಮಾಯವಾಗುತ್ತಿಹವು ಹಿಂದೆ ಹಿಂದೆ॥ ಜಗಕೆ ಒಬ್ಬಳೆ ಜನನಿ ಎನ್ನ ಮೀರಾಮಾತೆ। ಅವಳ ಸರಿಸಮ ಇನ್ನು ಬೇರೆ ಇಲ್ಲ। ಅವಳ ತಿಳಿನಗೆ ಎನ್ನ ದಾರಿದೀಪವುಮುನ್ನ। ಕಾಳರಾತ್ರಿಯ ಭಯವು ಇನ್ನು ಇಲ್ಲ। ಅವಳ ಕರುಣೆಯೆ ಎನ್ನ ಬಾಳ ಸೊತ್ತಾಗಿಹುದು। ಅಲ್ಲಿಕಾಣಲು ಸಿಗದು ಹಿರಿದು ಕಿರಿದು॥ ಮನಬಿಚ್ಚಿ ಎದೆಯರಳಿ ಭಕುತಿಗೈಯನು ನೀಡಿ। ಅವಳೆದುರು ನಿಲ್ಲುವುದೆ ಜಗದಿ ಹಿರಿದು। ಬಾ ಬಂಧು, ಬಾ ಭಗಿನಿ, ಭಯವೇಕೆ ನಿಮಗಿನ್ನು। ಒಟ್ಟಾಗಿ ಹೇಳೋಣ ಮಾತೃವಾಣಿ। ಜಡಜಗವೆ ಹುಚ್ಚಾಗಿ ತನ್ನನ್ನೆ ಮರೆತಿರಲು। ಎಚ್ಚರಿಸಿ ಹಾಡೋಣ ದಿವ್ಯವಾಣಿ॥

ಹತ್ತಿರದಿ ಯಾರಿಲ್ಲವೆಂಬ ಕಳವಳವೇಕೆ

ಹತ್ತಿರದಿ ಯಾರಿಲ್ಲವೆಂಬ ಕಳವಳವೇಕೆ। ತಾಯಿ ಮೀರಾ ತೀರ ಬಳಿಯಲಿರಲು। ನನ್ನ ಮನಮಂದಿರದ ಬಾಗಿಲಲ್ಲಿಯೆ ನಿಂದು। ಹೃದಯ ಮಂದಿರದಲ್ಲಿ ಇಣುಕುತಿರಲು? ಹೃದಯ ಮಂದಿರ ತೆರೆದು ಭಕ್ತಿಪೀಠವನಿಟ್ಟು। ಪಾವಿತ್ರ್ಯ- ಮಲ್ಲಿಕಾ ಮಾಲೆ ಕಟ್ಟು। ಆಶೆ ಆಕಾಂಕ್ಷೆಗಳ ಚೆಂಗುಲಾಬಿಯನಿಟ್ಟು। ಅವಳಪಾದಕೆ ಎರಗು ಮೋಹ ಬಿಟ್ಟು। ಇನ್ನು ಕಳವಳವೇಕೆ ಮಾತೆ ನಿನ್ನೊಳಗಿರಲು। ಒಳಗು ಹೊರಗು ಒಂದೆ ಎಂದೆ ಅರಿತು ಹಗಲು ಇರಳೂ ಒಂದೆ ಮಾಡಿ ಅವಳೆಡೆ ನೋಡು। ಅಲ್ಲಿ ಹೊಳೆವುದು ದಾರಿ ಅನವರತವು॥

ಪಾದಪಂಕಜವರಸಿ ಬಂದಿಹೆನು ನಾನವ್ವ

ಪಾದಪಂಕಜವರಸಿ ಬಂದಿಹೆನು ನಾನವ್ವ। ಕಾಯ ಕಾಂಚನ ಚಿತ್ತ ಎಲ್ಲ ನಿನ್ನದೆ ಅವ್ವ। ಬಾಳ ಬೇಸಿಗೆಯೊಳಗೆ ಬೆಂದೆ ಬಾಡಿಹೆನವ್ವ। ಮೃಗಜಾಲವೆಲ್ಲೆಲ್ಲು ಬಾಯಾರಿ ಬಂದಿಹೆನವ್ವ॥ ಅಜ್ಞಾನ ತಿಮಿರದೊಳು ಅಂಧನಾಗಿಹೆನವ್ವ। ಜ್ಞಾನಜ್ಯೋತಿಯು ನೀನು ಹೆಜ್ಜೆ ಮುಂದಿಡಿಸವ್ವ ಅರಿಯದಾ ಪಥವೊಂದು ಅರಸುತಿಹೆ ನಾನವ್ವ। ಕಠಿಣವಲ್ತೆಲೆ ಪಥವು ನೀನೆನ್ನ ಗತಿಯವ್ವ॥ ನಿನ್ನ ಎನ್ನ ಶರಣಾಗತಿಯು ಪರಿಪೂರ್ಣವಾಗತಾ ಕುಡಿನಗೆಯೊಂದು ಬಾಳಿನಲಿ ಬೆಳಗಲೌ। ಶಾಂತಿ-ನೀರವ-ಜ್ಯೋತಿ ಆನಂದ ತಾ ಉಕ್ಕಲೌ। ಹರಸೆನ್ನ ಓ ತಾಯಿ, ಕ್ಷಣವೊಂದು ಮರೆಯದಲೆ॥ ನೀನೆನ್ನ ಗುರಿ-ಗುರುವು, ದಾಸನಾ ನಿರುತವು। ದಾಸನಲಿ ಉಕ್ಕಲೌ ಬತ್ತದಾ ಭಕ್ತಿಯು। ನಿನ್ನೊಲುಮೆಯೊಳು ಬೆಳೆವ ಎನಗೆ ಇನ್ನೆಂದೆಂದು। ಶ್ರದ್ಧೆ ವಿಶ್ವಾಸಗಳು ಹಾಸುಹೊಕ್ಕಾಗಿರಲಿ॥

ಎನ್ನ ಪ್ರೇಮ, ಭಕ್ತಿ ಕುಸುಮ

ಎನ್ನ ಪ್ರೇಮ, ಭಕ್ತಿ ಕುಸುಮ ತಮ್ಮ ಚರಣಕರ್ಪಣೆ। ಎನ್ನ ಸಕಲ ಕರ್ಮಗಳಿಗೆ ತಮ್ಮ ನೆನಹು ರಕ್ಷಣೆ॥ ಎನ್ನ ಅಂತರಂಗ ಪೀಠ ತಮ್ಮ ನಿಲುಮೆಗಾಸನ। ಎನ್ನ ಶಕ್ತಿ - ಯುಕ್ತಿಗಳಲಿ ತಮ್ಮ ಪಾದ ಮುದ್ರಣ॥1॥ ಎನ್ನ ಹೃದಯದಳಲು ಹಿಂಗಿ ನಿತ್ಯಪ್ರಭೆಯು ಹರಡಲಿ। ಎನ್ನ ವಚನ - ಕೃತಿಗಳಲ್ಲಿ ಏಕನಾದ ಹೊರಡಲಿ। ಎನ್ನದೆಂಬುದೆಲ್ಲ ಸರಿದು ತಮ್ಮದೆಂಬುದರಿಯಲಿ। ಎನ್ನ ಬಾಳ ಹಣತೆಯಲ್ಲಿ ತ್ಯಾಗ ತೈಲವುರಿಯಲಿ॥2॥ ಎನ್ನ ಬೆಂದು ಬಾಳಿಗಿಂದು ತಾಯಿ ಯಾವೆ ಹರಸಿರಿ। ಎನ್ನ ಬಾಹ್ಯ ಚಲನ - ವಲನ ತಮ್ಮದಾಗಿ ಇರಿಸಿರಿ॥ ಎನ್ನ ಜೀವ-ನಾಡಿಗಳಲಿ ದೀಪ್ತಿ ತೇಜ ಹರಿಯಲಿ। ಎನ್ನ ಬಾಳ ಗುಡಿಯಲಿಂದು ಶಾಂತಿಯಗರು ಉರಿಯಲಿ॥3॥ ಎನ್ನ ತೃಷೆಯ ಕಳೆದು ಮನಕೆ

ಸಾರ್ಥಕತೆಯನುಣಿಸಿರಿ। ಎನ್ನ ತಮ್ಮ ಕರುಣೆಯಿಂದ ಕಂದನೆಂದು ಎಣಿಸಿರಿ।। ಎನ್ನ ಲೋಪ ದೋಷಗಳಿಗೆ ತಮ್ಮ ಹಸ್ತಲೇಪನ। ಎನ್ನ ನಿಲುಮೆ-ತಾಣಗಳಲಿ ತಮ್ಮ ಮೂರ್ತಿ ಪಾವನ।।4।।

ನಿಮ್ಮ ಮೂರುತಿ ನನ್ನ ಎದೆಯೊಳು

ನಿಮ್ಮ ಮೂರುತಿ ನನ್ನ ಎದೆಯೊಳು। ನಿಮ್ಮ ಧ್ಯಾನವು ನನ್ನ ಮನದೊಳು। ನಿಮ್ಮ ಕೀರ್ತನೆ ನನ್ನ ಕಿವಿಯೊಳು ತಾಯಿ ನಿಂದಿರಲಿ।। ನಿಮ್ಮ ಚಿಂತನೆ ನನ್ನ ಚಿತ್ತದಿ। ನಿಮ್ಮ ರೂಪವು ನನ್ನ ಕಣ್ಣಲಿ। ನಿಮ್ಮ ಇರವದು ಎಲ್ಲ ಕಡೆಯಲಿ। ಮುತ್ತಿ ಬಳಸಿರಲಿ।। ನಿಮ್ಮ ಜ್ಞಾನದ ಒಂದು ಬಿಂದುವು। ನಿಮ್ಮ ತೇಜದ ಒಂದುಕಿರಣವು। ನಿಮ್ಮ ಶಕ್ತಿಯದೊಂದು ಅಂಶವು। ಇಳಿದು ತಾ ಬರಲಿ।। ನಿಮ್ಮ ಕರುಣೆಯ ದಿವ್ಯ ಹಸ್ತವು। ನಿಮ್ಮ ನಲುಮೆಯ ಒಂದು ನೋಟವು। ನಿಮ್ಮ ಪದದೆಡೆ ಸೆಳೆಯಲೆನ್ನನು। ತಾಯೆ ಕರುಣಿಸಿರಿ।।

❖ ❖ ❖

ಶುಕ್ಲಾಂಬರಧರ ಗಣೇಶ ಮಂತ್ರಂ (ಹಿಂದಿ) ರಾಗ: ಯಮನ್

ಶುಕ್ಲಾಂಬರಧರ ಗಣೇಶ ಮಂತ್ರಂ। ನಿತ್ಯಂ ನಿತ್ಯಂ ಜಪೋ ಜಪೋ। ವಿಘ್ನವಿನಾಶಕ ವಿದ್ಯಾದಾಯಕ। ವೀರ ಗಣಪತಿ ಭಜೋ ಭಜೋ।। ಘಂ ಘಂ ಗಣಪತಿ ಗಂಗಾಧರಸುತ। ಗೌರಿತನಯ ಕಹೋ ಕಹೋ। ಆಕಾಶ ರೂಪಂ ಗಣೇಶ ಪ್ರಾಣೇಶ। ನಿರ್ವಿಕಲ್ಪಂ ನಮೋ ನಮೋ।।

ಗಣೇಶ ಶರಣಂ ರಾಗ: ಹಂಸಧ್ವನಿ

ಗಣೇಶ ಶರಣಂ ಶರಣಂ ಗಣೇಶ।। ವಾಗೀಶ ಶರಣಂ ಶರಣಂ ವಾಗೀಶ।। ಸಾಯೀಶ ಶರಣಂ ಶರಣಂ ಸಾಯೀಶ।।

ಗಣೇಶ ಶರಣಂ ಪರಮ ಪಾವನಂ

ಗಣೇಶ ಶರಣಂ ಪರಮ ಪಾವನಂ ಸತ್ಯ ಸಾಯಿ ನಂ ಗಜಾನನಂ।। ನಿತ್ಯ ಸ್ಮರಣಂ ಪರಮ ಪಾವನಂ ಸತ್ಯಸಾಯಿ ನಂ ಗಜಾನನಂ।। ಸದ್ಗುರು ಚರಣಂ ಪರಮ ಪಾವನಂ। ಸತ್ಯ ಸಾಯಿನಂ ಗಜಾನನಂ।। ಭವಭಯ ಹರಣಂ ಪರಮ ಪಾವನಂ। ಸತ್ಯಸಾಯಿ ನಂ ಗಜಾನನಂ।।

ಜಯ ಲಂಬೋದರ ಪಾಹಿಮಾಂ

ಜಯ ಲಂಬೋದರ ಪಾಹಿಮಾಂ। ಜಗದಂಬಾಸುತ ರಕ್ಷಮಾಂ।। ಶರಣಾಗತ ರಕ್ಷಮಾಂ। ಹೇ ಕರುಣಾನಿಧೇ ಪಾಹಿಮಾಂ। ಶ್ರೀಗಣನಾಥ ಸಂರಕ್ಷಮಾಂ। ನಿಜ ಭಕ್ತೀ ಮುದಂ ದೇಹಿಮಾಂ।।

ಮಾನಸ ಭಜರೇ ಗುರುಚರಣಂ ರಾಗ: ಕಲ್ಯಾಣಿ

ಮಾನಸ ಭಜರೇ ಗುರುಚರಣಂ। ದುಸ್ತರ ಭವಸಾಗರ ತರಣಮ್। ಗುರುಮಹರಾಜ್ ಗುರು ಜೈಜೈ। ಸಾಯಿನಾಥ ಸದ್ಗುರು ಜೈಜೈ।।ಪ।। ಓಂ ನಮಃ ಶಿವಾಯ ಓಂ ನಮಃ ಶಿವಾಯ। ಓಂ ನಮಃ ಶಿವಾಯ। ಶಿವಾಯ ನಮಃ ಓಂ।।1।। ಓಂಕಾರಂ ಬಾಬಾ (3ಸಾರಿ) ಓಂ ನಮೋ ಬಾಬಾ ಅರುಣಾಚಲ ಶಿವ ಅರುಣಾಚಲ ಶಿವ। ಅರುಣಾಚಲ ಶಿವ। ಅರುಣ ಶಿವೋಮ್ ।।2।।

ಭವಭಯ ಹರಣಂ ವಂದಿತ ಚರಣಂ

ಭವಭಯ ಹರಣಂ ವಂದಿತ ಚರಣಂ। ಜಯರಾಧ ಜಯ ಮಾಧವ ಶೌರಿ।। ಮಂಗಲ ಚರಣ ಕಲಿಮಲ ಸಹನ। ನಾರಾಯಣ ಕೇಶವಾ (ಸಾಯಿ) ಜಯರಾಧಾ ಜಯಮಾಧವಾ ಶೌರಿ।।

ಮಾಧವ ಮುರಹರ ರಾಗ: ಅಭೇರಿ

ಮಾಧವ ಮುರಹರ ಮಧುರ ಮನೋಹರ ಗಿರಿಧರ ಗೋಪಾಲ- ಹೇ ಗಿರಿಧರ ಗೋಪಾಲ।। ನಂದಕುಮಾರ ಸುಂದರಾಕಾರ ಬೃಂದಾವನ ಸಂಚಾರಾ(2) ಮುರಳಿ ಲೋಲ, ಮುನಿಜನ ಪಾಲ, ಗಿರಿಧರ.... ಗೋಪಾಲಪಾಲ ಗೋಪಿಲೋಲ ರಾಧಾ ಹೃದಯವಿಹಾರ (2) ಭಕ್ತೋದ್ಧಾರ ಬಾಲಗೋಪಾಲ . ಗಿರಿಧಾರಾ .... ಕೌಸ್ತುಭ ಹಾರಾ ಮೌಕ್ತಿಕ ಧಾರಾ। ವೇಣು ಗಾನ ವಿಲೋಲ .... ನಂದಕುಮಾರಾ.ನವನೀತ ಚೋರಾ.. ಗಿರಿಧಾರಾ ಮಾಧವ ಮುರಹರ. ಮಧುರ ಮನೋಹರ ಗಿರಿಧರ ಗೋಪಾಲ. ಗಿರಿಧರ ಗೋಪಾಲ। ಗಿರಿಧರ ಗೋಪಾಲ ಗಿರಿಧರ ಗೋಪಾಲ।।

ಕ್ಷೀರಾಬ್ಧಿಶಯನ ನಾರಾಯಣ ರಾಗ: ಕಲ್ಯಾಣಿ

ಕ್ಷೀರಾಬ್ಧಿಶಯನ ನಾರಾಯಣ। ಶ್ರೀಲಕ್ಷ್ಮೀ ರಮಣ ನಾರಾಯಣ।। ನಾರಾಯಣ ಹರಿ ನಾರಾಯಣ ನತಜನ ಪರಿಪಾಲ ನಾರಾಯಣ।।1।। ವೈಕುಂಠವಾಸ ನಾರಾಯಣ। ವೈದೇಹಿ ರಮಣ ನಾರಾಯಣ।। ನಾರಾಯಣ ಸತ್ಯನಾರಾಯಣ। ನರಹರಿರೂಪ ನಾರಾಯಣ।।2।। ಶಂಖಚಕ್ರ ಗದಾಪದ್ಮ ನಾರಾಯಣ। ಶ್ರೀಮಹಾವಿಷ್ಣುವೇ ನಾರಾಯಣ।। ನಾರಾಯಣ ಶ್ರೀಮನ್ನಾರಾಯಣ। ನಾರದ ಸೇವಿತ ನಾರಾಯಣ।।3।।

ಶ್ರೀಹರಿ ಬೋಲ್ (ಹಿಂದಿ) ರಾಗ: ಕಲ್ಯಾಣಿ

ಶ್ರೀಹರಿ ಬೋಲ್ ಹರಿ ಬೋಲ್, ಹರಿಹರಿ ಬೋಲ್। ಮುಕುಂದ ಮಾಧವ ಗೋವಿಂದ ಬೋಲ್।।1।। ರಾಮ ಬೋಲ್ ರಾಮ ಬೋಲ್, ರಾಮ ರಾಮ ಬೋಲ್। ಸೀತಾ ಸಮೇತಾ ಶ್ರೀ ರಾಮಚಂದ್ರ ಬೋಲ್।।2।। ಕೃಷ್ಣ ಬೋಲ್ ಕೃಷ್ಣ ಬೋಲ್, ಕೃಷ್ಣ ಕೃಷ್ಣಬೋಲ್। ರಾಧಾ ಸಮೇತ ಶ್ರೀ ರಾಧೇ ಕೃಷ್ಣ ಬೋಲ್ ।।3।। ಶಿವ ಬೋಲ್ ಶಿವ ಬೋಲ್ ಶಿವಶಿವ ಬೋಲ್। ಗೌರೀ ಸಮೇತ ಶ್ರೀ ಸಾಂಬಶಿವ ಬೋಲ್।।4।। ಹರ ಬೋಲ್ ಹರ ಬೋಲ್ ಹರಹರ ಬೋಲ್। ಉಮಾ ಸಮೇತ ಶ್ರೀ ಶಂಭುನಾಥ ಬೋಲ್।।5।। ವಿಠ್ಠಲ ಬೋಲ್ ವಿಠ್ಠಲ ಬೋಲ್, ವಿಠ್ಠಲವಿಠ್ಠಲ ಬೋಲ್। ರಖುಮಾ ಸಮೇತ ಶ್ರೀ ಪಂಡರಿನಾಥ ಬೋಲ್।।6।। ರಂಗ ಬೋಲ್ ರಂಗ ಬೋಲ್ ರಂಗ ರಂಗ ಬೋಲ್। ರಖುಮಾ ಸಮೇತ ಶ್ರೀ ಪಾಂಡುರಂಗ ಬೋಲ್।।7।।

ನಂದಲಾಲ ಯದು ನಂದಲಾಲ ರಾಗ: ಮೋಹನ

ನಂದಲಾಲ ಯದು ನಂದಲಾಲ, ಬೃಂದಾವನ ಗೋವಿಂದಲಾಲ। ರಾಧಾಲೋಲ ನಂದಲಾಲ, ರಾಧಾ ಮಾಧವ ನಂದಲಾಲ।।

ಚಿತ್ ಚೋರಾ ಯಶೋದಾಕೆ (ಹಿಂದಿ) ರಾಗ: ಪೀಲು

ಚಿತ್ ಚೋರಾ ಯಶೋದಾಕೆ ಬಾಲ್। ನವನೀತ ಚೋರ ಗೋಪಾಲ್।।ಚಿತ್।। ಗೋಪಾಲ ಗೋಪಾಲ ಗೋಪಾಲ ಗೋಪಾಲ। ಗೋವರ್ಧನಧರ್ ಗೋಪಾಲ।।ಚಿತ್।।

ಬಡಾ ಚಿತ್ ಚೋರಾ ಬೃಂದಾವನ ಸಂಚಾರ

ಬಡಾ ಚಿತ್ ಚೋರಾ ಬೃಂದಾವನ ಸಂಚಾರ। ಗೋಪಾಲ ಗೋಪಾಲ ಹೇ ಮುರಲೀ ಗೋಪಾಲ।। ಗೋವರ್ಧನೋದ್ಧಾರ ಗೋಪಾಲ ಬಾಲ। ಗೋಪೀಮನೋಹರ। ಸಾಯಿ ಗೋಪಾಲ।।

ಗೋವಿಂದ ಗೋಪಾಲ ಪ್ರಭು ಗಿರಿಧಾರಿ

ಗೋವಿಂದ ಗೋಪಾಲ ಪ್ರಭು ಗಿರಿಧಾರಿ। ಗೋವಿಂದ ಗೋಪಾಲ ಹೃದಯ ವಿಹಾರಿ।। ನಂದಕಿಶೋರ ನವನೀತ ಚೋರ। (ಪರ್ತಿ) ಹೃದಯ ವಿಹಾರ ಬಡಾ ಚಿತ್ತ ಚೋರ।।

ರಾಮ ಸುಮಿರ ಮನ

ರಾಮ ಸುಮಿರ ಮನ ರಾಮಸುಮಿರ ಮನ। ರಾಮ ಸುಮಿರ ಮನರಾಮ್।। ಜಾನಕಿ ವಲ್ಲಭ ದಶರಥನಂದನ ರಾಮಚಂದ್ರ ಶ್ರೀ ರಾಮ್। ಭಜಮನ್ ಸೀತಾರಾಮ್ ರಾಮ್। ಭಜಮನ್ ರಾಧೇಶಾಮ್। ಶಾಮ್। ಭಜಮನ್ ಸಾಯಿ ರಾಮ್ ರಾಮ್।।

ಗೋವಿಂದ ಹರೇ ಗೋಪಾಲ ಹರೇ

ಗೋವಿಂದ ಹರೇ ಗೋಪಾಲ ಹರೇ। ಹೇ ಗೋಪಗೋಪಿಬಾಲ।। ಗೋವಿಂದ ಹರೇ ಗೋಪಾಲ ಹರೇ ಹೇ ಮುರಳಿಗಾನ ಲೋಲ।। ಗೋವಿಂದ ಹರೇ ಗೋಪಾಲಹರೇ ರಾಧರಮಣ ಲೋಲ।। ಗೋವಿಂದ ಹರೇ ಗೋಪಾಲ

ಗೋವಿಂದ ರಾಮ ಜೈಜೈ ರಾಗ: ಮೋಹನ

ಗೋವಿಂದ ರಾಮ ಜೈ ಜೈ। ಗೋಪಾಲ ರಾಮ ಜೈ ಜೈ। ಮಾಧವ ರಾಮ ಜೈ ಜೈ। ಕೇಶವ ರಾಮ ಜೈ ಜೈ।।1।। ಕೋದಂಡ ರಾಮ ಜೈ ಜೈ। ಕೌಸಲ್ಯ ರಾಮ ಜೈ ಜೈ। ಏಕ್‌ತು ರಾಮ ಜೈ ಜೈ। ಅನೇಕ ತೂರಾಮ ।।1।। ಸುಲಭರಾಮ ಜೈ ಜೈ। ದುರ್ಲಭ ರಾಮ ಜೈ ಜೈ। ಏಕತುರಾಮ ಜೈ ಜೈ। ಅನೇಕ ತು ರಾಮ।। 3।। ಕಲ್ಯಾಣರಾಮ ಜೈ ಜೈ। ಕಾಕುತ್ಸರಾಮ ಜೈ ಜೈ। ಏಕ್ ತು ರಾಮ ಜೈ ಜೈ। ಅನೇಕ ತೂ ರಾಮ ಜೈ ಜೈ।।4।।

ಗೋವಿಂದ ಕೃಷ್ಣ ಜೈ

ಗೋವಿಂದ ಕೃಷ್ಣ ಜೈ ಗೋಪಾಲ ಕೃಷ್ಣ ಜೈ। ಗೋಪಾಲ ಬಾಲ ಬಾಲ ರಾಧಾ ಕೃಷ್ಣ ಜೈ।। ಕೃಷ್ಣ ಜೈ ಕೃಷ್ಣ ಜೈ ಕೃಷ್ಣ ಜೈ। ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಜೈ।। ಗೋಪಿಕಾ ಮಾಲ ಹಾರಿ ಪ್ಯಾರಿ। ಮಾಯಿ ಮೀರಾ ಮನ ವಿಹಾರಿ। ಮದನ ಮೋಹನ ಮುರಳಿಧಾರಿ ಕೃಷ್ಣ ಜೈ। ಕೃಷ್ಣ ಜೈ ಕೃಷ್ಣ ಜೈ ಕೃಷ್ಣ ಜೈ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಜೈ। ಕೃಷ್ಣ ಜೈ ರಾಮ ಕೃಷ್ಣ ಜೈ ರಾಧಕೃಷ್ಣ ಜೈ। ಬಾಲ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಜೈ।। ಹರೇ ಹೇ ನಂದಗೋಪಬಾಲ।।

ಕೃಷ್ಣ ಕೃಷ್ಣ ಮುಕುಂದ ರಾಗ: ಯಮನ್‌ಕಲ್ಯಾಣಿ

ಕೃಷ್ಣ ಕೃಷ್ಣ ಮುಕುಂದ ಜನಾರ್ದನ। ಕೃಷ್ಣ ಗೋವಿಂದ ನಾರಾಯಣ ಹರೇ।। ಅಚ್ಯುತಾನಂತ ಗೋವಿಂದ ಮಾಧವ। ಸಚ್ಚಿದಾನಂದ ನಾರಾಯಣ ಹರೇ।।

ಹೇ ಮಾಧವ ಹೇ ರಾಗ: ಹಂಸನಾದ

ಹೇ ಮಾಧವ, ಹೇ ಮಧುಸೂದನ ದಾಮೋದರ, ಹೇ ಮುರಳೀಧರ।। ಮನಮೋಹನ ಹೇ ಯದುನಂದನ। ದೀನಜನ ಭವಭಯಭಂಜನಾ।।1।। ಭುವನತ್ರಯ ಹೇ ಭುವಿನಾಯಕ। ಕರುಣಾಕರ ಹೇ ಜನರಕ್ಷಕ।।ಜಗನ್ಮೋಹನ ಹೇ ಜಗನ್ನಾಯಕ।।2।।

ಮಧುರ ಮಧುರ ಮುರಲೀ

ಮಧುರ ಮಧುರ ಮುರಲೀ ಘನಶ್ಯಾಮ। ಮಧುರಾಧಿಪತೇ ರಾಧೇ ಶಾಮ।। ಸೂರದಾಸ್ ಪ್ರಭು ಹೇ ಗಿರಿ ಧಾರಿ। ಮೀರಾ ಕೇ ಪ್ರಭು ಹೃದಯ ವಿಹಾರಿ।।

ಮಧುವನ ಸಂಚಾರಿ

ಮಧುವನ ಸಂಚಾರಿ ಶ್ಯಾಮ ಮುರಾರಿ। ಹೇ ಮಧುಸೂಧನ ಮುರಲೀ ಧಾರಿ। ಮಾಧವ ಮೋಹನ ಮಯೂರ ಮುಕುಟಧರ। ಮಥುರಾನಾಥ ಪ್ರಭು ಗಿರಿಧಾರಿ॥

ರಾಧೇ ರಾಧೇ ರಾಧೇ ರಾಧೇ ಗೋವಿಂದ **ರಾಗ: ಕಲ್ಯಾಣವಸಂತ**

ರಾಧೇ ರಾಧೇ ರಾಧೇ ರಾಧೇ ಗೋವಿಂದ। ವೃಂದಾವನ ಚಂದ, ವೃಂದಾವನ ಚಂದ। ಅನಾಥನಾಥ ದೀನಬಂಧು ರಾಧೇ ಗೋವಿಂದ॥1॥ ನಂದಕುಮಾರ ನವನೀತಚೋರ, ರಾಧೇ ಗೋವಿಂದ। ವೃಂದಾವನ ಚಂದ, ವೃಂದಾವನ ಚಂದ। ಅನಾಥನಾಥ ದೀನಬಂಧು, ರಾಧೇ ಗೋವಿಂದ॥2॥ ಪುರಾಣ ಪುರುಷ ಪುಣ್ಯ ಶ್ಲೋಕ, ರಾಧೇ ಗೋವಿಂದ। ವೃಂದಾವನ ಚಂದ, ವೃಂದಾವನ ಚಂದ। ಅನಾಥನಾಥ ದೀನಬಂಧು ರಾಧೇ ಗೋವಿಂದ॥3॥ ಪಂಡರಿನಾಥ ಪಾಂಡುರಂಗ ರಾಧೇ ಗೋವಿಂದ। ವೃಂದಾವನ ಚಂದ, ವೃಂದಾವನ ಚಂದ। ಅನಾಥನಾಥ ದೀನಬಂಧು ರಾಧೇ ಗೋವಿಂದ॥4॥ ಜಯ ಜಯ ವಿಠ್ಠಲ ಜಯ ಹರಿ ವಿಠ್ಠಲ ರಾಧೇ ಗೋವಿಂದ। ವೃಂದಾವನ ಚಂದ ವೃಂದಾವನ ಚಂದ। ಅನಾಥನಾಥ ದೀನಬಂಧು ರಾಧೇ ಗೋವಿಂದ॥5॥

ಶಿವಾಯ ಪರಮೇಶ್ವರಾಯ **ರಾಗ: ಶಂಕರಾಭರಣ**

ಶಿವಾಯ ಪರಮೇಶ್ವರಾಯ ಶಶಿಶೇಖರಾಯ ನಮ ಓಂ। ಭವಾಯ ಗುಣಸಂಭವಾಯ ಶಿವ ತಾಂಡವಾಯ ನಮ ಓಂ॥ ಶಿವಾಯ ನಮ ಓಂ ಹರಾಯ ನಮಓಂ। ಹರಾಯ ಹರಾಯ ಹರಾಯ ನಮ ಓಂ॥ ಓಂ ನಮಃ ಶಿವಾಯ ಶಿವಾಯ ನಮಓಂ। ಶಿವಾಯ ಸುರಪೂಜಿತಾಯ ಗಣಸೇವಿತಾಯ ನಮಃ ಓಂ ಹರಾಯ ತ್ರಿಪುರಾಂತಕಾಯ ಶಿವಶಂಕರಾಯ ನಮ ಓಂ। ಶಿವಾಯ ಪರಮೇಶ್ವರಾಯ ಚಂದ್ರಶೇಖರರಾಯ ನಮ ಓಂ॥ ಹರಾಯ ಹರಿಪೂಜಿತಾಯ ಗುರುವಂದಿತಾಯ ನಮ ಓಂ॥ ಶಿವಾಯ ಭವಭಂಜನಾಯ ಮೃತ್ಯುಂಜಯಾಯ ನಮ ಓಂ। ಹರಾಯ ವೃಷಭಧ್ವಜಾಯ ಭಕ್ತ ಪ್ರಿಯಾಯ ನಮ ಓಂ॥

ಶಿವಹರ (ಹೇಶಿವ) ಶಂಕರ **ರಾಗ: ಮೋಹನ**

ಶಿವ ಹರ ಶಂಕರ ನಮಾಮಿ ಶಂಕರ ಶಿವಶಂಕ ಶಂಭೋ। ಹೇ ಶಿವ ಶಂಕರ ನಮಾಮಿ ಶಂಕರ ಶಿವ ಶಂಕರ ಶಂಭೋ। ಹೇ ಗಿರಿಜಾಪತಿ ಶಂಭೋ ಶಂಕರ ಶಿವಶಂಕರ ಶಂಭೋ ಭವಾನಿ ಶಂಕರ। ಗಜಚರ್ಮಾಂಬರ ಚಂದ್ರ ಕಲಾಧರ ಶಿವಶಂಕರ ಶಂಭೋ॥

ಹರಶಿವ ಶಂಕರ

ಹರಶಿವ ಶಂಕರ ಶಶಾಂಕರ ಶೇಖರ। ಹರ ಭೋಂ ಹರಭೋಂ ಭೋಂ ಭೋಂ ಬೋಲೊ॥ ಭವಾಭಯಂಕರ ಗಿರಿಜಾಶಂಕರ। ಧಿಮಿಧಿಮಿ ಧಿಮಿತಕ ನರ್ತನ ಖೇಲೋ।

ಹರಗಂಗಾ ಜಟಾಧರ ಗೌರೀಶಂಕರ

ಹರಗಂಗಾ ಜಟಾಧರ ಗೌರೀಶಂಕರ। ಹರಗಂಗಜಟಾಧರ ಗೌರೀಶಂಕರ ಗಿರಿಜಾಮನರಮಣ। ಹರ ಮೃತ್ಯುಂಜಯ ಮಹದೇವ ಮಹೇಶ್ವರ ಮಂಗಳ ಶುಭ ಚರಣ। ನಂದಿವಾಹನ ನಾಗಭೂಷಣ। (ಸಾಯಿ) ನಿರುಪಮಗುಣಸದನ। ನಟನ ಮನೋಹರ ನೀಲಕಂಠ (ಸಾಯಿ) ನೀರಜದಳನಯನ॥

ಜಯ ಶಿವ ಓಂಕಾರ **ರಾಗ: ಕಲ್ಯಾಣಿ**

ಜಯ ಶಿವ ಓಂಕಾರ ಜಯ ಜಯ ಭಜ ಶಿವ ಓಂಕಾರ ಓಂ। ಬ್ರಹ್ಮ ವಿಷ್ಣು ಸದಾಶಿವ ಹರ ಹರ ಹರ ಹರ ಮಹದೇವ।

ಜಯಗುರು ಓಂಕಾರ ಜಯ ಜಯ ಸದ್ಗುರು ಓಂಕಾರ ಓಂ.....।। ಬ್ರಹ್ಮ ವಿಷ್ಣು ಸದಾಶಿವ ಹರ ಹರ ಹರ ಹರ ಮಹದೇವ। ಜಯ ಶಿವ ಓಂಕಾರ ಜಯ ಜಯ ಭಜ ಶಿವ ಓಂಕಾರ ಓಂ ।।

ನಮಃ ಪಾರ್ವತೀ ಪತಯೇ **ರಾಗ: ಮೋಹನ**

ನಮಃ ಪಾರ್ವತೀ ಪತಯೇ ಹರಹರ। ಹರ ಹರ ಶಂಕರ ಮಹಾದೇವ। ಹರ ಹರ ಹರ ಹರ ಮಹಾದೇವ। ಶಿವ ಶಿವ ಶಿವ ಶಿವ ಸದಾಶಿವ। ಮಹಾದೇವ ಸದಾ ಶಿವ ಸದಾಶಿವ ಮಹಾದೇವ ನಮಃ। ಚಂದ್ರಚೂಡ ಶಿವಚಂದ್ರ ಕಲಾಧರ। ಚಂದ್ರಶೇಖರ ಸಾಂಬಶಿವ। ಓಂಕಾರೇಶ್ವರ ಉಮಾಮಹೇಶ್ವರ। ತ್ರ್ಯಯಂಬಕೇಶ್ವರ ತವ ಶರಣಂ।।

ವಾಹೇ ಗುರು ವಾಹೇ ಗುರು

ವಾಹೇ ಗುರು ವಾಹೇ ಗುರು ವಾಹೇ ಗುರು ಜೀ ಬೋಲ್। ಸತ್ಯ ನಾಮ್ ಸತ್ಯ ನಾಮ್ ಸತ್ಯ ನಾಮ್ ಜಿ ಬೋಲೋ।। ನಿತ್ಯ ನಿತ್ಯ ಜಪಿಯೇ ತೇರೇ ನಾಮ್ ಜೀ ಬೋಲೊ। ಸತ್ಯ ನಾಮ್ ಸತ್ಯ ನಾಮ್ ಸತ್ಯ ನಾಮ್ ಜೀ ಬೋಲೊ।। ಗೋವಿಂದ ಜೈ ಜೈ ಗೋಪಾಲ ಜೈಜೈ ರಾಧಾರಮಣ ಹರಿ ಗೋವಿಂದ ಜೈಜೈ।।

ಕೃಷ್ಣ ರಾಂ ಗೋವಿಂದ ಹರಿ **ರಾಗ: ಯಮನ್**

ಕೃಷ್ಣ ರಾಂ ಗೋವಿಂದ ಹರಿ ರಾಮ ಕೃಷ್ಣ ಗೋವಿಂದ।। ಕೃಷ್ಣ ಕೇಶವ ಗೋವಿಂದ ಹರಿ ರಾಮಕೃಷ್ಣ ಗೋವಿಂದ। ನಂದನಂದನ ಗೋವಿಂದ ರಾಮ ಕೃಷ್ಣ ಗೋವಿಂದ। ನವನೀತ ಚೋರ ಗೋವಿಂದ ಹರಿ ರಾಮ ಕೃಷ್ಣ ಗೋವಿಂದ। ಯಶೋಧೆನಂದನ ಗೋವಿಂದ ಹರಿ ರಾಮಕೃಷ್ಣ ಗೋವಿಂದ। ಯದುಕುಲ ತಿಲಕ ಗೋವಿಂದ। ಹರಿ ರಾಮಕೃಷ್ಣ ಗೋವಿಂದ। ಪಾಂಡುರಂಗ ಗೋವಿಂದ ಹರಿ ರಾಮಕೃಷ್ಣ ಗೋವಿಂದ। ಪಂಡರಿನಾಥ ಗೋವಿಂದ ಹರಿ ರಾಮಕೃಷ್ಣ ಗೋವಿಂದ। ಭಕ್ತವತ್ಸಲ ಗೋವಿಂದ ಹರಿ ರಾಮಕೃಷ್ಣ ಗೋವಿಂದ। ಪರಮದಯಾಳು ಗೋವಿಂದ ಹರಿ ರಾಮಕೃಷ್ಣ ಗೋವಿಂದ। ವೇಣುವಿಲೋಲ ಗೋವಿಂದ ಹರಿ ರಾಮಕೃಷ್ಣ ಗೋವಿಂದ। ವಿಜಯಗೋಪಾಲ ಗೋವಿಂದ ಹರಿ ರಾಮಕೃಷ್ಣ ಗೋವಿಂದ।।

ಆತ್ಮಾರಾಮ ಆನಂದರಮಣ **ರಾಗ: ಕಾನಡ**

ಆತ್ಮಾರಾಮ ಆನಂದರಮಣ। ಅಚ್ಯುತ ಕೇಶವ ಹರಿನಾರಾಯಣ।।1।। ಭವಭಯಹರಣ ವಂದಿತ ಚರಣ। ರಘುಕುಲ ಭೂಷಣ ರಾಜೀವ ಲೋಚನ।।2।। ಆದಿ ನಾರಾಯಣ ಅನಂತ ಶಯನ। ಸಚ್ಚಿದಾನಂದ ಶ್ರೀಸತ್ಯನಾರಾಯಣ।।3।। ಪಾರ್ಥನ ಸಾರಥಿ ಪುರುಷೋತ್ತಮನೆ। ಪುಂಡರೀಕಾಕ್ಷ ಶ್ರೀ ಪದ್ಮನಾಭನೆ।।4।। ಜಯ ಜಯ ಮಂಗಳ। ಜಯ ಶುಭ ಮಂಗಳ। ಮಂಗಳ ಪಾಡಿರಿ ಮಧುಸೂದನನಿಗೆ।।5।।

ರಘುಪತೇ ಶ್ರೀ ರಾಮಚಂದ್ರ **ರಾಗ: ಮಾಂಡ್**

ರಘುಪತೇ ಶ್ರೀ ರಾಮಚಂದ್ರ ರಾಘವ ದಯಾನಿಧೇ। ರಘುಪತೇ ಶ್ರೀರಾಮಚಂದ್ರ ರಾಘವ ದಯಾನಿಧೇ।।1।। ಮಾಧವ ಶ್ರೀ ರಾಧಿಕೇಶ ಗೋವಿಂದ ಹರೇ ಕೃಷ್ಣಾ। ರಘುಪತೇ ರಾಧಿಕೇಶ ಮಾಧವ ಹರೇ ಕೃಷ್ಣಾ।।2।। ಪಶುಪತೇ ಶ್ರೀ ಪಾರ್ವತೀಶ ಶಂಕರ ಸದಾಶಿವ। ರಘುಪತೇ ಶ್ರೀ ಜಾನಕೀಶ ರಾಘವ ಹರೇ ರಾಮ।।3।। ಸುರಪತೇ ಶ್ರೀ ವಲ್ಲೀಶ ಷಣ್ಮುಖ ಹರೇ ಶಂಭೋ। ಶ್ರೀ ಪೂರ್ಣೇಶ ಪುಷ್ಕಲೇಶ ಹರಿಹರಾತ್ಮಜ ವಿಭೋ।।4।। ಉಮಾಪತೇ ಶಂಕರೇಶಾ ಶಂಭೋಮಹೇಶ್ವರಾ ।।5।।

ರಾಮಂ ಭಜೇ ರಘುರಾಮಮ್ ಭಜೇ **ರಾಗ: ಮೋಹನ**

ರಾಮಂ ಭಜೇ ರಘುರಾಮಮ್ ಭಜೇ। ರವಿಕುಲ ತಿಲಕ ಶ್ರೀ ರಾಮಮ್ ಭಜೇ।।ಪ।। ದಶರಥ ನಂದನ ರಾಮಮ್

ಭಜೇ। ದಶಮುಖ ಮರ್ದನ ರಾಮಮ್ ಭಜೇ। ಕೌಸಲ್ಯ ನಂದನ ರಾಮಮ್ ಭಜೇ। ಗೌತಮ ಪೂಜಿತ ರಾಮಮ್ ಭಜೇ। ವಿಶ್ವಾಮಿತ್ರ ಪ್ರಿಯ ರಾಮಮ್ ಭಜೇ। ವಿಮಲ ಕೋದಂಡ ಜಯ ರಾಮಮ್ ಭಜೇ।।1।। ತಾಟಕ ಸಂಹಾರ ರಾಮಮ್ ಭಜೆ। ತಾರಕ ರಾಮ ಶ್ರೀ ರಾಮಮ್ ಭಜೇ। ಅಹಲ್ಯೋದ್ಧಾರಕ ರಾಮಮ್ ಭಜೇ। ಅಮಿತ ಪರಾಕ್ರಮ ರಾಮಮ್ ಭಜೇ। ಶಿವಶಾಪ ಖಂಡಿತ ರಾಮಮ್ ಭಜೇ। ಸೀತಾ ಪಾಣಿಗ್ರಹಣ ರಾಮಮ್ ಭಜೇ।।2।। ವೈದೇಹಿ ವಲ್ಲಭ ರಾಮಮ್ ಭಜೇ। ವೈಕುಂಠ ನಾಯಕ ರಾಮಮ್ ಭಜೇ। ಪಿತೃವಾಕ್ಯ ಪಾಲನ ರಾಮಮ್ ಭಜೇ। ಚತುರ್ಮುಖ ವಂದಿತ ರಾಮಮ್ ಭಜೇ। ಭರತ ಲಕ್ಷ್ಮಣ ಪ್ರಿಯ ರಾಮಮ್ ಭಜೇ। ಶತ್ರುಘ್ನಾನಂದ ಶ್ರೀ ರಾಮಮ್ ಭಜೇ।।3।। ಭಕ್ತ ಪರಿಪಾಲನಾ ರಾಮಮ್ ಭಜೇ। ಶಕ್ತಿ ಸೀತಾ ಸಮೇತ ಶ್ರೀ ರಾಮಮ್ ಭಜೇ। ಅಯೋಧ್ಯ ಪುರಿವಾಸ ರಾಮಮ್ ಭಜೇ। ಆದಿ ನಾರಾಯಣ ರಾಮಮ್ ಭಜೇ। ಸಕಲ ಕಲ್ಯಾಣಗುಣ ರಾಮಮ್ ಭಜೇ। ಸಾಕೇತ ಪುರವಾಸ ರಾಮಮ್ ಭಜೇ।।4।।

ಪ್ಯಾರೇ ನಂದಲಾಲ್ (ಹಿಂದಿ) ರಾಗ: ಯಮನ್‌ಕಲ್ಯಾಣಿ

ಪ್ಯಾರೇ ನಂದಲಾಲ್ ದರುಶನ ದೀಜೋ। ಯಶೋದಾಕೆ ಬಾಲ್ ದರುಶನ ದೀಜೋ।।ಪ್ಯಾರೆ।। ಗಿರಿಧಾರಿ ಬಾಲ್ ದರುಶನ್ ದೀಜೋ। ನಟವರಲಾಲ್ ದರುಶನ್ ದೀಜೋ।।ಪ್ಯಾರೆ।।

ಈಶ್ವರಾಂಬ ಪ್ರಿಯ ನಂದನಾ ರತ್ನಾಕರ

ಈಶ್ವರಾಂಬ ಪ್ರಿಯ ನಂದನಾ। ರತ್ನಾಕರ ಕುಲಭೂಷಣ।। ಸಕಲ ಲೋಕೋದ್ಧಾರಣ। ಪರಮ ಪೂಜ್ಯ ಪಾವನ।। ಆಪಸ್ತಂಭ ಸೂತ್ರನ। ಅಂತರಂಗರಂಗನ।। ಭರದ್ವಾಜ ಸು ಗೋತ್ರನ।। ಭವ್ಯ ನಾಮ ಕೀರ್ತನ।

ಈಶ್ವರಾಂಬ ಪ್ರಿಯತನಯಾ ಸಾಯಿನಾರಾಯಣ

ಈಶ್ವರಾಂಬ ಪ್ರಿಯತನಯಾ ಸಾಯಿನಾರಾಯಣ। ಸಾಯಿ ನಾರಾಯಣಾ ಸತ್ಯನಾರಾಯಣ।। ಕಲಿಯುಗಮೇ ಅವತಾರಲಿಯೇ। ಕಣಕಣಮೇ ತೇರನಾಮ್ ಸಾಯೀ ಕಣಕಣ ಮೇ ತೇರ ನಾಮ್।

ಪರ್ತಿ ನಿಲಯ ಶ್ರೀ ಸತ್ಯಸಾಯಿ

ಪರ್ತಿ ನಿಲಯ ಶ್ರೀ ಸತ್ಯಸಾಯಿ। ಕಾವರಾವ ದೇವಾ ಹರೇಮುರಾರೇಹರೆ।।ಪ।। ತಲ್ಲಿಯು ತಂಡ್ರಿಯು ದೈವಮುನೀವೆ। ದಾರೀಚೂಪೆದಾತವು ನೀವೇ ನೀವೇನಾದಿ ಕಿಂಕರ। ಬ್ರೋವರಾದ।। ಸಾಯಿದೇವ ನೀದಸೇವ ಚೇತುವಿದಂ।।1।। ದೀನಲು ಬ್ರೋಚೇ ದೈವನೀವೇದ। ನಿನ್ನೇಮದಿ ನಮ್ಮಿತಿರಾದೀನ ಪೊಪಾಪಹರಣಾ।।2।। ನೀ ಪ್ರಾಪು ಕೋರಿ ವೇಸಿಯುಂಟಿನಯಂತಪಿಲಿಚಿನಾ। ಪಲುಕವದೇರಾ।।3।। ಪಂತಮೇ ಸಾವನಚರಿತ। ಸದ್ಭಕ್ತಸಂರಕ್ಷಕಾ। ಕಾವರಾವ। ಸೇವೆ ಹರೇ ಮುರಾರೇ।।4।।

ಭಜನಕು ರಂಡೀ

ಭಜನಕು ರಂಡೀ। ಸಾಯಿಭಜನಕು ರಂಡೀ। ಬಾಬಕೋ ಗೂಡಿ ಜೇಸೇಟಿ ಭಜನಕುರಂಡೀ। ಆಜಪಮಾಲಾ। ಆದಿವ್ಯನುಕೇಲಾ ಪೂಜಕುನೇಡು ಪೂಜೋಣುಲಾರೆ। ತೇಜೋವಂಕುಡೈನ ಸಾಯಿಬಾಬ ಬ್ರಚೀಸೇಟಿ।।1।। ಬ್ಯಂಡು ತಂಜಾವೂರು ಭಾಗ। ನಮೇಳಲು ಬೆಂಗಳೂರು ಭಕ್ತುಲು ಬಾಲಭಜನಲುಕಲು ನೇಡಕಮೀರು ವೇಡಕರ ಭಕುತೇರಂಡೀ।।2।।

ಕಂಡೆ ಕಂಡೆನು ಬಾಬಾ ರಾಗ: ಕಲ್ಯಾಣಿ

ಕಂಡೆ ಕಂಡೆನು ಬಾಬಾ ನಿನ್ನಯ ದಿವ್ಯಮಂಗಳಮೂರ್ತಿಯ।।ಪ।। ಕಂಡು ಬದುಕಿದೆ ಇಂದು ನಾನು ಕರುಣೆಸೋ

ಯನ್ನೊಡೆಯನೆ॥ಅ.ಪ.॥ ಮಂದಹಾಸವು ದಂತಪಂಕ್ತಿಯು ಚಂದದಾಕುಡಿನೋಟವು। ಅಂದವಾದ ಕುರುಳು ಭ್ರೂಗಳು ಮುದ್ದು ಸುರಿಯುವ ಮುಖವನಾ॥1॥ ದಿವ್ಯವಾಣಿಯು ಮಧುರಗಾನವು। ಶರಣುರಕ್ಷಕಸಾಯಿಯು। ಭಕ್ತಜನರ ಕೂಡಿ ಕಾಡುತ ಜ್ಞಾನಮಾರ್ಗವ ಭೋದಿಸುವವನ॥2॥ ಇನ್ನು ಎನ್ನಯ ಬಂಧ ತೀರಿತು। ಎಮ್ಮ ಕ್ಲೇಷವು ಹೋಯಿತು। ಇನ್ನು ಅನ್ಯರ ಭಜಿಸಲೇತಕೆ ಮನ್ನಿಸೋಪರ್ತಿ ರಮಣನೇ॥3॥

ಪಾವನಪುರುಷ ಸಾಯೀಶಾ **ರಾಗ: ಕಾಪಿ**

ಪಾವನಪುರುಷ ಸಾಯೀಶಾ। ಶರಣರಕಾವ ಸರ್ವೇಶ ಸೌಮ್ಯರೂಪ ಸತ್ಯಬಾಬಾ। ಕಾವುದೈ ಕೈಮುಗಿವೇ॥1॥ ಚಿತ್ರವತೀ ನದಿತೀರನಿವಾಸ। ಶಿಷ್ಟಜನಾವನ ಮುನಿಶರಣ। ಈಶಜಗತ್ರಯ ಮೋದವಿಕಾಸಾ। ಸತ್ಯಸಾಯಿ॥2॥

ನೀ ಕೈಯ್ಯ ಬಿಡದೆ ಸಲಹುವುದೈ **ರಾಗ: ಮೋಹನ**

ನೀ ಕೈಯ್ಯ ಬಿಡದೆ ಸಲಹುವುದೈ ಪರ್ತೀಶ ಬಾಬಾ॥ಪ॥ ತನುಮನದೀ। ಅನುದಿನವು। ನುತಿಪೆನೋ ದೇವಾ॥ಅ.ಪ.॥ಬಹುನೊಂದೆನು ಪ್ರಭೋನಾಮಾನಸದಿ। ಭಾಧೆಯೊಳ್ ಸಿಲುಕಿ। ಕರುಣದೊಳು। ಈಕ್ಷಿಸಿ ನೀ। ಕಾವುದೊ ಬಾಬಾ॥1॥ ನಿನ್ನ ನೋಡಲುನಾ। ಬಹುದಿನದಿ ತಪಿಸಿದೆ ದೇವಾ। ಧನ್ಯನಾದೆ ಇಂದಿಗೆ ನಾ ನಿನ್ನನ್ನು ನೋಡಿ। ಭಕ್ತಪ್ರಿಯಾ। ಸಾಯಿನಾಥ ವಂದಿಪೆ ಬಾಬಾ॥2॥

ಜಯ ಹೇ ಶ್ರೀ ಸಾಯಿನಾಥ **ರಾಗ: ಹಂಸಧ್ವನಿ**

ಜಯ ಹೇ ಶ್ರೀ ಸಾಯಿನಾಥ। ಜಯ ಪರ್ತೀಶ। ಶರಣುನೀಕಿ ದೇವ॥ಪ॥ ಸದಯುಲೇಮಿ ಶುಭದರ್ಶನ ಮುನಮಾಜನ್ಮ ಸಾರ್ಥಕ ಮಯ್ಯ। ಲೇಶ ಮುಮಾಪೈ ಕಲಿಗೆ ನುಗಾ। ಜನನೀಜ ನಕುಲು ಕಾರಣಮೀರಲ್। ಚಾಲ ದೇಮಿ ಕೃಪಾ॥ಚ॥

ಲೋಕಮಂತ ಸ್ವಾಮಿನೇ। **ರಾಗ: ಶಿವರಂಜಿನಿ**

ಲೋಕಮಂತ ಸ್ವಾಮಿನೇ। ಕಾನರೇಮಿರು ಭಕ್ತುಲೂ। ಕನ ಜಾಲರೂ। ಬಾಲ ಬಾಬನು। ಕನುಪಿಂಚನೆ। ಎಚಮಂಡಿನೇ॥ಪ॥ ನಮ್ಮನ ವಾರಿವೇಟಲೋನೆ। ಬಾಬನೆನೆಲಸಿಂದುರೇ। ಇದಿರನ್ಮುಡಿ ಇದಿ ಸತ್ಯಮು ಇದಿನಮ್ಮಿನಾ। ಪಾಲಿಂಚುನೆ। ಏನೇಳನು॥1॥ ಪೇದವಾರಿನಿ ಆದರಿಂಚಿ। ದಾತು ಡೈ ಏತೋಚನೇ। ಸಾಯೀಶುಡು। ಮಹಿಮಾಂತುಡು ಮಹಿಮಲನು ಜೂಪೇಶುಡು॥2॥

ಸಾಕ್ಷಾರವೇ ಮೋಕ್ಷ ಮೂಲವೈ **ರಾಗ: ಸಾರಮತಿ**

ಸಾಕ್ಷಾರವೇ ಮೋಕ್ಷ ಮೂಲವೈ। ಸಾಕ್ಷಾರವೇ ಲಕ್ಷನಾಮವೋ। ಸಾಕ್ಷಾರಾತ್ಮ ಅಂತರಾತ್ಮನೈ। ಸಾಕ್ಷಾರಾತ್ಮನಂದಾತನೈ। ಸಾಯಿನಾಥ ಎನು ಮಾನವಾ॥1॥ ಸಾಯಿತಾನೇ ದೇವದೇವನೈ। ಸಾಯಿತಾನೇ। ಜೀವಜೀವನೈ। ಸಾಯಿತಾನೇ ತಾವನೀವಾತನೈ। ಸಾಯೀ ತಾನೇ ಭಾವಭವ್ಯ ನೈ॥2॥ ಸಾಮವೇದಂ ಸಾಯಿನಾಥನೇ। ಸಾಮದಾನಂ ಸಾಯಿನಾಥನೇ। ಸಾಮನಾಮಂ ಸಾಯಿ ನಾಥನೇ। ಸಾಮಪ್ರೇಮಂ ಸಾಯಿನಾಥನೇ॥3॥

ಸುಂದರ ವದನ ಸರಸಿಜ ನಯನ (ಹಿಂದಿ) **ರಾಗ: ಶುದ್ಧಧನ್ಯಾಸಿ**

ಸುಂದರ ವದನ ಸರಸಿಜ ನಯನ। ಪರ್ದರ್ತೀ ಪುರಿ ಭಗವಾನ್। ಜಗತ್ಪರಿಪಾಲ ಪ್ರಶಾಂತಿ ನಿಲಯ। ತುಮ್ ಹೋ ಮೇರೆ ಭಗವಾನ್। ದಯಾ ಕರೊ ಭಗವಾನ್। ಕೃಪಾ ಕರೊ ಭಗವಾನ್। ಪರ್ತೀ ಪುರೀಶ ಹೇ ಓ ಗಣೇಶ। ರಕ್ಷಾ ಕರೊ ಭಗವಾನ್॥

ಗುರುವೇ ಪರಬ್ರಹ್ಮಸ್ವರೂಪ **ರಾಗ: ಕಲ್ಯಾಣವಸಂತ**

ಗುರುವೇ ಪರಬ್ರಹ್ಮ ಸ್ವರೂಪ। ಗುರುವೇ ಚರಾಚರಾ ಚಿನ್ಮಯ ರೂಪ। ಗುರುವೇ ಆದಿ ಗುರುವೇ ಅನಾದಿ। ಆದಿ ಅಂತ್ಯ ರಹಿತಾತ್ಮ ಸ್ವರೂಪ॥1॥ ಸಕಲ ಶಾಸ್ತ್ರಶೃತಿ ವೇದಪುರಾಣ। ಅಖಿಲಾಗಮ ಪರಿಪೂರ್ಣನು ನೀನೆ। ವೇದಾಂತವನೀ ಝೇಂಕರಿಸುವಾ। ಕಿಂಕರನು ಪೊರೆ ಓಂ ನಾದ ಸ್ವರೂಪ॥2॥

ಹೇ ಗುರುವೆ ತೋರೆಮಗೆ **ರಾಗ: ಶಿವರಂಜನಿ**

ಹೇ ಗುರುವೆ ತೋರೆಮಗೆ। ತವಮಹಿಮೆಯಿರುವ। ನೀಡೆಮಗೆ ಭಕುತಿಯನು ಕಣಕಣದಿ ದೇವ॥ಪ॥ ತನಗಾಗಿ ಕೊರಗುವ ಮನವನು ನೀಗಿ। ನಿನಗಾಗಿ ಮಿಡಿಯುವ ಮನವನು ನೀಡು। ಎಂದೆಂದು ನಿನ್ನಲ್ಲಿ ಇರುವಂತೆ ಮಾಡು॥1॥ ಜಗದಲ್ಲಿ ಸುಖವಿಲ್ಲ ನಿನ್ನಲ್ಲಿ ಸುಖವು। ಜಗವೆಲ್ಲ ಹುಸಿಯಹುದು ನಿಜವೊಂದೆ ನೀವು। ಎಂದೆಂದು ನಿನ್ನಲ್ಲಿ ಇರುವಂತೆ ಮಾಡು॥2॥ ಅಜ್ಞಾನ ಕತ್ತಲೆಯು ಕವಿದಿಹುದು ಎಮಗೆ। ಸುಜ್ಞಾನ ಬೆಳಕನ್ನು ಹರಿಸು ನೀ ದೇವ। ಆನಂದ ಮೂರುತಿ ಸಾಯಿನಾಥ ಗುರುವೆ॥3॥

ಗುರುಮಹಿಮಾ ಗುರುಮಹಿಮಾ **ರಾಗ: ಕಾನಡ**

ಗುರುಮಹಿಮಾ ಗುರುಮಹಿಮಾ। ಅಪಾರ ಮಹಿಮಾ ಸಾಯಿ ಮಹಿಮಾ॥ ಕಿಮ್ ವಚನೀಯಂ ಸಾಯಿ ಮಹಿಮಾ। ಕಿಂ ವಚನೀಯಂ ಗುರುಮಹಿಮಾ॥1॥ ಅಣೋರಣೀಯಾನ್ ಗುರು ಮಹಿಮಾ। ಮಹತೋ ಮಹಿಯಾನ್ ಸಾಯಿ ಮಹಿಮಾ॥ ಅಜ್ಞಾನನಾಶಕ ಸಾಯಿ ಮಹಿಮಾ॥2॥ ಸುಜ್ಞಾನ ದಾಯಕ ಸಾಯಿ ಮಹಿಮಾ॥ ಸಚ್ಚಿದಾನಂದ ಗುರು ಮಹಿಮಾ। ಭಾವಯೇ ಹೇ ಮನ ಸಾಯಿ ಮಹಿಮಾ॥3॥

ಸರ್ವಧರ್ಮ ಪ್ರಿಯದೇವಾ

ಸರ್ವಧರ್ಮ ಪ್ರಿಯದೇವಾ। ಸತ್ಯಸಾಯಿದೇವಾ। ಅಲ್ಲಾ ಏಸು ಬುದ್ಧ ಔರ ನಾನಕ್। ಜೋರಾಷ್ಟ್ರಮಹವೀರ ತುಮಹೋ। ರಾಮ ಹಿ ತುಮಹೋ ಕೃಷ್ಣ ಹಿ ತುಮಹೋ। ವಿಶ್ವರೂಪ ತುಮಹೋ (ಸಾಯಿ) ವಿಶ್ವರೂಪ ತುಮಹೋ॥

ಅಲ್ಲಾ ನಾಮ್ ಭಜೋ

ಅಲ್ಲಾ ನಾಮ್ ಭಜೋ ಭಜೊರೆ ಭಜೊ। ಮೌಲಾನಾಮ್ ಭಜೋ। ಭಜೋರೆ ಭಜೋ॥ ನಾನಕ ಏಸು ಮಹಾವೀರ ನಾಮ್ ಭಜೊ। ಶ್ರೀ ಬುದ್ಧ ದೇವ ಭಜೋ। ಭಜೊರೆ ಭಜೊ। ಶಿರಡಿ ಸಾಯಿ ಬಾಬಾ ಭಜೋ। ಭಜೊರೆ ಭಜೊ। ಶ್ರೀರಘುರಾಮ ಭಜೋ ಗೋವಿಂದ ಕೃಷ್ಣ ಭಜೋ॥ ಶ್ರೀ ಸತ್ಯ ಸಾಯಿ ಭಜೋ। ಭಜೊರೆ ಭಜೊ॥

ಅಲ್ಲಾ ತುಮ್ ಹೋ

ಅಲ್ಲಾ ತುಮ್ ಹೋ ಈಶ್ವರ ತುಮ್ ಹೋ। ತುಮ್ಹಿ ಹೋ ರಾಮ ರಹೀಮ್॥ ಏಸು ತಮ್ ಹೊ ನಾನಕ್ ತುಮ್ ಹೋ। ಜೋ ರಾಷ್ಟ್ರ ಭಿಹೋ ಮಹವೀರ ತುಮ್‌ಹೊ॥ ಗೌತಮ ಬುದ್ಧ ಕರೀಮ್॥ ಮೇರೆ ರಾಮ್ ಮೇರೆ ರಾಮ್‌ದಾಮ ರಹೀಮ್॥

ರಾಮ ರಹೀಮ್ ಕರೀಮ ಕೊ ಭಜೊರೇ

ರಾಮ ರಹೀಮ್ ಕರೀಮ ಕೊ ಭಜೊರೇ। ತೇರೇ ಪೂಜಾರಿ ಬಾಬಾ। ತೇರ ನಾಮ್ ಏಕ್ ಸಹಾರಾ॥ ತುಮ್ ಹೀ ಹೋ ಗೀತಾ। ತುಮ್‌ಹೀ ರಾಮಾಯ ಣ ।ತುಮ್ ಹೀ ಹೋ ವೇದ ಪುರಾಣ್। ತೇರ ನಾಮ್ ಏಕ ಸಹಾರಾ॥

ಶ್ರೀರಾಮ ಶರಣಂ **ರಾಗ: ಮೋಹನ**

ಶ್ರೀರಾಮ ಶರಣಂ ಶ್ರೀರಾಮ ಶರಣಂ ಶ್ರೀರಾಮ ಶರಣಂಭಜೆ -2, ವೈದೇಹಿ ರಾಮಮ್ ವೈಕುಂಠ ರಾಮಮ್ ಗೋಪಾಲ ಚೂಡಾಮಣಿ।। (2ಸಾರಿ) ಆತ್ಮಾಭಿರಾಮಮ್ ಪ್ರಭು ರಘು ರಾಮಮ್ ಶ್ರೀರಾಮ ಶರಣಂ ಭಜೆ।।ಶ್ರೀರಾಮ।।3।।

ಸತ್ಯಸ್ವರೂಪಿಣಿ ಮಾ

ಸತ್ಯಸ್ವರೂಪಿಣಿ ಮಾ। ಸಾಯಿ ಪ್ರೇಮ ಸ್ವರೂಪಿಣಿಮಾ। ಪರಮಾನಂದ ದಾಯಿನಿ। ಹೃದಯ ವಿಹಾರಿಣಿ। ಪರ್ತಿಪುರೀಶ್ವರಿಮ್।। ವಿಘ್ನವಿನಾಶಿನಿ ಭವಭಯಹಾರಿಣಿ। ಕಾಲಿಕಪಾಲಿನಿಮಾ।। ಹೇ ತ್ರಿಭುವನ ಧಾರಿಣಿ। ಮಂಗಲಕಾರಿಣಿ। ಮೋಕ್ಷಪ್ರದಾಯಿನಿ ಮಾ।। ಪರಮಾನಂದದಾಯಿನಿ ಹೃದಯನಿವಾಸಿನಿ ಪರ್ತಿಪುರೀಶ್ವರಿಮಾ।।

ನಮನ ಕರೂಂ ಮೈ ಗುರುಚರಣಂ **ರಾಗ: ಕಲ್ಯಾಣಿ**

ನಮನ ಕರೂಂ ಮೈ ಗುರು ಚರಣಂ। ಗುರುಚರಣಂ ಸದ್ಗುರು ಚರಣಂ। ಪ್ರಣವಾನಂದ ಆನಂದ ಚಂದ(2)।। ಸಾಯಿಗುರು ಮಮಗುರು ಸಚ್ಚಿದಾನಂದ।।1।। ಶಾಂತಿ ವಿದಾಯಕ ಗುರು ಗೋವಿಂದ। ಮಂಗಳ ಕಾರಕ ಸದ್ಗುರು ನಾಥ। ಈಶ್ವರ ಅಂಬಾ ಪ್ರಿಯಾ ತನಯ।।2।।

ಗುರುಮಹಿಮಾಗಾವೋ

ಗುರುಮಹಿಮಾಗಾವೋ।। ಸದ್ಗುರು ಸಾಯಿ ನಂದಗುರು। ಬ್ರಹ್ಮಾನಂದಾ ನಂದಗುರು। ಸರ್ವಧರ್ಮ ಪ್ರಿಯ ಸಾಯಿಗುರು। ಸಾಯಿಗುರು ಸತ್ಯಸಾಯಿಗುರು। ಗುರುಕೀ ವಾಣಿ ಗಾವೋ ।।1।।

ಕೋಟಿ ಪ್ರಣಾಮ್

ಕೋಟಿ ಪ್ರಣಾಮ್ ಶತಕೋಟಿ ಪ್ರಣಾಮ್। ಹೇ ದೀನಾನಾಥ ಸಾಯಿರಾಂ।। ತುಮ್ ಹೋ ಭಕ್ತೋಂಕೆ ಯುಗ ಅವತಾರ್। ತುಮ ಹೋ ಆನಂದ ನಂದಾಕೆ ಲಾಲ್। ಪರ್ತೀಪುರೀಕಿ ಸಾಯಿ ಗೋಪಾಲ್। ಹೇ ದೀನನಾಥ ಸಾಯಿರಾಂ।।

ಪುಣ್ಯ ನಾಮ್ ಪವಿತ್ರ ನಾಮ್

ಪುಣ್ಯ ನಾಮ್ ಪವಿತ್ರ ನಾಮ್ ರಾಮ ನಾಮ್ ಸಾಯಿರಾಮ್। ಹರೇ ಕೃಷ್ಣ ಹರೇ ರಾಮ್ ಮಧುರನಾಮ್ ಸಾಯಿರಾಮ್।। ಕರುಣಾ ಸಿಂಧು ಸೀತಾರಾಮ್। ದೀನ ಬಂಧು ರಾಧೇಶ್ಯಾಮ್। ಹರೇ ಕೃಷ್ಣ ಹರೇ ರಾಮ್। ಮಧುರ ನಾಮ್ ಸಾಯಿ ರಾಮ್।।

ಶಿರ್ಡಿಸಾಯಿ ಪರ್ತಿಸಾಯಿ

ಶಿರ್ಡಿಸಾಯಿ ಪರ್ತಿಸಾಯಿ। ಹಮ್ ಕೋ ದೀ ಜೋ।ಪ್ರೇಮಾಮೃತ ಧಾರಾ।। ತವಸೇವಾಕೀ ಅವಸರ ದೀಜೋ ಸತ್ಯಸಾಯಿ। ಮಹದೇವ್।। ಗಾನಾಮೃತ ಮೆ ಭಾವ ಭಿ ದೀಜೋ ಪ್ರೇಮಸಾಯಿ ಭಗವಾನ್। ಪ್ರೇಮ ಸಾಯಿ ಭಗವಾನ್।।

ಸಾಯಿ ಭಜನ ಬಿನಾ ಸುಖ ಶಾಂತಿ ನಹೀ

ಸಾಯಿ ಭಜನ ಬಿನಾ ಸುಖ ಶಾಂತಿ ನಹೀ। ಹರಿನಾಮ ಬಿನಾ ಆನಂದ ನಹೀ।। ಪ್ರೇಮ ಭಕ್ತಿ ಬಿನಾ ಉದ್ಧಾರ ನಹೀ। ಗುರುಸೇವ ಬಿನಾ ನಿರ್ವಾಣ ನಹೀ।। ಜಪಧ್ಯಾನ ಬಿನಾ ಸಂಯೋಗ ನಹೀ। ಪ್ರಭು ದರಸ್ ಬಿನಾ ಪ್ರಜ್ಞಾನನಹೀಂ। ದಯ ಧರ್ಮ ಬಿನಾ ಸತ್ಕರ್ಮ ನಹೀ। ಭಗವಾನ್ ಬಿನಾ ಕೋಯಿ ಅಪನಾ ನಹೀ। ಸಾಯಿನಾಥ ಬಿನಾ ಪರಮಾತ್ಮ ನಹೀ। ಸಾಯಿ ಭಜನ ಬಿನಾ ಸುಖ ಶಾಂತಿನಹೀ।।

ಪ್ರೇಮ ಮುದಿತ ಮನಸೆ ಕಹೊ (ಹಿಂದಿ) **ರಾಗ: ಕಾನಡ**

ಪ್ರೇಮ ಮುದಿತ ಮನಸೆ ಕಹೋ ರಾಮ ರಾಮ ರಾಮ, ಶ್ರೀ ರಾಮ ರಾಮ ರಾಮ, ಶ್ರೀ ರಾಮ ರಾಮ ರಾಮ।।1।।

ಪಾಪಕಟೇ ದುಃಖಮಿಟೇ ಲೇಕೇ ರಾಮ ನಾಮ ಭವಸಮುದ್ರ ಸುಖದ ನಾವ, ಏಕ ರಾಮ ನಾಮ ಶ್ರೀ ರಾಮ ...॥2॥ ಪರಮ ಶಾಂತಿ ಸುಖನಿಧಾನ , ದಿವ್ಯರಾಮ ನಾಮ ನಿರಾಧಾರಕೋ ಆಧಾರ, ಏಕ ರಾಮ ನಾಮ ಶ್ರೀ ರಾಮ ....॥3॥ ಪರಮ ಗೋಪ್ಯ ಪರಮ ಇಷ್ಟ ಮಂತ್ರ ರಾಮ ನಾಮ ಸಂತ ಹೃದಯ ಸದಾ ಬಸತ, ಏಕ ರಾಮ ನಾಮ ಶ್ರೀ ರಾಮ ....॥4॥ ಮಹಾದೇವ ಸತತ ಜಪತ ದಿವ್ಯ ರಾಮ ನಾಮ ಕಾಶಿ ಮರತ ಮುಕ್ತಿ ಕರತ, ಕಹತ ರಾಮ ನಾಮ ಶ್ರೀ ರಾಮ....॥5॥ ಮಾತಾ ಪಿತಾ ಬಂಧು ಸಖಾ ಸಬ ಹೀ ರಾಮ ನಾಮ ಭಕ್ತ ಜನ ಜೀವನ ಧನ, ಏಕ ರಾಮ ನಾಮ ಶ್ರೀರಾಮ....॥6॥

ಒಲಿದ ಮನದೊಳುಸಿರು (ಹಿಂದಿನ ಕೃತಿಯ ಕನ್ನಡ ಭಾವಾನುವಾದ) ರಾಗ: ಕಾನಡ

ಒಲಿದ ಮನದೊಳುಸಿರು ಮುದದಿ ರಾಮ ರಾಮ ರಾಮ ಶ್ರೀರಾಮ ರಾಮ ರಾಮ ಶ್ರೀರಾಮ ರಾಮ ರಾಮ॥ ಪಾಪಹರಿಸಿ ದುಃಖ ಬಿಡಿಸಿ ಬಿಡುವುದೆಂದರೆ ರಾಮನಾಮ। ಭವಸಮುದ್ರಕ್ಕೊಂದೆ ಹಡಗು ಸುಖದ ರಾಮನಾಮ॥ಶ್ರೀರಾಮ॥ ಪರಮ ಶಾಂತಿ ಕೊಡುವ ಹಾದಿ ನಿತ್ಯ ರಾಮನಾಮ। ನಿರಾಧಾರಕ್ಕಾಧಾರ ಒಂದೇ ರಾಮನಾಮ॥ಶ್ರೀರಾಮ॥ ಸದಾ ಮಹಾದೇವ ಹಾಡುವ ದಿವ್ಯ ರಾಮನಾಮ ಜೀವ ಅರಳಿ ಬಿರಿವುದಿಲ್ಲಿ ರಾಮ ಸುಮನ ಪ್ರೇಮ॥ಶ್ರೀರಾಮ॥ ತಂದೆ ತಾಯಿ ಬಂಧು ಬಳಗ ಸಕಲ ರಾಮನಾಮ। ಭಕ್ತ ಜನರ ಗರ್ಭಗುಡಿ ಇದೊಂದೆ ರಾಮ ನಾಮ॥ಶ್ರೀರಾಮ॥

ಪರ್ತಿ ಪುರೀಷ ಸಾಯಿರಾಂ

ಪರ್ತಿ ಪುರೀಷ ಸಾಯಿರಾಂ। ಶಕ್ತಿ ಸರ್ವೇಶ ಸಾಯಿರಾಂ। ಬಾಲಯೋಗಿ ಸಾಯಿರಾಂ। ಭಕ್ತ ವತ್ಸಲ ಸಾಯಿರಾಂ॥1॥ ಸುಲಭ ಪ್ರಸನ್ನ ಸಾಯಿರಾಂ। ಸುಮಧುರ ಭಾಷಿ ಸಾಯಿರಾಂ। ಪೀತಾಂಬರಧರ ಸಾಯಿರಾಂ। ಪುಂಡರೀಕಾಕ್ಷ ಸಾಯಿರಾಂ॥2॥ ಸತ್ಯನಾರಾಯಣ ಸಾಯಿರಾಂ। ಸತ್ಯಪರಾಯಣ ಸಾಯಿರಾಂ। ಸರ್ವಜನಪ್ರಿಯ ಸಾಯಿರಾಂ। ಸುಂದರರೂಪ ಸಾಯಿರಾಂ॥3॥ ಸೂರ್ಯಪ್ರಕಾಶ ಸಾಯಿರಾಂ। ಅನಾಥರಕ್ಷಕ ಸಾಯಿರಾಂ। ಅಮಿತ ಪ್ರತಾಪ ಸಾಯಿರಾಂ। ಪದ್ಮ ಲೋಚನ ಸಾಯಿರಾಂ॥4॥ ಪಾಲಯಮಾಂ ಪ್ರಭೋ ಸಾಯಿರಾಂ॥4॥

ಪರ್ತಿಪುರೀಶ್ವರ ಪಂಕಜನೇತ್ರ (ಶ್ರೀಸತ್ಯಸಾಯಿಬಾಬಾ ಸ್ತೋತ್ರ) ರಾಗ: ಪುನ್ನಾಗವರಾಳಿ

ಪರ್ತಿಪುರೀಶ್ವರ ಪಂಕಜನೇತ್ರ ಭಕ್ತಸಂರಕ್ಷಕ ಸಾಯಿನಮೊ। ಚಿತ್ರಾವತಿ ನದಿ ತೀರನಿವಾಸಿ ಚಿನ್ನಿ ಕೃಷ್ಣ ಸತ್ಯಸಾಯಿನಮೋ। ಪರ್ತಿಸುತಂ ಮಹದೇವ ಪ್ರಸನ್ನುತ ಪಾಪನಿವಾರಣ ಸಾಯಿಶಿವಂ। ಜಯಜಯ ಹೇಸತ್ಯಸಾಯಿ ಮಹೇಶ್ವರ ದೇಹಿರತಿಂ ತವಪಾದಯುಗೇ॥ ಶ್ರೀಗಣನಾಥ ಪಿತಾಜಗದೀಶ್ವರ ಕಾಶಿವಿಶ್ವೇಶ್ವರ ಸಾಯಿಶಿವಂ। ಶ್ರೀಗುಣನಾಯಕ ಮಂಗಳದಾಯಕ ಮೋಕ್ಷ ಪ್ರದಾಯಕ ಸಾಯಿನಮೋ। ಭವಗುಣ ನಿಗ್ರಹ ಪಾವನ ಕಲ್ಪಿತ ಪರ್ತಿಮಹೇಶ್ವರ ಸಾಯಿನಮೋ। ಜಯಜಯ ಹೇ ಸತ್ಯಸಾಯಿ ಮಹೇಶ್ವರ ದೇಹಿರತಿಂ ತವಪಾದಯುಗೇ॥ ವೇದೋದ್ಧಾರಣ ನಾದಸ್ವರೂಪ ಶ್ರೀನಾರಾಯಣ ಸಂಭವ ಸಾಯಿನಮೋ। ರಾಕ್ಷಸನಿಗ್ರಹ ನರಹರಿ ಸಂಭವ ರಾಮಾವತಾರ ಶ್ರೀ ಸಾಯಿನಮೋ। ಅಂಜನ ಪುತ್ರ ಅನುಗ್ರಹ ಶೋಭಿತ ಆನಂದರಾಮ ಶ್ರೀ ಸಾಯಿನಮೋ। ಜಯ ಜಯ ಹೇ ಸತ್ಯಸಾಯಿ ಮಹೇಶ್ವರ ದೇಹಿರತಿಂ ತವಪಾದಯುಗೇ॥ ಶೋಭಿತ ಶ್ರೀಮಥುರಾಪುರಿ ನಾಯಕ ಶೋಕಸಂಹಾರ ಶ್ರೀ ಸಾಯಿನಮೋ। ತ್ರಿಪುರಾಸುರ ನಿಮರ್ದನ ಮಂಗಳನಾಯಕಿ ನಾಯಕ ಸಾಯಿನಮೋ। ಸಾಮಗಾನ ಪ್ರಿಯ ನಟನಮನೋಹರ ಶಂಕರ ರೂಪ ಶ್ರೀ ಸಾಯಿಶಿವಂ। ಜಯ ಜಯ ಹೇ ಸತ್ಯಸಾಯಿ ಮಹೇಶ್ವರ ದೇಹಿರತಿಂ ತವಪಾದಯುಗೇ॥ ಶೂಲಾಧಾರಣ ಸುಂದರರೂಪ ತ್ರಿಭುವನ ಪಾಲ ಶ್ರೀ ಸಾಯಿನಮೋ। ಹಾಲಹಲ ವಿಷಪನ್ನಗ ವಲ್ಲಭ ಆನಂದ ತಾಂಡವ ಸಾಯಿನಮೋ। ಭರದ್ವಾಜಗೋತ್ರ ಪಾರ್ವತಿರಮಣ ಭಕ್ತಾನುಕೂಲ ಶ್ರೀ ಸಾಯಿನಮೋ। ಜಯ ಜಯ ಹೇ ಸತ್ಯ ಸಾಯಿ ಮಹೇಶ್ವರ ದೇಹಿರತಿಂ ತವ ಪಾದಯುಗೇ॥ ಸೀತಾಮೋಹನ ದಶರಥನಂದನ ಅಯೋಧ್ಯವಾಸಿ ಸಾಯಿನಮೋ। ರಾಧಾಪ್ರಿಯಹರಿ ಮಾಧವಗೋಪಾಲ ನಂದಕುಮಾರ ಶ್ರೀ

ಸಾಯಿನಮೋ। ಸೂರದಾಸಪ್ರಿಯ ಭಕ್ತಮನೋಹರ ಅರ್ಜುನಮಿತ್ರ ಶ್ರೀ ಸಾಯಿನಮೋ। ಜಯಜಯ ಹೇ ಸತ್ಯಸಾಯಿ ಮಹೇಶ್ವರ ದೇಹಿರತಿಂ ತವಪಾದಯುಗೇ।। ಮೀರಾಹೃದಯ ಸಂಚಾರಿ ಗೋಪಾಲ ಗಿರಿಧರಬಾಲ ಶ್ರೀ ಸಾಯಿನಮೋ। ಯುಗಅವತಾರ ಪರ್ತಿವಿಹಾರ ಗೋಪರಿಪಾಲ ಶ್ರೀ ಸಾಯಿನಮೋ। ಮುಕ್ತಿಪ್ರದಾಯಕ ಮುರಳೀಲೋಲ ಮುನಿಜನವಂದಿತ ಸಾಯಿನಮೋ। ಜಯ ಜಯ ಹೇ ಸತ್ಯಸಾಯಿ ಮಹೇಶ್ವರ ದೇಹಿರತಿಂ ತವಪಾದಯುಗೇ।। ತ್ರೇತಾಯುಗಾಂತರ ಶ್ರೀ ರಘುನಂದನ ರಾವಣಮರ್ದನ ಸಾಯಿನಮೋ। ದ್ವಾಪರನಾಯಕ ಗೋಕುಲಬಾಲಕ ದುಷ್ಟಸಂಹಾರಕ ಸಾಯಿನಮೋ। ಪಾಹಿಮಹೇಶ್ವರ ದೇಹಿದನಂ ಹಿತ ದೇವದೇವೋತ್ತಮ ಸಾಯಿಶಿವಂ। ಜಯ ಜಯ ಹೇ ಸತ್ಯಸಾಯಿ ಮಹೇಶ್ವರ ದೇಹಿರತಿಂ ತವಪಾದಯುಗೇ।। ದೇವಗಾಣಾರ್ಚಿತ ಶ್ರಿತಜನಪಾಲಕ ಸತ್ಯಸ್ವರೂಪ ಶ್ರೀ ಸಾಯಿನಮೋ। ಭವಭಯ ಸಂಕಟ ಪಾಪವಿಮೋಚನ ದೀನಸಂರಕ್ಷಕ ಸಾಯಿನಮೋ। ಶಿರಡಿ ಪುರೀಶ್ವರ ಪರ್ತಿಮಹೇಶ್ವರ ಪ್ರೇಮಾವತಾರ ಶ್ರೀ ಸಾಯಿನಮೋ। ಜಯ ಜಯಹೇ ಸತ್ಯಸಾಯಿ ಮಹೇಶ್ವರ ದೇಹಿರತಿಂ ತವಪಾದಯುಗೇ।।

ಓಂ ಜೈ ಜಗದೀಶ ಹರೇ (ಮಂಗಳಾರತಿ) — ರಾಗ: ಕುರಂಜಿ

ಓಂ ಜೈ ಜಗದೀಶ ಹರೇ ಸ್ವಾಮಿ ಸತ್ಯ ಸಾಯಿಹರೇ। ಭಕ್ತ ಜನಾ ಸಂರಕ್ಷಕ ಭಕ್ತ ಜನು ಸಂರಕ್ಷಕ। ಪರ್ತಿಮಹೇಶ್ವರ ಓಂ ಜೈ ಜಗದೀಶಹರೇ।। ಶಶಿವದನ ಶ್ರೀಕರ ಸರ್ವಪ್ರಾಣಪತೆ ಸ್ವಾಮಿ ಸರ್ವ ಪ್ರಾಣಪತೆ। ಆಶ್ರಿತ ಕಲ್ಪ ಲತಿಕಾ ಆಶ್ರಿತಕಲ್ಪ ಲತಿಕಾ। ಆಪದ್ಬಾಂಧವಾ। ಓಂ ಜೈಜಗದೀಶ ಹರೇ।। ಮಾತಾ ಪಿತ ಗುರುದೈವಮು ಮರಿಯಂತಯು। ನೀವೇ। ಸ್ವಾಮಿ ಮರಿಯಂತಯು ನೀವೇ। ನಾದ ಬ್ರಹ್ಮ ಜಗನ್ನಾಥ ನಾದ ಬ್ರಹ್ಮ ಜಗನ್ನಾಥ। ನಾಗೇಂದ್ರ ಶಯನಾ। ಓಂ ಜೈ ಜಗದೀಶಹರೆ। ಓಂಕಾರ ಓಜಸ್ವಿ ಓಂ ಸಾಯಿ ಮಹಾದೇವ। ಮಂಗಲಆರತಿ ಅಂದು ಕೊಮಂಗಲಆರತಿ ಅಂದುಕೋ। ಮಂದರಗಿರಿಧಾರೀ। ಓಂ ಜೈ ಜಗದೀಶ ಹರೇ।। ನಾರಾಯಣ ನಾರಾಯಣ ಓಂ। ಸತ್ಯ ನಾರಾಯಣ ನಾರಾಯಣ ನಾರಾಯಣ ಓಂ। ನಾರಾಯಣ ನಾರಾಯಣ ಓಂ ಸತ್ಯ ನಾರಾಯಣ ನಾರಾಯಣ। ಓಂ ಸತ್ಯ ನಾರಾಯಣ ನಾರಾಯಣ ಓಂ। ಓಂ। ಜೈ ಸದ್ಗುರು ದೇವ।। ಓಂ ಶಾಂತಿಃ ಶಾಂತಿಃ ಶಾಂತಿಃ। ಲೋಕಾಸ್ಸಮಸ್ತಾ ಸುಖಿನೋ ಭವಂತು। (3ಸಲ) ಓಂ ಶಾಂತಿ ಶಾಂತಿ ಶಾಂತಿಃ।। ಓಂ ಅಸತೋಮ ಸದ್ಗಮಯ। ತಮಸೋಮ ಜೋರ್ತಿಗಮಯ। ಮೃತ್ಯೋರ್ಮಾ ಅಮೃತಂಗ ಮಯ। ಓಂ ಶಾಂತಿ ಶಾಂತಿ ಶಾಂತಿಃ।।

❖ ❖ ❖

ನೀನೊಬ್ಬನೊಡನಿರಲು ಜಗವೆಲ್ಲ

ನೀನೊಬ್ಬನೊಡನಿರಲು ಜಗವೆಲ್ಲ ಎದುರಾಗೆ। ಭಯೋವೇನು ಭಯವೇನು ಭಯವೇನು ಗುರುವೆ। ನೀನೊಬ್ಬನಿಲ್ಲದಿರೆ ಜಗವೆಲ್ಲ ಜೊತೆಯಾಗೆ। ಸುಖವೇನು ಸುಖವೇನು ಸುಖವೇನು ಪ್ರಭುವೆ।।

ಓದಿ ಬೋಧಕನಾಗು — ರಾಗ: ಸಾರಂಗ

ಓದಿ ಬೋಧಕನಾಗು। ಕಾದು ಯೋಧನೆ ಆಗು। ಶ್ರಮಿಕ ವಣಿಕನೆ ಆಗು ದುಡಿದುಗಳಿಸು। ಏನಾದರು ಆಗು ನಿನ್ನೊಲವಿನಂತಾಗು। ಏನಾದರು ಸರಿಯೆ ಮೊದಲು ಮಾನವನಾಗು।।1।। ಹಿಂದು ಮುಸ್ಲಿಮನಾಗು ಬೌದ್ಧ ಕ್ರೈಸ್ತನೆ ಆಗು। ಚಾರ್ವಾಕನೆ ಆಗು ಭೋಗ ಬಯಸಿ। ಏನಾದರು ಆಗು ಹಾರೈಸಿದಂತಾಗು। ಏನಾದರು ಸರಿಯೆ ಮೊದಲು ಮಾನವನಾಗು।।2।। ರಾಜಕಾರಣಿಯಾಗು ರಾಷ್ಟ್ರಭಕ್ತನೆ ಆಗು। ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು। ಏನಾದರು ಆಗು ನೀ ಬಯಸಿದಂತಾಗು। ಏನಾದರು ಸರಿಯೆ ಮೊದಲು ಮಾನವನಾಗು।।3।।

ಯಾವ ರೂಪದೊಳು ನಿನ್ನನು — ರಾಗ: ಕಾಂಭೋದಿ-ಛಾಪುತಾಳ

ಯಾವ ರೂಪದೊಳು ನಿನ್ನನು ಪೂಜಿಸಿದೊಡೇನು ? ಯಾವ ನಾಮದಿ ನಿನ್ನನು ಕರೆದರೇನು ? ಚೆನ್ನಕೇಶವ ನೀನು ಶ್ರೀನಿವಾಸನು

ನೀನು ಸನ್ನುತ ಪಿತಾಮಹ ಮಹೇಶ್ವರನು ನೀನು ಪೊನ್ನ ಮೆಟ್ಟಿನ ಮೇಲೆ ವಿಹರಿಸುವರೆಂದೆನುವ ಮುನ್ನೂರ ಮೂವತ್ತು ಕೋಟಿ ದೇವರು ನೀನು॥1॥ ದೇಶಾಂತರಗಳಲಿ ನೂರಾರು ಕಾಲದಲಿ ಸಾಸಿರಾರು ಪೆಸರನಿಟ್ಟು ಕರೆದು ದೇಶದೇಶದ ಜನರು ನಿನ್ನನೇ ಪೊಗಳುತಲಿ ಜಗದೀಶ ನಿನ್ನಡಿಗಳನು ಸೇರಿದ ಮೇಲೆ॥2॥ ಜೀವಕೋಟಿಗಳ ಮನದಾಸೆಗಳ ಅನುಸರಿಸಿ ಪಾಪ ಭೇದಕೆ ತಕ್ಕ ರೂಪಗಳ ತಳೆದು ಸಾವಿರಾರು ನಾಮಗಳು ಪೊತ್ತು ಎಲ್ಲರ ಸೇವೆಯನು ಕೊಳುವವನು ಓರ್ವ ನೀನು॥3॥

ಬಲ್ಲವನು ನಾನೆಂದು ಬಲು ಮೆರೆದೆನ್ನೈಯ್ಯ

ಬಲ್ಲವನು ನಾನೆಂದು ಬಲು ಮೆರೆದೆನ್ನೈಯ್ಯ। ಎಲ್ಲ ಬಲ್ಲವನೆಂದು ಮೈ ಮರೆತೆ। ನೀನೆನ್ನ ಸಲಹಬೇಕೈಯ॥ ಎನ್ನ ಮನದಾಸೆ ಆಗಸಕೆ ಕೈ ನೀಡಿ। ನಿನ್ನ ಸಂಕಲ್ಪಗಳ ಲೆಕ್ಕಿಸದೆ ಚೀರಿಡೆ, ಸಂಪನ್ನ ಬಲ, ದಯೆ ತೋರ್ದೆ, ದಾರಿವೆಳಗಾದೆ, ಎನ್ನಹಂಕೃತಿ ತೊಲಗೆ ನೆರವಾದೆ ನಿಜವನೊರೆದೆ॥ ಎನ್ನ ಸಾಸಕೆ ಜಗವು ಅಡಿಯಾಳುತನಮಾಡಿ। ಮನ್ನಣೆಯ ತೋರುವುದು ತಾನೆಂದು ಬಗೆದೆ। ಇನ್ನು ಮೇಲಿನ ಕಾರ್ಯವೆನ್ನಧೀನದ್ದೆಂದು। ಭಿನ್ನ ತತ್ತ್ವಕ್ಕೆ ನಾನು ಶರಣುಹೋದೆ। ನಿರ್ಬೋಧನಾದೆ॥ ವಿಶ್ವಸಾಮ್ರಾಜ್ಯದಧಿಕಾರ ನಿನಗಿರಲು। ಅಸ್ವತಂತ್ರನು ಅದನು ಅಣಕಿಸುತೆ ಮಲೆತೆ। ನಿಸ್ಸೀಮ ಸಾಹಸವ ಬೆಡಗಿನಾತ್ಮನೆ ಪಿತನೆ, ವತ್ಸನೆಂತಾದೊಡಂ ಬೇಡಿ ಬಂದಿಹನೈಯ। ಕರುಣದೋರೈಯ॥

ಮಾಡಬಾರದ ಮಾಡಿ — ರಾಗ: ಚಕ್ರವಾಕ-ಝಂಪೆತಾಳ

ಮಾಡಬಾರದ ಮಾಡಿ, ಆಗಬಾರದು ಆಗಿ ಬಾಳೆಲ್ಲ ಬರಿದಾಗಿ, ಗೋಳೊಂದೆ ಉಳಿದಾಗ। ಅಂತರಾಳದಿ ಬೆಳಗಿ, ಸಂತಸವ ಕರುಣಿಸಿಹೆ "ಏಳು ಮಗು, ನಾನಿಹೆನು" ಎನ್ನುತ್ತ ಕರೆದೆ॥1॥ ಅವರಿವರ ಉಪದೇಶ ಬರಿಯ ಬಾಯ್ಮಾತಾಗಿ ರವಿರಹಿತ ಕತ್ತಲೆಯೆ ಎತ್ತೆತ್ತ ಕವಿದಾಗ। ಕರುಣಿಸಿಹೆ ಓ ತಾಯಿ, ತವ ಚರಣದಾಶ್ರಯವ "ಬಾ ಕಂದ, ಇಹೆ ನಾನು, ಕುಂದದಿರು" ಎಂದು॥2॥ ಜಗವೆಲ್ಲ ಕೈಬಿಟ್ಟು ಮತಿಗೆಟ್ಟು, ಗತಿಗೆಟ್ಟು ಆವುದನು ಗೈಯಲೂ ತ್ರಾಣವಿಲ್ಲದ ಎನಗೆ "ನಾನೆ ಸಾಧನೆ ಸಿದ್ಧಿಗತಿ ಆಸರೆಯು ನಿನಗೆ" ಎನ್ನುತ್ತ ವರವಿತ್ತ ಗುರು-ದೈವ-ಜನನಿ॥3॥

ಈ ನೋವು ಈ ದುಃಖ — ರಾಗ: ಶಿವರಂಜನಿ

ಈ ನೋವು ಈ ದುಃಖ ನಮಗೇಕೆ ತಂದೆ॥ಪ॥ ಈ ದ್ವೇಷ ಆಕ್ರೋಶ ಹೀಗೇಕೆ ತಂದೆ। ಈ ಎಲ್ಲ ನೀತಂದ ಹಣೆಬರಹವೆಂದೆ। ಅದಕಾಗಿ ಸತ್ಯದಲಿ ನೀ ನಡೆಯಬೇಕೆಂದೆ॥ ನನ್ನೊಳಗೆ ಕುಳಿತ ನಿನ್ನ ಮರೆತ ಕಾರಣದಿಂದೆ॥1॥ ಈ ಪರಿಯ ಕೋಟಲೆಯಲಿ ಬಳಲಿ ನಾನೊಂದೆ। ಪರಿಹಾರ ಕಾಣದೆ ಅಲೆಯುತಿಹೆ ಹಿಂದೆ। ಕೈ ಹಿಡಿದು ನೆಮ್ಮದಿಯ ನೀಡೆಮಗೆ ತಂದೆ। ಹಗಲಿರುಳು ನಿನ್ನ ನೆನೆಯುವಂತೆನ್ನ ಮಾಡೆನ್ನ ತಂದೆ॥2॥

ಕಳೆಯಬೇಕೇ ದಿನಗಳೆಲ್ಲ

ಕಳೆಯಬೇಕೇ ದಿನಗಳೆಲ್ಲ ವಿಫಲವಾಗಿ ಹೋಗಿಯೇ। ಹಗಲು ಇರುಳು ಆಶಾಪಥವ ಕಾಯುತಿಹೆನು ಸ್ವಾಮಿಯೇ॥1॥ ತ್ರಿಭುವನಗಳನಾಥ ನೀನು ಭಿಕಾರಿ ಅನಾಥ ನಾನು। ಕರೆಯಲೆಂತು ಮಮ ಹೃದಯದಿ ನೆಲೆಸು ಎಂದು ಹೀಗೆಯೇ॥2॥ ಹೃದಯ ಕುಟಿಯ ದ್ವಾರಗಳನು ಅನವರತವು ತೆರೆದಿರುವೆನು। ಕೃಪೆಯ ತೋರಿ ಬಂದು ನೀಡು ಶಾಂತಿಯನ್ನು ಸ್ವಾಮಿಯೇ॥3॥

ನಾನಾರ ದೂಷಿಸಲಿ — ರಾಗ: ಕಾನಡ-ರೂಪಕತಾಳ

ನಾನಾರ ದೂಷಿಸಲಿ, ನಾನೆ ತೋಡಿದ ಕೂಪದಾಳದಲಿ ನಾನಾಗಿ ಮುಳುಗುತಿಹೆನು। ಅರಿವರ್ಗಗಳ ಹಿಡಿದು ನಿನ್ನ ಸುಕ್ಷೇತ್ರದಲಿ ನಾನೆ ಈ ಬಾವಿಯನು ತೋಡಿರುವೆನು। ಕಾಲರೂಪದ ಕರಿಯ ನೀರೆದ್ದು ನುಗ್ಗುತಿದೆ ಓ ತಾಯಿ ನಾ ನಿನಗೆ

ಶರಣೆನುವೆನು॥1॥ ನಾನೆಯೇ ನನಗೆ ಹಗೆ, ಹೇಗೆ ತಡೆಯಲಿ ಹೇಳು ಮೇಲೆದ್ದು ನುಗ್ಗುವೀ ಕಾಳಜಲವ? ಎನ್ನ ಎದೆಯುದ್ದಕೂ ತುಂಬಿಕೊಂಡಿತು ನೀರು, ನೀನಲ್ಲದಿನ್ನಾರು ರಕ್ಷಿಸುವರು? ನೀನೊಬ್ಬಳೇ ರಕ್ಷೆ, ನಿನ್ನೊಳಗೆ ಈ ಭಿಕ್ಷೆ, ದಾಟಿಸಾಚೆಯ ದಡಕೆ ಈ ಶಿಶುವನು॥2॥

ಈ ಮರ್ತ್ಯ ಧೂಳಿಯಲಿ — ರಾಗ: ಸೋಹಿನೀ-ಝಂಪೇತಾಳ

ಈ ಮರ್ತ್ಯ ಧೂಳಿಯಲಿ ಹುಟ್ಟಿಬೆಳೆದೆವು ನಾವು ಈ ಧೂಳಿಯಲಿ ದೃಷ್ಟಿಕುರುಡಾಯಿತು। ಈ ಮಣ್ಣಿನಲಿ ನಾವು ಮಕ್ಕಳಂತಾಡಿದೆವು ಅಭಯವನು ನೀಡಯ್ಯ ದಿವ್ಯಗುರುವೆ॥ಪ॥ ನಮ್ಮ ಏನೋ ಒಂದು ಅಲ್ಪ ತಪ್ಪಿಗೆ ನೀನು। ನಿನ್ನ ಮಡಿಲಿಂದಾಚೆ ನೂಕಲಿಹೆಯಾ। ನೀನೆ ನಮ್ಮನ್ನು ತಳ್ಳಿ ಅನಾಥರಂದದಲಿ। ತೊಳಲಿಸುವೆಯಾ ನಮ್ಮ ಬಳಲಿಸುವೆಯಾ ॥1॥ ಹೇ ಪ್ರಭುವೆ ಹಾಗೆಂದಿಗೂ ಗೈಯಬೇಡ। ನಮ್ಮ ನೆಂದಿಗು ಆಚೆ ನೂಕಬೇಡ। ನಾವು ಅಲ್ಪರು ಗುರುವೆ, ಸಿಟ್ಟಾಗದಿರು ಪ್ರಭುವೆ। ಮೃದುನುಡಿಯೊಳೆಮ್ಮೊಡನೆ ಮಾತನಾಡು॥2॥ ನಿನ್ನೆದುರು ನಾವೆಲ್ಲ ಬರಿಯ ಹಸುಳೆಗಳಯ್ಯ। ಹೆಜ್ಜೆಹೆಜ್ಜೆಗು ಎಡವಿ ಬೀಳುತಿಹೆವು। ಇದನರಿತರೂ ನೀನು ರುದ್ರಮುಖ ಭ್ರುಕುಟಿಯೊಳು। ನಮ್ಮನೇತಕೆ ಇಂತು ನಡುಗಿಸುತಿಹೆ॥3॥ ನೂರು ಸಲ ನೀನೆತ್ತಿ ನಿಲ್ಲಿಸಿದರೂ ಕೂಡ। ನೂರು ಸಲ ಬೀಳುವುದು ನಮ್ಮ ಪಾಡು। ಇಂಥ ದುರ್ಬಲಮತಿಯ ಕರುಣದಿಂದಲಿ ನೋಡು। ಮೃದುನುಡಿಯೊಳೆ ಮ್ಮೊಡನೆ ಮಾತನಾಡು॥4॥

ಕೆಳಗಿಳಿದು ಹರಿಯುವುದೆ

ಕೆಳಗಿಳಿದು ಹರಿಯುವುದೆ ಜಲದ ನಿಜಗುಣವಯ್ಯ। ತಳೆಯುವುದು ಮಲಿನತೆಯ ಕೊಳೆನೆಲದಿ ಹರಿಯುತ್ತ। ಜಲನಿಧಿಯ ಸೇರಿತಾ ಬಲು ಕ್ಷಾರವಾಗುತಲಿ। ಸಲಿಲಾರ್ಥಿ ಜನರಿಂಗೆ ಅನಲ ಸಮವಾಗುವುದು॥1॥ ಗಗನದಲ್ಲಿಹ ರವಿಯು ಜಗವನೆಲ್ಲವ ಬೆಳಗಿ। ಸಗರಜಲವನು ಕೂಡ ನಗುತ ಕರದಿಂದೆತ್ತಿ। ವಿಗತದೋಷವಗೈದು ಮುಗಿಲ ರೂಪವಕೊಡುತ। ಜಗಕೆಲ್ಲ ಸವಿತರುವ ಮಿಗೆ ಸೊಗದ ಮಳೆಕರೆವ॥2॥ ಜಲದವೊಲು ಎಮ್ಮ ಮನ ಕೆಳಮೊಗವು ಚಂಚಲವು। ನಲಿನಲಿದು ಹರಿಯುವುದು ಮಲಿನಮಯ ವಿಷಯದೆಡೆ। ಜಲಜಾಕ್ಷ ಕೃಪೆಯಿಂದ ಬಲಿದೆಮ್ಮ ಬಾಳ್ಗಳನು। ಜಲಮೂರ್ತಿ ಮೇಲೆತ್ತಿ ಸಲಹಯ್ಯ ಸ್ವಾಮಿ॥3॥

ಸಕಲ ಭಯ ತಲ್ಲಣವ

ಸಕಲ ಭಯ ತಲ್ಲಣವ ಪರಿಹರಿಪ ಮಹಿಮನನು। ಒಮ್ಮೆಯಾದರು ಏಕೆ ಕರೆಯದಿರುವೆ॥ ಭವ ಘೋರ ಭ್ರಮೆಯಲ್ಲಿ ನಿನ್ನನೀನೇಮರೆತೆ। ಏನೀ ವಿಡಂಬನೆಯು ನಿನಗೆ ತರವೆ॥1॥ ಜನಧನದಸಂಗದಲಿ ಅವನ ಮರೆಯದ ತೆರದಿ। ಎಚ್ಚರಿರು ಭ್ರಮೆಯನ್ನು ಅತ್ತ ದೂಡು। ನಿಜವನಾರಾಧಿಸಲು। ಸರ್ವಪಾಪವಿಮುಕ್ತ। ನನ್ನ ಮಾತಿನ ನಿಜವನಳೆದು ನೋಡು॥2॥ ಭವ ಜಲಧಿಯನು ದಾಟಿ ನಡೆವ ಮನವಿರೆ ನಿನಗೆ। ಅಳಿಯಾಸೆಗಳ ತೊರೆದು ಹರಿಯ ನುತಿಸು। ದೇಹಮನಪ್ರಾಣಗಳ ಅವನಿಗರ್ಪಿತ ಮಾಡಿ। ಪ್ರೇಮದಾರಾಧನೆಗೆ ಮನವಸಲಿಸು॥3॥

ದೇಹವಿದು ನೀನಿರುವ ಗುಡಿಯೆಂದು — ರಾಗ: ಕಲ್ಯಾಣಿ

ದೇಹವಿದು ನೀನಿರುವ ಗುಡಿಯೆಂದು ತಿಳಿದು। ಗುಡಿಸುವೆನು ಅನುದಿನವು ದೇವದೇವ। ಬುದ್ಧಿ ಇದು ಗುಡಿಯೊಳಿರುವ ದೀಪವೆಂದು। ಅಮಲ ಚಿಂತೆಯ ತೈಲವನು ತುಂಬುವೆ॥1॥ ಎದೆಯ ಕಮಲಾಕರದಿ ನೀನು ಮೀಯುವೆಎಂದು। ಕಂಬನಿಯ ನವಜಲದಿ ದಿನವು ತೊಳೆವೆ। ಇರುಳು ಕವಿಯದ ತೆರದಿ ರವಿಯ ಬೆಳಕನು ಕರೆವೆ। ಮನದ ಬಾಗಿಲ ತೆರೆವೆ; ಮುಚ್ಚದಿರುವೆ॥2॥ ಎನ್ನ ಕರ್ಮದ ಹಣ್ಣುಗಳ ಕೊಯ್ದು ತರುವೆ। ಸುಖದುಃಖಗಳನೆಲ್ಲ ಆಯ್ದು ತರುವೆ। ಕಣ್ಣು ಕಿವಿ ಮೂಗು ಬಾಯಿಂದ್ರಿಯಂಗಳು ದುಡಿದ। ಹೂವುಗಳ ಮಾಲೆಯನು ನೇಯ್ದು ಬರುವೆ॥3॥ ಗಂಟೆಗಳ ನಾ ಹೊಡೆಯೆ ಶಂಖವನು ನಾ ಊದೆ। ಮಂಗಳಾರತಿಯ ನಾ ಬೆಳಗಲರಿಯೆ। ನಿನ್ನ ಸಂಗವ ತೊರೆಯೆ ನಿನ್ನನೆಂದೂ ಮರೆಯೆ। ನಿನ್ನವನು ನಾನಲ್ಲವೇನೊ ಹರಿಯೆ॥4॥

ಆತುರದಿ ಹಾತೊರೆದು ಬಂದೆ ಅವ್ವಾ ಎಂದು

ಆತುರದಿ ಹಾತೊರೆದು ಬಂದೆ ಅವ್ವಾ ಎಂದು। ಯಾತರದು ಕಾತರವು ನಿನ್ನ ಬಳಿಗಿಂದು।। ಹೆರತನದ ಹೆದರಿಕೆಯು ಹೃದಯದೊಳು ಹೊಕ್ಕಿಹುದು। ನರತನದ ಹುದುರೊಳಗೆ ಜೀವ ಸಿಕ್ಕಿಹುದು। ಹೊರೆತನದ ಬಲೆಯೊಳಗೆ ಬುದ್ಧಿ ಬಳಲಾಡುವುದು। ಪರೆ ನಿನ್ನ ಕಿಂಕರಗೆ ಅಭಯಕರ ನೀಡೌ।। ಎತ್ತೆತ್ತ ನೋಡಿದರು ಮತ್ತೆ ಬೇರೆ ಇಲ್ಲ। ಅತ್ತ ನೀನೇ ಮತ್ತು ಇತ್ತ ನೀನು। ಸುತ್ತಿರುವ ಬೆದರಿಕೆಯ ಬಟ್ಟೆಯನು ಕಳೆದೊಗೆದು। ಬತ್ತಲಾದೆನು ಅವ್ವ ಬಾಲನಂತೆ ನಾನು।। ಮುಚ್ಚಿಡುವುದೇಕಿನ್ನು ಬಚ್ಚಿಡುವುದಿನ್ನೆಲ್ಲಿ। ಮುಚ್ಚುಮರೆ ಮಾಳ್ಪುದಕೆ ಮುಸುಕು ಇಹುದೆಲ್ಲಿ। ನೆಚ್ಚು ಮೆಚ್ಚುಗೆಗಳನ್ನು ಬಿಚ್ಚು ಜೀವದೊಳೆತ್ತಿ। ಹೊಚ್ಚಿ ಪ್ರೀತಿಯ ಸೆರಗ ಎತ್ತಿಕೋ ಎನ್ನ।।

ಶ್ರದ್ಧೆಯ ಸರೋವರದಿ ತಾಯ ನಾಮದ — ರಾಗ: ಮಾಲಕೌಂಸ್-ಝಂಪೆತಾಳ

ಶ್ರದ್ಧೆಯ ಸರೋವರದಿ ತಾಯ ನಾಮದ ನೌಕೆ ತೇಲುತಿದೆ ನೋಡು। ಗುರುಕರುಣೆಯಲಿ ಕಲಿತ ಸಾಧನಾದಿಗಳಿಂದ ಭವಜಲಧಿ ಪಾರವನು ಸೇರಬಹುದು ನಾವು।।1।। ಮೃತ್ಯುಂಜಯನೆ ತಾನು ಹುಟ್ಟುಹಾಕುತಲಿರಲು ಬಿರುಗಾಳಿಯಲಿ ನೌಕೆ ಮುಳುಗಿ ಹೋಗುವುದೆಂಬ ಭಯವೇಕೆ ನಿನಗೆ। ತಾಯ ಶ್ರೀಪಾದವನೆ ನಂಬಿದವಗೆ।।2।।

ಅಂತರಂಗದಲಿ ಶ್ರೀಘನಶ್ಯಾಮೆಯ — ರಾಗ: ಕೇದಾರ

ಅಂತರಂಗದಲಿ ಶ್ರೀಘನಶ್ಯಾಮೆಯ ಆದರಿಸೆಲೆ ಮನವೇ। ನಮ್ಮಿಬ್ಬರ ಹೊರತಾರೂ ಅರಿಯದ। ರೀತಿಯೊಳವಳೆಡೆ ಸಾಗುವವೇ।।ಪ।। ಅಂತರಂಗದಲಿ।। ಓ ಮನವೇ ನಿನ್ನ ಆಸೆ ಸಾಸಿರವ ಆಚೆ ನಿಲಿಸಿ ಬಾರೋ। ಬಾಗಿಲಾಚೆ ನಿಲಿಸಿ ಬಾರೋ। ಏಕಾಂತದಿ ನೀನಾಕೆಯ ಕಾಣಲು। "ಓ ತಾಯಿ" ಎಂದೆನ್ನುವ ರಸನೆಯ ಮಾತ್ರ ಕರೆದು ತಾರೋ।।1।। ಕುಟಿಲ ಕುಮಂತ್ರವ ದೂರ ತಳ್ಳಿ ನೀ ಬಾ ನಮ್ಮನು ನೋಡು ಜ್ಞಾನನಯನವನು ಪಹರೆ ನಿಲಿಸಿ ನೀ। ಒಳಗೆ ಬಂದು ಕೂಡೋ।।2।।

ನನ್ನ ಹೃದಯದ ದಿವ್ಯ ಸೂತ್ರ

ನನ್ನ ಹೃದಯದ ದಿವ್ಯ ಸೂತ್ರ ಧಾರಿಣಿ ನೀನು। ಮಡಿಲ ತೊಟ್ಟಿಲೊಳಿಟ್ಟು ಪಾಲಿಸಿರುವೆ।। ನಾನ ಪಾತ್ರನು ತಾಯಿ, ನಿನ್ನ ಒಲವಿನ ಕೃಪೆಗೆ। ಆದರೂ ಎನಿತೊಂದು ಕರುಣೆ ನಿನಗೆ।।1।। ನನ್ನ ಮೇಲೇ ನೀ ತೊಂದು ವಾತ್ಸಲ್ಯವಿದೆ ನಿನಗೆ। ನೇವರಿಸು ಕೈ ಹಿಡಿದು ನಡೆಸುತಿರುವೆ।। ಮೃದು ನುಡಿಗಳಮೃತವನು ಕಿವಿಗಳಿಗೆ ಕರೆಯುತ್ತ। ದಿವ್ಯ ಮಧುವನು ನನಗೆ ಕುಡಿಸುತಿರುವೆ।।2।। ದೋಷ ವರಸದ ಹಿರಿಯ ತಾಯ್ತನದ ಮೂರ್ತಿ ನೀ। ಕಷ್ಟ ಸಂಕಟದಿಂದ ರಕ್ಷಿಸಿರುವೆ।। ನಾನು ನಿನ್ನವನೆಂಬ ನೀನು ನನ್ನವಳೆಂಬ। ಹಿರಿಯ ತತ್ತ್ವವನೀಗ ಅರಿಯುತಿರುವೆ।।3।। ಓ ತಾಯಿ ನಾನಿನ್ನ ಹಾಲುಂಡು ಪುಷ್ಟಿಯಲಿ। ನಿನ್ನ ಆಣತಿಯಂತೆ ಋಜು ಪಥದಲಿ।। ನಡೆನಡೆದು ಭಕ್ತಿಯಲಿ ಜೈ ಬ್ರಹ್ಮಮಯಿ ಎಂದು। ಹಾಡಿಕುಣಿಯುವೆನಿನ್ನು ದಿನದಿನದಲಿ।।4।।

ದೇವದೇವನ ನಿಜವನರಿಯಲು — ರಾಗ: ಕಾಪಿ

ದೇವದೇವನ ನಿಜವನರಿಯಲು ಮನವು ತೊಳಲುತ ಬಳಲಿದೆ। ಬೀಗಮುದ್ರೆಯನಿಟ್ಟ ಕೋಣೆಯೊ ಳಲೆವ ಮರುಳನ ತೆರನಿದೆ।।1।। ದಿವ್ಯ ಪ್ರೇಮಕೆ ದೊರೆವನವನು ಶ್ರದ್ಧೆಗಲ್ಲದೆ ಒಲಿಯನು। ವೇದಶಾಸ್ತ್ರ ಪುರಾಣದರ್ಶನ ದಾಚೆಗೇ ನಿಂತಿರುವನು।।2।। ಭಕ್ತಗೊಲಿಯುವ ಹೃದಯದಮೃತಾ ನಂದರೂಪನು ಎಂಬರು। ಇದನರಿತೆ ಆ ಯೋಗಿವರ್ಯರು ಯುಗಯುಗವು ತಪಗೈದರು।।3।। ಭಕ್ತಿಯೆಚ್ಚರಗೊಳಲು ಎದೆಯಲಿ ಅವನೆ ನಿನ್ನನು ಸೆಳೆವನು। ಈ ರಹಸ್ಯವ ಜಗದ ಸಂತೆಯ ಜನ ಸಮೂಹಕೆ ತಿಳಿಸೆನು।।4।। ಶ್ರೀ ಪ್ರಸಾದನು ನುಡಿವನೀತೆರ "ಮಾತೃಭಾವದಿ ನೆನೆವೆನು। ನನ್ನ ಸೂಚನೆಯರಿತು ನೀವೇ ತಿಳಿಯಿರಾತನ ನಿಜವನು"।।5।।

ನೀನೇ ದಯಾಮಯ

ನೀನೇ ದಯಾಮಯ ಇನ್ನಾರಿರುವರು। ನಿನ್ನಂಥಹ ಹಿತಕಾರಿ॥ ನೋವು ನಲಿವಿನಲಿ ಸಮೀಪ ಬಂಧುವು। ಶೋಕತಾಪ ಭಯಹಾರಿ॥ ಸಂಕಟಪೂರಿತ ಮೋಹಭವಾರ್ಣವ। ದುತ್ತರಣಕೆನೀ ಸಹಕಾರಿ। ಪ್ರಸನ್ನವಾಗಿಸು ಈ ಬಿರುಗಾಳಿಯ। ರಿಪುದಲವಿಪ್ಲವಕಾರಿ॥ ಪಾಪ ದಹನ ಪರಿತಾಪವನಾರಿಸು। ವರ್ಷಿಸು ಶೀತಲವಾರಿ। ಎಲ್ಲರು ತ್ಯಜಿಸುವ ಅಂತಿಮಕಾಲದಿ। ನೀನೇ ಆಶ್ರಯಕಾರಿ॥

ಎಲ್ಲಿ ಅರಸುವೆ ನೀನು

ಎಲ್ಲಿ ಅರಸುವೆ ನೀನು ಓ ನನ್ನ ಕಿಂಕರನೆ। ನಿನ್ನ ಬಳಿಯೇನಾನು ವಾಸಿಸಿರುವೆ। ನಾನು ನಿನ್ನೊಂದಿಗೇ ಇದ್ದರೂ ನನಗಾಗಿ। ಎಲ್ಲೊ ದೂರದಿ ಹುಡುಕಿ ಬಳಲುತಿರುವೆ॥1॥ ನಾನು ಚರ್ಮದೊಳಿಲ್ಲ ರೋಮದೊಳಗೂ ಇಲ್ಲ। ಅಸ್ತಿಯಲೊ ಮಾಂಸದಲೊ ಹುದುಗಿಕೊಂಡಿಲ್ಲ। ಗುಡಿಮಸೀದಿಯೊಳಿಲ್ಲ ಕಾಶಿಕೈಲಾಸದಲೊ ದ್ವಾರಕೆ ಅಯೋಧ್ಯೆಯೊಳು ದೊರೆವನಲ್ಲ॥2॥ ಸನ್ಯಾಸ ದೊಳಗಿಲ್ಲ ವೈರಾಗ್ಯದೊಳಗಿಲ್ಲ ಯೋಗಾದಿ ಸಿದ್ಧಿಗೂ ದೂರನಾನು। ಶ್ರದ್ಧೆ ಎಲ್ಲಿರುವುದೊ ಅಲ್ಲಿ ದೊರೆಯುವೆ ನಾನು। ನನಗಾಗಿ ಹುಡಿಕಿದರೆ ದೊರೆವೆ ನಾನು॥3॥

ಅಂತರತಮ ನೀ ಗುರು — ರಾಗ: ಕಾಮವರ್ಧಿನಿ

ಅಂತರತಮ ನೀ ಗುರು ಹೇ ಆತ್ಮ ತಮೋಹಾರಿ॥ಪ॥ ಜಟಿಲ ಕುಟಿಲತಮ ಅಂತರಂಗ, ಬಹುಭಾವ ವಿಪಿನ ಸಂಚಾರಿ॥1॥ ಜನುಮ ಜನುಮ ಶತಕೋಟಿ ಸಂಸ್ಕಾರ ಪರಮ ಚರಮ ಸಂಸ್ಕಾರಿ॥2॥ ಪಾಪ ಪುಣ್ಯ ನಾನಾ ಲಲಿತ ರುದ್ರ ಲೀಲಾರೂಪ ಅರೂಪ ವಿಹಾರಿ॥3॥

ಅಂತರ ಮಮ ವಿಕಸಿತ ಕೊರೊ (ಬಂಗಾಳಿ)

ಅಂತರ ಮಮ ವಿಕಸಿತ ಕೊರೊ ಅಂತರತರಹೇ॥ ನಿರ್ಮಲ ಕೊರೊ ಉಜ್ವಲ ಕೊರೊ ಸುಂದರಕೊರೊ ಹೇ॥ ಜಾಗ್ರತ ಕೊರೊ ಉದ್ಯತ ಕೊರೊ ನಿರ್ಭಯ ಕೊರೊ ಹೇ ಮಂಗಲ ಕೊರೊ ನಿರಲಸ ನಿಃಸಂಶಯಕೊರೊ ಹೇ॥ ಯುಕ್ತಕೊರೊ ಹೇಸಬಾರಸಂಗೇ। ಮುಕ್ತಕೊರೊ ಹೇ ಬಂಧ॥ ಸಂಚಾರಕೊರೊ ಸಕಲಕರ್ಮೆ। ಶಾಂತತೋಮಾರ್ ಛಂದ॥ ಚರಣಪದ್ಮೇ ಮಮ ಚಿತನಿಸ್ಪಂದಿತ ಕೊರೊ ಹೇ ನಂದಿತ ಕೊರೊ ನಂದಿತ ಕೊರೊ ನಂದಿತ ಕೊರೊ ಹೇ॥

ಅಂತರಂಗವನು ಅರಳಿಸು — ರಾಗ: ಕಲ್ಯಾಣಿ-ಆದಿತಾಳ

ಅಂತರಂಗವನು ಅರಳಿಸು ಒಲವೆ। ಅಂತಃಕರಣದ ಒಳದನಿಯೆ॥ ನಿರ್ಮಲಗೊಳಿಸೈ ಉಜ್ವಲಗೊಳಿಸೈ। ಸುಂದರ ಗೊಳಿಸೈ ಓ ಚೆಲುವೇ॥1॥ ಎಚ್ಚರ ವಿರಿಸೈ ಕೆಲಸದೊಳಿರಿಸೈ। ಅಂಜಿಕೆಎಂಬುದ ಕತ್ತರಿಸೈ। ಆಲಸಿಕೆ ಕಳೆಯೈ ಸಂಶಯ ಕಳೆಯೈ। ಅಂಗದಿ ಮಂಗಳ ವಿಸ್ತರಿಸೈ॥2॥ ಸಕಲರೊಡನೆ ನನ್ನನು ಜೊತೆಗೊಳಿಸೈ। ಜೊತೆಯೇ ಮುಕುತಿಯು ಇದ ಕಲಿಸೈ। ಸಕಲ ಕರ್ಮದಲಿ ನೀ ಸಂಚರಿಸೈ। ಶಾಂತಿ ಸಮರಸದಿಂ ನೀ ನೆಲೆಸೈ॥3॥ ಶಾಂತಿ ಸಮರದಿಂ ನೀ ನೆಲೆಸೈ॥2ಸಾರಿ॥ ಆಹಾ ಓಹೋ ಆ ಆನಂದದ ಮಹಾ ಪ್ರವಾಹವ ನೀ ಹರಿಸೈ॥4॥

ವಿಕಸಿತ ಮಾಡೆನ್ನಾಂತರ್ಯವನು — ರಾಗ : ಸಾರಂಗ-ಆದಿತಾಳ

ವಿಕಸಿತ ಮಾಡೆನ್ನಾಂತರ್ಯವನು। ವಿಕಸಿತ ಮಾಡೆನ್ನಾಂತರ್ಯವನು। ಅಂತರ್ಯಾಮಯೇ .... ಹೇ .... ಅಂತರ್ಯಾಮಯೇ .... ಹೇ ....॥ಪ॥ ನಿರ್ಮಲವಾಗಿಡು ಉಜ್ವಲವಾಗಿಡು ಸುಂದರವಾಗಿಡು ಹೇ ಸುಂದರವಾಗಿಡು ಹೇ। ಜಾಗೃತವಾಗಿಡು ಉದ್ದಾರಮಾಡು ನಿರ್ಭಯವಾಗಿಡು ಹೇ ನಿರ್ಭರವಾಗಿಡು ಹೇ। ಸನ್ಮಂಗಳಕೊಡು ನಿರಾಲಸವಾಗಿಡು ಮಹತೋ ಮಹಿಮನೆ ಹೇ। ಮಹತೋ ಮಹಿಮನೆ ॥1॥ ಸರ್ವಸಂಗವನು

ಸಾರ್ಥಕಮಾಡು ಮುಕ್ತಿಯ ಕೊಡು ನೀ ಅನಂತನೇ। ನಿನ್ನ ಚರಣದಿ, ನಿಲ್ಲಿಸು ಚಿತ್ತವ ಅಂತರ್ಯಾಮಿಯೇ ಹೇ ಅಂತರ್ಯಾಮಿಯೇ ಹೇ।।2।।

ನಿನ್ನ ಬಾಳಿನ ಹೊಲವು ಪಾಳು ಬಿದ್ದಿಹುದಲ್ಲೊ

ನಿನ್ನ ಬಾಳಿನ ಹೊಲವು ಪಾಳು ಬಿದ್ದಿಹುದಲ್ಲೊ। ಕೃಷಿಗೈಯಲು ಕೂಡ ತಿಳಿದಿರುವೆ।। ಎಂಥ ಹೊನ್ನನು ಬೆಳೆದು ತೆಗೆಯಬಹುದಾಗಿತ್ತೊ। ಕೆಲವು ದಿನ ಮೈ ಮುರಿದು ದುಡಿದಿದ್ದರೆ।। ಈಗಲಾದರು ತಾಯ ಶ್ರೀನಾಮವೆಂತೆಂಬ। ಬೇಲಿಯನು ಕಟ್ಟಿ ನೀ ಕಾಯ್ದುಕೊಳ್ಳೊ। ಅದಕಿಂತ ಬಲವಾದ ಕಾವಲಿನ್ನಾವುದಿದೆ। ಮೃತ್ಯುವೂ ನಿನ್ನ ಬಳಿ ಬರಲಾರನೊ।। ಇಂದೊ ನಾಳೆಯೊ ಹೊಲವ ಹೊಲದೊಡೆಯಗೊಪ್ಪಿಸುವ। ಮುನ್ನವೇ ಎಚ್ಚೆತ್ತು ಬೆಳೆಯ ತೆಗೆಯೊ। ಗುರುವಿತ್ತ ಮಂತ್ರವನು ಬೀಜವಾಗಿಸಿ ಬಿತ್ತಿ ಪ್ರೇಮವಾರಿಯ ಹೊಯ್ದು ಹಸನುಗೊಳಿಸೊ। ನಿನಗೆ ಈ ಕೆಲಸವೂ ಕಷ್ಟವಾದರೆ ಹೇಳು। ರಾಮಪ್ರಸಾದನಿದೊ ನೆರವಿಗಿಹನೊ।।

ಬೆದೆಯರಿತು ಹದಮಾಡು — ರಾಗ: ಹಿಂದೋಳ

ಬೆದೆಯರಿತು ಹದಮಾಡು ಹೃದಯದೀ ಹೊಲವನ್ನು। ಹದ ಬೆದೆಯನರಿದಂಥ ಹೃದಯವಾಸೀ।।ಪ।। ಗರುವ ಗ್ರಹಿಕೆಗಳೆಂಬ ಹುಲ್ಲುಕರಿಕೆಗಳಿಂದ ಸರುವವೂ ಕೆಟ್ಟಿಹುದು ನಟ್ಟು ಬೆಳೆದು। ಬರುವ ಸುಗ್ಗಿಯ ಬೆಳೆಯು ಭರದಿಂದ ಬರುವಂತೆ। ಗುರುವೆ ಮಾಡೋ ಕಲ್ಪತರುವೆ ಮಾಡೋ।।1।। ಕಾಡಿನಂದದಿ ಕರಲು-ಕಲ್ಲಿನಂದದಿ ಎದೆಯು। ಕಾಡುವುದು ಕಾಣದೇ ಹಗಲು ಇರುಳೂ। ಮಾಡಿದ್ದ ಬೇಸಾಯ ಮಣ್ಣುಗೂಡುವುದಯ್ಯೊ। ಮಾಡಬೇಕಿನ್ನೇನು ಕೈಸಾಗದಯ್ಯ।। 2।। ಕೋರಪಾಲಿನ ಮಾತು ಮಾಡಿಕೊಟ್ಟೆನು ನಿನಗೆ। ಯಾರೇಕೆ ಮಧ್ಯಸ್ಥರಿಲ್ಲಿ ಬೇಕು? ಪಾರುಮಾಡೈ ಹೊಟ್ಟೆಗಿಲ್ಲದೇ ಸಾಯುವೆನು। ತೋರು ಕರುಣದ ಕಸಬು ಎದೆಯ ಒಕ್ಕಲಿಗಾ।।3।।

ಅನಿಮಿತ್ತ ಬಂಧು ಅತಿ ದಯಾಸಿಂಧು

ಅನಿಮಿತ್ತ ಬಂಧು ಅತಿ ದಯಾಸಿಂಧು। ಅನತ ನಾನೆಂದು। ಅಭಯ ನೀಡಿಂದು।।ಪ।। ಮಧು ಕೈಟಭಾರಿ। ಮುರಾಂತಕ ಉದಾರಿ। ಮದನೋದ್ಭವಕಾರಿ। ಮನ್ನಿಸೆನ್ನನುದಾರಿ।।1।। ವೈಕುಂಠ ಸದನ ವಜ್ರಾಭರಣ। ಶ್ರೀಕರವದನ। ಸಲಹೆನ್ನನು ದಿನ।।2।। ಬಿಸಜಜನಯ್ಯ। ಬರುಹಿಸುರಯ್ಯ। ಪ್ರಸನ್ನೆಂಕಟಯ್ಯ। ಪಾಪವಾರಿಸಯ್ಯ।।3।।

ಮುಚ್ಚು ಮರೆಯಿಲ್ಲದೆಯೆ — ರಾಗ: ತಿಲಂಗ್

ಮುಚ್ಚು ಮರೆಯಿಲ್ಲದೆಯೆ ನಿನ್ನ ಮುಂದೆಲ್ಲವನು ಬಿಚ್ಚಿಡುವೆ ಓ ಗುರುವೇ ಅಂತರಾತ್ಮ।। ಪಾಪವಿದೆ ಪುಣ್ಯವಿದೆ ನರಕವಿದೆ ನಾಕವಿದೆ। ಸ್ವೀಕರಿಸು ಓ ಗುರುವೇ ಅಂತರಾತ್ಮ।।1।। ರವಿಗೆ ಕಾಂತಿಯ ನೀವ ನಿನ್ನ ಕಣ್ಣೀಕ್ಷಿಸಲು ಪಾಪ ತಾನುಳಿಯುವುದೆ ಪಾಪವಾಗಿ। ಗಂಗೆ ತಾನುದ್ಭವಿಪ ನಿನ್ನಡಿಯ ಸೋಂಕಾಗೆ ನರಕ ತಾನುಳಿಯುವುದೆ ನರಕವಾಗಿ।।2।। ಶಾಂತ ರೀತಿಯ ನಮ್ಮೀ ಕದಡಿರುವುದೆನ್ನಾತ್ಮ ನಾಂತ ರೀತಿಯದೆಂತೆ ಓ ಅನಂತ।। ನನ್ನ ನೀತಿಯ ಕುರುಡಿನಿಂದೆನ್ನ ರಕ್ಷಿಸೈ ನಿನ್ನ ನೀತಿಯ ಬೆಳಕಿನ ಆನಂದಕೊಯ್।।3।।

ಏನು ನಿರುಪಮ ಸೊಬಗು — ರಾಗ: ಭೂಪಾಲಿ

ಏನು ನಿರುಪಮ ಸೊಬಗು, ಓಹೋ ಎಂಥ ಚೆಲುವಿನ ಮೋಹನ। ನನ್ನ ಹೃದಯದ ಮೂರ್ತಿ ಬಂದನು ಎದೆಯ ಗುಡಿಸಲಿಗೀದಿನ।।1।। ಎದೆಯೊಳೊಲವಿನ ಚಿಲುಮೆ ಚಿಮ್ಮಿವೆ ಹತ್ತು ಕಡೆಗೂ ಸುಮ್ಮನೆ। ಯಾವ ಸಂಪದವನ್ನು ಸುರಿಯಲಿ ಹೇಳು ನಿನ್ನೀ ಪದದೆಡೆ?।।2।। ನನ್ನ ಹರಣವೆ ಶರಣು ನಿನಗೆ ನನ್ನ ಆತ್ಮವೆ ನಿನ್ನದು। ಮತ್ತೆ ಏನನು ನೀಡಲಯ್ಯಾ? ನನ್ನದೆಲ್ಲವು ನಿನ್ನದು।।3।।

ವನಸುಮದೊಳೆನ್ನ ಜೀವನವು **ರಾಗ: ಅಠಾಣ**

ವನಸುಮದೊಳೆನ್ನ ಜೀವನವು ವಿಕಸಿಸುವಂತೆ ಮನವನನುಗೊಳಿಸು ಗುರುವೇ-ಹೇ ದೇವಾ||ಪ|| ಜನಕೆ ಸಂತಸವೀವ ಘನನು ನಾನೆಂದೆಂಬ| ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ ಬಿಡದೆ||ಅ.ಪ|| ಕಾನನದಿ ಮಲ್ಲಿಗೆಯು ಮೌನದಿಂ ಬಿರಿದು ನಿಜ| ಸೌರಭವ ಸೂಸಿ ನಲವಿಂ ತಾನೆಲೆಯ ಪಿಂತಿರ್ದು| ದೀನತೆಯ ತೋರಿ ಅಭಿಮಾನವನು ತೊರೆದು| ಕೃತಕೃತ್ಯತೆಯ ಪಡೆವಂತೆ||1|| ಉಪಕಾರಿ ನಾನು ಎನ್ನುಪಕೃತಿಯು ಜಗಕೆಂಬ ವಿಪರೀತ ಮತಿಯನುಳಿದು| ವಿಪುಲಾಶ್ರಯವನೀವ ಸುಫಲ ಸುಮಭರಿತ| ಪಾದಪದಂತೆ ನೈಜಮಾದೊಳ್ಪಿನಿಂ ಬಾಳ್ವವೊಲು||2||

ಮಣಿಯಲೆನ್ನ ಶಿರವು ನಿನ್ನ

ಮಣಿಯಲೆನ್ನ ಶಿರವು ನಿನ್ನ ಚರಣಧೂಳಿತಲದಲಿ|| ನನ್ನ ಅಹಂಕಾರವೆಲ್ಲ ಮುಳುಗಲಶ್ರುಜಲದಲಿ|| ನನಗೆ ನಾನೆ ಪೂಜೆಗೈಯೆ ಸೊಡರನೆತ್ತಲು|| ಬೆಳಕು ಬರುವ ಬದಲು ಅಯ್ಯೊ ಬರಿಯ ಕತ್ತಲು|| ಅಹಂಕಾರದಂಧಕಾರ ಮುತ್ತುತ್ತಿದೆ ಸುತ್ತಲು|| ನನ್ನ ನಾನೆ ಮರೆಯದಂತೆ ನಾನು ಗೈವ ಕರ್ಮದಿ|| ನಿನ್ನ ಇಚ್ಛೆ ಪೂರ್ಣವಾಗಲೆನ್ನ ಜೀವಧರ್ಮದಿ|| ತಳೆಯಲೆನ್ನ ಜ್ಞಾನ ನಿನ್ನ ಚರಮ ಶಾಂತಿಯ|| ಬೆಳಗಲೆನ್ನ ಪ್ರಾಣ ನಿನ್ನ ಪರಮಕಾಂತಿಯ|| ನನ್ನನಳಿಸು, ನೀನೆ ನೆಲಸು| ಹೃದಯಪದ್ಮ ದಲದಲಿ||

ನಿನ್ನ ಬಾಂದಳದಂತೆ **ರಾಗ: ದುರ್ಗ**

ನಿನ್ನ ಬಾಂದಳದಂತೆ ಎನ್ನ ಮನವಿರಲಿ| ನೀಲ ಸಾಗರದಂತೆ ಎನ್ನ ಎದೆಯಿರಲಿ||ಪ|| ನಿನ್ನ ಸುಗ್ಗಿಯ ತೆರದಿ ಎನ್ನ ಸೊಬಗಿರಲಿ| ನಿನ್ನ ಲೀಲೆಯ ತೆರದಿ ಎನ್ನ ಬಾಳಿರಲಿ|| ನಿನ್ನ ಬಲವಿರುವಂತೆ ನನ್ನ ಬಲವಿರಲಿ| ನಿನ್ನ ತಿಳಿವಿರುವಂತೆ ನನ್ನ ತಿಳಿವಿರಲಿ||1|| ನಿನ್ನೊಲ್ಮೆ ಯಂದದಲಿ ಎನ್ನೊಲ್ಮೆಯಿರಲಿ| ನಿನ್ನಾಳವೆನಗಿರಲಿ ನೀನೇ ನನಗಿರಲಿ| ನಿನ್ನಾತ್ಮದಾನಂದ ಎನ್ನದಾಗಿರಲಿ| ನಿನ್ನೊಳಿರುವ ಶಾಂತಿ ಎನ್ನೆಡೆಗೆ ಬರಲಿ||2||

ನಿನ್ನ ಆಶೀರ್ವಾದ ಪರಿವೇಷ

ನಿನ್ನ ಆಶೀರ್ವಾದ ಪರಿವೇಷ ಮುತ್ತಿರಲಿ ನನ್ನನು ಸದಾ|| ನನ್ನ ಭಕ್ತಿಯ ಬಳ್ಳಿ ಮಲರಾಂತು ಸುತ್ತಿರಲಿ ನಿನ್ನನು ಸದಾ|| ನನ್ನ ಹೃದಯದ ತುಂಬಿ ನಿನ್ನಡಿಯ ಮಧುರತೆಗೆ ಹಾರಲಿ ಸದಾ|| ನನ್ನ ಸಾಂತತೆ ನಿನ್ನನಂತತೆಯನೆಡೆಬಿಡದೆ ಹೀರಲಿ ಸದಾ|| ನನ್ನ ವ್ಯಕ್ತಿತೆ ನಿನ್ನ ವ್ಯಕ್ತಿತ್ವ ಸಾಗರದಿ ತೇಲಲೀ ಸದಾ|| ನನ್ನ ಕರ್ಮಗಳೆಲ್ಲ ನಿನ್ನ ಋತಮರ್ಮವನೆ ಹೋಲಲಿ ಸದಾ|| ನನ್ನ ನ್ಯೂನತೆಯೆಲ್ಲ ನಿನ್ನ ಪೂರ್ಣತೆಗಾಗಿ ನೋಯಲಿ ಸದಾ|| ನನ್ನ ನಶ್ವರವೆಲ್ಲ ನಿನ್ನ ನಿತ್ಯತೆಗಾಗಿ ಸಾಯಲಿ ಸದಾ||

ಓ ನನ್ನ ಚೇತನ **ರಾಗ: ಹಂಸಾನಂದಿ**

ಓ ನನ್ನ ಚೇತನ ಆಗು ನೀ ಅನಿಕೇತನ| ರೂಪ ರೂಪಗಳನು ದಾಟಿ| ನಾಮ ಕೋಟಿಗಳನು ಮೀಟಿ| ಎದೆಯ ಬಿರಿಯೆ ಭಾವದೀಟಿ||1|| ನೂರು ಮತದ ಹೊಟ್ಟತೂರಿ| ಎಲ್ಲ ತತ್ವದೆಲ್ಲೆ ಮೀರಿ| ನಿರ್ದಿಗಂತವಾಗಿ ಏರಿ||2|| ಎಲ್ಲಿಯೂ ನಿಲ್ಲದಿರು| ಮನೆಯನೆಂದು ಕಟ್ಟದಿರು| ಕೊನೆಯನೆಂದು ಮುಟ್ಟದಿರು| ಓ ಅನಂತವಾಗಿರು||3|| ಅನಂತ ತಾನ್ ಅನಂತವಾಗಿ| ಆಗುತಿಹನೆ ನಿತ್ಯಯೋಗಿ| ಅನಂತ ನೀನ್ ಅನಂತವಾಗು| ಆಗು ಆಗು ಆಗು ಆಗು||4||

ಕರುಣಾಳು ಬಾ ಬೆಳಕೆ **ರಾಗ: ಸಾರಂಗ-ಛಾಪುತಾಳ**

ಕರುಣಾಳು ಬಾ ಬೆಳಕೆ| ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು|| ಇರುಳು ಕತ್ತಲೆಯ ಗವಿ ಮನೆ ದೂರ ಕನಿಕರಿಸಿ ಕೈಹಿಡಿದು ನಡೆಸೆನ್ನನು||1|| ಹೇಳಿ ನನ್ನಡಿಯಿಡಿಸು ಬಲುದೂರ ನೋಟವನು| ಕೇಳಿನೊಡನೆಯೆ ಸಾಕು ನನಗೊಂದು ಹೆಜ್ಜೆ|| ಮುನ್ನ ಇಂತಿರದಾದೆ ನಿನ್ನ ಬೇಡದೆ ಹೋದೆ| ಕೈ ಹಿಡಿದು ನಡೆಸು ಎನುತ||2|| ನನ್ನ ದಾರಿಯ ನಾನೆ ನೋಡಿ ಹಿಡಿದೆನು ಇನ್ನು| ಕೈ ಹಿಡಿದು ನಡೆಸು ನೀನು|| ಮಿರುಗು ಬಣ್ಣಕೆ ಬೆರೆತು ಭಯ ಮರೆತು ಕೊಬ್ಬಿದೆನು|

ಮರೆದಾಯ್ತು ನೆನೆಯದಿರು ಹಿಂದಿನದನೆಲ್ಲ॥3॥ ಇಷ್ಟುದಿನ ಸಲಹಿರುವೆ ಮೂರ್ಖನನು। ಮುಂದೆಯೂ ಕೈಹಿಡಿದು ನಡೆಸದಿಹೆಯಾ?। ಕಷ್ಟದಡವಿಯ ಕಳೆದು ಬೆಟ್ಟಹೊಳೆಗಳ ಹಾಯ್ದು। ಇರುಳನ್ನು ನೂಕದಿಹೆಯಾ?॥4॥ ಬೆಳಗಾಗ ಹೊಳೆಯದೇ ಹಿಂದೊಮ್ಮೆ ನಾನೊಲಿದು। ಈ ನಡುವೆ ಕಳೆಕೊಂಡ ದಿವ್ಯ ಮುಖ ನಗುತ॥5॥

ನನ್ನ ಹರಣ ನಿನಗೆ ಶರಣ **ರಾಗ: ಮಿಶ್ರಮಾಂಡ್**

ನನ್ನ ಹರಣ ನಿನಗೆ ಶರಣ ಸಕಲ ಕಾರ್ಯ ಕಾರಣಾ। ನಿನ್ನ ಮನನದಿಂದ ತನನವೆನುತಿದೆ ತನು ಪಾವನಾ॥1॥ ಸುಖದಾಮಿಷವು ದುಃಖವಿಷವು ಹಿಗ್ಗಿ ಪ್ರಾಣಪೂರಣಾ। ಪಂಚ ಕರಣಗಳೀಗಡಣ ಕಟ್ಟಿತು ಗುಡಿ ತೋರಣಾ॥2॥ ನಿನ್ನ ಚರಣ ಸುಸಂತರಣ ಜಗದ್ಭರಿತ ಭಾವನಾ। ಹಾಸ್ಯಕಿರಣ ತದನುಸರಣ ತದಿತರಪಥ ಕಾಣೆ ನಾ॥3॥ ಹರುಷರಸವೆ ಕರುಣದಸುವೆ ಜೀವಧರ್ಮ ಧಾರಣಾ। ರಸವೆ ಜನನ ವಿರಸ ಮರಣ ಸಮರಸವೇ ಜೀವನ॥4॥

ಎಲ್ಲವೂ ನಿನ್ನಿಚ್ಛೆಯಂತೆ ನಡೆದಿರಲು **ರಾಗ: ಜಂಜೋಟಿ-ಝಂಪೆತಾಳ**

ಎಲ್ಲವೂ ನಿನ್ನಿಚ್ಛೆಯಂತೆ ನಡೆದಿರಲು ನೀನೆ ಭವಸಾಗರವ ದಾಟಿಸುವ ಹಡಗು। ನಿನ್ನ ಇಚ್ಛೆಯ ನೀನು ಪೂರೈಸುತಿರಲು। ತಮ್ಮ ಗೈಮೆಯಿದೆಂದು ತಿಳಿವರೀ ಜನರು॥ ಕೆಸರಿನಲಿ ಸಲಗವನು ಹಿಡಿಯುವಳು ನೀನು। ಹೆಳವನನು ಗಿರಿಯ ತುದಿಗೊಯ್ಯುವಳು ನೀನು। ಹಲವರಿಗೆ ಬ್ರಹ್ಮಪದವಿತ್ತು ಹಲವರನು। ಭವಜಲಧಿ ಸುಳಿಯೊಳಗೆ ಎಸೆಯುವಳು ನೀನು॥ ನೀನು ಚಾಲಕಶಕ್ತಿ ನಾನೊಂದು ಯಂತ್ರ। ನಾನೊಂದು ಬರಿಯ ಮನೆ ನೀನದರ ಮಂತ್ರ। ನಾನೊಂದು ರಥವಾಗೆ ನೀನದರ ರಥಿಕ। ನೀ ನಡೆಸೆ ನಾ ನೆಡೆವೆ ನಿನ್ನದೀ ಲೋಕ॥

❖ ❖ ❖

79. ವಿಶ್ವಶಾಂತಿ ಪ್ರಾರ್ಥನಾ

ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು

ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು। ಸರ್ವಸ್ಸುದ್ಬುದ್ಧಿಮಾಪ್ನೋತು ಸರ್ವಃ ಸರ್ವತ್ರ ನಂದತು॥1॥ ದುರ್ಜನಃ ಸಜ್ಜನೋ ಭೂಯಾತ್ ಸಜ್ಜನಃ ಶಾಂತಿಮಾಪ್ನುಯಾತ್। ಶಾಂತೋ ಮುಚ್ಯೇತ ಬಂಧೇಭ್ಯೋ ಮುಕ್ತಾಶ್ಚಾನ್ಯಾನ್ ವಿಮೋಚಯೇತ್॥2॥ ಸರ್ವೇಭವಂತು ಸುಖಿನಃ ಸರ್ವೇಸಂತು ನಿರಾಮಯಾಃ। ಸರ್ವೇಭದ್ರಾಣಿ ಪಶ್ಯಂತು ಮಾ ಕಶ್ಚಿದ್ ದುಃಖಬಾಘ್ ಭವೇತ್॥3॥ ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ। ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾಃ। ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ ಲೋಕಾಃ ಸಮಸ್ತಾಃ ಸುಖಿನೋ ಭವಂತು॥4॥ ಕಾಲೇ ವರ್ಷತು ಪರ್ಜನ್ಯಃ ಪೃಥ್ವೀಸಸ್ಯಶಾಲಿನೀ। ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಸ್ಸಂತು ನಿರ್ಭಯಾಃ॥5॥

ಓಂ ಶಾಂತಿಃ ಶಾಂತಿಃ ಶಾಂತಿಃ

❖ ❖ ❖